ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ
[illegible]ಸಂತ ಕುಮಾರ

ಮಾರ್ಗದರ್ಶಕರು
ಡಾ.ಮಾಧವ ಪೆರಾಜೆ
ಪ್ರವಾಚಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ

ಪುತ್ತಿ ವಸಂತ ಕುಮಾರ

ಮಾರ್ಗದರ್ಶಕರು

ಡಾ.ಮಾಧವ ಪೆರಾಜೆ

ಪ್ರವಾಚಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೭

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಪುತ್ತಿ ವಸಂತ ಕುಮಾರ. ಅವರು 'ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ' ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಮಾಧವ ಪೆರಾಜೆ
ಪ್ರವಾಚಕರು ಮತ್ತು ಮಾರ್ಗದರ್ಶಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೦೮.೦೬.೨೦೦೭
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

'ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ' ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ಡಾ.ಮಾಧವ ಪೆರಾಜೆ, ಪ್ರವಾಚಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಪುತ್ತಿ ವಸಂತ ಕುಮಾರ
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೦೮.೦೬.೨೦೦೭
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ.ಅಧ್ಯಯನ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಅಂದಿನ ಮಾನ್ಯ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಮತ್ತು ಕುಲಸಚಿವರಾದ ಡಾ.ಕೆ.ವಿ.ನಾರಾಯಣ, ಡಾ.ಬಿ.ಕೆ.ಕರೀಗೌಡ ಅವರಿಗೆ ಹಾಗೂ ಇಂದಿನ ಮಾನ್ಯ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಮತ್ತು ಕುಲಸಚಿವರಾದ ಶ್ರೀ ವಿ.ಶಂಕರ್ ಅವರಿಗೆ ಕೃತಜ್ಞತೆಗಳು.

ಸೂಕ್ತ ಸಲಹೆ ಹಾಗೂ ನಿರಂತರ ಮಾರ್ಗದರ್ಶನ ನೀಡಿ ಈ ಮಹಾಪ್ರಬಂಧವು ರೂಪ ಪಡೆಯುವುದಕ್ಕೆ ಕಾರಣರಾದ ಮಾರ್ಗದರ್ಶಕರಾದ ಗೌರವಾನ್ವಿತ ಪ್ರವಾಚಕರಾದ, ಡಾ. ಮಾಧವ ಪೆರಾಜೆ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನಕ್ಕೆ ಸಹಕಾರ ನೀಡಿದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರೊ. ಎ. ಸುಬ್ಬಣ್ಣ ರೈ ಅವರಿಗೆ ಮತ್ತು ಪ್ರಾಧ್ಯಾಪಕರು, ಪ್ರವಾಚಕರು, ಹಾಗೂ ವಿಭಾಗದ ಸಿಬ್ಬಂದಿ ವರ್ಗಕ್ಕೆ ನನ್ನ ಕೃತಜ್ಞತೆಗಳು.

ಅಧ್ಯಯನದ ಎಲ್ಲಾ ಸಂದರ್ಭದಲ್ಲಿ ಸಹಕರಿಸಿ ಪ್ರೋತ್ಸಾಹ ನೀಡಿದ ಜಾನಪದ ವಿಭಾಗದ ಪ್ರೊ.ಸ.ಚಿ. ರಮೇಶ್, ಪ್ರೊ.ಮಂಜುನಾಥ ಬೇವಿನಕಟ್ಟಿ ಹಾಗೂ ಅಧ್ಯಾಪಕ ವೃಂದದವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಮಾಹಿತಿ ನೀಡಿ ಪ್ರೋತ್ಸಾಹಿಸಿದ ಪ್ರೊ.ಅಮೃತ ಸೋಮೇಶ್ವರ, ಪ್ರೊ.ಕೇಶವ ಉಚ್ಚಿಲ್, ಎಂ.ಮುಕುಂದ ಪ್ರಭು, ಡಾ.ಕೇಶವನ್ ಪೋತಿ, ಡಾ.ರಾಘುವನ್ ಪಯ್ಯನಾಡ್, ಪ್ರೊ.ವಿಷ್ಣು ನಂಬೂದಿರಿ, ಪ್ರೊ.ಮಾದವನ್.ಟಿ.ವಿ, ಡಾ.ಜಯಕುಮಾರಿ ಕುಂಜಮ್ಮ ಮತ್ತು ವೆಂಕಟರಾಜ ಪುಣಿಂಚಿತ್ತಾಯ ಇವರಿಗೆ ಹಾಗೂ ಕೇರಳ, ತಮಿಳ್ನಾಡು ಮತ್ತು ಕರಾವಳಿ ಕರ್ನಾಟಕದ ವಕ್ತ ಬಾಂಧವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಶ್ರೇಯೋಭಿವೃದ್ಧಿಯನ್ನು ಬಯಸುವ ಪೂಜ್ಯ ತಂದೆ ಹಾಗೂ ತಾಯಿ, ಚಿಕ್ಕಪ್ಪನವರು, ಚಿಕ್ಕಮ್ಮನವರು ಅಣ್ಣ, ತಮ್ಮಂದಿರು, ಮತ್ತು ಮನೆಯವರನ್ನೆಲ್ಲ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಅಧ್ಯಯನದ ಸಂದರ್ಭದಲ್ಲಿ ನನ್ನನ್ನು ಸದಾ ಪ್ರೋತ್ಸಾಹಿಸುತ್ತಾ ಎಲ್ಲಾ ರೀತಿಯ ಸಹಕಾರವನ್ನು ನೀಡಿದ ನಾನು ಸೇವೆ ಸಲ್ಲಿಸುತ್ತಿರುವ ಸಂಸ್ಥೆ ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ಗೌರವಾನ್ವಿತ ಪ್ರಾಂಶುಪಾಲರಾದ ಪ್ರೊ.ಬಿ.ಪದ್ಮನಾಭಗೌಡ ಮತ್ತು ಆಡಳಿತ ಮಂಡಳಿಯ ಎಲ್ಲಾ ಸದಸ್ಯರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ನನ್ನ ಸ್ನೇಹಿತರು, ಸಹೋದ್ಯೋಗಿಯು ಆಗಿರುವ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ.ಮಂಜುನಾಥ ಕೋಟ್ಯಾನ್ ಅವರಿಗೆ ಹೃತ್ಪೂರ್ವಕ ಕೃತಜ್ಞನತೆಗಳು.

ಕನ್ನಡ ವಿಭಾಗದ ಮುಖ್ಯಸ್ಥರಾದ ವನಿತಾ ಜಿ. ಶೆಟ್ಟಿ ಮತ್ತು ಭಾಷಾ ವಿಭಾಗದ ನನ್ನೆಲ್ಲ ಸಹೋದ್ಯೋಗಿಗಳಿಗೆ ಕೃತಜ್ಞತೆಗಳು.

ನನ್ನನ್ನು ಸದಾ ಪ್ರೋತ್ಸಾಹಿಸುತ್ತಿದ್ದ ಸಹೋದ್ಯೋಗಿಗಳು, ಆತ್ಮೀಯ ಸ್ನೇಹಿತರಾದ ಗಣೇಶ, ನಂದಕಿಶೋರ್, ವಿರೇಂದ್ರ ಕುಮಾರ್, ರವಿಕುಮಾರ್, ರಘುನಾಯಕ್, ಶಿವಕುಮಾರ್ ಮತ್ತು ಸಂಸ್ಥೆಯ ನನ್ನೆಲ್ಲಾ ಸಹೋದ್ಯೋಗಿಗಳನ್ನ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಅಧ್ಯಯನ ಸಂದರ್ಭದಲ್ಲಿ ಸಹಕರಿಸಿ ನನ್ನ ಅಭಿವೃದ್ಧಿಯನ್ನೇ ಬಯಸುವ ಮಿತ್ರರಾದ ಮೋಹನ್೨ ಶಾಂತಿಮೂಲೆ, ಶಿವು ನೆಲಹಾಳ್, ಜ್ಯೋತ್ಸ್ನಾ ಚಂದ್ರಕಾಂತ್, ದುರ್ಗಾಪ್ರವೀಣ್, ಗಜಾನನ ಅಡ್ಕಾರ್, ಪ್ರಕಾಶ ಕಮಲಾಪುರ, ಜಿ.ಎಚ್.ನಾಗವರ್ಮ, ತಿಪ್ಪೇಸ್ವಾಮಿ, ಲೋಕರಾಜ್ ದೊಡ್ಡಮನಿ, ಶ್ರೀಧರ ಏತಡ್ಕ ಹಾಗೂ ಪ್ರೀತಿಯ ವಿದ್ಯಾರ್ಥಿನಿ ವಿಜಯ ರಶ್ಮಿ, ಇವರೆಲ್ಲರನ್ನು ಎಂದಿಗೂ ಮರೆಯಲಾರೆ. ಅಧ್ಯಯನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ಈ ಮಹಾಪ್ರಬಂಧವನ್ನು ಸಕಾಲದಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಗುರು ಮೌನೇಶ್ವರ ಗ್ರಾಫಿಕ್ಸ್‌ನ ಅನ್ನಪೂರ್ಣ, ನಾಗರಾಜ ಬಡಿಗೇರ ಮತ್ತು ಮುತ್ತುಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು

* * * * *

ಪರಿವಿಡಿ

* * * * *

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಯನದ ಉದ್ದೇಶ

ನಾಗರಾಜ ಜಗತ್ತಿನ ಬಹುತೇಕ ಸಂಸ್ಕೃತಿಗಳಲ್ಲಿ ಪೂಜಾರ್ಹ ದೈವ. ಪ್ರಪಂಚದಾದ್ಯಂತ ಪ್ರಾಚೀನ ಸಂಸ್ಕೃತಿಗಳ ಅವಶೇಷಗಳಿದ್ದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸರ್ಪಾರಾಧನೆ ನಡೆಯುತ್ತಿದ್ದುದು ತಿಳಿದು ಬರುತ್ತದೆ. ಭಾರತದ ಸಂಸ್ಕೃತಿಯಲ್ಲಿ ನಾಗಾರಾಧನೆಯು ಬಹಳ ಮಹತ್ವಪೂರ್ಣವಾಗಿದೆ. ಪ್ರತಿಯೊಂದು ವೈದಿಕ ಮತ್ತು ವೈದಿಕೇತರ ಕುಟುಂಬವು ನಾಗನನ್ನು ಒಂದಲ್ಲ ಒಂದು ರೀತಿಯಲ್ಲಿ ಆರಾಧಿಸಿಕೊಂಡು ಬಂದಿರುವುದು ಗಮನಾರ್ಹ. ಅದರಲ್ಲೂ ದಕ್ಷಿಣ ಭಾರತದ ಪಶ್ಚಿಮ ಕರಾವಳಿಯಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುತ್ತದೆ. ನಾಗ ಸಂಬಂಧಿಯಾದ ವೈಭವೋಪೇತ ಆಚರಣೆಗಳು, ನಾಗನ ಬೃಹತ್ ದೇವಾಲಯಗಳು, ಕಾದಿರಿಸಿ ಬೆಳೆಸಿದ ನಾಗಬನಗಳು, ಕಾಲಕಾಲಕ್ಕೆ ಸಲ್ಲಿಸುವ ಹರಕೆಗಳು ಮತ್ತು ನಡೆಸುವ ಆರಾಧನೆಗಳು ಪ್ರಾದೇಶಿಕವಾಗಿ ವಿಶೇಷವಾಗಿ ಕಂಡುಬರುತ್ತವೆ.

ದಕ್ಷಿಣ ಭಾರತ ಪಶ್ಚಿಮ ಕರಾವಳಿಯ ಕೇರಳ ಮತ್ತು ತುಳುನಾಡುಗಳು ನಾಗಾರಾಧನೆಯ ಕೇಂದ್ರ ಸ್ಥಾನಗಳಾಗಿವೆ. ಇಲ್ಲಿ ನಾಗಾರಾಧನೆ ತುಂಬ ಜನಪ್ರಿಯ. ಪಶ್ಚಿಮದ ಸಮುದ್ರದಿಂದ ಪೂರ್ವದ ಪಶ್ಚಿಮ ಘಟ್ಟಗಳವರೆಗಿನ ಈ ಭೂಪ್ರದೇಶವನ್ನು ಪರಶುರಾಮ ಸೃಷ್ಟಿ ಎಂದು ಕರೆಯಲಾಗುತ್ತದೆ. ಪಶ್ಚಿಮ ಕರಾವಳಿಯ ಈ ತೀರ ಪ್ರದೇಶದಲ್ಲಿ ನಾಗಾರಾಧನೆ ಅತಿ ಜನಪ್ರಿಯವಾದ ಮತಾಚಾರವಾಗಿರುವುದು ಕಂಡುಬರುತ್ತದೆ. ನಾಗದೇವಾಲಯಗಳು, ಸರ್ಪಬಲಿ, ಸರ್ಪಂತುಳ್ಳಲ್, ಸರ್ಪಕೋಲ, ಡಕ್ಕೆಬಲಿ, ನಾಗಮಂಡಲ, ಕಾದ್ಯನಾಟ ಮೊದಲಾದ ವೈದಿಕ ಮತ್ತು ಜನಪದ ಆಚರಣೆಗಳು ಇಲ್ಲಿ ಬಹಳ ಪ್ರಸಿದ್ಧವಾಗಿವೆ. ಗ್ರಾಮೀಣ ಜನರ ಬದುಕು ಜನಪದ ಸಂಸ್ಕೃತಿ ಸಂಸ್ಕಾರಗಳೊಂದಿಗೆ ಸಮ್ಮಿಳನಗೊಂಡಿರುವ ಸ್ಪಷ್ಟ ಚಿತ್ರಣ ಈ ಆಚರಣೆಗಳಲ್ಲಿ ಕಂಡುಬರುತ್ತದೆ. ಇದರ ಆಚರಣೆಗೆ ಹಳ್ಳಿ-ಪಟ್ಟಣ, ಬಡವ-ಬಲ್ಲಿದ ಎಂಬ ಭೇದ ಕಂಡುಬರುವುದಿಲ್ಲ. ಅಷ್ಟೇ ಅಲ್ಲದೆ ಈ ಭೂಪ್ರದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಾಗಾರಾಧನೆಗೆ ಹೆಚ್ಚಿನ ಮಹತ್ವ ಕೊಟ್ಟಂತೆ ಕಂಡುಬರುತ್ತದೆ.

ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ ಎಂಬ ವಿಷಯದ ಕುರಿತು ಇಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಕೇರಳ ಮತ್ತು ಕರಾವಳಿ ಕರ್ನಾಟಕಗಳು ಸುದೀರ್ಘವಾದ ಮತ್ತು ಅತ್ಯಂತ ವೈವಿಧ್ಯಮಯವಾದ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಗಳನ್ನು ಹೊಂದಿರುವ ಪ್ರದೇಶಗಳಾಗಿವೆ. ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಈ

ಎರಡೂ ಪ್ರದೇಶಗಳು ಒಂದೇ ಕಕ್ಷೆಯಲ್ಲಿ ಕಂಡುಬರುತ್ತವೆ. ಆಹಾರ ಪದ್ಧತಿ, ಧಾರ್ಮಿಕ ಪರಿಕಲ್ಪನೆ, ಆಚಾರ, ವಿಚಾರ, ನಂಬಿಕೆ ನಡವಳಿಕೆ, ವೇಷ ಭೂಷಣಗಳು ಮತ್ತು ಭಾಷೆ ಇಲ್ಲೆಲ್ಲ ಒಂದು ರೀತಿಯ ಸಾಮ್ಯತೆ ಕಂಡುಬರುತ್ತದೆ. ಇಲ್ಲಿಯ ಆರಾಧನ ಪರಂಪರೆಗೆ ತನ್ನದೇ ಆದ ವೈಶಿಷ್ಟ್ಯ ಇದೆ. ಆರಾಧನ ಪ್ರಸ್ಥಾನವನ್ನು ಗಮನಿಸಿದರೆ ಪೂರ್ವದಲ್ಲಿ ಎರಡು ರಾಜ್ಯಗಳು ಒಂದೇ ರೀತಿಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವುದು ಕಂಡುಬರುತ್ತದೆ. ಪ್ರಸ್ತುತ ನಿಬಂಧದಲ್ಲಿ ಪಶ್ಚಿಮ ಕರಾವಳಿಯ ಈ ಭೂಭಾಗಗಳು ಪಡೆದುಕೊಂಡಿರುವ ಅನ್ಯೋನ್ಯ ಸಂಬಂಧ, ಸಾಂಸ್ಕೃತಿಕ ವೈಶಿಷ್ಟ್ಯ, ಸಾಮಾಜಿಕ, ಧಾರ್ಮಿಕ ಜೀವನ ಶೈಲಿಯನ್ನು ನಾಗಾರಾಧನೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಕರಾವಳಿ ಕರ್ನಾಟಕದಲ್ಲಿ ಭೂತಾರಾಧನೆ, ಯಕ್ಷಗಾನಗಳಂತೆಯೇ ಇಂದು ಜನಪ್ರಿಯವಾಗುತ್ತಿರುವ ಮತ್ತೊಂದು ಆರಾಧನೆ ಎಂದರೆ ನಾಗಾರಾಧನೆ. ಇಂದು ನಾಗಾರಾಧಾನೆಗೆ ಅನೇಕ ಆಡಂಬರ ವೈಭವಗಳು ಸೇರಿಕೊಂಡಿರುವುದು ನಿಜವಾದರೂ ಒಂದು ಆರಾಧನಾ ಪರಂಪರೆಯಾಗಿ ಹಿಂದಿನಿಂದಲೂ ಅದು ಉಳಿದುಬಂದಿರುವದಕ್ಕೆ ನಾಗಬನ, ನಾಗಮಂಡಲ, ವೈದ್ಯರ ಹಾಡುಗಳು, ಕಾಡ್ಯನಾಟ ಮೊದಲಾದವು ಸಾಕ್ಷಿಯಾಗಿವೆ.

ಒಂದು ಪ್ರದೇಶದ ರಾಜಕೀಯ ಇತಿಹಾಸದಂತೆಯೇ ಇತ್ತೀಚೆಗೆ ಸಾಂಸ್ಕೃತಿಕ ಇತಿಹಾಸವೂ ಮುಖ್ಯವಾದ ಒಂದು ಅಧ್ಯಯನ ಕ್ಷೇತ್ರವಾಗಿದೆ. ರಾಜಕೀಯ ಇತಿಹಾಸವು ಇತಿಹಾಸದಲ್ಲಿ ಹೆಸರು ಪಡೆದ, ಅಥವಾ ಹಾಗೆಂದು ಭಾವಿಸಲಾದ ಅರಸರ ಬಗೆಗಿನ ಇತಿಹಾಸವಾಗಿರುವತ್ತದೆ. ಆದುದರಿಂದ ಇಂತಹ ಇತಿಹಾಸಕ್ಕೆ ಶಾಸನಗಳು, ಲಿಖಿತ ಆಧಾರಗಳು, ಅಧಿಕೃತ ಕಾಲಘಟ್ಟ ಇವೆಲ್ಲ ಮುಖ್ಯವಾಗುತ್ತದೆ. ಭಾರತದಂತಹ ಬಹುಭಾಷೆ ಮತ್ತು ಬಹುಸಂಸ್ಕೃತಿಗಳನ್ನುಳ್ಳ ದೇಶವೊಂದರಲ್ಲಿ ಇಂತಹ ರಾಜಕೀಯ ಇತಿಹಾಸಕ್ಕೆ ತನ್ನದೆ ಆದ ಮಿತಿಗಳಿವೆ. ಮುಖ್ಯವಾಗಿ ಆಳರಸರ ಶಾಸನಗಳಲ್ಲಿ ಮತ್ತು ಲಿಖಿತ ದಾಖಲೆಗಳಲ್ಲಿ ಜನಸಾಮಾನ್ಯರು ಎಂದಿಗೂ ಪ್ರವೇಶ ಪಡೆಯುವುದಿಲ್ಲ. ಹಾಗೆಯೇ ವಿದ್ಯೆಯ ಸೀಮೀತ ಅವಕಾಶವೂ ಕೂಡ ಬಹುಸಂಖ್ಯಾತ ಜನಗಳನ್ನು ತಮ್ಮ ಸಾಧನೆ ಮತ್ತು ನೆನಪುಗಳನ್ನು ದಾಖಲಿಸುವಲ್ಲಿ ತೊಡಕಾಗಿ ಪರಿಣಮಿಸಿದೆ. ಆದರೆ ಬಹುಸಂಖ್ಯಾತ, ಬಹುಸಂಸ್ಕೃತಿಗಳಿರುವ ನಾಡಿನಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಜನಗಳ ಜ್ಞಾನ, ಚಿಂತನ ಕ್ರಮ ಉಳಿದುಕೊಂಡು ಬಂದಿರುತ್ತದೆ. ಇಂದಿನ ಅಧ್ಯಯನಗಳು ಇಂತಹ ಸಾಂಸ್ಕೃತಿಕ ಚರಿತ್ರೆಯ ನೆನಪುಗಳ ಬಗೆಗೆ ಹೆಚ್ಚು ಆಸಕ್ತವಾಗಿವೆ.

ಕರಾವಳಿ ಕರ್ನಾಟಕ ಮತ್ತು ಕೇರಳದಂತಹ ಭೂಭಾಗಗಳಿಗೆ ಪೌರಾಣಿಕವಾದ ಏಕಸೂತ್ರತೆಯೊಂದು (ಪರಶುರಾಮ ಸೃಷ್ಟಿ) ಏಕಸೂತ್ರತೆ ಎಂದಿನಿಂದಲೂ ರೂಢಿಯಲ್ಲಿದೆ. ಇವಿಷ್ಟೇ ಈ ಪ್ರದೇಶದ ಸಾಮ್ಯತೆಯ ಪ್ರಮುಖಾಂಶವೆಂದು ಭಾವಿಸುವ ಹಾಗಿಲ್ಲ. ಇಡೀಯ ದಕ್ಷಿಣ ಭಾರತದಲ್ಲಿ ಇಂತಹ ಅನೇಕ ಏಕಸೂತ್ರತೆಗಳಿವೆ. ಈ ಏಕಸೂತ್ರತೆಗಳನ್ನು ಬೇರೆ ಬೇರೆ ನೆಲೆಗಳಿಂದ ಕಂಡುಕೊಳ್ಳುವುದು, ದಕ್ಷಿಣ ಭಾರತದ ವಿಘಟಿತ ಮನಃಸ್ಥಿತಿಗಳನ್ನ ಪುನರ್ ಜೋಡಿಸುವ ಒಂದು ಮಹಾತ್ವಾಕಾಂಕ್ಷಿ ಪ್ರಯತ್ನ ಆಗಬಲ್ಲದು. ನಾಗಾರಾಧನೆಯು ಈ ಪ್ರದೇಶದ ಅಂತಹ ಪ್ರಾಚೀನವಾದ ಒಂದು ಸಂಸ್ಕೃತಿಯಾಗಿದೆ. ನಾಗಾರಾಧನೆಯ ಬಗೆಗಿನ ಅಧ್ಯಯನಗಳು ಬಹಳ ಸೀಮಿತ ನೆಲೆಗಟ್ಟಿನಲ್ಲಿ ನಡೆದಿರುವುದಕ್ಕೆ ಇಂತಹ ವ್ಯಾಪಕವಾದ ಸಾಂಸ್ಕೃತಿಕ ದೃಷ್ಟಿಕೋನವೊಂದು ಇಲ್ಲದಿರುವುದೇ ಕಾರಣವಾಗಿದೆ. ನಾಗಾರಾಧನೆಗೆ ಸಂಬಂಧಿಸಿದ ಬಹುತೇಕ ಅಧ್ಯಯನಗಳು ಆಧ್ಯಾತ್ಮಿಕ ಪರಿಕಲ್ಪನೆಗೆ ಸೀಮೀತವಾಗಿದೆ. ಪೌರಾಣಿಕ

ಮತ್ತು ಸಾಂಸ್ಕೃತಿಕ ಪರಿಕಲ್ಪನೆಗಳನ್ನು ಆಧ್ಯಾತ್ಮಿಕ ಮತ್ತು ವೈದಿಕ ಹಿನ್ನೆಲೆಯಲ್ಲಿ ವಿವರಿಸುವುದು ಭಾರತದಲ್ಲಿ ಎಂದಿನಿಂದಲೂ ನಡೆದು ಬಂದಿರುವ ಒಂದು ರೂಢಿಯೇ ಆಗಿದೆ. ಇಂತಹ ಪರಿಕಲ್ಪನೆಗಳನ್ನು ಆಧ್ಯಾತ್ಮಿಕ ಮತ್ತು ವೈದಿಕವಾಗಿ ವಿವರಿಸುವುದು ಕಷ್ಟವು ಅಲ್ಲ. ಹಾಗೆಯೇ ಅಂತಹ ಎಲ್ಲ ಪರಿಕಲ್ಪನೆಗಳನ್ನು ಈ ಹಿನ್ನೆಲೆಯಲ್ಲಿ ವಿವರಿಸುವುದು ಆಕಸ್ಮಿಕವೂ ಅಲ್ಲ. ಪ್ರಸ್ತುತ ಅಧ್ಯಯನದಲ್ಲಿ ಅಂತಹ ಪಾರಂಪರಿಕ ದೃಷ್ಟಿಕೋನವನ್ನು ಬದಿಗಿರಿಸಿ ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಕೋನದಿಂದ ವಿವೇಚಿಸಲಾಗಿದೆ. ಇದು ನಾಡಿನ ಪ್ರಾಚೀನ ಜನವರ್ಗ, ಸಂಸ್ಕೃತಿಗಳು ಎಷ್ಟರ ಮಟ್ಟಿಗೆ ಅಂತಹ ಸಂಸ್ಕೃತಿಯೊಂದನ್ನು ರೂಪಿಸುವಲ್ಲಿ ಪರಿಣಾಮಕಾರಿಯಾಗಿ ಐತಿಹಾಸಿಕ ಪಾತ್ರವನ್ನು ವಹಿಸಿವೆ ಎನ್ನುವುದರ ಸೂಚನೆಯಾಗಿದೆ. ಆ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವು ಈವರೆಗಿನ ನಾಗಾರಾಧನೆಯ ಅಧ್ಯಯನವನ್ನು ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ಯುವ ಪ್ರಯತ್ನವಾಗಿದೆ.

ನಾಗಾರಾಧನೆಗೆ ಸಂಬಂಧಿಸಿದಂತೆ ಆಳವಾದ, ಮಹತ್ವಪೂರ್ಣವಾದ ಅಧ್ಯಯನ ಮಾಡಿದವರೂ ಡಾ. ಶಂಬಾ ಜೋಶಿಯವರು. 'ಋಗ್ವೇದಸಾರ ನಾಗಪ್ರತಿಮಾವಿಚಾರ'ದಲ್ಲಿ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ನಾಗಾರಾಧನೆ ಎಷ್ಟು ಪ್ರಭಾವಶಾಲಿಯಾದುದು ಎಂಬುದನ್ನು ಅವರು ಸಾದರಪೂರ್ವಕವಾಗಿ ನಿರೂಪಿಸಿದ್ದಾರೆ. 'ಸರ್ಪರಾಜ್ಞೀಃ ಸೂರ್ಯೋರ್ವಾಃ' ಎನ್ನುವ ಮಂತ್ರದ ಬಗೆಗೆ ವಿವೇಚಿಸುತ್ತ- 'ಋಗ್ವೇದದಲ್ಲಿಯೇ ನಾಗಾರಾಧಕರ ಪ್ರಭಾವ ಕಂಡುಬರುತ್ತದೆ. ಮತ್ತು ಋಗ್ವೇದವನ್ನೇ ನಾಗಾರಾಧಕರು ಪಲ್ಲಟಿಸಿದ್ದಾರೆ' ಎಂದು ಶಂಬಾ ಹೇಳುತ್ತಾರೆ. ಮುಂದುವರಿದು ಸೂರ್ಯನ ಆರಾಧಕರು ಬೆಳಕಿನ ಆರಾಧಕರೆಂದು, ಸರ್ಪನ ಆರಾಧಕರು ಕತ್ತಲೆಯ ಆರಾಧಕರೆಂದು ಅಭಿಪ್ರಾಯ ಪಡುತ್ತಾರೆ. ಈ ಕತ್ತಲೆಯ ಆರಾಧಕರು ಭಾರತೀಯ ದೃಷ್ಟಿಕೋನವನ್ನು ಅಂಧಕಾರದತ್ತ ತಳ್ಳಿದ್ದಾರೆ ಎಂಬುದು ಶಂಬಾಅವರ ಆಕ್ಷೇಪ.

ಪ್ರಸ್ತುತ ಅಧ್ಯಯನದಲ್ಲಿ ಅಂತಹ ಋಣಾತ್ಮಕವಾದ ದೃಷ್ಟಿಕೋನವನ್ನು ಇಟ್ಟುಕೊಂಡಿಲ್ಲ. ಇತರ ಸಂಸ್ಕೃತಿಗಳಂತೆಯೇ ನಾಗಾರಾಧನೆಯು ಪ್ರಾಚೀನವಾದ ಒಂದು ಮತಾಚಾರವೆಂಬ ನಿಲುವಿನಿಂದ, ಅಂತಹ ಮತಾಚಾರಗಳು ಜಗತ್ತಿನ ಬಗೆಗೆ ತಾಳಿದಂತಹ ನಿಲುವುಗಳನ್ನು ಕುತೂಹಲದಿಂದ ಅಧ್ಯಯನ ಮಾಡಲಾಗಿದೆ. ಭಾರತದಲ್ಲಿ ಹಾಗೆಯೇ ಕರ್ನಾಟಕದಲ್ಲಿ ಶಕ್ತಿ ಆರಾಧನೆ, ಗಾಣಪತ್ಯ ಮೊದಲಾದ ಸಂಪ್ರದಾಯಗಳಿರುವಂತೆ ನಾಗಾರಾಧನೆಯ ಒಂದು ಸಂಪ್ರದಾಯವಾಗಿದೆ. ಅಂದರೆ ಒಂದು ನಿರ್ದಿಷ್ಟವಾದ ಜನವರ್ಗ, ನಿರ್ದಿಷ್ಟವಾದ ಆಚರಣೆ ಮತ್ತು ಭೂಪ್ರದೇಶವನ್ನು ಒಳಗೊಂಡಿರುವುದಾಗಿರಬೇಕು. ಅಂತಹ ಮತಚಾರವೊಂದು ಹಿಂದೆ ಆಗಿಹೋದ ಕುರುಹಿನ ನೆನಪುಗಳು ಇಂದು ನಾಗರಾಧನೆಯಲ್ಲಿ ಕಾಣಸಿಕೊಳ್ಳುತ್ತಿರಬೇಕು ಎನ್ನುವ ಪರಿಕಲ್ಪನೆಯೊಂದು ಈ ನಿಂಬಂಧದ ಹಿನ್ನೆಲೆಯಲ್ಲಿದೆ. ಆದುದರಿಂದ ಮರೆತುಹೋದ ಅಥವಾ ಋಣಾತ್ಮಕವಾಗಿ ಪರಿಭಾವಿಸಲಾದ ಮತಾಚಾರವೊಂದನ್ನು ಮರಳಿ ಅಧ್ಯಯನದ ಕಕ್ಷೆಗೆ ಸೇರಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಇತರ ಸಂಸ್ಕೃತಿಯ ಪ್ರಭಾವಕ್ಕೊಳಗಾದರೂ ಮಲೆಯಾಳಿ ಮತ್ತು ತುಳು ಸಂಸ್ಕೃತಿಗಳು ತಮ್ಮ ಪರಂಪರೆಯ ಮೂಲ ಸತ್ವವನ್ನು ಇನ್ನು ಉಳಿಸಿಕೊಂಡಿವೆ. ಈ ಪ್ರದೇಶದ ಆರಾಧನ ಪರಿಕಲ್ಪನೆ, ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನದಲ್ಲಿ ಎಷ್ಟು ಪರಿಣಾಮಕಾರಿಯಾಗಿದೆ ಎನ್ನುವುದನ್ನು ನಾಗಾರಾಧನೆಯ ಪ್ರಕಾರಗಳಾದ ನೂರುಂಪಾಲುಂ,

ಸರ್ಪಂತುಳ್ಳಲ್, ನಾಗದೇವಾಲಯಗಳು, ನಾಗತಂಬಿಲ, ಡಕ್ಕೆಬಲಿ, ನಾಗಮಂಡಲ ಇತ್ಯಾದಿ ಆಚರಣೆಗಳ ಹಿನ್ನೆಲೆಯಲ್ಲಿ, ವಿವಿದ ದೃಷ್ಟಿಕೋನಗಳಿಂದ ಪರೀಕ್ಷಿಸಿ ನೋಡಬೇಕಾಗಿದೆ.

ಸಾವಿರಾರು ವರ್ಷಗಳಿಂದ ಸಂಸ್ಕೃತಿಯೊಂದರಲ್ಲಿ ಇದ್ದಿರಬಹುದಾದ ಆರಾಧನ ಪ್ರಕಾರವೊಂದರ ಸ್ವರೂಪವೊಂದನ್ನು ಮರಳಿ ಚಿತ್ರಿಸಿಕೊಳ್ಳುವುದು ಬಹುಮಟ್ಟಿಗೆ ಊಹಾತ್ಮಕವಾಗಿಯೇ ಉಳಿಯುತ್ತದೆ. ಆದರೆ ಈ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯನ್ನು ಇಂದಿನ ಪರಿಸ್ಥಿತಿಯಿಂದ ಕಲ್ಪಿಸಿಕೊಳ್ಳುವುದು ಮತ್ತು ಅದರ ಆಧಾರದ ಮೇಲೆ ಅದರ ಹಿಂದಿರುವ ಔಚಿತ್ಯವನ್ನು ಮತ್ತು ಸ್ವರೂಪವನ್ನು ಕಟ್ಟುವುದು ಮಾತ್ರ ಸಾಧ್ಯ. ನಾಗಾರಾಧನೆಯ ಅಧ್ಯಯನದ ಮೂಲಕ ಪ್ರಾಚೀನ ಸಂಸ್ಕೃತಿಯಿಂದ ಬೆಳೆದು ಬಂದಿರಬಹುದಾದ ಈ ಪರಂಪರೆಯ ಹಿನ್ನೆಲೆಯನ್ನು ಕಂಡುಕೊಳ್ಳಬೇಕಾಗಿದೆ.

ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಪ್ರಕೃತ ಅಧ್ಯಯನದ ಆಶಯಗಳನ್ನಿಟ್ಟುಕೊಳ್ಳಲಾಗಿದೆ. ಭಾರತಕ್ಕೆ ಅಗತ್ಯವಿರುವ ಒಂದು ಉತ್ಕೃಷ್ಟ ಧಾರ್ಮಿಕ ಜೀವನ ಪದ್ಧತಿಯ ಅನ್ವೇಷಣೆಯ ಅಗತ್ಯ ಇದೆಯೇ? ಅದರ ಪುನರ್ ಆಳವಡಿಕೆ ಭಾರತದಂತಹ ಸಂಕೀರ್ಣ ವ್ಯವಸ್ಥೆಯ ಸಂಸ್ಕೃತಿ ಸಂಘಟನೆಯಲ್ಲಿ ಸಾಧ್ಯವೆ? ಎನ್ನುವ ಜಿಜ್ಞಾಸೆಯ ಹಿನ್ನೆಲೆಯಲ್ಲಿ ನಾಗಾರಾಧನೆಯ ಅಧ್ಯಯನದ ಮೂಲಕ ಪ್ರಾಚೀನ ಸಂಸ್ಕೃತಿಯ ಇತಿಮಿತಿಗಳ ಅಧ್ಯಯನ ನಡೆಸಬೇಕಾಗಿದೆ.

ಪ್ರಸಕ್ತ ಸಾಂಸ್ಕೃತಿಕ ಪರಿಕಲ್ಪನೆಯ ಚೌಕಟ್ಟಿನಲ್ಲಿ ಮತ್ತು ಪ್ರಾದೇಶಿಕ ಭಿನ್ನತೆಗಳನ್ನು ಗಮನದಲ್ಲಿರಿಸಿಕೊಂಡು ಈ ಎರಡೂ ಸಂಸ್ಕೃತಿಗಳನ್ನು ನೋಡುವ ಪ್ರಯತ್ನ ನಡೆಸಲಾಗಿದೆ. ಈ ಎರಡೂ ಪ್ರದೇಶಗಳ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯನ್ನು ಗಮನಿಸುವಾಗ ಕಂಡುಬರುವ ಬಹುಮುಖ್ಯವಾದ ಸಂಗತಿಯೆಂದರೆ ವೈದಿಕ ಮತ್ತು ಅವೈದಿಕ ಎನ್ನುವ ಎರಡು ಭಿನ್ನ ನೆಲೆಗಳು. ಒಂದೇ ಆರಾಧನ ಪ್ರಕಾರವು ಜಾತಿ ವ್ಯವಸ್ಥೆಯ ಚೌಕಟ್ಟಿನಲ್ಲಿ ಹೇಗೆ ವಿಭಿನ್ನ ರೂಪಗಳನ್ನು ಪಡೆದುಕೊಂಡಿದೆ. ಇದರ ಮೂಲಕ ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳಿಗೂ ಸಾಮಾಜಿಕ ಮಾನ್ಯತೆ ದೊರಕಿದೆ ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ. ತುಳು ಮತ್ತು ಮಲೆಯಾಳಿಗರ ಸಾಮಾಜಿಕ ಮತ್ತು ತಾತ್ವಿಕ ಚೌಕಟ್ಟು ಧಾರ್ಮಿಕ ಆಚರಣೆಗಳ ಮೂಲಕ ಹೇಗೆ ರೂಪುಗೊಂಡಿದೆ ಎನ್ನುವುದರ ವಾಸ್ತವ ಅಧ್ಯಯನ ನಡೆಯಬೇಕಾಗಿದೆ.

ತುಳುನಾಡಿನ ನಾಗಾರಾಧನೆಯು ಜಾತಿ ಆಧಾರಿತ ಸಮಾಜದ ಹಿನ್ನೆಲೆಯಲ್ಲಿ ರೂಪುಗೊಂಡಿದೆ ಎನ್ನುವುದು ವಾಸ್ತವ ವಿಚಾರ. ಈ ಸಂಗತಿಗಳನ್ನು ಒಳಗೊಂಡ ಅಧ್ಯಯನದ ಕೊರತೆ ತುಳುನಾಡಿಗೆ ಸಂಬಂಧಪಟ್ಟಂತೆ ಎದ್ದು ಕಾಣುತ್ತದೆ. ಇಲ್ಲಿರುವ ಪ್ರಮುಖ ಪ್ರಶ್ನೆಗಳೆಂದರೆ ಯಾವ ಸಂಸ್ಕೃತಿಯ ಪ್ರಭಾವದಿಂದ ನಾಗಾರಾಧನೆ ತುಳುನಾಡಿನಲ್ಲಿ ಜಾತೀಯತೆಯ ಹಿನ್ನೆಲೆಯಲ್ಲಿ ನೆಲೆಗೊಂಡಿತು? ನಾಗಾರಾಧನೆ ಬ್ರಾಹ್ಮಣೀಕೃತಗೊಂಡ ಆರಾಧನೆಯೇ? ಅಥವಾ ಸ್ಥಳೀಯ ಆಚರಣೆಯೇ? ನಾಗಾರಾಧನೆಯನ್ನು ನಿಯಂತ್ರಿಸುವ ಜನವರ್ಗ, ಅದರ ಜರೂರು ಇವುಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ನಡೆಸಬೇಕಾದ ಅಗತ್ಯವಿದೆ. ನಾಗನನ್ನು ಸಂತಾನ ದೇವತೆ ಎಂದು

ಆರಾಧಿಸಲಾಗುತ್ತದೆ. ನಾಗದೋಷದಿಂದ ಬಂಜೆತನ, ದೃಷ್ಟಿದೋಷ, ಚರ್ಮವ್ಯಾಧಿ ಮೊದಲಾದವುಗಳು ಬರುತ್ತದೆಂಬ ನಂಬಿಕೆ ಜನಪದರಲ್ಲಿದೆ. ಇಂದಿನ ಜಾಗತೀಕರಣದ ಈ ಯುಗದಲ್ಲಿ ಈ ಮಾತು ಎಷ್ಟು ಸತ್ಯ ಎನ್ನುವುದರ ಪರೀಶಿಲನೆಯಾಗಬೇಕಿದೆ. ಪರಸ್ಪರ ಅಧ್ಯಯನದ ಈ ಸಂದರ್ಭದಲ್ಲಿ ಪಶ್ಚಿಮ ಕರಾವಳಿಯ ನಾಗಾರಾಧನೆಯ ವಿವಿಧ ಸ್ವರೂಪಗಳನ್ನು ಅಂತರ ರಾಜ್ಯ ಹಿನ್ನೆಲೆಯಲ್ಲಿಟ್ಟು ವಿಶ್ಲೇಷಿಸುವ ಅಗತ್ಯವಿದೆ. ಇದರಿಂದ ಆರಾಧನೆಯ ಒಂದೇ ಪ್ರಕಾರದ ವಿವಿಧ ರೂಪಗಳನ್ನು ಪರಿಚಯಿಸಲು ಸಾಧ್ಯವೇ ಎನ್ನುವುದನ್ನು ನೋಡಬೇಕಾಗಿದೆ.

ನಾಗಾರಾಧನೆ ಇಂದಿನ ಪ್ರಸಕ್ತ ಸಂದರ್ಭದಲ್ಲಿ ಪಶ್ಚಿಮ ಕರಾವಳಿಯ ಭೂಪ್ರದೇಶದಲ್ಲಿ ತುಂಬ ಪ್ರಭಾವಶಾಲಿಯಾಗಿ ಬೆಳೆದು ಬರುತ್ತಿದೆ. ನಾಗಮಂಡಲಗಳಂಥ ಆಚರಣೆಗಳಲ್ಲಿ ಸಮಾಜದ ಒಂದು ವರ್ಗವು ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸುತ್ತಿದೆ. ಕೇವಲ ಪ್ರತಿಷ್ಠೆಯ ಹೆಸರಲ್ಲಿ ನಡೆಸುವ ಇಂತಹ ಆಚರಣೆಗಳು ಧಾರ್ಮಿಕ ಕ್ಷೇತ್ರದಲ್ಲಿ ಯಾವ ರೀತಿಯ ಪರಿಣಾಮವನ್ನು ಬೀರಲಿದೆ?, ನಾಗ ಪ್ರತಿಷ್ಠೆ ಇತ್ಯಾದಿ ಕೆಲವು ಆಚರಣೆಗಳನ್ನು 'ಬ್ರಹ್ಮಕಲಶಾದಿ' ವಿಶೇಷ ಪ್ರಕಾರಗಳಿಂದ ನಡೆಸಲಾಗುತ್ತಿದೆ. ನಾಗನಿಗೆ 'ಬ್ರಹ್ಮಕಲಶ' ಎನ್ನುವುದು ಇತ್ತೀಚಿನ ಬೆಳವಣಿಗೆ. ಪ್ರಧಾನವಾಗಿ ನಾಗಸಂಬಂಧಿಯಾದ ಆಚರಣೆಗಳಿಗೆ ಹೊರರಾಜ್ಯಗಳಿಂದ ಹೇರಳ ಹಣ ಬರುತ್ತದೆ. ಈ ರೀತಿ ಮಿತಿಮೀರಿ ಹಣ ವ್ಯಯಿಸಿ ಆಚರಣೆಯ ಹೆಸರಲ್ಲಿ ಒಂದು ವ್ಯವಸ್ಥೆಯನ್ನು ಅಲುಗಾಡಿಸುವುದರಿಂದ ಇಲ್ಲಿರುವ ಮೂಲಪ್ರವೃತ್ತಿಗೆ ಯಾವ ರೀತಿಯ ಧಕ್ಕೆ ಬರುತ್ತದೆ? ಇಲ್ಲಿಯ ನಿವಾಸಿಗಳಿಗೆ ಈ ರೀತಿಯ ಆತಂಕಕಾರಿ ಬೆಳವಣಿಗೆಗಳಿಂದ ಮುಂದೆ ಯಾವತ್ತೂ ಧಾರ್ಮಿಕ ಆಚರಣೆಗಳನ್ನು ನಡೆಸುವ ಸಂದರ್ಭಗಳಲ್ಲಿ ಅದರಿಂದ ಯಾವ ಪರಿಣಾಮಗಳುಂಟಾಗಬಹುದು? ಆರಾಧನೆಗಳಲ್ಲಿ ಭಾಗವಹಿಸುವ ಕಲಾವಿದರು, ಅರ್ಚಕರು, ಇವರ ಆರ್ಥಿಕ, ಸಾಮಾಜಿಕ ಬದುಕಿನಲ್ಲಿ ಯಾವ ರೀತಿಯ ಬಲಾವಣೆಗಳಾಗಬಹುದು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ.

ನಾಗಾರಾಧನೆಯೊಂದಿಗೆ ಕೌಟುಂಬಿಕವಾಗಿ ಮತ್ತು ಸಾಮಾಜಿಕವಾಗಿ ಏಕತೆ ಮತ್ತು ಅನ್ಯೋನ್ಯತೆ ಬೆಳೆದು ಬರುತ್ತಿರುವುದು ಕಂಡುಬರುತ್ತದೆ. ವರ್ಷದಲ್ಲಿ ಒಮ್ಮೆ ಕುಟುಂಬದ ಸದಸ್ಯರೆಲ್ಲ ಸೇರುವಂತದ್ದು, ನಾಗಮಂಡಲಗಳಂಥ ಆಚರಣೆಗಳಲ್ಲಿ ಜನ ಜಾತಿಭೇದವನ್ನು ಮರೆತು ಸ್ವಯಂ ಸೇವಕರಾಗಿ ದುಡಿಯುವುದು. ಈ ಸಂದರ್ಭದಲ್ಲಿ ತಮ್ಮ ಶಕ್ತ್ಯಾನುಸಾರ ಹೊರೆಕಾಣಿಕೆಗಳನ್ನು ಸಮರ್ಪಿಸುವುದು, ಪ್ರತಿಯೊಬ್ಬರೂ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ಕೊಡದೆ ಸಂಯಮದಿಂದ ವರ್ತಿಸುವುದು. ಇಲ್ಲೆಲ್ಲ ಆರಾಧನೆ ಎಂಬ ಹಿನ್ನೆಲೆಯಲ್ಲಿ ಈ ಪ್ರವೃತ್ತಿಗಳು ನಡೆಯುತ್ತಿರುವುದು ಕಂಡುಬರುತ್ತದೆ. ಧಾರ್ಮಿಕ ಭಾವನೆಯ ಹಿನ್ನೆಲೆಯಲ್ಲಿ ಜನತೆ ವೈಷಮ್ಯವನ್ನು ಮರೆತು ಏಕತೆಯಿಂದ ವರ್ತಿಸುತ್ತಾರೆ. ಒಂದು ವ್ಯವಸ್ಥಿತ ಸಮಾಜವನ್ನು ಕಟ್ಟುವಲ್ಲಿ, ಜಾತಿ ಭೇದವನ್ನು ಮರೆತು ವರ್ಗ ಭೇದವನ್ನು ಮರೆತು ಜೀವಿಸುವಲ್ಲಿ ಈ ಆರಾಧನಾ ಪ್ರಸ್ಥಾನವು ನೆರವಾಗಬಲ್ಲುದೇ ಎಂಬುದನ್ನು ನೋಡಬೇಕಾಗಿದೆ.

ಒಟ್ಟಿನಲ್ಲಿ ಹಲವಾರು ಆಶಯಗಳನ್ನಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಮುಂದಿನ ಅಧ್ಯಯನ ಕಾರರಿಗೆ ಇದರಿಂದ ಉಪಯುಕ್ತ ಮಾಹಿತಿಗಳು ದೊರಕಬಹುದೆಂಬ ಆಶಯ ಈ ಅಧ್ಯಯನಕ್ಕಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

ಯಾವುದೇ ರೀತಿಯ ಅಧ್ಯಯನಕ್ಕೆ ಒಂದು ನಿರ್ದಿಷ್ಟ ವ್ಯಾಪ್ತಿಯನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ. ಪ್ರಸ್ತುತ ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯ ಅಧ್ಯಯನದ ಸಂದರ್ಭದಲ್ಲಿಯೂ ಒಂದು ಸೀಮಿತವಾದ ಭೌಗೋಳಿಕ ಮತ್ತು ಸಾಂಸ್ಕೃತಿಕವಾದ ವ್ಯಾಪ್ತಿಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ 'ನಾಗಾರಾಧನೆ' ಎಂಬ ಆರಾಧನ ಪ್ರಕಾರವು ದಕ್ಷಿಣ ಭಾರತ ಮಾತ್ರವಲ್ಲದೆ, ಇಡೀಯ ಭಾರತ ದೇಶದಲ್ಲೇ ಪ್ರಚಲಿತದಲ್ಲಿರುವ ಅತ್ಯಂತ ಪ್ರಾಚೀನವಾದ ಆರಾಧನ ಪದ್ಧತಿ. ದಕ್ಷಿಣ ಭಾರತದಲ್ಲಿಯೂ ಪ್ರದೇಶದಿಂದ ಪ್ರದೇಶಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಈ ಆಚರಣೆ ಬಹಳ ವೈವಿಧ್ಯಪೂರ್ಣವಾಗಿ ಕಂಡುಬರುತ್ತಿದೆ. ಇಂತಹ ವ್ಯಾಪಕವಾದ ವೈವಿಧ್ಯಪೂರ್ಣವಾದ ಆರಾಧನೆಯ ಪ್ರಕಾರವನ್ನು ಇಡಿಯ ದಕ್ಷಿಣ ಭಾರತದ ವ್ಯಾಪ್ತಿಯನ್ನು ಅದರ ಪೂರ್ಣ ಸತ್ವದೊಂದಿಗೆ ಕಂಡುಕೊಳ್ಳುವುದು ಕಷ್ಟಸಾಧ್ಯವೇ ಸರಿ. ಆದ್ದರಿಂದ ನಿರ್ದಿಷ್ಟವಾದ ಭೌಗೋಳಿಕ ವ್ಯಾಪ್ತಿಯೊಳಗೆ ಈ ರೀತಿಯ ಅಧ್ಯಯನ ನಡೆಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು 'ಕೇರಳ ಮತ್ತು ಕರಾವಳಿ ಕರ್ನಾಟಕ'ವನ್ನು ಅನುಲಕ್ಷಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಭೌಗೋಳಿಕವಾಗಿ ತುಳುನಾಡೆಂದು ಕರೆಸಿಕೊಳ್ಳುವ, ತುಳು ಸಂಸ್ಕೃತಿಯನ್ನು ಒಳಗೊಂಡಿರುವ ಉಡುಪಿ ಜಿಲ್ಲೆಯ ಕಲ್ಯಾಣಪುರದ ದಕ್ಷಿಣ ಭಾಗದಿಂದ ತೊಡಗಿ ಪ್ರಾಚೀನ ಕೇರಳದ 'ನಾಗರ ಕೋವಿಲ್' ವರೆಗಿನ ಪ್ರದೇಶದ ವ್ಯಾಪ್ತಿಯನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ಮತ್ತು ಆರಾಧನ ಪ್ರಕಾರಗಳಲ್ಲಿ ಈ ಭೂಪ್ರದೇಶಗಳಲ್ಲಿ ಒಂದು ರೀತಿಯ ಸಾಮ್ಯತೆ ಕಂಡುಬರುತ್ತದೆ. ಮತ್ತು ನಾಗಾರಾಧನೆಯನ್ನು ವಿವಿಧ ನೆಲೆಗಳಲ್ಲಿ ವಿವಿಧ ಸ್ವರೂಪಗಳಲ್ಲಿ ಆಚರಿಸಲಾಗುತ್ತದೆ. ಈ ಎಲ್ಲ ಆಚರಣೆಗಳಲ್ಲಿಯೂ ಪರಸ್ಪರ ಸಾಮ್ಯತೆ ಇದೆ. ಸಾಂಸ್ಕೃತಿಕವಾಗಿ ಪರಸ್ಪರ ತಾದಾತ್ಮ್ಯತೆ ಕಂಡುಬರುವ, ಪ್ರಾದೇಶಿಕವಾಗಿ ವೈಶಿಷ್ಟ್ಯವಿರುವ ಈ ಆಚರಣೆಗಳ ವಿಭಿನ್ನ ನೆಲೆಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಧಾರ್ಮಿಕ ವಲಯದಲ್ಲಿ ಅತಿ ಪ್ರಾಮುಖ್ಯವೆನಿಸಿರುವ, ಆಯ್ದ ಕೆಲವು ಪ್ರಕಾರಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ನಾಗಾರಾಧನೆ ಎನ್ನುವ ಅಧ್ಯಯನ ಪ್ರಕಾರವು ಅಧ್ಯಯನಕ್ಕೆ ಹಲವಾರು ಆಯಾಮಗಳನ್ನು ಒಳಗೊಂಡಿರುವ ಕ್ಷೇತ್ರ. ಇಲ್ಲಿ ಬರುವ ಪ್ರಕಾರಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾದ ವಿಷಯಗಳನ್ನು ಕುರಿತು ಅಧ್ಯಯನ ನಡೆಸಲು ಸಾಧ್ಯತೆ ಇದೆ. ಪ್ರಸ್ತುತ ಅಧ್ಯಯನದ ಸೀಮಿತ ವ್ಯಾಪ್ತಿಯ ಮೂಲಕ ಸಮಗ್ರ ಉಪಲಬ್ಧ ಮಾಹಿತಿಯನ್ನು ಸಂಗ್ರಹಿಸುವುದರೊಂದಿಗೆ ಅಧ್ಯಯನದ ಹಲವಾರು ಸಾಧ್ಯತೆಗಳನ್ನು ಪರಿಚಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ನಿಬಂಧದ ಅಧ್ಯಾಯಗಳು ಹೀಗಿವೆ.

ಅಧ್ಯಯನದ ಅನುಕೂಲತೆಗಾಗಿ ಎಂಟು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ವಿವಿಧ ಆಯಾಮಗಳ ಮೂಲಕ ಮಾಹಿತಿ ಸಂಗ್ರಹಿಸಿ ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಳ್ಳಲಾಗಿದೆ. ವಿಷಯದ ವ್ಯಾಪ್ತಿಯು ವಿಶಾಲವಾದ ಭೂಪ್ರದೇಶವನ್ನು ಒಳಗೊಂಡಿರುವುದರಿಂದ ಸಮಗ್ರವಾದ ಕ್ಷೇತ್ರಕಾರ್ಯವನ್ನು ನಡೆಸಲಾಗಿದೆ. ಈ ಸಂದರ್ಭದಲ್ಲಿ ಆರಾಧನೆಯ ವಿವಿಧ ಪ್ರಕಾರಗಳನ್ನು ಕುರಿತು ಮಾಹಿತಿ ಸಂಗ್ರಹಿಸಿ, ಆಚರಣೆ ಮತ್ತು ಪ್ರದರ್ಶನಗಳ ಸಂದರ್ಭಗಳಲ್ಲಿ ಭಾಗವಹಿಸಲಾಗಿದೆ. ಪ್ರದರ್ಶನ ಕಲೆಯೊಂದರ ಸ್ವರೂಪ, ಅದರ ಹಿನ್ನೆಲೆ, ಭಾಗವಹಿಸುವ,

ಆಚರಿಸುವ ಜನವರ್ಗ, ಪಾಲ್ಗೊಳ್ಳುವ ಕಲಾವಿದರು ಇವರುಗಳಿಂದ ಪೂರಕ ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲಿ ಬಳಸುವ ಪರಿಕರಗಳು, ಆಚರಣೆಯ ವಿಧಾನ ಇತ್ಯಾದಿಗಳೆಲ್ಲವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವಲೋಕಿಸಲಾಗಿದೆ. ನಾಗಾರಾಧನೆ ಆಚರಣೆಯ ಕೆಲವು ಪ್ರಕಾರಗಳು ನಿರ್ದಿಷ್ಟವಾದ ಸಂದರ್ಭದಲ್ಲಿ ಮತ್ತು ಕಾಲದಲ್ಲಿ ಆಚರಿಸಲ್ಪಡುವಂಥವುಗಳು. ಈ ಆಚರಣೆಗಳ ವಿವಿಧ ಸಂದರ್ಭಗಳಲ್ಲಿ ಕ್ಷೇತ್ರಕಾರ್ಯ ನಡೆಸಲಾಗಿದೆ. ಕೇರಳದಲ್ಲಿ ನಾಗಸಂಬಂಧಿಯಾದ ಕೆಲವು ನಿರ್ದಿಷ್ಟ ನಾಗದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರಾಮುಖ್ಯವೆನಿಸಿದ ಕೆಲವು ಆಯ್ದ ನಾಗದೇವಾಲಯಗಳಿಗೆ ಭೇಟಿ ನೀಡಿ ಕ್ಷೇತ್ರಕಾರ್ಯ ಮಾಡಲಾಗಿದೆ. ಅಲ್ಲಿ ವಿವಿಧ ಸ್ತರಗಳ ವ್ಯಕ್ತಿಗಳೊಂದಿಗೆ ಸಂದರ್ಶನ ನಡೆಸಲಾಗಿದೆ. ದಲಿತರಿಂದ ಆಚರಿಸಲ್ಪಡುವ ಹಲವಾರು ರೀತಿಯ ನಾಗಾರಾಧನೆಯ ಪ್ರಕಾರಗಳನ್ನು ಅಧ್ಯಯನದಲ್ಲಿ ಸೂಚಿಸಲಾಗಿದೆ. ಆಚರಣೆಯ ಸಂದರ್ಭಗಳಲ್ಲಿ ಭಾಗವಹಿಸಿ ಅವರಿಂದ ಮಾಹಿತಿ ಪಡೆಯಲಾಗಿದೆ. ಮಾಹಿತಿ ಸಂಗ್ರಹಣೆಯ ಸಂದರ್ಭದಲ್ಲಿ ಸಮಾಜದ ವಿವಿಧ ವರ್ಗದ ಸಂಶೋಧಕರುಗಳು, ವಿದ್ವಾಂಸರು, ಕಲಾವಿದರು, ಅರ್ಚಕರು ಮೊದಲಾದ ವ್ಯಕ್ತಿಗಳೊಂದಿಗೆ ಸಂದರ್ಶನ ನಡೆಸಲಾಗಿದೆ. ಈ ರೀತಿ ಸಂಗ್ರಹಿಸಿರುವ ವಿಷಯಗಳೊಂದಿಗೆ ಉಪಲಬ್ಧವಿರುವ ಗ್ರಂಥಸ್ಥ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಗ್ರಂಥಸ್ಥ ಆಕರಗಳು, ಕ್ಷೇತ್ರಕಾರ್ಯ, ವಕ್ತೃಗಳ ಮಾಹಿತಿ ಇತ್ಯಾದಿಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ.

ಪ್ರಸಕ್ತ ಅಧ್ಯಯನದ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನದ ಸ್ವರೂಪವನ್ನು ನೀಡಲಾಗಿದೆ. ಯಾವ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನವನ್ನು ನಡೆಸಲಾಗಿದೆ. ಅಧ್ಯಯನವು ಯಾವ ವ್ಯಾಪ್ತಿಪ್ರದೇಶಗಳನ್ನು ಒಳಗೊಂಡಿದೆ ಇದರ ಹಿಂದಿರುವ ಔಚಿತ್ಯವೇನು ಮತ್ತು ಯಾವ ಯಾವ ಸ್ವರೂಪಗಳಿಂದ ಅಧ್ಯಯನ ನಡೆಸಲಾಗಿದೆ ಎಂಬ ವಿಚಾರಗಳ ಕುರಿತು ವಿಸ್ತೃತ ಮಾಹಿತಿ ಒದಗಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಕೇರಳ ಮತ್ತು ಕರಾವಳಿ ಕರ್ನಾಟಕದ ಭೌಗೋಳಿಕ ಸ್ಥಿತಿಯನ್ನು ವಿವರಿಸಲಾಗಿದೆ. ಈ ಭಾಗದ ಪ್ರಾಕೃತಿಕ ಸ್ವರೂಪ, ಭೌಗೋಳಿಕ ವೈಶಿಷ್ಟ್ಯತೆ, ನದಿಗಳು, ಐತಿಹಾಸಿಕ ಹಿನ್ನೆಲೆ, ಭಾಷಿಕ ಹಿನ್ನೆಲೆ, ಜನಾಂಗಿಕ ವ್ಯವಸ್ಥೆ, ಕೃಷಿ ಪದ್ಧತಿ, ಆಹಾರ ಪದ್ಧತಿ ಮತ್ತು ಜನಪದ ಸಂಸ್ಕೃತಿಯ ವೈಶಿಷ್ಟ್ಯತೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಶ್ಲೇಷಣೆ ನಡೆಸಲಾಗಿದೆ. ಅಧ್ಯಾಯದ ಕೊನೆಯಲ್ಲಿ ಸಮಗ್ರವಾದ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಒಂದೆ ನೆಲೆಯಲ್ಲಿ ಗುರುತಿಸಿ ವಿವರಿಸಲಾಗಿದೆ.

ಮುಂದಿನ ಅಧ್ಯಾಯದಲ್ಲಿ ನಾಗಾರಾಧನೆಯ ಕುರಿತಾದ ಇದುವರೆಗಿನ ಅಧ್ಯಯನದ ಸಮೀಕ್ಷೆ ನಡೆಸಲಾಗಿದೆ. ಇದುವರೆಗೆ ನಡೆದಿರುವ ಅಧ್ಯಯನದ ವಿವಿಧ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಅಧ್ಯಯನಗಳಲ್ಲಿ ವಿದ್ವಾಂಸರುಗಳು ನೀಡಿರಬಹುದಾದ ಮಾಹಿತಿಯ ಸಾರವನ್ನು ಉಲ್ಲೇಖಿಸಲಾಗಿದೆ. ಕನ್ನಡ ಭಾಷೆಯಲ್ಲಿ ಪ್ರಕಟಗೊಂಡಿರುವ ವಿವಿಧ ಗ್ರಂಥಗಳು, ಲೇಖನಗಳು, ಸ್ಮರಣ ಸಂಚಿಕೆಗಳು, ವಾರಪತ್ರಿಕೆಗಳ ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳು ಮತ್ತು ಉಪಲಬ್ಧ ಆಂಗ್ಲ ಮತ್ತು ಮಲಯಾಳಿ ಕೃತಿಗಳನ್ನು ಸಮೀಕ್ಷೆಯಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ನಾಗ ಪರಿಕಲ್ಪನೆಯ ಕುರಿತಾಗಿ ವಿಶ್ಲೇಷಿಸಲಾಗಿದೆ. ಪ್ರಾಚೀನ ಸಂಸ್ಕೃತಿಯಲ್ಲಿ ನಾಗಾರಾಧನೆ ಬೆಳೆದುಬಂದಿರಬಹುದಾದ ಬಗೆ. ಜಾಗತಿಕ ಮಟ್ಟದಲ್ಲಿ ನಾಗಾರಾಧನೆಯ ವಿವಿಧ ಸ್ವರೂಪಗಳು, ನಾಗ-ಸರ್ಪ ಪರಿಕಲ್ಪನೆಯ ತಾತ್ವಿಕ ವಿವೇಚನೆ, ನಾಗ ಸುಬ್ರಹ್ಮಣ್ಯ ಅನನ್ಯತೆ ಇತ್ಯಾದಿ ವಿಷಯಗಳನ್ನು ವಿವರಿಸಿದೆ, ಈ ಸಂದರ್ಭದಲ್ಲಿ ಉಪಲಬ್ಧ ಗ್ರಂಥಸ್ಥ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಾಯ ಐದರಲ್ಲಿ ಕೇರಳದ ನಾಗಾರಾಧನೆಯ ವಿವಿಧ ಸ್ವರೂಪಗಳನ್ನು ನೀಡಲಾಗಿದೆ. ನಾಗಾರಾಧನೆಯ ಪ್ರಕಾರ ಮತ್ತು ಆಚರಣೆಯ ಸ್ವರೂಪಗಳನ್ನು ಅನುಲಕ್ಷಿಸಿ ವೈದಿಕ ಸ್ವರೂಪ ಮತ್ತು ಜನಪದ ಸ್ವರೂಪದ ಆಚರಣೆಗಳೆಂದು ಪ್ರತ್ಯೇಕಿಸಲಾಗಿದೆ. ವೈದಿಕ ಆಚರಣೆಗಳಲ್ಲಿ ಪ್ರಧಾನವಾಗಿ ನೂರುಂ ಪಾಲುಂ, ಸರ್ಪಬಲಿ ಮತ್ತು ಕೇರಳದ ಪ್ರಸಿದ್ಧ ನಾಗದೇವಾಲಯಗಳನ್ನು ಅಳವಡಿಸಿಕೊಳ್ಳಲಾಗಿದೆ.

ಜನಪದ ಆಚರಣೆಗಳಲ್ಲಿ ಪ್ರಧಾನವಾಗಿ ಸರ್ಪಂತುಳ್ಳಲ್ ಕಡೆಗೆ ಗಮನ ಕೇಂದ್ರೀಕರಿಸಲಾಗಿದೆ. ಉಳಿದಂತೆ ನಾಗತ್ತೆಯಂ, ಕುರುಂದಿನಿ ಪಾಟ್, ನಾಗತೋಟ್ಟಂ ಇತ್ಯಾದಿಗಳನ್ನು ವಿಶ್ಲೇಷಿಸಲಾಗಿದೆ.

ಮುಂದಿನ ಅಧ್ಯಾಯದಲ್ಲಿ ತುಳುನಾಡಿನ ನಾಗಾರಾಧನೆಯ ಸ್ವರೂಪವನ್ನು ವಿವರಿಸಲಾಗಿದೆ. ತುಳುವ ಪ್ರದೇಶದಲ್ಲಿ ಆಚರಿಸಲ್ಪಡುವ ವೈದಿಕ ಮತ್ತು ಜನಪದ ಆಚರಣೆಗಳ ಕುರಿತು ವಿಶ್ಲೇಷಿಸಲಾಗಿದೆ.

ಸರ್ಪಸಂಸ್ಕಾರ, ಆಶ್ಲೇಷಬಲಿ, ಢಕ್ಕೆ ಬಲಿ, ನಾಗಮಂಡಲ, ಮತ್ತು ಜನಪದ ಪ್ರಕಾರಗಳಾದ ಕಾಡ್ಯನ ಆರಾಧನೆ, ಪಾಣರಾಟ ಇತ್ಯಾದಿಗಳನ್ನು ಪ್ರಾಸಂಗಿಕವಾಗಿ ವಿವರಿಸಿದೆ.

ಅಧ್ಯಾಯ ಏಳರಲ್ಲಿ ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯ ಸಾಂಸ್ಕೃತಿಕ ಸಾದೃಶ್ಯಗಳು ಮತ್ತು ಸ್ಥಿತ್ಯಂತರಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಎಂಟು ಸಮಾರೋಪ, ಅಧ್ಯಯನದ ಫಲಿತಗಳು ಮತ್ತು ಸಾಧ್ಯತೆಗಳನ್ನು ನೀಡಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದ ಪೂರಕ ಮಾಹಿತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ವಕ್ತೃಗಳ ಮಾಹಿತಿ, ಗ್ರಂಥಋಣ, ಛಾಯಾಚಿತ್ರ ಇತ್ಯಾದಿಗಳನ್ನು ನೀಡಲಾಗಿದೆ.

* * * * *

ಅಧ್ಯಾಯ - ೨

ಕೇರಳ ಮತ್ತು ಕರಾವಳಿ ಕರ್ನಾಟಕ: ಪ್ರಾದೇಶಿಕ ವಿವರಗಳು

೨.೧. ಕೇರಳ : ಪ್ರಾದೇಶಿಕ ವಿವರ

೨.೧.೧. ಕೇರಳ ಪದ ವ್ಯುತ್ಪತ್ತಿ

ಮಲೆಯಾಳ ಭಾಷೆಯನ್ನಾಡುವ ಜನರನ್ನು 'ಕೇರಳೀಯರು' ಅಥವಾ 'ಮಲೆಯಾಳಿಗಳು' ಎಂದೂ, ಆ ಪ್ರದೇಶವನ್ನು ಕೇರಳ ಎಂದೂ ಕರೆಯಲಾಗುತ್ತದೆ. 'ಕೇರಳ' ಮತ್ತು 'ಮಲೆಯಾಳ' ಶಬ್ದಗಳ ವ್ಯುತ್ಪತ್ತಿಯ ಕುರಿತಂತೆ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಕೇರಳ ಪದವು ಚೇರಲಂ, ಚೇರಂ, ಕೇರಂ, ಮತ್ತು ಸೇರಂ, ಎಂಬಿತ್ಯಾದಿ ಪದಗಳಿಂದ ಬಂದಿದೆ.[೧] ಕೇರಳವು ತೆಂಗಿನ ಮರಗಳಿಗೆ ಪ್ರಸಿದ್ಧವಾಗಿದೆ. ಸಂಸ್ಕೃತದಲ್ಲಿ ತೆಂಗಿನ ಮರವನ್ನು 'ಕೇರ' ಎಂದು ಕರೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇರ, ಕೇರಲ, ಕೇರಳ ಎನ್ನುವ ಹೆಸರು ಬಂದಿರಬೇಕು ಎಂದು ಅಭಿಪ್ರಾಯಪಡಲಾಗಿದೆ. ಇನ್ನೊಂದು ಅಭಿಮತದಂತೆ ಕೇರಳ ಪದವು 'ಚೇರಲ' ಎಂಬ ಶಬ್ದದಿಂದ ಬಂದಿದೆ. ತಮಿಳಿನ ಚಾರಲ್ ಪದವು ಮಲಯಾಳಿಯಲ್ಲಿ 'ಚೇರಲ' ಆಗಿ ಮಾರ್ಪಡುಗೊಂಡಿರಬೇಕು. ತಮಿಳು ಭಾಷೆಯಲ್ಲಿ ಚಾರಲ್ ಎಂದರೆ ಪರ್ವತಗಳ ಇಳಿಜಾರು ಪ್ರದೇಶ ಅದೇ ಮುಂದೆ ಕೇರಳವಾಗಿ ಪರಿವರ್ತನೆಗೊಂಡಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೨]

ಸುಶೀಲಾ ಉಪಾಧ್ಯಾಯ ಅವರು ಕೇರಳ ಪದ ವ್ಯುತ್ಪತ್ತಿಯ ಕುರಿತಾದ ಐತಿಹ್ಯಗಳನ್ನು ಉಲ್ಲೇಖಿಸಿ ''ಈ ಶಬ್ದವು ಚೇರ ಎಂಬ ಶಬ್ದದಿಂದ ಬಂದಿದೆ. ಆರ್ಯರು ಭಾರತಕ್ಕೆ ಬಂದಾಗ ಭಾರತದಲ್ಲಿ ವಾಸಮಾಡುತ್ತಿದ್ದವರನ್ನು ಸೋಲಿಸಿ ಅವರನ್ನು ದಕ್ಷಿಣದ ಕಡೆಗೆ ಓಡಿಸಿದರು. ಅವರು ಕಾಲಕ್ರಮೇಣ ಬೇರೆ ಬೇರೆ ಕಾರಣಗಳಿಂದ ಚಿಕ್ಕ ಪುಟ್ಟ ಗುಂಪುಗಳಾಗಿ ಚದುರಿ ಹೋದರು. ಇವರೇ ತಮಿಳರು, ಆಂಧ್ರರು, ಕನ್ನಡಿಗರು ಮುಂತಾದವರು. ಈ ಜನರು ಚೇರ, ಚೋಳ, ಮತ್ತು ಪಾಂಡ್ಯ ಎಂಬ ಮೂರು ರಾಜ್ಯಗಳಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಚೇರ ವಂಶಕ್ಕೆ ಸೇರಿದವರೇ ಈಗಿನ ಕೇರಳಿಯರು. ರಾಮಾಯಣ ಮಹಾಭಾರತ ಮುಂತಾದ ಕೃತಿಗಳಲ್ಲಿಯೂ 'ಸಂಗಂ' ಕಾಲದ ಕೃತಿಗಳಲ್ಲಿಯೂ ಚೇರ ರಾಜ್ಯಗಳು ಮತ್ತು ಚೇರ ರಾಜ್ಯದ ಬಗ್ಗೆ ಉಲ್ಲೇಖವಿದೆ. ಚೇರಲು ಎಂದರೆ ಮಲೆಯಾಳಿಯಲ್ಲಿ ಒಟ್ಟುಗೂಡುವಿಕೆ ಎಂದರ್ಥ. 'ಅಕಂ' ಎಂದರೆ ದೇಶ, ಚೇರಲು ಮತ್ತು 'ಅಕಂ' ಎಂಬ ಸಮಾಸ ಶಬ್ದವೇ ಕೇರಳವಾಗಿ ಮಾರ್ಪಾಟುಗೊಂಡಿರಬಹುದು'', ಎಂದು ಐತಿಹ್ಯಗಳು ಮತ್ತು ಸಾಹಿತ್ಯ ಗ್ರಂಥಗಳನ್ನು ಕುರಿತು ಉಲ್ಲೇಖಿಸುತ್ತಾರೆ.[೩]

ವಿದ್ವಾಂಸರುಗಳ ಈ ಅಭಿಮತವನ್ನು ಗಮನಿಸಿದರೆ ಕೇರಳ ಪದವು ಅತೀ ಪ್ರಾಚೀನದಿಂದಲೂ ಬಳಕೆಯಲ್ಲಿತ್ತು ಎನ್ನುವುದು ಕಂಡುಬರುತ್ತದೆ.

ಕೇರಳದಲ್ಲಿ ವಾಸಿಸುವ ಜನರನ್ನು 'ಮಲೆಯಾಳಿ'ಗಳು ಎಂದು ಕರೆಯುವುದು ವಾಡಿಕೆ. ಪಿ.ಕೆ. ಪರಮೇಶ್ವರನ್ ನಾಯರ್ ಅವರು ಕೇರಳ ಭಾಷೆಗೆ 'ಮಲಯಾಳಂ' ಎನ್ನುವ ಹೆಸರು ದೇಶವಾಚಕವಾಗಿ ಬಂದಿದೆ ಎನ್ನುತ್ತಾರೆ. ''ಮಲೆಯಾಳಂ ಮೊದಲು ದೇಶವಾಚಕ ಶಬ್ದವಾಗಿತ್ತು. 'ಮಲೆ' (ಪರ್ವತ) ಯೊಡನೆ ಕೂಡಿಕೊಂಡಿರುವ 'ಆಳಂ' ಅಥವಾ 'ದೇಶ' ಎನ್ನುವ ಅರ್ಥದಲ್ಲಿ ಉತ್ಪತ್ತಿಯಾದ 'ಮಲಯಾಳಂ' ಎನ್ನುವ ಪದ ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ 'ಮಲಯಾಳ' ಎಂದದ್ದಾಗಿರಬೇಕು. ಅನಂತರ 'ಮಲಯಾಣ್ಮ', 'ಮಲಯಾಯ್ಮ' ಎನ್ನುವ ಸಂಜ್ಞೆಗಳು ಭಾಷಾವಾಚಿಯಾಗಿ ರೂಢಿಯಲ್ಲಿದ್ದುವು. ದೇಶವಾಚಕವಾದ ಮಲಯಾಳವನ್ನೇ ಇಂದು ಭಾಷಾವಾಚಕವಾಗಿ ಬಳಸಲಾಗುತ್ತದೆ.'' ಎಂದು ಅಭಿಪ್ರಾಯ ಪಡುತ್ತಾರೆ.[೪]

ಕೇರಳ ರಾಜ್ಯವನ್ನು 'ಮಲಬಾರ್' ಎಂದು ಕರೆಯಲಾಗುತ್ತದೆ. ವ್ಯಾಪಾರಕ್ಕಾಗಿ ಬಂದ 'ಅರಬ್ಬರು' 'ಅರಬ್ಬೀ' ಸಮುದ್ರದ ತೀರ ಪ್ರದೇಶಗಳಲ್ಲಿನ ರಾಜ್ಯಗಳಿಗೆ ಮಲಬಾರು ಎಂಬ ಹೆಸರನ್ನಿಟ್ಟರು. ಮಲಯಾಳದ ಪ್ರಸಿದ್ಧ ನಿಘಂಟುಕಾರ ಗುಂಡರ್ಟ್ 'ಬಾರ್' ಎಂದರೆ ರಾಜ್ಯ ಎಂಬ ಶಬ್ದದಿಂದ ಹುಟ್ಟಿದೆ ಎಂದು ಹೇಳಿದ್ದಾನೆ. ಈ ಶಬ್ದವನ್ನು 'ಮಲೆ' ಎಂಬ ಶಬ್ದದೊಡನೆ ಸೇರಿಸಿ ಲಕ್ಷದ್ವೀಪ ಮತ್ತು ಮೂಲ ದ್ವೀಪಗಳಿಂದ ಭಿನ್ನವಾದ ವಿಸ್ತಾರವಾದ ಭೂಭಾಗ ಎಂದು ಗುರುತಿಸಲು ಇಟ್ಟ ಹೆಸರಾಗಿರಬಹುದು ಎಂದು ಅವನು ಅಭಿಪ್ರಾಯ ಪಡುತ್ತಾನೆ. ಟ್ರಂಪ್ ಎಂಬುವನು 'ಬಾರ್' ಶಬ್ದ ಜಿಲ್ಲೆ ಅಥವಾ ಪ್ರದೇಶ ಎಂಬ ಅರ್ಥಕೊಡುವ 'ಲಾಟ' ಎನ್ನುವ ಸಂಸ್ಕೃತ ಶಬ್ದದಿಂದ ಬಂದಿದೆಯೆಂದು ಹೇಳಿದ್ದಾನೆ. ಮಲಬಾರ್ ಎಂದರೆ ಮಲೆಗಳ ಜಿಲ್ಲೆಯೆಂದೂ ಇದರ ವ್ಯುತ್ಪತ್ತಿಯನ್ನು ವಿದ್ವಾಂಸರುಗಳ ಉಲ್ಲೇಖವನ್ನು ಅನುಸರಿಸಿ ವಿಶ್ಲೇಷಿಸಲಾಗಿದೆ.[೫] ಒಟ್ಟಿನಲ್ಲಿ ಕೇರಳ, ಮಲೆಯಾಳ ಮತ್ತು ಮಲಬಾರ್ ಎನ್ನುವ ಪದಗಳು ಬೇರೆ ಬೇರೆ ಪದಗಳಿಂದ ಸೃಷ್ಟಿಯಾಗಿದ್ದು ಇಂದು ಆಡಳಿತಾತ್ಮಕವಾಗಿ ಕೇರಳ ಎಂಬ ಹೆಸರನ್ನೇ ಬಳಸಲಾಗುತ್ತದೆ.

೨.೧.೨ ಭಾಷೆ

ಇಂದು ಕೇರಳದಲ್ಲಿ ಮೌಖಿಕ ಮತ್ತು ಲಿಖಿತ ರೂಪದಲ್ಲಿ ಮಲೆಯಾಳಿ ಭಾಷೆ ಬಳಕೆಯಲ್ಲಿದೆ. ಅದಕ್ಕೆ ಸ್ವಂತವಾದ ಒಂದು ಮಲೆಯಾಳಿ ಲಿಪಿಯಿದೆ. ಪುರಾತನ ಕಾಲದಲ್ಲಿ ಬಳಕೆಯಲ್ಲಿದ್ದ ಲಿಪಿಯನ್ನು 'ವಟ್ಟೆಳುತ್ತು' ಎಂದು ಕರೆಯುತ್ತಿದ್ದರು. ಇದು ಬ್ರಾಹ್ಮೀ ಲಿಪಿಯಿಂದ ಉದ್ಭವಿಸಿದೆ. 'ವಟ್ಟ' ಎಂದರೆ ವೃತ್ತವೆಂದೂ 'ಎಳುತ್ತು' ಎಂದರೆ ಲಿಪಿಯೆಂದೂ ಅರ್ಥ. ಎಂಟನೆಯ ಶತಮಾನದ ಅಂತ್ಯದಲ್ಲಿ ರಾಜ್ಯವಾಳಿದ ಪಾಂಡ್ಯರಾಜನಾದ ಜಟಿಲ ವರ್ಮನ ಕಾಲದ ಒಂದು ಶಿಲಾಶಾಸನದಲ್ಲಿ ಈ ವಟ್ಟೆಳುತ್ತಿನ ಪ್ರಯೋಗವನ್ನು ಕಾಣುತ್ತೇವೆ. ಹದಿನೈದನೆಯ ಶತಮಾನದಲ್ಲಿ ವಟ್ಟೆಳುತ್ತುವಿನ ಉಪಯೋಗ ಕಡಿಮೆಯಾಗಿ ಚೋಳ ದೇಶದ ಲಿಪಿಯಾದ ತಮಿಳು ಪ್ರಚಾರಕ್ಕೆ ಬಂತು.[೬] ಆದರೆ ಕೇರಳದಲ್ಲಿ ಸುಮಾರು ೧೮ ನೆಯ ಶತಕದ ವರೆಗೂ ಆ ಲಿಪಿಯ ಆದಿಪತ್ಯವಿತ್ತು. ಎಂದು, ದಾಖಲೆಗಳು ಬರಹಗಳು,

ಗ್ರಂಥ ಲೇಖನಗಳು, ಶಿಲಾಶಾಸನಗಳು ಇವೆಲ್ಲವನ್ನು ವಟ್ಟೆಳತ್ತುವಿನಲ್ಲಿಯೇ ಬರೆಯಲಾಗುತ್ತಿತ್ತು. ವಟ್ಟೆಳುತ್ತಿನಿಂದ ಕಾಲ ಕ್ರಮೇಣ 'ಕೋಲೆಳುತ್ತು' ಎನ್ನುವ ಲಿಪಿ ಹುಟ್ಟಿಕೊಂಡಿತು. ಈ ಲಿಪಿ ಸಂಪ್ರದಾಯಕ್ಕೆ ಕೊಚ್ಚಿಯಲ್ಲೂ ಮಲಬಾರಿನಲ್ಲೂ ಹೆಚ್ಚು ಪ್ರಾಮುಖ್ಯತೆ ಇತ್ತು. ವಟ್ಟೆಳುತ್ತಿನಿಂದಲೇ ಉಂಟಾದ, ಅದರಿಂದ ಸ್ವಲ್ಪ ವ್ಯತ್ಯಸ್ತಗೊಂಡಿರುವ ಮತ್ತೊಂದು ಲಿಪಿಯೇ 'ಮಲೆಯಾಣ್ಮ ಲಿಪಿ' ಅದು ತಿರುವನಂತಪುರದ ದಕ್ಷಿಣ ಭಾಗದಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಈ ಮೂರು ಲಿಪಿ ಸಂಪ್ರದಾಯಗಳಲ್ಲಿ ವಟ್ಟೆಳುತ್ತೇ ಕೇರಳದಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಕಾಲ ಕ್ರಮೇಣ ಈ ಲಿಪಿಸಂಪ್ರದಾಯಗಳು ಅಧಿಕವಾಗಿ ಇಂದಿನ ಲಿಪಿಗೆ ಆಧಾರವಾದ 'ಗ್ರಂಥ ಲಿಪಿ' ಮಲಯಾಳದಲ್ಲಿ ಅಂಗೀಕಾರವಾಗುವುದಕ್ಕೆ ಎಡೆಕೊಟ್ಟಿರಬೇಕು. 'ಗ್ರಂಥಾಕ್ಷರ ಲಿಪಿ' ಸುಮಾರು ೭ನೆಯ ಶತಕಕ್ಕಿಂತ ಹಿಂದಿನಿಂದಲೂ ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿತ್ತೆಂದು ಊಹಿಸಲಾಗಿದೆ. ಮಲಯಾಳದಲ್ಲಿ ಮಣಿ ಪ್ರವಾಳ ಸಾಹಿತ್ಯದ ಆವಿರ್ಭಾವದೊಂದಿಗೆ ಇಲ್ಲಿ ಇದಕ್ಕೆ ಸ್ಥಾನ ದೊರೆತಿದ್ದಿರಬೇಕು. ಅದು ಕ್ರಮೇಣ ಮಲೆಯಾಳ ಲಿಪಿ ಸಂಪ್ರದಾಯವನ್ನು ರೂಪಾಂತರಗೊಳಿಸಿತು. ಹಾಗೆ ಕ್ರಿ.ಶ.೯ ನೆಯ ಶತಕದ ಹೊತ್ತಿಗೆ ಲಿಪಿ ಸಂಪ್ರದಾಯ ಒಂದು ಹಂತಕ್ಕೆ ಬಂದುದರ ಫಲವಾಗಿ ಅದು 'ಆರ್ಯ' ಎಳತ್ತು ಎನ್ನುವ ಹೆಸರಿನಿಂದೊಡಗೂಡಿ ಮಲಯಾಳ ಲಿಪಿಯಾಗಿ ಪರಿಣಮಿಸಿತು. ಅದೇ ಇಂದು ಪ್ರಚಾರದಲ್ಲಿರುವ ಲಿಪಿ ಸಂಪ್ರದಾಯ ಎನ್ನುವುದು ವಿದ್ವಾಂಸರ ಅಭಿಮತ.[೭]

ಪ್ರಸ್ತುತ ಕೇರಳದಲ್ಲಿ ಮಲೆಯಾಳಿ ಪ್ರಧಾನ ಆಡಳಿತ ಭಾಷೆಯಾಗಿದೆ. ಉಳಿದಂತೆ ಇಂಗ್ಲೀಷ್, ತಮಿಳು, ತೆಲುಗು, ಕೊಂಕಣಿ, ಹಿಂದಿ, ಉರ್ದು, ತುಳು, ಮೊದಲಾದ ಭಾಷಿಗರು ಕಂಡುಬರುತ್ತಾರೆ.

೨.೧.೩ ಕೇರಳದ ಭೌಗೋಳಿಕ ಸ್ಥಿತಿ

ಭಾರತದ ಪಶ್ಚಿಮ ಕರಾವಳಿಯ ಒಂದು ಪ್ರಾಚೀನ ದ್ರಾವಿಡ ರಾಜ್ಯ ಕೇರಳ. ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕೇರಳಕ್ಕೆ ತನ್ನದೇ ಆದ ವೈಶಿಷ್ಟ್ಯತೆ ಇದೆ. ನದಿಗಳು, ಪರ್ವತಗಳು, ಸಮುದ್ರ ಇತ್ಯಾದಿ ಪ್ರಾಕೃತಿಕ ಸಂಪತ್ತಿನಿಂದ ಕೂಡಿದ ಈ ರಾಜ್ಯ ಪುರಾತನದಿಂದಲೂ ವಿದೇಶಿಯರನ್ನು ಆಕರ್ಷಿಸುತ್ತ ಬಂದಿದೆ. ಬಹಳ ಪ್ರಾಚೀನ ಕಾಲದಿಂದಲೇ ಕೇರಳ ವಿದೇಶ ವಾಣಿಜ್ಯದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿತ್ತು. ಈಜಿಪ್ಟ್, ಅರೇಬಿಯಾ, ಚೀನಾ, ಬೆಬಿಲೋನ್, ರೋಮ್, ಮುಂತಾದ ಪ್ರಾಚೀನ ಕಾಲದ ಎಲ್ಲ ಪ್ರಧಾನ ದೇಶಗಳೂ ಕೇರಳ ರಾಜ್ಯದೊಡನೆ ವ್ಯಾಪಾರ ಸಂಪರ್ಕವನ್ನು ಬೆಳೆಸಿಕೊಂಡು ಬಂದಿದ್ದವು. ಕೇರಳದ ಸಾಗುವಾನಿ, ಅಗರು, ನವಿಲುಗರಿ ಇವುಗಳು ಪ್ರಾಚೀನ ಈಜಿಪ್ಟ್‌ನಲ್ಲೂ, ರೋಮಿನಲ್ಲೂ ಬೆಲೆ ಬಾಳುವ ವಸ್ತುಗಳಾಗಿದ್ದುವು.[೮]

ಪೂರ್ವದಲ್ಲಿ ಪಶ್ಚಿಮ ಘಟ್ಟಗಳು ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಲಕ್ಷದ್ವೀಪಗಳನ್ನು ಪ್ರಾಕೃತಿಕವಾಗಿ ಹೊಂದಿರುವ ಮತ್ತು ಇತ್ತೀಚೆಗೆ ಮೊತ್ತ ಮೊದಲು ಸಂಪೂರ್ಣ ಸಾಕ್ಷರಗೊಂಡ ಭಾರತದ ಒಂದು ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಸ್ತುತ ಕೇರಳೀಯರು ವಿಭಿನ್ನ ಸಂಸ್ಕೃತಿ, ಆಹಾರ ಪದ್ಧತಿ, ವೇಷ ಭೂಷಣ, ನಂಬಿಕೆ ನಡವಳಿಕೆ, ಮತ್ತು ವಿಶಿಷ್ಟವಾದ ಜಾನಪದ ಪರಂಪರೆಗಳ ಮೂಲಕ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಂಡಿರುವುದು ಕಂಡು ಬರುತ್ತದೆ. ಇದಕ್ಕೆ ಅಲ್ಲಿನ ಪ್ರಾಕೃತಿಕ ಪರಿಸರವು ಕಾರಣವಾಗಿದೆ.

ಕೇರಳ ರಾಜ್ಯವು ೮° ೧೮', ಮತ್ತು ೧೨° ೪೮', ಉತ್ತರ ಅಕ್ಷಾಂಶ, ಮತ್ತು ೭೪° ೫೨' ಮತ್ತು ೭೭° ೨೪' ಪೂರ್ವ ರೇಖಾಂಶದ ನಡುವೆ ಇದೆ. ರಾಜ್ಯದ ಪೂರ್ವಭಾಗದಲ್ಲಿ ಪಶ್ಚಿಮ ಘಟ್ಟ ಶ್ರೇಣಿಗಳಿದ್ದರೆ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಮತ್ತು ಲಕ್ಷದ್ವೀಪ ಸಮೂಹಗಳಿವೆ. ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ತಮಿಳುನಾಡಿನ ನೀಲಗಿರಿ ಬೆಟ್ಟಗಳು, ಕೊಯಮುತ್ತೂರು, ಮಧುರೈ ರಾಮನಾಥಪುರ, ತಿರುನಲ್ವೆಲ್ಲಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳಿವೆ. ಉತ್ತರದಿಂದ ಪೂರ್ವಕ್ಕೆ ಕ್ರಮವಾಗಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ, ಕೊಡಗು, ಮೈಸೂರು, ಮೊದಲಾದ ಜಿಲ್ಲೆಗಳು ಮೇರೆಯಾಗಿವೆ. ಪಶ್ಚಿಮದ ಅರಬ್ಬೀ ಸಮುದ್ರವು ಸುಮಾರು ೫೮೦ ಕಿ.ಮೀ. ಗಳ ಕರಾವಳಿಯನ್ನು ಒಳಗೊಂಡಿದ್ದು ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ಅಭಿವೃದ್ಧಿಯಲ್ಲಿ ಗಣನೀಯ ಪಾತ್ರವಹಿಸಿದೆ. ಭಾರತದ ಪ್ರದೇಶಗಳನ್ನು ಭಾಷಾವಾರು ಪ್ರಾಂತಗಳಾಗಿ ವಿಭಜಿಸುವುದಕ್ಕೆ ಮೊದಲು ಕೇರಳ ಮೂರು ಪ್ರಾಂತಗಳಲ್ಲಿ ಹಂಚಿ ಹೋಗಿತ್ತು. ಉತ್ತರದ ಮಲಬಾರ್ ಪ್ರದೇಶವು ಮದ್ರಾಸ್ ರಾಜ್ಯದಲ್ಲೂ, ದಕ್ಷಿಣದ ಕೊಚ್ಚಿ ಮತ್ತು ತಿರುವಾಂಕೂರು ಪ್ರದೇಶಗಳು, ರಾಜ ಮನೆತನಗಳ ಅಧೀನದಲ್ಲಿಯೂ ಇದ್ದವು. ನವಂಬರ್ ೧೯೫೬ರಲ್ಲಿ ಈ ಮೂರು ಪ್ರದೇಶಗಳನ್ನು ಒಟ್ಟಿಗೆ ಸೇರಿಸಿ ಕೇರಳವೆಂಬ ರಾಜ್ಯವನ್ನಾಗಿ ಮಾಡಲಾಗಿದೆ. ಈಗಿನ ಕೇರಳ ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡನ್ನು ಸೇರಿಸಲಾಗಿದೆ. ಮತ್ತು ದಕ್ಷಿಣದ ಕೊನೆಯಲ್ಲಿರುವ ಕನ್ಯಾಕುಮಾರಿಯನ್ನು ಕೇರಳದಿಂದ ಬೇರ್ಪಡಿಸಿ ತಮಿಳುನಾಡಿನೊಂದಿಗೆ ವಿಲೀನಗೊಳಿಸಲಾಗಿದೆ. ಕೇರಳ ರಾಜ್ಯದ ವಿಸ್ತೀರ್ಣವು ಸುಮಾರು ೩೮.೮೬೪ ಚದರ ಕಿ.ಮೀ. ಗಳಿವೆ.

ಕೇರಳದ ಪ್ರಾಚೀನ ಸಂಸ್ಕೃತಿಯಲ್ಲಿ ಭೂಮಿಯ ಗುಣಮಟ್ಟವನ್ನು ಪರಿಗಣಿಸಿ ಭೂ ವಿಂಗಡಣೆ ಮಾಡಲಾಗಿತ್ತು. ಮುಖ್ಯವಾಗಿ

೦೧. ಮಾರುತಂ - (ಕೃಷಿಭೂಮಿ)

೦೨. ಪಲೈ - (ಬಂಜರುಭೂಮಿ)

೦೩. ನೈತಾಲ್ - (ಕರಾವಳಿ ಪ್ರದೇಶ)

೦೪. ಕುರುಂಜಿ - (ಪರ್ವತ ಪ್ರದೇಶ) ಮತ್ತು

೦೫. ಮುಳ್ಳೈ - (ಹುಲ್ಲುಗಾವಲು ಅಥವಾ ಗೋಮಾಳ)

ಎಂಬುದಾಗಿ ವಿವರಿಸಲಾಗಿದೆ.[೯]

ಕೇರಳದ ಪ್ರಾಕೃತಿಕ ಲಕ್ಷಣಗಳನ್ನು ಗಮನಿಸಿ ಭೌಗೋಳ ಶಾಸ್ತ್ರಜ್ಞರು ರಾಜ್ಯದ ಭೌಗೋಳಿಕ ಸ್ವರೂಪಗಳನ್ನು ಈ ರೀತಿಯಾಗಿ ವಿಂಗಡಿಸಿದ್ದಾರೆ.

೦೧. ಪರ್ವತ ಪ್ರದೇಶಗಳು

೦೨. ಕರಾವಳಿಯ ಬಯಲು ಪ್ರದೇಶ

೦೩. ಮಧ್ಯ ಪ್ರದೇಶ ಅಥವಾ ಒಳನಾಡು

ಪರ್ವತ ಪ್ರದೇಶಗಳು

ಪಶ್ಚಿಮ ಘಟ್ಟ ಪರ್ವತ ಶ್ರೇಣಿಗಳು ಕೇರಳ ಪೂರ್ವಭಾಗದಲ್ಲಿ ಉತ್ತರದಿಂದ ದಕ್ಷಿಣಾಭಿಮುಖವಾಗಿ ಹಬ್ಬಿಕೊಂಡಿವೆ. ಈ ಪರ್ವತಗಳು ಮುಂದೆ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ನೀಲಗಿರಿ ಬೆಟ್ಟಗಳನ್ನು ಸೇರಿಕೊಳ್ಳುತ್ತವೆ. ಪಶ್ಚಿಮ ಘಟ್ಟಗಳು ಕೇರಳ ರಾಜ್ಯಕ್ಕೆ ಪ್ರಾಕೃತಿಕವಾದ ತಡೆಗೋಡೆಯಂತೆ ಕಂಡು ಬರುತ್ತವೆ. ಈ ಪರ್ವತ ಶ್ರೇಣಿಗಳು ಕೆಲವು ಪ್ರದೇಶಗಳಲ್ಲಿ ಇಳಿಜಾರಾಗಿದ್ದರೆ, ಕೆಲವು ಕಡೆಗಳಲ್ಲಿ ಅತೀ ಎತ್ತರಕ್ಕೆ ಹಬ್ಬಿಕೊಂಡಿವೆ. ದಕ್ಷಿಣ ಭಾರತದಲ್ಲಿಯೇ ಅತೀ ಎತ್ತರವಾದ ಪರ್ವತ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾದ 'ಅನ್ನಾಮುಡಿ' ಪರ್ವತ ಶಿಖರವು (೨೮೧೭.೦೬ ಮೀ) ಇಡುಕ್ಕಿ ಜಿಲ್ಲೆಯಲ್ಲಿದೆ. ಪೌರಾಣಿಕ ಹಿನ್ನೆಲೆಯನ್ನೊಳಗೊಂಡಿರುವ 'ಅಗಸ್ತ್ಯಕೂಟಂ' (೨.೦೪೪ ಮೀ) ಪ್ರಸಿದ್ಧ ಪುಣ್ಯಕ್ಷೇತ್ರವಾಗಿರುವ 'ಶಬರಿಮಲೈ' (೧.೧೪೮.೪೮ ಮೀ) 'ಪಟ್ಟನಂ ತಿಟ್ಟ' ಜಿಲ್ಲೆಯಲ್ಲಿದೆ. ಉಳಿದಂತೆ 'ವೇವಲ ಮಲೈ', 'ವೇದ ಮಲೈ', 'ತೇನಮಲೈ', ಮೊದಲಾದ ಪರ್ವತ ಪ್ರದೇಶಗಳಿವೆ. ಪಶ್ಚಿಮ ಘಟ್ಟ ಪರ್ವತ ಶ್ರೇಣಿಗಳು ಪ್ರಾಚೀನ ಕೇರಳದ ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಷಯಗಳಲ್ಲಿ ಪ್ರಮುಖ ಪಾತ್ರವಹಿಸಿವೆ. 'ಪೇರಂಬಾಡಿ', ಘಾಟಿಯು, 'ಮಡಿಕೇರಿ'ಯನ್ನು ಸಂಪರ್ಕಿಸಿದರೆ 'ಪೆರಿಯ' ಘಾಟಿಯು ಮೈಸೂರನ್ನು ಸಂಪರ್ಕಿಸುವ ಮಾರ್ಗವಾಗಿದೆ. 'ಕರಕ್ಕೂರು' 'ಘಾಟಿಯು ತಮಿಳುನಾಡಿ'ನ ನೀಲಗಿರಿ ಜಿಲ್ಲೆಯನ್ನು ಸಂಪರ್ಕಿಸುತ್ತದೆ. ಐತಿಹಾಸಿಕವಾಗಿ ಮಹತ್ವವನ್ನು ಪಡೆದುಕೊಂಡಿರುವ 'ಪಾಲಗಾಟ್' ಕಣಿವೆ ಮಾರ್ಗವು ತಮಿಳುನಾಡಿಗೆ ಸಂಪರ್ಕ ನೀಡುತ್ತದೆ.

ಪಶ್ಚಿಮ ಘಟ್ಟ ಪರ್ವತ ಶ್ರೇಣಿಗಳು ಪ್ರಾಚೀನ ಕೇರಳಕ್ಕೆ ಪರಕೀಯರ ಆಕ್ರಮಣದಿಂದ ರಕ್ಷಣೆಯನ್ನು ಒದಗಿಸಿದರೆ, ಪ್ರಸ್ತುತ ಸಂದರ್ಭದಲ್ಲಿ ಕೇರಳದ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸಿವೆ. ಹೇರಳವಾದ ಸಸ್ಯ ಸಂಪತ್ತು, ಪ್ರಾಣಿ ಸಂಪತ್ತು, ಜಲ ಸಂಪತ್ತು, ಪಶ್ಚಿಮ ಘಟ್ಟಗಳಲ್ಲಿ ಕಂಡು ಬರುತ್ತದೆ. ಬೀಟೆ, ತೇಗ, ಮತ್ತಿ, ಮತ್ತು ಔಷಧೀಯ ಸಸ್ಯಗಳು ಇಲ್ಲಿ ದೊರೆಯುತ್ತವೆ. ಆನೆ, ಹುಲಿ, ಚಿರತೆ ಮೊದಲಾದ ವನ್ಯ ಪ್ರಾಣಿಗಳಿಗೆ ಈ ಪರ್ವತ ಪ್ರದೇಶಗಳು ಆಶ್ರಯ ತಾಣವಾಗಿವೆ. ಪಶ್ಚಿಮ ಘಟ್ಟಗಳಿಂದಾಗಿ ಕೇರಳದ ಒಳನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಹೇರಳ ಮಳೆಯಾಗುತ್ತದೆ. 'ವಯನಾಡು' ಜಿಲ್ಲೆಯು ಕೇರಳದಲ್ಲಿ ಅತ್ಯಧಿಕ ಮಳೆ ಬೀಳುವ ಪ್ರದೇಶವಾಗಿದೆ. ಇಲ್ಲಿಗೆ ಕೇರಳದ 'ಚಿರಾಪುಂಜಿ' ಎಂಬ ಅನ್ವರ್ಥನಾಮವಿದೆ.

ಕರಾವಳಿಯ ಬಯಲು ಪ್ರದೇಶ

ಕೇರಳ ರಾಜ್ಯ ಸುಮಾರು ೫೮೦ ಕಿ.ಮೀ. ಗಳ ತೀರ ಪ್ರದೇಶವನ್ನು ಒಳಗೊಂಡಿದೆ. ವಿದೇಶಿಯರಾದ ಅರಬ್ಬರು, ವಾಸ್ಕೋಡಗಾಮ, ಪೋರ್ಚುಗೀಸರು, ಬ್ರಿಟೀಷರು ಮೊದಲಾದವರು ಸಮುದ್ರ ಮಾರ್ಗವಾಗಿಯೇ ಕೇರಳಕ್ಕೆ ಪ್ರವೇಶಿಸಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದರು. ಕೇರಳದ ಆರ್ಥಿಕಾಭಿವೃದ್ಧಿಯಲ್ಲಿ ಕರಾವಳಿಯು ಪ್ರಮುಖ ಪಾತ್ರವಹಿಸಿದ್ದು, 'ಕಣ್ಣಾನೂರು', 'ಕಲ್ಲಿಕೋಟೆ', 'ಕೊಚ್ಚಿನ್' ಮೊದಲಾದ ಐತಿಹಾಸಿಕ ಬಂದರುಗಳು ವಿದೇಶಿ ವ್ಯಾಪಾರದ ಪ್ರಧಾನ ಕೇಂದ್ರಗಳಾಗಿವೆ. 'ಕೊಚ್ಚಿನ್' ಬಂದರು ಭಾರತದ ಪ್ರಮುಖ ನೌಕಾ ನೆಲೆಯನ್ನು ಒಳಗೊಂಡಿದ್ದು, ಈ ಬಂದರನ್ನು

ಅರಬ್ಬಿ 'ಸಮುದ್ರದ ರಾಣಿ' ಎಂದು ಕರೆಯಲಾಗಿದೆ. ಬಹಳ ಪ್ರಾಚೀನ ಕಾಲದಿಂದಲೇ ಕೇರಳವು ವಿದೇಶಿ ವಾಣಿಜ್ಯದಲ್ಲಿ ಬಹುಮುಖ್ಯ ಪಾತ್ರವಹಿಸಿತ್ತು. ಈಜಿಪ್ಟ್, ಅರೇಬಿಯಾ, ಚೀನಾ, ಬೆಬಿಲೋನ್, ರೋಮ್ ಮುಂತಾದ ಪ್ರಾಚೀನ ಕಾಲದ ದೇಶಗಳೂ ಕೇರಳ ರಾಜ್ಯದೊಡನೆ ವ್ಯಾಪಾರ ಸಂಪರ್ಕಗಳನ್ನು ಬೆಳೆಸಿಕೊಂಡು ಬಂದಿದ್ದವು. ಕೇರಳದ ಸಾಗುವಾನಿ, ಅಗರು, ಕಾಳುಮೆಣಸು, ಶ್ರೀಗಂಧ, ಮೊದಲಾದ ವಸ್ತುಗಳು ಈ ಬಂದರುಗಳ ಮುಖೇನ ವಿದೇಶಗಳಿಗೆ ರಫ್ತಾಗುತ್ತಿತ್ತು. ಕೇರಳದ ಪ್ರಮುಖ ನಗರಗಳು ಕೂಡ ಅಸ್ತಿತ್ವದಲ್ಲಿರುವುದು ಕರಾವಳಿಯ ತೀರ ಪ್ರದೇಶದಲ್ಲಿಯೆ ಎನ್ನುವುದು ಗಮನಿಸಬೇಕಾದ ವಿಷಯ. ಮತ್ಸ್ಯೋದ್ಯಮವು ಕರಾವಳಿಯ ಜನತೆಯ ಕಷ್ಟಸಹಿಷ್ಣುತೆ ಮತ್ತು ಸಾಹಸ ಪ್ರವೃತ್ತಿಗೆ ಕಾರಣವಾಗಿದೆ ಎಂದು ತಿಳಿಯುತ್ತದೆ.

ಮಧ್ಯ ಪ್ರದೇಶ ಅಥವಾ ಒಳನಾಡು

ಪಶ್ಚಿಮ ಘಟ್ಟಗಳ ತಪ್ಪಲು ಮತ್ತು ಕರಾವಳಿಯ ನಡುವೆ ಇರುವ ಭೂ ಪ್ರದೇಶವನ್ನು ಒಳನಾಡು ಎಂದು ಕರೆಯಲಾಗಿದೆ. ಇದು ಕೆಲವು ಪ್ರದೇಶಗಳಲ್ಲಿ ಹಿನ್ನೀರು ಮತ್ತು ಸಮುದ್ರದ 'ಖಾರಿ' ಗಳನ್ನು ಒಳಗೊಂಡಿದೆ. ಕೃಷಿಯೋಗ್ಯವಾದ ಫಲವತ್ತಾದ ಭೂಮಿಯನ್ನು ಈ ಪ್ರದೇಶವು ಒಳಗೊಂಡಿದೆ. ಪಶ್ಚಿಮ ಘಟ್ಟಗಳಿಂದಾಗಿ ಈ ಭಾಗದಲ್ಲಿ ಹೇರಳವಾಗಿ ಮಳೆ ಬೀಳುತ್ತದೆ. ರಬ್ಬರ್, ಭತ್ತ, ಶುಂಠಿ, ಕಬ್ಬು, ಬಾಳೆ, ತೆಂಗು, ಅಡಿಕೆ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಕೇರಳ ತೆಂಗು ಬೆಳೆಗೆ ಪ್ರಸಿದ್ಧವಾದ ನಾಡಾಗಿದೆ.

ನದಿಗಳು

ಕೇರಳ ಹಲವಾರು ನದಿಗಳಿಂದ ತುಂಬಿಕೊಂಡಿರುವ ರಾಜ್ಯ. ಪಶ್ಚಿಮ ಘಟ್ಟಗಳಲ್ಲಿ ಸುಮಾರು ೪೪ ನದಿಗಳು ಜನ್ಮ ನೀಡುತ್ತವೆ. ಈ ನದಿಗಳಲ್ಲಿ ೪೧ ನದಿಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರಿದರೆ ಮೂರು ನದಿಗಳು ಪೂರ್ವಾಭಿಮುಖವಾಗಿ ಹರಿಯುತ್ತವೆ. ಈ ನದಿಗಳು ವಿದ್ಯುತ್ ಉತ್ಪಾದನೆ, ಕೃಷಿ, ಒಳನಾಡು ಮೀನುಗಾರಿಕೆ ಮತ್ತು ಪ್ರವಾಸೋದ್ಯಮ ಮೊದಲಾದವುಗಳಿಗೆ ಹೆಸರುವಾಸಿಯಾಗಿವೆ. ಪಶ್ಚಿಮ ಘಟ್ಟಗಳಿಂದ ಹರಿದು ಬರುವ ಈ ನದಿಗಳಿಂದ ಕರಾವಳಿಯ ಬಯಲು ಭೂಮಿಯು ಫಲವತ್ತತೆಯಿಂದ ಕೂಡಿರುತ್ತದೆ. ಹಲವಾರು ಪ್ರಸಿದ್ಧ ಪುಣ್ಯಕ್ಷೇತ್ರಗಳನ್ನು ನದಿ ದಂಡೆಯಲ್ಲಿ ಗುರುತಿಸಲಾಗಿದೆ. ಒಳನಾಡು ಮತ್ತು ಕರಾವಳಿಯಲ್ಲಿ ಹರಿಯುವ ಈ ನದಿಗಳು ಆಳವಾಗಿದ್ದು ವರ್ಷಪೂರ್ತಿ ಹಿನ್ನೀರಿನಿಂದ ತುಂಬಿಕೊಂಡಿರುತ್ತವೆ.

ಕೇರಳದ ದೊಡ್ಡನದಿಗಳಾದ ಭರತಪುರ (೯೭.೫ ಕಿ.ಮೀ), ಪೆರಿಯಾರ್ (೮೮.೮ ಕಿ.ಮೀ), ಪಾಂಬಾ (೬೮.೮ ಕಿ.ಮೀ), ಮತ್ತು ಬೆಯಿಪ್ಪೋರ್ (೬೫.೬೩ ಕಿ.ಮೀ). ಗಳು ಕೇರಳದ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸದಲ್ಲಿ ಪ್ರಧಾನ ಪಾತ್ರವಹಿಸಿವೆ. ಕೆಲವು ಪ್ರಧಾನವಾದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳು ಈ ನದಿ ದಡದಲ್ಲಿ ಕಂಡು ಬರುತ್ತವೆ.[೨] ಕೆಲವು ಪ್ರಸಿದ್ಧ ಕೈಗಾರಿಕಾ ಕೇಂದ್ರಗಳಾಗಿರುವ ಎಲ್ಲೂರು, ಪುನಲೂರು, ಬಲಿಪಟ್ಟನಂ ಮೊದಲಾದವುಗಳು ನದಿ ಕಿನಾರೆಯಲ್ಲಿ ಅಸ್ತಿತ್ವದಲ್ಲಿವೆ. ಈ ಎಲ್ಲ ವಿಷಯಗಳನ್ನು ಗಮನಿಸಿದರೆ ನದಿಗಳು ಕೇರಳದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸಿರುವುದು ಕಂಡು ಬರುತ್ತದೆ.

ಕಬಿನಿ, ಭವಾನಿ ಮತ್ತು ಪಾಂಬಾರ್ ನದಿಗಳು ಪೂರ್ವಾಭಿಮುಖವಾಗಿ ಹರಿದು ನೆರೆಯ ರಾಜ್ಯಗಳಾದ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಮುಂದುವರಿಯುತ್ತವೆ.

೨.೧.೪ ಇತಿಹಾಸ

ಕೇರಳವು ಅತಿ ಪ್ರಾಚೀನವಾದ ಇತಿಹಾಸವನ್ನು ಒಳಗೊಂಡಿರುವ ಒಂದು ದ್ರಾವಿಡ ರಾಜ್ಯ. ಪಶ್ಚಿಮ ಕರಾವಳಿಯ ಈ ತೀರಪ್ರದೇಶವು 'ಪರಶುರಾಮ ಸೃಷ್ಟಿ' ಎಂಬ ಐತಿಹ್ಯದೊಂದಿಗೆ ಪ್ರಚಲಿತವಾಗಿದೆ. ಮುಂಬೈ ಸಮೀಪದ 'ಸೋಪಾರ'ದಿಂದ ತೊಡಗಿ ಕನ್ಯಾಕುಮಾರಿಯವರೆಗಿನ ಭೂಪ್ರದೇಶವನ್ನು ಪರಶುರಾಮ ಸೃಷ್ಟಿಯೆಂದು ಸ್ಕಂಧ ಪುರಾಣಾದಿ ಐತಿಹ್ಯಗಳು ಹೇಳುತ್ತವೆ. ಇದನ್ನು ಸಪ್ತ ಕೊಂಕಣವೆಂದು ಹೇಳಲಾಗುತ್ತದೆ. 'ಪ್ರಪಂಚ ಹೃದಯ' ವೆಂಬ ಸಂಸ್ಕೃತ ಗ್ರಂಥದಲ್ಲಿ ಹೆಸರಿಸಲಾದ ಕೂಪಕ, ಕೇರಲ, ಮೂಷಿಕ, ಆಲುವ, ಪಶು, ಕೊಂಕಣ ಮತ್ತುಪರಕೊಂಕಣವೆಂಬ ಉಲ್ಲೇಖದಲ್ಲಿ, ಸಪ್ತಕೊಂಕಣದ ಮಧ್ಯ ಸ್ಥಾನದಲ್ಲಿರುವುದೇ ಆಲುವ ಅಥವಾ ತುಳುನಾಡು, ಕೂಪಕ, ಕೇರಲ, ಮೂಷಿಕಗಳು ತುಳುನಾಡಿನ ದಕ್ಷಿಣದಲ್ಲಿರುವ ಚಂದ್ರಗಿರಿ ಹೊಳೆಯ ವರೆಗಿನ ಪ್ರದೇಶ ಆಗಿನ ಅಖಂಡವಾದ ಕೇರಳ ರಾಜ್ಯ, ಪಶುಕ ಅಥವಾ ಹೈಗ ಎಂಬುದು ತುಳುನಾಡಿನ ಉತ್ತರಕ್ಕಿರುವ ಉತ್ತರ ಕನ್ನಡ ಜಿಲ್ಲೆಯೆಂದೂ, ಅದರಾಚೆಗೆ ಈಗಿನ ಗೋವೆಯ ಪ್ರದೇಶ ಕೊಂಕಣವೆಂದೂ, ಅದಕ್ಕೂ ಆಚೆಗೆ ಈಗಿನ ಮಹಾರಾಷ್ಟ್ರದ ಕೊಲಬಾ, ಠಾಣಾ ಪ್ರದೇಶಗಳು ಪರಕೊಂಕಣವೆಂದೂ ವಿವರಿಸಲಾಗಿದೆ.[೨೮]

ಕೇರಳ ಭೂಪ್ರದೇಶದ ಉಗಮ ಮತ್ತು ಸೃಷ್ಟಿಯ ಕುರಿತಾಗಿ 'ಕೇರಳೋತ್ಪತ್ತಿ' ಮತ್ತು 'ಕೇರಳ ಮಹಾತ್ಮ್ಯಂ' ಗ್ರಂಥಗಳಲ್ಲಿರುವ ಕೇರಳದ ಪ್ರಾಚೀನ ಇತಿಹಾಸವನ್ನು ಸೂಚಿಸುವ ಐತಿಹ್ಯವನ್ನು 'ವಿಲಿಯಂ ಲೋಗೇನ್' ಎಂಬ ವಿದ್ವಾಂಸರು ವಿವರಿಸುತ್ತಾರೆ. 'ಕೇರಳದ ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಕರ್ನಾಟಕದ 'ಗೋಕರ್ಣದ' ವರೆಗಿನ ಭೂಪ್ರದೇಶವನ್ನು ಪರಶುರಾಮ ಸೃಷ್ಟಿ' ಎಂದಿದ್ದಾರೆ.[೨೯]

ಪರಶುರಾಮನು ಈ ರೀತಿಯಾಗಿ ತಾನು ಸೃಷ್ಟಿಸಿದ ಹೊಸ ಭೂಪ್ರದೇಶದಲ್ಲಿ ಜನ ವಸತಿಯನ್ನು ನಿರ್ಮಿಸುವುದಕ್ಕಾಗಿ ದೂರದ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತಂದನು. ನಂತರ ಗೋಕರ್ಣದಿಂದ ಕನ್ಯಾಕುಮಾರಿವರೆಗಿನ ಈ ಭೂಪ್ರದೇಶವನ್ನು ಅರವತ್ತನಾಲ್ಕು ಗ್ರಾಮಗಳಾಗಿ ವಿಂಗಡಿಸಲಾಯಿತು. ಇವುಗಳಲ್ಲಿ ಉತ್ತರದ ೩೨ ಗ್ರಾಮಗಳ ಭಾಷೆ 'ತುಳು' ಮತ್ತು ದಕ್ಷಿಣದ ೩೨ ಗ್ರಾಮಗಳ ವ್ಯವಹಾರ ಭಾಷೆ 'ಕೊಡಂ ತಮಿಳು' ಆಯಿತು. ಈ ಭಾಷಾ ಭೇದದಿಂದಾಗಿ ಉತ್ತರದ ವ್ಯವಹಾರ ಭಾಷೆಯಾದ ತುಳು ಮಾತನಾಡುವ ಬ್ರಾಹ್ಮಣರು ಮತ್ತು ದಕ್ಷಿಣದ ಭಾಷೆ ಮಾತನಾಡುವವರಾದ ನಂಬೂದಿರಿ ಬ್ರಾಹ್ಮಣರು ಬೇರ್ಪಟ್ಟರು. ಇವರು ಈ ಊರು ಬಿಟ್ಟು ಹೋಗಬಾರದು ಎಂಬುದಕ್ಕಾಗಿ 'ಮುನ್ ಕುಡುಮ' ಅಥವಾ ಎದುರು ಜುಟ್ಟು ಸಂಪ್ರದಾಯ ಇವರಲ್ಲಿ ಜಾರಿಗೆ ಬಂತು. ಒಂದು ವೇಳೆ ಇವರು ಕೇರಳ ಬಿಟ್ಟು ತಮ್ಮ ದೇಶಕ್ಕೆ ಓಡಿ ಹೋದರೂ ತಲೆಯ ಮುಂದಕ್ಕೆ ಇರುವ ಇವರ ಜುಟ್ಟನ್ನು ಕಂಡು ಅಲ್ಲಿಯವರು ಇವರನ್ನು ತಮ್ಮ ಜೊತೆ ಸೇರಿಸಲಾರರು ಎಂಬುದಕ್ಕಾಗಿ ಈ ಎದುರು ಜುಟ್ಟಿನ ಸಂಪ್ರದಾಯ ಜಾರಿಗೆ ಬಂದಿರಬೇಕು. ಪರಶುರಾಮ ಸೃಷ್ಟಿ ಮತ್ತು ನಂಬೂದಿರಿಗಳ ಕುರಿತಾದ ಈ ರೀತಿಯ ಐತಿಹ್ಯ ಕೇರಳದ ವೈದಿಕ ಪರಂಪರೆಯಲ್ಲಿ ಈಗಲೂ ಪ್ರಚಲಿತದಲ್ಲಿದೆ.

೨.೧.೫ ಜನವರ್ಗ

ಇಂದಿನ ಕೇರಳದಲ್ಲಿ ವಿಭಿನ್ನ ಧರ್ಮಗಳಿಗೆ, ವರ್ಗಗಳಿಗೆ ಸೇರಿದ ಜನರಿದ್ದಾರೆ. ಪ್ರಾಚೀನ ಕಾಲದಿಂದಲೂ ಕೇರಳವು ವೈವಿಧ್ಯಮಯವಾದ ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿತ್ತು. ಇಲ್ಲಿನ ವೈವಿಧ್ಯತೆಗೆ ಪ್ರಾದೇಶಿಕವಾದ ಮತ್ತು ವಿದೇಶದ ಅನೇಕ ಸಾಂಸ್ಕೃತಿಕ ಘಟಕಗಳು ಕೊಡುಗೆಗಳನ್ನು ನೀಡಿವೆ. ದೇಶೀಯವಾದ ದ್ರಾವಿಡ ಸಂಸ್ಕೃತಿಯೊಂದಿಗೆ ನಂತರದ ವೈದಿಕ ಸಂಸ್ಕೃತಿ ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಮೊದಲಾದ ಧರ್ಮಗಳು ಪ್ರವೇಶಿಸಿ, ಕೇರಳದಲ್ಲಿ ಇಂದು ಕೂಡ ತಮ್ಮ ಮತಾಚಾರ ಸಂಪ್ರದಾಯಗಳನ್ನು ಉಳಿಸಿಕೊಂಡಿವೆ.

ಕೇರಳಕ್ಕೆ ಉತ್ತರದಿಂದ ಆರ್ಯರು ಆಗಮಿಸಿದ ನಂತರ ಜಾತಿ ವ್ಯವಸ್ಥೆ ಆರಂಭವಾಯಿತು ಎಂದು ತಿಳಿಯಲಾಗಿದೆ. ಪ್ರಾಚೀನ ಕೇರಳದ ಸಮಾಜದಲ್ಲಿ ಶ್ರೇಣೀಕರಣ ವ್ಯವಸ್ಥೆಯಿದ್ದು ಕಸುಬುಗಳು ಜಾತಿ ಆಧಾರಿತವಾಗಿರುತ್ತಿದ್ದವು. ವೈದಿಕ, ಅವೈದಿಕ ಕಲ್ಪನೆಯ ಹಿನ್ನೆಲೆಯಲ್ಲಿ ಜಾತೀಯ ಕಟ್ಟು-ಕಟ್ಟಳೆಗಳನ್ನು ಕಡ್ಡಾಯವಾಗಿ ಪಾಲಿಸಲಾಗುತ್ತಿತ್ತು. ಮುಂದುವರಿದ ವರ್ಗಗಳಿಗೆ ಸಮಾಜದ ಎಲ್ಲ ಸೌಲಭ್ಯಗಳು ದೊರೆಯುತ್ತಿದ್ದರೆ ಹಿಂದುಳಿದವರು ವಂತ್ತು ಅಸ್ಪೃಶ್ಯರ ಸ್ಥಿತಿ ಶೋಚನೀಯವಾಗಿತ್ತು. ಜಾತೀಯತೆಯೊಂದಿಗೆ 'ಮೇಲಾರ್' (ಮೇಲ್ವರ್ಗ) ಜಮೀನ್ದಾರ ವರ್ಗ ಮತ್ತು 'ಕೈಯರ್' (ಕೆಳವರ್ಗ) ಕೂಲಿಕಾರ ವರ್ಗ ಎನ್ನುವ ಸಾಮಾಜಿಕವಾದ ವಿಂಗಡಣೆಯನ್ನು ಕೂಡ ಕಲ್ಪಿಸಿ ಕೊಳ್ಳಲಾಗಿತ್ತು. ಜಮೀನಿನ ಮಾಲಿಕರಾದ ನಂಬೂದರಿಯನ್ನು 'ಜನ್ಮಿ' ಎಂದೂ ಅವನ ಅಧೀನದಲ್ಲಿ ಕೆಲಸ ಮಾಡುವವರನ್ನು 'ಕೊಡಿಯಾನ್' ಎಂದೂ ಕರೆಯಲಾಗುತ್ತಿತ್ತು.

ಕೇರಳದಲ್ಲಿ ಜಾತೀಯತೆಯ ವ್ಯವಸ್ಥೆಯಲ್ಲಿ ಹಿಂದೂಗಳಲ್ಲಿ ಪ್ರಧಾನವಾಗಿ ನಂಬೂದಿರಿಗಳು, ಎಂಬ್ರಾಂದಿಗಳು, ಉತ್ತರದ ತುಳು ಬ್ರಾಹ್ಮಣರು ನಾಯರ್‌ಗಳು, ನಂಬ್ಯಾರ್‌ಗಳು, ತೀಯರು, ಕ್ಷತ್ರಿಯರು ಮೊದಲಾದ ವರ್ಗಗಳಿದ್ದರೆ, ಉಳಿದಂತೆ ಕಮ್ಮಾಳರು, ಮಲಿಕ್ಕುವರು, ಬೆಸ್ತರು, ಪುಲಯರು, ನಾಯಾಡಿ, ಕಾಡರ್, ಚೆರುಮರ್, ಮರಯರು, ಕುರವರು, ಮೊದಲಾದ ಜಾತಿಗಳವರು ಸಮಾಜದ ಕೆಳಸ್ತರದಲ್ಲಿ ಕಂಡುಬರುತ್ತಾರೆ. ಇವರಲ್ಲಿ ಚೆರುಮರ್, ಪುಲಿಯರ್, ನಾಯಾಡಿ, ಕಾಡರ್, ಮೊದಲಾದವರು ಕೇರಳದ ಮೂಲ ನಿವಾಸಿಗಳಲ್ಲಿ ದ್ರಾವಿಡ ಜನಾಂಗಕ್ಕೆ ಸೇರಿದವರೆಂದು ಗುರುತಿಸಲಾಗಿದೆ. ಗುಂಗುರು ಕೂದಲು, ಕಪ್ಪು ವರ್ಣ, ಗಿಡ್ಡದೇಹ, ಮೊದಲಾದವು ಇವರ ದೈಹಿಕ ಲಕ್ಷಣ.

ಹಿಂದೂ ಧರ್ಮದಲ್ಲಿ ಬರುವ ಈ ಜಾತಿಗಳಲ್ಲಿಯೂ ಹಲವಾರು ಉಪಜಾತಿಗಳು ಕಂಡುಬರುತ್ತವೆ. ಹಿಂದೂವೇತರರಾದ, ಕ್ರಿಶ್ಚಿಯನ್ನರು, ಮುಸಲ್ಮಾನರು ಕೂಡ ಕೇರಳದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರನ್ನು 'ಮಾಪಿಳ್ಳೆ ಮುಸಲ್ಮಾನ'ರೆಂದು ಕರೆಯುತ್ತಾರೆ. ಕಣ್ಣಾನೂರು, ಕಾಯಿಂಗಾಡ್ ಜಿಲ್ಲೆಗಳಲ್ಲಿ ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಲ್ಲಿಕೋಟೆ, ಕೊಚ್ಚಿನ್ ಮತ್ತು ಎರ್ನಾಕುಳಂ ಮೊದಲಾದೆಡೆ ಕ್ರಿಶ್ಚಿಯನ್ನರು ಹೆಚ್ಚಿನ ಸಂಖ್ಯೆಯಲ್ಲಿದಾರೆ. ಅವರಲ್ಲಿ ಕೆಥೋಲಿಕ್,ಪ್ರೊಟೆಸ್ಟೆಂಟ್, ಸಿರಿಯಾನ್ ಮುಂತಾದ ಹಲವು ಪಂಥಗಳಿವೆ. ಪ್ರಾಚೀನ ಕೇರಳದಲ್ಲಿ ಜಾತೀಯತೆಯನ್ನು ಕಡ್ಡಾಯವಾಗಿ ಅನುಸರಿಸುತ್ತಿದ್ದರೆ ನಂತರದ, ನಾರಾಯಣ ಗುರುಗಳು ಮತ್ತು ಬ್ರಿಟೀಷರ ಸಾಮಾಜಿಕ ಸುಧಾರಣೆಗಳಿಂದ ಜಾತೀಯತೆಯಲ್ಲಿ ಸಡಿಲತೆ ಕಂಡುಬಂದಿತು. ಇಂದು ಅದರ ಪ್ರಭಾವ

ಕೆಲವು ಕಡೆಗಳಲ್ಲಿ ವೈಯಕ್ತಿಕ ನೆಲೆಯಲ್ಲಿ ಕಂಡುಬರುತ್ತದೆ. ಅಲ್ಲದೆ ಕೆಲವು ಪ್ರಸಿದ್ಧ ದೇವಾಲಯಗಳಲ್ಲಿ ಹಿಂದೂವೇತರರಿಗೆ ಪ್ರವೇಶ ನಿಷೇಧಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕೇರಳದ ಸಾಮಾಜಿಕ ಜನ ಜೀವನದಲ್ಲಿ ಜಾತೀಯ ಕಟ್ಟು ಕಟ್ಟಳೆಗಳು ದುರ್ಬಲಗೊಂಡಿವೆ.

೨.೧.೬ ಜನಪದ ಸಂಪ್ರದಾಯಗಳು ಮತ್ತು ಆಚರಣೆಗಳು

ಕೇರಳವು ಪ್ರಾಚೀನ ಕಾಲದಿಂದಲೂ ಕೆಲವು ವೈಶಿಷ್ಟ್ಯಪೂರ್ಣವಾದ ನಂಬಿಕೆ, ಸಂಪ್ರದಾಯ ಆಚರಣೆಗಳಿಗೆ ಪ್ರಸಿದ್ಧವಾಗಿದೆ. ಭಾರತದ ಇತರ ಪ್ರದೇಶಗಳಿಂದ ಬೇರೆಯಾದ ಕೆಲವು ವಿಶೇಷ ಸಂಪ್ರದಾಯಗಳನ್ನು ಇಲ್ಲಿ ಇಂದಿಗೂ ಗಮನಿಸಬಹುದಾಗಿದೆ. ಇಂತಹ ವಿಶಿಷ್ಟ ಪರಂಪರೆಗಳನ್ನು ಕೆಲವು ಜನಾಂಗಗಳಲ್ಲಿ ಇತ್ತೀಚಿನವರೆಗೆ ಆಚರಿಸಿಕೊಂಡು ಬರಲಾಗುತ್ತಿತ್ತು.

ಕೇರಳ ಸಮಾಜ ರಚನೆಯಲ್ಲಿ ನಂಬೂದಿರಿ ಮತ್ತು ನಾಯರ್ ವರ್ಗದವರಿಗೆ ಮುಖ್ಯವಾದ ಸ್ಥಾನವಿದೆ. ಅವರು ತಮ್ಮ ಸ್ಥಾನಮಾನಗಳನ್ನು ಭದ್ರವಾಗಿಟ್ಟುಕೊಳ್ಳಲು ಕೆಲವು ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ನಂಬೂದಿರಿ ಕುಟುಂಬಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿಯನ್ನು ಕಾಣಬಹುದಾಗಿದೆ. ಹಿರಿಯ ಮಗನೇ ಮನೆಯ ಯಜಮಾನನಾಗುತ್ತಾನೆ. ಅವನಿಗೆ ಸ್ವಜಾತಿಯ ಹೆಣ್ಣನ್ನು ಶಾಸ್ತ್ರೋಕ್ತವಾಗಿ ವಿವಾಹವಾಗುವ ಅಧಿಕಾರ ಇರುತ್ತದೆ. ಮನೆಯ ಹಿರಿಯ ಮಗನನ್ನು ಹೊರತುಪಡಿಸಿ ಉಳಿದವರಿಗೆ ಈ ರೀತಿ ಶಾಸ್ತ್ರೋಕ್ತವಾಗಿ ಸ್ವಜಾತಿಯ ಹೆಣ್ಣನ್ನು ವಿವಾಹವಾಗುವ ಹಕ್ಕು ಇರುವುದಿಲ್ಲ. ಅವರು ನಾಯರ್ ಅಥವಾ ಕ್ಷತ್ರಿಯ ಹೆಂಗಸರನ್ನು ಇಟ್ಟುಕೊಳ್ಳಬಹುದು. ಈ ರೀತಿಯ ವಿವಾಹ ಪದ್ಧತಿಗೆ ಸಂಬಂಧ ಬೆಳೆಸುವುದು (ಸಂಬಂಧಂ ಕಳಿಕ್ಕುಗ) ಎಂದು ಹೆಸರು. ಈ ಸಂಬಂಧದಿಂದ ಹುಟ್ಟಿದ ಮಗುವಿಗೆ ತಂದೆಯ ಆಸ್ತಿಯಲ್ಲಿ ಪಾಲು ಸಿಗುವುದಿಲ್ಲ. ತಂದೆಗೆ ಆ ಮಗುವನ್ನು ಸಾಕುವ ಹೊಣೆಗಾರಿಕೆಯೂ ಇರುವುದಿಲ್ಲ. ಈಗ ಅಂತಹ ಸಂಪ್ರದಾಯಗಳು ಮಾಯವಾಗುತ್ತಿವೆ. ನಂಬೂದಿರಿಗಳ ಹಿರಿಯ ಮಗ ಮಾತ್ರವಲ್ಲದೆ ಇತರ ಗಂಡು ಮಕ್ಕಳು ತಮ್ಮ ಸ್ವಜಾತೀಯ ಹೆಣ್ಣುಗಳನ್ನೇ ಮದುವೆ ಮಾಡಿಕೊಂಡು ಸಂಸಾರ ನಡೆಸುವ ಪದ್ಧತಿ ರೂಢಿಗೆ ಬಂದಿದೆ.

'ಮರು ಮಕ್ಕತ್ತಾಯಂ' ಸಂಪ್ರದಾಯ

ಕೇರಳದಲ್ಲಿರುವ ಒಂದು ವಿಶಿಷ್ಟವಾದ ಸಾಮಾಜಿಕ ಸಂಪ್ರದಾಯ 'ಮರುಮಕ್ಕತ್ತಾಯ'. ಈ ಪದ್ಧತಿಯು ಮಾತೃ ಮೂಲೀಯ ವ್ಯವಸ್ಥೆಯನ್ನು ಹೋಲುತ್ತದೆ. ಮರು ಮಕ್ಕಳು ಎಂದರೆ ಸಹೋದರಿಯ ಮಕ್ಕಳು ಎಂದರ್ಥ. ಮರು ಮಕ್ಕಳ ದಾಯವೇ ಮರು ಮಕ್ಕತ್ತಾಯ ಸಂಪ್ರದಾಯ ಎನಿಸಿದೆ. ನಂಬೂದಿರಿಗಳಲ್ಲದ ಇತರ ಜಾತಿಗಳಲ್ಲಿ ಈ ಸಂಪ್ರದಾಯ ಜಾರಿಯಲ್ಲಿತ್ತು. ಇದರ ಪ್ರಕಾರ ಕುಟುಂಬದ ಆಸ್ತಿ ಸಂಪತ್ತುಗಳಿಗೆ ಸ್ತ್ರೀಯರೇ ಭಾದ್ಯಸ್ಥರು. ಆಸ್ತಿ ಅಥವಾ ಸಂಪತ್ತಿನ ಒಡೆತನ ತಂದೆಯಿಂದ ಮಗನಿಗೆ ಹೋಗುವುದಿಲ್ಲ. ಸಹೋದರಿಯ ಮಕ್ಕಳಿಗೆ ಅಂದರೆ ಸೋದರ ಅಳಿಯ ಮತ್ತು ಸೋದರ ಸೊಸೆಗೆ ಹೋಗುತ್ತದೆ. ತವರು ಮನೆಯ ಆಸ್ತಿಯ ಹಕ್ಕು ಹೆಣ್ಣು ಮಕ್ಕಳಿಗೆ ಮಾತ್ರ. ಗಂಡು ಮಕ್ಕಳಿಗೆ ಇರುವುದಿಲ್ಲ. ಹೆಣ್ಣು ಮದುವೆಯಾಗಿ ಗಂಡನನ್ನು ಮನೆಗೆ ಕರೆಸಿಕೊಳ್ಳುತ್ತಾಳೆ. ಸಹೋದರಿಯ ಹೆಸರಿನಲ್ಲಿ ಆಕೆಯ ಹಿರಿಯ ಅಣ್ಣ ಕುಟುಂಬದ ಮುಖ್ಯಸ್ಥನಾಗಿ ಅವಿಭಕ್ತ ಕುಟುಂಬದ ಒಡೆಯನಾಗಿರುತ್ತಿದ್ದ.

ಅವನನ್ನು 'ಕಾರಣವರ್' ಎಂದು ಕರೆಯುತ್ತಿದ್ದರು. ಅವನ ಅಧೀನದಲ್ಲಿರುವವರನ್ನು 'ಅನಂತಿರವರ್' ಅಥವಾ ಮರು ಮಕ್ಕಳು ಎಂದು ಕರೆಯುತ್ತಿದ್ದರು. ಕಾರಣವರ್ ಅಥವಾ ಮುಖ್ಯಸ್ಥನ ಮಕ್ಕಳಿಗೆ ಸಂಪತ್ತಿನಲ್ಲಿ ಅಥವಾ ಆಸ್ತಿಯಲ್ಲಿ ಅಧಿಕಾರವಿಲ್ಲ.

೨.೧.೭ ಕೃಷಿ, ಮತ್ತು ಆಹಾರ ಪದ್ಧತಿ

ಕೇರಳವು ಪ್ರಾಚೀನ ಕಾಲದಿಂದಲೂ ತೆಂಗಿನ ಬೆಳೆಗೆ ಪ್ರಸಿದ್ಧವಾದುದು. ತೆಂಗಿನ ಬೆಳೆಯೊಂದಿಗೆ ವಾಣಿಜ್ಯ ಬೆಳೆಗಳಾದ ರಬ್ಬರ್, ಟೀ, ಕಾಫಿ, ಶುಂಠಿ, ಏಲಕ್ಕಿ, ಲವಂಗ, ಕಾಳು ಮೆಣಸು ಮೊದಲಾದ ಬೆಳೆಗಳನ್ನು ಪಶ್ಚಿಮ ಘಟ್ಟಗಳ ತಪ್ಪಲು ಪ್ರದೇಶ ಮತ್ತು ಒಳನಾಡುಗಳಲ್ಲಿ ಬೆಳೆಯಲಾಗುತ್ತದೆ. ಆಹಾರದ ಪ್ರಮುಖ ಬೆಳೆಯಾದ ಭತ್ತವನ್ನು ಹೆಚ್ಚಿನ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಬಾಳೆ, ಕಬ್ಬು, ಜಾಯಿಕಾಯಿ, ಅಡಿಕೆ, ಮರಗೆಣಸು, ಇತ್ಯಾದಿ ಬೆಳೆಗಳಿಗೆ ಕೇರಳವು ಪ್ರಸಿದ್ಧವಾಗಿದೆ. ಕೇರಳದಲ್ಲಿ ಜನಸಂಖ್ಯೆಯು ಅಧಿಕಗೊಂಡಿರುವುದರ ಪರಿಣಾಮ ಕೇರಳೀಯರು ನೆರೆಯ ಉತ್ತರದ ತುಳುನಾಡಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿ ಕೃಷಿ ಭೂಮಿಗಳನ್ನು ಖರೀದಿಸುವುದರ ಮೂಲಕ ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಮೂಲತಃ ಕೇರಳ ಕೃಷಿ ಪ್ರಧಾನವಾದ ರಾಜ್ಯ. ರಬ್ಬರ್ ಮತ್ತು ತೆಂಗನ್ನು ಈ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯಲಾಗುತ್ತದೆ. ಇಲ್ಲಿಯ ಜನತೆ ಶ್ರಮಜೀವಿಗಳಾಗಿರುವುದರಿಂದ ವಿವಿಧ ರೀತಿಯ ಬೆಳೆಗಳನ್ನು ಬೆಳೆಯುವುದರ ಮೂಲಕ ಕೃಷಿ ಕ್ಷೇತ್ರದಲ್ಲೂ ತಮ್ಮ ಪರಿಣತಿಯನ್ನು ತೋರಿಸಿಕೊಂಡಿದ್ದಾರೆ.

ಕೇರಳೀಯರು ಮುಖ್ಯ ಆಹಾರವಾಗಿ 'ಕುಸುಲಕ್ಕಿ' ಅಥವಾ ಕುಚ್ಚಲಕ್ಕಿಯನ್ನು ಉಪಯೋಗಿಸುತ್ತಾರೆ. ಕುಸುಲಕ್ಕಿಯ ಗಂಜಿಯು ಗ್ರಾಮೀಣ ಪ್ರದೇಶಗಳಲ್ಲಿ ತುಂಬ ಪ್ರಸಿದ್ಧ. ಕರಾವಳಿ ಪ್ರದೇಶದ ಜನರು ಮೀನನ್ನು ಮುಖ್ಯ ಆಹಾರವಾಗಿ ಉಪಯೋಗಿಸುತ್ತಾರೆ. ಬಡವರು ಮರಗೆಣಸನ್ನು ತಮ್ಮ ಆಹಾರವಾಗಿ ಉಪಯೋಗಿಸುತ್ತಾರೆ. ನೇಂದ್ರ ಬಾಳೆಯನ್ನು ಮತಭೇದವಿಲ್ಲದೆ ಎಲ್ಲಾ ಜಾತಿಯವರೂ ಬಳಸುತ್ತಾರೆ. ಕೇರಳದಲ್ಲಿ ಸಸ್ಯಹಾರಿಗಳಿಗಿಂತ ಮಾಂಸಹಾರಿಗಳು ಅಧಿಕ ಸಂಖ್ಯೆಯಲ್ಲಿದ್ದಾರೆ. ಬೇರೆ ಬೇರೆ ತರದ ಅಪ್ಪಂ, ಪುಟ್ಟು, ವಡೆ ಮುಂತಾದ ಭಕ್ಷ್ಯಗಳು ತುಂಬ ಪ್ರಸಿದ್ಧವಾಗಿದೆ.

೨.೧.೮ ಸಾಂಸ್ಕೃತಿಕ ವೈಶಿಷ್ಟ್ಯ

ಕೇರಳವು ಸಾಂಸ್ಕೃತಿಕವಾಗಿ ವಿಭಿನ್ನ ಆಯಾಮಗಳನ್ನು ಒಳಗೊಂಡಿದೆ. ದೀಪಾವಳಿ ಮುಂತಾದ ಹಬ್ಬಗಳಲ್ಲದೆ ಓಣಂ, ಸೌರಯುಗಾದಿಯಂದು ಆಚರಿಸುವ 'ವಿಷು' ಹಬ್ಬ ಸಾರ್ವತ್ರಿಕವಾಗಿ ಆಚರಿಸಲ್ಪಡುತ್ತದೆ. ಯುದ್ಧಕಲೆಯೆಂದೇ ಪ್ರಸಿದ್ಧವಾದ 'ಕಳರಿಪಯಟ್', ಸಾಂಸ್ಕೃತಿಕ ಕಲಾಪ್ರಕಾರವಾಗಿರುವ 'ಕಥಕ್ಕಳಿ', ಮೋಹಿನಿ ಆಟ್ಟಂ, ಇತ್ಯಾದಿಗಳು ದೇಶವಿದೇಶಗಳಲ್ಲಿ ಕೇರಳದ ಕಲಾ ಸಂಪತ್ತನ್ನು ಸಾರಿವೆ. ಜಾನಪದ ನೃತ್ಯ ಪ್ರಕಾರಗಳಾಗಿರುವ ಚಾಕ್ಯಾರ್ ಕೂತ್ತು, ಓಟ್ಟಂ ತುಳ್ಳಲ್, ಗರುಡನ್‌ಕ್ಕಳಿ, ತಿರುವಾದಿರಕ್ಕಳಿ, ಕುರುತ್ತಿಪಾಟ್ಟು ಮುಂತಾದ ಹಲವಾರು ಸಂಪ್ರದಾಯಗಳು ಬೆಳೆದು ಬಂದಿವೆ. ಭಾರತದ ಲಲಿತ ಕಲೆಗಳ ಪರಂಪರೆಗೆ ಈ ಜಾನಪದ ನೃತ್ಯಗಳ ಕೊಡುಗೆ ಬಹಳ ಮಹತ್ವಪೂರ್ಣವಾಗಿದೆ.

ಕೇರಳದ ಸಾಂಸ್ಕೃತಿಕ ಹಿರಿಮೆಯನ್ನು ಅರಿಯುವಲ್ಲಿ ಅಲ್ಲಿಯ ದೇವಾಲಯಗಳು, ವಾಸ್ತುಶಿಲ್ಪ, ಪೂಜಾವಿಧಿ, ಉತ್ಸವಗಳು ತುಂಬಾ ಸಹಾಯಕವಾಗಿವೆ. ದೇವಾಲಯಗಳ ಪೂಜಾ ಕಾರ್ಯಗಳನ್ನು ನಂಬೂದಿರಿ, ದಕ್ಷಿಣ ಕನ್ನಡದಿಂದ ಬಂದ 'ಎಂಬ್ರಾಂದಿರಿ' ಅಥವಾ ಪೋತ್ತಿ ಬ್ರಾಹ್ಮಣರು ಮಾಡುತ್ತಾರೆ. ಕೇರಳೀಯರು ಶಿವ, ವಿಷ್ಣು, ಕೃಷ್ಣ, ರಾಮ, ಸುಬ್ರಹ್ಮಣ್ಯ, ದೇವಿ, ದುರ್ಗೆ, ಭಗವತಿ, ಭದ್ರಕಾಳಿ, ಅಯ್ಯಪ್ಪ, ಮುಂತಾದ ಹಲವಾರು ದೇವರುಗಳನ್ನು ಪೂಜಿಸುತ್ತಾರೆ. ವೈಷ್ಣವ ದೇವಾಲಯಗಳಲ್ಲಿ, 'ಗುರುವಾಯೂರು', (ಕೃಷ್ಣ) 'ತಿರುವನಂತಪುರ' (ಅನಂತ ಪದ್ಮನಾಭ), 'ತ್ರಿಪುಣಿತ್ತಿರ', ಮುಂತಾದವು ಪ್ರಸಿದ್ಧವಾಗಿವೆ. ಶೈವ ಮಂದಿರಗಳಲ್ಲಿ ಎರ್ನಾಕುಳಂ, ತಿರುವಂಚಿಕುಳಂ, ವೈಕ್ಕಂ, ಶ್ರೀಕಂಠೇಶ್ವರಂ ಮುಂತಾದವುಗಳನ್ನು ಹೆಸರಿಸಬಹುದಾಗಿದೆ.

ಈ ದೇವಾಲಯಗಳಲ್ಲಿ ವಾರ್ಷಿಕೋತ್ಸವ ಮಾತ್ರವಲ್ಲದೆ 'ಪೂರಂ' ಎನ್ನುವ ಇನ್ನೊಂದು ರೀತಿಯ ಉತ್ಸವವೂ ನಡೆಯುತ್ತದೆ. ಶಿವ ಅಥವಾ ದೇವಿಯ ದೇವಾಲಯದಲ್ಲಿ ಇದು ನಡೆಯುತ್ತದೆ. ಇದರಲ್ಲಿ ತ್ರಿಶೂರ್ 'ವಡಕ್ಕನಾಥ' ದೇವಾಲಯದಲ್ಲಿ ನಡೆಯುವ 'ಪೂರಂ' ವಿಶ್ವ ವಿಖ್ಯಾತವಾದುದು. ಅದು 'ತ್ರಿಶೂರ್ ಪೂರಂ' ಎಂದೇ ಪ್ರಸಿದ್ಧವಾಗಿದೆ. ಉತ್ತರ ಕೇರಳದಲ್ಲಿ ತುಳುನಾಡಿನ ಭೂತಕೋಲಕ್ಕೆ ಸಂವಾದಿಯಾಗಿರುವ 'ಥೈಯಂ' ನಡೆಯುತ್ತದೆ. ತುಳುನಾಡಿನ ಪಾಡ್ದನಕ್ಕೆ ಸಂವಾದಿಯಾಗಿ ಅಲ್ಲಿ ತೋಟ್ಟಂ ಬಳಕೆಯಲ್ಲಿದೆ.

೨.೨ ತುಳುನಾಡಿನ ಪ್ರಾದೇಶಿಕ ವಿವರ

೨.೨.೧ ಭಾಷೆ

ತುಳು ಭಾಷೆ ಪಂಚ ದ್ರಾವಿಡ ಭಾಷೆಗಳಲ್ಲಿ ಒಂದು. ತುಳು ಭಾಷೆಯನ್ನು ತುಳುನಾಡಿನ ಬೇರೆ ಬೇರೆ ಜಾತಿಗಳ ಜನರು ತಮ್ಮ ಮಾತೃ ಭಾಷೆಯನ್ನಾಗಿ ಅಂಗೀಕರಿಸಿದ್ದಾರೆ. ಸಾಂಪ್ರದಾಯಿಕವಾಗಿ 'ತುಳುನಾಡು' ಎಂದು ಕರೆಯಲಾಗುತ್ತಿದ್ದ ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದಲ್ಲಿ ಕಾಸರಗೋಡಿನ ಚಂದ್ರಗಿರಿ ಹೊಳೆ, ಉತ್ತರದಲ್ಲಿ ಕಲ್ಯಾಣಪುರ ಹೊಳೆ ಇವುಗಳ ನಡುವಿನ ಜನರು ಹೆಚ್ಚಾಗಿ ಆಡುವ ಭಾಷೆ ತುಳು. ಇದರ ಜೊತೆಗೆ ಕನ್ನಡ, ಕೊಂಕಣಿ, ಮಲೆಯಾಳಂ, ಮರಾಠಿ, ಹಾಗೂ ಕನ್ನಡದ ಉಪಭಾಷೆಗಳಾದ ಹವ್ಯಕ, ಕೋಟ ಇತ್ಯಾದಿ ಭಾಷೆಗಳನ್ನು ಆಡುವವರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಉರ್ದು, ಗುಜರಾತಿ, ತಮಿಳು ಮೊದಲಾದ ಭಾಷೆಗಳನ್ನು ಮಾತನಾಡುವವರು ಇದ್ದಾರೆ. ತುಳು ಭಾಷೆಯಲ್ಲಿಯೂ ಶಿವಳ್ಳಿ ಬ್ರಾಹ್ಮಣರ ತುಳು ಪ್ರತ್ಯೇಕವಾದ ಭಾಷೆಯಾಗಿದೆ. ತುಳುವಿನ ಪ್ರಾದೇಶಿಕ ಉಪಭಾಷೇಗಳ ಹೊರತಾಗಿ, ಈ ಪ್ರದೇಶದಲ್ಲಿ ತುಳುವನ್ನು ಎರಡು ರೀತಿಯ ಜನರು ಮಾತನಾಡುತ್ತಾರೆ. ೧. ತುಳುವನ್ನು ಮಾತೃ ಭಾಷೆಯನ್ನಾಗಿ ಉಳ್ಳವರು ೨. ಕೊಂಕಣಿ, ಮಲೆಯಾಳಂ, ಮರಾಠಿ, ಉರ್ದು, ಹಾಗೂ ಕನ್ನಡದ ಉಪ ಭಾಷೇಗಳಾದ ಹವ್ಯಕ, ಕೋಟ, ಇತ್ಯಾದಿ ಭಾಷೆಗಳು ಮಾತೃಭಾಷೆಯಾಗಿ ಇದ್ದ ತುಳುವನ್ನು ಸಂಪರ್ಕ ಭಾಷೆಯನ್ನಾಗಿ ಬಳಸುವವರು. ಈ ರೀತಿ ಈ ಪ್ರದೇಶದ ಬಹುತೇಕ ಮಂದಿ ತುಳು ಭಾಷೆಯಲ್ಲಿ ವ್ಯವಹರಿಸುವುದರಿಂದ ತುಳುವನ್ನು ಈ ಪ್ರದೇಶದ ವ್ಯವಹಾರಿಕ ಭಾಷೆ ಎಂದು ಕರೆಯಬಹುದಾಗಿದೆ. ತುಳು ಭಾಷೆಯನ್ನು ಶಿವಳ್ಳಿ ಬ್ರಾಹ್ಮಣರು, ಸ್ಥಾನಿಕರು, ಬಂಟರು, ಜೈನರು, ಬಿಲ್ಲವರು, ಗೌಡರು, ಮೂಲ್ಯರು, ಹರಿಜನರು,

ಮತ್ತು ಕೆಲವೆಡೆ ಪ್ರೊಟೆಸ್ಟೆಂಟ ಕ್ರಿಶ್ಚಿಯನರು ತಮ್ಮ ಮಾತೃ ಭಾಷೆಯ ರೂಪದಲ್ಲಿ ಆಡುತ್ತಾರೆ. ಆದುದರಿಂದ ತುಳುವಿನಲ್ಲಿ ಅನೇಕ ಸಾಮಾಜಿಕ ಉಪಭಾಷೆಗಳನ್ನು ಗುರುತಿಸಬಹುದಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ತುಳುಭಾಷೆಗೆ ದ್ರಾವಿಡ ಭಾಷಾ ವರ್ಗದ ಪ್ರಮುಖ ಭಾಷೆಗಳಾದ ಕನ್ನಡ, ತುಮಿಳು, ಮಲೆಯಾಳಂ, ತೆಲುಗು ಭಾಷೆಗಳಂತೆ ಸ್ವತಂತ್ರವಾದ ಲಿಪಿ ಪ್ರಕಾರವು ಕಂಡು ಬರುವುದಿಲ್ಲ. 'ತುಳು ಲಿಪಿ' ಎಂದು ಕರೆಯಲಾಗುವ ಒಂದು ಲಿಪಿ ಈಗಲೂ ಇದೆ ಎಂದು ವಿದ್ವಾಂಸರ ಅಭಿಮತ. ಕೆಲವು ಅಕ್ಷರ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಉಳಿದಂತೆ ಮಲೆಯಾಳ ಲಿಪಿಯನ್ನೇ ಹೋಲುತ್ತದೆ. ಈ ಲಿಪಿಯು ತುಳುವೆ? ಅಥವಾ ಪ್ರಾಚೀನ ಮಲೆಯಾಳ ಲಿಪಿಯೇ ಎನ್ನುವುದರ ಕುರಿತಾಗಿ ವಿದ್ವಾಂಸರುಗಳಲ್ಲಿ ಇನ್ನು ಗೊಂದಲವಿದೆ. ತುಳು ಸಾಹಿತ್ಯವನ್ನು ಈಗ ಕನ್ನಡ ಲಿಪಿಯಲ್ಲಿಯೇ ಬರೆಯುವ ಪರಿಪಾಟ ಬೆಳೆದು ಬಂದಿದೆ. ತುಳು ಭಾಷೆ ವ್ಯಾವಹಾರಿಕ ಭಾಷೆಗಷ್ಟೇ ಸೀಮಿತಗೊಂಡಿದೆ.

೨.೨.೧ ತುಳುನಾಡಿನ ಭೌಗೋಳಿಕ ಸ್ಥಿತಿ

ಪಶ್ಚಿಮ ಕರಾವಳಿಯ ಪ್ರಸಿದ್ಧ ಜಿಲ್ಲೆ ಅವಿಭಜಿತ ದಕ್ಷಿಣ ಕನ್ನಡ. ಉತ್ತರದಲ್ಲಿ ಕಲ್ಯಾಣಪುರ ಹೊಳೆ ಮತ್ತು ದಕ್ಷಿಣದಲ್ಲಿ ಚಂದ್ರಗಿರಿ ಹೊಳೆ - ಇವೆರಡರ ಮಧ್ಯದಲ್ಲಿ ಹರಡಿರುವ (ಇಂದಿನ ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವ್ಯಾಪಿಸಿರುವ) ಪ್ರದೇಶವು 'ತುಳುನಾಡು' ಎಂದು ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿದೆ. ಇತಿಹಾಸ ಕಾಲದಲ್ಲಿ ಈ ನಾಡಿನ ವ್ಯಾಪ್ತಿ ಇನ್ನೂ ಹೆಚ್ಚಾಗಿದ್ದು ಉತ್ತರದಲ್ಲಿ ಇಂದಿನ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಗೇರುಸೊಪ್ಪೆ, ಮೊದಲಾದವುಗಳು ತುಳುನಾಡಿನೊಳಗಿದ್ದಾವೆಂದು ತಿಳಿದುಬರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದಿರುವ ತುಳುನಾಡಿನ ಭೌಗೋಳಿಕ ವೈಶಿಷ್ಟ್ಯ, ಇತಿಹಾಸ, ಭಾಷೆ, ಜನಪದ ಸಂಸ್ಕೃತಿಗಳ, ಮತ್ತು ಸಾಂಸ್ಕೃತಿಕ ಅನನ್ಯತೆಯ ಕುರಿತು ಅವಲೋಕಿಸಲಾಗಿದೆ. ತುಳು ಭಾಷೆಯನ್ನಾಡುವ ಜನಸಮೂಹದ ವಸತಿ ಪ್ರದೇಶವು ಕಲ್ಯಾಣಪುರ ಮತ್ತು ಚಂದ್ರಗಿರಿ ಹೊಳೆಗಳ ಮಧ್ಯೆ ಎಂಬುದರಿಂದ ಈ ಎರಡು ನದಿಗಳು ತುಳುನಾಡಿನ ಉತ್ತರದ ಮತ್ತು ದಕ್ಷಿಣದ ಮೇರೆಗಳಾಗಿ ಗುರುತಿಸಲ್ಪಡುತ್ತವೆ.

ಪ್ರಸ್ತುತ ಭೂ ಪ್ರದೇಶವು ೧೨° ೨೭' ಉತ್ತರ ಅಕ್ಷಾಂಶದಿಂದ ೧೩° ೫೮' ಉತ್ತರ ಅಕ್ಷಾಂಶದವರೆಗೂ, ೭೪° ೩೫' ಪೂರ್ವ ರೇಖಾಂಶದಿಂದ ೭೫° ೪೦' ಪೂರ್ವ ರೇಖಾಂಶದವರೆಗೂ ವ್ಯಾಪಿಸಿಕೊಂಡಿದೆ. ಪೂರ್ವದಲ್ಲಿ ಪಶ್ಚಿಮ ಘಟ್ಟಗಳಿಂದ ಕೂಡಿದ ಮಲೆನಾಡಿನ ಸಂಸ್ಕೃತಿ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ರೂಪಿಸಿದ ಕರಾವಳಿ ಸಂಸ್ಕೃತಿ, ಉತ್ತರಕ್ಕೆ ಕರ್ನಾಟಕ ಸಂಸ್ಕೃತಿ ಸೇರಿಕೊಂಡು 'ತುಳುನಾಡ' ಸಂಸ್ಕೃತಿ ಎನ್ನುವ ಸಂಸ್ಕೃತಿಯು ಅಸ್ತಿತ್ವದಲ್ಲಿದೆ. ಈ ತುಳು ಭಾಷಾ ವಲಯವೂ ಕನ್ನಡನಾಡಿನಲ್ಲೇ ಅಂತರ್ಗತವಾಗಿರುವುದರಿಂದ ಇದು ತುಳುನಾಡಾಗಿಯೂ ಕನ್ನಡ ನಾಡು, ಕನ್ನಡ ನಾಡಿನೊಳಗಿನ ವಿಶಿಷ್ಟ ಭಾಷಾಪ್ರದೇಶವಾದುದರಿಂದ ಕನ್ನಡನಾಡಾಗಿಯೂ ತುಳುನಾಡು ಗುರುತಿಸಲ್ಪಡುತ್ತಿದೆ. ೮.೪೪೧ ಚ.ಕಿ.ಮೀ ವಿಸ್ತೀರ್ಣವಿರುವ ಈ ಜಿಲ್ಲೆಯ ಉತ್ತರದಲ್ಲಿ ಉತ್ತರ ಕನ್ನಡ ಜಿಲ್ಲೆ,

ಪೂರ್ವದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳು, ದಕ್ಷಿಣದಲ್ಲಿ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗಳು ಅಸ್ತಿತ್ವದಲ್ಲಿವೆ. ಕಾಸರಗೋಡು ಎಲ್ಲ ದೃಷ್ಟಿಗಳಿಂದಲೂ ದಕ್ಷಿಣ ಕನ್ನಡದ ಭಾಗದಂತಿದ್ದರೂ ಅದು ಕೇರಳ ರಾಜ್ಯಕ್ಕೆ ಸೇರ್ಪಡೆಗೊಂಡಿದೆ.

ದಕ್ಷಿಣಕನ್ನಡ ಜಿಲ್ಲೆಯ ಭೌಗೋಳಿಕ ಲಕ್ಷಣಗಳನ್ನು ಅಧ್ಯಯನದ ಅನುಕೂಲತೆಗಾಗಿ

೧. ಪಶ್ಚಿಮ ಘಟ್ಟಗಳ ಪ್ರದೇಶ ಅಥವಾ ಮಲೆನಾಡು

೨. ಕರಾವಳಿಯ ಬಯಲು ಪ್ರದೇಶ

೩. ಒಳನಾಡು ಪ್ರದೇಶ ಎಂದು ವರ್ಗೀಕರಿಸಿ ಕೊಳ್ಳಲಾಗಿದೆ.

೧. ಪಶ್ಚಿಮ ಘಟ್ಟಗಳ ಪ್ರದೇಶ

ಪಶ್ಚಿಮ ಘಟ್ಟಗಳು ಉತ್ತರದಿಂದ ದಕ್ಷಿಣಕ್ಕೆ ಹಬ್ಬಿದ್ದು ಮುಂದೆ ಕೇರಳ ರಾಜ್ಯದಲ್ಲಿ ಮುಂದುವರಿಯುತ್ತವೆ. ಈ ಪಶ್ಚಿಮ ಘಟ್ಟಗಳಿಗೆ 'ಸಹ್ಯಾದ್ರಿ ಶ್ರೇಣಿ' ಗಳೆಂದು ಕೂಡ ಕರೆಯಲಾಗುತ್ತದೆ. ಸಹ್ಯಾದ್ರಿಯ ಬೆಟ್ಟಸಾಲುಗಳಲ್ಲಿ ಕರ್ನಾಟಕದ ಅತ್ಯಂತ ಎತ್ತರವಾದ ಶಿಖರಗಳು ಕಂಡುಬರುತ್ತವೆ. ಇದರ ಒಂದು ಶಾಖೆಯಾದ ಚಂದ್ರ ದ್ರೋಣ ಪರ್ವತದ 'ಮುಳ್ಳಯ್ಯನ ಗಿರಿ' ಶಿಖರದ ಎತ್ತರ ಸು ೧೮೭೪,೮ ಮೀ, ಕುದುರೆ ಮುಖದ ಎತ್ತರ ಸು ೧೮೯೨ ಮೀ ಕೊಡಚಾದ್ರಿಯ ಎತ್ತರ ೧೩೪೪ ಮೀ ಪುಷ್ಪಗಿರಿ, ೧೭೧೩ ಮೀ, ಅಲ್ಲದೆ ವಾಲಿಕುಂಜ, ಕುಮಾರ ಪರ್ವತ ಮೊದಲಾದ ಉನ್ನತ ಶಿಖರಗಳಿವೆ. ಈ ಸಹ್ಯಾದ್ರಿ ಶ್ರೇಣಿಯಲ್ಲಿ ಸಂಪರ್ಕ ಮಾರ್ಗಗಳಾಗಿ ಪರಿಣಮಿಸಿರುವ ಕಣಿವೆ ಮಾರ್ಗಗಳಲ್ಲಿ, ಉಡುಪಿ ಜಿಲ್ಲೆಯ ಕೊಲ್ಲೂರು-ಹುಲಿಕಲ್ಲು ಘಾಟ, ಶಿವಮೊಗ್ಗ-ಉಡುಪಿಗಳ ನಡುವೆಯ ಆಗುಂಬೆ ಘಾಟಿ, ಶೃಂಗೇರಿ-ಕಾರ್ಕಳ ನಡುವೆಯ ಕೊಟ್ಟಿಗೆಹಾರ ಘಾಟಿ, ಚಿಕ್ಕಮಗಳೂರು-ಮಂಗಳೂರು ನಡುವೆಯ ಚಾರ್ಮಾಡಿ ಘಾಟಿ, ಹಾಸನ-ಮಂಗಳೂರು ನಡುವೆಯ ಸಕಲೇಶಪುರ ಘಾಟಿ ಮತ್ತು ಮಡಿಕೇರಿ ಘಾಟಿಗಳು ಮುಖ್ಯವಾದವುಗಳಾಗಿವೆ. ಜಿಲ್ಲೆಯ ಅನೇಕ ನದಿಗಳು ಪಶ್ಚಿಮ ಘಟ್ಟಗಳಲ್ಲೇ ಉಗಮವಾಗುತ್ತವೆ. ಗಂಗೊಳ್ಳಿ (ಶುಕ್ತಿಮತಿ) ಸೀತಾನದಿ, ಸ್ವರ್ಣಾ ನದಿ, ಕಲ್ಯಾಣಪುರ, ಉದ್ಯಾವರ, ಶಾಂಭವಿ, ಪಾವಂಜೆ, ಗುರುಪುರ (ಫಲ್ಗುಣಿ) ನೇತ್ರಾವತಿ, ಕುಮಾರಧಾರ, ಮೊದಲಾದ ನದಿಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಪಶ್ಚಿಮ ಘಟ್ಟಗಳು ಜಲಸಂಪತ್ತಿನೊಂದಿಗೆ ಹೇರಳವಾದ ಅರಣ್ಯ ಸಂಪತ್ತು, ಪ್ರಾಣಿಸಂಪತ್ತು ಮತ್ತು ಖನಿಜ ಸಂಪತ್ತು ಒಳಗೊಂಡಿದೆ. ಪಶ್ಚಿಮ ಘಟ್ಟಗಳಲ್ಲಿ ಬೆಲೆಬಾಳುವ ಮರಗಳೊಂದಿಗೆ ಬೆತ್ತ ಮತ್ತು ಬಿದಿರುಗಳು ಕಂಡುಬರುತ್ತವೆ. ಅರಣ್ಯೋತ್ಪನ್ನಗಳಾದ ರಾಮಪತ್ರೆ, ವಾಟೆಹುಳಿ, ಕಾಳುಮೆಣಸು, ಏಲಕ್ಕಿ, ದಾಲ್ಚಿನಿ ಮತ್ತು ಅಪರೂಪದ ಔಷಧೀಯ ಸಸ್ಯಗಳು ಕಂಡುಬರುತ್ತವೆ. ವನ್ಯ ಜೀವಿಗಳಾದ ಹುಲಿ, ಚಿರತೆ, ಜಿಂಕೆ, ಕಾಡುಕೋಣ, ಆನೆ ಮೊದಲಾದ ಪ್ರಾಣಿಗಳು ಪಶ್ಚಿಮ ಘಟ್ಟಗಳಲ್ಲಿವೆ. ಈ ಪರ್ವತ ಪ್ರದೇಶಗಳಿಂದಾಗಿ ಮಲೆನಾಡು, ಒಳನಾಡು ಮತ್ತು ಕರಾವಳಿಗಳಲ್ಲಿ ವ್ಯಾಪಕ ಮಳೆಯಾಗುತ್ತದೆ. ಆಗುಂಬೆಯನ್ನು ಕರ್ನಾಟಕದ 'ಚಿರಾಪುಂಜಿ' ಎಂದು ಕರೆಯಲಾಗುತ್ತದೆ.

೨. ಕರಾವಳಿಯ ಬಯಲು ಪ್ರದೇಶ

ರಾಜ್ಯವು ಉತ್ತರದಲ್ಲಿ ಕಾರವಾರದಿಂದ ದಕ್ಷಿಣದಲ್ಲಿ ಕಾಸರಗೋಡಿನ ವರೆಗಿನ ಸುಮಾರು ೩೨೦ ಕಿ.ಮೀ ಗಳಷ್ಟು ದೂರದ ಕರಾವಳಿ ಪ್ರದೇಶವನ್ನು ಒಳಗೊಂಡಿದೆ. ಇದರ ಅಗಲವು ಸುಮಾರು ೧೦ ರಿಂದ ೬೪ ಕಿ.ಮೀಗಳ ವರೆಗೆ ವ್ಯತ್ಯಾಸಗೊಳ್ಳುತ್ತಾ ಸಾಗುತ್ತದೆ. ಅದರಲ್ಲಿ ಗಂಗೊಳ್ಳಿಯಿಂದ ದಕ್ಷಿಣದಲ್ಲಿ ತಲಪಾಡಿಯವರೆಗಿನ ಪ್ರದೇಶವು ಅವಿಭಜಿತ ದಕ್ಷಿಣ ಕನ್ನಡದ ವ್ಯಾಪ್ತಿಯಲ್ಲಿ ಬರುತ್ತದೆ. ಕರಾವಳಿಯು ಮತ್ಸ್ಯೋದ್ಯಮಕ್ಕೆ ಪ್ರಸಿದ್ಧವಾಗಿದೆ. ತೆಂಗು, ಬತ್ತ, ಮಲ್ಲಿಗೆ, ಗೋಡಂಬಿ ಮೊದಲಾದ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಮುಂಬೈಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ೧೭ ಈ ಭಾಗದಲ್ಲಿ ಹಾದು ಹೋಗುತ್ತದೆ. ಮಂಗಳೂರು, ಮಲ್ಪೆ, ಗಂಗೊಳ್ಳಿ ಮೊದಲಾದ ಬಂದರುಗಳು ಕರಾವಳಿಯ ಪ್ರಸಿದ್ಧ ಬಂದರುಗಳೆನಿಸಿವೆ. ಕರಾವಳಿಯ ತೀರದುದ್ದಕ್ಕೂ ಮೀನುಗಾರರ ವಸತಿಗಳು ಕಂಡುಬರುತ್ತವೆ. ಪ್ರಸಿದ್ಧ ಪುಣ್ಯ ಕ್ಷೇತ್ರವಾಗಿರುವ ಉಡುಪಿ ಶ್ರೀಕೃಷ್ಣ, ವಡಬಾಂಡೇಶ್ವರ, ಬಪ್ಪನಾಡು, ದೊಡ್ಡ ನಗರಗಳಾಗಿರುವ ಮಂಗಳೂರು, ಉಡುಪಿ, ಮಣಿಪಾಲಗಳನ್ನು ಕರಾವಳಿಯಲ್ಲಿ ಕಾಣಬಹುದಾಗಿದೆ. ಶೈಕ್ಷಣಿಕ ಔದ್ಯೋಗಿಕ, ಬ್ಯಾಂಕಿಂಗ್ ಮೊದಲಾದ ಕ್ಷೇತ್ರಗಳಲ್ಲಿ ಈ ಜಿಲ್ಲೆಯು ಮುಂಚೂಣಿಯಲ್ಲಿದೆ. ಶಿಕ್ಷಣ ರಂಗದಲ್ಲಿಯು ಈ ಪ್ರದೇಶ ತುಂಬ ಪ್ರಗತಿಯನ್ನು ಸಾದಿಸಿರುವುದು ಕಂಡುಬರುತ್ತದೆ. ಮಣಿಪಾಲ, ಉಡುಪಿ, ಕಾರ್ಕಳ, ಮೂಡಬಿದ್ರೆ, ಮಂಗಳೂರು ಮೊದಲಾದೆಡೆಗಳಲ್ಲಿ ಹಲವಾರು ಉತ್ತಮವಾದ ಶಿಕ್ಷಣ ಸಂಸ್ಥೆಗಳಿವೆ. ಕಲೆ, ಸಾಹಿತ್ಯ, ಸಂಸ್ಕೃತಿ ಮೊದಲಾದ ಎಲ್ಲ ವಿಷಯಗಳಲ್ಲಿಯೂ ದಕ್ಷಿಣ ಕನ್ನಡದ ಕರಾವಳಿಯು ತುಂಬ ಪ್ರಗತಿ ಸಾದಿಸಿರುವುದು ಕಂಡುಬರುತ್ತದೆ.

೩. ಒಳನಾಡು

ಪೂರ್ವದ ಪಶ್ಚಿಮ ಘಟ್ಟಗಳು ಮತ್ತು ಪಶ್ಚಿಮದ ಕರಾವಳಿ ಪ್ರದೇಶದ ನಡುವಿರುವ ಭೂ ಭಾಗವನ್ನು ಒಳನಾಡು ಎಂದು ಗುರುತಿಸಲಾಗಿದೆ. ಕುಂದಾಪುರ, ಕಾರ್ಕಳ, ಬೆಳ್ತಂಗಡಿ, ಸುಳ್ಯ, ಪುತ್ತೂರು ಮೊದಲಾದ ತಾಲೂಕುಗಳು ಈ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡುತ್ತವೆ. ಇಲ್ಲಿ ಕೃಷಿಯೇ ಪ್ರಧಾನ ಕಸುಬು. ತೆಂಗು, ಅಡಿಕೆ, ಗೋಡಂಬಿ, ರಬ್ಬರ್, ಬಾಳೆ ಮೊದಲಾದ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಈ ಭಾಗದಲ್ಲಿ ಹಲವಾರು ಗೋಡಂಬಿ ಸಂಸ್ಕರಣ ಕೇಂದ್ರಗಳಿದ್ದು ಸಾವಿರಾರು ಮಂದಿಗೆ ಉದ್ಯೋಗ ಒದಗಿಸಿವೆ. ಕೊಲ್ಲೂರು, ಕಟೀಲು, ಧರ್ಮಸ್ಥಳ ಮೊದಲಾದ ಪುಣ್ಯ ಕ್ಷೇತ್ರಗಳೊಂದಿಗೆ ಸೂರಾಲ್, ವರಂಗ, ಕಾರ್ಕಳ, ಮೂಡಬಿದ್ರೆ ಮೊದಲಾದೆಡೆ ಜೈನ ಸಂಸ್ಕೃತಿಯ ಕೇಂದ್ರಗಳನ್ನು ಗಮನಿಸಿಬಹುದಾಗಿದೆ. ಈ ಭಾಗದ ಕೆಲವು ಗ್ರಾಮೀಣ ಪ್ರದೇಶಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿದ್ದು ಇನ್ನು ಅಭಿವೃದ್ಧಿಯನ್ನು ಕಾಣಬೇಕಾಗಿದೆ.

೨.೨.೩ ಇತಿಹಾಸ

ತುಳುನಾಡು, ತುಳುವದ ಪ್ರಾಚೀನತೆ ಅಥವಾ ಆ ಹೆಸರಿಗೆ ಕಾಲವನ್ನು ನಿಗದಿಕೊಳಿಸುವುದು ಅಸಾಧ್ಯ. ಆ ಪ್ರದೇಶದ ವ್ಯಾಪ್ತಿಯನ್ನು ಗುರುತಿಸುವುದು ಚರ್ಚಾಸ್ಪದ ವಿಷಯ. ತುಳುನಾಡಿನ ಐತಿಹಾಸಿಕ ಹಿನ್ನೆಲೆಯನ್ನು

ಅವಲೋಕಿಸಿದರೆ ಈ ಭೂ ಪ್ರದೇಶವು ದೀರ್ಘ ಕಾಲದ ಮತ್ತು ಒಂದು ವ್ಯವಸ್ಥಿತವಾದ ಆಡಳಿತ ವ್ಯವಸ್ಥೆಗೆ ಒಳಪಟ್ಟಿರುವುದು ಅತಿ ವಿರಳ. ಆಡಳಿತಾತ್ಮಕವಾಗಿಯೂ ಗಡಿ ಪ್ರದೇಶಗಳು ಆಯಾ ರಾಜರುಗಳ ಆಡಳಿತದ ಸಂದರ್ಭಗಳಲ್ಲಿ ವ್ಯವಸ್ಥೆಗೊಳ್ಳುತ್ತಲೇ ಹೋಗಿವೆ. ಮೌರ್ಯರ ಕಾಲದಿಂದ ತೊಡಗಿ ಇಂದಿನ ಪ್ರಜಾಪ್ರಭುತ್ವ ಕಾಲದವರೆಗೆ ವಿಭಿನ್ನ ಧರ್ಮಗಳ ಚಕ್ರವರ್ತಿಗಳ, ಸಾಮಂತ, ರಾಜರುಗಳ ಮತ್ತು ಸ್ಥಳೀಯ ಪಾಳೇಯಗಾರರ ಆಡಳಿತಕ್ಕೆ ಒಳಪಡುತ್ತಲೇ ಬಂದಿದೆ. ತುಳುನಾಡಿನ ದೀರ್ಘ ಕಾಲದ ಇತಿಹಾಸ ರಚನೆಗೆ ಶಾಸನಗಳು, ಸಾಹಿತ್ಯ, ವಿದೇಶಿ ಪ್ರವಾಸಿಗಳ ಬರಹಗಳು ಅಗತ್ಯವೆನಿಸುವ ಮಾಹಿತಿಯನ್ನು ಒದಗಿಸುವಲ್ಲಿ ಸಹಾಯಕವೆನಿಸಿವೆ. ಈ ಆಕರಗಳನ್ನು ಬಳಸಿಕೊಂಡು ಹಲವಾರು ಮಹತ್ವದ ಅಧ್ಯಯನಗಳು ನಡೆದಿವೆ. ಇತಿಹಾಸ ರಚನೆಕಾರರು ತುಳುನಾಡಿನ ಇತಿಹಾಸವನ್ನು ಈ ರೀತಿ ಸ್ಥೂಲವಾಗಿ ಗುರುತಿಸುತ್ತಾರೆ.

೧. ಪ್ರಾಚೀನ ತುಳುನಾಡು

೨. ಆಳುಪರ ಕಾಲದ ತುಳುನಾಡು

೩. ವಿಜಯನಗರ ಕಾಲದ ತುಳುನಾಡು

೪. ಕೆಳದಿಯ ನಾಯಕರ ತುಳುನಾಡು

೫. ಹೈದಾರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದ ತುಳುನಾಡು

೬. ಐರೋಪ್ಯರ ಆಳ್ವಿಕೆಯಲ್ಲಿ ತುಳುನಾಡು

೧. ಪ್ರಾಚೀನ ತುಳುನಾಡು

ಕರಾವಳಿ ಪ್ರದೇಶ ತುಳುನಾಡಿನಲ್ಲಿ ಮೊಟ್ಟ ಮೊದಲ ಬಾರಿಗೆ ಮಾನವನು ಕಾಣಿಸಿಕೊಂಡದ್ದು ಯಾವಾಗ ಎಂಬುದಕ್ಕೆ ಸ್ಪಷ್ಟ ಆಧಾರಗಳಿಲ್ಲ. ಪ್ರಾಚೀನ ಕಾಲದಲ್ಲಿ ಪಶ್ಚಿಮ ಘಟ್ಟಗಳು ಮತ್ತು ತಪ್ಪಲು ಪ್ರದೇಶಗಳಲ್ಲಿ ದಟ್ಟವಾದ ಕಾಡುಗಳಿದ್ದಿರಬಹುದು. ಈ ಅರಣ್ಯ ಪ್ರದೇಶದಲ್ಲಿ ನೆಲಸಿ ಅಲ್ಲಿ ಕೃಷಿ ಕಾರ್ಯ ಪ್ರಾರಂಭಿಸುವ ಸಲುವಾಗಿ ಪುರಾತನ ಮಾನವನು ಈ ಕಾಡುಗಳನ್ನು ಅಳಿಸಿರಬೇಕು. ಈ ಕಾರ್ಯವನ್ನು ಮಾಡಬೇಕಾದರೆ ಕಬ್ಬಿಣದ ಕೊಡಲಿಯಂತಹ ಲೋಹದ ಆಯುಧಗಳು ಅಗತ್ಯ, ಆದ್ದರಿಂದ ಪ್ರಸಿದ್ಧ ಪುರಾತತ್ವ ಸಂಶೋಧಕ ರಾಬರ್ಟ್ ಬ್ರೂಸ್ ಫುಟ ಅವರ ಅಭಿಪ್ರಾಯದಂತೆ ತುಳುನಾಡಿನ ಆದಿ ಮಾನವನು ಲೋಹಯುಗಕ್ಕೆ ಸೇರಿದವನಾಗಿರಬಹುದು. ಇದಕ್ಕೆ ಪೂರಕವಾಗಿ ತುಳುನಾಡನ್ನು ಪರಶುರಾಮ ಸೃಷ್ಟಿ ಎಂದೂ ಕರೆಯಲಾಗುತ್ತದೆ. ಆ ದೃಷ್ಟಿಯಿಂದ ತುಳುನಾಡಿನಲ್ಲಿ ಮಾನವನ ಇತಿಹಾಸವು ಸುಮಾರು ೩೦೦೦ ವರ್ಷಗಳ ಹಿಂದೆ ಪ್ರಾರಂಭವಾಯಿತು ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.[೨]

ಪ್ರಚಲಿತ ಐತಿಹ್ಯಗಳ ಪ್ರಕಾರ ಪಶ್ಚಿಮ ಕರಾವಳಿಯನ್ನು ಪರಶುರಾಮ ಸೃಷ್ಟಿಯೆಂದು ಕರೆಯಲಾಗುತ್ತದೆ. ಪರಶುರಾಮ ಎನ್ನುವ ಪೌರಾಣಿಕ ಪುರುಷನು ಸೃಷ್ಟಿಸಿದ. ಈ ಭೂಪ್ರದೇಶವನ್ನು 'ಸಪ್ತ ಕೊಂಕಣ'ವೆಂದು ಪುರಾಣಗಳಲ್ಲಿ ಕರೆಯಲಾಗಿದೆ. ಸಹ್ಯಾದ್ರಿ ಖಂಡ ಮತ್ತು 'ಕೇರಳೋತ್ಪತ್ತಿ' ಗಳಲ್ಲಿ ಈ ಕುರಿತಾದ ಉಲ್ಲೇಖಗಳನ್ನು

ವಿದ್ವಾಂಸರುಗಳು ಗುರುತಿಸಿದ್ದಾರೆ. ಸಹ್ಯಾದ್ರಿ ಖಂಡದಲ್ಲಿನ ವಿವರಣೆ ಪ್ರಕಾರ ಪರಶುರಾಮನು ಸಹ್ಯಾದ್ರಿ ಪರ್ವತ ಶಿಖರದಲ್ಲಿ ನಿಂತು ತನ್ನ ಕೊಡಲಿಯನ್ನು ಪಶ್ಚಿಮಾಭಿಮುಖವಾಗಿ ಎಸೆದು ೧. ಕೇರಳ ೨. ತುಲಂಗಾ ೩. ಸೌರಾಷ್ಟ್ರ ೪. ಕೊಂಕಣ ೫. ಕರಹಟ ೬. ಕರ್ನಾಟ ಎಂಬ ಪ್ರದೇಶಗಳನ್ನು ಸೃಷ್ಟಿಸಿರುವುದಾಗಿದೆ.

ಪರಶುರಾಮ ಸೃಷ್ಟಿಯೆನ್ನಿಸಿದ ಈ ಭೂಪ್ರದೇಶವನ್ನು 'ರಾಮ ಖಂಡ' ಎಂದು ಕರೆಯಲಾಗಿದ್ದು ಆ ಪ್ರದೇಶ ಸುಮಾರು ೧೦೦ ಯೋಜನ ಉದ್ದ ಹಾಗೂ ಏಳು ಯೋಜನ ಅಗಲ ಇರುವುದಾಗಿ ಹೇಳಲಾಗಿದೆ. (೯೦೦ ಮೈಲು ಉದ್ದ ೬೪ ಮೈಲು ಅಗಲ) ಇಲ್ಲಿ ಉಲ್ಲೇಖಿಸಿರುವ ಕೇರಳ ಎಂದರೆ ಇಂದಿನ ಕೇರಳ ರಾಜ್ಯ. ತುಲಾಂಗ ಎಂದರೆ ಇಂದಿನ ತುಳುವ ಪ್ರದೇಶ ಎಂದೂ, ಕರ್ನಾಟ ಎಂದರೆ ಉತ್ತರ ಕನ್ನಡ ಹಾಗೂ ಅವಿಭಜಿತ ದಕ್ಷಿಣ ಕನ್ನಡದ ಹೈಗ ಪ್ರದೇಶ. ಕರಹಟವು ಕರ್ಹಾಡ ಪ್ರದೇಶವಾಗದ್ದು ಈ ಪ್ರದೇಶವು ಕೊಂಕಣ ಮತ್ತು ವೇದಾವತಿ ನದಿ ಪ್ರದೇಶವನ್ನು ಒಳಗೊಂಡಿದೆ. ಬಾರ್ಬರ ಎಂಬ ಪ್ರದೇಶವು ಕಾಡು ಹಾಗೂ ಬೆಟ್ಟ ಪ್ರದೇಶಗಳನ್ನು ಆವರಿಸಿದ್ದು ಇದು ಸೌರಾಷ್ಟ್ರದ ಕಾಥೇವಾರ ಪ್ರದೇಶದ ಉತ್ತರ ಮತ್ತು ಪಶ್ಚಿಮ ಪ್ರದೇಶಗಳನ್ನು ಒಳಗೊಂಡಿದೆ.[೧೮] ಎಂದು ಅಭಿಪ್ರಾಯ ಪಡಲಾಗಿದೆ.

ಪರಶುರಾಮ ಸೃಷ್ಟಿಯ ಈ ಭೂ ಪ್ರದೇಶದ ಕುರಿತಾಗಿ ಲಭ್ಯವಿರುವ ಇನ್ನೊಂದು ಪಠ್ಯದ ಪ್ರಕಾರ, ಪರಶುರಾಮನು ಪಶ್ಚಿಮ ಸಮುದ್ರದಿಂದ ಸೆಳೆದುಕೊಂಡುದೆಂಬ ಆ ತೀರಭೂಮಿಯನ್ನು ಪ್ರಪಂಚ ಹೃದಯ ಎಂಬ ಸಂಸ್ಕೃತ ಗ್ರಂಥದಲ್ಲಿ 'ಸಪ್ತ ಕೊಂಕಣ' ಎಂದಿರುವುದನ್ನು ವಿದ್ವಾಂಸರುಗಳು ಗುರುತಿಸಿದ್ದಾರೆ. ಸಹ್ಯಾದ್ರಿಯ ತಟ ಪ್ರದೇಶವಾದ ಈ ತೀರಭೂಮಿಯನ್ನು ದಕ್ಷಿಣದಿಂದ ಉತ್ತರಾಭಿಮುಖವಾಗಿ ಕೂಪಕ, ಕೇರಲ, ಮೂಷಿಕ, ಆಲುವ, ಪಶು, ಕೊಂಕಣ ಮತ್ತು ಪರಕೊಂಕಣ ಎಂದು ಏಳು ದೇಶಗಳಾಗಿ ಗುರುತಿಸಲಾಗಿದೆ. ಈ ಏಳು ದೇಶಗಳೂ ಪಶ್ಚಿಮ ಕರಾವಳಿಯ ತೀರ ಭೂಪ್ರದೇಶವೆಂಬುದು ಸ್ಪಷ್ಟವಾಗುತ್ತದೆ. 'ಕೂಪಕ', 'ಕೇರಲ' ಮತ್ತು 'ಮೂಷಿಕ' ಈ ಮೂರು ದೇಶಗಳು ಇಂದಿನ ಕೇರಳ ರಾಜ್ಯದ ವ್ಯಾಪ್ತಿಗೆ ಒಳಪಟ್ಟರೆ. 'ಕೊಂಕಣ' ಮತ್ತು 'ಪರ ಕೊಂಕಣ'ಗಳು ಇಂದಿನ 'ಮಹಾರಾಷ್ಟ್ರ'ದ ವ್ಯಾಪ್ತಿಗೆ ಬರುತ್ತವೆ. ನಂತರದ 'ಪಶು' ದೇಶ ಎನ್ನುವುದು ಇಂದಿನ ಉತ್ತರ ಕನ್ನಡದ ಕನ್ನಡ ಪ್ರದೇಶವನ್ನು ಸೂಚಿಸುತ್ತದೆ. 'ಆಲುವ' ಎನ್ನುವ ದೇಶವು ತುಳುನಾಡನ್ನು ಸೂಚಿಸುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ. ಆಲುವ ಖೇಡಕ್ಕೆ ಸಂಬಂಧಿಸಿದ ಶಾಸನಾಧಾರಗಳನ್ನು ಶ್ರೀಯುತ ಗೋವಿಂದ ಪೈಗಳವರು ಉಲ್ಲೇಖಿಸಿದ್ದಾರೆ. ತುಳುನಾಡಿನ ಮತ್ತು ತುಳುವದ ಬಗ್ಗೆ ಅವರು ಚರ್ಚಿಸುತ್ತ ಸಹ್ಯಾದ್ರಿ ಖಂಡದಲ್ಲಿ ಕಂಡುಬರುವ ಶೂರ್ಪಾರಕ, ತಾಲವನ, ಆಲುಕ, ಆಲುವಖೇಡ, ಸಾತೀಯ, ಮಹೀತಲ (ಪಾತಾಲ), ಸತೀಯ ಪುತ್ರ ಎಂಬ ತುಳುನಾಡಿನ ಹೆಸರುಗಳನ್ನು ಹೇಳುತ್ತಾ ಆಲೂಪ ರಾಜರೇ ಆಳುವರೆಂಬ ತುಳುವರೆಂದು, ಆಲೂಕ ವಂಶವೆಂದರೆ ನಾಗನ ವಂಶವೆಂದೂ ಸಮರ್ಥಿಸಿಕೊಂಡಿದ್ದಾರೆ.[೧೯]

ಶ್ರೀಯುತ ಪೊಳಲಿ ಶೀನಪ್ಪ ಹೆಗ್ಗಡೆಯವರು ವಿವಿಧ ವೈದಿಕ ಮತ್ತು ಶಾಸ್ತ್ರಗ್ರಂಥಗಳನ್ನು ಆಧರಿಸಿ ಪ್ರಾಚೀನ ತುಳುನಾಡನ್ನು ಈ ರೀತಿ ಉಲ್ಲೇಖಿಸುತ್ತಾರೆ.

''ಪುರಾಣ ಗ್ರಂಥಗಳ ಪ್ರಕಾರ ಗೋರಾಷ್ಟ್ರ, ತೌಳವ, ಸಾಗರ ಸಂಗಮ ಕ್ಷೇತ್ರ, ನಾಗರಖಂಡ, ತ್ರಿಗರ್ತ, ತುಲುನಾಡು, ಪಾತಾಳ, ಪರಶುರಾಮ ಸೃಷ್ಟಿ, ಪರಶುರಾಮ ಕ್ಷೇತ್ರ ಮೊದಲಾದ ಹೆಸರುಗಳು ಕೇರಳೋತ್ಪತ್ತಿ,

ತೌಳವೋತ್ಪತ್ತಿ, ಸಹ್ಯಾದ್ರಿ ಖಂಡ, ಗ್ರಾಮ ಪದ್ಧತಿ, ಭೂತಾಳ ಪಾಂಡ್ಯನ ಅಳಿಯಕಟ್ಟು, ಮುಂತಾದ ಗ್ರಂಥಗಳಲ್ಲಿ ಕಾಣುತ್ತದೆ. ತುಳು ಜನಪದ ಸಾಹಿತ್ಯದ ಪ್ರಕಾರ ಲಂಕೆ ಲೋಕನಾಡು. ನಾಗೆ ಬೆರ್ಮೆರ ಲೋಕ, ಸಿರ್ತ್ ಸಿದಿ ಲೋಕ, ತುಳುರಾಜ್ಯವೆಂತಲೂ ಕನ್ನಡ ಪ್ರದೇಶದವರು ಕರೆನಾಡು ಅಂದರೆ ಸಮುದ್ರ ಕರೆಯ ನಾಡೆಂತಲೂ, ಇದು ತಗ್ಗಾಗಿರುವುದರಿಂದ ಪಾತಾಳವೆಂತಲೂ, ವಿದೇಶೀಗರು ಅವರ ಭಾಷೆಯಲ್ಲಿ ಲ್ಯುಮೇರಿಯಾ ಎಂತಲೂ, ವಿಜಯ ನಗರದ ರಾಜರು ಕರೆನಾಡು (ಕನ್ನಡ) ಎಂತಲೂ, ಟೀಪ್ಪು ಸುಲ್ತಾನನು ಉತ್ತರ ಕನ್ನಡ, ದಕ್ಷಿಣ ಕನ್ನಡವೆಂತಲೂ, ಇಂಗ್ಲೀಷರು ಕೆನರಾ ಎಂದು ಕರೆದರು.''[೧೫] ಎಂದು ತುಳುನಾಡೆಂಬ ಹೆಸರಿನ ವಿವಿಧ ಮೂಲಗಳನ್ನು ಚರ್ಚಿಸಿದ್ದಾರೆ. ಇದರಿಂದ ತುಳುನಾಡು ವಿವಿಧ ಸಂದರ್ಭಗಳಲ್ಲಿ ಮತ ಧರ್ಮಗಳಿಗೆ ಅನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತಿತ್ತೆಂದು ತಿಳಿದು ಬರುತ್ತದೆ.

ಪ್ರಾಚೀನ ತುಳುನಾಡು ಧಾರ್ಮಿಕ ಹಾಗೂ ಭಾಷಿಕ ಹಿನ್ನೆಲೆಯಲ್ಲಿ ಗುರುತಿಸಲ್ಪಟ್ಟಿರುವುದು ಕಂಡುಬರುತ್ತದೆ. ಈ ಪ್ರದೇಶವನ್ನು 'ನಾಗರ ಖಂಡ' 'ನಾಗಲೋಕ' ಎಂಬ ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಕುರಿತು ಶ್ರೀ ಗೋವಿಂದ ಪೈಗಳು ಪ್ರಾಚೀನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ನಾಗರೆಂಬ ಅನಾರ್ಯ ಜಾತಿಯ ಜನರು ನೆಲೆಸಿದ್ದರು. ಪ್ರಾಯಶಃ ಅವರೇ ಇಲ್ಲಿಯ ಮೂಲ ನಿವಾಸಿಗಳಾಗಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಪ್ರಾಚೀನ ಸಂಸ್ಕೃತಿಯಲ್ಲಿ ಆಯಾ ಜನರಿಗೆ ಆಯಾ ವಿವಿಧ ಲಾಂಛನಗಳು ಇದ್ದಂತೆ ನಾಗರಿಗೆ ಸರ್ಪ ಲಾಂಛನವಿದ್ದಿರಬೇಕು. ಪ್ರಾಯಶಃ ಅವರು ನಾಗ ಪೂಜಕರೂ ಆಗಿದ್ದಿರಬೇಕು. ವೇದಗಳಲ್ಲಿ ಸರ್ಪಾರ್ಥದಲ್ಲಿ ನಾಗ ಎಂಬ ಪದವಿಲ್ಲದಿರುವುದರಿಂದ ಅದನ್ನು ಸಂಸ್ಕೃತದಲ್ಲಿ ಅವರ ಹೆಸರಿಂದ ಎರಕೊಂಡಿರಬೇಕು. ಪುರಾಣಗಳ ಕಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯ 'ಬನವಾಸಿ' ಪ್ರಾಂತ್ಯವು ಇಂದಿನ ಶಿವಮೊಗ್ಗ ಜಿಲ್ಲೆಯ ಕೆಲಭಾಗವು ದಕ್ಷಿಣ ಭಾರತದ ನಾಗರಖಂಡದಲ್ಲಿ ಸೇರಿದ್ದುವೆಂದು ಸ್ಕಂಧ ಪುರಾಣದಿಂದ ತಿಳಿಯುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೬] ಅವರ ಈ ಅಭಿಪ್ರಾಯವನ್ನು ಅವಲೋಕಿಸಿದರೆ ಧಾರ್ಮಿಕ ಹಿನ್ನೆಲೆಯಲ್ಲಿ ಮತ್ತು ಸ್ಥಳೀಯ ಧರ್ಮದ ಆಚರಣೆಯ ಹಿನ್ನೆಲೆಯಲ್ಲಿ ನಾಗರಖಂಡ, ನಾಗಲೋಕ ಎಂಬತ್ಯಾದಿ ಹೆಸರುಗಳು ಬಂದಿರುವುದು ಕಂಡುಬರುತ್ತದೆ. ಬೌದ್ಧರ ಕ್ರಿಸ್ತ ಪೂರ್ವ ಕಾಲದ 'ಜಾತಕಟ್ಟಕಥಾ' ಎಂಬ ಪಾಲಿ ಭಾಷೆಯ ಗ್ರಂಥದಲ್ಲಿ ಬರುವ ವಿದ್ಯಾಧರ ಯುವರಾಜನಾದ ಜೀಮೂತವಾಹನನು ಶಂಖ ಚೂಡನೆಂಬ ನಾಗನ ಪ್ರಾಣವನ್ನು ಉಳಿಸುವ ಬಗ್ಗೆ ತನ್ನ ಪ್ರಾಣವನ್ನು ತೆತ್ತ ಕಥೆಯನ್ನು ಉಲ್ಲೇಖಿಸುತ್ತ ಗೋವಿಂದ ಪೈಗಳವರು ಈ ರೀತಿಯ ಸಮರ್ಥನೆಯನ್ನು ನೀಡುತ್ತಾರೆ. ``ಶಂಖ ಚೂಡನು ಉರಗವೂ ಅಲ್ಲ, ಗರುಡನು ವಿಹಗವೂ ಅಲ್ಲ ಜೀಮೂತವಾಹನನಂತೆಯೇ ಅವರೂ ಮನುಷ್ಯರೆಂದು ಸ್ಪಷ್ಟವಾಗುತ್ತದೆ. ಹಾಗೆಯೇ ಶಂಖ ಚೂಡ ಎಂಬುದು ಆತನ ಅಂಕಿತ ನಾಮವಲ್ಲ ಅಧಿಕಾರ ನಾಮ. ಆತನು ಶಂಖಪಾಲ ಎಂಬ ಕುಲಕ್ಕೆ ಸೇರಿದವನು. ಆ ಶಂಖ ಚೂಡ ಎಂಬುದರ ಚೂಡ ಎಂಬ ಪದದಿಂದ ಆ ಶಂಖಪಾಲ ಕುಲದ ಪ್ರಾಯಶಃ ನಾಯಕನೆಂದು ತಿಳಿಯುತ್ತದೆ. ಇದೆಲ್ಲವನ್ನು ಪರ್ಯಾಲೋಚಿಸಿದಾಗ 'ಶಂಖ' (ಚಂಗ)ವೇ ಸಂಸ್ಕೃತಿಸಲ್ಪಟ್ಟು 'ಶಂಖ' ಎಂದಾದ ಆಂಶಿಕ ಕುಲದ ನಾಗರು ಪಶ್ಚಿಮ ಕರಾವಳಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಕನ್ಯಾಕುಮಾರಿಯವರೆಗೆ ನೆಲೆಸಿದ್ದರೆಂದೂ ವ್ಯಕ್ತವಾಗುತ್ತದೆ.''[೧೭] ಪುರಾಣಗಳ ಕಾಲಕ್ಕೆ ಬಹಳ ಹಿಂದಿನಿಂದ ಉತ್ತರ

ಕನ್ನಡ ಜಿಲ್ಲೆಯ ಕರಾವಳಿಯ ಪ್ರದೇಶವೂ ನಾಗರಖಂಡದಲ್ಲಿ ಒಳಪಟ್ಟಿರಬೇಕೆಂದೂ, ಶಂಕಪಾಲ ಕುಲದವನೆಂಬ ಶಂಖ ಚೂಡನು ಶಂಖ ಜಾತಿಯ ನಾಗನೇ ಸರಿ ಎಂದೂ ಅಭಿಪ್ರಾಯ ಪಡಲಾಗಿದೆ. ಕರಾವಳಿಯ ತುಳುನಾಡು ಪ್ರಾಚೀನ ಕಾಲದಲ್ಲಿ ಅನಾರ್ಯರಾದ ಶಂಖರೆಂಬ ನಾಗರ ನೆಲೆಮನೆಯಾಗಿತ್ತೆಂದೂ ಉಲ್ಲೇಖಿಸಿರುವುದು ಕಂಡುಬರುತ್ತದೆ.

ಪ್ರಚಲಿತವಿರುವ ಐತಿಹ್ಯ ಮತ್ತು ಪುರಾಣಗಳನ್ನು ಉಲ್ಲೇಖಿಸಿ ಶ್ರೀ ಸೀನಪ್ಪ ಹೆಗ್ಗಡೆಯವರು ಗೋಕರ್ಣದಿಂದ ಕನ್ಯಾಕುಮಾರಿಯ ವರೆಗಿನ ಪಶ್ಚಿಮ ಕರಾವಳಿಯು ಒಂದು ಏಕೀಕೃತ ಆಡಳಿತ ವ್ಯವಸ್ಥೆಗೆ ಒಳಪಟ್ಟಿತ್ತೆಂದು ಅಭಿಪ್ರಾಯ ಪಡುತ್ತಾರೆ. ಮಹಾಭಾರತ ಆದಿಪರ್ವದಲ್ಲಿರುವ ವಿಷಯವನ್ನು ಉಲ್ಲೇಖಿಸುತ್ತಾ ಯಯಾತಿಯ ಪುತ್ರನಾದ ತುರ್ವಸು ಎಂಬವನು ತಂದೆಯ ರಾಜ್ಯವನ್ನು ತ್ಯಜಿಸಿ ಪಾತಾಳಕ್ಕೆ ಹೋಗಿ ಅಲ್ಲಿ ನಾಗಕನ್ನಿಕೆಯರನ್ನು ವಿವಾಹವಾಗುತ್ತಾನೆ. ನಂತರ ನಾಗರಾಜನು ಬಳುವಳಿಯಾಗಿ ತುಳು, ಮಲೆಯಾಳಿ ಮತ್ತು ಕೂಪ ರಾಜ್ಯಗಳನ್ನು ಈತನಿಗೆ ಕೊಡುತ್ತಾನೆ. ಇದರಿಂದ ತುಳುನಾಡು ಪಾತಾಳ ಲೋಕವೆಂದು ಗುರುತಿಸಲ್ಪಡುವುದಲ್ಲದೆ ತುಳುವರು, ಮಲೆಯಾಳಿಗಳು, ತೊದವರು ಇವನ ಸಂತತಿಯವರಾಗಿರಬೇಕೆಂದು ಅಭಿಪ್ರಾಯ ವ್ಯಕ್ತಪಡುತ್ತಾರೆ.[೨೬] ಇದರಿಂದ ಕರಾವಳಿಯ ಈ ತೀರಪ್ರದೇಶವು ಪುರಾತನದಲ್ಲಿ ಸಾಂಸ್ಕೃತಿಕವಾಗಿ ಒಂದೇ ವ್ಯವಸ್ಥೆಯಲ್ಲಿದ್ದಿರಬೇಕೆಂದು ತಿಳಿಯಬಹುದಾಗಿದೆ. ನಂತರದ ದಿನಗಳಲ್ಲಿ ಆಡಳಿತಾತ್ಮಕವಾಗಿ ಕೇರಳ ಮತ್ತು ತುಳುನಾಡು ಪ್ರತ್ಯೇಕಗೊಂಡಿರಬೇಕು. ಪ್ರಾಚೀನ ತುಳುನಾಡಿಗೆ ಸಂಬಂಧಿಸಿದಂತೆ ಈ ರೀತಿಯ ಬೇರೆ ಬೇರೆ ಕಥೆಗಳು ಮತ್ತು ಐತಿಹ್ಯಗಳು ಪ್ರಚಲಿತದಲ್ಲಿವೆ.

ಕ್ರಿ. ಪೂ ೨೬೩ ನೇ ಸಿದ್ದಾಪುರದ ಅಶೋಕನ ಶಾಸನದಲ್ಲಿ ಕಂಡುಬರುವ ಉಲ್ಲೇಖದ ಕುರಿತು ವಿದ್ವಾಂಸರು ಬಗೆ ಬಗೆಯಾಗಿ ಚರ್ಚಿಸಿದ್ದಾರೆ. ತುಳು ರಾಜ್ಯವನ್ನು 'ಸತ್ಯಪುತ್ರ'ರೂ ಮಲಯಾಳ ರಾಜ್ಯವನ್ನು 'ಕೇರಳ ಪುತ್ರ'ರೂ ಆಳುತ್ತಿದ್ದರೆಂಬ ವಿಚಾರವನ್ನು ವಿದ್ವಾಂಸರು ವ್ಯಕ್ತಪಡಿಸುತ್ತಾರೆ.[೨೭] ಕ್ರಿ.ಶ ಮೊದಲ ಶತಮಾನಗಳಲ್ಲಿ ರಚಿತವಾಗಿದೆ ಎಂದು ಭಾವಿಸಲಾಗಿರುವ ತಮಿಳಿನ ಸಂಘಂ ಕಾಲದ ಪದ್ಯಗಳಲ್ಲಿ ತುಳುನಾಡಿನ ಉಲ್ಲೇಖವಿದೆ. ಇಲ್ಲಿ ತುಳುನಾಡಿನ 'ಕೋಶರ' ಎಂಬ ಜನಾಂಗವನ್ನು ಪ್ರಸ್ತಾಪಿಸಲಾಗಿದೆ. ಇವರು ಕ್ರಿ.ಶ ದ ಆರಂಭದ ಶತಮಾನಗಳಲ್ಲಿ ತುಳುನಾಡಿನಲ್ಲಿ ಪ್ರಮುಖರಾಗಿದ್ದ ಜನಾಂಗ ಎಂದು ಇತಿಹಾಸಕಾರ ಡಾ.ಕೆ.ವಿ ರಮೇಶ್ ಅಭಿಪ್ರಾಯಪಡುತ್ತಾರೆ.[೨೮] ಗ್ರೀಸ್ ದೇಶದ ಭೂಗೋಳ ಶಸ್ತ್ರಜ್ಞ ಟಾಲೆಮಿಯು (ಕ್ರಿ.ಶ ೨ ನೇ ಶತಮಾನ) ಭಾರತದ 'ಒಲೊಖೊಯ್ರ' ಎಂಬುದು ಕಡಲ್ಗಳರ ಕೇಂದ್ರವಾಗಿತ್ತು ಎಂದು ಹೇಳುತ್ತಾನೆ. ಈ 'ಒಲೋಖೊಯ್ರ'ವು 'ಆಳುವ ಖೇಡ' ಎಂದರೆ ತುಳು ನಾಡು ಆಗಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ತುಳುನಾಡಿನ ಮೇರೆಯನ್ನು ಕುರಿತು ಹಿರಿಯ ಇತಿಹಾಸಕಾರ 'ಬಿ.ಎ.ಸಾಲೆತ್ತೂರು' ಅವರು ತುಳುವ ರಾಜ್ಯ ಉತ್ತರದಲ್ಲಿ ಕೋಕರ್ಣದಿಂದ ಆರಂಭವಾಗಿ ದಕ್ಷಿಣದಲ್ಲಿ ಪೆರುಂಪುಳ ಈಗಿನ (ಚಂದ್ರಗಿರಿ ಅಥವಾ ಪಯಸ್ವಿನಿ ನದಿಯ) ತನಕ ವಿಸ್ತರಿಸಿದೆ. ಪಯಸ್ವಿನಿ ನದಿಯ ಉತ್ತರಕ್ಕೆ ತುಳು ಮೂವತ್ತೆರಡು ಗ್ರಾಮಗಳೆಂದು ಭೂತಾರಾಧನೆಯ ಪಾಡ್ದನಗಳಲ್ಲಿ ಕಂಡುಬರುತ್ತದೆ. ಎಂದು ಅಭಿಪ್ರಾಯ ಪಡುತ್ತಾರೆ.[೨೯] ಪ್ರಾಚೀನ ತುಳುನಾಡಿನ ಇತಿಹಾಸವು ಲಿಖಿತ ಸ್ಪಷ್ಟ ಶಾಸನಾಧಾರಗಳು ಇಲ್ಲದೆ ರೂಪಿತವಾಗಿದ್ದರೂ

ಸುಮಾರು ಕ್ರಿ.ಶ ದ ಆರಂಭದ ಕಾಲದಿಂದ ತುಳುನಾಡು ಅಸ್ತಿತ್ವದಲ್ಲಿ ಇತ್ತು ಎನ್ನುವುದಕ್ಕೆ ಹಲವು ಆಧಾರಗಳು ದೊರೆಯುತ್ತವೆ.

ಆಳುಪರು

ತುಳುನಾಡನ್ನು ಆಳಿದ ಮೊದಲ ಜನಾಂಗ ಆಳುಪರು ಎಂಬುದು ಶಾಸನಗಳಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಕ್ರಿ.ಶ ೬೫೦ ರ ಕಾಲದ ಒಂದನೆಯ ಆಳ್ವರಸನಿಂದ ಈ ಆಳ್ವಿಕೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಆಳುಪರ ಆಳ್ವಿಕೆ ತುಳುನಾಡಿನಲ್ಲಿ ಕ್ರಿ.ಶ ೧೪ ನೇ ಶತಮಾನದ ಕೊನೆವರೆಗೆ, ಅಂದರೆ ಸುಮಾರು ೧.೨೦೦ ವರ್ಷಗಳ ಕಾಲ ದೀರ್ಘವಾಗಿ ಆಡಳಿತ ನಡೆಸಿರುವುದು ತಿಳಿದು ಬರುತ್ತದೆ.

ಈ ಮನೆತನದವರಿಂದಲೇ ತುಳುನಾಡು 'ಆಳ್ವಖೇಡ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆಳುಪ ಮನೆತನದ ಆಳ್ವಿಕೆಯನ್ನು ಪ್ರಾಚೀನ ಆಳುಪರು. ಮಧ್ಯಯುಗೀನ ಆಳುಪರು ಮತ್ತು ಕೊನೆಯ ಆಳುಪರು ಎಂಬುದಾಗಿ ಮೂರು ಹಂತಗಳಾಗಿ ವಿಂಗಡಿಸಲಾಗಿದೆ. ಇವರ ರಾಜಧಾನಿ ಮೊದಲು ಮಂಗಲಾಪುರ ಇಂದಿನ ಮಂಗಳೂರು ಆಗಿತ್ತು. ಅನಂತರ ಉದಯಪುರ (ಉದ್ಯಾವರ) ಕ್ಕೆ ಬದಲಾಯಿತು. ಆ ಬಳಿಕ ಬಾರಹ ಕನ್ಯಾಪುರ (ಬಾರಕೂರು) ಕೇಂದ್ರ ಸ್ಥಳವಾಯಿತು. ಕ್ರಿ.ಶ ೧೪ ನೇ ಶತಮಾನದ ಪೂರ್ವಾರ್ಧದಲ್ಲಿ ತುಳುನಾಡನ್ನು ಒಶಪಡಿಸಿಕೊಂಡ ಹೊಯ್ಸಳರು ಮತ್ತು ವಿಜಯ ನಗರದ ರಾಜರು ಬಾರಕೂರನ್ನೇ ತುಳುನಾಡಿನ ರಾಜಧಾನಿಯನ್ನಾಗಿ ಮಾಡಿಕೊಂಡರು. ಆಳುಪರ ಕೊನೆಯ ದಿನಗಳಲ್ಲಿ ಮೂಡಬಿದ್ರೆಯನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡರೆಂದು ತಿಳಿದು ಬರುತ್ತದೆ.

ಆಳುಪರು ಕನ್ನಡ ರಾಜರಾಗಿದ್ದರು. ಇವರ ಕಾಲಕ್ಕೆ ಸೇರದ ಎಲ್ಲಾ ಶಾಸನಗಳು ಕನ್ನಡ ಅಥವಾ ಸಂಸ್ಕೃತ ಭಾಷೆಯಲ್ಲಿವೆ. ಇವರು ಸೋಮವಂಶದವರು. ಮೀನು ಲಾಂಛನದವರು. ಇವರು ಶೈವಧರ್ಮೀಯರಾಗಿದ್ದರು. ಮಧ್ಯಯುಗೀನ ಆಳುಪರ ಕೊನೆಯ ದಿನಗಳಲ್ಲಿ ಅಂದರೆ ೧೩೩೩ ರಿಂದ ೧೩೪ ರ ವರೆಗಿನ ಅವಧಿಯಲ್ಲಿ ಹೊಯ್ಸಳರು ತುಳುನಾಡನ್ನು ಆಳುತ್ತಾರೆ.

ವಿಜಯನಗರ ಕಾಲದ ತುಳುನಾಡು

ಕ್ರಿ.ಶ ೧೩೪೫ ರಲ್ಲಿ ತುಳುನಾಡು ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನವಾಯಿತು. ತುಳು ರಾಜ್ಯವು ಈ ಸಮಯದಲ್ಲಿ ಮಹಾಮಂಡಲೇಶ್ವರ ಪಾಂಡ್ಯ ದೇವರಾಯನ ಕೈಕೆಳಗಿತ್ತು. ವಿಜಯನಗರದ ಹರಿಹರರಾಯನಿಗೆ ತುಳು ಅರಸರೆಲ್ಲರೂ ಶರಣಾಗತರಾಗಿ ಅವನ ಅದಿಪತ್ಯವನ್ನು ಒಪ್ಪಿಕೊಂಡರು. ತುಳು ರಾಜ್ಯದ ಅದಿಪತ್ಯವನ್ನು ವಹಿಸಿಕೊಂಡ ವಿಜಯನಗರದ ಅರಸರು ಆಡಳಿತ ಅನುಕೂಲಕ್ಕಾಗಿ ತುಳುನಾಡನ್ನು ಬಾರಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ ಎಂದು ಎರಡು ವಿಭಾಗ ಮಾಡಿಕೊಂಡರು ಆ ರಾಜ್ಯಗಳ ಆಡಳಿತವನ್ನು ನೋಡಿಕೊಳ್ಳಲು ತಮ್ಮ ಪರವಾಗಿ ರಾಜ್ಯಪಾಲರುಗಳನ್ನು ನೇಮಿಸಿದ್ದರು. ಬಾರಕೂರಿನ ಅಧಿಕಾರಯ ಹೆಸರು ರಾಯನೆಂದೂ, ಮಂಗಳೂರಿನ ಆಧಿಕಾರಿಯ ಹೆಸರು ಒಡೆಯನೆಂದೂ ಕರೆಯಲಾಗುತಿತ್ತು. ಈ ರಾಜ್ಯಪಾಲರುಗಳು ವಿಜಯನಗರದ ಅರಸರ ಪರವಾಗಿ ತುಳುನಾಡನ್ನು ಆಳುತ್ತಿದ್ದರು. ಇವರ ಆಳ್ವಿಕೆಗೆ ಸಂಬಂಧಪಟ್ಟಂತೆ ಅನೇಕ ಶಿಲಾ ಮತ್ತು ತಾಮ್ರ ಶಾಸನಗಳು ತುಳುನಾಡಿನಲ್ಲಿ ದೊರೆತಿವೆ.

ವಿಜಯ ನಗರ ಅರಸರ ಕಾಲದಲ್ಲಿ ತುಳುನಾಡಿನಲ್ಲಿ ಅನೇಕ ಸಣ್ಣ ಪುಟ್ಟ ಅರಸು ಮನೆತನಗಳು ತಲೆ ಎತ್ತಿದವು. ಅವುಗಳಲ್ಲಿ ಕಾರ್ಕಳ, ನಗರೆ, ಕಳಸ, ಹಾಡುವಳ್ಳಿ, ಚೌಟ, ಬಂಗ,ಅಜಿಲ, ಹೆಗ್ಗಡೆ, ಸಾಮಂತ ಮೊದಲಾದ ಮನೆತನಗಳು ಸಾಕಷ್ಟು ಪ್ರಾಬಲ್ಯವನ್ನು ಪಡೆದಿದ್ದವು. ಈ ಮನೆತನಗಳಲ್ಲಿ ಹೆಚ್ಚಿನವು ಜೈನ ಧರ್ಮಕ್ಕೆ ಸೇರಿದ್ದವು. ಕಾರ್ಕಳ, ಮೂಡಬಿದ್ರಿ, ವಾರಂಗ, ವೇಣೂರು ಮುಂತಾದ ಜೈನಕೇಂದ್ರಗಳಲ್ಲಿ ಈ ಅರಸು ಮನೆತನಗಳ ಶಾಸನಗಳು ಮತ್ತು ಶಿಲ್ಪಕಲೆಗಳು ಕಂಡುಬರುತ್ತವೆ. ಇವರೆಲ್ಲರೂ ವಿಜಯ ನಗರ ರಾಜರುಗಳ ಸಾಮಂತರಾಗಿದ್ದು, ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದುದು ಕಂಡು ಬರುತ್ತದೆ. ಆ ಕಾಲದಲ್ಲಿ ಬಾರಕೂರು, ಬಸರೂರು, ಮೂಡಬಿದರೆ, ವೇಣೂರು ಮುಂತಾದವುಗಳು ಪ್ರಧಾನ ವಾಣಿಜ್ಯ ಪಟ್ಟಣಗಳಾಗಿದ್ದುವಲ್ಲದೆ ಮಂಗಳೂರು, ಬಾರಕೂರು ಮೊದಲಾ ಬಂದರುಗಳು ವಿದೇಶಿ ವ್ಯಾಪಾರದ ಪ್ರಧಾನ ಕೇಂದ್ರಗಳಾಗಿದ್ದವು. ವಿಜಯನಗರದ ಅಂತ್ಯ ಕಾಲದಲ್ಲಿ ಪೋರ್ಚುಗೀಸರು ತುಳುನಾಡನ್ನು ಆಕ್ರಮಿಸಲು ಯತ್ನಿಸಿದ್ದರು. ಉಳ್ಳಾಲದ ರಾಣಿ ಅಬ್ಬಕ್ಕದೇವಿಗೂ ಪೋರ್ಚುಗೀಸರಿಗೂ ಯುದ್ಧಗಳು ಆಗಾಗ ನಡೆಯುತ್ತಿದ್ದವು. ನಂತರದ ಕಾಲದಲ್ಲಿ ಇಕ್ಕೇರಿ (ಕೆಳದಿ) ನಾಯಕರು ತುಳುನಾಡನ್ನು ವಶಪಡಿಸಿಕೊಂಡರು.

ಕೆಳದಿಯ ನಾಯಕರ ಕಾಲದ ತುಳುನಾಡು

ವಿಜಯನಗರ ಸಾಮ್ರಾಜ್ಯವು ಕ್ರಿ.ಶ ೧೫೬೫ರ ರಕ್ಕಸತಂಗಡಿ ಯುದ್ಧದಲ್ಲಿ ನಾಶವಾದ ಮೇಲೆ ತುಳುನಾಡು ಕೆಳದಿ ನಾಯಕರ ಆಳ್ವಿಕೆಗೆ ಒಳಪಟ್ಟಿತು. ಇವರಲ್ಲಿ ಶಿವಪ್ಪನಾಯಕನು ಪ್ರಸಿದ್ಧನಾದವನು. (ಕ್ರಿ.ಶ ೧೬೪೬ - ೧೬೬೧)

ಶಿವಪ್ಪ ನಾಯಕನು ಬೇರೆ ಬೇರೆ ರಾಜ್ಯಗಳಿಂದ ನಾನಾ ಜನಾಂಗಗಳವರನ್ನು ತುಳುನಾಡಿಗೆ ತರಿಸಿದನು. ಅದರಲ್ಲಿ ರಾಮರಾಜ ಕ್ಷತ್ರಿಯರು, ಗೋವೆಯಿಂದ ಬಂದ ವೈಷ್ಣವ ಸಾರಸ್ವತರು ಪ್ರಮುಖ ಜಾತಿಗಳವರು. ಇಕ್ಕೇರಿಯ ಅರಸರ ಕಾಲದಲ್ಲಿ ಅನೇಕ ಕೋಟೆ ಕೊತ್ತಲಗಳನ್ನು ಕಟ್ಟಿಸಲಾಯಿತು. ಬೇಕಲ, ಚಿತ್ತಾರಿ, ಚಂದ್ರಗಿರಿ ಕೋಟೆಗಳನ್ನು ಭದ್ರಪಡಿಸಲಾಯಿತು. ಶಿವಪ್ಪನಾಯ್ಕನ ಕಾಲದಲ್ಲಿ ಕಂದಾಯ ವ್ಯವಸ್ಥೆಯು ಬಹಳ ಕ್ರಮಬದ್ಧವಾಗಿತ್ತು. ಭೂಮಿಯ ವಿಂಗಡಣೆ, ಸರಕಾರದ ವತಿಯಿಂದ ಕೃಷಿ ಮಾಡಿಸುವಿಕೆ ಮುಂತಾದ ಪದ್ಧತಿಯು 'ಶಿವಪ್ಪನಾಯಕನ ಶಿಸ್ತು' ಎಂಬುದಾಗಿ ಜನಜನಿತವಾಗಿತ್ತು. ಮುಂದಿನ ದಿನಗಳಲ್ಲಿ ಇಕ್ಕೇರಿ ಸಂಸ್ಥಾನವು ಹೈದರಾಲಿಯ ಸ್ವಾಧೀನವಾಯಿತು. ಸುಮಾರು ಕ್ರಿ.ಶ ೧೮ ನೆಯ ಶತಮಾನದ ಅಂತ್ಯದವರೆಗೂ ತುಳುನಾಡನ್ನು ಇಕ್ಕೇರಿ ನಾಯಕರು ಆಳಿಕೊಂಡಿದ್ದರು.

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದ ತುಳುನಾಡು

ಕೆಳದಿ ನಾಯಕರ ಪತನಾನಂತರ ತುಳುನಾಡು ಹೈದರಾಲಿಯ ಅಧಿಪತ್ಯಕ್ಕೆ ಒಳಪಡುತ್ತದೆ. ತುಳುನಾಡಿನ ಸಾಮಂತ ರಾಜರುಗಳೆಲ್ಲರೂ ಹೈದರಾಲಿಯ ಅಧೀನವನ್ನು ಒಪ್ಪಿಕೊಳ್ಳುತ್ತಾರೆ. ಈ ಕಾಲಕ್ಕಾಗಲೇ ತುಳುನಾಡಿನಲ್ಲಿ ಇಂಗ್ಲೀಷರ ಪ್ರಭಾವ ಕಾಣಿಸಿಕೊಳ್ಳುತ್ತದೆ. ಹೈದರಾಲಿಯ ಬಳಿಕ ಅವನ ಮಗ 'ಟಿಪ್ಪು ಸುಲ್ತಾನ'ನು (೧೭೮೧ ರ ಬಳಿಕ) ತುಳುನಾಡಿನ ಮೇಲಿನ ಅಧಿಕಾರವನ್ನು ಮುಂದುವರೆಸುತ್ತಾನೆ. ಟಿಪ್ಪು ಮತ್ತು ಇಂಗ್ಲೀಷರ ನಡುವೆ ಸದಾ ಕಲಹಗಳು ನಡೆಯುತ್ತಿರುತ್ತವೆ. ಇದರ ಪರಿಣಾಮವಾಗಿ ತುಳುನಾಡಿನಲ್ಲಿ ರಾಜಕೀಯ ಅವ್ಯವಸ್ಥೆ ತಲೆದೋರುತ್ತದೆ. ೧೭೯೯ರಲ್ಲಿ

ಟಿಪ್ಪು ಮಡಿದ ನಂತರ ತುಳುನಾಡು ಸಂಪೂರ್ಣವಾಗಿ ಬ್ರಿಟೀಷರ ಅಧೀನಕ್ಕೆ ಒಳಪಡುತ್ತದೆ. ಸುಮಾರು ೩೧ ವರ್ಷಗಳ ಕಾಲ ತುಳುನಾಡು ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಅಧೀನದಲ್ಲಿತ್ತು. ಇವರ ಕಾಲದಲ್ಲಿ ಸ್ಥಳೀಯ ರಾಜರುಗಳು ತಮ್ಮ ಮಹತ್ವವನ್ನು ಕಳೆದುಕೊಂಡಿದ್ದರು. ಟಿಪ್ಪುವು ತುಳುನಾಡಿನಲ್ಲಿ ಹಲವಾರು ಕೋಟೆಗಳನ್ನು ಕಟ್ಟಿಸಿ ಒಂದೊಂದು ಕೋಟೆಗೆ ಒಬ್ಬೊಬ್ಬ ಖಿಲ್ಲೆದಾರನನ್ನು ನೇಮಿಸಿದ್ದನು. ಬೇಕಲ , ಮಂಗಳೂರು, ಜಮಲಾಬಾದ, ಕುಂದಾಪುರ ಕೋಟೆಗಳಲ್ಲಿ ಒಬ್ಬೊಬ್ಬ ಖಿಲ್ಲೆದಾರನೂ, ಮಂಗಳೂರು, ಬಾರಕೂರು, ಕಾರ್ಕಳ ಎಂಬ ಮೂರು ಜಿಲ್ಲೆಗಳಿಗೆ ಮೂವರು ಅಸೋಫರೂ ಇದ್ದರು. ಈ ಅಧಿಕಾರಿಗಳು ತುಳುನಾಡಿನ ಆಡಳಿತವನ್ನು ನಡೆಸುತ್ತಿದ್ದರು.

ಇಂಗ್ಲೀಷರ ಕಾಲದಲ್ಲಿ ತುಳುನಾಡು ಸ್ಥಳೀಯ ಅರಸರಿಂದ ವಿಮೋಚನೆ ಹೊಂದಿ ಸಂಪೂರ್ಣವಾಗಿ ಒಂದೇ ಆಡಳಿತಕ್ಕೆ ಒಳಪಟ್ಟಿತು. ನಂತರ ತುಳುನಾಡನ್ನು ಕ್ರಿ.ಶ ೧೮೦೦ರಲ್ಲಿ ಮದ್ರಾಸ್ ಅಧಿಪತ್ಯಕ್ಕೆ ಸೇರಿಸಲಾಯಿತು. ಇಂಗ್ಲೀಷರ ಆಳ್ವಿಕೆಯಲ್ಲಿ ಕಾರವಾರದಿಂದ ಮಲಬಾರಿನ ಗಡಿಯವರೆಗೆ ಇದ್ದ ಪ್ರದೇಶವು 'ಕನ್ನಡ ಜಿಲ್ಲೆ' ಎಂದು ಕರೆಯಲ್ಪಡುತ್ತಿತ್ತು. ಕ್ರಿ.ಶ. ೧೮೬೦ರಲ್ಲಿ ಕನ್ನಡ ಜಿಲ್ಲೆಯನ್ನು ಉತ್ತರ ಕನ್ನಡ , ದಕ್ಷಿಣ ಕನ್ನಡ ಎಂಬ ಎರಡು ಜಿಲ್ಲೆಗಳಾಗಿ ವಿಭಾಗಿಸಲಾಯಿತು. ಕ್ರಿ.ಶ ೧೮೬೨ರಲ್ಲಿ ದಕ್ಷಿಣ ಕನ್ನಡವು ಪ್ರತ್ಯೇಕ ಜಿಲ್ಲೆಯಾಗಿ ಮಾರ್ಪಟ್ಟು ಕುಂದಾಪುರ ತಾಲೂಕಿನ ಉತ್ತರಕ್ಕಿದ್ದ ಪ್ರದೇಶವು 'ಉತ್ತರ ಕನ್ನಡ' ಎಂಬ ಹೆಸರಿನಿಂದ ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲ್ಪಟ್ಟಿತ್ತು. ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತ್ಯದ ಭಾಗವಾಯಿತು. ಕಾಸರಗೋಡು ಮಲಬಾರಿನ ಅಧೀನಕ್ಕೆ ಒಳಪಟ್ಟಿತು. ಕ್ರಿ.ಶ ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬರುವಲ್ಲಿಯವರೆಗೆ ಸುಮಾರು ೧೪೭ ವರ್ಷಗಳ ಕಾಲ ಈ ಜಿಲ್ಲೆಯು ಬ್ರಿಟೀಷರಿಂದ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿತು. ನಂತರ ೧೯೫೬ ನವೆಂಬರ್ ೧ ರಂದು ದೇಶದ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಸಂದರ್ಭದಲ್ಲಿ ದಕ್ಷಿಣ ಕನ್ನತ ಮತ್ತು ಉತ್ತರ ಕನ್ನಡಗಳು ಕರ್ನಾಟಕ ರಾಜ್ಯಕ್ಕೆ ಸೇರಲ್ಪಟ್ಟವು. ಕಾಸರಗೋಡು ಕೇರಳ ರಾಜ್ಯಕ್ಕೆ ಸೇರಲ್ಪಟ್ಟಿತು.

೨.೨.೪ ಸಾಂಸ್ಕೃತಿಕ ವೈಶಿಷ್ಟ್ಯ

ತುಳುನಾಡಿಗೆ ತನ್ನದೇ ಆದ ಸಾಂಸ್ಕೃತಿಕ ಪರಂಪರೆ ಇದೆ. ಇಲ್ಲಿನ ಭೌಗೋಳಿಕ ಸ್ವರೂಪವು ಸಾಂಸ್ಕೃತಿಕ ವ್ಯವಸ್ಥೆಯನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗಿದೆ. ತುಳುವಿನೊಂದಿಗೆ ವಿಭಿನ್ನ ಭಾಷೆಯನ್ನಾಡುವ ಜನರು ಇಲ್ಲಿ ಇರುವಂತೆಯೇ ವಿಭಿನ್ನ ಜಾತಿ, ಧರ್ಮ, ಪಂಗಡಗಳಿಗೆ ಸೇರಿದ ಜನರು ಕಂಡುಬರುತ್ತಾರೆ. ಇವರೆಲ್ಲರ ಜನಜೀವನವು ವಿವಿಧತೆಯಲ್ಲಿ ಏಕತೆಯನ್ನು ಪ್ರತಿನಿಧಿಸುತ್ತದೆ. ತುಳುನಾಡಿನಲ್ಲಿ ಹಲವಾರು ಜನಾಂಗಗಳು, ಜಾತಿಗಳು, ಮತ್ತು ಉಪಜಾತಿಗಳು ಕಂಡುಬರುತ್ತವೆ. ಸಾಂಪ್ರದಾಯಿಕವಾಗಿ ಧಾರ್ಮಿಕ ಕಾರ್ಯಗಳನ್ನು ಮಾಡುವ ಬ್ರಾಹ್ಮಣರು ಸಮಾಜದ ಮೇಲ್‌ಸ್ತರದಲ್ಲಿ ಕಂಡುಬರುತ್ತಾರೆ. ಬ್ರಾಹ್ಮಣರಲ್ಲಿ ಶಿವಳ್ಳಿ, ಸ್ಮಾರ್ತ, ಕೋಟ, ಹವಿಕ, ಕಂದಾವರ, ಮೊದಲಾದ ಉಪಜಾತಿಗಳಿವೆ. ಬ್ರಾಹ್ಮಣರು ಕೃಷಿಯೊಂದಿಗೆ ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಗುರುತಿಸಲ್ಪಡುತ್ತಿದ್ದಾರೆ.

ವ್ಯಾಪಾರವನ್ನೇ ಕಸುಬನ್ನಾಗಿಸಿಕೊಂಡಿರುವ ಕೊಂಕಣಿಗರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೊಂಕಣಿಗರಲ್ಲಿ ಪೈ, ಶಾನುಭೋಗ್, ಕಾಮತ್, ಮಲ್ಯ, ಪ್ರಭು, ಮೊದಲಾದ ಉಪಜಾತಿಗಳಿವೆ. ಉಳಿದಂತೆ ಜೈನರು, ಬಂಟರು,

ನಂಬಿಕೆಯಿದೆ. ಉಡುಪಿ (ರಜತ ಪೀಠ, ಶಿವಳ್ಳಿ) ಸುಬ್ರಹ್ಮಣ್ಯ (ಕುಮಾರಾದ್ರಿ, ಕುಕ್ಕೆ) ಕುಂಭಾಶಿ ಕೋಟೇಶ್ವರ, (ಧ್ವಜೇಶ್ವರ) ಶಂಕರನಾರಾಯಣ, (ಕ್ರೋಡ) ಗೋಕರ್ಣ ಮತ್ತು ಕೊಲ್ಲೂರುಗಳು ಕರ್ನಾಟಕದ ಪ್ರಾಚೀನ ಶಿವಪೀಠಗಳು. ಇಲ್ಲಿ ಹಲವಾರು ಶಕ್ತಿ ಮಂದಿರಗಳಿವೆ.

ಕೊಲ್ಲೂರು ಶೈವ ಪೀಠವೂ ಹೌದ ಪ್ರಸಿದ್ಧ ಶಕ್ತ್ಯಾರಾಧ್ಯ ಕೇಂದ್ರವೂ ಹೌದು. ಅದರಂತೆ ಮಂದರ್ತಿ, ಕಟೀಲು, ಪೊಳಲಿ ಮೊದಲಾದೆಡೆ ಪ್ರಶಿದ್ಧ ಶಕ್ತಿ ಮಂದಿರಗಳಿವೆ. ವಿಶೇಷವೆಂದರೆ ಲಿಂಗದ ರೂಪದಲ್ಲಿಯೂ ದುರ್ಗೆಯ ಆರಾಧನೆ ನಡೆಯುತ್ತದೆ. ದ್ವಿಲಿಂಗೋಪಾದಿಯಲ್ಲಿ ಶಂಕರನಾರಾಯಣನನ್ನು ಆರಾಧಿಸುವ ಸಂಪ್ರದಾಯವಿದೆ.

ಸ್ಥಳೀಯ ಆರಾಧನೆಯ ಪ್ರಕಾರಗಳಾದ ನಾಗಾರಾಧನೆ ಮತ್ತು ಭೂತಾರಾಧನೆ ತುಳುನಾಡಿನಲ್ಲಿ ಜನಪ್ರಿಯವಾಗಿದೆ. ನಾಗಾರಾಧನೆಗೆ ಸಂಬಂಧಿಸಿದ ನಾಗಮಂಡಲ, ಡಕ್ಕೆಬಲಿ, ತಂಬಿಲ, ನಾಗದರ್ಶನಗಳು ಭೂತಾರಾಧನೆಗೆ ಸಂಬಂಧ್ಧಪಟಂತೆ ಬೇರೆ ಬೇರೆ ಭೂತಗಳ ಕೋಲ, ನೇಮ, ಧರ್ಮನೇಮ ಅಗೇಲು, ಭೂತಂಬಿಲಗಳು ಜಿಲ್ಲೆಯಾದ್ಯಂತ ಪ್ರಸಿದ್ಧ ಜನಪದ ಆಚರಣೆಗಳಾಗಿವೆ. ತುಳು ಜನಪದ ಸಂಸ್ಕೃತಿಯಲ್ಲಿ ಭೂತಾರಾಧನೆಗೆ ಪ್ರಮುಖ ಸ್ಥಾನ ಕಲ್ಪಿಸಲಾಗಿದೆ. ಜನಪದರ ದೈನಂದಿನ ಆರಾಧನೆಯ ಒಂದು ಅಂಗವಾಗಿ ಭೂತಗಳು ಗುರುತಿಸಲ್ಪಡುತ್ತವೆ. ಉಡುಪಿ ಪರ್ಯಾಯ, ಪಡುಬಿದ್ರಿ ಡಕ್ಕೆಬಲಿ, ಬಪ್ಪನಾಡು ಜಾತ್ರೆ, ಹಿರಿಯಡ್ಕ ಸಿರಿ, ಧರ್ಮಸ್ಥಳ ದೀಪ ಇವು ಇಲ್ಲಿನ ವೈಶಿಷ್ಟ್ಯಪೂರ್ಣ ಸಮಾರಂಭಗಳಾಗಿವೆ.

ತುಳುನಾಡಿನಲ್ಲಿ ಮುಸಲ್ಮಾನ್ ಮತ್ತು ಕ್ರೈಸ್ತ ಬಾಂಧವರ ಹಲವಾರು ಪ್ರಸಿದ್ಧ ಪ್ರಾರ್ಥನಾ ಕೇಂದ್ರಗಳಿವೆ. ಕಾರ್ಕಳ, ಉಡುಪಿ, ಮಂಗಳೂರು ಉಳ್ಳಾಲಗಳಲ್ಲಿ ಈ ಬಾಂಧವರ ಪ್ರಾಚೀನ ಕೇಂದ್ರಗಳಿವೆ. ಇಲ್ಲೆಲ್ಲ ಹಿಂದುಗಳು ಕೂಡ ಪ್ರಾರ್ಥನೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ.

ತುಳನಾಡಿನ ಜನರ ಪ್ರಧಾನ ಕಸುಬು ಬೇಸಾಯ ಭತ್ತ, ತೆಂಗು, ಅಡಿಕೆ, ರಬ್ಬರ್, ಕಾಳು ಮೆಣಸು ಇತ್ಯಾದಿ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ತುಳುನಾಡಿನಿಂದ ಮುಂಬೈಗೆ ವಲಸೆಹೋಗಿರುವ ಹಲವಾರು ಜನಾಂಗದವರು ಅಲ್ಲಿ ವಿಭಿನ್ನ ಕ್ಷೇತ್ರಗಳಲ್ಲಿ ಗುರುತಿಸಲ್ಪಡುತ್ತಿದ್ದಾರೆ. ಮುಖ್ಯವಾಗಿ ಹೋಟೆಲು ಉದ್ಯಮ, ಕೈಗಾರಿಕೆ ಸಿನಿಮಾರಂಗ ಮೊದಲಾದ ಕ್ಷೇತ್ರಗಳಲ್ಲಿ ತುಳುವರು ಹೆಸರುವಾಸಿಯಾಗಿದ್ದಾರೆ.

ಕುಣಿತದ ದೃಷ್ಟಿಯಿಂದ ಈ ಎರಡು ತಿಟ್ಟುಗಳಲ್ಲಿ ಮುಖ್ಯವಾದ ವ್ಯತ್ಯಾಸಗಳಿವೆ.

ಪ್ರಾಚೀನ ಕಾಲದಿಂದಲೂ ತುಳುನಾಡಿನಲ್ಲಿ ಕೆಲವು ಜನಪದ ಕಲಾತ್ಮಕ ವಿನೋದಗಳು ಜನಜೀವನದಲ್ಲಿ ಹಾಸುಹೊಕ್ಕಾಗಿ ಬಂದಿವೆ. ಕೋಳಿ ಅಂಕ, ಕಂಬಳ, ಮೊಸರು ಕುಡಿಕೆ, ಚೆಂಡಿನ ಉತ್ಸವ, ತೆಂಗಿನ ಕಾಯಿ ಆಟ, ತಪ್ಪಂಗಾಯಿ, ಗೇರುಬೀಜದ ಆಟ, ಬಾಲೆಸಾಂತು, ಮೊದಲಾದ ಜನಪದ ಕಲಾ ಪ್ರಕಾರಗಳು ಜನರಿಗೆ ಮನೋರಂಜನೆಯನ್ನು ಒದಗಿಸುತ್ತವೆ. ಧಾರ್ಮಿಕ ಕಲಾ ಪ್ರಕಾರಗಳಾದ ದೇವಸ್ಥಾನಗಳ ಉತ್ಸವ ಮೂರ್ತಿಯ ದರ್ಶನ, ಬಲಿ, ಒತ್ತೆ ಕೋಲ, ಕೋರ ತನಿಯ, ಆಟಿಕಳೆಂಜ, ಎರುಕೋಲ, ಕರಂಗೋಲುಕುಣಿತ, ಸಿದ್ದವೇಶ ಮರ್ದವೇಷ, ಗೊಂದಲ ಪೂಜೆ, ಭಗವತಿಯ ಕೋಲಾಟ, ಕುಣಿತಗಳು ಇಲ್ಲಿನ ಜನರ ಧಾರ್ಮಿಕ ಪ್ರಜ್ಞೆಯ ಜೊತೆಗೆ ಸೌಂದರ್ಯ ದೃಷ್ಟಿಗೂ ಜೀವನದ ಉಲ್ಲಾಸ ಪ್ರವೃತ್ತಿಗೂ ನಿದರ್ಶನಗಳಾಗಿವೆ. ಹರಿಜನರ ಜನಪದ ಕುಣಿತಗಳಾದ ದುಡಿಯ ನೃತ್ಯ, ಡೋಲಿನ ಕುಣಿತ, ಮಾದಿರ ಜೆನ್ನು ಕುಣಿತ ಇತ್ಯಾದಿಗಳು ಸಮಾಜದ ಕೆಳವರ್ಗದ ಜನರಲ್ಲೂ ಕಲೆಯ ವಿಕಾಸವಾಗಿದ್ದುದರ ನಿದರ್ಶನಗಳಾಗಿವೆ. ಸಾಹಸಿ ಕಲೆಯಾದ ಬೇಟೆ ಬಡವರ ಮತ್ತು ಶ್ರೀಮಂತರ ಮನೋರಂಜನೆಯ ಹವ್ಯಾಸವಾಗಿದೆ.

ಮೇಲೆ ತಿಳಿಸಿರುವ ಕಲಾತ್ಮಕ ವಿನೋದಗಳಲ್ಲದೆ ವಿರಾಮದ ವೇಳೆಯಲ್ಲಿ ತುಳುವರು ಕೆಲವು ಜನಪದ ಆಟಗಳನ್ನು ಆಡುತ್ತಾರೆ. ಗಂಡಸರು ಪಗಡೆ, ಚಂದುರಂಗ, ಹುಡುಗರು ಕುಟ್ಟಿದೊನ್ನೆ, ಬುಗರಿ, ಪೇಟ್ಟೆ, ಕಬಡಿ, ಮೊದಲಾದವುಗಳನ್ನಾಡುತ್ತಾರೆ. ಚೆನ್ನೆಮಣೆಯಾಟವನ್ನು ಮಹಿಳೆಯರು, ಹುಡುಗಿಯರು ಆಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಕರಾವಳಿಯ ಈ ಪ್ರದೇಶವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವುದರಿಂದ ಜನಪದ ಆಟಗಳು ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದು ಕಂಡುಬರುತ್ತಿದೆ. ಮಾತೃ ಮೂಲವಾದ ಅಳಿಯ ಕಟ್ಟು ತುಳುನಾಡಿನ ಅನೇಕ ಜನಾಂಗಗಳಲ್ಲಿ ಪ್ರಚಲಿತದಲ್ಲಿದೆ. ಇದು ಈ ಪ್ರದೇಶದಲ್ಲಿ ಹೆಣ್ಣಿಗೆ ಕಲ್ಪಿಸಿರುವ ಸ್ಥಾನಮಾಗಳಿಗೆ ಸಾಕ್ಷಿಯಾಗಿದೆ. ತುಳುಜನಪದ ಸಾಹಿತ್ಯದ ಕೆಲವು ಪ್ರಕಾರಗಳಲ್ಲಿ ಇದರ ಉಲ್ಲೇಖವನ್ನು ಗಮನಿಸಬಹುದು. 'ತುಳುಸಿರಿ'ಯ ಸಂಧಿಯಲ್ಲಿನ ಸಿರಿಯ ಕಥೆಯು ಇಲ್ಲಿ ನಿದರ್ಶನವಾಗಿ ಕಂಡುಬರುತ್ತದೆ. ಈ ನಿಯಮದ ಪ್ರಕಾರ ಸೋದರ ಮಾವನ ಆಸ್ತಿಗೆ ಅಳಿಯನೇ ಹಕ್ಕುದಾರನಾಗುತ್ತಾನೆ. ಇದು ಪ್ರಮುಖವಾಗಿ ಕರಾವಳಿಯ ಬಂಟಜನಾಂಗಗಳಲ್ಲಿ ಮತ್ತಿತರ ಕೆಲವು ಜಾತಿಗಳಲ್ಲಿ ಕಂಡುಬರುತ್ತದೆ. ಇಲ್ಲಿ ಸ್ತ್ರೀಗೆ ಪ್ರಾಧಾನ್ಯತೆ ಹೆಚ್ಚು. ಕುಟುಂಬದ

[illegible]
ಪುಟ-೨.

೦೪. P. K. Parameshvara Nayar, 1967 History of Malayalam litreature, page - 3

೦೫. Koulam Narayana, panikkar, 1991, page -5

೦೬ ಉಪಾಧ್ಯಾಯ. ಯು.ಪಿ, ಸುಶೀಲಾ ಉಪಾಧ್ಯಾಯ, ೧೯೭೫, ಮಲೆಯಾಳ ಭಾಷೆ ಮತ್ತು ಸಾಹಿತ್ಯ ಪುಟ-೧೧.

೦೭. P. K. Parameshvara Nayar, 1967, page -5

೦೮. Krishna Iyar, 1970, page - 1

೦೯. Sridhar Menon, 1979, Social and Cultural History of Kerala p - 4.

೧೦. ಗುರುರಾಜ ಭಟ್ಟ್.ಪಿ, ೧೯೬೩, ತುಳುನಾಡು ಸಾಮಾಜಿಕ ಚರಿತ್ರೆಯಲ್ಲಿ ಒಂದು ಸಂಶೋಧನಾತ್ಮಕ ವಿವೇಚನೆ, ಪುಟ-೭೦.

೧೧. William logan, 1981 Malaber, vol - 1, page - 258

೧೨. ಡಾ.ಕೆ.ವಿ. ರಮೇಶ್, ೧೯೬೪, ತುಳುನಾಡಿನ ಇತಿಹಾಸ, ಪುಟ-೧

೧೩. ಸಹ್ಯಪಾದೇ ಪರಶುರಾಮ ಭೂಮಿ, ಸಾ ಸಪ್ತ ಕೊಂಕಣಾಬ್ಯಾ ಕೂಪಕ, ಕೇರಳ, ಮೂಷಿಕ, ಆಲುವ, ಪಶು, ಕೊಂಕಣ ಪರಕೊಂಕಣ ಭೇದೇನ ದಕ್ಷಿಣೋತ್ತರಾಯಾ ಮೇನ ಚ ವ್ಯವಸ್ಥಿತ ಎಂದಿದೆ.

೧೪. ಹೇರಂಜೆ ಕೃಷ್ಣ ಭಟ್ಟ, ೧೯೯೫, ಗೋವಿಂದ ಪೈ ಸಂಶೋಧನ ಸಂಪುಟ, ಪುಟ-೫೮೭

೧೫. ಬಾಲಕೃಷ್ಣ ಸೆಟ್ಟಿ ಪೊಳಲಿ, ೧೯೯೧, ಶೀನಪ್ಪ ಹೆಗ್ಡೆ ಸಮಗ್ರ ಸಾಹಿತ್ಯ, ಪುಟ-೧೨೨

೧೬. ಹೇರಂಜೆ ಕೃಷ್ಣ ಭಟ್ಟ, ೧೯೯೫, ಪುಟ. ೫೮೨

೧೭. ಅದೇ ಪುಟ-೫೮೩

ಅಧ್ಯಾಯ - ೩

ನಾಗಾರಾಧನೆ : ಈವರೆಗಿನ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆ

೩.೧. ಕನ್ನಡ ಭಾಷಾ ಗ್ರಂಥಗಳು

೩.೨. ಸ್ಮರಣ ಸಂಚಿಕೆಗಳು

೩.೩. ವಾರ ಪತ್ರಿಕೆಗಳು

೩.೪. ದಿನಪತ್ರಿಕೆಗಳು

೩.೫. ಆಂಗ್ಲ ಕೃತಿಗಳು

೩.೬. ಮಲಯಾಳಂ ಕೃತಿಗಳು

೩.೭. ತಮಿಳು ಕೃತಿಗಳು

ದಕ್ಷಿಣ ಭಾರತದ ಪಶ್ಚಿಮ ಕರಾವಳಿಯ ಕೇರಳ ಮತ್ತು ಕರಾವಳಿ ಕರ್ನಾಟಕಗಳಲ್ಲಿ ಪ್ರಚಲಿತವಿರುವ ನಾಗಾರಾಧನೆಯ ಸ್ವರೂಪ ಮತ್ತು ಆಚರಣೆಯ ಕುರಿತಾಗಿ ಹಲವು ರೀತಿಯ ಅಧ್ಯಯನಗಳು ನಡೆದಿವೆ. ವಿವಿಧ ಲೇಖಕರುಗಳ ಸಂಶೋಧನಾತ್ಮಕ ಕೃತಿಗಳು, ಲೇಖನಗಳು, ಕನ್ನಡ, ಇಂಗ್ಲೀಷ್, ತುಳು, ಮತ್ತು ಮಲೆಯಾಳಿ ಭಾಷೆಗಳಲ್ಲಿ ಪ್ರಕಟಗೊಂಡಿವೆ. ಪ್ರಸ್ತುತ ಸಮೀಕ್ಷೆಯಲ್ಲಿ ಈ ಎಲ್ಲ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಕೆಲವು ವಾರಪತ್ರಿಕೆ ಮತ್ತು ದಿನ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳನ್ನು ಕೂಡ ಈ ಸಂದರ್ಭದಲ್ಲಿ ಪರಿಗಣಿಸಲಾಗಿದೆ. ವಸ್ತು, ಶೈಲಿ, ಭಾಷೆಗಳು ವಿಭಿನ್ನವಾಗಿದ್ದರು, ನಾಗಾರಾಧನೆಯ ವ್ಯಾಪಕತೆ ಮತ್ತು ಮಹತ್ವವನ್ನು ಈ ಲೇಖನಗಳು ಪ್ರಚುರಪಡಿಸುತ್ತವೆ. ನಾಗಾರಾಧನೆಯ ಕುರಿತು ಇದುವರೆಗೆ ನಡೆದಿರುವ ಕೆಲಸವನ್ನು ಪರಿಶೀಲಿಸಿ ಪ್ರಸ್ತುತ ಅಧ್ಯಯನದ ಸಾಧ್ಯತೆಗಳನ್ನು ಗುರುತಿಸಿಕೊಳ್ಳುವುದು ಈ ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ. ಲಿಖಿತ ಮತ್ತು ಉಪಲಬ್ಧ ಸಾಹಿತ್ಯ ಪರಂಪರೆಯನ್ನು ಬಳಸಿಕೊಂಡು ಈ ಸಮೀಕ್ಷೆಯನ್ನು ಸಿದ್ಧಗೊಳಿಸಲಾಗಿದೆ.

೩.೧. ಕನ್ನಡ ಭಾಷಾ ಗ್ರಂಥಗಳು

ಕರಾವಳಿ ಕರ್ನಾಟಕದ ನಾಗಾರಾಧನ ಪ್ರಕಾರಗಳಾದ 'ನಾಗಮಂಡಲ ಡಕ್ಕೆಬಲಿ'ಗಳನ್ನು ಕುರಿತು ಮೊದಲ ಅಧ್ಯಯನ ಲೇಖನ ಡಾ. ಕೆ. ಶಿವರಾಮ ಕಾರಂತರಿಂದ ಪ್ರಕಟಗೊಂಡಿವೆ. (ಕಾರಂತ - ೧೯೫೦) ''ಪ್ರಾಚೀನ ದೆವ್ವಾರಾಧನೆಯ ಮೇಲೆ ಆರ್ಯ ಸಂಸ್ಕೃತಿಯ ವರ್ಚಸ್ಸನ್ನು ಬೀರುವ ಕುಣಿತ ವಿಧಾನ ನಾಗಮಂಡಲ''- ಎಂದಿದ್ದಾರೆ.

ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ' (ಕಾರಂತ - ೧೯೬೩) ಗ್ರಂಥದ ನೃತ್ಯ ಎಂಬ ಭಾಗದಲ್ಲಿ ನಾಗಮಂಡಲ ಕುಣಿತದ ಐತಿಹಾಸಿಕತೆಯನ್ನು ಚರ್ಚಿಸಲಾಗಿದೆ. ನಾಗಮಂಡಲದ ವೈದ್ಯರ ನೃತ್ಯವನ್ನು ಕುರಿತು ಉಲ್ಲೇಖಿಸುತ್ತಾ ''ಈ ಕುಣಿತ ಮಾತ್ರ ತೀರ ಸುಂದರವಾದ, ತರಂಗ ಬದ್ಧವಾದ, ಪ್ರತಿಯೊಂದು ಭಾವ ರಸಕ್ಕೂ ಒದಗಿ ಬಂದಿರುವ ನೃತ್ಯ ವಿಧಾನವಾಗಿದೆ, ಯಾವತ್ತು ಶರೀರಕ್ಕೆ ಅದರಲ್ಲಿ ಕೆಲಸವಿದೆ. ನಖಶಿಖಾಂತ ಶರೀರ ವಿನ್ಯಾಸಗಳಿಗೆ, ಕುಣಿತ, ಜಿಗಿತ, ಹಿನ್ನಡೆ, ಮುನ್ನಡೆ, ಕೈ ಬಳುಕು, ಹಾಸ್ಯಕ್ಕೆ, ತಾಂಡವಕ್ಕೆ, ರೌದ್ರಕ್ಕೆ ಸಮಶಕ್ತಿಯಿಂದ ಒದಗಬಲ್ಲ ಚಲನವಲನಗಳಿವೆ. ಯಕ್ಷಗಾನ ಬಯಲಾಟದವರು ಇವಕ್ಕೇನೆ ಋಣಿಗಳಾದರು'' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಯಕ್ಷಗಾನಕ್ಕೂ ಇದಕ್ಕೂ ಇರಬಹುದಾದ ಸಂಬಂಧ, ದೇಸೀಯ ಮತಾಚಾರ, ಮತ್ತು ಡಕ್ಕೆಬಲಿ,

ಶಾಕ್ತ, ಶೈವ, ವೈಷ್ಣವ, ಬೌದ್ಧ ಹಾಗೂ ಜೈನ ಈ ಎಲ್ಲ ಸಂಪ್ರದಾಯಗಳಲ್ಲೂ ನಾಗಪ್ರತಿಮೆಯ ಪೂಜೆಯಿದ್ದರೂ, ಇವೆಲ್ಲವುಗಳ ವಿಕಾಸಕ್ರಮವನ್ನು ಅಲ್ಪಾವಕಾಶದಲ್ಲಿ, ವಿವರಿಸಲು ಶಕ್ಯವಿಲ್ಲ. ಅವರ ಗ್ರಂಥದಲ್ಲಿ ಕೆಲವು ವಿಷಯಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಇಂದಿನ ನಾಗಪೂಜೆಯ ಪ್ರಾಚೀನ ಎಷ್ಟು? ಋಗ್ವೇದ ಕಾಲದಲ್ಲಿ ನಾಗಪೂಜೆ ಇದ್ದೀತೆ? ಋಗ್ವೇದದೊಳಗಿನ ಜೀವನ ಸಮ್ಮುಖ ಪ್ರವೃತ್ತಿ, ಜೀವನ ದೇವತಾಪೂಜೆ ಅಪ್ರತಿಷ್ಠಿತವಾದುದು ಹೇಗೆ? ಏಕೆ? ಎಂಬಿತ್ಯಾದಿ ವಿಷಯಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ನಿನ್ನೆ-ಇಂದು ನಾಳೆಗಳ ದಿಕ್ಕಾಲ-ಪರಿಸರದ ಸಂದರ್ಭದಿಂದ ಮಾನವ ಸಂಸ್ಕೃತಿಯು ಪ್ರವಹಿಸುತ್ತ ಬಂದಿರುವ ಕ್ರಮವಿದು. ಇದು ನಿಜವಿದ್ದರೆ ಆ ನಿನ್ನೆಗಳೊಳಗಿನ ಯಾವ ಯಾವ ಅಂಶಗಳು, ಆ ಬೆಳಕಿನ ಇಂದುಗಳಲ್ಲಿ ಯಾವ ಯಾವ ಕ್ರಮದಿಂದ ಬಂದವು ಎಂಬುದು ಸಂಶೋಧನಾರ್ಹ ವಿಷಯವಾಗುತ್ತದೆ. ಅಥವಾ ಅನೇಕ ನಿನ್ನೆಗಳ ಹಿಂದೆ-ದ್ವಿಪಾದ ಪಶು ಮಾನವನು, ಇನ್ನುಳಿದ ಪಶುವರ್ಗದ ಪರಿಸರದತ್ತ ಕಾಡಿನಲ್ಲಿ ಸಂಗಾತಿಯಾಗಿ ಜೀವಿಸುತ್ತಿದ್ದನು ಎಂಬುದು ನಿಜವಿದ್ದರೆ, ಆ ಹಂತದ ಜೀವನ ರೀತಿಯ ಏನಾದರೂ ಅಂಶಗಳು ಈ ವರೆಗೂ ಉಳಿದು ಬಂದಿರುವಂತಹವು ಉಂಟೆ? ಬೇರೆ ಬೇರೆ ಮಾನವ ಪಂಗಡಗಳಲ್ಲಿ ಇದಕ್ಕೆ ಆಧಾರವಿದೆಯೇ? ಇಲ್ಲವೇ ಈ ಪ್ರಶ್ನೆಯ ರೂಪವು ಹೀಗೂ ಆಗಬಹುದು, ಇಂದು ಇರುವ ಆಚಾರ ವಿಚಾರದ ಆಕೃತಿಗಳಲ್ಲಿ, ಆ ಅನೇಕಾನೇಕ ನಿನ್ನೆಗಳ ತೀರ ಹಿಂದಿನ ಅತಿಪುರಾತನ ಆಕೃತಿಯನ್ನು ಹೋಲುವ ಭಾಗವು ಏನೊಂದು ಉಂಟೊ? ಇವನ್ನು ನಿಶ್ಚಯಿಸಿಕೊಳ್ಳುವುದು ಸಾಧ್ಯವೇ? ಭಾರತೀಯ ಸಂಸ್ಕೃತಿಯಲ್ಲಿ ಪುರಾತನ ಆಪ: ರಸ ಸಂಪ್ರದಾಯಕ್ಕೆ ಸಂಬಂಧ ಪಟ್ಟ ಜೀವನ ಆಕೃತಿ ಹಾಗೂ ಇಂದಿನ ಅವಶಿಷ್ಟ ಆಚಾರಗಳ ಆಕೃತಿ ಇವೆರಡೂ ಒಂದನ್ನೊಂದು ಹೋಲುತ್ತಿದ್ದು ಇದುವೆ ಅತಿಪುರಾನ 'ನಿನ್ನೆ'ಯ ಜೀವನ ರೀತಿಯನ್ನು ಗಮನಕ್ಕೆ ತಂದು ಕೊಡಬಲ್ಲುದಾಗಿದೆ - ಎಂಬುದು ನಾಗಪ್ರತಿಮಾರಾಧನೆ ಸಮೀಕ್ಷೆಯಲ್ಲಿ ಕಂಡುಬರುತ್ತದೆ. ಇದಕ್ಕೆ ಆಧಾರವಾಗಿ ಇಜಿಪ್ತ-'ಗ್ರೀಸ್'ನ ಪವಾಡ ಕಥೆಗಳಿಂದ ಪುಷ್ಟಿ ದೊರೆಯುತ್ತಿರುವುದನ್ನು ವಿವರಿಸಲಾಗಿದೆ.

''ಯೂರೋಪ್ ಖಂಡದ ಭಾಗವಾಗಿರುವ ಗ್ರೀಸ್ ದೇಶದೊಡನೆ ಸಾಂಸ್ಕೃತಿಕ ಸಂಭಂದವಿದ್ದ ಇಜಿಪ್ತ-ಅರೆಬಿಯಾ -ಇರಾಕಗಳ ವರೆಗೆ ಆಪ: ರಸ ಸಂಪ್ರದಾಯಕ್ಕೆ ಸಂಬಂಧ ಪಟ್ಟ ಕಥೆಗಳಿವೆ. ಗ್ರೀಸದ ಪವಾಡ ಕಥೆಗಳಲ್ಲಿ ಇವುಗಳ ಪ್ರಭಾವವಿದ್ದು, ಈ ಕಥೆಗಳ ಬಾಹ್ಯ ಶಬ್ದ ಪ್ರತಿಮೆ ಭಿನ್ನವಾಗಿ ತೋರಿದರೂ ಆತಂರಿಕ ವೈಚಾರಿಕ ಆಕೃತಿ, ಭಾರತೀಯ ಆಪ: ರಸ ಪಂಥೀಯ ವೈಚಾರಿಕ ಆಕೃತಿಯನ್ನೇ ಹೋಲುತ್ತಿರುವುದರ ವಿವರವೂ ಹಿಂದೆ ಬಂದಿದೆ. ಕ್ರೈಸ್ತ ಪಂಥವು

ಕಾಲಾಧಿಷ್ಟಿತವಾದ ಸತ್ಯ ಸೂಚಕವಾಗಿರುತ್ತದೆ. ಎಂದರೆ ಕುಮಾರಿಯ ತಾಯ್ತನದ ಪ್ರತಿಮೆ ಈ ಮಾಧ್ಯಮ ತೀರ ಆರಂಭದಲ್ಲಿ ಸಾಕ್ಷಾತ್ ಜೀವನದ ಅಂದಿನ ಏನೊಂದು 'ಸಮಯದ' ಚಿತ್ರವೇ ಆಗಿದ್ದರೂ, ಈ ಶಬ್ದ ಪ್ರತಿಮೆಯು ಒಳಗೊಳ್ಳುವ ಸಾರ್ವಕಾಲಿಕ ಸಾಂಕೇತಿಕ ಸತ್ಯಾಂಶದ ಮೂಲಕ ಅದು ಕೇವಲ ನಿಸರ್ಗದೊಡನೆ ಬದ್ಧ ಒಂದೇ ಅರ್ಥವುಳ್ಳದ್ದಾಗಿರದೆ ಶಾಶ್ವತ ಸತ್ಯ ಸೂಚಕ ಸಂಕೇತವಾಗುತ್ತದೆ.

'ನಾಗ' ಪ್ರತಿಮೆಯ ಸಮೀಕ್ಷೆಯಲ್ಲಿ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ.

ತ್ರಿಮೂರ್ತಿಗಳೆಂಬ ಬ್ರಹ್ಮ ವಿಷ್ಣು ರುದ್ರ ಈ ಪ್ರತಿಮೆಗಳ ಅರ್ವಾಚೀನ ಆಕೃತಿಗಳು ಎಂತಹವೆ ಇರಲಿ. ಈ ಮೂರರ ತಳಹದಿಯಲ್ಲಿ 'ನಾಗ' ಉಂಟು ''ಪ್ರಪಂಚವೆಲ್ಲ ಒಂದೇ ಸತ್-ತ್ವದಿಂದ ಆಗಿದ್ದು ವಿದ್ವಾಂಸರು ಅದನ್ನು ನಾನಾ ರೂಪಗಳಿಂದ ಆರಾಧಿಸುತ್ತಾರೆ.'' ಎಂದು ಋಗ್ವೇದದ ಕೊನೆಯಲ್ಲಿ ಹೇಳಲಾಗಿರುವ ವಿಚಾರದ ಯಥಾರ್ಥತೆಯೂ ಇದಕ್ಕೆ ಸಾಕ್ಷಿ. 'ನಾಗ' ಪ್ರತಿಮಾ ಪೂಜೆ ಮಾನವ ಸಂಸ್ಕೃತಿಯ ಉಗಮದ ಪರಿಸರವನ್ನು ಕಣ್ಣಳತೆಯಲ್ಲಿ ತರುತ್ತದೆ. ಭಾರತೀಯ 'ಅದಿತಿಗೆ' ಹೋಲುವ 'ಯುರಿಯಾ' 'ಅಫ್ರೋಡೈಟ' ಎಂಬ ಬಗೆಯ ಅಫೋದೇವಿಯರು (ಜಲದೇವಿ ನಾಗಕನ್ಯೆ) ಇಜಿಪ್ತ-ಗ್ರೀಸದತ್ತಣಿನ ಪುರಾತನ ಪವಾದ ಕಥೆಗಳಲ್ಲೂ ಇದ್ದಾರೆ. ಸೃಜನ ಶಕ್ತಿಯ 'ನಾಗ'ನು ಅಲ್ಲಿಯೂ ಕಾಣುತ್ತಾನೆ. ಈ ದೃಷ್ಟಿಯಿಂದ ಮಾನವ ಸಂಸ್ಕೃತಿಯು ಬೆಳೆಯುತ್ತ ಆಕಾರಗೊಂಬುವಲ್ಲಿ ನಾನಾ ವಿಧವಾಗಿ ರೂಪುಗೊಳ್ಳುತ್ತ ಹೊರಟಿದ್ದರೂ ಅದರ ಉಗಮದಲ್ಲಿ ಎಲ್ಲ ಜನಾಂಗಳಲ್ಲೂ ಸುಮಾರಾಗಿ ಜಲ-ಜಲಕನ್ಯೆ, ನಾಗ ಇರುವುದು ನಿಶ್ಚಿತವಾಗುತ್ತದೆ.

ಭಾರತೀಯ ಸಂಸ್ಕೃತಿಯು ಮುಂದಿನ ಹಂತಗಳಲ್ಲಿ ನಾನಾ ಶಾಖೋಪಶಾಖೆಗಳಾಗಿ ಹಬ್ಬುತ್ತ ಹೊರಟರೂ ಅಪ, ರಸ-ನಾಗದ ಹಂತದಲ್ಲಿ ಶಾಕ್ತ, ಶೈವ, ವೈಷ್ಣ ಪಂಥಗಳು ಮಾತ್ರವಲ್ಲ. ಜೈನ, ಬೌದ್ಧ ಮತಗಳ ಉಗಮವೂ ಇಲ್ಲಿಯೆ ಇರುವುದಾಗಿ ಅರಿಕೆಗೆ ಬರುತ್ತದೆ. ಭಾರತೀಯ ಸಂಸ್ಕೃತಿಯೆಳಗಿನ ಏಕಾತ್ಮ ಕಥೆಯ ಪಾತಳಿಯು ಇಲ್ಲಿರುವುದು ಕಾಣುತ್ತದೆ.

'ನೀರು' ಜೀವನವು ನಿಜ, ಆದರೆ ಜೀವನ 'ನೀರಗುಳ್ಳೆ' ನೀರಿಗೆ ಸ್ವಂತದ ಆಕೃತಿಯು ಇಲ್ಲ, ಆದಕಾರಣ ಸಮತ್ವ ಏಕರೂಪತೆ ಆದಿಯಲ್ಲಿದೆ. ಈ ಸಮತ್ವ, ಏಕರೂಪತೆ ಎಂದರೆ ಮೃತ್ಯುರೂಪ, ಅಮವಾಸ್ಯೆ ಮೊದಲು ಪ್ರತಿಪದೆ ಮಿಡಿನಾಗ, ಚಂದ್ರನ ಕುಡಿ ಬೆಳಕಿನದು, ಇದು ಪ್ರಾಥಮಿಕ ಮೂಲ ಶ್ರದ್ಧೆ.

ನಾನಾ ದೇವತಾ ರೂಪದಲ್ಲಿ ಭಾರತೀಯ ಜೀವನ ದರ್ಶನವಾಗಿ ಅವರ ಬಾಳನ್ನು ರೂಪಿಸಿರುವ ಈ ನಾಗ ಸಂಕೇತಸ್ಥ ಅರ್ಥ ಗ್ರಹಣದ ಪ್ರಯತ್ನವೇ ಈ ಪ್ರಬಂಧ.

ಯಜ್ಞ ನಾರಾಯಣ ಉಡುಪ (೧೯೭೫ - ೨೦೮ - ೨೨೦) 'ಪುರಾಣ ಭಾರತ ಕೋಶ' ಗ್ರಂಥದಲ್ಲಿ ನಾಗ ಸರ್ಪಗಳ ಉಲ್ಲೇಖ ಕಂಡುಬರುತ್ತದೆ. ಶ್ರಾವಣ ಶುದ್ಧ ಪಂಚಮಿಯಂದು ಆಚರಿಸುವ 'ನಾಗರ ಪಂಚಮಿ' ಹಬ್ಬದ ಹಿನ್ನೆಲೆಯನ್ನು ವಿವರಿಸುತ್ತಾ ''ನಾಗವು ವಿಶ್ವದ ಪ್ರತಿಯೊಂದು ಜನಾಂಗವೂ ಭಯ ಭಕ್ತಿಗಳಿಂದ ಆದರಿಸಿಕೊಂಡುಬಂದಿರುವ ಶ್ರೀಮಂತ ಪ್ರಾಣಿಯಾಗಿದೆ'' ಎಂದಿದ್ದಾರೆ. ವಿಶ್ವದ ವಿವಿಧ ಸಂಸ್ಕೃತಿಗಳಲ್ಲಿ ಪ್ರಾಚೀನ ಕಾಲದಿಂದಲೂ ನಾಗನನ್ನು ಪೂಜಿಸಿಕೊಂಡು ಬಂದಿರುವ ಬಗೆಯನ್ನು ಇಲ್ಲಿ ವಿಶ್ಲೇಶಿಸಲಾಗಿದೆ. ನಾಗರ ಪಂಚಮಿಯು ಭಾರತೀಯರಿಗೆ ಒಂದು ವಿಶೇಷದಿನ ಎನ್ನುವದನ್ನು ವಿವಿಧ ಪುರಾಣ ಕತೆಗಳೊಂದಿಗೆ ಸಮೀಕರಿಸಿ ಉಲ್ಲೆಖಿಸಲಾಗಿದೆ.

ಬಸ್ತಿ ಪುಂಡಲೀಕ ಶೆಣೈ (೧೯೭೭-೨೦೧-೨೧೨) ಅವರು 'ಬ್ರಾಹ್ಮಿ ಲಿಪಿ ಮತ್ತು ಸಿಂಧೂ ಸಂಸ್ಕೃತಿ' ಎಂಬ ಗ್ರಂಥದಲ್ಲಿ ''ಸರ್ಪದ ಅಥವಾ ಅಹಿಯ ಕಲ್ಪನೆಯು ಮತ್ತು ಅದರ ಸಂಭಂದವು ಆರ್ಯ ಜನರ ಜೀವನದಲ್ಲಿ ಆದಿಕಾಲದಿಂದಲೇ ಬೆರೆತುಕೊಂಡಿದೆ. ಮತ್ತು ಅವರು ಸರ್ಪಗಳನ್ನು ಹಲವು ರೂಪಗಳಲ್ಲಿ ಆರಾಧಿಸುತ್ತಾ ಬಂದಿದ್ದಾರೆ.'' ಎನ್ನುವುದನ್ನು ವಿಮರ್ಶಿಸಿದ್ದಾರೆ. ''ಋಗ್ವೇದದಲ್ಲಿ ಅಗ್ನಿಯನ್ನು ಶಿವ, ರುದ್ರ, ಇಂದ್ರ ಮುಂತಾಗಿ ಕರೆದಿರುವಂತೆಯೇ 'ಅಹಿ' ಎಂದರೆ ಹಾವು ಎಂತಲೂ, ಅಹಿರ್ಬುಧ್ನ ಅಂದರೆ ಬುಡದಲ್ಲಿ ಅಥವಾ ತಗ್ಗಿನಲ್ಲಿರುವ ಹಾವು ಎಂತಲೂ ಉಲ್ಲೇಖಿಸಲಾಗಿದೆ. ಋಗ್ವೇದದಲ್ಲಿ 'ಅಹಿ' ಎಂಬ ಒಂಟಿ ಶಬ್ದವು ಸಾಮಾನ್ಯವಾಗಿ ಕತ್ತಲೆಯ ಸಂಕೇತವಾಗಿದ್ದು ವೃತ್ರ ಶಬ್ದದ ಪರ್ಯಾಯ ವಾಚಿಯಾಗಿ ಸೂರ್ಯನನ್ನು ಅಥವಾ ಅವನ ಪ್ರಕಾಶವನ್ನು ಅಥವಾ ದಿವ್ಯ ಜಲಗಳ ಪ್ರವಾಹವನ್ನು ತಡೆದಿಟ್ಟವನೆಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ''. (ಪು-೨೦೧) ಋಗ್ವೇದ, ಯಜುರ್ವೇದ, ತೈತ್ತರೀಯ ಸಂಹಿತೆ, ಮತ್ತು ವೇದಾಂಗ ಜ್ಯೋತಿಷ್ಯದಲ್ಲಿ ಕಂಡುಬರುವ ಸರ್ಪಗಳ ಕುರಿತಾದ ಉಲ್ಲೇಖನಗಳನ್ನು ನೀಡಲಾಗಿದೆ. ಈ ಲೇಖನವು ನಾಗಾರಾಧನೆಯು ವಿಶ್ವದ ಅತಿ ಪುರಾತನ ಸಂಸ್ಕೃತಿಗಳಿಂದಲೂ ಪ್ರಚಲಿತದಲ್ಲಿತ್ತು ಎನ್ನುವುದನ್ನು ಸೂಚಿಸುತ್ತದೆ.

ಲೀಲಾ ಭಟ್ಟ ಅವರ (೧೯೮೧) 'ಭೂತ ನಾಗರ ನಡುವೆ' ಅಮೇರಿಕಾದ ಕಲಾ ವಿದುಷಿ, ಡಾ. ಮಾರ್ತಾ ಆಶ್ಟನ್, ಹಾಗೂ ಇತರ ಆಸಕ್ತರೊಂದಿಗೆ ಕೈಗೊಂಡ ಸಾಂಸ್ಕೃತಿಕ ಪ್ರವಾಸಗಳ ಅನುಭವ ಮಾಲಿಕೆ. ಕೇರಳ ಮತ್ತು

ಪ್ರಸ್ತಾವನೆಯಲ್ಲಿ 'ನಾಗಮಂಡಲ', ಡಕ್ಕೆಬಲಿಗಳ ಕುರಿತು ಲೇಖಕರು ನೀಡಿರುವ ವಿವರಣೆ ಮತ್ತು ವಿಶ್ಲೇಷಣೆ ಸಮಗ್ರವಾದುದಾಗಿದೆ.

ನಾಗಮಂಡಲಗಳಂತಹ ಆಚರಣೆಯಲ್ಲಿ ನರ್ತಕರಾಗಿ ಭಾಗವಹಿಸುವ ವೈದ್ಯರುಗಳು, ತಮ್ಮ ಕಸುಬಿಗೆ 'ಶಿವನ ಡಮರು'ವೇ ಮೂಲ ಎಂದು ಹೇಳುವ, ಜನಪದ ಪುರಾಣ, ಐತಿಹ್ಯದ ಹಿಂದೆ ಇರುವ ಆಶಯವನ್ನು ಗೆಜ್ಜೆಕಟ್ಟಿ ಕುಣಿತ ಹಾಗೂ ಚರ್ಮವಾದ್ಯಗಳ ನುಡಿತ ಬ್ರಾಹ್ಮಣನಿಗೆ ನಿಷಿದ್ಧ ಎಂಬ ಪರಂಪರಾಗತ ನಂಬಿಕೆಗೆ ಆತ ಮಾಡಿಕೊಂಡ ರಕ್ಷೆ ಹಾಗೂ ಆರ್ಯೆತರ ದೈವಗಳಿಗೆ ಬ್ರಾಹ್ಮಣರ ಉಪಚಾರ ನಡೆಸುವ ವಿಧಿಗೆ ಆತ ಮಾಡಿಕೊಂಡ ಸ್ವ- ಸಮರ್ಥನೆ ಎಂಬ ನಾವಡರ ಹೊಳಹುಗಳು ಇತ್ಯಾತ್ಮಕವಾದವುಗಳು.

ಸಿದ್ಧಾಪುರ ವಾಸುದೇವ ಭಟ್ (೧೯೮೮) ಅವರು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಡಾ. ಬಿ. ಎ. ವಿವೇಕ ರೈಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವ ಎಂ. ಫಿಲ್. ಪ್ರಬಂಧ 'ನಾಗ ಜಾನಪದ' ಇದರಲ್ಲಿ ತುಳುನಾಡಿನ ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ನಾಗಾರಾಧನೆಯ ಅಧ್ಯಯನ ನಡೆಸಲಾಗಿದೆ. ನಾಗಾರಾಧನೆಯ ಜನಪದ ಆಚರಣೆಗಳು, ಆರಾಧನೆಯ ಪ್ರಕಾರಗಳು, ಕಾವ್ಯರೂಪದ ಜಾನಪದ, ಕಥನಾತ್ಮಕ ಜಾನಪದ, ಭಾಷಿಕ ಹಿನ್ನೆಲೆ, ವಸ್ತು ರೂಪದ ಜಾನಪದ ಈ ಎಲ್ಲ ಹಿನ್ನೆಲೆಯಲ್ಲಿ ನಾಗಾರಾಧನೆಯ ಮಹತ್ವದ ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಪ್ರೊ. ಎ. ವಿ. ನಾವಡರ (೧೯೮೯) 'ನಾಗಮಂಡಲ ಡಕ್ಕೆ ಬಲಿ' ತುಳುವರ ಆಚರಣೆಗಳಲ್ಲಿ ಕಲಾವಂತಿಕೆ ಈ ಲೇಖನದಲ್ಲಿ ನಾಗಮಂಡಲಕ್ಕೂ, ಪಾಣರು ಆಚರಿಸುವ ಡಕ್ಕೆ ಬಲಿಗೂ ಇರಬಹುದಾದ ಸಂಬಂಧ ನಾಗ (ಯಕ್ಷಿ) ಆರಾಧನೆ, ಇತ್ಯಾದಿಯೊಂದಿಗೆ ನಾಗಮಂಡಲ ಒಂದು ತಾಂತ್ರಿಕ ಆರಾಧನ ಪ್ರಕ್ರಿಯೆ ಎಂಬ ವಿಚಾರದ ಮೇಲೆ ಈ ಲೇಖನ ಬೆಳಕು ನೀಡುತ್ತದೆ.

ಪ್ರೊ. ಎ. ವಿ. ನಾವಡ ಮತ್ತು ಗಾಯಿತ್ರಿ ನಾವಡರ (೧೯೯೨) 'ಕಾಡ್ಯನಾಟ ಕಥ್ಯ ಮತ್ತು ಪ್ರದರ್ಶನ' ನಾಗರಾಧನೆಯನ್ನು ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ ಅವಲೋಕಿಸುವ ಮಹತ್ವದ ಕೃತಿ; 'ಕಾಡ್ಯನಾಟ' ಉಡುಪಿ ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಲಿತವಿರುವ ದಲಿತರ ನಾಗಾರಾಧನ ಸಂಪ್ರದಾಯ. 'ಕಾಡ್ಯ' ಎನ್ನುವುದು ಹರಿಜನ

ಪ್ರಪಂಚಕ್ಕಿಂತ ಭಿನ್ನವಾದ ಅಲೌಕಿಕ ಜಗತ್ತಿನಲ್ಲಿರುತ್ತವೆ. ಅವುಗಳನ್ನು ಕಂಡು ಭಯ ಭಕ್ತಿಯಿಂದ ಆರಾಧಿಸುವುದಕ್ಕೆ ಅವರು ನಿರ್ಮಾಣ ಮಾಡಿರುವ ಒಂದು ವಿಶಿಷ್ಟ ಆಚರಣೆ ಕಾಡ್ಯನಾಟ ಎಂದು ಅಭಿಪ್ರಾಯ ಪಡಲಾಗಿದೆ. ಕಾಡ್ಯನಾಟದ ಸಂದರ್ಭದಲ್ಲಿ ಪ್ರದರ್ಶಿತವಾಗುವ ಪಠ್ಯ (ಶಾಬ್ದಿಕ)ವನ್ನು ಜನಪದಗೀತೆ ರೂಪದವುಗಳು ಹಾಗೂ ಜನಪದ ಕಥನ ಕಾವ್ಯಗಳೆಂದು ಎರಡಾಗಿ ವಿಂಗಡಿಸಬಹುದು.

ಕರ್ನಾಟಕದ 'ಹಗರಣ'ದಂತಹ ಪ್ರಾಚೀನ ಜನಪದ ರಂಗಭೂಮಿಯ ಜೊತೆಗೆ ಹೋಲಿಸಲು ಸಾಧ್ಯವಾಗುವಂತಹ ಪ್ರಾದೇಶಿಕ ಮಾಹಿತಿಗಳನ್ನು ಇಲ್ಲಿ ಒದಗಿಸಲಾಗಿದೆ. ಒಟ್ಟಿನಲ್ಲಿ ಜನಾಂಗವೊಂದರ ಲೋಕದೃಷ್ಟಿ ಅವರ ಬದುಕಿನ ವಿಶಿಷ್ಟ ಸಂದರ್ಭಗಳಲ್ಲಿ ವಿಶೇಷವಾಗಿ ಈ ಕಾಡ್ಯನಾಟದ ಸಂದರ್ಭದಲ್ಲಿ ಅವರನ್ನು ಭಾವನಾತ್ಮಕವಾಗಿ ಬಿಗ್ಗೊಡಿಸುತ್ತದೆ. ಬದುಕಿನ ನಿನ್ನೆ ಇಂದುಗಳ ಬಗ್ಗೆ ಬೆಳಕು ಚೆಲ್ಲುತ್ತಾ, ವ್ಯಂಗ್ಯದ ಧಾಟಿಯಲ್ಲಿ ಪ್ರತಿವಿರೋಧಿಸುತ್ತಾ ಅವರ ಲೋಕದೃಷ್ಟಿಯಲ್ಲಿ ಮೂರ್ತಗೊಂಡಿದೆ.

ಪ್ರೊ. ಎ. ವಿ. ನಾವಡರ (೧೯೯೩ - ೪೯ - ೬೭) 'ನಾಗಮಂಡಲ'. 'ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ' ಎಂಬ ಲೇಖನವನ್ನು ಕರಾವಳಿಯ ನಾಗರಾಧನೆಯ ಪ್ರಮುಖ ಪ್ರಕಾರವಾಗಿರುವ 'ನಾಗಮಂಡಲ'ವನ್ನು ಪ್ರದರ್ಶಕ ಸಿದ್ಧಾಂತ ಹಿನ್ನೆಲೆಯಲ್ಲಿ ಅನುಲಕ್ಷಿಸಿ ಸಿದ್ಧಪಡಿಸಲಾಗಿದೆ. ಪ್ರದರ್ಶನ ಮತ್ತು ಅರ್ಥ, ಇವುಗಳ ಸಂಬಂಧವನ್ನು ದಕ್ಷಿಣ ಕನ್ನಡ ಜಿಲ್ಲೆಯ ಜಾತಿ ಆಧಾರಿತ ಸಮಾಜದ ಹಿನ್ನೆಲೆಯಲ್ಲಿ ಅರಿತುಕೊಳ್ಳುವ ಯತ್ನ ಮಾಡಲಾಗಿದೆ. ''ನಾಗಮಂಡಲ ಫಲವಂತಿಕೆಯ ಮಾಂತ್ರಿಕ ಕ್ರಿಯೆಯಾಗಿದ್ದು ಮೂಲತಃ ಸ್ತ್ರೀಯೇ ಎಲ್ಲಾ ಆರಾಧನ ವಿಧಿಗಳಲ್ಲಿ ಪಾಲ್ಗೊಳ್ಳುತ್ತಿದ್ದಿರಬೇಕು. ಅಷ್ಟೇ ಅಲ್ಲ, ತಂತ್ರಪಂಥದಲ್ಲಿ ಪಾಲ್ಗೊಳ್ಳುತ್ತಿದ್ದವರು ಸಮಾಜದ ಕೆಳವರ್ಗದ ಸ್ತ್ರೀಯರು, ಕಾಲಕ್ರಮೇಣ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ನೆಲೆಗೊಳ್ಳುತ್ತಾ ಪುರುಷ ಪ್ರಧಾನತೆ ಏರ್ಪಟ್ಟ ಹಿನ್ನೆಲೆಯಲ್ಲಿ ಮಹಿಳೆಯರ ಕೆಲಸಗಳು ಪುರುಷರಿಗೆ ವರ್ಗವಣೆಗೊಂಡಿರಬಹುದು''. (ಪು - ೬೫) ಈ ತತ್ವವನ್ನು ನಾಗಮಂಡಲದ ಅರ್ಧನಾರಿ ವೇಶದಲ್ಲಿ ಗುರುತಿಸಬಹುದಾಗಿದೆ. ಅಲ್ಲದೆ ಪ್ರಸ್ತುತ ಲೇಖನದಲ್ಲಿ ಆಚರಣೆಯನ್ನು ನಡೆಸುವ ಜನವರ್ಗ, ಪ್ರದೇಶದ ವಿವರ, ಆಚರಣೆಯ ಸಿದ್ಧತೆ, ಅಲಂಕರಣ, ಕುಣಿತ, ವೇಷಭೂಷಣ ಇತ್ಯಾದಿ ಹಲವು ಸಂಗತಿಗಳನ್ನು ಒಳಗೊಂಡ ಒಂದು ಬೃಹತ್ ಪಠ್ಯವನ್ನು ವಿವರಿಸಲಾಗಿದೆ.

ಪಾತ್ರವನ್ನು ಕಸಿಯುವಾಗ ಅರ್ಧನಾರಿಯ ಅವತಾರವಾಗಿರಬಹುದೆನಿಸುತ್ತದೆ''. (ಪು-೪೭) ಎಂಬ ಅಭಿಪ್ರಾಯ ಕಂಡು ಬರುತ್ತದೆ. ನಾಗ ಮಂಡಲವು ಹೆಣ್ಣುಗಂಡನ್ನು ಒಪ್ಪುವ ನೃತ್ಯರೂಪ ಮರಿ ಮೊಟ್ಟೆ ಸಹಿತವಾದ ನಾಗಸಂತಾನ, ಸಮೃದ್ಧಿಯ ಪ್ರತೀಕವಾಗಿದ್ದು. ನಾಗಮಂಡಲವು ಒಂದು ಕಾಲದಲ್ಲಿ ವಿಶ್ವದಾದ್ಯಂತ ಪ್ರಚಲಿತವಿದ್ದು, ಫಲೋತ್ಪತ್ತಿ ಪಂಥ (Fertility)ದ ಅಂಗವಾಗಿತ್ತು ಎಂದು ಉಲ್ಲೇಖಿಸಲಾಗಿದೆ.

ಪ್ರೊ. ಹಿ. ಚಿ. ಬೋರಲಿಂಗಯ್ಯನವರ ಸಂಪಾದಕತ್ವದ (೧೯೯೬, ಪು - ೪೭ - ೬೫) 'ಕರ್ನಾಟಕ ಜಾನಪದ ಕಲೆಗಳ ಕೋಶ' ಕರ್ನಾಟಕದ ಜನಪದ ಕಲೆಗಳ ಸಮಗ್ರ ಮಾಹಿತಿಯನ್ನು ನೀಡುವ ಗ್ರಂಥ, ಕರಾವಳಿ ಕರ್ನಾಟಕದ ನಾಗಾರಾಧನೆ ಮತ್ತು ಆರಾಧನೆಯ ಸ್ವರೂಪ, ಪ್ರಕಾರಗಳ ಕುರಿತು ಮಾಹಿತಿ ಒದಗಿಸಲಾಗಿದೆ. ಕರಾವಳಿ ಪ್ರದೇಶದಾದ್ಯಂತ ಕಂಡು ಬರುವ ವಿಶಿಷ್ಟವಾದ 'ನಾಗಬನ'ಗಳು, ನಾಗನ ಆವಾಸಸ್ಥಾನವಾದ ಹುತ್ತವನ್ನು ಪೂಜಿಸುವ ಪದ್ಧತಿಯ ಹಿನ್ನೆಲೆ, ನಾಗರ ಪಂಚಮಿ ಆಚರಣೆಯ ವೈಶಿಷ್ಟ್ಯ, ದಕ್ಷಿಣ ಕರ್ನಾಟಕದ ಕೃಷಿಕ ಜನಾಂಗದವರು ಆಚರಿಸುವ 'ಮುನಿಸೇವೆ' ಉತ್ತರ ಕನ್ನಡ ಗೊಂಡ ಜನಾಂಗದವರು ಆಚರಿಸುವ, ಕೋಗ್ರಿ ಜಾತ್ರೆಯಲ್ಲಿ ಅವರು ಏರ್ಪಡಿಸುವ 'ಮಂಡಲಸೇವೆ' ಮತ್ತು ತುಳುನಾಡಿನ ನಾಗಾರಾಧನೆಯ ಪ್ರಕಾರಗಳಾದ ನಾಗಾಮಂಡಲ, ಡಕ್ಕೆಬಲಿ, ಕಾಡ್ಯನಾಟ, ಸ್ವಾಮಿಕೋಲ, ದಕ್ಷಿಣ ತುಳುನಾಡಿನ ಸರ್ಪಂಕಳ ಇತ್ಯಾದಿ ಆಚರಣೆಗಳ ವೈವಿಧ್ಯತೆಯನ್ನು ಪರಿಚಯಿಸಲಾಗಿದೆ.

ನಾಗಮಂಡಲದ ನೃತ್ಯವನ್ನು ಕುರಿತು ''ನಾಗಮಂಡಲದಲ್ಲಿ ಆಧುನಿಕ ನೃತ್ಯ ನಾಟಕದ ಎಲ್ಲ ಲಕ್ಷಣಗಳು ಕಾಣಿಸದಿದ್ದರೂ ಕೇರಳದ 'ಒಟ್ಟಂತುಳ್ಳಲ್', 'ಮೋಹಿನಿ ಆಟ್ಟಂ', ಕೂಡಿಯಾಟ್ಟಂ, ಕಥಕಳಿಗಳಿಗೆ ನಾಗಮಂಡಲ ದಾಯಾದಿಯಾಗುತ್ತದೆ.'' (ಪು - ೫೩) ಎಂದು ಅಭಿಪ್ರಾಯ ಪಡಲಾಗಿದೆ.

ಪಾಲ್ತಾಡಿ ರಾಮಕೃಷ್ಣ ಆಚಾರ್ಯ (೧೯೯೭ - ೧ - ೨೨) ರ 'ಜಾನಪದ ಮಿನದನ' ತುಳು ಜಾನಪದದ ವಿವಿಧ ನೆಲೆಗಳ ಕುರಿತು ವಿಷಯ ಸಂಗ್ರಹಿಸಿ ಬರೆದಿರುವ ಒಂದು ಸಂಕಲನ. ತುಳುನಾಡಿನ ನಾಗಾರಾಧನೆ ಮತ್ತು ಯಕ್ಷಾರಾಧನೆ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವ ಪ್ರಮುಖ ಆರಾಧನ ಸಂಪ್ರದಾಯ. ಅದಕ್ಕೆ ಪೂರಕವಾದ ಮಾಹಿತಿಯನ್ನು ಯಕ್ಷ- ನಾಗ ಲೇಖನದಲ್ಲಿ ಒದಗಿಸಿದ್ದಾರೆ. ವಿಶ್ವದ ಪುರಾತನ ಸಂಸ್ಕೃತಿಯಿಂದಲೂ ನಾಗಾರಾಧನೆಯು ಪ್ರಚಲಿತದಲ್ಲಿತ್ತು ಎನ್ನುವುದನ್ನು ಲೇಖನದ ಪ್ರಾರಂಭದಲ್ಲಿಯೇ ಉಲ್ಲೇಖಿಸಲಾಗಿದೆ. ಪುರಾಣಗಳಲ್ಲಿ ಕಂಡುಬರುವ 'ಯಕ್ಷ'ರ ವಿಚಾರ ನಾಗ-ಯಕ್ಷ ಸಂಬಂಧವನ್ನು ಯಕ್ಷಾರಾಧನೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ತುಳುನಾಡಿನ

ಎರಡೂ ಕಡೆಯ ಧೋರಣೆ ಭಾರತದ ಎಲ್ಲಾ ಶತಮಾನಗಳಲ್ಲೂ ಈಗಿನ ಕಾಲವೂ ಸೇರಿದಂತೆ ಜೀವಂತವಾಗಿ ಉಳಿದುಕೊಂಡು ಬಂದಿದೆ. ''ಪಾಂಥಿಕ ವಸ್ತುವಾಗಿ ಸರ್ಪರಾಧನೆಯ ಉಗಮವನ್ನು ಮೆಹಂಜದಾರೊ ಯುಗದಷ್ಟು ಹಿಂದೆ ಗುರುತಿಸಿದೆ. ಅಲ್ಲಿನ ಮುದ್ರೆಗಳಲ್ಲಿ ಅದು ಯೋಗ ಮುದ್ರೆಯಲ್ಲಿರುವ ಆಕೃತಿಗೆ ಸಂಭವನೀಯವಾಗಿ ದೇವರಿಗೆ ಭಕ್ತಿಭಾವವನ್ನು ತೋರಿಸುತ್ತದೆ. ಇದು ಅನಂತರ ಕಾಲದ ಶೈವ ಪಂಥಗಳೊಂದಿಗೆ ಸರ್ಪಗಳ ನಿಕಟ ಸಾಹಚರ್ಯದ ಆದಿ ಸೂಚನೆಯಾಗಿದೆ.'' (ಪು-೧೩೬) ಎಂದು ಅಭಿಪ್ರಾಯ ಪಡಲಾಗಿದೆ.

ವೆಂಕಟರಾಜ್ ಪುಣಿಂಚಿತ್ತಾಯರ (೧೯೯೮ - ೬೨ - ೬೫) 'ತುಳು ನಡೆ - ನುಡಿ', ತುಳು ಜಾನಪದ ಸಂಸ್ಕೃತಿಗೆ ಸಂಭಂದಿಸಿದ ಲೇಖನಗಳ ಸಂಗ್ರಹ. ದಕ್ಷಿಣ ತುಳುನಾಡಿನಲ್ಲಿ ಬಾಕುಡ ಜನಾಂಗದಲ್ಲಿ ಪ್ರಚಲಿತವಿರುವ ಸರ್ಪರಾಧನೆಯ ಕುರಿತು ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ಕಾಸರಗೋಡಿನ ಉತ್ತರ ಭಾಗದಲ್ಲಿ ಬಾಕುಡರೆಂಬ ಮೂಲ ನಿವಾಸಿಗಳಿದ್ದಾರೆ. ಇವರ ಕುಲ ದೈವ ಸರ್ಪ ಭೂತರಾಧನೆಯ ಪದ್ಧತಿಯಂತೆ ಇವರು ಸರ್ಪಾರಾಧನೆ ನಡೆಸುತ್ತಾರೆ. ಪ್ರಸ್ತುತ ಲೇಖನದಲ್ಲಿ ಈ ವಿಚಾರವನ್ನು ಸ್ಥೂಲವಾಗಿ ವಿವರಿಸಲಾಗಿದೆ. ಇಂತಹ ಸರ್ಪಭೂತಗಳಿಗೆ ಕೋಲ ಕಟ್ಟುವವರು ನಲಿಕೆಯವರು ಅಥವಾ ಕೋಪಾಳ ಜನಾಂಗದವರಾಗಿರುತ್ತಾರೆ. ನೇಲ್ಕ ಉಲ್ಲಾಳ್ತಿ (ನಾಗಯಕ್ಷಿ) ಎಲ್ಕ ಉಲ್ಲಾಳ್ತಿ, ಸಂಕಪಾಲೆ, ಕೃಷ್ಣಸರ್ಪೆ ಇವು ಬಾಕುಡರು ಆರಾಧಿಸುವ ಸರ್ಪಗಳು. ಭೂತಾರಾಧನೆಯಂತೆ ಈ ಸರ್ಪಗಳಿಗೆ ಕೋಲ ನಡೆಯುತ್ತದೆ. 'ಬೆರ್ಮೆರೆ ನಲಿಕೆ' ಎಂಬ ಇನ್ನೊಂದು ಹೆಸರುಳ್ಳ ಈ ಕೋಲಕ್ಕೆ ನಾಲ್ಕು ಮಂದಿ ಮುಖ್ಯಸ್ಥರು ಇರಬೇಕಾಗುತ್ತದೆ. ಈ ಮುಖ್ಯಸ್ಥರನ್ನು 'ನಾಲಜ್ಜೆ ಕಾರ್ನೇರ್' ಎಂದು ಕರೆಯಲಾಗುತ್ತದೆ. ತುಳು ಸಂಸ್ಕೃತಿಗೆ ಸಂಬಂಧಿಸಿದ ಹೊಸ ವಿಚಾರವೊಂದನ್ನು ಇಲ್ಲಿ ಕೊಡಲಾಗಿದೆ.

ಮೋಹನ ಕೃಷ್ಣ ರೈಯವರ 'ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ' (೧೯೯೯ - ೫೦ - ೫೪) ಪ್ರಸ್ತುತ ಕೃತಿಯಲ್ಲಿ ತುಳುನಾಡಿನ ಬದುಕನ್ನು ಪರಿಚಯಿಸುವ ನಾಲ್ಕು ಅಧ್ಯಾಯಗಳಿವೆ. ಇದನ್ನು 'ಚತುರ್ಮುಖಿ ಅಧ್ಯಯನ' ಎಂಬುದಾಗಿ ಕರೆಯಲಾಗಿದೆ. ಇದರ ಮೂರನೆಯ ಅಧ್ಯಾಯ ತುಳುನಾಡಿನ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ್ದಾಗಿದೆ. ತುಳು ಸಮಾಜದ ತಾತ್ವಿಕ ಮತ್ತು ಸಾಮಾಜಿಕ ಚೌಕಟ್ಟು ಧಾರ್ಮಿಕ ಆಚರಣೆಗಳ ಮೂಲಕ ಹೇಗೆ ರೂಪುಗೊಂಡಿದೆ ಎನ್ನುವುದರ ವಾಸ್ತವ ಅಧ್ಯಯನ ನಡೆಸಲಾಗಿದೆ. ಭೂತಾರಾಧನೆ, ನಾಗಾರಾಧನೆ,

ಬೆರ್ಮೆರನ್ನು ಕುರಿತು ಇತಿಹಾಸ ಮತ್ತು ಜಾನಪದದಲ್ಲಿ ಕೆಲವು ಚರ್ಚೆಗಳು ನಡೆದಿದ್ದರೂ ಇನ್ನೂ ಅನೇಕ ಪ್ರಶ್ನೆಗಳು ಹಾಗೆಯೇ ಉಳಿದಿವೆ. ಬೆರ್ಮೆರ್‌ನ ಆಕಾರದಿಂದ ತೊಡಗಿ ಕಾರ್ಯ ವ್ಯಾಪ್ತಿಗಳವರೆಗೆ ಭಿನ್ನ ಭಿನ್ನ ನಿಲುವುಗಳಿವೆ. ಡಾ.ನಂದಾವರರು ಇವನ್ನೆಲ್ಲಾ ಗಮನಿಸಿ ಬೆರ್ಮೆರ್‌ವಿನ ಪರಿಕಲ್ಪನೆ ಕುರಿತು ವ್ಯಾಪಕ ಸಾಮಗ್ರಿಗಳ ಬಲದಿಂದ ಕೆಲವು ಹೊಸ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಬೆರ್ಮೆರ್, ನಾಗ ಬೆರ್ಮೆರ್, ಬ್ರಹ್ಮಲಿಂಗೇಶ್ವರ, ಭೂತಬ್ರಹ್ಮ, ಯಕ್ಷಬ್ರಹ್ಮ, ಮೊದಲಾದ ಆರಾಧನಾ ಸ್ವರೂಪಗಳನ್ನು ಕುರಿತಾದ ಉಪಲಬ್ಧ ಆಕರಗಳನ್ನು ಬಳಸಿ ವಿಶ್ಲೇಷಿಸಲಾಗಿದೆ.

ಡಾ. ಶೈಲ, ಟಿ. ವರ್ಮ, (೨೦೦೨) -೨೬೫) ಅವರ ಪ್ರಕಟಿತ ಪಿಎಚ್‌.ಡಿ. ಗ್ರಂಥ 'ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಒಂದು ಮೌಲ್ಯಯುತವಾದ ಕೃತಿ, ದಕ್ಷಿಣ ಕನ್ನಡ ಜಿಲ್ಲೆಯ ನಾಗಾರಾಧನೆ ಮತ್ತು ಸ್ಕಂಧಾರಾಧನೆಯ ಕುರಿತಾಗಿ ಶಾಸನಗಳಲ್ಲಿರುವ ಕೆಲವು ವಿಷಯಗಳನ್ನು ಗುರುತಿಸಲಾಗಿದೆ. ಬಾರಕೂರು. ಸುಬ್ರಹ್ಮಣ್ಯ ಕಾರ್ಕಳ ಮೊದಲಾದೆಡೆಗಳಲ್ಲಿ ದೊರಕಿರುವ ಶಾಸನಗಳಲ್ಲಿ, ಕಂಡುಬರುವ ನಾಗನ ಕುರಿತಾದ ದಾಖಲೆಗಳನ್ನು ಉಲ್ಲೇಖಿಸಲಾಗಿದೆ. ಅಲ್ಲಿರುವ ಉಲ್ಲೇಖನಗಳನ್ನು ಹೊರತು ಪಡಿಸಿದರೆ ಉಳಿದಂತೆ ನಾಗಾರಾಧನೆಯ ಕುರಿತು ನೇರವಾಗಿ ತಿಳಿಯಲು ಶಾಸನ ಆಧಾರಗಳ ಕೊರತೆ ಕಂಡುಬರುತ್ತದೆ.

ಕುಂಡತಾಯ ಕೆ. ಎಲ್‌. (೨೦೦೩) ನಂಬಿಕೆ, ನಡವಳಿಕೆ, ತಾವು ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಶೋಧನಾತ್ಮಕ ಲೇಖನಗಳ ಸಂಗ್ರಹದ ಕಿರು ಪುಸ್ತಿಕೆ. ಕರಾವಳಿ ಕರ್ನಾಟಕದ ನಾಗಾರಾಧನೆಯಲ್ಲಿ ಪ್ರಧಾನವಾಗಿ ವೈದಿಕೇತರ ವರ್ಗಗಳಲ್ಲಿ ಆಚರಣೆಯಲ್ಲಿರುವ ವಿಧಾನಗಳನ್ನು ಬೆಳಕಿಗೆ ತರಲಾಗಿದೆ. ಇಂದು ವೈದಿಕ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿರುವ ನಾಗಾರಾಧನ ವಿಧಾನವು ಆದಿವು ಸಂಸ್ಕೃತಿಯಲ್ಲಿ ದಲಿತ ವರ್ಗದವರಿಂದ ನಡೆಸಲ್ಪಡುತ್ತಿತ್ತೆನ್ನುವುದು ಇಲ್ಲಿ ಕಂಡು ಬರುವ ಪ್ರಧಾನ ಆಶಯ. ಈ ಪುಸ್ತಿಕೆಯ 'ಬೇಶದಲ್ಲಿ ತಂಪೆರಿಸಿಕೊಳ್ಳುವ 'ಮೂಲ್ದೊಟ್ಟು ಬನ' ಎಂಬ ಲೇಖನವು ದಲಿತರ ನಾಗಾರಾಧನೆಯ ಪ್ರಕಾರವೊಂದನ್ನು ಕುರಿತಾಗಿದೆ. ಉಡುಪಿ ತಾಲೂಕಿನ ಕುತ್ಯಾರು ಗ್ರಾಮದ ನಾಗಬನದಲ್ಲಿ ಪರಿಶಿಷ್ಟ ಜಾತಿಯ ಮುಗ್ಗೇರರಿಂದ ವಾರ್ಷಿಕವಾಗಿ ನಡೆಯುವ ವಿಶಿಷ್ಟ ನಾಗಾರಾಧನೆಯ ವಿಧಾನವೊಂದನ್ನು ವಿವರಿಸುತ್ತದೆ. ಅಲ್ಲದೆ 'ಪರಿಸರ ರಕ್ಷಿಸಲು 'ನಾಗಬನ' ಉಳಿಸೋಣ'

ಮತ್ತು ಸರ್ಪಸತ್ರದವರೆಗೆ ಪುರಾಣದ ವಿಚಾರಗಳನ್ನು ಹಾಗೂ ಪರಿಸರ ರಕ್ಷಿಸಲು ನಾಗಬನ ಉಳಿಸಬೇಕೆನ್ನುವ ಆಧುನಿಕ ವಿಚಾರವನ್ನು ಪ್ರತಿಪಾದಿಸುವ ಬರಹಗಳಿವೆ.

ಇಂದಿರಾ ಹೆಗ್ಗಡೆ (೨೦೦೪ - ೪೧೮ - ೪೪೯) 'ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ' ತುಳು ನಾಡಿನ ಬಂಟ ಸಮುದಾಯದ ಕುರಿತು ಅಧ್ಯಯನ ನಡೆಸಿರುವ ಕೃತಿ, ಈ ಕೃತಿಯು ಬಂಟರ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಿದೆ.

ತುಳುವರ 'ಬೆರ್ಮೆರು', ಆಲಡೆ, ಬ್ರಹ್ಮಸ್ಥಾನ, ನಾಗಬನ, ತುಳುವರ ಮೂಲಸ್ಥಾನದ ಕಲ್ಪನೆ ಮತ್ತು ಕರಾವಳಿ ಪ್ರದೇಶದ ನಾಗಾರಾಧನೆಯ ವಿವಿಧ ಪ್ರಕಾರಗಳನ್ನು ಇಲ್ಲಿಯ ಆಚರಣೆಯ ವಿಧಿ ವಿಧಾನಗಳನ್ನು ಚರ್ಚಿಸಲಾಗಿದೆ. 'ನಾಗಾರಾಧನೆ' ಮತ್ತು ಬಂಟ ಸಮುದಾಯಕ್ಕಿರುವ ಸಂಬಂಧದ ಕುರಿತು, ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅದನ್ನು ಪುಷ್ಟೀಕರಿಸುವುದಕ್ಕಾಗಿ ತುಳುವರ 'ಸಿರಿ' ಆರಾಧನೆ ಮತ್ತು ಉತ್ತರದ 'ಸ್ವಾಮಿ' ಆರಾಧನೆಗಳನ್ನು ಉಲ್ಲೇಖಿಸಲಾಗಿದೆ.

ರಾಧಾಕೃಷ್ಣ ಕಲ್ಯಾಣ್‌ಪುರ್ (೨೦೦೪) 'ನಾಗದರ್ಶನ' ನಾಗಾರಾಧನೆಯ ಕುರಿತಾದ ಸಮಗ್ರ ವಿಷಯಗಳನ್ನೊಳಗೊಂಡ ಲೇಖನಗಳ ಸಂಗ್ರಹ. ಸರ್ಪಾರಾಧನೆಯ ಕುರಿತಾದ ವಿವಿಧ ಲೇಖಕರುಗಳ ಲೇಖನಗಳನ್ನೊಳಗೊಂಡ ವಿದ್ವತ್‌ಪೂರ್ಣ ಗ್ರಂಥ. ಅಧ್ಯಯನಾಸಕ್ತರಿಗೆ ಮತ್ತು ಸಂಶೋಧಕರಿಗೆ ಉತ್ತಮ ಕೈದೀವಿಗೆಯಾಗಬಲ್ಲುದು . ಈ ಸಂಕಲನದಲ್ಲಿ ಬನ್ನಂಜೆ ಗೋವಿಂದಚಾರ್ಯರು 'ತುಳುನಾಡಿನಲ್ಲಿ ನಾಗಾರಾಧನೆ' ಪ್ರೊ. ಎ. ವಿ. ನಾವಡರ 'ನಂಬಿಕೆಯ ನೆರಳಲ್ಲಿ ನಾಗಮಂಡಲ' ಬಿ. ಜೆ. ಸತ್ಯಮೂರ್ತಿ ಯವರ 'ಋಗ್ವೇದ'ದಲ್ಲಿ ಶಂ. ಭಾ. ಜೋಷಿಯವರು ಕಂಡ 'ನಾಗದರ್ಶನ', ಉಡುಪಿ ರಮಾನಾಥ ಆಚಾರ್ಯರ 'ನಾಗಮಂಡಲದ ಸುತ್ತ-ಮುತ್ತ' ಲೇಖನಗಳು ಗಮನ ಸೆಳೆಯುವಂತವಾಗಿವೆ.

೩.೨ ಸ್ಮರಣ ಸಂಚಿಕೆಗಳು

ಪ್ರೊ. ಬಾಲಾಜಿ ಮುಂಡ್ಕೂರು 'ಪಶ್ಚಿಮ ಭಾರತದಲ್ಲಿ ಸರ್ಪ ಪೂಜೆಯ ಚಾರಿತ್ರಿಕ ಹಿನ್ನೆಲೆ' (೧೯೭೭-೧೩೯ - ೧೪೫) ಎಂಬ ಲೇಖನವು ನಾಗಾರಾಧನೆಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ವ್ಯಕ್ತಪಡಿಸುತ್ತದೆ. ಕರಾವಳಿ ಕರ್ನಾಟಕದ ಪುರಾತತ್ವ ಇತಿಹಾಸ ಹಾಗೂ ಧಾರ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ಈ ಲೇಖನ ತುಂಬಾ

ಅವರು ಸಿಂಧರೊಂದಿಗೆ ಪಾಲುಗೊಂಡಿದ್ದರು. ಅವರ ಪತಾಕೆಗಳಲ್ಲಿ ನಾಗ ಸಂಕೇತವಿತ್ತು ಹಾಗೂ ಅವರು ಪುರಾಣದಲ್ಲಿ ವರ್ಣಿಸಿದ ಅರ್ಧ ದೈವೀ ನಾಗಗಳ ಅಂತರ್ಭಾವ ಸ್ವರ್ಗವಾದ ಭೋಗಾವತಿಗೆ ಸಂಬಂಧಿಸಿದಂತೆ ''ಭೋಗಾವತಿಯ ಪ್ರಭು'' ಎಂಬ ವಂಶಪಾರಂಪರ್ಯದ ಬಿರುದನ್ನು ಮೆರೆಯುತ್ತಿದ್ದರು. (ಪು - ೧೪೦) ಎಂದು ವಿವರಿಸಲಾಗಿದೆ.

ಪ್ರಾಚೀನ ಭಾರತದಲ್ಲಿ ಆರ್ಯರು ಬರುವುದಕ್ಕಿಂತ ಮೊದಲೇ ಸರ್ಪಾರಾಧನೆಯು ಪ್ರಚಲಿತದಲ್ಲಿತ್ತು. ಅದು ಸಿಂಧೂ ಕಣಿವೆ ನಾಗರಿಕತೆಯ ಜನರಿಗಿಂತ ಭಿನ್ನ ರೀತಿಯಲ್ಲಿತ್ತು. ಆರ್ಯರ ಪ್ರಭುತ್ವದಿಂದ ಉಂಟಾದ ವಿವಿಧ ವರ್ಣೀಯ ಬುಡಕಟ್ಟುಗಳ ನಡುವಿನ ಪ್ರಾಚೀನ ಬಿಕ್ಕಟ್ಟುಗಳೇ ಸರ್ಪಾರಾಧನೆಯ ಕಟ್ಟಳೆಗಳು ದಕ್ಷಿಣ ಭಾರತಕ್ಕೆ ಪ್ರಧಾನವಾಗಿ ಬರಲು ಕಾರಣವಾದವು ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಉಮೇಶ್ ಮಧ್ಯಸ್ಥರ 'ಜಾನಪದ ವಿಶಿಷ್ಟ ನೃತ್ಯ ಸಂಪ್ರದಾಯ ನಾಗಮಂಡಲ' (೧೯೭೭-೪೯- ೫೫) ಲೇಖನದಲ್ಲಿ ನಾಗಮಂಡಲವನ್ನು ಜನಪದ ರಂಗಕಲೆಗೆ ಹೋಲಿಸಲಾಗಿದೆ. ನಾಗಮಂಡಲ ವೈದ್ಯರ ನೃತ್ಯವನ್ನು ಕುರಿತು ತುಳುನಾಡಿನ ಜನಪದ ಕುಣಿತಗಳಲ್ಲಿ ವೈದ್ಯರ ಕುಣಿತವು ಅತಿ ಪ್ರಬುದ್ಧವಾದುದೆಂದು ಉಲ್ಲೇಖಿಸಲಾಗಿದೆ.

ಶ್ರೀ ಪಾದೇಕಲ್ಲು ವಿಷ್ಣುಭಟ್ಟ ಸ್ಕಂದ ವೈಭವ (೧೯೯೩) ವಗೆನಾಡು ಶ್ರೀ ಸುಬ್ರಾಯ ದೇವಸ್ಥಾನದ ನವೀಕರಣ ಬಿಂಬ ಪ್ರತಿಷ್ಠಾಬಂಧ ಮಹೋತ್ಸವದ ಸ್ಮರಣ ಸಂಪುಟ. ಈ ಗ್ರಂಥದ ಆರಾಧನೆ ಎಂಬ ಎರಡನೆ ಭಾಗದಲ್ಲಿ ಸ್ಕಂದಾರಾಧನೆ ಮತ್ತು ನಾಗಾರಾಧನೆ ಕುರಿತು ಪ್ರತ್ಯೇಕ ವಿಷಯಗಳನ್ನು ಒಳಗೊಂಡಿರುವ ಹಲವಾರು ಲೇಖನಗಳಿವೆ. ಈ ಲೇಖನಗಳು ನಾಗಾರಾಧಾನೆಯ ವಿಶ್ವವ್ಯಾಪಿ ಸ್ವರೂಪ ದರ್ಶನ ಮಾಡಿಸುತ್ತವೆ.

ಈ ಗ್ರಂಥದಲ್ಲಿರುವ ಪ್ರೊ.ಎ.ವಿ.ನಾವಡ ಅವರ 'ಕರಾವಳಿ ಕರ್ನಾಟಕದ ನಾಗಾರಾಧನೆ' (ಪು-೭೬) ಲೇಖನವು ಕರಾವಳಿಯ ನಾಗಾರಾಧನೆಯ ಸ್ವರೂಪಗಳನ್ನು ವಿಶ್ಲೇಷಿಸುತ್ತದೆ. ನಾಗ ಪರಿಕಲ್ಪನೆ, ನಾಗಾರಾಧನೆಯ ಮೂಲ, ನಾಗ ಮತ್ತು ಇತರೆ ದೇವತೆಗಳೊಂದಿಗಿನ ಸಂಬಂಧ, ನಾಗಮಂಡಲ ಇತ್ಯಾದಿ ವಿಷಯಗಳ ಕುರಿತು ವಿವರಿಸಲಾಗಿದೆ. ಕರಾವಳಿಯ ದುತರ ನಾಗಾರಾಧನೆಯ ಪ್ರಕರಣಗಳಾದ 'ಪಾಣರಾಟ' 'ಕಾದ್ಯನಾಟ' ಮತ್ತು ನಾಗನ 'ಹುಟ್ಟು' ಆಚರಣೆ ಇತ್ಯಾದಿ ವಿಷಯಗಳನ್ನು ಕೂಡಾ ವಿಶ್ಲೇಷಿಸಲಾಗಿದೆ.

ಡಾ. ಸುಶೀಲಾ ಪಿ. ಉಪಾಧ್ಯಾಯರ 'ಕೇರಳದಲ್ಲಿ ನಾಗಪೂಜೆ' (ಪು-೯೫) ಲೇಕನವು ಕೇರಳದ ನಾಗಾರಾಧನೆಯ ಕೆಲವು ಪ್ರಕಾರಗಳನ್ನು ಉಲ್ಲೇಖಿಸುತ್ತದೆ. ಜನಪದ ಆಚರಣೆಗಳಾದ 'ನಾಗಥೈಯಂ', 'ಸರ್ಪಂತುಳ್ಳಲ್',

ಗಮನ ಸೆಳೆಯುವ ಲೇಕನಗಳಾಗಿವೆ.

‘ಸಿರಿ’ (೧೯೯೫) ಶ್ರೀ ಅಮೃತ ಸೋಮೇಶ್ವರ ಅವರ ಅಭಿನಂದನ ಸಂಪುಟ ಇದರಲ್ಲಿ ವಿದ್ವಾಂಸರುಗಳ ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಲೇಖನಗಳಿವೆ. ಲೀಲಾ ಭಟ್ ಅವರ ‘ತುಳುನಾಡ ಬೆರ್ಮೆರು’ ಒಂದು ಟಿಪ್ಪಣಿ (ಪು-೨೩೬-೨೩೯) ತುಳುನಾಡಿನ ಆದಿ ಮೂಲ ದೈವವಾಗಿರುವ ‘ಬೆರ್ಮೆರು’ ಮತ್ತು ‘ನಾಗಬ್ರಹ್ಮ’ ಎಂಬ ವೈದಿಕ ಮತ್ತು ದ್ರಾವಿಡ ಪದಗಳನ್ನು ಈ ಲೇಖನದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಬೆರ್ಮೆರು ಮತ್ತು ನಾಗಬ್ರಹ್ಮ ಒಟ್ಟಿನ ಮೇಲೆ ಪ್ರತ್ಯೇಕ ಎರಡು ದೈವಗಳಾಗಿದ್ದು ಬೆರ್ಮೆರ ಒಡೆತನದಲ್ಲಿ ದೈವ ಸಾಮ್ರಾಜ್ಯ ನಡೆಯುತ್ತದೆ. ಸಂತಾನ ಭಾಗ್ಯವನ್ನು ಅನುಗ್ರಹಿಸುವ ಕುಷ್ಠ ಮೊದಲಾದ ದುಷ್ಟ ರೋಗಗಳನ್ನು ನಿವಾರಿಸುವ ಶಕ್ತಿಯಿಂದು ನಾಗನನ್ನು ಆರಾಧಿಸಲಾಗುತ್ತದೆ. ಒಟ್ಟಿನಲ್ಲಿ ದ್ರಾವಿಡ ಆರ್ಯ ಪದಗಳ ಸಂಯೋಜನೆಯಿಂದ ದೈವಗಳ ಹೆಸರುಗಳು ಕೂಡಾ ಆರ್ಯೀಕರಣಗೊಂಡವು ಎಂದು ಅಭಿಪ್ರಾಯಪಡಲಾಗಿದೆ.

‘ಪನಿಯಾರ’ (೧೯೮೯) ಅಖಿಲ ಭಾರತ ತುಳು ಸಮ್ಮೇಳನದ ಸ್ಮರಣ ಸಂಚಿಕೆ. ತುಳು ಭಾಷೆಯಲ್ಲಿ ಪ್ರಕಟಗೊಂಡ ಸಂಪುಟವು ಹಲವಾರು ವಿದ್ವಾಂಸರ ಲೇಖನಗಳ ಸಂಗ್ರಹವಾಗಿದೆ. ಈ ಕೃತಿಯು ಡಾ. ಕೆ. ಚಿನ್ನಪ್ಪಗೌಡರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ.

ಸಿದ್ಧಾಪುರ ವಾಸುದೇವ ಭಟ್ಟರ ‘ನಾಗಾರಾಧನೆ’ (೮೨-೮೭) ಲೇಖನವು ನಾಗಾರಾಧನೆಯ ಜನಪದೀಯ ವಿಚಾರಗಳನ್ನು ಒಳಗೊಂಡಿದೆ. ನಾಗಾರಾದನೆಯ ಉದ್ದೇಶ, ನಾಗಬನಗಳ ಪಾವಿತ್ರ್ಯತೆ, ನಾಗದೋಷ ಪರಿಹಾರಕ್ಕಾಗಿ ಆಚರಿಸುವ ಕೆಲವು ಆಚರಣೆಗಳನ್ನು ಜನಪದೀಯ ಹಿನ್ನಲೆಯಲ್ಲಿ ಗಮನಿಸಲಾಗಿದೆ.

ಅನಂತಧಾರೆ (೧೯೯೭) ಸಗ್ರಿ ಶ್ರೀ ವಾಸುಕಿ ಸುಬ್ರಹ್ಮಣ್ಯ ದೇವಸ್ಥಾನದ ಬ್ರಹ್ಮ ಕಲಶೋತ್ಸವ ಮತ್ತು ನಾಗಮಂಡಲೋತ್ಸವದ ಸ್ಮರಣ ಸಂಚಿಕೆ. ಬನ್ನಂಜೆ ಗೋವಿಂದಾಚಾರ್ಯ, ಮೊದಲಾದ ವೈದಿಕ ವಿದ್ವಾಂಸರುಗಳು ಎಚ್.ವಿ. ಕೃಷ್ಣಯ್ಯ ಮೊದಲಾದ ಜಾನಪದ ಸಂಶೋಧಕರ ಲೇಖನಗಳನ್ನೊಳಗೊಂಡ ಸಂಪುಟ. ವೇದಗಳು, ಉಪನಿಷತ್ತು, ಮಹಾಭಾರತ, ಗೀತೆ, ಇತ್ಯಾದಿ ಶಾಸ್ತ್ರಗ್ರಂಥಗಳಲ್ಲಿ ಉಲ್ಲೇಖ ಗೊಂಡಿರುವ ವಾಸುಖಿ, ಅನಂತ, ನಾಗ, ಸರ್ಪ ಮೊದಲಾದ ಹೆಸರುಗಳ ಔಚಿತ್ಯವನ್ನು ಇಲ್ಲಿ ಚರ್ಚಿಸಲಾಗಿದೆ.

ಒಂದು ರೀತಿಯಲ್ಲಿ ಪೂಜಿಸಲಾಗುತ್ತಿದೆ ಎಂಬ ವಿಷಯವನ್ನು ಇಲ್ಲಿ ವಿವರಿಸಲಾಗಿದೆ.

ಬನ್ನಂಜೆ ಗೋವಿಂದಾಚಾರ್ಯರ 'ತುಳುನಾಡಿನಲ್ಲಿ ನಾಗಾರಾಧನೆ' (ಪು-೭೨) ಲೇಖನದಲ್ಲಿ ಸುಬ್ರಹ್ಮಣ್ಯ ಮತ್ತು ನಾಗರ ನಡುವೆ ಇರುವ ಅಂತರವನ್ನು ಚರ್ಚಿಸಲಾಗಿದೆ. ಸುಬ್ರಹ್ಮಣ್ಯನನ್ನು ನಾಗನೊಡನೆ ಏಕೀಭವಿಸಿ ಆರಾಧಿಸುವ ಒಂದು ವಿಶಿಷ್ಟ ಪದ್ಧತಿ ತುಳುನಾಡಿನಲ್ಲಿದೆ. ಗೋವಿಂದಾಚಾರ್ಯರು ಸುಬ್ರಹ್ಮಣ್ಯನೆಂದರೆ ಸ್ಕಂದ ಹೊರತು ಶೇಷನಲ್ಲ. ವಾಸುಕಿಯಲ್ಲ. ಆದರೆ ಸುಬ್ರಹ್ಮಣ್ಯದಲ್ಲಿ ಸುಬ್ರಹ್ಮಣ್ಯ ಸೃಷ್ಟಿಯೆಂದು ನಡೆಯುವುದು ನಾಗನ ಪೂಜೆ. ಸ್ಕಂದನ ಪೂಜೆಯಲ್ಲ. ಸುಬ್ರಹ್ಮಣ್ಯನ ಗುಡಿಯಲ್ಲಿರುವುದು ನಾಗನೆ ಹೊರತು ಸ್ಕಂದನಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಡಾ. ಎಚ್.ವಿ. ನರಸಿಂಹಮೂರ್ತಿಯವರ 'ನಾಗಾರಾಧನೆ' (ಪು-೭೪) ಲೇಖನದಲ್ಲಿ ನಾಗಾರಾಧನೆಯು ಅತೀ ಪುರಾತನವಾದ ಆರಾಧನ ಪ್ರಕಾರ ಎಂದು ವರ್ಣಿಸಲಾಗಿದೆ. ವೇದ, ಪುರಾಣ, ಮಹಾಕಾವ್ಯ, ಜನಪದ ಸಾಹಿತ್ಯ ಇಲ್ಲೆಲ್ಲ ಕಂಡುಬರುವ, ನಾಗನಿಗೆ ಸಂಬಂಧಿಸಿದ ಉಲ್ಲೇಖಗಳನ್ನು ಪ್ರಸ್ತುತ ಲೇಖನದಲ್ಲಿ ನೀಡಲಾಗಿದೆ.

ಪ್ರೊ. ಎ.ವಿ.ನಾವಡರ 'ನಂಬಿಕೆಯ ನೆರಳಲ್ಲಿ ನಾಗಮಂಡಲ' (ಪು-೭೮) ದಕ್ಷಿಣ ಕನ್ನಡ ಕರಾವಳಿಯ ಅತ್ಯಂತ ಸುಂದರ ಪ್ರಬುದ್ಧ ಆಚರಣೆಗಳಲ್ಲಿ ಒಂದಾದ ನಾಗಮಂಡಲ-ಢಕ್ಕೆ ಬಲಿಗಳ ಕುರಿತಾಗಿದೆ. ನಾಗಮಂಡಲ ಆಚರಣೆಯ ವಿಧಿ ವಿಧಾನಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

ಏರ್ಯ ಲಕ್ಷ್ಮೀನಾರಾಯಣ ಆಳ್ವರ 'ನಾಗಮಂಡಲ ಕಡಲತಡಿಯ ನಾಗಪೂಜೆ' (ಪು-೮೭) ಲೇಖನದಲ್ಲಿ ನಾಗಮಂಡಲ ಒಂದು ವಿಶಿಷ್ಟ ಧಾರ್ಮಿಕ ವಿಧಿವಿಧಾನವಾದರೂ ಇದರಲ್ಲಿ ಬರುವ ಕುಣಿತದ ಮೋಹಕ ನೃತ್ಯಭಂಗಿಗಳು ಎಲ್ಲ ರಸಭಾವಗಳನ್ನೂ ಸಮರ್ಥವಾಗಿ ಅಭಿವ್ಯಕ್ತಿಗೊಳಿಸಬಲ್ಲಂತಹ ಶಕ್ತಿಶಾಲಿ ಜಾನಪದ ನೃತ್ಯವಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ. ಉಳಿದಂತೆ ಬಿ. ಶ್ರೀಕಾಂತ ಸಾಮಗ, ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ ರಮಾನಾಥ ಆಚಾರ್ಯ, ಮೊದಲಾದ ವಿದ್ವಾಂಸರುಗಳ ಲೇಖನಗಳಿವೆ. ಇವೆಲ್ಲವೂ ನಾಗಾರಾಧನೆಯ ಬೇರೆ ಬೇರೆ ಪ್ರಕಾರಗಳು ಮತ್ತು ಸ್ವರೂಪಗಳನ್ನು ಕುರಿತು ಸೂಚಿಸುತ್ತವೆ.

ಉಳಿಸಿಕೊಂಡು ಬಂದಿವೆ. ಯಕ್ಷಗಾನದ ವೇಷಭೂಷಣ, ನೃತ್ಯ ಇತ್ಯಾದಿಗಳಲ್ಲಿ ನಾಗಚಲನೆಯ ಸ್ವರೂಪವನ್ನು ಕಾಣಬಹುದು. ಯಕ್ಷಗಾನದ ಪೂರ್ವರಂಗದ ವೇಷದಲ್ಲೂ ಸುಬ್ಬರಾಯ ಎಂಬ ಒಂದು ವೇಷವಿದೆ. ಇವುಗಳನ್ನೆಲ್ಲ ಗಮನಿಸಿದರೆ ಯಕ್ಷಗಾನದಲ್ಲಿ ನಾಗಾರಾಧನೆಯ ಸ್ಪಷ್ಟ ಲಕ್ಷಣಗಳಿರುವುದು ಈ ಲೇಖನದಿಂದ ತಿಳಿದುಬರುತ್ತದೆ.

೩:೩ ವಾರ ಪತ್ರಿಕೆಗಳು

ಕೆ.ಎನ್. ಶಿವಕುಮಾರ್ ಅವರ 'ತರಂಗ' ವಾರ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ (೨೭.೧೧.೨೦೦೩) ಲೇಖನ 'ಸುಬ್ರಹ್ಮಣ್ಯ ಷಷ್ಠಿ, ಸಂಭ್ರಮ, ಶ್ರದ್ಧೆ, ಭಕ್ತಿ-ಭಾವ ಪರ್ವ' ಸುಬ್ರಹ್ಮಣ್ಯ ಕ್ಷೇತ್ರ ವರ್ಣನೆ ಮತ್ತು ಕ್ಷೇತ್ರದಲ್ಲಿ ನಡೆಯುವ ವಾರ್ಷಿಕ ಜಾತ್ರೆ 'ಷಷ್ಠಿ' ಮಹೋತ್ಸವದ ವಿವರಣೆಯನ್ನು ಇಲ್ಲಿ ನೀಡಲಾಗಿದೆ. ದೇವಾಲಯದ ವೈಶಿಷ್ಟ್ಯ, ಪೂಜಾ ವಿಧಾನ ಕ್ಷೇತ್ರದ ಹಿನ್ನೆಲೆ ಇತ್ಯಾದಿಗಳ ಕುರಿತಾದ ಸವಿವರ ಮಾಹಿತಿಗಳ ಸಮಗ್ರ ಚಿತ್ರಣ ಇಲ್ಲಿದೆ. ಪುರಾಣ ಪ್ರಸಿದ್ಧ ಹಿನ್ನೆಲೆಯಿಂದ ಸರ್ವಮತ ಧರ್ಮೀಯರನ್ನು ಆಕರ್ಷಿಸುತ್ತಿರುವ ಧಾರ್ಮಿಕ ಶ್ರದ್ಧೆಯ ರಮಣೀಯ ಕ್ಷೇತ್ರ ಸುಬ್ರಹ್ಮಣ್ಯ. ನಾಗಸಂಕುಲ ಇಲ್ಲಿ ಹರಿದಾಡುತ್ತಿದೆ ಎಂಬ ನಂಬಿಕೆಯಿಂದ ಕರ್ಮದೋಷಗಳ ಪರಿಹಾರಕ್ಕೆಂದು ಇಲ್ಲಿಗೆ ಧಾವಿಸಿ ಬರುವ ಭಕ್ತರು ಅಸಂಖ್ಯ. ಉತ್ತರ ಭಾರತೀಯರನ್ನೂ ಕೈಬೀಸಿ ಕರೆಯುತ್ತಿರುವ, ನಿತ್ಯವೂ ಜನಜಾತ್ರೆಯಂತಿರುವ ಈ ತಾಣದಲ್ಲಿ ನವೆಂಬರ್ ೨೭ ರಿಂದ ೨೯ ರವರೆಗೆ 'ಸುಬ್ರಹ್ಮಣ್ಯ ಷಷ್ಠಿ' ಎಂಬ ವಿಶಿಷ್ಟ ರೀತಿಯ ಉತ್ಸವ ನಡೆಯುತ್ತದೆ. ಈ ಎಲ್ಲ ವಿಷಯಗಳ ಕುರಿತು ಮಾಹಿತಿ ನೀಡುವ ಲೇಖನ ತುಂಬ ಔಚಿತ್ಯಪೂರ್ಣವೆನಿಸುತ್ತದೆ.

ಕುಡಂತಾಯ ಕೆ.ಎಲ್. ತರಂಗ ವಾರಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಲೇಖನ (೧೮.೮.೨೦೦೫) ಕರ್ನಾಟಕ ಕರಾವಳಿಯಲ್ಲಿ ನಾಗಾರಾಧನೆಯ ಮೂಲ ರೂಪ. ಕರಾವಳಿ ಕರ್ನಾಟಕದಲ್ಲಿ ವೈದಿಕೇತರರಿಂದ ನಡೆಸಲ್ಪಡುವ ನಾಗಾರಾಧನ ವಿಧಾನಗಳನ್ನು ಕುರಿತು ಉಲ್ಲೇಖಿಸಲಾಗಿದೆ. ಕರ್ನಾಟಕ ಕರಾವಳಿಯ ವಿವಿಧ ಭಾಗಗಳಲ್ಲಿ ನಾಗದೇವತೆಯ ಮೂಲ ಸ್ವರೂಪ ಪ್ರಾಚೀನ ಸಂಸ್ಕೃತಿಯಲ್ಲಿ ಹೇಗೆ ಇತ್ತು? ಆದಿಮ ಸಂಸ್ಕೃತಿಯಲ್ಲಿದ್ದ ನಾಗ ಪೂಜಾ ಪದ್ಧತಿಯ ಹಿಂದಿನ ಆಶಯಗಳೇನು? ಅದು ಕ್ರಮೇಣ ವೈದಿಕ ಪೂಜಾ ಪದ್ಧತಿಯ ಪ್ರಭಾವಕ್ಕೆ ಹೇಗೆ ಒಳಗಾಯಿತು? ಹೀಗಿದ್ದು ಅಲ್ಲಲ್ಲಿ ವೈದಿಕ ವಿಧಿ ವಿಧಾನಗಳ ಪ್ರಭಾವಕ್ಕೆ ಸಿಲುಕದೆ ಈ ಪೂಜಾ ಕ್ರಮ ಹೇಗೆ ಉಳಿದುಕೊಂಡಿದೆ? ಎಂಬಿತ್ಯಾದಿ ಕುತೂಹಲಕಾರಿ ವಿಷಯಗಳನ್ನು ಓದುಗರ ಮುಂದಿಡಲಾಗಿದೆ.

ಸತ್ರಗಳ ಪರಂಪರೆಯನ್ನು ಕಾಯ್ದುಕೊಂಡು ಬಂದ ಈ ಬ್ರಹ್ಮಸ್ಥಾನದಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ 'ಡಕ್ಕೆ ಬಲಿ' ನಾಗಮಂಡಲಾದಿ ಸೇವೆಗಳ ಪ್ರಯುಕ್ತ ಪ್ರಕಟಗೊಂಡ ಉದಯವಾಣಿಯ ಈ ವಿಶೇಷ ಪುರವಣಿ ಪಡುಬಿದ್ರಿ ಬ್ರಹ್ಮಸ್ಥಾನದ ಸಾಂಸ್ಕೃತಿಕ ಹಿನ್ನಲೆಯನ್ನು ಒಳಗೊಂಡಿದೆ.

ಡಾ. ನಿಟಿಲಾಪುರ ಕೃಷ್ಣಮೂರ್ತಿ 'ಒಲಿದು ನಲಿಸುವ ಸೇವೆ ನಾಗಮಂಡಲ' (ಉದಯವಾಣಿ ೧೭.೫.೨೦೦೩) ಲೇಖನದಲ್ಲಿ ಕರಾವಳಿ ಕರ್ನಾಟಕದ ನಾಗಮಂಡಲ ಆಚರಣೆಯ ಕುರಿತು ಮಾಹಿತಿ ನೀಡಿದ್ದಾರೆ. ಕರಾವಳಿಯ ಪ್ರಸಿದ್ಧ ಧಾರ್ಮಿಕ ಆಚರಣೆಯಾದ ನಾಗಮಂಡಲದ ಮಂಡಲ ರಚನೆ, ಮತ್ತು ಆಚರಣೆಯ ವಿಧಿ ವಿಧಾನಗಳ ಸ್ವರೂಪವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಉಪಾಧ್ಯಯ ಮೂಡುಬೆಳ್ಳೆ (ಉದಯವಾಣಿ ೧.೮.೨೦೦೩) 'ಕಲೆಯಲ್ಲಿ ನಾಗರಾಜ' ನಾಗರ ಪಂಚಮಿಯ ಪ್ರಯುಕ್ತ ಪ್ರಕಟಗೊಂಡ ವಿಶೇಷ ಲೇಖನ. ನಾಗಾರಾಧನೆಯ ಆಚರಣೆಯಲ್ಲಿ ಬಳಸುವ ವಿವಿಧ ರೀತಿಯ ಮಂಡಲಗಳು, ಮತ್ತು ಬಳಸುವ ಬಣ್ಣಗಳ ಕುರಿತಂತೆ ವಿವರಣೆ ದೊರೆಯುತ್ತದೆ. ನಾಗಮಂಡಲ, ಮತ್ತು ಡಕ್ಕೆ ಬಲಿಗಳ ಮಂಡಲ ರಚನೆಯ ಕುರಿತಾಗಿ ಇಲ್ಲಿ ವಿಷಯ ನಿರೂಪಣೆಗೊಂಡಿದೆ.

ವಿಜೇತ ಕೆ ಧರ್ಮಸ್ಥಳ (ಉದಯವಾಣಿ ೨.೮.೨೦೦೩) 'ನಾಡಿಗೆ ಮೊದಲ ಹಬ್ಬ ನಾಗರ ಪಂಚಮಿ' ಎಂಬ ಲೇಖನದಲ್ಲಿ ನಾಗರ ಪಂಚಮಿ ಆಚರಣೆಯ ಹಿನ್ನೆಲೆಯಲ್ಲಿರುವ ಕತೆಯೊಂದನ್ನು ನೀರೂಪಿಸಿದ್ದಾರೆ. ಹಬ್ಬಗಳ ಸರಣೆಯಲ್ಲಿ ಮೊದಲ ಹಬ್ಬ ನಾಗರಪಂಚಮಿ ದೇವತೆಗಳು ನಾಗರ ಹಾವಿನ ರೂಪದಲ್ಲಿ ಭೂಮಿಗೆ ಬಂದು ಭಕ್ತರ ಪೂಜೆ ಕಾಣಿಕೆ ಸ್ವೀಕರಿಸಿ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡುವ ಪುಣ್ಯದಿನ ಎಂದು ಈ ದಿನದ ಮಹತ್ವವನ್ನು ಉಲ್ಲೇಖಿಸಲಾಗಿದೆ.

ಉಪಾಧ್ಯಾಯ ಮೂಡುಬೆಳ್ಳೆ (ಉದಯವಾಣಿ ೨೦.೮.೨೦೦೪) ಅವರ 'ನಾಗಾರಾಧನೆ ಮತ್ತು ಚಿತ್ರಕಲೆ' ನಾಗಾರಾಧನೆಯಲ್ಲಿ ರಚಿಸುವ ಮಂಡಲಗಳ ಕುರಿತಾದ ಲೇಖನ. ದೇವತಾ ಆರಾಧನೆ ಮತ್ತು ನಾಗಾರಾಧನೆಯಲ್ಲಿ ಮಂಡಲಗಳ ಔಚಿತ್ಯವೇನು? ಮತ್ತು ಮಂಡಲಗಳ ಮಹತ್ವ, ಸ್ವರೂಪ ಇತ್ಯಾದಿಗಳ ಕುರಿತು ಚರ್ಚಿಸಲಾಗಿದೆ. ದೇವರನ್ನು ಪೂಜೆಗೆ ಆಹ್ವಾನಿಸಿದಾಗ ಅವರು ಮಂಡಲದ ಮೇಲೆ ಬಂದು ಕುಳಿತುಕೊಳ್ಳುತ್ತಾರೆ. ಭಕ್ತರಿಗೆ ಇಂತಹ

ಮಂಡಲಗಳ ದರ್ಶನವು ಶುಭಪ್ರದವಾಗಿರುತ್ತದೆ. ಪಂಚಭೂತಗಳ ಅಂಶವಾದ ಪಂಚವರ್ಣಗಳಿಂದ ರಚಿಸಲ್ಪಟ್ಟ ಮಹಾ ಮಂಡಲಗಳು ಸಮಸ್ತ ಫಲಗಳನ್ನೀಯುತ್ತವೆ. ಎಂಬುದಾಗಿ ಶ್ಲೋಕಗಳನ್ನು ಉದ್ಧರಿಸಿ ಹೇಳಲಾಗಿದೆ.

ಕುಂಡಂತಾಯ ಕೆ.ಎಲ್. (ಉದಯವಾಣಿ ೧೦.೧೨.೨೦೦೪) 'ಪೂರ್ಣಾನಂದದಾಯಕ ಷಷ್ಠಿ ಪರ್ವ' ಕರಾವಳಿ ಕರ್ನಾಟಕದ ಸುಬ್ರಹ್ಮಣ್ಯ ದೇವಾಲಯಗಳಲ್ಲಿ ನಡೆಯುವ ಸುಬ್ರಹ್ಮಣ್ಯ ಷಷ್ಠಿಯ ಕುರಿತಾದ ವಿಮರ್ಶಾತ್ಮಕ ಲೇಖನ, ಸುಬ್ರಹ್ಮಣ್ಯ, ಸ್ಕಂಧ, ನಾಗ ಈ ಆರಾಧನ ಸ್ವರೂಪಿಗಳ ಸಾಮ್ಯವನ್ನು ಗುರುತಿಸಲಾಗಿದೆ. ಮಾರ್ಗಶಿರ ಶುದ್ಧ ಷಷ್ಠಿಯಂದು ಸನ್ನಿಹಿತವಾಗುವ ಸುಬ್ರಹ್ಮಣ್ಯ ಷಷ್ಠಿ ವಿಶೇಷ ಪರ್ವದಿನ. ಈ ದಿನವು ಸ್ಕಂಧ-ನಾಗ ಆರಾಧನೆಗೆ ಪ್ರಶಸ್ತದಿನ ಎಂದು ಅಭಿಪ್ರಾಯಪಡಲಾಗಿದೆ. ಪಂಚಮಿ, ಷಷ್ಠಿ ತಿಥಿಗಳ ಸಂಯೋಗದಿಂದ ಪೂರ್ಣ ಮತ್ತು ಆನಂದಗಳು ಬೆಸೆದು 'ಪೂರ್ಣಾನಂದ' ಪ್ರಾಪ್ತಿಯಾಗುವುದು. ಈ ತಿಥಿ ಪ್ರತಿಪಾದ್ಯರಾದ ನಾಗ ಸುಬ್ರಹ್ಮಣ್ಯ ಸಮಾಗಮವು ಭಾರತೀಯ ತತ್ವಜ್ಞಾನದಂತೆ ಸತ್ ಸಂತಾನಪ್ರಾಪ್ತಿ ಮತ್ತು ಮಾನವ ಬದುಕಿನ ಪರಮಲಕ್ಷ್ಯವಾದ ಸುಖ ಸಮೃದ್ಧಿಗಳನ್ನು ಅನುಗ್ರಹಿಸುವ ಶಕ್ತಿ ವಿಶೇಷವಾಗಿ ಆರಾಧನೆಗೊಳ್ಳುತ್ತಿದೆ. ಕೃಷಿ ಸಮೃದ್ಧಿ, ಮಹಾವ್ಯಾಧಿ ನಿವಾರಣೆಗಳು ಈ ದೇವರ ಕೃಪೆಯಿಂದ ಎಂಬುದು ಜನಪದ ನಂಬಿಕೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ವಿನಾಯಕ ಭಟ್ಟ ಮೂರೂರು (ವಿಜಯ ಕರ್ನಾಟಕ ೮.೦೬.೨೦೦೫) 'ನಾಗ ಸುಬ್ರಹ್ಮಣ್ಯ ಬಂಧ ಅನನ್ಯ' ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ವಿಶೇಷ ಪುರವಣಿ ಆರಾಧನಾ ಪರಂಪರೆಯಲ್ಲಿ 'ನಾಗ' ಮತ್ತು 'ಸುಬ್ರಹ್ಮಣ್ಯ'ರನ್ನು ಒಂದೇ ಸ್ವರೂಪದಲ್ಲಿ ಗುರುತಿಸುವ ಸಂಪ್ರದಾಯ ಬೆಳೆದು ಬಂದಿದೆ. ಸುಬ್ರಹ್ಮಣ್ಯ ಸ್ವರೂಪವನ್ನು ವೇದಕಾಲದಿಂದಲೂ ಮನಃಶಾಸ್ತ್ರದ ಹಿನ್ನಲೆಯಲ್ಲಿ ಅಧ್ಯಯನ ನಡೆಸಿಕೊಂಡು ಬರಲಾಗುತ್ತಿದೆ. ನಾಗ-ಮನಸ್ಸು, ಮನಸ್ಸಿನ ನಾಲ್ಕು ಪ್ರಕಾರಗಳಾದ ಮನೋ, ಬುದ್ಧಿ, ಚಿತ್ತ, ಅಹಂಕಾರ, ಇವುಗಳ ಹತೋಟಿ ಅದಕ್ಕಾಗಿ ಯೋಗಾದಿಗಳ ಸಾಧನೆಗಳು. ಅದರ ಅಧ್ಯಯನ ಫಲಿತಭಾಗವೇ ಸುಬ್ರಹ್ಮಣ್ಯ, ಮಾನಸಿಕ ಸ್ವೇಚ್ಛಾಪ್ರವೃತ್ತಿ, ಉನ್ಮತ್ತತೆ, ಮನೋವಿಕಾರಾದಿಗಳನ್ನು ಹತೋಟಿಯಲ್ಲಿಡುವ ಈ ವಿದ್ಯಾ ಪ್ರಕಾರವೇ ಸುಬ್ರಹ್ಮಣ್ಯ. ಈ ಮಾತನ್ನು ತತ್ವ, ಸೂತ್ರ ವೇದಗಳು, ಬ್ರಾಹ್ಮಣಗಳು, ಅರಣ್ಯಕ ಮತ್ತು ಪುರಾಣಗಳನ್ನು ಉಲ್ಲೇಖಿಸಿ ವಿಶ್ಲೇಷಿಸಲಾಗಿದೆ.

ವಿಜಯಲಕ್ಷ್ಮಿ ಸಾಸನೂರು (ವಿಜಯ ಕರ್ನಾಟಕ ೧೧.೭.೨೦೦೫) 'ಹಬ್ಬದ ಸೊಬಗಿಗೆ ನಾಗರ ರಂಗೋಲಿ' ಎಂಬ ಲೇಖನದಲ್ಲಿ ನಾಗರ ಪಂಚಮಿಯ ಜನಪದ ಆಶಯವನ್ನು ವ್ಯಕ್ತಪಡಿಸಲಾಗಿದೆ. ಪಂಚಮಿಯ ವಿಶೇಷ ದಿನದಲ್ಲಿ ಉತ್ತರ ಕರ್ನಾಟಕದಲ್ಲಿ ಜನಪದರು ತಮ್ಮ ಮನೆಗಳ ಮುಂದೆ ಬಿಡಿಸುವ ತರತರದ ರಂಗೋಲಿಗಳ ಕುರಿತಾದ ಅಪಾರ ವೈವಿಧ್ಯತೆ, ದಟ್ಟ ಪ್ರಾದೇಶಿಕತೆ ಹಾಗೂ ಪುರಾಣ ಕಾಲದ ಕಲ್ಪನೆಗಳು ಈ ರಂಗೋಲಿಗಳ ಮೂಲಕ ಮತ್ತೆ ಜೀವ ತಳೆಯುತ್ತದೆ ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ.

ಅಶೋಕ ಸಾಮಗ ನಿಂಜೂರು (ಉದಯವಾಣಿ ೧೦.೮.೨೦೦೫) 'ವೈದಿಕ ಪರಂಪರೆಯಲ್ಲಿ ನಾಗಪೂಜೆ' ಲೇಖನವು ನಾಗಾರಾಧನೆ ಮತ್ತು ನಾಗರಪಂಚಮಿಯ ವೈದಿಕ ಪರಂಪರೆಯನ್ನು ವಿಶ್ಲೇಷಿಸುತ್ತದೆ. ಕೃಷ್ಣಯಜುರ್ವೇದದ ತೈತ್ತರೀಯ ಸಂಹಿತೆಯಲ್ಲಿರುವ ಮೂರು ಲೋಕಗಳ ನಾಗಗಳನ್ನು ಭೂಮಿಯಲ್ಲಿ ಕಣ್ಣಿಗೆ

ಕಾಣಿಸುವ ಹರಿದಾಡುವ ಸರ್ಪಗಳು, ಆಕಾಶದಲ್ಲಿ ಚಲಿಸುವ ನಾಗಗಳು, ಮತ್ತು ದೇವ ಲೋಕದಲ್ಲಿರುವ ದಿವ್ಯ ನಾಗಶಕ್ತಿಗಳಾದ ಶೇಷ, ವಾಸುಕಿ ಮುಂತಾದವುಗಳನ್ನು ಗುರುತಿಸಲಾಗಿದೆ. ಈ ಆಧಾರದ ಹಿನ್ನೆಲೆಯಲ್ಲಿ ನಾಗ ಪೂಜೆ ವೈದಿಕ ಪರಂಪರೆಯಿಂದಲೇ ಬಂದುದೆಂಬ ವಾದ ಮಂಡಸಿಲಾಗಿದೆ.

ನಾಗಾರಾಧನೆ ಇದೊಂದು ಜನಪದ ಸಂಸ್ಕೃತಿ ಅಲ್ಲ ಜಾನಪದ ಪ್ರಭಾವ ಇದರಲ್ಲಿ ಸೇರಿಕೊಂಡಿದೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

೩.೪. ಆಂಗ್ಲ ಕೃತಿಗಳು

ಅಧ್ಯಯನದ ಸಮೀಕ್ಷೆಯಲ್ಲಿ ಉಪಲಬ್ಧವಿರುವ ಆಂಗ್ಲ ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ. ಆಂಗ್ಲ ಕೃತಿಗಳಲ್ಲಿ ಕೆಲವು ವಿದೇಶಿ ವಿದ್ವಾಂಸರ ಬರಹಗಳು, ಮತ್ತು ದೇಶಿಯ ವಿದ್ವಾಂಸರ ಬರಹಗಳು. ಇವರು ನಾಗಾರಾಧನೆಯನ್ನು ಯಾವ ದೃಷ್ಟಿಕೋನಗಳಿಂದ ವಿವೇಚಿಸುತ್ತಾರೆ ಎಂಬುದನ್ನು ಪರಿಗಣಿಸಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಈ ಕೃತಿಗಳಲ್ಲಿರುವ ಉಪಯುಕ್ತ ಮಾಹಿತಿಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ.

ಆಂಗ್ಲ ವಿದ್ವಾಂಸ ಜೇಮ್ಸ್ ಫರ್ಗ್ಯೂಸನ್ ಅವರ 'Tree and Surpent Worship' (೧೮೭೩-ಲಂಡನ್ ಪುನರ್ ಮುದ್ರಣ ೨೦೦೪-ದೆಹಲಿ) ಕೃತಿಯು ನಾಗಾರಾಧನೆಯ ಕುರಿತಾದ ಮಹತ್ವಪೂರ್ಣವಾದ ಗ್ರಂಥವೆಂದು ಭಾವಿಸಲಾಗಿದೆ. ಈ ಕೃತಿಯಲ್ಲಿ ನಾಗಾರಾಧನೆಯನ್ನು ವಿವಿಧ ದೃಷ್ಟಿಕೋನಗಳಿಂದ ಜಾಗತಿಕ ಮಟ್ಟದಲ್ಲಿ ವಿಶ್ಲೇಷಿಸಲಾಗಿದೆ. ಪ್ರಾರಂಭದಲ್ಲಿ ವೃಕ್ಷಾರಾಧನೆಯ ಕುರಿತು ಚರ್ಚಿಸಲಾಗಿದೆ. ಬಳಿಕ ನಾಗಾರಾಧನೆಯ ಕುರಿತು ಚರ್ಚಿಸಲಾಗಿದೆ. ನಾಗಾರಾಧನೆಯ ಪ್ರಾರಂಭಿಕ ಹಿನ್ನೆಲೆಯನ್ನು ಕುರಿತು ಸರ್ಪಕ್ಕೆ ಬೇರೆ ಯಾವ ಪ್ರಾಣಿಗಳಲ್ಲಿರದ ವಿಶೇಷ ಗುಣ, ಅದರ ಬುಸುಗುಟ್ಟುವಿಕೆ, ಹೆಡೆ, ಅರಳಿಸುವಿಕೆ, ತೆವಳಿಕೊಂಡು ಹೋಗುವ ಆಕರ್ಷಣೀಯ ಪ್ರವೃತ್ತಿ, ಅತಿಯಾದ ವಿಷ ಮತ್ತು ಯಾವುದೇ ಪ್ರಾಣಿಗೆ ಕಚ್ಚಿದಾಗ ಪ್ರಾಣಿಯು ಸಾಯುವುದು, ಮೊದಲಾದ ಲಕ್ಷಣಗಳು ನಾಗರಿಕತೆ ಪ್ರಾರಂಭದ ಮಾನವರಿಗೆ ಸರ್ಪದ ಮೇಲಿರುವ ಹೆದರಿಕೆಯೇ ಅದರ ಆರಾಧನೆಗೆ ಕಾರಣವಾಗಿರಬೇಕು" (ಪುಟ-೧) ಎಂದು ಅಭಿಪ್ರಾಯಪಡಲಾಗಿದೆ. ಜಗತ್ತಿನಾದ್ಯಂತ ಪ್ರಚಲಿತದಲ್ಲಿರುವ ಸರ್ಪಾರಾಧನೆಯನ್ನು ಗಮನಿಸಿದಾಗ ಸರ್ಪವು ಜ್ಞಾನ, ಆರೋಗ್ಯ, ಸಂಪತ್ತು, ಸಂತಾನ ಇದನ್ನು ಅನುಗ್ರಹಿಸುವ ಶಕ್ತಿವುಳ್ಳದ್ದಾಗಿದೆ. ಪ್ರಾರಂಭದಲ್ಲಿ ಹಾವಿನ ಮೇಲಿರುವ ಭಯವು ಆರಾಧನೆಗೆ ಕಾರಣವಾಗಿದ್ದರೂ ಕ್ರಮೇಣ ನಂಬಿಕೆ ಬೆಳೆದಂತೆ ಈ ನಂಬಿಕೆಯಲ್ಲಿ ಪ್ರೀತಿ ಗೌರವಗಳೇ ಹೆಚ್ಚಾಗಿರುವಂತೆ ಕಂಡು ಬರುತ್ತದೆ ಎಂದಿದ್ದಾರೆ. ನಾಗಾರಾಧನೆಯ ಮೂಲದ ಕುರಿತು ಉಲ್ಲೇಖಿಸುತ್ತಾ ''ಇದು ಟುರೇನಿಯಂ ಮೂಲದಿಂದ ಬಂದಿರಬೇಕು. ಟುರೇನಿಯನ್ ಮೂಲದ ಜನರು ಯುಫ್ರೇಟೀಸ್ ನದೀ ದಂಡೆಗಳಲ್ಲಿ ವಾಸಿಸುತ್ತಿದ್ದು ಅಲ್ಲಿ ಇದು ಆರಂಭವಾಗಿರಬೇಕು. ಬಳಿಕ ಪ್ರಪಂಚದ ಇತರೆಡೆಗಳಿಗೆ ಹರಡಿರಬೇಕು. ಅಲ್ಲದೆ ಮಾನವ ಬಲಿಯು ಪ್ರಚಲಿತದಲ್ಲಿಡೆಗಳಲ್ಲೆಲ್ಲ ಸರ್ಪಾರಾಧನೆ ಇದ್ದಂತೆ ತೋರುತ್ತದೆ. ಅಲ್ಲಿ ಈಗ ಮಾನವ ಬಲಿ ನಿಂತರೂ ಸರ್ಪಾರಾಧನೆ ಮುಂದುವರೆದಿದೆ'' ಎಂದು ಅಭಿಪ್ರಾಯಪಡಲಾಗಿದೆ. ಮುಂದಿನ ಭಾಗಗಳಲ್ಲಿ ಈಜಿಪ್ಟ್, ಮೆಸೊಪೊಟೇಮಿಯ, ಗ್ರೀಸ್, ಇಟಲಿ, ಜರ್ಮನಿ,

ಫ್ರಾನ್ಸ್, ಸ್ಕ್ಯಾಂಡಿನೇವಿಯಾ ಮೊದಲೆಡೆ ಪ್ರಾಚೀನ ಸಂಸ್ಕೃತಿಯಲ್ಲಿ ನಾಗಾರಾಧನೆ ಪ್ರಚಲಿತದಲ್ಲಿದ್ದ ಬಗ್ಗೆ ವಿವರಿಸಲಾಗಿದೆ. ಭಾರತದಲ್ಲಿ ನಾಗಾರಾಧನೆಯ ಪ್ರಾರಂಭದ ಕುರಿತು ಉಲ್ಲೇಖಿಸಲಾಗಿದೆ. ವಿಷಯ ಸಂಗ್ರಹಣೆ, ನಿರೂಪಣೆ ಇತ್ಯಾದಿಗಳ ದೃಷ್ಟಿಯಿಂದ ಈ ಗ್ರಂಥವನ್ನು ಉತ್ತಮ ಗ್ರಂಥವೆಂದು ಭಾವಿಸಲಾಗಿದೆ.

ಸಿ.ಎಫ್. ಓಲ್ಡ್‌ಹೆಮ್, ಅದರ The Sun and Surpent (೧೯೦೫-ಲಂಡನ್-ಪುನರ್ ಮುದ್ರಣ, ೧೯೮೮-ದೆಹಲಿ) ಕೃತಿಯು ಭಾರತೀಯ ಪರಂಪರೆಯಲ್ಲಿ ಸೂರ್ಯನ ಆರಾಧನೆ ಮತ್ತು ಸರ್ಪಾರಾಧನೆಯ ಕುರಿತಾದ ಮಹತ್ವದ ಮಾಹಿತಿ ಒದಗಿಸುತ್ತದೆ. ಸರ್ಪಾರಾಧನೆಯು ಬೆಳೆದು ಬಂದಿರುವ ಕುರಿತು ವಿವೇಚಿಸಲಾಗಿದೆ. ಸರ್ಪವು ಭಾರತದಲ್ಲಿ ಶುಭ ಸಂಕೇತವಾಗಿ, ಒಳಿತಿನ ರಕ್ಷಕನಾಗಿ ಕಂಡು ಬಂದಿದೆ.

ಅದನ್ನು ಕೊಲ್ಲಬಾರದು, ಅಥವಾ ಅದಕ್ಕೆ ಹಾನಿ ಮಾಡಬಾರದು, ಎಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಆರಾಧಿಸಲ್ಪಡುವ ಹೆಡೆಯರಳಿಸಿದ ಸರ್ಪನ ಶಿಲಾ ಪ್ರತಿಮೆಗಳು ಭಾರತದಾದ್ಯಂತ ಕಂಡು ಬರುತ್ತವೆ. ಕುಲ ಲಾಂಛನವಾಗಿ ಇಲ್ಲಿ ಸರ್ಪವನ್ನು ಪೂಜಿಸುವ ಪರಂಪರೆ ಕಂಡು ಬರುತ್ತದೆ ಎಂದು ವಿವರಿಸಲಾಗಿದೆ. ಮತ್ತು ವೇದಗಳಲ್ಲಿ ಕಂಡು ಬರುವ ಸರ್ಪ ಎಂಬ ಪದವನ್ನು ಸರ್ಪಾರಾಧನೆಯೊಂದಿಗೆ ಅವುಗಳಿಗಿರುವ ಸಂಬಂಧ, ಪುರಾಣದಲ್ಲಿ ಕಂಡು ಬರುವ ನಾಗ ಅಥವಾ ಸರ್ಪಗಳಿಗೆ ಸಂಬಂಧಿಸಿದ ಕಥೆಗಳು, ಐತಿಹ್ಯಗಳು ಮೊದಲಾದ ವಿಷಯಗಳನ್ನು ಈ ಕೃತಿಯು ಒಳಗೊಂಡಿದೆ. ವಿವಿಧ ಸಮುದಾಯಗಳ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ.

ಎಫ್. ಪವೆಟ್ ಅವರ 'Nayars of Malabar' (೧೯೧೫-ಲಂಡನ್- ಪುನರ್ ಮುದ್ರಣ-೧೯೯೦) ಕೃತಿಯಲ್ಲಿ ನಿರ್ದಿಷ್ಟವಾಗಿ ಕೇರಳದ ನಾಗಾರಾಧನೆಯ ಕುರಿತು ಚರ್ಚಿಸಲಾಗಿದೆ (ಪುಟ-೨೭೫-೨೮೨) ನಾಯರ್‌ಗಳು ನಾಗಾರಾಧನೆ ಪರಂಪರೆಯಿಂದ ಬಂದಿರುವ ಸಮುದಾಯ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಕೇರಳದಲ್ಲಿ ಪ್ರಚಲಿತದಲ್ಲಿರುವ ನಾಗಾರಾಧನೆಯ ವಿವಿಧ ಸ್ವರೂಪಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ನಾಯರ್‌ಗಳು ಮತ್ತು ನಾಗಾರಾಧನೆಯೊಂದಿಗಿನ ಸಂಬಂಧ, ಸರ್ಪಕಾವುಗಳು, ನಾಗ ದೇವಾಲಯಗಳು, ಸರ್ಪಂತುಳ್ಳಲ್, ನಾಗಾರಾಧನೆಯ ಕುರಿತಾದ ಜನಪದ ನಂಬಿಕೆಗಳನ್ನು ವಿವರಿಸಲಾಗಿದೆ. ಒಟ್ಟಿನಲ್ಲಿ ಸರ್ಪ ಕೇರಳದಲ್ಲಿ ಆರಾಧಿಸಲ್ಪಡುವ ಪ್ರಭಾವಿ ದೈವ ಎಂಬ ಪರಿಕಲ್ಪನೆಯನ್ನು ನೀಡಲಾಗಿದೆ.

ಜೆ.ಪಿ.ಹೆಚ್. ವ್ರೋಗೆಲ್ ಅವರ 'Indian Surpentlore or The Nagas in Hindu legand and Art' (೧೯೨೬-ಲಂಡನ್-ಪುನರ್ ಮುದ್ರಣ-೧೯೯೫, ದೆಹಲಿ) ಕೃತಿಯು ಭಾರತೀಯ ಪರಂಪರೆಯಲ್ಲಿ ಸರ್ಪಾರಾಧನೆಯ ಮಹತ್ವವನ್ನು ಉಲ್ಲೇಖಿಸುತ್ತದೆ. ನಾಗಾರಾಧನೆ ಬೆಳೆದು ಬಂದಿರುವ ಬಗೆಯನ್ನು ಜೇಮ್ಸ್ ಪರ್ಗ್ಯೂಸನ್ ಹೇಳಿದ ವಿಚಾರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಪರ್ಗ್ಯೂಸನ್ ಹೇಳಿರುವ ಬೌದ್ಧ ಧರ್ಮ ನಾಗಾರಾಧನೆಯನ್ನು ಪಲ್ಲಟಗೊಳಿಸಿತು ಎಂಬ ವಿಚಾರವನ್ನು ಇಲ್ಲಿ ಚರ್ಚಿಸಲಾಗಿದೆ. ನಾಗ ಸಂಬಂಧಿ ಪ್ರಚಲಿತದಲ್ಲಿರುವ ವಿವಿಧ ಐತಿಹ್ಯಗಳು, ನಂಬಿಕೆಗಳು, ಮತ್ತು ಸಂಪ್ರದಾಯಗಳನ್ನು ಇಲ್ಲಿ ಗಮನಿಸಲಾಗಿದೆ. ಸರ್ಪಾರಾಧನೆಯ ಹಿನ್ನೆಲೆಯಲ್ಲಿ ವೇದಗಳಲ್ಲಿ, ಸಂಹಿತೆಗಳಲ್ಲಿ ಬ್ರಾಹ್ಮಣ ಮತ್ತು ಪುರಾಣಗಳಲ್ಲಿರುವ ವಿಚಾರಗಳನ್ನು ವಿವರವಾಗಿ ಈ ಗ್ರಂಥದಲ್ಲಿ

ಚರ್ಚಿಸಲಾಗಿದೆ. ಮುಖ್ಯವಾಗಿ ಭಾರತೀಯ ಕಲೆ, ಶಿಲ್ಪಕಲೆ, ಮತ್ತು ಪುರಾಣಗಳಲ್ಲಿ ನಾಗ ಚಿತ್ರಣಗೊಂಡಿರುವ ಬಗೆಯನ್ನು ವಿವರಿಸುತ್ತದೆ.

ಕೆ.ಪಿ. ಪದ್ಮನಾಭ ಮೆನನ್ ಅವರ 'History of Kerala' (೧೯೩೭ ಪುಟ - ೪೭೪-೪೯೮) ಕೃತಿಯಲ್ಲಿ ಕೇರಳದ ನಾಗಾರಾಧನೆಯನ್ನು ಕೇರಳದ ಐತಿಹಾಸಿಕ ಹಿನ್ನೆಲೆಯೊಂದಿಗೆ ಪ್ರಸ್ತಾಪಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕೇರಳದ ಮಲಬಾರ್ ಪ್ರದೇಶವು ನಾಗಾರಾಧನೆಯ ಪ್ರಮುಖ ಕೇಂದ್ರ, ನಾಗಾರಾಧನೆ ಎನ್ನುವುದು ಹಿಂದುಗಳ ಧಾರ್ಮಿಕ ಜೀವನದ ಒಂದು ಅವಿಬಾಜ್ಯ ಅಂಗ ಎಂದು ವರ್ಣಿಸಲಾಗಿದೆ. ಪ್ರಾರಂಭದಲ್ಲಿ ಪರಶುರಾಮ ಸೃಷ್ಟಿ ಮತ್ತು ನಾಗಾರಾಧನೆಯ ಕುರಿತಾಗಿ ಪ್ರಚಲಿತದಲ್ಲಿರುವ ಐತಿಹ್ಯಗಳನ್ನು ವಿವೇಚಿಸಲಾಗಿದೆ. ಮುಂದಿನ ಭಾಗಗಳಲ್ಲಿ ಕೇರಳದ ನಾಗಾರಾಧನೆಯ ಚಿತ್ರಣ ನೀಡಲಾಗಿದೆ. ಪುಳ್ಳವರು, ಅವರ ಹಿನ್ನೆಲೆಯೊಂದಿಗೆ ಪ್ರಚಲಿತದಲ್ಲಿರುವ ಐತಿಹ್ಯ, ಸರ್ಪಂತುಳ್ಳಲ್, ಕೇರಳದ ನಾಗ ದೇವಾಲಯಗಳು, ಅಲ್ಲಿನ ಆಚರಣೆಗಳು, ನೂರುಂಪಾಲುಂ, ಸರ್ಪಬಲಿ, ನಾಗಾರಾಧನೆಯ ಕುರಿತಾದ ಜನಪದ ನಂಬಿಕೆಗಳು ಮೊದಲಾದ ವಿವಿಧ ಪ್ರಕಾರಗಳ ಕುರಿತು ವಿಶ್ಲೇಷಿಸಿರುವುದು ಕಂಡು ಬರುತ್ತದೆ. ನಾಗಾರಾಧನೆಗೆ ಮಲಬಾರ್‌ನ ಜನತೆ ಅತ್ಯಂತ ಪ್ರಾಧಾನ್ಯತೆ ಕಲ್ಪಿಸಿಕೊಂಡಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಎಲ್.ವಿ. ಕೃಷ್ಣ ಅಯ್ಯರ್ ಅವರ 'Social History of Kerala' (೧೯೭೦ ಪುಟ - ೧೧೪-೧೨೧) ಕೃತಿಯಲ್ಲಿ ನಾಗಾರಾಧನೆಯ ಐತಿಹಾಸಿಕ ಹಿನ್ನೆಲೆ, ಮತ್ತು ನಿರ್ದಿಷ್ಟವಾಗಿ ಕೇರಳದ ನಾಗಾರಾಧನೆಯು ಇತಿಹಾಸದೊಂದಿಗೆ ಸಂಬಂಧ ಪಡೆದುಕೊಂಡಿರುವ ವಿಚಾರಗಳನ್ನು ಚರ್ಚಿಸಿರುವುದು ಕಂಡು ಬಂದಿದೆ. ಕೇರಳದಲ್ಲಿ ಪ್ರಚಲಿತದಲ್ಲಿರುವಷ್ಟು ನಾಗಾರಾಧನೆಯ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು ಜಗತ್ತಿನ ಯಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ ಎಂಬ ಅಭಿಪ್ರಾಯವಿದೆ. ನಾಯರ್ ಎಂಬ ಪದವು ನಾಗಾರಾಧನೆಯ ಹಿನ್ನೆಲೆಯಿಂದ ಬಂದಿದೆ ಎಂದು ವಿವರಿಸಲಾಗಿದೆ.

ಗುರುರಾಜ ಭಟ್ ಪಿ. ಅವರ 'Studies in Tuluva History and Culture' (೧೯೭೫ ಪುಟ - ೩೪೭-೩೮೯) ಕೃತಿಯಲ್ಲಿ ಸುಬ್ರಹ್ಮಣ್ಯ ಆರಾಧನೆ ಮತ್ತು ನಾಗಾರಾಧನೆಯ ತಾತ್ವಿಕ ಹಿನ್ನೆಲೆಯನ್ನು ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಸುಬ್ರಹ್ಮಣ್ಯಾರಾಧನೆ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿರುವ ನಾಗಾರಾಧನೆಯ ಇನ್ನೊಂದು ರೂಪವೆಂದು, ಅದರಲ್ಲೂ ದಕ್ಷಿಣ ಕನ್ನಡದಲ್ಲಿ ನಾಗ ಸುಬ್ರಹ್ಮಣ್ಯ ಅವಿನಾಭಾವ ಸಂಬಂಧವಿದೆಯೆಂದು ಉಲ್ಲೇಖಿಸಲಾಗಿದೆ. ಪ್ರಸಿದ್ಧ ಸುಬ್ರಹ್ಮಣ್ಯ ಕ್ಷೇತ್ರವಾಗಿರುವ ಕುಕ್ಕೆ ಸುಬ್ರಹ್ಮಣ್ಯ ಮತ್ತು ಜಿಲ್ಲೆಯ ವಿವಿಧ ಸುಬ್ರಹ್ಮಣ್ಯ ಕ್ಷೇತ್ರಗಳನ್ನು ಇತಿಹಾಸದೊಂದಿಗೆ ತುಲನೆ ಮಾಡಲಾಗಿದೆ. ಹಲವಾರು ಉಪಯುಕ್ತವಾದ ಸುಬ್ರಹ್ಮಣ್ಯ ಮತ್ತು ನಾಗ ಪ್ರತಿಮೆಗಳ ಛಾಯಾಚಿತ್ರಗಳನ್ನು ಮುಂದಿನ ಭಾಗಗಳಲ್ಲಿ ನೀಡಲಾಗಿದೆ.

ಕೆ.ಕೆ.ಎನ್. ಕುರುಪ್ ಅವರ 'Aryan and Dravidian Elements in Malabar Folklore' (೧೯೭೭ ಪುಟ - ೪೩-೪೪) ಕೃತಿಯಲ್ಲಿ ಕೇರಳದ ಪ್ರಸಿದ್ಧ ಜನಪದ ಆರಾಧನ ಕಲೆಯಾಗಿರುವ ತೈಯಂನಲ್ಲಿ ನಾಗಾರಾಧನೆಯ ಪ್ರಭಾವ ಎದ್ದು ಕಾಣುತ್ತದೆ ಎಂದು ವಿಶ್ಲೇಷಿಸಲಾಗಿದೆ. ಪ್ರಸ್ತುತ ಲೇಖನವನ್ನು ಜನಪದೀಯ ಹಿನ್ನೆಲೆಯಲ್ಲಿ

ವಿಶ್ಲೇಷಿಸಿರುವುದು ಕಂಡುಬರುತ್ತದೆ. ಕೇರಳದ ನಾಗಾರಾಧನೆಯ ವಿವಿಧ ಪ್ರಕಾರಗಳನ್ನು ವಿವರಿಸಲಾಗಿದೆ. ಪ್ರಮುಖವಾಗಿ ಜನಪದ ದೈವಗಳಾಗಿರುವ ಶ್ರೀ ಕುರುಂಬ, ಬದ್ರಕಾಳಿ, ಕಾಳರಾತ್ರಿಗಳ ತೈಯಂ ನಲ್ಲಿ ನಾಗಾರಾಧನೆಯ ಪ್ರಭಾವ ಎದ್ದು ಕಾಣುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಟಿ.ಕೆ. ಗೋಪಾಲ್ ಪಣಿಕ್ಕರ್ ಅವರ 'Malabar and its Folk' (೧೯೮೩ ಪುಟ - ೧೪೫-೧೫೧) ಕೃತಿಯು ಕೇರಳದ ಜಾಪನದ ಹಿನ್ನೆಲೆಯನ್ನು ಒಳಗೊಂಡಿರುವ ಕೃತಿ. ಇದರಲ್ಲಿ ಕೇರಳದಲ್ಲಿ ನಡೆಯುವ ಸರ್ಪಾರಾಧನೆಯ ಸ್ಥಳಗಳನ್ನು ಗುರುತಿಸಲಾಗಿದೆ. ಇಲ್ಲಿ ನಡೆಯುವ ಆಚರಣೆಗಳು ಯಾವ ರೀತಿಯಲ್ಲಿ ನಡೆಯುತ್ತವೆ ಎಂಬುದನ್ನು ಗುರುತಿಸಲಾಗಿದೆ. ಇಲ್ಲಿಯ ಕೆಲವು ನಂಬೂದಿರಿ ಕುಟುಂಬಗಳು ಸರ್ಪಗಳೊಂದಿಗೆ ಹೊಂದಿರುವ ತಾದಾತ್ಮ್ಯತೆಯನ್ನು ವಿವರಿಸಲಾಗಿದೆ. ಆ ಸರ್ಪಗಳು ನಂಬೂದಿರಿ ಕುಟುಂಬದ ಯಾವುದೇ ಸಹಾಯಗಳ ಬೇಡಿಕೆಯನ್ನು ಈಡೇರಿಸುತ್ತವೆ ಎಂಬ ಪ್ರಚಲಿತ ನಂಬಿಕೆಯನ್ನು ಇಲ್ಲಿ ವಿಶೇಷವಾಗಿ ಗುರುತಿಸಿದ್ದಾರೆ. ಹಾವು ಕಡಿದವರನ್ನು ಈ ಕುಟುಂಬದವರ ಬಳಿಗೆ ಕರೆತರಲಾಗುತ್ತದೆ. ಆಗ ನಂಬೂದಿರಿ ಯಜಮಾನ ಕಡಿದ ಸರ್ಪವನ್ನು ಕರೆಸಿ ದೇಹದಲ್ಲಿ ಸೇರಿರುವ ವಿಷವನ್ನು ತೆಗೆದು ಗುಣಪಡಿಸುತ್ತಾನೆ. ನಂಬೂದಿರಿಗಳ ಮನೆಯನ್ನು ಮಾರುವ ಸಂದರ್ಭಬಂದರೆ ಕುಟುಂಬಕೆ ಸಂಬಂಧಿಸಿದ ಸರ್ಪವು ಹಾಗೆಯೇ ಹಸ್ತಾಂತರಗೊಳ್ಳುತ್ತದೆ. ಎಂಬಿತ್ಯಾದಿ ಪ್ರಚಲಿತ ನಂಬಿಕೆಗಳನ್ನು ಉಲ್ಲೇಖಿಸಿದ್ದಾರೆ.

ಹರಿದಾಸ ಭಟ್ಟಾಚಾರ್ಯ ಅವರ The cultural Heritage of India (೧೯೮೩) ಕೃತಿಯಲ್ಲಿ ದಕ್ಷಿಣ ಭಾರತ ಸ್ಕಂಧ ಪಂಥ (ಪುಟ ೩೦೯-೩೧೩) ಎಂಬ ಲೇಖನವಿದೆ. ಇವರು ನಿರ್ದಿಷ್ಟವಾಗಿ ದಕ್ಷಿಣ ಭಾರತದ ಆರಾಧಕರನ್ನು 'ಸ್ಕಂಧ ಪಂಥ' ಎಂದು ಗುರುತಿಸುತ್ತಾರೆ. ಇವರು ನಾಗಲಾಂಛನವನ್ನು ಹೊಂದಿರುವ ಗುಂಪುಗಳು ಪೂರ್ವದಲ್ಲಿ ಇದ್ದಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಪ್ರಾಚೀನ ತಮಿಳು ಕಾವ್ಯದಲ್ಲಿ ಉಲ್ಲೇಖವಾಗಿರುವ ಗುಡ್ಡಗಾಡು ಪ್ರದೇಶದ ಆಧಿದೇವತೆ, ಬೇಟೆಗಾರ ಬುಡಕಟ್ಟು ವಾಸಿಗಳ ದೇವರಾದ 'ವೇಲನ್' ಎಂಬುದು 'ಮುರುಗನ್' ನನ್ನು ಸೂಚಿಸುತ್ತದೆ. ಮತ್ತು ಕಾಲಾಂತರದಲ್ಲಿ ತಮಿಳುಕಾವ್ಯಗಳು ನಿರ್ಮಾಣವಾಗುವುದನ್ನು ಉಲ್ಲೇಖಿಸುತ್ತಾರೆ. ಸ್ಕಂಧ, ಸುಬ್ರಹ್ಮಣ್ಯ ಮತ್ತು ಶಿವ ದೇವಾಲಯಗಳು ಮತ್ತು ನಾಗರಾಧನೆಯು ಬೆಳೆದಿರುವ ರೀತಿ, ಸ್ಕಂಧ ಮೂರ್ತಿಗಳು ಕಂಡುಬರುವ ರೀತಿಯನ್ನು ಶಿಲ್ಪ ಕಲೆಯ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.

ಪಿ.ವಿ.ಜಗದೀಶ ಅಯ್ಯರ್ ಅವರ 'South Indias Customs' (೧೯೮೫, ಪುಟ, ೮೯-೯೧)ಕೃತಿಯಲ್ಲಿ ನಾಗಾರಾಧನೆಯ ಉಲ್ಲೇಖ ಕಂಡುಬರುತ್ತದೆ. ನಾಗ ಪ್ರತಿಮೆಗಳನ್ನು ಎಲ್ಲಿ, ಯಾವ ರೀತಿ, ಹೇಗೆ ಪ್ರತಿಷ್ಠೆ ಮಾಡಬೇಕು ಎನ್ನುವುದನ್ನು ವಿವರಿಸಿದ್ದಾರೆ. ನಾಗ ಪ್ರತಿಷ್ಠೆ ಎನ್ನುವುದು ಹಿಂದೂ ಧರ್ಮದಲ್ಲಿರುವ ಒಂದು ವಿಶಿಷ್ಟ ಪರಂಪರೆಯಾಗಿದೆ. ನಾಗ ಪ್ರತಿಮೆಗಳನ್ನು ಹೆಚ್ಚಾಗಿ ಊರಿನಲ್ಲಿರುವ ಅಶ್ವತ್ಥಮರದ ಕೆಳಗೆ ಪ್ರತಿಷ್ಠಾಪಿಸುತ್ತಾರೆ. ಮನೆಯ ಒಳಭಾಗದಲಿ ನಾಗ ಪ್ರತಿಮೆಗಳನ್ನು ಯಾಕೆ ಸ್ಥಾಪಿಸುವುದಿಲ್ಲ ಎಂಬ ವಿಚಾರವನ್ನು ವಿಶ್ಲೇಷಿಸುತ್ತಾ ಬಹುಶಃ ನಾಗ ಪ್ರತಿಮೆಗಳು ಅತಿ ಸಾಮೀಪ್ಯದಲ್ಲಿರುವುದರಿಂದ ಅದರ ಬಗೆಗೆ ಅಗೌರವ ಉಂಟಾಗುವ ಸಾಧ್ಯತೆ ಇದೆ ಎನ್ನುವುದು ಒಂದು ಕಾರಣವಾದರೆ, ಇನ್ನೊಂದು ಮುಕ್ತ ವಾತಾವರಣದಲ್ಲಿ ಶುಬ್ರ ಗಾಳಿಯಲ್ಲಿ, ಕೆರೆದಂಡೆಗಳ ಮೇಲೆ, ನದೀ ದಂಡೆಗಳ ಮೇಲೆ ಪ್ರತಿಷ್ಠಾಪನೆ ಮಾಡುವುದರಿಂದ ಮನುಷ್ಯರು ಅಲ್ಲಿ ಸುತ್ತಾಡುವುದರಿಂದ ಆರೋಗ್ಯ

ಸುಧಾರಣೆಯಾಗುತ್ತದೆ. ಆದ್ದರಿಂದ ಇದು ಒಂದು ರೀತಿಯಲ್ಲಿ ಪರಿಸರ ಸ್ನೇಹಿಯಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಸಾದು ಚರಣ್ ಪಾಂಡಾ ಅವರ 'Naga cult in orisa' (೧೯೮೫) ಕೃತಿಯಲ್ಲಿ ಒರಿಸ್ಸಾದಲ್ಲಿ ಪ್ರಚಲಿದಲ್ಲಿರುವ ನಾಗಾರಾಧನೆ ಸಂಪ್ರದಾಯವನ್ನು ವಿವರಿಸಲಾಗಿದೆ. ಭಾರತದ ಪಂಥ ಆರಾಧನೆಯ ಬೆಳವಣಿಗೆಯನ್ನು ಇದರಲ್ಲಿ ವಿವರಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ವಿವಿಧ ಕುಲ, ಲಾಂಛನಗಳ ಆರಾಧನ ಪ್ರಕಾರವನ್ನು ವಿವರಿಸಲಾಗಿದೆ. ಮುಖ್ಯವಾಗಿ ಪಂಥ ಆರಾಧನ ಸಂಪ್ರದಾಯವು ಶಿಷ್ಟ ಮತ್ತು ದೇಶೀ ಸಂಸ್ಕೃತಿಯಲ್ಲಿ ಬೆಳೆದ ಬಗೆಯ ವಿಶ್ಲೇಷಣೆ ಅಧ್ಯಾಯದ ಪ್ರಾರಂಭದಲ್ಲಿ ಇದೆ. ಭಾರತದಲ್ಲಿಯ ನಾಗಾರಾಧನೆಯು ಪ್ರಪಂಚದಲ್ಲಿಯೇ ಅತಿ ಹಳೆಯ ಸಂಪ್ರದಾಯವಾಗಿರಬೇಕು ಎಂದು ಇವರು ಅಭಿಪ್ರಾಯ ಪಡುತ್ತಾರೆ. ಮತ್ತು ಸ್ಥೂಲವಾಗಿ ಭಾರತದಾದ್ಯಂತ ಇರುವ ನಾಗಾರಾಧನೆಯ ಪರಿಕಲ್ಪನೆ, ಆಚರಣೆ ಇವುಗಳನ್ನು ಉಲ್ಲೇಖಿಸಲಾಗಿದೆ. ನಂತರದ ಭಾಗಗಳಲ್ಲಿ ಒರಿಸ್ಸಾದಲ್ಲಿ ಪ್ರಚಲಿತದಲ್ಲಿರುವ ನಾಗಾರಾಧನೆಯನ್ನು ವಿವೇಚಿಸಲಾಗಿದೆ. ಇಲ್ಲಿ ಪ್ರಧಾನವಾಗಿ ನಾಗನನ್ನು ವಿಗ್ರಹಗಳ ರೂಪದಲ್ಲಿ, ಜೀವಂತ ಸರ್ಪಗಳ ರೂಪದಲ್ಲಿ, ಮತ್ತು ಶಕ್ತಿಯಾಗಿ, ಪೂರ್ವಜರ ಪಿತೃ ಸಂಕೇತವಾಗಿ ಆರಾಧಿಸಿಕೊಂಡು ಬರಲಾಗುತ್ತದೆ. ನಿಗೂಢ ನಿಧಿಯ ರಕ್ಷಕನಾಗಿ ಫಲವತ್ತತೆಯ ಅಧಿದೇವತೆಯಾಗಿ ಮತ್ತು ಇಷ್ಟ ದೇವತೆಯಾಗಿ ನಾಗನನ್ನು ಆರಾಧಿಸಲಾಗುತ್ತದೆ. ಎಂಬ ವಿಚಾರ ವ್ಯಕ್ತವಾಗಿದೆ ವಿವಿಧ ಧಾರ್ಮಿಕ ಪಂಗಡಗಳೊಂದಿಗೆ ಮುಖ್ಯವಾಗಿ ವೈಷ್ಣವ, ಶೈವ, ಶಾಕ್ತ, ಜೈನ, ಬೌದ್ಧ ಇತ್ಯಾದಿ ಧರ್ಮಗಳೊಂದಿಗಿನ ನಾಗಾರಾಧನೆಯ ಸಂಬಂಧವನ್ನು ವಿವರಿಸಲಾಗಿದೆ. ವಿಶೇಷವಾಗಿ ಪಶ್ಚಿಮ ಒರಿಸ್ಸಾದ 'ನಾಗಬಚ್ಛಾ' ಎಂಬ ಜನಪದ ಪಂಥವನ್ನು ಗುರುತಿಸಲಾಗಿದೆ. ಉಳಿದಂತೆ ನಾಗ ಮತ್ತು ಶಿಲ್ಪಕಲೆ, ನಾಗಾರಾಧನೆ ಮತ್ತು ಜಾನಪದ ಪದ್ಧತಿ ಇತ್ಯಾದಿ ವಿಷಯಗಳ ವಿಶ್ಲೇಷಣೆ ಇದೆ.

ಹೆಚ್.ಕೃಷ್ಣಶಾಸ್ತ್ರಿ ಅವರ 'South Indias Images of gods and godesse's' ಎಂಬ ಕೃತಿಯಲ್ಲಿ (೧೯೮೬, ಪುಟ-೨೪೮) ನಾಗಾ ಸಂಬಂಧಿ ಲೇಖನವಿದೆ. ಈ ಲೇಖನದಲ್ಲಿ ನಾಗ ಪ್ರತಿಮೆಗಳ ಕುರಿತು ವಿವರಣೆ ಕಂಡುಬಂದಿದೆ. ನಾಗ ಪ್ರತಿಮೆಗಳನ್ನು ಕಲ್ಲಿನಲ್ಲಿ ಕೆತ್ತಲಾಗಿರುವ ಬಗೆಯನ್ನು ವಿವರಿಸಿದ್ದಾರೆ. ಇವುಗಳಲ್ಲಿ ಒಂದು, ಮೂರು, ಐದು, ಏಳು ಮತ್ತು ಒಂಭತ್ತು ಹೆಡೆಯ ಸರ್ಪಗಳನ್ನು ಪೂಜಿಸಲಾಗುತ್ತದೆ. ಹೆಣ್ಣು ಸರ್ಪಗಳು ಒಂದೇ ಹೆಡೆಯನ್ನು ಹೊಂದಿರುತ್ತವೆ ಎಂದು ಉಲ್ಲೇಖಿಸಲಾಗಿದೆ. ನಾಗಾರಾಧನೆಯು ವೇದಗಳ ಕಾಲದಿಂದ ಸೂರ್ಯ, ಚಂದ್ರ, ಬ್ರಹ್ಮ ಇವರ ಆರಾಧನೆಯೊಂದಿಗೆ ಬೆಳೆದು ಬಂದಿದೆ. ನಾಗ ಪೂಜನೆಯಿಂದ ಸಂತಾನ ವೃದ್ಧಿಯಾಗುತ್ತದೆ. ಎಂದು ಅಭಿಪ್ರಾಯಪಡಲಾಗಿದೆ.

ವಿ.ನಾಗಮ್ಮ ಅಯ್ಯ The Travancore State Manual' (೧೯೪೯, ಪು, ೫೯-೬೨)ಕೃತಿಯಲ್ಲಿ ಕೇರಳದ ಸರ್ಪಕಾವುಗಳ ಕುರಿತು ವಿವರಿಸಲಾಗಿದೆ. ಸರ್ಪಕಾವುಗಳ ಸ್ವರೂಪ, ವೈಶಿಷ್ಟ್ಯ ಮತ್ತು ಅಲ್ಲಿ ನಡೆಯುವ ಆರಾಧನೆಯ ವಿಧಾನ ಇತ್ಯಾದಿಗಳ ಕುರಿತು ವಿವರಣೆ ಕಂಡುಬಂದಿದೆ. ಜನಪದ ಆಚರಣೆಗಳಾದ ಸರ್ಪಂತುಳ್ಳಲ್, ಪುಳ್ಳವರು,

ಮೊದಲಾದವುಗಳ ಕುರಿತು ಉಲ್ಲೇಖ ಕಂಡುಬಂದಿದೆ. ಕೆಲವು ಕೌಟುಂಬಿಕ ದೇವಾಲಯಗಳ ಕುರಿತು ಉಲ್ಲೇಖವಿದೆ. ಮಣ್ಣಾರ ಶಾಲ, ವೆಟ್ಟಿಕೋಡ್ ಮನ ಮೊದಲಾದ ನಾಗಕ್ಷೇತ್ರಗಳ ಉಲ್ಲೇಖವಿದೆ.

ಕೋವಳಂ ನಾರಾಯಣ ಪಣಿಕ್ಕರ್ ಅವರ Floklore of kerala' (೧೯೯೧, ಪುಟ, ೫೨-೫೮) ಕೃತಿಯಲ್ಲಿ ಕೇರಳದ ನಾಗಾರಾಧನೆಯ ಕುರಿತು ಉಲ್ಲೇಖಿಸಲಾಗಿದೆ. ಮುಖ್ಯವಾಗಿ ಕೌಟುಂಬಿಕ ದೇವಾಲಯಗಳ ಕುರಿತು ಉಲ್ಲೇಖವಿದೆ. ಅಲ್ಲಿಯ ಸರ್ಪಗಳು ನಂಬೂದಿರಿ ಕುಟುಂಬದ ಅಧೀನದಲ್ಲಿದ್ದು ಕುಟುಂಬವನ್ನು ರಕ್ಷಿಸುತ್ತವೆ. ಕುಟುಂಬದ ಸದಸ್ಯರಿಗೆ ತೊಂದರೆಯಾದಾಗ ಕಾರಣರಾದವರನ್ನು ಶಿಕ್ಷಿಸುತ್ತವೆ ಎಂಬ ವಿಚಾರ ಉಲ್ಲೇಖಿಸಲಾಗಿದೆ. ಕೇರಳದ ನಾಗಾರಾಧೆಯ ಪ್ರಕಾರಗಳನ್ನು ಜನಪದ ಹಿನ್ನೆಲೆಯಲ್ಲಿ ಪ್ರಸ್ತುತ ಅವಲೋಕಿಸಲಾಗಿದೆ. ಆರಾಧನೆಯ ಸ್ವರೂಪಗಳಾದ ಸರ್ಪಂತುಳ್ಳಲ್, ಪುಳ್ಳವರು, ಸರ್ಪಬಲಿ, ನೂರುಂಪಾಲುಂ ಇತ್ಯಾದಿಗಳನ್ನು ವಿವರಿಸಿರುವುದು ಕಂಡುಬಂದಿದೆ. ನಾಗದೇವಾಲಯಗಳಾದ ಪಾಂಬುಮೇಕಾಡ್ ಮನ, ಮಣ್ಣಾರಶಾಲಗಳ ಕುರಿತಾದ ವಿವರಣೆಯು ಕಂಡುಬಂದಿದೆ. ಸರ್ಪಕಡಿತದಿಂದ ಉಂಟಾಗುವ ವಿಷ ಚಿಕಿತ್ಸೆಯಲ್ಲಿ ನಾಗಾರಾಧಕರ ಪಾತ್ರದ ಕುರಿತು ಹೇಳಲಾಗಿದೆ.

ಶ್ರೀ ರವೀಂದ್ರನ್ ನಾಯರ್ Snake warship in India (೧೯೯೩) ಕೃತಿಯು ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ನಾಗಾಧನೆಯ ಮಹತ್ವವನ್ನು ವಿಶ್ಲೇಷಿಸುತ್ತದೆ. ಪ್ರಮುಖವಾಗಿ ದಕ್ಷಿಣ ಭಾರತದ ನಾಗಾರಾಧನೆಯ ಸ್ವರೂಪಗಳನ್ನು ಗಮನದಲ್ಲಿಸಿಕೊಂಡು ವಿವರಿಸಲಾಗಿದೆ. ಪುರಾಣದಲ್ಲಿ ನಾಗಗಳ ಉತ್ಪತ್ತಿ, ದಕ್ಷಯಜ್ಞ, ಖಾಂಡವದಹನ ಮೊದಲಾದ ಕತೆಗಳ ಹಿನೆಲೆಯೊಂದಿಗೆ ಸ್ಥಳೀಯವಾಗಿ ಪ್ರಚಲಿತದಲ್ಲಿರುವ ಐತಿಹ್ಯಗಳನ್ನು ಕೃತಿಯು ಒಳಗೊಂಡಿದೆ. ಅಷ್ಟನಾಗಗಳಲ್ಲಿ ಅನಂತ, ಶೇಷ, ವಾಸುಕಿಗಳ ಕುರಿತಾದ ಮಾಹಿತಿ ಇದೆ. ಕೇರಳದ 'ಮಣ್ಣಾರಶಾಲ' ನಾಗದೇವಾಲಯದ ಹಿನ್ನೆಲೆಯಲ್ಲಿರುವ ಪ್ರಚಲಿತ ಐತಿಹ್ಯವನ್ನು ನೀಡಲಾಗಿದೆ. ನಾಗ ಸುಬ್ರಹ್ಮಣ್ಯ ಸಂಬಂಧ ನಾಗಾರಾಧನೆಯ ಹಿನ್ನೆಲೆಯಲ್ಲಿ ಆಚರಿಸುವ ಅನಂತವ್ರತ, ನಾಗರಪಂಚಮಿಗಳ ಕುರಿತಾದ ಮಾಹಿತಿ ಕಂಡುಬಂದಿದೆ.

ವೈನಾಂಡ್ ಎಂ.ಕಾಲ್‌ವರ್ಟ್ ಅವರ 'Gods and temples in south India ಕೃತಿಯಲ್ಲಿ (೧೯೯೫ ಪುಟ, ೭೭-೮೫)ನಾಗಗಳೆಂದರೆ ಸರ್ಪದೇವರುಗಳು ಮತ್ತು ದೇವತೆಗಳೆಂದು ಗುರುತಿಸುತ್ತಾರೆ. ಅದರ ವೈಶಿಷ್ಟ್ಯತೆಗಳು ಮತ್ತು ದೇವಾಲಯಗಳಲ್ಲಿ ನಾಗಾರಾಧನೆ ನಡೆಸುವ ರೀತಿಯನ್ನು ವಿವರಿಸಲಾಗಿದೆ. ನಾಗ ಆರೋಗ್ಯಕ್ಕಾಗಿ, ಫಲವತ್ತತೆಯ ಸಂಕೇತವಾಗಿ, ಸಂಪತ್ತಿಗಾಗಿ, ಮಳೆ ಬೆಳೆಯ ಸಂಮೃದ್ಧಿಗಾಗಿ, ರಕ್ಷಕನಾಗಿ, ಆರಾಧಿಸಲ್ಪಡುತ್ತದೆಂದು ಉಲ್ಲೇಖಿಸಲಾಗಿದೆ. ವಿಶೇಷವಾಗಿ ನಾಗನನ್ನು ವಿವಿಧ ಸಂಕೇತಗಳ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ನಾಗಗಳಿಗೆ ಸಂಬಂಧಿಸಿದ ಪುರಾಣದ ವಿವಿಧ ಕತೆಗಳನ್ನು ಈ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ನಾಗಾರಾಧನೆಯು ಪ್ರಾಚೀನ ಕಾಲದಿಂದ ಇಂದಿನವರೆಗೆ ಎಷ್ಟು ಪ್ರಸಿದ್ಧವಾಗಿದೆ ಎಂಬುದನ್ನು ವಿವರಿಸಲಾಗಿದೆ.

ಸುಭೋದ್ ಕಪೂರ್ ಅವರ 'The Hindus Encyclopeadia of Hindui'sm' ಕೃತಿಯಲ್ಲಿ (೨೦೦೩, ಪುಟ-೯, ೧೬೪೧-೧೬೫೦) ನಾಗಾರಾಧನೆಯ ಸ್ಥೂಲ ವಿವರ ವಿದೆ. ನಾಗಾರಾಧನೆಯ ಪ್ರಾಮುಖ್ಯತೆ, ಆರಾಧನೆಯ ಮೂಲ, ವಿವಿಧ ಪ್ರದೇಶಗಳಲ್ಲಿ ನಾಗಾರಾಧನೆ ಹರಡಿರುವ ಬಗೆ ಉಲ್ಲೇಖಿಸಲಾಗಿದೆ. ಅದೇ ರೀತಿ ಭಾರತದಲ್ಲಿ ಪ್ರಮುಖ ನಾಗಾರಾಧಕರಾದ ನಾಗ ಜನಾಂಗದ ಬಗೆಗೆ, ಅವರ ಚರಿತ್ರೆ ಅವರ ಸಂಸ್ಕಾರ ಇತ್ಯಾದಿಗಳ ಸ್ಥೂಲ ವಿವರ

ಕಂಡುಬಂದಿದೆ. ನಾಗಾರಾಧನೆಯ ಚಾರಿತ್ರಿಕ ಬೆಳವಣಿಗೆ, ಹಿಂದೂ, ಬೌದ್ಧ, ಜೈನ, ಸಿಖ್ಖ್ ಧರ್ಮಗಳಲ್ಲಿ ನಾಗನಿಗಿರುವ ಪ್ರಾಮುಖ್ಯತೆಯನ್ನು ನೀಡಲಾಗಿದೆ. ನಾಗ ಬಲವನ್ನು ನಿಯಂತ್ರಿಸುವುದು, ಪೂರ್ವಜರ ರೂಪದಲ್ಲಿ ನಿಧಿಯ ಸುರಕ್ಷಕರಾಗಿ ವಿವಿಧ ಖಾಯಿಲೆಗಳನ್ನು ಗುಣಪಡಿಸುವುದು, ಮಾಂತ್ರಿಕ ಶಕ್ತಿಯನ್ನು ಹೊಂದಿರುವ ಮಣಿಯನ್ನು ಹೊಂದಿರುವುದು. ಇತ್ಯಾದಿ ಕಲ್ಪನೆಯ ಹಿನ್ನೆಲೆಯಲ್ಲಿ ನಾಗಾರಾಧನೆಯನನ್ನು ವಿವೇಚಿಸಲಾಗಿದೆ. ಮತ್ತು ನಾಗಗಳಿಗೆ ಸಂಬಂಧಿಸಿದ ನಂಬಿಕೆಗಳನ್ನು ವಿವರಿಸಲಾಗಿದೆ. ೧೮೯೧ರ ಜನಗಣತಿಯ ಸಂದರ್ಭದಲ್ಲಿ ವಿವಿಧ ಸರ್ಪಾರಾಧನ ಪಂಗಡಗಳ ವಿವರಗಳನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದ್ದ, ಕುರಿತು ಆದರೆ ಅದರಲ್ಲಿ ಅಂಥ ಯಶಸ್ಸನ್ನು ಪಡೆಯಲಾಗಲಿಲ್ಲ ಎಂಬುದನ್ನು ವಿವರಿಸಲಾಗಿದೆ.

ಕೆ.ಎಸ್.ಸಿಂಗ್ ಅವರ People of India Kerala (೨೦೦೦, ಪುಟ,೧೭೩-೧೭೫)ಕೃತಿಯಲ್ಲಿ ಕೇರಳದ ನಾಗಾರಾಧಕರಾದ ಪುಳ್ಳವರ ಕುರಿತು ಅವರ ಕೌಟುಂಬಿಕ ಜೀವನ ಇತ್ಯಾದಿಗಳ ಕುರಿತು ವಿವರಣೆ ಇದೆ. ಪುಳ್ಳವರಿಗೂ ನಾಗಾರಾಧನೆಗೂ ಇರುವ ಸಂಬಂಧವನ್ನು ವಿವರಿಸಲಾಗಿದೆ. ಪುಳ್ಳವರ ಉಗಮದ ಕುರಿತಾದ ಉಲ್ಲೇಖ ಕಂಡುಬಂದಿದೆ. ಕೇರಳದಲ್ಲಿ ಪುಳ್ಳವ ಸಮುದಾಯದವರು ಯಾವ ಯಾವ ಭಾಗಗಳಲ್ಲಿ ಕಂಡುಬರುತ್ತಾರೆ. ಅವರ ವೇಷ ಭೂಷಣಗಳು, ಕೌಟುಂಬಿಕ ಪದ್ಧತಿ, ಆಚರಣೆಯ ವಿಧಾನ, ಆಹಾರ ಪದ್ಧತಿ ಕುಟುಂಬದ ಒಳಾಡಳಿತ ವ್ಯವಸ್ಥೆ ಇತ್ಯಾದಿಗಳ ವಿವರಣೆ ಕಂಡುಬಂದಿದೆ.

ಈ ಎಲ್ಲ ವಿದ್ವಾಂಸರ ಗ್ರಂಥ ಮತ್ತು ಲೇಖನಗಳಲ್ಲಿ ನಾಗಾರಾಧನೆಯನ್ನು ವಿವಿಧ ದೃಷ್ಟಿಕೋನಗಳಿಂದ ಗಮನಿಸಿರುವುದು ಕಂಡುಬರುತ್ತದೆ. ಪ್ರಧಾನವಾಗಿ ಪ್ರಚಲಿತದಲ್ಲಿರುವ ನಾಗಾರಾಧನೆಯ ಸ್ವರೂಪ, ಐತಿಹಾಸಿಕ ಹಿನ್ನೆಲೆಗಳ ಕುರಿತು ವಿಶೇಷಗಮನ ನೀಡಲಾಗಿದೆ.

೩.೬. ಮಲೆಯಾಳಂ ಕೃತಿಗಳು

ನಾಗಾರಾಧನೆಯ ಕುರಿತಾಗಿ ಕನ್ನಡ ಜನಪದ ಸಾಹಿತ್ಯದಲ್ಲಿ ನಡೆದಷ್ಟು ವ್ಯಾಪಕ ಅಧ್ಯಯನಗಳು ಮಲೆಯಾಳಿ ಜನಪದ ಸಾಹಿತ್ಯದಲ್ಲಿ ನಡೆಯಲಿಲ್ಲ. ಕೆಲವು ಆರಾಧನ ಪ್ರಕಾರಗಳು ಮತ್ತು ಬಿಡಿ ಲೇಖನಗಳನ್ನು ಹೊರತು ಪಡಿಸಿದರೆ ಸಮಗ್ರ ಅಧ್ಯಯನಗಳು ನಡೆದಿರುವುದು ಕಂಡು ಬಂದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಈ ಕ್ಷೇತ್ರದ ಕಡೆಗೆ ವಿದ್ವಾಂಸರುಗಳು ಒಲವು ತೋರಿಸುತ್ತಿರುವುದು ಕಂಡು ಬಂದಿದೆ. ನಾಗಾರಾಧನೆಯ ಕುರಿತಾದ ಸಮಗ್ರ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ವಿಶ್ವವಿದ್ಯಾಲಯ ಅನುದಾನ ಆಯೋಗದ ಸಹಕಾರದಿಂದ ಶ್ರೀಮತಿ ಜಯಕುಮಾರಿ ಕುಂಞಮ್ಮ ಎಂಬವರು ನಡೆಸುತ್ತಿದ್ದಾರೆ. ಇವರು 'ಅಂತರರಾಷ್ಟ್ರೀಯ ಕೇರಳ ಅಧ್ಯಯನ ಕೇಂದ್ರ' ಕಾರಿಯವಟ್ಟಂ ಇಲ್ಲಿ ಸಂಶೋಧನ ಸಹಾಯಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೇರಳದ ನಾಗ ದೇವಾಲಯಗಳು ಮತ್ತು ನಾಗಾರಾಧನೆಯ ಜನಪದ ಪ್ರಕಾರಗಳ ಕುರಿತಂತೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಅಧ್ಯಯನದ ಪ್ರಸ್ತುತ ಸಂದರ್ಭದಲ್ಲಿ ಉಪಲಬ್ಧವಿರುವ ಕೆಲವು ಗ್ರಂಥಗಳನ್ನು ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ.

'ವಿಷ್ಣು ನಂಬೂದಿರಿ' (೧೯೭೭)'ಪುಳ್ಳುವ ಪಾಟ್ಟುಂ ನಾಗಾರಾಧನೆಯುಂ' ಕೃತಿಯಲ್ಲಿ ಕೇರಳದ ನಾಗಾರಾಧನೆಯ ಜನಪದ ಪ್ರಕಾರಗಳ ಕುರಿತಂತೆ ವಿಶ್ಲೇಷಣೆ ನಡೆಸಿದ್ದಾರೆ. ಪುಳ್ಳವರು ಮತ್ತು ಸರ್ಪಂತುಳ್ಳಲ್ ಆಚರಣೆಯ ಪ್ರಕಾರವನ್ನು

ಕೇಂದ್ರವಾಗಿಟ್ಟುಕೊಂಡು ಉಳಿದ ಕೆಲವು ಆಚರಣೆಗಳ ಕುರಿತು ಅವಲೋಕಿಸಲಾಗಿದೆ. ಮುಂದಿನ ಅಧ್ಯಯನ ಕಾರರಿಗೆ ಈ ಕೃತಿಯು ಉತ್ತಮ ಮಾರ್ಗದರ್ಶನ ನೀಡಬಲ್ಲುದು.

ಕೃತಿಯ ಮೊದಲ ಅಧ್ಯಾಯಗಳಲ್ಲಿ ಪ್ರಾಚೀನ ಸಂಸ್ಕೃತಿಗಳಲ್ಲಿ ಜಗತ್ತಿನ ವಿವಿಧ ಭಾಗಗಗಳಲ್ಲಿ ನಾಗಾರಾಧನೆ ಪ್ರಚಲಿತದಲ್ಲಿದ್ದ ಕುರಿತು ಮಾಹಿತಿ ಒದಗಿಸಲಾಗಿದೆ. ನಂತರದ ಭಾಗಗಗಳಲ್ಲಿ ಕೆಲವು ನಾಗ ದೇವಾಲಯಗಳು, ಮತ್ತು ವೈದಿಕ ಹಿನ್ನೆಲೆಯಲ್ಲಿ ಆಚರಿಸುವ ಸರ್ಪಬಲಿ ಇತ್ಯಾದಿಗಳ ಕುರಿತು ಸೂಕ್ಷ್ಮವಾಗಿ ಉಲ್ಲೇಖಿಸಲಾಗಿದೆ. ಈ ಕೃತಿಯಲ್ಲಿ ಪ್ರಧಾನವಾಗಿ ಪುಳ್ಳವರ ಕುರಿತಾದ ಹೆಚ್ಚಿನ ಮಾಹಿತಿ ಕಂಡು ಬರುತ್ತದೆ. ಕೇರಳದ ಪುಳ್ಳವ ಜನಾಂಗದವರು ನಾಗಾರಾಧನೆಯ ಜನಪದ ಆಚರಣೆಯ ಪ್ರಕಾರಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಾರೆ. ಸಾಮಾಜಿಕವಾಗಿ ಹಿಂದುಳಿದ ಸಮುದಾಯದವರಾದ ಇವರು ನಾಗ ಅಥವಾ ಸರ್ಪದ ಕುರಿತಾಗಿ ತಮ್ಮದೇ ಆದ ಕೆಲವು ಆಚರಣೆ, ನಂಬಿಕೆ, ಮತ್ತು ನಡವಳಿಕೆಗಳನ್ನು ಹೊಂದಿದ್ದಾರೆ. ನಾಗನ ಬೃಹತ್ ಪ್ರತಿ ಕೃತಿಯನ್ನು ರಚಿಸಿ 'ಸರ್ಪಂತುಳ್ಳಲ್' ಎಂಬ ಆಚರಣೆಯನ್ನು ನಡೆಸಿಕೊಡುತ್ತಾರೆ. ವಿಶೇಷ ವಾದನಗಳಾದ 'ಪುಳ್ಳವ ಕುಡಂ' ಮತ್ತು 'ವೀಣ'ವನ್ನು ಈ ಸಂದರ್ಭದಲ್ಲಿ ನಾಗ ಪ್ರೀತ್ಯರ್ಥವಾಗಿ ಬಳಸುತ್ತಾರೆ. ಸರ್ಪ ತಮ್ಮ ಕುಲದೇವತೆ ಎಂಬ ನಂಬಿಕೆ ಇವರಲ್ಲಿದೆ. ಈ ಎಲ್ಲ ವಿಷಯಗಳ ಕುರಿತಾಗಿ ಗ್ರಂಥದಲ್ಲಿ ಉಪಯುಕ್ತ ಮಾಹಿತಿ ಇದೆ. ಗ್ರಂಥದ ಕೊನೆಯಲ್ಲಿ ಪುಳ್ಳವರು ಸರ್ಪಂತುಳ್ಳಲ್ ಸಂದರ್ಬದಲ್ಲಿ ಹಾಡುವ ಕೆಲವು ಹಾಡುಗಳನ್ನು ಕೂಡಾ ನೀಡಲಾಗಿದೆ. ಉಳಿದಂತೆ ಕುರುಂದಿನಿ ಪಾಟ್, ನಾಗತೋಟ್ಟಂ, ನಾಗ ತೈಯಂಗಳ ಕುರಿತಾದ ಮಾಹಿತಿಯು ಕಂಡು ಬರುತ್ತದೆ. ಒಟ್ಟಿನಲ್ಲಿ ಈ ಗ್ರಂಥದಲ್ಲಿ ನಾಗಾರಾಧನೆಯ ಕುರಿತಾದ ಕೆಲವು ಪ್ರಕಾರಗಳ ಪರಿಚಯ ಮತ್ತು ಮಾಹಿತಿ ನೀಡುವ ಪ್ರಯತ್ನ ನಡೆಸಲಾಗಿದೆ.

'ಡಾ. ಕೆ.ಕೆ.ಎನ್. ಕುರುಪ್' (೧೯೮೦) 'ಆರ್ಯ-ದ್ರಾವಿಡ ಘಟಕಂಗಳ್, ಮಲಬಾರ್‌ಲೇ ನಾಡಕ್ ಕಲೆಯಿಲ್' ಗ್ರಂಥವು ಕೇರಳದ ಜನಪದ ಕಲೆಗಳ ಕುರಿತಾದ ವಿಷಯಗಳನ್ನು ಒಳಗೊಂಡಿದೆ. ಇದರಲ್ಲಿ ಸರ್ಪಾರಾಧನೆಯ ಹಿನ್ನೆಲೆಯ (ಪುಟ - ೫೧-೫೨) ಕುರಿತಂತೆ ವಿವರಿಸಲಾಗಿದೆ. ''ಸರ್ಪದ ಮೇಲಿನ ಹೆದರಿಕೆಯಿಂದ, ಸ್ನೇಹ ಮತ್ತು ಪ್ರೀತಿಯೆಂಬ ಮನೋಭಾವನೆಗಳು ನಾಗಾರಾಧನೆಗೆ ಕಾರಣವಾಗಿವೆ. ಈ ಹಿನ್ನೆಲೆಯಲ್ಲಿ ಜಗತ್ತಿನಾದ್ಯಂತ ನಾಗಾರಾಧನೆ ಬೆಳೆದು ಬಂದಿದೆ. ಭಾರತದಲ್ಲಿ ಐತಿಹ್ಯಗಳಲ್ಲಿ ಮತ್ತು ಜನಪದ ಕತೆಗಳಲ್ಲಿ ನಾಗಗಳಿಗೆ ಒಂದು ಅತ್ಯುನ್ನತ ಸ್ಥಾನವನ್ನು ಕಲ್ಪಿಸಲಾಗಿದೆ. ಕೇರಳದಲ್ಲಿ ಪ್ರಚಲಿತದಲ್ಲಿರುವ ಜನಪದ ಕಲೆಯಾದ 'ತೈಯಾಟಂ' ನಲ್ಲಿಯೂ ಕೂಡ ನಾಗಾರಾಧನೆಯ ಪ್ರಭಾವ ಸ್ಪಷ್ಟವಾಗಿ ಕಂಡು ಬರುತ್ತದೆ'' ಎಂದು ಅಭಿಪ್ರಾಯಪಡಲಾಗಿದೆ.

'ಡಾ. ವೆಳ್ಳಾಯಿನಿ ಅರ್ಜುನನ್' (೧೯೮೧), 'ಸರ್ಪ ವಿಜ್ಞಾನ ಕೋಶ' ಕೇರಳದ ಜನಪದ ಕಲೆಗಳ ಕುರಿತಾದ ಗ್ರಂಥ. ನಾಗಾರಾಧನೆಯ ಕುರಿತು ಈ ಗ್ರಂಥದಲ್ಲಿ (ಪುಟ - ೭೪೧-೭೪೭) ಅಧ್ಯಯನ ನಡೆಸಲಾಗಿದೆ. ನಾಗಾರಾಧನೆಯ ಹಿನ್ನೆಲೆಯಲ್ಲಿ ಆಚರಿಸಲ್ಪಡುವ 'ಕಳಮೆಳುತ್ತುಂ ಪಾಟುಂ' ನಲ್ಲಿ ವಿವಿಧ 'ಕಳ'ಗಳ ಉಲ್ಲೇಖ ವಿದೆ. ''ಪಂಚವರ್ಣದ ಹುಡಿಗಳಿಂದ ಭದ್ರಕಾಳಿ, ಸರ್ಪ, ಅಯ್ಯಪ್ಪ, ಮೊದಲಾದ ಆರಾಧನಾ ಮೂರ್ತಿಗಳ ಚಿತ್ರಗಳನ್ನು ನೆಲದಲ್ಲಿ ಬರೆದು ಹಾಡುತ್ತಾ ಸ್ತುತಿಸುವ ಸಂಪ್ರದಾಯವು ಕೇರಳದ ಎಲ್ಲ ಪ್ರದೇಶಗಳಲ್ಲಿ ಪ್ರಚಲಿತವಾಗಿರುವ ಈ ಆಚರಣೆ 'ಕಳಮೆಳುತ್ತುಂ ಪಾಟ್ಟುಂ' ಎಂಬ ಹೆಸರಿನಲ್ಲಿ ಕರೆಯಲ್ಪಡುತ್ತದೆ. ಸಾಂಪ್ರದಾಯಿಕ ವಿಧಿಗಳಿಂದ ದೇವತೆಗಳ ದೂಳೀ

ಚಿತ್ರಗಳನ್ನು ರಚಿಸಿ ಅವರನ್ನು ಸ್ತುತಿಸಿ ಹಾಡಿ ತೃಪ್ತಿ ಪಡಿಸುವ ರೀತಿ ಆದಿ ದ್ರಾವಿಡ ಕಾಲಘಟ್ಟದಲ್ಲಿಯೇ ರೂಢಿಯಲ್ಲಿತ್ತು'' ಎಂದು ಅಭಿಪ್ರಾಯ ಪಡಲಾಗಿದೆ. ಅಧ್ಯಯನದ ಮುಂದಿನ ಭಾಗದಲ್ಲಿ ಸರ್ಪಂತುಳ್ಳಲ್ ಅಥವಾ ನಾಗಕಳದ ಮಂಡಲ ರಚನೆ ಮತ್ತು ಆಚರಣೆಯ ಕುರಿತು ವಿವರಿಸಲಾಗಿದೆ.

'ಕೊಟ್ಟಾರತ್ತಿಲ್ ಸಂಗುಣ್ಣಿ' ಅವರ 'ಐತಿಹ್ಯ ಮಾಲ' (೧೯೮೮) ಕೇರಳದ ಪರಂಪರೆಯೊಂದಿಗೆ ಬಂದಿರಬಹುದಾದ ಐತಿಹ್ಯಗಳನ್ನು ಸೂಚಿಸುವ ಬೃಹತ್ ಗ್ರಂಥ. ಕೇರಳದಾದ್ಯಂತ ಪ್ರಚಲಿತದಲ್ಲಿರುವ ಐತಿಹ್ಯಗಳು ಈ ಭೂ ಪ್ರದೇಶದ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿವೆ. ಕೇರಳದ ಹಿನ್ನೆಲೆಗೆ ಸಂಬಂಧಿಸಿದ ವಿವಿಧ ಪ್ರಕಾರದ ಐತಿಹ್ಯಗಳನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ಪರಶುರಾಮ ಸೃಷ್ಟಿ ಅವನಿಂದ ಇಲ್ಲಿ ವೈದಿಕ ಪರಂಪರೆಯ ಸ್ಥಾಪನೆ, ನಾಗ, ದುರ್ಗಿಗಳ ಆರಾಧನೆಯೊಂದಿಗೆ ಸ್ಥಳಪುರಾಣಗಳು, ಪ್ರಾಚೀನ ದೇವಾಲಯಗಳ ಹಿಂದಿರುವ ಐತಿಹ್ಯ, ನಾಗಾರಾಧನೆಯ ಹಿನ್ನೆಲೆಯಲ್ಲಿರುವ ಐತಿಹ್ಯಗಳು ಮೊದಲಾದ ವಿಚಾರಗಳನ್ನು ಸಂಗ್ರಹಿಸಲಾಗಿದೆ.

ಕೆ.ಪಿ.ಎನ್. ನಂಬಿಯಾರ್ (೧೯೯೯) ಅವರ 'ಕರಿಪ್ಪಾಲ್ ನಾಗೇಶ್ವರಿ ಚರಿತಂ' ಕೃತಿಯು 'ಕರಿಪ್ಪಾಲ ನಾಗೇಶ್ವರಿ' ಕ್ಷೇತ್ರದ ಹಿನ್ನೆಲೆಯನ್ನೊಳಗೊಂಡಿದೆ. ಸ್ಥಳೀಯ ನಾಗಾಲಯದ ಕುರಿತಾದ ಪ್ರಚಲಿತ ಐತಿಹ್ಯವನ್ನೊಳಗೊಂಡಿರುವ ಸಣ್ಣ ಪುಸ್ತಿಕೆ. ಕರಿಪ್ಪಾಲ ನಾಗರಾಜ ಕ್ಷೇತ್ರವು ಕಣ್ಣಾನೂರು ಜಿಲ್ಲೆಯ ತಳಿಪರಂಬ ತಾಲೂಕಿನಲ್ಲಿದೆ. ಇಲ್ಲಿ ಜನಪದ ಆಚರಣೆಯ ಹಿನ್ನೆಲೆಯಲ್ಲಿ ನಾಗ ಸನ್ನಿಧಿಯಲ್ಲಿ ತೈಯಂ ನಡೆಸಲಾಗುತ್ತದೆ. ಸನಿಹದಲ್ಲೇ ಪ್ರಾಚೀನ ಸೋಮೇಶ್ವರಿ ದೇವಾಲಯವಿದೆ. ನಾಗಾಲಯ ಮತ್ತು ದೇವಾಲಯಕ್ಕೆ ಸಂಬಂಧಿಸಿದ ಐತಿಹ್ಯಗಳನ್ನು ಮತ್ತು ಇಲ್ಲಿ ನಡೆಯುವ ಆಚರಣೆಗಳನ್ನು ಕೃತಿಯಲ್ಲಿ ನೀಡಲಾಗಿದೆ.

ಪಿ.ಜೆ. ರಾಜೇಂದ್ರನ್ ಅವರ (೨೦೦೦) 'ಕ್ಷೇತ್ರ ವಿಜ್ಞಾನ ಕೋಶಂ' ಒಂದು ಬೃಹತ್ ಗ್ರಂಥ. ಕೇರಳದ ದೇವಾಲಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡ ಗ್ರಂಥ. ವಿವಿಧ ದೇವಾಲಯಗಳಿಗೆ, ಸಂಬಂಧಿಸಿದ ಐತಿಹ್ಯಗಳು, ಇತಿಹಾಸ, ಮೊದಲಾದ ವಿಷಯಗಳನ್ನು ಇಲ್ಲಿ ನೀಡಲಾಗಿದೆ. ಈ ಗ್ರಂಥದಲ್ಲಿ (ಪುಟ - ೧೦೮೬-೧೦೮೮) ವೆಟ್ಟಿಕೋಡ್ ನಾಗರಾಜ ಸ್ವಾಮಿ ಕ್ಷೇತ್ರದ ಕುರಿತ ಮಾಹಿತಿ ನೀಡಲಾಗಿದೆ. ಈ ನಾಗ ದೇವಾಲಯವನ್ನು ಪರಶುರಾಮನು ಮೊತ್ತ ಮೊದಲ ಬಾರಿಗೆ ಈ ಭಾಗದಲ್ಲಿ ಸ್ಥಾಪಿಸಿದನೆಂದೂ, ಇಲ್ಲಿ 'ಅನಂತ' ನಿಗೆ ವಿಶೇಷ ಪ್ರಾಧಾನ್ಯತೆ ಇದೆಯೆಂದು ಉಲ್ಲೇಖಿಸಲಾಗಿದೆ.

ಅಂಬಲಪುರ ಶಾರದಮ್ಮ (೨೦೦೩) ಅವರ 'ಶ್ರೀ ಮದ್ ನಾಗಪುರಾಣಂ' ನಾಗಾರಾಧನೆಯ ಪೌರಾಣಿಕ ಹಿನ್ನೆಲೆಯನ್ನು ಮತ್ತು ಕೆಲವು ನಾಗದೇವಾಲಯಗಳ ಹಿನ್ನೆಲೆಯನ್ನು ಸೂಚಿಸುವ ಗ್ರಂಥ. ಈ ಗ್ರಂಥವು ಪ್ರಧಾನವಾಗಿ ನಾಗೋತ್ಪತ್ತಿ, ಗರುಡೋತ್ಪತ್ತಿ, ಸರ್ಪಯಜ್ಞ, ಖಾಂಡವ ದಹನ ಮೊದಲಾದ ಪುರಾಣ ಕಥೆಗಳನ್ನು ಒಳಗೊಂಡಿದೆ. ಪೌರಾಣಿಕ ಹಿನ್ನೆಲೆಯಲ್ಲಿ ಇದು ಅತ್ಯುತ್ತಮ ಗ್ರಂಥ ಎಂದು ಭಾವಿಸಲಾಗಿದೆ.

ತಮಿಳು ಕೃತಿ

ಅಧ್ಯಯನಕ್ಕೆ ಸಂಬಂಧಿಸಿದಂತೆ ಉಪಲಬ್ಧವಿದ್ದ ತಮಿಳು ಕೃತಿಯನ್ನು ಕೂಡ ಅವಲೋಕಿಸಲಾಗಿದೆ. ಮತ್ತು ಪೂರಕ ಮಾಹಿತಿಗಳನ್ನು ಅಧ್ಯಯನದ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ವಿದ್ವಾಂಸ ಡಾ. ಪದ್ಮನಾಭನ್ (೨೦೦೧) ಅವರ 'ನಾಗಾವಜಿ ಪದುಮ್ ನಾಗರಾಜರಾಲಯಂ' ಕೃತಿಯಲ್ಲಿ ನಾಗಾರಾಧನೆಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಉಲ್ಲೇಖಿಸಲಾಗಿದೆ. ಪ್ರಮುಖವಾಗಿ ಈ ಕೃತಿಯು ನಾಗರ ಕೋವಿಲ್ ನಾಗರಾಜ ಕ್ಷೇತ್ರದ ಹಿನ್ನೆಲೆಗೆ ಸಂಬಂಧಿಸಿದುದಾಗಿದೆ. ಕೃತಿಯಲ್ಲಿ ದೇವಾಲಯದ ಐತಿಹಾಸಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯತೆಗಳೊಂದಿಗೆ ನಾಗಾರಾಧನೆಯು ಜಗತ್ತಿನ ಅತೀ ಪ್ರಾಚೀನ ಆರಾಧನ ಪ್ರಕಾರ ಎಂದು ಅಭಿಪ್ರಾಯ ಪಡಲಾಗಿದೆ.

ನಾಗಾರಾಧನೆಯ ಇದುವರೆಗಿನ ಅಧ್ಯಯನದ ಸಮೀಕ್ಷೆಯಲ್ಲಿ ಕನ್ನಡ, ಆಂಗ್ಲ, ಮಲೆಯಾಳಿ ಭಾಷೆಗಳ ವಿವಿಧ ಗ್ರಂಥಗಳನ್ನು ಅವಲೋಕಿಸಲಾಗಿದೆ. ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಗೆ ಸಂಬಂಧಿಸಿದಂತೆ ವಿವಿಧ ರೀತಿಯ ಅಧ್ಯಯನಗಳು ನಡೆದಿರುವುದನ್ನು ಕಂಡು ಕೊಂಡಂತಾಗಿದೆ. ಈ ಅಧ್ಯಯನಗಳೆಲ್ಲವೂ ನಾಗ ಪೂಜನೆ, ಅಥವಾ ಸರ್ಪ ಪೂಜನೆಯು ದಕ್ಷಿಣ ಭಾರತದ ಅತೀ ಪ್ರಾಚೀನ ಆರಾಧನ ಪ್ರಕಾರ ಎಂಬುದನ್ನು ಸೂಚಿಸುತ್ತವೆ. ಸಾಮುದಾಯಿಕ ನೆಲೆಯಲ್ಲಿ ಮತ್ತು ವೈಯಕ್ತಿಕ ನೆಲೆಯಲ್ಲ ನಾಗ ಅತೀ ಪ್ರಭಾವಿ ದೈವ ಎಂಬುದನ್ನು ಕೂಡ ವಿಷದೀಕರಿಸುತ್ತವೆ. ಆದರೆ ಈ ವಿಷಯದ ಕುರಿತಂತೆ ಸಣ್ಣ ಪುಟ್ಟ ಅಧ್ಯಯನಗಳು ನಡೆದಿದ್ದಾವೆಯೇ, ಹೊರತು ಸಮಗ್ರ ಮಾಹಿತಿ ಸಂಗ್ರಹಿಸುವ, ಮತ್ತು ಎರಡು ಭೂ ಪ್ರದೇಶಗಳ ಸಂಶೋಧನಾತ್ಮಕ ಅಧ್ಯಯನ ನಡೆದಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಆ ಕಾರ್ಯವನ್ನು ಕೈಗೊಳ್ಳಲಾಗಿದೆ. ಕೇರಳದ ಮತ್ತು ಕರಾವಳಿ ಕರ್ನಾಟಕದ ತುಳುನಾಡೆಂದು ಕರೆಯಲ್ಪಡುವ ಭೂ ಪ್ರದೇಶದ ಕೆಲವು ಪ್ರಮುಖವೆನಿಸಿದ ಆಚರಣೆಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡು ವಿಶ್ಲೇಷಣೆ ನಡೆಸಲಾಗಿದೆ. ಇದುವರೆಗಿನ ಅಧ್ಯಯನಗಳೆಲ್ಲವೂ ಪ್ರಾದೇಶಿಕ ನೆಲೆಯಲ್ಲಿ, ಮತ್ತು ನಿರ್ದಿಷ್ಟ ಸಾಮುದಾಯಿಕ ನೆಲೆಯಲ್ಲಿ ನಡೆದಿದ್ದರೆ ಪ್ರಸ್ತುತ ಅಧ್ಯಯನವನ್ನು ಸಾಮೂಹಿಕ ನೆಲೆಯಲ್ಲಿ ನಡೆಸಲಾಗಿದೆ.

* * * * *

ಅಧ್ಯಾಯ - ೪

ನಾಗ ಪರಿಕಲ್ಪನೆ

ನಾಗಾರಾಧನೆ ಬಹಳ ಪ್ರಾಚೀನದಿಂದಲೇ ಜನರ ಸಾಂಸ್ಕೃತಿಕ ಬದುಕಿನಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ. ಈ ವಿಷಯವನ್ನು ಅಧ್ಯಯನದ ಸಮೀಕ್ಷೆಯಿಂದ ಕಂಡು ಕೊಳ್ಳಲಾಗಿದೆ. ನಂತರ ಅದು ಕಾಲಾಂತರದಲ್ಲಿ ನಮ್ಮ ಪುರಾಣಗಳಲ್ಲಿ, ಕಥೆಗಳಲ್ಲಿ ನಾಗ ಒಂದು ಅವಿಭಾಜ್ಯ ಅಂಗವಾಗಿ ಸೇರ್ಪಡೆಗೊಂಡುದಲ್ಲದೆ. ಆಮೇಲೆ ಬೆಳೆದು ಬಂದ ಕಲೆ, ಸಾಹಿತ್ಯ, ಇತ್ಯಾದಿಗಳಲ್ಲಿ ಕೂಡ ನಾಗನ ಸಂಪರ್ಕ, ಸಾನ್ನಿಧ್ಯ, ಸಾಹಚರ್ಯ ವಿಶೇಷವಾಗಿ ಬೆಳೆದು ಬಂದಿದೆ. ಮನುಷ್ಯರ ಅದರಲ್ಲೂ ಭಾರತೀಯರ ಸಾಂಸ್ಕೃತಿಕ ಜೀವನದ ಒಂದು ಅಂಗವೋ ಏನೋ ಎನ್ನುವಂತೆ ನಾಗನ ವಿಚಾರಗಳು ಮಿಳಿತವಾಗಿವೆ. ನಾಗನ ಕುರಿತಾದ ಈ ಪರಿಕಲ್ಪನೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೪.೧. ಶಬ್ದಾರ್ಥ ವಿವೇಚನೆ

ಪ್ರಾಣಿ ಪ್ರಪಂಚದಲ್ಲಿ ಅತ್ಯಂತ ವಿಶಿಷ್ಟವಾದ ಪ್ರಾಣಿ ಉರಗ ವರ್ಗಕ್ಕೆ ಸೇರಿದ ನಾಗರಹಾವು, ಲೋಕ ರೂಢಿಯಲ್ಲಿ ಈ ಉರಗ ಜಾತಿಯನ್ನು ನಾಗ ಅಥವಾ ಸರ್ಪ ಎಂದು ಕರೆಯುವುದು ವಾಡಿಕೆ. ಇಲ್ಲಿ ಬಂದಿರುವ ನಾಗ ಮತ್ತು ಸರ್ಪ ಎಂಬ ಪದಗಳ ಹಿನ್ನೆಲೆಯನ್ನು ಗಮನಿಸಬೇಕಾಗಿದೆ. ಈ ಜೀವಿಗೆ ಯಾಕೆ ಅಷ್ಟು ಪ್ರಾಮುಖ್ಯತೆ ಪ್ರಾಪ್ತವಾಯಿತೆನ್ನುವುದನ್ನು ಗಮನಿಸಬೇಕಾದ ವಿಚಾರ . ಬೇರೆ ಯಾವತ್ತೂ ಉರಗಗಳಲ್ಲಿ ಕಂಡು ಬಾರದ ಹೆಡೆಯ ಸೌಂದರ್ಯ, ಮತ್ತು ಅದರ ಸಂಕೋಚ ವಿಕಾಸ ಆಗುವ ಸ್ಥಿತಿ, ಬುಸುಗುಟ್ಟುವಿಕೆ, ಇದೆಲ್ಲ ವಿಶೇಷ ಪ್ರಾಶಸ್ತ್ಯವನ್ನು ಪಡೆದದ್ದರಿಂದ ನಾಗರ ಹಾವಿಗೆ ಹೆಚ್ಚಿನ ಪ್ರಾಶಸ್ತ್ಯ ಬಂದಿರಬೇಕು. ಇಲ್ಲಿ ಬರುವ ನಾಗ ಮತ್ತು ಸರ್ಪ ಪರಿಕಲ್ಪನೆಗಳು ನಾಗಾರಾಧನೆಯ ಸಂದರ್ಭದಲ್ಲಿ ಮತ್ತೆ ಮತ್ತೆ ಪ್ರಸ್ತಾಪಕ್ಕೆ ಬರುತ್ತವೆ. ಸರ್ಪ ಮತ್ತು ನಾಗ ಎಂಬ ಶಬ್ದಗಳನ್ನು ರೂಢಿಯಲ್ಲಿ ಸಮಾನವಾಗಿ ಬಳಸಲಾಗುತ್ತದೆ. ಸೂಕ್ಷ್ಮವಾಗಿ ಗಮನಿಸುವಾಗ ಇದರಲ್ಲಿ ವ್ಯತ್ಯಾಸವಿದ್ದಂತೆ ಕಂಡು ಬರುತ್ತದೆ. ಕೇರಳದಲ್ಲಿ ಸರ್ಪಕಾವು, ಸರ್ಪಬಲಿ ಎಂಬಿತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ತುಳುನಾಡಿನಲ್ಲಿ ನಾಗಬನ, ನಾಗಮಂಡಲ ಎಂಬ ನಾಗ ಪದ ಸಮೀಕರಿಸಿ ಕರೆಯಲಾಗುತ್ತದೆ. ಇದು ಪ್ರಾದೇಶಿಕ ಭಿನ್ನತೆಯೇ ಅಥವಾ ಆರಾಧನೆಯಲ್ಲಿ ಮಾಡಿಕೊಂಡ ಪ್ರಕಾರವೇ ಎಂಬುದನ್ನು ಗಮನಿಸಬೇಕಾಗಿದೆ.

ಈ ಕುರಿತು ವಿದ್ವಾಂಸರುಗಳು ವಿಭಿನ್ನ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಪ್ರಸಿದ್ಧ ಸಂಸ್ಕೃತ ವಿದ್ವಾಂಸ ಸರ್ ಮೋನಿಯರ್ ಎಮ್ ವಿಲಿಯಮ್ಸ್ ಅವರು ತಾವು ಸಂಪಾದಿಸಿದ 'ಸಂಸ್ಕೃತ ಇಂಗ್ಲೀಷ್' ಶಬ್ದಕೋಶದಲ್ಲಿ 'ನಾಗ' ಶಬ್ದವು ಬಹುಶಃ 'ನಗ' ಶಬ್ದದಿಂದಾಗಲೀ 'ನಗ್ನ' ಶಬ್ದದಿಂದಾಗಲೀ ಹುಟ್ಟಿರಲಾರದೆಂದು ಸಂದೇಹ ವ್ಯಕ್ತಪಡಿಸಿದ್ದಾರೆ. (Probably Neither From na-ga nor nagna) ಅವರು ಮತ್ತೆ ಮುಂದುವರಿದು ನಾಗ ಎಂದರೆ ಒಂದು ಜಾತಿಯ ಸರ್ಪ, ಭೂಮಿಯ ಅಡಿಯಲ್ಲಿರುವ ಭೋಗವತಿ ನಗರದಲ್ಲಿ ವಾಸವಾಗಿರುವ ಕದ್ರು ಅಥವಾ ಸುರಸೆಯ ಸಂತತಿಯೇ ಈ ನಾಗ ಅಥವಾ ಸರ್ಪದೈವ. ಅವುಗಳ ದೈಹಿಕ ರಚನೆಯು ಮೇಲ್ಭಾಗವು ಮನುಷ್ಯ ರೂಪವನ್ನು ಹೊಂದಿದ್ದು ದೇಹದ ಕೆಳಭಾಗವು ಸರ್ಪದ ಆಕಾರವನ್ನು ಹೊಂದಿರುತ್ತದೆ. ಶೇಷ, ವಾಸುಕಿ, ಮತ್ತು ತಕ್ಷಕ ಅವರ ರಾಜರಾಗಿದ್ದಾರೆ. ಮಹಾಭಾರತದಲ್ಲಿ ಏಳು ಅಥವಾ ಎಂಟು ನಾಗಗಳನ್ನು ನಿರ್ದಿಷ್ಟವಾಗಿ ಉಲ್ಲೇಕಿಸಲಾಗಿದೆ. ಬೌದ್ಧ ಕೃತಿಗಳಲ್ಲಿ ಅವರನ್ನು ಸಾಮಾನ್ಯ ಮನುಷ್ಯರಂತೆ ಉಲ್ಲೇಖಿಸಲಾಗಿದೆ. ಎಂದು ವಿವರಿಸಿದ್ದಾರೆ. ಇಲ್ಲಿ ನಾಗ ಅಥವಾ ಸರ್ಪಗಳನ್ನು ಜನಾಂಗಿಕ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ದೇಹದ ಮೇಲೆ ಮನುಷ್ಯಾಕಾರ ಮತ್ತು ಕೆಳಗೆ ಸರ್ಪಾಕಾರದಲ್ಲಿರುವ ಹಲವಾರು ನಾಗಪ್ರತಿಮೆಗಳನ್ನು ಕೇರಳ ಮತ್ತು ಕರಾವಳಿ ಕರ್ನಾಟಕದ ವಿಭಿನ್ನ ಪ್ರದೇಶಗಳಲ್ಲಿ ಗಮನಿಸಬಹುದು.

ಬಳಕೆಯಲ್ಲಿರುವ 'ನಾಗ' ಶಬ್ಧವನ್ನು ಬಸ್ತಿ ಪುಂಡಲೀಕ ಶೆಣೈ ಅವರು ವ್ಯಾಕರಣ ರೀತ್ಯ ಉಲ್ಲೇಖಿಸುತ್ತಾ ''ಸಂಸ್ಕೃತದ 'ನಡೆ' ಅಥವಾ 'ಹೋಗು' ಎಂಬರ್ಥದ ಗಮ್ ಧಾತುವು ಭಾವಾರ್ತಕ ನಾಮರೂಪದಿಂದ ಅನ್ಯ ಶಬ್ಧಗಳೊಂದಿಗೆ ಕೂಡುವಾಗ 'ಗ' ಎಂಬ ರೂಪವನ್ನು ತಳೆಯುತ್ತದೆ. 'ಅನುಗ' ಎಂದರೆ ಹಿಂಬಾಲಿಸಿ ನಡೆಯುವವ. ಉರಗ ಎಂದರೆ ಎದೆಯಿಂದ ನಡೆದು ಸಾಗುವ ಹಾವು ಇತ್ಯಾದಿ. ಆ 'ಗ' ಎಂಬ ಪದವು ನಿಷೇಧಾರ್ಥಕ 'ನ' ಎಂಬ ಪದದಿಂದ ಕೂಡಿ 'ನಗ' ಎಂಬ ಭಾವನಾಮವಾಗಿ ಮಾರ್ಪಟ್ಟಾಗ ಅದರ ಅರ್ಥವು ನಡೆದು ಹೋಗಲಾರದಂಥ ಬೆಟ್ಟ ಮತ್ತು ಹಾವು ಎಂದಾಗುವುದು......... ನಗ ಎಂಬ ಶಬ್ದವನ್ನು ಅದರ ಅಪತ್ಯ ಸೂಚಕವನ್ನಾಗಿ ಮಾರ್ಪಾಡಿಸುವುದಾದರೆ ಅದರ ರೂಪವು ನಾಗ ಎಂದಾಗುವುದು. ನಗದ ಅಂದರೆ ಬೆಟ್ಟದ ಸಂತತಿ ನಾಗ ಎಂಬ ಶಬ್ದವು 'ಆನೆ' ಎಂಬರ್ಥವನ್ನು ಹಾವಿನ ಸಂತತಿ 'ನಾಗ' ಎಂಬ ಶಬ್ದವು 'ಹಾವು' ಎಂಬ ಅರ್ಥವನ್ನು ಕೊಡುವುದು. ಅಂದರೆ ನಗದ ಅಪತ್ಯವೇ ನಾಗ'' ಎಂದು ನಾಗ ಪದವನ್ನು ವಿಶ್ಲೇಷಿಸಿದ್ದಾರೆ.

ಈ ಅಭಿಪ್ರಾಯವನ್ನು ಗಮನಿಸಿದರೆ ಹರಿದಾಡುವ ಹಾವಿನ ಸಂತತಿಯ ಎಲ್ಲ ಉರಗಗಳು ನಾಗ ಎಂದಾಗುತ್ತದೆ. ಆರಾಧನೆಯ ವಿಷಯಕ್ಕೆ ಬಂದಾಗ ಈ ಮಾತು ಸಮರ್ಥನೀಯವಲ್ಲ. ಯಾಕೆಂದರೆ ಹರಿದಾಡುವ ಉರಗಳೆಲ್ಲವೂ ನಾಗ ಅಲ್ಲ. ಉರಗ ವಂಶದಲ್ಲಿ ಹೆಡೆಯಿರುವ ಪ್ರಾಣಿ ಮಾತ್ರ ನಾಗ ಎನ್ನುವುದು ವಾಸ್ತವ ವಿಚಾರ. ಕೆಲವು ನಂಬಿಕೆಗಳ ಪ್ರಕಾರ ಒಂದು ಹೆಡೆಯ ಹಾವು ಸರ್ಪ, ಹಲವು ಹೆಡೆಯ ಹಾವು ನಾಗ ಎಂಬುದಾಗಿದೆ. ಆದರೆ ನಾಗನ ಪ್ರತಿಮೆಯನ್ನು ಗಮನಿಸುವಾಗ ಒಂದು ಹೆಡೆ ಇದ್ದರೂ, ಅನೇಕ ಹೆಡೆಗಳಿದ್ದರೂ ನಾಗ ಪ್ರತಿಮೆ ಎಂದು ಗುರುತಿಸುವುದು ವಾಡಿಕೆ. ಇಲ್ಲಿರುವ ದ್ವಂದ್ವತೆಯ ಕುರಿತು ಸಂಸ್ಕೃತದ ಹಿರಿಯ ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯರು ಈ ರೀತಿ ಅಭಿಪ್ರಾಯ ಪಡುತ್ತಾರೆ. ''ಹರಿಯುವಂಥ ಹೆಡೆಯಲ್ಲದಿರುವ ಸರೀಸೃಪಗಳೆಲ್ಲವೂ

ಸರ್ಪವೆಂದೂ, ಹೆಡೆಯಿರುವ ಸರೀಸೃಪಗಳೆಲ್ಲವೂ 'ನಾಗ', ಹೆಡೆ ಇರುವ ಇರದ ಎಲ್ಲ ಸರೀಸೃಪವೂ ಸರ್ಪ, ಅದು ಅದರಲ್ಲಿ ಹೆಡೆ ಇರುವ ವಿಶೇಷ ಜಾತಿಗೆ ವಿಶಿಷ್ಟ ಹೆಸರು ನಾಗ. ವೈದಿಕ ಮಂತ್ರಗಳಲ್ಲೂ ಇದಕ್ಕೆ ಸಂವಾದಿಯಾದ ಮಾತು ಬಂದಿದೆ.

'ನಮೋ ಅಸ್ತು ಸರ್ಪೆಭ್ಯೋ ಯೆ ಕೇ ಚ ಪ್ರಥಿವೀಮನು

ಯೇ ಅಂತರೀಕ್ಷೇ ಯೇ ದಿವಿ ತೇಭ್ಯಃ ಸರ್ಪೆಭ್ಯೋ ನಮಃ'||

ಭೂಮಿಯಲ್ಲಿರುವ ಸರ್ಪಗಳು, ಮುಗಿಲಲ್ಲಿರುವ ಸರ್ಪಗಳು, ಸ್ವರ್ಗದಲ್ಲಿರುವ ಸರ್ಪಗಳು ಹೀಗೆ ಎಲ್ಲ ಸರ್ಪಗಳಿಗೂ ನಮಸ್ಕಾರ. ಇಲ್ಲಿ ಅಂತಃರಿಕ್ಷದಲ್ಲಿ ವಾತಾವರಣದಲ್ಲಿ ತುಂಬಿರುವ ಸೂಕ್ಷ್ಮಾಣುಗಳನ್ನು ಕೂಡ ಸರ್ಪ ಎಂದು ಕರೆದಿದ್ದಾರೆ. ಸೂರ್ಯನ ಕಿರಣಗಳಲ್ಲಿರುವ ಸರೀಸೃಪಗಳು ಎನ್ನುವಲ್ಲಿ ಈ ಮಾತು ಇನ್ನಷ್ಟು ಸ್ಪಷ್ಟ. ಹೀಗೆ ಸಮಷ್ಟಿಯಾಗಿ ಸರ್ಪಗಳನ್ನು ವಿಶೇಷವಾಗಿ ಆರಾಧಿಸುವುದು ವೇದಕಾಲದಿಂದ ಬಂದ ಪದ್ಧತಿಯಾಗಿದೆ.[3]'' ಎಂದು ಸರ್ಪ, ನಾಗ ಪರಿಕಲ್ಪನೆಯ ಕುರಿತು ಶಬ್ದಾರ್ಥ ವಿವೇಚನೆ ನಡೆಸಿದ್ದಾರೆ.

ವಿದ್ವಾಂಸರ ಉಲ್ಲೇಖವನ್ನು ಗಮನಿಸಿದರೆ ಹೆಡೆಯಿರುವ ಪ್ರಾಣಿ ಮಾತ್ರ ನಾಗ, ಅಥವಾ ಸರ್ಪ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಆರಾಧನೆಯ ಸಂದರ್ಭದಲ್ಲಿ ಹೆಡೆಯರಳಿಸಿರುವ ನಾಗ ಪ್ರತಿಮೆಗಳನ್ನೇ ಬಳಸಲಾಗುತ್ತದೆ. ನಾಗ ಅಥವಾ ಸರ್ಪ ಎನ್ನುವಾಗ ಹೆಡೆಯರಳಿಸಿರುವ ಕಲ್ಪನೆಯೇ ಕಂಡು ಬರುತ್ತದೆ. ಆದುದರಿಂದ ಹೆಡೆಅರಳಿಸುವ ಸರ್ಪ ಸಮೂಹದ ವಿಶೆಷ ಜಾತಿಯೇ ನಾಗ. ಮಹಾಭಾರತದ ಉಲ್ಲೇಖವೊಂದನ್ನು ವಿವರಿಸುತ್ತ ವಿದ್ವಾಂಸರು ಈ ರೀತಿ ಅಭಿಪ್ರಾಯ ಪಡುತ್ತಾರೆ. ''ಮಹಾಭಾರತದ ಉಪನಿಷತ್ 'ಭಗವದ್ಗೀತೆ', ಗೀತೆಯಲ್ಲಿ ಕೃಷ್ಣ ತನ್ನ ವಿಭೂತಿ ರೂಪವನ್ನು ಹೇಳುತ್ತಾ 'ಅನಂತಶ್ಚಾಸ್ಮಿ ನಾಗನಾಂ, ಸರ್ಪಣಾಮಸ್ಮಿ ವಾಸುಕಿಃ' ಎಂದಿರುವನು. ಸರ್ಪಶಬ್ದದ ಅರ್ಥ ಹರಿದಾಡುವಂತಹದು ಎಂದು, ನಾಗ ಎನ್ನುವುದು ಹೆಡೆಯುಳ್ಳ ಹರಿದಾಡುವ ಜಂತುಗಳಿಗೆ ಎಂದು ವಿಶ್ಲೇಷಿಸಿಕೊಳ್ಳಬಹುದು. ಹರಿದಾಡುವವುಗಳು-ಹಾವುಗಳು, ಹೆಡೆವುಳ್ಳವುಗಳು-ನಾಗಗಳು, ಹಾವುಗಳು 'ಕ್ರೋಧವಶಾ' ಎನ್ನುವವಳ ಮಕ್ಕಳು. ನಾಗಗಳು 'ಕದ್ರೂ' ಎನ್ನುವವಳ ಮಕ್ಕಳು[4]'' ಎಂದು ಪೌರಾಣಿಕ ಹಿನ್ನೆಲೆಯಲ್ಲಿ ನಾಗ ಮತ್ತು ಸರ್ಪ ಪದಗಳನ್ನು ವಿಶ್ಲೇಷಿಸಿರುವುದು ಕಂಡು ಬಂದಿದೆ.

ವಾಸ್ತವ ಸರ್ಪ ಅಥವಾ ಹಾವನ್ನು ಆರಾಧನೆಯನ್ನು ಹೊರತು ಪಡಿಸಿ ಲಾಂಛನವಾಗಿ ತೆಗೆದುಕೊಂಡಾಗ ಹಾವು ಸಾಧಾರಣವಾಗಿ ಕುಂಡಲಿನೀ ಶಕ್ತಿಯ ಸಂಕೇತ. ಆದರೆ ಆರಾಧನೆಯಲ್ಲಿ ''ಜೀವ ಜಗತ್ತನ್ನು ಆಳುವ, ಅರಳಿಸುವ ಮಹತ್ತರ ಶಕ್ತಿಯ ಸಂಕೇತ. ಜಗತ್ತಿನ ಸೃಷ್ಟಿಗೆ ಅದರ ಸ್ಥಿತಿ ಲಯಗಳಿಗೆ ಕಾರಣನಾಗಿರುವ ದೇವ ಮಾತ್ರವೇ ಇಂತಹ ಮಹತ್ತರವಾದ ಶಕ್ತಿಯನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳಬಲ್ಲ. ಇದನ್ನು ಸೂಚಿಸಲು ಹಾವನ್ನು ಧರಿಸಿರುವಂತೆ, ಹಾವನ್ನು ಹಾಸುಮಾಡಿಕೊಂಡಿರುವಂತೆ, ರೂಪಿಸಿರುವುದು ರೂಢಿಯಲ್ಲಿದೆ. ಸರ್ಪಕ್ಕೆ ಮೂರು ಹೆಡೆಗಳಿದ್ದರೆ ಅದು ತ್ರಿಮಲಗಳನ್ನು ಸೂಚಿಸುವುದು, ತ್ರಿಮಲ ಪೂರಿತ ಅದು ಆತ್ಮದ ಸಂಕೇತ ಎನ್ನುತ್ತಾರೆ. ಅಹಂಕಾರವುಳ್ಳ ಜೀವಿಯ ದ್ಯೋತಕವಾಗಿದೆ. ಐದು ಹೆಡೆಗಳು ಪಂಚೇಂದ್ರಿಯಗಳನ್ನು, ಏಳು ಹೆಡೆಗಳು ಪಂಚೇಂದ್ರಿಯಗಳೊಳಗೆ ಬುದ್ಧಿ ಅಹಂಕಾರಗಳನ್ನು ಸೇರಿಸಿ ಸಂಕೇತಿಸುತ್ತವೆ[5]'' ಎಂಬುದಾಗಿ ಮನ ಶಾಸ್ತ್ರದ

ಹಿನ್ನೆಲೆಯಲ್ಲಿ ಸರ್ಪದ ಪ್ರವೃತ್ತಿಯನ್ನು ಪಂಚೇಂದ್ರಿಯಗಳಿಗೆ ಹೋಲಿಸಿರುವುದು ಕಂಡು ಬರುತ್ತದೆ. ಇದರಿಂದ ವಾಸ್ತವ ಸರ್ಪವನ್ನು ಕಾಲ್ಪನಿಕ ನಾಗನೊಂದಿಗೆ ಸಮೀಕರಿಸಿ ಸರ್ಪನ ಹಿನ್ನೆಲೆಯಲ್ಲಿ ಅದ್ಭುತಗಳನ್ನು ಸೃಷ್ಟಿಸಿರುವುದು ವೇದ್ಯವಾಗುತ್ತದೆ. ನಾಗ ಮತ್ತು ಸರ್ಪ ಪದಗಳ ಕುರಿತು ಅಭಿಪ್ರಾಯಗಳು ಏನೇ ಇದ್ದರೂ ಆರಾಧನ ಪ್ರಸ್ತಾನದಲ್ಲಿ ಈ ಎರಡೂ ಪದಗಳನ್ನು ಸಮೀಕರಿಸಿ ಬಳಸಲಾಗುತ್ತದೆ. ಸರ್ಪಕಾವು ಅಥವಾ ನಾಗಬನವೆಂದರೂ ಅದರ ಹಿಂದಿರುವ ಆಶಯ ಒಂದೇ ಆಗಿದೆ. ಈಗ ಸರ್ಪ ನಾಗ ಎಂಬ ಎರಡು ಶಬ್ದಗಳು ಸಮ್ಮಿಳನಗೊಂಡು ನಾಗಾರಾಧನೆ ಎಂಬ ಪದವೇ ರೂಢಿಯಲ್ಲಿದೆ.

೪.೨. ಪೌರಾಣಿಕ ಹಿನ್ನೆಲೆ

ಪುರಾಣಗಳಲ್ಲಿ ಸರ್ಪಗಳು ಪ್ರಮುಖ ಸ್ಥಾನ ಪಡೆದಿರುವುದು ಕಂಡು ಬರುತ್ತದೆ. ಕಶ್ಯಪ ಪ್ರಜಾಪತಿಗೂ ಕದ್ರುವಿಗೂ ಹುಟ್ಟಿದವರು ನಾಗರು, ಪೌರಾಣಿಕ ಕತೆಗಳಲ್ಲಿ ಉಲ್ಲೇಖಿಸಿರುವಂತೆ ಕಶ್ಯಪ ಪ್ರಜಾಪತಿಗೆ ೧೭ ಮಂದಿ ಪತ್ನಿಯರು ಇವರಲ್ಲಿ ಕದ್ರು ಮತ್ತು ವಿನತೆಯರಿಗೆ ಕ್ರಮವಾಗಿ ಕದ್ರುವಿಗೆ ಸರ್ಪಗಳು, ವಿನತೆಗೆ ಅರುಣ, ಮತ್ತು ಗರುಡರು ಮಕ್ಕಳಾಗಿ ಜನಿಸಿದರು.

ಕದ್ರುದೇವಿಯು ಸಮಯಾನುಸಾರವಾಗಿ ನೂರು ಮೊಟ್ಟೆಗಳನ್ನಿಟ್ಟಳು, ವಿನತೆಯು ಎರಡು ಮೊಟ್ಟೆಗಳನ್ನಿಟ್ಟಳು, ಕದ್ರುವಿನ ಮೊಟ್ಟೆಗಳಿಂದ ಮರಿಗಳು ಹೊರಬಂದು ಓಡಾಡಲು ಶುರುಮಾಡಿದವು. ವಿನತೆಯ ಮೊಟ್ಟೆಗಳಿಂದ ಯಾವ ಮರಿಯೂ ಬರಲಿಲ್ಲ. ವಿನತೆಯು ಮೊಟ್ಟೆಯನ್ನು ಒಡೆದಳು. ಸಮಯವಾಗದ್ದರಿಂದ ಅದರಲ್ಲಿದ್ದ ಮಗುವಿನ ಕಾಲು ಬೆಳೆದಿರಲಿಲ್ಲ. ಹುಟ್ಟುಜ್ಞಾನಿಯಾದ ಅರುಣನು ಆ ಮೊಟ್ಟೆಯಿಂದ ಹೊರಬಂದ. ಅಕಾಲದಲ್ಲೇ ತಾನು ಹೊರಬರಬೇಕಾಗಿ ಬಂದದ್ದರಿಂದ ಸಿಟ್ಟುಗೊಂಡು ತನ್ನ ತಾಯಿಗೆ 'ನೀನು ನಿನ್ನ ತಂಗಿಗೆ ದಾಸಿಯಾಗೆಂದು' ಶಾಪವನ್ನಿತ್ತನು.

ಒಮ್ಮೆ ಅಕ್ಕತಂಗಿಯರಿಬ್ಬರು ತಮ್ಮ ಬಳಿಯಿಂದಲೇ ಹಾದು ಹೋದ ಉಚ್ಚೈಃಶ್ರವಸ್ಸೆಂಬ ಸ್ವರ್ಗ ಲೋಕದ ಬಿಳಿ ಕುದುರೆಯನ್ನು ಕಂಡರು. ಆಗ ನಾಗಮಾತೆಯಾದ ಕದ್ರುವು ತನ್ನ ಸವತಿಯಾದ ವಿನತೆಗೆ, 'ನೋಡು ಆ ಕುದುರೆ ಮೈ ಪೂರ್ತಿ, ಬಿಳುಪು, ಅದರ ಬಾಲ ಮಾತ್ರ ಕಪ್ಪು' ಎಂದಳು. ಆಗ ವಿನತೆಯು 'ಇಲ್ಲ ಆ ಕುದುರೆಯು ಪೂರ್ತಿ ಬಿಳುಪು, ನೀನು ಹೇಳಿದಂತೆ ಅದರ ಬಾಲ ಕಪ್ಪಲ್ಲ' ಎಂದಳು. ಕೂಡಲೇ ಕದ್ರುವು 'ನನ್ನೊಡನೆ ಪಣವನ್ನು ಇಡು. ಕುದುರೆ ಕಪ್ಪು ಇದ್ದರೆ ನೀನು ನನ್ನ ದಾಸಿಯಾಗಬೇಕು. ಹಾಗಿಲ್ಲದೆ ನೀನು ಹೇಳಿದಂತೆಯೇ ಕುದುರೆ ಬೆಳ್ಳಗೆ ಇದ್ದರೆ ನಾನು ನಿನ್ನ ದಾಸಿಯಾಗುವೆನು', ಎಂದಳು ಅನಂತರ ಅವರವರ ಮನೆಗೆ ಅವರು ತೆರಳಿದರು.

ಬಳಿಕ ಮಕ್ಕಳನ್ನು ಕರೆದು ಕದ್ರು ಹೇಳಿದಳು, ನಮ್ಮಲ್ಲಿ ಹೀಗೊಂದು ಪಣ ನಡೆದಿದೆ. ನಾನು ದಾಸಿಯಾಗಬಾರದೆಂದಿದ್ದರೆ ಬಿಳಿ ಕುದುರೆಯನ್ನು ಕಪ್ಪಾಗಿ ತೋರಿಸಬೇಕಾಗಿದೆ. ನೀವು ಎಲ್ಲರೂ ಸೇರಿ ಕುದುರೆಯನ್ನು ಸುತ್ತಿಕೊಂಡು ನಾವು ದೂರದಿಂದ ನೋಡುವಾಗ ಕುದುರೆ ಇಡೀ ಕಪ್ಪಾಗಿ ಕಾಣುವ ಹಾಗೆ ಮಾಡಬೇಕು ಎಂದು ಅಪ್ಪಣೆ ಕೊಟ್ಟಳು. ಕೆಲವರಿಗೆ ತಾಯಿಯ ಮಾತು ರುಚಿಸಲಿಲ್ಲ. ನೀನು ಹೀಗೆ ಮೋಸ ಮಾಡುವುದು ಸರಿಯಲ್ಲ.

ಆದ್ದರಿಂದ ನಾವು ನಿನ್ನ ಮಾತನ್ನು ಕೇಳುವುದಿಲ್ಲವೆಂದು ಅವು ಪ್ರತ್ಯುತ್ತರ ಕೊಟ್ಟವು. ಇದರಿಂದ ಕುಪಿತಳಾದ ತಾಯಿಯು 'ಜನಮೇಜಯನ ಸರ್ಪಸತ್ರದಲ್ಲಿ ನಿಮ್ಮನ್ನು ಅಗ್ನಿಯು ದಹಿಸಲಿ' ಎಂದು ಶಾಪವನ್ನು ಕೊಟ್ಟಳು.

ತಾಯಿಯ ಶಾಪದಿಂದ ಉದ್ವೇಗಗೊಂಡ ಕರ್ಕೋಟಕನು 'ತಾಯೇ ನೀನು ಹೆದರಬೇಡ, ನಿವೀಬ್ಬರೂ ಉಚ್ಚೈಃಶ್ರವಸ್ಸನ್ನು ನೋಡಲು ಬರುವಾಗ ನಾನು ಇಡೀ ಕುದುರೆಯ ದೇಹವನ್ನು ಸುತ್ತಿ ಕಪ್ಪಾಗಿ ಕಾಣುವಂತೆ ಮಾಡುತ್ತೇನೆ' ಎಂದು ಹೇಳಿದನು. ಸವತಿಯರಿಬ್ಬರೂ ಅಲ್ಲಿ ಹೋಗಿ ನೋಡಿದಾಗ ಕುದುರೆ ಕಪ್ಪಾಗಿತ್ತು. ಇದರ ಪರಿಣಾಮವಾಗಿ ವಿನತೆಯು ಕದ್ರುವಿನ ದಾಸಿಯಾದಳು. ಬಹಳ ಸಮಯದ ಬಳಿಕ ವಿನತೆಯ ಇನ್ನೊಂದು ಮೊಟ್ಟೆಯಿಂದ ಗರುಡನು ಹೊರಬಂದನು. ಹುಟ್ಟುವಾಗಲೇ ಮಹಾ ಪರಾಕ್ರಮಿಯಾದ ಗರುಡನು ತನ್ನ ತಾಯಿಯ ದುರವಸ್ಥೆಯನ್ನು ಕಂಡು ಕಾರಣವನ್ನು ತಿಳಿದು ಕೊಳ್ಳುತ್ತಾನೆ. ತಾಯಿಯ ದಾಸೀತ್ವದ ವಿಮೋಚನೆಗೋಸ್ಕರ ಸರ್ಪಗಣಗಳಿಗೆ ಸ್ವರ್ಗ ಲೋಕದಿಂದ ಅಮೃತವನ್ನೇ ತಂದುಕೊಟ್ಟು ತನ್ನ ತಾಯಿಯನ್ನು ದಾಸೀತ್ವದಿಂದ ವಿಮೋಚನೆಗೊಳಿಸುತ್ತಾನೆ. ತಾಯಿಯ ಶಾಪದಿಂದ ನೊಂದ ಸರ್ಪಗಳು ಹಿರಿಯನಾದ ಶೇಷನೊಂದಿಗೆ ಬ್ರಹ್ಮದೇವರಲ್ಲಿಗೆ ಹೋಗಿ ತಾಯಿಯ ಶಾಪದ ವಿಚಾರ ಹೇಳಿದಾಗ, ಬ್ರಹ್ಮದೇವನು ಹೀಗೇಂದನು. ತಾಯಿಯ ಶಾಪದಿಂದ ಗಾಬರಿಗೊಳ್ಳಬೇಕಾಗಿಲ್ಲ. ವಾಸುಕಿಯ ತಂಗಿ ಜರತ್ಕಾರುವೆಂಬ ನಾಗಕನ್ನಿಕೆ ಇದ್ದಾಳೆ. ಅವಳನ್ನು ಜರತ್ಕಾರು ನಾಮದ ಮಹರ್ಷಿಗೆ ಮದುವೆ ಮಾಡಿಕೊಟ್ಟರೆ, ಅವರಿಗೆ ಆಸ್ತಿಕ ಮಹರ್ಷಿಯು ಜನಿಸುತ್ತಾನೆ. ಅವನು ತಾಯಿಯ ಶಾಪವಿದ್ದರೂ ಸಹ ಇಡೀ ನಾಗಕುಲ ಸಂಹಾರವಾಗದಂತೆ ನೋಡಿಕೊಳ್ಳುತ್ತಾನೆ ಎಂದು ಆಶ್ವಾಸನೆ ನೀಡಿದನು. ಮುಂದೆ ಕ್ರಮೇಣ 'ಜರತ್ಕಾರು' ಎಂಬ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಿದ್ದ ಋಷಿಗೆ ವಾಸುಕಿಯು ತನ್ನ ತಂಗಿಯಾದ 'ಮನಸಾ' ಎಂಬವಳನ್ನು ಕೊಟ್ಟು ವಿವಾಹ ಮಾಡುತ್ತಾನೆ. ಈ ದಂಪತಿಗಳಿಗೆ ಹುಟ್ಟುಜ್ಞಾನಿಯಾದ 'ಆಸ್ತಿಕ' ಮುನಿಯು ಜನ್ಮ ನೀಡುತ್ತಾನೆ. ಈತನೇ ಮುಂದೆ ನಡೆಯುವ ಸರ್ಪಯಜ್ಞವನ್ನು ನಿಲ್ಲಿಸುತ್ತಾನೆ.

ಕಾಲಾಂತರದಲ್ಲಿ 'ಪರೀಕ್ಷಿತ' ಮಹಾರಾಜನು ಬೇಟೆಗಾಗಿ ಕಾಡಿಗೆ ಹೋದನು. ಅಲ್ಲಿ 'ಶಮೀಕ' ಮಹರ್ಷಿಯೆಂಬವನು ತಪಸ್ಸು ಮಾಡುತ್ತಿದ್ದನು. ತಪಸ್ಸಿನಲ್ಲಿ ಮಗನಾಗಿದ್ದ ಋಷಿಯು ರಾಜನ ಆಗಮನವನ್ನು ಗಮನಿಸಲಿಲ್ಲ. ಇದರಿಂದ ಕುಪಿತಗೊಂಡ ಮಹಾರಾಜನು ಆ ಮಹರ್ಷಿಯನ್ನು ಹಾಸ್ಯಮಾಡಿ ಪಕ್ಕದಲ್ಲೇ ಸತ್ತು ಬಿದ್ದಿದ್ದ ಒಂದು ಸರ್ಪವನ್ನು ಕೊರಳಿಗೆ ಹಾಕಿ ಹೊರಟು ಹೋದನು. ತಪಸ್ಸಿನಿಂದ ಎಚ್ಚತ್ತ ಮಹರ್ಷಿಯು ತನ್ನ ಕೊರಳಲ್ಲಿ ತೂಗುತ್ತಿರುವ ಮೃತ ಸರ್ಪವನ್ನು ನೋಡಿ, ಯೋಗ ದೃಷ್ಟಿಯಿಂದ ಪರೀಕ್ಷಿತ ಮಹಾಜನು ಮಾಡಿರುವ ಕೃತ್ಯವೆಂದು ತಿಳಿದುಕೊಂಡನು. ತನ್ನ ಗರ್ವದಿಂದ ಮಾಡಿರುವ ಕೃತ್ಯ ಎಂದು ತಿಳಿದು, ಪರೀಕ್ಷಿತ ರಾಜನು ಇನ್ನು ಏಳು ದಿನಗಳ ಒಳಗಾಗಿ ಸರ್ಪದಿಂದಲೇ ಮರಣವನ್ನಪ್ಪಲಿ ಎಂದು ಶಪಿಸಿದನು. ಪರಿಣಾಮವಾಗಿ ಮುಂದೆ ತಕ್ಷಕನೆಂಬ ಸರ್ಪದಿಂದ ಪರೀಕ್ಷಿತ ರಾಜನು ಮರಣಿಸಿದನು. ಈತನ ಮಗನೇ ಜನಮೇಜಯ. ತನ್ನ ತಂದೆಗೆ ಆದ ಅನ್ಯಾಯವನ್ನು ಕಂಡು ಸರ್ಪ ಕುಲವು ನಾಶವಾಗಬೇಕೆಂದು ಸಂಕಲ್ಪಿಸಿದನು. ಅದಕ್ಕಾಗಿ ಸರ್ಪಯಜ್ಞವನ್ನು ಆಯೋಜಿಸಿದನು.

ಋಷಿ ಮುನಿಗಳ ಸಹಾಯದಿಂದ ಸರ್ಪಯಜ್ಞವನ್ನು ಪ್ರಾರಂಭಿಸಿದನು. ಈ ರೀತಿ ನಡೆದ ಸರ್ಪಸತ್ರದಲ್ಲಿ ನೂರಾರು ಸರ್ಪಗಳು ಬಿದ್ದು ಮಡಿದವು. ತಾಯಿಯ ಶಾಪಕ್ಕೊಳಗಾಗಿ ತಕ್ಷಕನ ಕಾರಣದಿಂದ ಜನಮೇಜಯನ

ಯಜ್ಞದಲ್ಲಿ ಕೋಟಿಗಟ್ಟಲೆ ಸರ್ಪಗಣಗಳು ಅಗ್ನಿಯಲ್ಲಿ ಸಂಪೂರ್ಣ ಭಸ್ಮವಾಗಿ ಹೋದವು. ಕೊನೆಯಲ್ಲಿ ತನ್ನ ತಂದೆಯ ಸಾವಿಗೆ ಮುಖ್ಯ ಕಾರಣನಾದ ತಕ್ಷಕನು ಬರುವ ಕಾರಣ ರಾಜನಿಗೆ ಕಾಣಿಸಲಿಲ್ಲ. ಋಷಿಗಳು ಧ್ಯಾನ ದೃಷ್ಟಿಯಿಂದ ನೋಡುವಾಗ ತಕ್ಷಕನು ತನ್ನ ಗೆಳೆಯನಾದ ಇಂದ್ರನನ್ನು ಆಶ್ರಯಸಿದ್ದು ತಿಳಿಯುತ್ತದೆ. ಆಗ ಋಷಿಗಳು 'ಸಹೇಂದ್ರಾಯ ತಕ್ಷಕಾಯ ಸ್ವಾಹಾ' ಎಂದು ಹೋಮಿಸುವ ಯೋಚನೆ ಮಾಡಿದರು. ಈ ಸಂದರ್ಭದಲ್ಲಿ ವಾಸುಕಿಯ ಸೋದರಳಿಯನಾದ ಆಸ್ತಿಕ ಋಷಿಯ ಪ್ರವೇಶವಾಗುತ್ತದೆ. ಜನಮೇಜಯನು ಅವನನ್ನು ಉಪಚರಿಸಿ 'ತಾವು ಏನು ಕೇಳಿದರೂ ಕೊಡುತ್ತೇನೆ.' ಎಂದು ಹೇಳುತ್ತಾನೆ. ಇದೇ ಸಂದರ್ಭದವನ್ನು ಉಪಯೋಗಿಸಿಕೊಂಡು ತಕ್ಷಕನು 'ನಿನ್ನ ಸರ್ಪಸತ್ರವನ್ನು ನಿಲ್ಲಿಸಿ, ಸರ್ಪಾಹುತಿಯನ್ನು ನಿಲ್ಲಿಸಬೇಕೆಂದು' ಕೇಳಿ ಕೊಳ್ಳುತ್ತಾನೆ. ಇವನ ಈ ಬೇಡಿಕೆಯಂತೆ ಯಜ್ಞ ನಿಲ್ಲಿಸಲ್ಪಡುತ್ತದೆ. ವಾಸುಕಿಯು ಇದರಿಂದ ಬದುಕಿಕೊಳ್ಳುತ್ತಾನೆ. ಇದರಿಂದ ಅಷ್ಟಕುಲ ನಾಗಗಳು, ಮತ್ತು ಅವರ ಮುಖ್ಯ ಪರಿವಾರವಾದ ಸರ್ಪಗಣಗಳೂ ಉಳಿದುಕೊಂಡುವು. ಈಗ ಅಷ್ಟಕುಲ ನಾಗಗಳಾದ ಅನಂತ, ವಾಸುಕಿ, ಪದ್ಮ, ಮಹಾಪದ್ಮ, ತಕ್ಷಕ, ಗುಲಿಕ, ಕಾರ್ಕೋಟಕ ಮತ್ತು ಶಂಕಪಾಲರುಗಳು ಆರಾಧನೆಯಲ್ಲಿ ಉಳಿದುಕೊಂಡಿದ್ದಾರೆ.

೪.೩. ನಾಗಗಳು ಮತ್ತು ವರ್ಣವ್ಯವಸ್ಥೆ

ಪೌರಾಣಿಕ ಗ್ರಂಥಗಳನ್ನು ಅನುಲಕ್ಷಿಸಿ ನಾಗಗಳ ಪ್ರಭೇದಗಳಲ್ಲಿಯೂ ವರ್ಣ ವ್ಯವಸ್ಥೆಯನ್ನು ವಿದ್ವಾಂಸರು ಗುರುತಿಸಿದ್ದಾರೆ. ''ಅನಂತ-ವಾಸುಕಿ ಬ್ರಾಹ್ಮಣ ವರ್ಣ, ತಕ್ಷಕ-ಕಾರ್ಕೋಟಕ ಕ್ಷತ್ರಿಯ ವರ್ಣ, ಪದ್ಮ-ಮಹಾಪದ್ಮ ವೈಶ್ಯವರ್ಣ, ಶಂಖಪಾಲ-ಕುಲಿಕ ಶೂದ್ರವರ್ಣ ಎಂಬುದಾಗಿ, ಈ ರೀತಿಯ ವರ್ಣಭೇದದೊಂದಿಗೆ ವಿಷದ ಹಲ್ಲಿನ ವರ್ಣಕ್ಕೂ ಸಂಬಂಧ ಕಲ್ಪಿಸಲಾಗಿದೆ. ಬಿಳಿಯ ಹಲ್ಲಿನವರು ಬ್ರಾಹ್ಮಣ ನಾಗರು, ಕೆಂಪು ಹಲ್ಲಿನವರು ಕ್ಷತ್ರಿಯ ನಾಗರು, ಹಳದಿ ಹಲ್ಲಿನವರು ವೈಶ್ಯನಾಗರು, ಮತ್ತು ಕಪ್ಪು ಹಲ್ಲಿನವರು ಶೂದ್ರನಾಗರು [೫]'' ಎಂಬುದಾಗಿ ವರ್ಗೀಕರಿಸಲಾಗಿದೆ. ನಾಗಗಳ ಸ್ವರೂಪಗಳ ಕುರಿತು ಶ್ಲೋಕವೊಂದು ಈ ರೀತಿ ಇದೆ.

ನಾಗಾ : ಶ್ವೇತ ದೇಹಶ್ಚ ಕರ್ತವ್ಯ ಸ್ಫುರ ಸ್ಫೌಕ್ತಿಕ ಸನ್ನಿಭಃ |
ರಕ್ತಾ ಜ್ಞ ಸ್ವಸ್ತಿಕೋಪೇತಸ್ಸುತೇಜಾಸ್ತಕ್ಷಕೋ ಮಹಾನ್ ||
ಕೃಷ್ಣಃ ಕಾರ್ಕೋಟಕಃ ಕಣ್ಠೇ ಶುಕ್ಲರೇಖಾತ್ರಯಾನ್ವಿತಃ |
ರಕ್ತಪದ್ಮನಿಭಃ ಪದ್ಮಃ ಶಿರ ಶುಕ್ಲಸ್ಯ ವಿದ್ರುಮಃ ||
ಶಂಜ್ಞ ವರ್ಣೋ ಮಹಾಪದ್ಮೋ ಮಸ್ತಕೇ ಕೃಷ್ಣಶೂಲಧೃಕ್ |
ಹೇಮಾಭ ಶ್ಚಜ್ಞ ಪಾಲಸ್ಸ್ಯಾತ್ ಸಿಕರೇಖಾಧರೋ ಗತೇ ||
ಅಕ್ಷಸೂತ್ರಧರಾಸ್ಸರ್ವೇ ಕುಣ್ಣಿಕಾ ಪ್ರಚ್ಛ ಸಂಯುತಃ |
ಏಕಭೋಗಾ ಸ್ತ್ರೀ ಭೋಗಾ ವ ಹ್ಯೇತ ಜ್ಞಾತಾ ಸ್ಸುತಾದಯಃ ||

ಎಂಬುದಾಗಿ ಸರ್ಪಗಳನ್ನು ವರ್ಣಿಸಲಾಗಿದೆ.[೬]

ತಕ್ಷಕನು ಬಿಳುಪಾದ ದೇಹವುಳ್ಳವನು, ಮುತ್ತಿನಂತೆ ಪ್ರಕಾಶಮಾನನೂ, ರಕ್ತಾಂಗನು ಶರೀರ ಮತ್ತು ಅವಯವಗಳು ಕೆಂಪು ವರ್ಣಗಳಿಂದ ಕೂಡಿದ್ದು ಸ್ವಸ್ತಿಕವುಳ್ಳವನೂ, ಒಳ್ಳೆಯ ತೇಜಸ್ಸುಳ್ಳವನಾಗಿರವನು. ಕಾರ್ಕೋಟಕನು ಕಪ್ಪು ಬಣ್ಣದವನೂ, ಪದ್ಮನು ಕೆಂಬಣ್ಣದ ಪದ್ಮದಂತೆ ಕಾಂತಿವುಳ್ಳವನೂ, ವೈಢೂರ್ಯದಂತೆ ಹೊಳೆಯುವ ಶಿರ್ರಳ್ಳವನೂ ಆಗಿದ್ದಾನೆ. ಮಹಾಪದ್ಮನು ಶಂಖದಂತೆ ಬಿಳಿ ಬಣ್ಣವುಳ್ಳವನೂ, ಮಸ್ತಕದಲ್ಲಿ ಕಪ್ಪು ಬಣ್ಣದ ಶೂಲವನ್ನು ಧರಿಸಿದವನಾಗಿರುವನು. ಶಂಖಪಾಲನು ಬಂಗಾರದಂತಹ ಬಣ್ಣವುಳ್ಳವನೂ, ಇವರೆಲ್ಲರೂ ಎರಡು ನಾಲಗೆಯನ್ನು ಏಳು ಬಾಹುಗಳನ್ನು, ಹೆಡೆಗಳಲ್ಲಿ ಮಣಿಗಳನ್ನು, ಅಕ್ಷಸೂತ್ರವನ್ನು ಧರಿಸಿದ್ದು ತೀಕ್ಷ್ಣವಾದ ಬಾಲವನ್ನು ಹೊಂದಿದವರಾಗಿದ್ದಾರೆ. ಈ ರೀತಿಯಾಗಿ ಅಷ್ಟನಾಗಗಳ ವರ್ಣನೆ ಮಾಡಲಾಗಿದೆ.

ನಾಗಗಳಲ್ಲೆಲ್ಲ ಅನಂತ ಅಥವಾ ಶೇಷನು ಶ್ರೇಷ್ಠನೆಂದು ಭಾವಿಸಲಾಗಿದೆ. ಅನಂತನ ವೈಶಿಷ್ಟ್ಯದ ಕುರಿತು ಈ ರೀತಿ ವರ್ಣಿಸಲಾಗಿದೆ ''ಅಂತ್ಯವಿಲ್ಲದವನು ಅನಂತ. ಈ ಅನಂತನು ಸದಾ ಭಗವಂತನ ಸಾನ್ನಿಧ್ಯದಲ್ಲಿಯೇ ಇರುತ್ತಾನೆ. ಅದ್ದರಿಂದ ವೈಷ್ಣವ ಆಗಮುಗಳು ಈತನನ್ನು 'ನಿತ್ಯಸೂರಿ', ಎಂದರೆ ಎಲ್ಲಾ ಕಾಲಕ್ಕೂ ಮುಕ್ತನಾಗಿರುವವನು ಎಂದು ಪರಿಗಣಿಸುತ್ತವೆ. ಈತನೇ ಭಗವಂತನ ಮೊದಲ ಪರಿಚಾರಕ, ಭಗವಂತನು ಎಲ್ಲಿಗೆ ಹೋದರೆ ಅಲ್ಲಿ ಸಾವಿರ ಹೆಡೆಯ ಛತ್ರಿಯಾಗಿ ಸ್ವಾಮಿಗೆ ನೆರಳಾಗಿರುತ್ತಾನೆ. ಭಗವಂತನು ಕುಳಿತಲ್ಲಿ ಸ್ವಾಮಿಗೆ ಈತನೇ ಪೀಠವಾಗುತ್ತಾನೆ. ಸ್ವಾಮಿ ಮಲಗಿದರೆ ಅನಂತನೇ ಹಾಸಾಗುತ್ತಾನೆ. ಕ್ಷೀರಸಾಗರದಲ್ಲಿ ಯೋಗ ನಿದ್ರಾ ಸಮಯದಲ್ಲಿ ಅನಂತನು ಸ್ವಾಮಿಗೆ ತೇಲುವ ಹಾಸಿಗೆಯಾಗುವುದರೊಂದಿಗೆ ತನ್ನ ಹೆಡೆಯಿಂದ ನೆರಳನ್ನು ಹರಡಿಸುತ್ತಾ ಸ್ವಾಮಿಯನ್ನು ನೋಡಿಕೊಳ್ಳುತ್ತಿರುತ್ತಾನೆ. ಪಾತಾಳಾಂತ್ಯದಲ್ಲಿರುವ ಕೂರ್ಮನ ಮೇಲೆ ಕುಳಿತಿರುವ ಬಿಳಿಯ ವರ್ಣದ, ಸಾವಿರ ಹೆಡೆಗಳ ಅನಂತನು ಹಲಾಯುಧನಾಗಿದ್ದು ನಾಗರಾಜ ಎಂಬ ಹೆಸರನ್ನು ಪಡೆದಿದ್ದಾನೆ....... ಸಾವಿರ ಹೆಡೆಗಳ ಸರ್ಪರೂಪಿ ಅನಂತನು ಶಂಖಚಕ್ರಗಳನ್ನು ಧರಿಸಿರುವ ಸಕಲಾಲಂಕೃತ ದೇವನು....... ಸರ್ವಜ್ಞನಾದ ಅಚ್ಯುತನ ಬಳಿ ಎಲ್ಲಾ ಕಾಲದಿಂದಲೂ ಇರುವುದರಿಂದಲೇ ಅದ್ಭುತವಾದ ಅಪಾರ ಶಕ್ತಿಯನ್ನು ಪಡೆದುಕೊಂಡಿರುವ ಅನಂತನು ಹಿಮಾಚಲದಂತೆ ಬಿಳುಪಾಗಿದ್ದು, ಪೂರ್ಣಚಂದ್ರನಂತೆ ಕಾಂತಿ ಪೂರ್ಣನಾಗಿರುತ್ತಾನೆ. ಚತುರ್ಭುಜಗಳಿರುವ ಈತನು ಬಲಹಸ್ತಗಳಲ್ಲಿ ಹಲ (ನೇಗಿಲು), ಚಕ್ರವನ್ನೂ, ಎಡ ಹಸ್ತಗಳಲ್ಲಿ ಮುಸಲ (ಒನಕೆ) ಮತ್ತು ಶಂಖವನ್ನು ಧರಿಸಿರುತ್ತಾನೆ'' ಪುರಾಣಗಳಲ್ಲಿ ಬರುವ ಬಲರಾಮನನ್ನು ಅನಂತನ ಅವತಾರವೆಂದು ಭಾವಿಸಲಾಗುತ್ತದೆ. ಆದಿಶೇಷನು ಭೂಮಿಯನ್ನು ಹೊತ್ತುಕೊಂಡಿರುವಂತೆ ಪುರಾಣ ಕತೆಗಳು ಉಲ್ಲೇಖಿಸುತ್ತವೆ. ಆರಾಧನೆಯ ಸಂದರ್ಭದಲ್ಲಿ ವಿಷ್ಣುವನ್ನು ಅನಂತ ಪದ್ಮನಾಭನ ರೂಪದಲ್ಲಿ ಸಮೀಕರಿಸಿ ಪೂಜಿಸಲಾಗುತ್ತದೆ.

೪.೪. ಇತಿಹಾಸ

ನಾಗಾರಾಧನೆ ಅತೀ ಪ್ರಾಚೀನವಾದ ಒಂದ ಆರಾಧನ ಸಂಪ್ರದಾಯ. ಐತಿಹಾಸಿಕವಾಗಿ ನಾಗಾರಾಧನೆ ಭಾರತೀಯ ಸಂಸ್ಕೃತಿಯಲ್ಲಿ ಪ್ರಧಾನ ಪಾತ್ರ ವಹಿಸಿರುವುದು ವ್ಯಕ್ತವಾಗುತ್ತದೆ. ಸರ್ಪ ಸಂಪೂಜನೆಯು ಇಲ್ಲಿಯ ಒಂದಿಲ್ಲೊಂದು ಪಂಥದೊಂದಿಗೆ ಅಥವಾ ಸಿದ್ಧಾಂತದೊಂದಿಗೆ ಸೇರಿಕೊಂಡಿರುವುದು ವ್ಯಕ್ತವಾಗುತ್ತದೆ. ಸರ್ಪ ಮತ್ತು ಅಗ್ನಿಯ ಕಲ್ಪನೆಯು ಮಾನವ ನಾಗರಿಕತೆಯೊಂದಿಗೆ ಬೆಳೆದು ಬಂದಿರುವುದನ್ನು ಗಮನಿಸಬಹುದು. ಸರ್ಪದ ಅಥವಾ ಅಹಿಯ

ಕಲ್ಪನೆಯು ಮತ್ತು ಅದರ ಸಂಬಂಧವು ಆರ್ಯ ಜನರ ಜೀವನದಲ್ಲಿ ಆದಿಕಾಲದಿಂದಲೇ ಬೆರೆತುಕೊಂಡಿದೆ. ಮತ್ತು ಅವರು ಸರ್ಪವನ್ನು ಹಲವು ರೂಪಗಳಲ್ಲಿ ಆರಾಧಿಸುತ್ತಾ ಬಂದಿದ್ದಾರೆ. ''ಋಗ್ವೇದದಲ್ಲಿ ಅಗ್ನಿಯನ್ನು ಶಿವ, ರುದ್ರ, ಇಂದ್ರ ಮುಂತಾಗಿ ಕರೆದಿರುವಂತೆಯೇ 'ಅಹಿ' ಎಂದರೆ ಹಾವು ಎಂತಲೂ ಅರ್ಹಿಬುಧ್ಯ ಅಂದರೆ ಬುಡದಲ್ಲಿ ಅಥವಾ ತಗ್ಗಿನಲ್ಲಿರುವ ಹಾವು ಎಂತಲೂ ಕರೆದಿದೆ. ಋಗ್ವೇದದಲ್ಲಿ ಅಹಿ ಎಂಬ ಒಂಟಿ ಶಬ್ದವು ಸಾಮಾನ್ಯವಾಗಿ ಕತ್ತಲೆಯ ಸಂಕೇತವಾಗಿದ್ದು, ವೃತ್ರ ಶಬ್ದದ ಪರ್ಯಾಯವಾಚಿಯಾಗಿ ಸೂರ್ಯನನ್ನು ಅಥವಾ ಅವನ ಪ್ರಕಾಶವನ್ನು ಅಥವಾ ದಿವ್ಯ ಜಲಗಳ ಪ್ರವಾಹವನ್ನು ತಡೆದಿಟ್ಟವನೆಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಮತ್ತು ಇಂದ್ರನು ಆ ಅಹಿಯನ್ನು ಕೊಂದನೆಂದು ವರ್ಣಿಸಿದೆ. ಪರಂತು ಅಹಿ ಶಬ್ದವು ಅಗ್ನಿಯ ಸಲುವಾಗಿ ಪ್ರಯೋಗಿಸಲ್ಪಟ್ಟ ಸಂದರ್ಭಗಳಲ್ಲಿ ಅದರೊಂದಿಗೆ 'ಬುದ್ನ' ಶಬ್ದವಾಗಲಿ ಅಪಾಂನಪಾತ್ ಶಬ್ದವಾಗಲಿ ಅಜವಕಪಾದ್ ಶಬ್ದವಾಗಿ ಬಂದಿರುತ್ತದೆ. 'ಬುದ್ನ' ಶಬ್ದದ ಅರ್ಥವು ಬುಡ ಎಂದಿದ್ದು ಅದು ಅಡಿಭಾಗ, ತಳ ಮತ್ತು ತಗ್ಗು ಎಂಬ ಲಾಕ್ಷಣಿಕಾರ್ಥಗಳನ್ನು ಕೊಡುತ್ತದೆ. ಆದುದರಿಂದ 'ಅರ್ಹಿಬುಧ್ನ್ಯ' ಎಂಬುದರ ಅರ್ಥವು ಆಳದಲ್ಲಿ ಇಲ್ಲವೇ ತಗ್ಗಾದ ಸ್ಥಳದಲ್ಲಿರುವ ಹಾವೆಂತಲೂ, ಅಡಿಯಲ್ಲಿ ಇಲ್ಲವೇ ಬುಡದಲ್ಲಿರುವ ಹಾವೆಂತಲೂ ಆಗುತ್ತದೆ. ಅಪಾಂನ ಪಾತ್ ಎಂಬುದರ ಅರ್ಥವು ದಿವ್ಯ ಜಲಗಳ ಪುತ್ರ ಎಂತಲೂ, ಅಜ ಏಕಪಾದ್ ಎಂಬುದರ ಅರ್ಥವು, ಒಂಟಿಗಾಲಿನ ಹೋತ ಎಂಥಲೂ ಇದ್ದು ಅವುಗಳು ಅಗ್ನಿಯ ಹೆಸರುಗಳಾಗಿರುತ್ತವೆ.''[9]

ಪ್ರಾಚೀನ ಕಾಲದ ಆರ್ಯ ಜನರು ಅಗ್ನಿಯನ್ನು ಏಕೆ ಹಾವೆಂದು ಕರೆದಿದ್ದರೆಂದು ನಿಖರವಾಗಿ ಹೇಳುವುದು ಕಷ್ಟ. ಆದರೂ ಆಗ್ನಿಯ ಜ್ವಾಲೆಗಳು ಗಾಳಿಯು ಬೀಸುವಾಗ ಅಂಕುಡೊಂಕಾಗಿ ಅಲುಗಾಡುತ್ತಿರುವುದರಿಂದಲೂ ಮತ್ತು ಅಂಥ ಅಲುಗಾಡುವಿಕೆಯು ಹಾವಿನ ತೆವಳುವಿಕೆಯಂತೆ ತೋರುವುದರಿಂದಲೂ ಅವರು ಅಗ್ನಿಯನ್ನೂ ಹಾವೆಂದಿರಬಹುದು. ಶ್ರೀ ಶಂಭಾ ಜೋಷಿಯವರು ನಾಗ ಪ್ರತಿಮಾ ವಿಚಾರದ ಕುರಿತು ವಿಶೇಷ ಅಧ್ಯಯನ ನಡೆಸಿದವರು. ನಾಗವೇ ಎಲ್ಲ ಶಕ್ತಿಗಳಿಗೂ ಮೂಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ''ವಿಶ್ವವನ್ನು ನಾನಾ ರೂಪದಲ್ಲಿ ಆಕರ್ಷಿಸಿ ಆಳುತ್ತ ಉಗ್ರ ಘೋರ ರೂಪದಿಂದ ಜನಮನದಲ್ಲಿ ಅಗಮ್ಯ (ಗೂಢ) ಭಯ ಭರಿತ ಧಿಙ್ಮೂಢಭಾವ ಪ್ರೇರಿಸಿ, ಭಕ್ತರಲ್ಲಿ ಸರ್ವಾರ್ಪಣ ಭಾವವನ್ನು ಪ್ರಚೋದಿಸಲು ಸರ್-ಪ ರೂಪದಲ್ಲಿ ಹೆಡೆಯೆತ್ತಿನಿಂತ ಸರ್ವಾಶ್ಚರ್ಯಮಯ ಅಧ್ಬುತ ದಿವ್ಯ ಶಕ್ತಿಯೆ ಈ ನಾಗದೈವತ, ಭಾರತದೊಳಗಿನ ಪ್ರತಿಯೊಂದು ಪುರಾತನ ಧರ್ಮಪಂಥದ ತಳಹದಿಯಲ್ಲೂ, ವ್ಯಕ್ತಾವ್ಯಕ್ತ ರೂಪದಲ್ಲಿ ಈ ನಾಗಪ್ರತಿಮೆಯು ವುಂಟು. ಅಂಗಾಂಗಳೆಲ್ಲ ನಾಗವಿಭೂಷಿತನಾದ ರುದ್ರನ 'ಉಗ್ರ' ಎಂಬ ಈ ನಾಮ-ಸಾರ್ಥಕ್ಯಕ್ಕೆ ಭಾಷ್ಯದ ಅವಶ್ಯಕತೆಯಲ್ಲಿ? ಮೋಹನಾಂಗ, ಚೆಲುವ ಚೆನ್ನಿಗ ರಾಯನೆಂಬ ನಾರಾಯಣ ವಾಸುದೇವ, ವಿಷ್ಣು, ಕೃಷ್ಣರ ಮೋಹಕ ಸೌಂದರ್ಯದ ನಿಲುಮೆಯು ಹಾವಿನ ಇನ್ನೊಂದು ಅಂಗವನ್ನು ಪ್ರದರ್ಶಿಸುತ್ತದೆ. ಹರಿ, ಹರ ಈ ಎರಡೂ ಶಬ್ದ ಪ್ರತಿಮೆಗಳ ಮೂಲ ಹೃ-ಹರ್ ಅಖ್ಯಾತ, ಹರ, ಹರಿ, ಎಂದರೆ ಹರಣ ಮಾಡುವ ದೈವತ ಎಂದರ್ಥ. ಲೋಗರ ದುಃಖಗಳನ್ನೂ ಪ್ರಾಣಗಳನ್ನೂ ಹರಣಮಾಡಿ ಆ ಜೀವಗಳನ್ನು 'ಮುಕ್ತ' ಮಾಡುವ ಶಕ್ತಿಯ ದೈವತಗಳಿವು. ಜೈನ ತೀರ್ಥಂಕರರೊಳಗಿನ 'ಅನಂತನಾಥ' ಹಾಗೂ ಯಕ್ಷಿಣಿ ಪದ್ಮಾವತಿ ಇವು ಹಾವಿನ ಪರ್ಯಾಯ ನಾಮಗಳೇ, 'ಪದ್ಮ' ವಿಷ್ಣು-ಲಕ್ಷ್ಮಿಯರ ಸಂಕೇತ

ಪ್ರತೀಕವೂ ಅಹುದು. ಇದಕ್ಕೆ ಶ್ರೀ ಸೂಕ್ತದಲ್ಲಿ ಆಧಾರವಿದೆ. ಆದಿ ಬುದ್ಧನು ಯಕ್ಷ, ವೃಕ್ಷ, ಸರ್ಪರೂಪನಾಗಿರುವುದಾಗಿ ಆನಂದ ಕುಮಾರ ಸ್ವಾಮಿಯವರು ಸಾಧರವಾಗಿ ಸಿದ್ಧಪಡಿಸಿದ್ದಾರೆ. ಹೀಗೆ ಶೈವ, ವೈಷ್ಣವ, ಜೈನ, ಬೌದ್ಧ ಈ ಪಂಥಗಳೆಲ್ಲವೂ ನಾಗ, ನೀರು, ವೃಕ್ಷ ಈ ಪ್ರತಿಮಾ ಮೂಲದಿಂದ ಹೊರಟ ಶಾಖೋಪಶಾಖೆಗಳೆ''[೬] ಎಂದು ಅಭಿಪ್ರಾಯ ಪಡುತ್ತಾರೆ.

ನಮಗೆ ಸ್ಪಷ್ಟವಾಗಿ ತೋರುವಂತೆ ಸರ್ಪ ಸಂಪೂಜನೆಯು ಭಾರತೀಯರ ಜಾನಪದ ನಂಬಿಕೆಗಳ ಗಣನೀಯ ಭಾಗವನ್ನು ರೂಪಿಸಿದ್ದಿರಬೇಕು. ಹಾಗೂ ಪ್ರಾಚೀನ ಕಾಲದಿಂದಲೂ ಅವರ ಕರ್ಮಠ ಕ್ರಮಗಳಲ್ಲಿ ಜಿನುಗುತ್ತಿದ್ದಿರಬೇಕು. ಪುರಾತತ್ವ, ಇತಿಹಾಸ ಹಾಗೂ ಧರ್ಮ ಇತಿಹಾಸಗಳ ನೆಲೆಯಿಂದ ಈ ಹಿನ್ನೆಲೆಯ ಪರೀಕ್ಷೆ ತುಂಬ ಆಸಕ್ತಿದಾಯಕವಾದುದು. ಏಕೆಂದರೆ ಭಾರತವು ಇತರ ನಾಗರಿಕತೆಗಳೊಂದಿಗೆ ಹಲವಾರು ಅಂತಃ ಪ್ರವಾಹಗಳಲ್ಲಿ ಪಾಲುಗೊಳ್ಳುತ್ತದೆ. ವಿವಿಧ ಸಂಸ್ಕೃತಿಗಳ ಜನರಿಂದ ಸರ್ಪಗಳನ್ನು ಆರಾಧಿಸುವುದರ ಕಾರಣಗಳ ಅಧ್ಯಯನವನ್ನು ಆಳವಾದ ಮಾನವ ವೈಜ್ಞಾನಿಕ ಹಾಗೂ ಸಾಮಾನ್ಯ ಸಾಂಸ್ಕೃತಿಕ ಮಹತ್ವದ್ದನ್ನಾಗಿ ಇದು ಮಾಡುತ್ತದೆ. ಭಾರತದ ಎಲ್ಲ ಮುಖ್ಯ ಪಂಥಗಳಲ್ಲಿ ಸೇರಿಹೋದ ನಾಗಪಂಥವು ಒಂದು ಸೋದಾಹರಣೆಯ ವಿವರಣೆಯನ್ನು ನೀಡುತ್ತದೆ. ಈ ಜೀವಿಯನ್ನು ಕುರಿತ ಧೋರಣೆ ಭಾರತದ ಎಲ್ಲ ಶತಮಾನಗಳಲ್ಲೂ ಜೀವಂತವಾಗಿ ಉಳಿದುಕೊಂಡು ಬಂದಿದೆ. ಈ ಕುರಿತು ಭಾರತದಲ್ಲಿ ಆರ್ಯರು ಬರುವ ಮೊದಲು ವಾಸವಾಗಿದ್ದ ಜನಗಳಲ್ಲಿ 'ನಾಗ'ವನ್ನು ದಿವ್ಯ ದೈವತವೆಂದು ಆರಾಧಿಸುವ ಸಂಪ್ರದಾಯವಿದ್ದಿತು. ಭಾರತದ ಜಾನಪದ ಜೀವನದ ವಿಶ್ಲೇಷಣಾತ್ಮಕ ಸಮೀಕ್ಷೆಯಲ್ಲಿ ಹೊರಡುವ ಸಂಗತಿಯೆಂದರೆ ಈ ದೇಶವು ನಾನಾ ಅರಣ್ಯಗಳ ಬೀಡು ಆಗಿದ್ದಾಗ ಎಲ್ಲೆಲ್ಲೂ ನಾಗ ಸರ್ಪಗಳ ಸುಳಿದಾಟವು ವಿಪರೀತವಾಗಿತ್ತು. ಜಲಾಶಯ, ವೃಕ್ಷ, ನಾಗ, ಚಂದ್ರಾದಿಗಳು 'ದಿವ್ಯ' ದೈವತ ಶಕ್ತಿಯುಳ್ಳ ಶಬ್ದ-ಪ್ರತಿಮೆಗಳಾಗಿರುವ ಜನದ ಮೂಲ ಪಂಗಡವು, ಯಾವ ಬಗೆಯ ನಿಸರ್ಗಸ್ಥ ಪರಿಸರದಲ್ಲಿ ಬಾಳಿ ಬದುಕಬೇಕಾದಾಗ ಈ ಪ್ರತಿಮಾ ಸಂಕೇತಗಳು ಪ್ರಚಲಿತವಾಗಿರಬೇಕು ಎಂಬುದನ್ನು ಊಹಿಸಿಕೊಳ್ಳಲು ಕಷ್ಟ ಪಡಬೇಕಾಗಿಲ್ಲ[೭] ಎಂದು ಅಭಿಪ್ರಾಯ ಪಡಲಾಗಿದೆ. ಭಾರತೀಯ ಸಂಸ್ಕೃತಿಯು ಮುಂದಿನ ಹಂತಗಳಲ್ಲಿ ನಾನಾ ಶಾಖೋಪ ಶಾಖೆಗಳಾಗಿ ಹಬ್ಬುತ್ತ ಹೊರಟರೂ ಆಪ ರಸ ನಾಗ ಹಂತದಲ್ಲಿ ಶಾಕ್ತ, ಶೈವ, ವೈಷ್ಣವ ಪಂಥಗಳು ಮಾತ್ರವಲ್ಲ ಜೈನ, ಬೌದ್ಧ ಮತಗಳ ಉಗಮವೂ ಇಲ್ಲಿಯೇ ಆಗಿರಬೇಕು. ಇದರಿಂದ ಭಾರತೀಯ ಸಂಸ್ಕೃತಿಯೊಳಗಿನ ಏಕಾತ್ಮಕತೆಯ ಪಾತಳಿಯು ಇಲ್ಲಿರುವುದು ಕಾಣುತ್ತದೆ. ''ಪಾಂಥಿಕ ವಸ್ತುವಾಗಿ ಸರ್ಪಾರಾಧನೆಯ ಉಗಮವನ್ನು ಮೊಹೊಂಜೊದಾರೊ ಯುಗದಷ್ಟು ಹಿಂದೆ ಗುರುತಿಸಿದೆ. ಅಲ್ಲಿನ ಮುದ್ರೆಗಳಲ್ಲಿ ಅದು ಯೋಗ ಮುದ್ರೆಯಲ್ಲಿರುವ ಆಕೃತಿಗೆ, ಸಂಭವನೀಯವಾಗಿ ದೇವರಿಗೆ ಭಕ್ತಿ ಭಾವವನ್ನು ತೋರಿಸುತ್ತದೆ. ಇದು ಅನಂತರ ಕಾಲದ ಶೈವ (ಮತ್ತು ಶಾಕ್ತ) ಪಂಥಗಳೊಂದಿಗೆ ಸರ್ಪಗಳ ನಿಕಟ ಸಾಹಚರ್ಯದ ಆದಿ ಸೂಚನೆಯಾಗಿದೆ.''[೮] ಎಂದು ಸರ್ಪಾರಾಧನೆಯ ಐತಿಹಾಸಿಕ ಪರಂಪರೆಯನ್ನು ಕುರಿತು ಉಲ್ಲೇಖಿಸಿದ್ದಾರೆ.

ಭಾರತದ ಪ್ರತಿಯೊಂದು ಪಂಥವೂ ಅಥವಾ ಧರ್ಮವೂ ನಾಗನನ್ನು ಒಂದಲ್ಲ ಒಂದು ರೀತಿಯಲ್ಲಿ ಅವಿಭಾಜ್ಯ ಅಂಗವಾಗಿ ಸ್ವೀಕರಿಸುತ್ತಾ ಬಂದಿದೆ. ಕೆಲವು ಸಾರಿ ನಾಗನನ್ನು ಗತಿಸಿದ ಪೂರ್ವಜನ ಪ್ರೇತವೆಂದು, ಮತ್ತು ಕೆಲವು

ಬಾರಿ ಅನಂತರದ ಕಾಲದಲ್ಲಿ ನಿಧಿಯ ಪೋಷಕನೆಂದು ಭಾವಿಸಲಾಗಿತ್ತು.ಹೀಗೆ ಶೈವ ಧರ್ಮವಷ್ಟೇ ಎಲ್ಲ ವೈಷ್ಣವ ಧರ್ಮ, ಬೌದ್ಧ ಧರ್ಮ ಮತ್ತು ಜೈನ ಧರ್ಮಗಳೂ ಕೂಡ ತಮ್ಮವೇ ಆದ ಧಾರ್ಮಿಕ ವ್ಯವಸ್ಥೆಗಳಲ್ಲಿ ಸರ್ಪವನ್ನು ಒಂದು ಅಧೀನ ಶಕ್ತಿಯಾಗಿ ಸೇರಿಸಿಕೊಂಡಿರುವುದು ಕಂಡುಬರುತ್ತದೆ. ''ಬುದ್ಧನು ಮುಚಲಿಂದ ಮತ್ತು ಎಲಾಪತ್ತರ ಗೌರವಾದಾರವನ್ನು ಸ್ವೀಕರಿಸುತ್ತಾನೆ. ಪಾರ್ಶ್ವನಾಥನು ಸರ್ಪವನ್ನು ತನ್ನ ವಿಶೇಷ ಚಿಹ್ನೆಯನ್ನಾಗಿ ಹೊಂದಿದ್ದಾನೆ. ಶಿವ ಮತ್ತು ದುರ್ಗಿ ಹಾಗೂ ಗಣೇಶ ಮತ್ತು ಸೂರ್ಯರೂ ಹಾವುಗಳನ್ನು ಧರಿಸುತ್ತಾರೆ. ವೈಷ್ಣವ ಧರ್ಮದಲ್ಲಿ ಕೂಡ ನಾಗಪಂಥವು ಬೇರೊಂದು ರೀತಿಯಲ್ಲಿ ಬೆರತು ಹೋಯಿತು. ವಿಷ್ಣುವಿನ ವಾಹನವಾದ ಸರ್ಪಗಳ ವೈರಿಯಾದ ಗರುಡ ಸೂಚಿಸುವ ದ್ವೇಷಭಾವ ಮತ್ತು ಕೃಷ್ಣನಿಂದ ನಾಗ ಕಾಲಿಯನ ದಮನ ಇವು ಹರಿವಂಶ ಮತ್ತು ಅನಂತರದ ಸಾಹಿತ್ಯದಲ್ಲಿ ನಿರೂಪಿತವಾಗಿದೆ.''[೨] ಧರ್ಮಗಳ ಹಿನ್ನೆಲೆಯಲ್ಲಿ ನಾಗಪಂಥವು ಬೆರತು ಹೋಗಿರುವುದು ಇಲ್ಲಿ ವ್ಯಕ್ತವಾಗುತ್ತದೆ.

ನಾಗಾರಾಧನೆ ವೇದಗಳಲ್ಲಿ, ಪುರಾಣಗಳಲ್ಲಿ ವಿವಿಧ ಹಂತಗಳಲ್ಲಿ ಮತ್ತು ಸ್ವರೂಪಗಳಲ್ಲಿ ಕಾಲಘಟ್ಟದಲ್ಲಿ ಬದಲಾಗುತ್ತಾ ಬಂದಿದೆ. ನಾಗಾರಾಧನೆ ನಾಗರಿಕ ಜಗತ್ತಿನಲ್ಲಿಯಾವಾಗ ಪ್ರಚಲಿತಕೆ ಬಂತೆನ್ನುವುದನ್ನು ವಿಶ್ಲೇಷಿಸುವುದು ಕಷ್ಟದ ವಿಚಾರ. ಜೇಮ್ಸ್ ಪರ್ಗ್ಯೂಸನ್ ಅವರು ''ಸರ್ಪದ ವಿಶಿಷ್ಟವಾದ ಸ್ವರೂಪ, ಚಲನ ವಲನ ಜೀವನ ವಿಧಾನ, ಇವುಗಳಿಂದಾಗಿ ಒಂದು ರೀತಿಯ ಕುತೂಹಲ ನಾಗರಿಕತೆಯ ಪ್ರಾರಂಭದ ಮಾನವರಿಗೆ ಉಂಟಾಗಿರಬೇಕು. ಆ ಹೆದರಿಕೆಯೇ ಆರಾಧನೆಗೆ ಕಾರಣವಾಗಿರಬೇಕು. ಕ್ರಮೇಣ ಆರಾಧನೆಯ ಮೇಲಿನ ನಂಬಿಕೆ ಬೆಳೆದಂತೆ ಈ ನಂಬಿಯಲ್ಲಿ ಪ್ರೀತಿ ಮತ್ತು ಗೌರವಗಳು ಉಂಟಾದವು''[೩] ಎಂದು ಅಭಿಪ್ರಾಯ ಪಟ್ಟಿದ್ದಾರೆ.ಅವರು ನಾಗಾರಾಧೆಯ ಇತಿಹಾಸದ ಬಗ್ಗೆ ವಿವರಿಸುತ್ತಾ ''ನಾಗಾರಾಧನೆಯು ಟುರೇನಿಯನ್ ಮೂಲದಿಂದ ಬಂದಿರಬೇಕು. ಟುರೇನಿಯನ್ ಮೂಲದ ಜನರು ಯೂಫ್ರೆಟಿಸ್ ನದೀ ದಂಡೆಗಳಲ್ಲಿ ವಾಸಿಸುತ್ತಿದ್ದವರಾಗಿಬೇಕು. ಅಲ್ಲಿಂದ ನಾಗಾರಾಧನೆಯು ಜಗತ್ತಿನ ವಿವಿಧ ಭಾಗಗಳಿಗೆ ಹರಡಿರಬೇಕು''[೪] ಎಂದು ಅಭಿಪ್ರಾಯ ಪಡುತ್ತಾರೆ.

ಭಾರತೀಯ ಪರಂಪರೆಯಲ್ಲಿ ಯಾವಾಗ ನಾಗಾರಾಧನೆ ಪ್ರಪಂಚಕ್ಕೆ ಬಂದಿತೆನ್ನುವುದನ್ನು ನಿಖರವಾಗಿ ವಿಶ್ಲೇಷಿಸುವುದು ಕಷ್ಟಕರ. ಆದರೂ ಕಾಶ್ಮೀರವೂ ಪ್ರಚೀನದಲ್ಲಿ ಪ್ರಬಲವಾದ ನಾಗಾರಾಧನ ಕೇಂದ್ರವಾಗಿತ್ತು ಎನ್ನುವುದು ಪರ್ಗ್ಯೂಸನ್ ಅಭಿಪ್ರಾಯ. ಅವರು ಅಬ್ದುಲ್ ಪಜಲ್ ಅವರ ಹೇಳಿಕೆಗಳನ್ನು ಉಲ್ಲೇಖಿಸುತ್ತಾ ''ಕಾಶ್ಮೀರ ಪ್ರದೇಶದಲ್ಲಿ ಸುಮಾರು ೭೦೦ ಕಡೆಗಳಲ್ಲಿ ನಾಗಪೂಜನೆ ನಡೆಯುತ್ತಿತ್ತು. ಶಿವಪೂಜೆ ೪೫ ಕಡೆ, ೬೪ ಕಡೆಗಳಲ್ಲಿ ವಿಷ್ಣುಪೂಜೆ, ೩ ಕಡೆಗಳಲ್ಲಿ ಬ್ರಹ್ಮ ಮತ್ತು ೨೨ ಕಡೆಗಳಲ್ಲಿ ದುರ್ಗಿಯ ಪೂಜೆ ನಡೆಯುತ್ತಿತ್ತೆಂದು ಅಂದಿನ ಶಿಲ್ಪಕಲೆಯಿಂದ ದೃಢವಾಗುತ್ತದೆಂದು ಅಭಿಪ್ರಾಯ ಪಡುತ್ತಾರೆ. ಕಲ್ಹಣನ ರಾಜ ತರಂಗಿಣಿಯಲ್ಲಿ ಹೇಳಿರುವ ಪ್ರಕಾರ ಅಲ್ಲಿಯ ರಾಜ ದಾಮೋದರ ಎಂಬುವನು ಬ್ರಾಹ್ಮಣನೊಬ್ಬನಿಗೆ ಅಪಚಾರವೆಸಗಿದ ಪರಿಣಾಮವಾಗಿ ಸರ್ಪವಾಗಿ ಪರಿವರ್ತನೆಗೊಂಡು, ನಂತರ ಅದೇ ಪ್ರದೇಶದಲ್ಲಿ ಸರ್ಪವಾಗಿ ಸಂಚರಿಸುತ್ತಿದ್ದನೆಂಬ ನಂಬಿಕೆಯಿದೆ. ಪುಷ್ಕ, ಜುಷ್ಕ ಮತ್ತು ಕನಿಷ್ಕ ಎಂಬ ಚಾರಿತ್ರಿಕ ರಾಜರುಗಳು ಈ ರಾಜನ ನಂತರ ಆಳ್ವಿಕೆ ನಡೆಸುತ್ತಾರೆ. ಹ್ಯೂಯೆನ್ ತ್ಸಾಂಗ್‌ನು ಅಲ್ಲಿ ಕ್ರಿ.ಶ.೬೩೨ರಲ್ಲಿ ಬಾಲಾದಿತ್ಯನ ಕಾಲದಲ್ಲಿ ಕಾಶ್ಮೀರಕ್ಕೆ ಬಂದವನು. ಕಾಶ್ಮೀರದಲ್ಲಿ

ಸರ್ಪಗಳಿಗಿದ್ದ ಮಹತ್ವವನ್ನು ಉಲ್ಲೇಖಿಸಿದ್ದಾನೆ. ಅವನ ಉಲ್ಲೇಖವನ್ನೇ ಗಮನಿಸುವುದಾದರೆ ಭಾರತ ವಾಯುವ್ಯ ಪ್ರದೇಶವು ಸರ್ಪಾರಾಧನೆಯ ಕೇಂದ್ರ ಸ್ಥಾನವಾಗಿತ್ತು. ನಂತರ ಕ್ರಮೇಣ ಈ ಪ್ರದೇಶವು ಬೌದ್ಧ ಧರ್ಮದ ಪ್ರಭಾವಕ್ಕೆ ಒಳಗಾಗಿರಬೇಕು.''[೧೯] ಎಂದು ಈ ಪ್ರದೇಶದಲ್ಲಿದ್ದ ನಾಗಾರಾಧನೆಯ ಮಹತ್ವವನ್ನು ವಿವರಿಸಲಾಗಿದೆ. ಈ ಹೇಳಿಕೆಗಳನ್ನು ಗಮನಿಸಿದರೆ ಈ ಪ್ರದೇಶದಲ್ಲಿ ನಾಗಾರಾಧನೆಗಿದ್ದ ಮಹತ್ವದ ಅರಿವಾಗುತ್ತದೆ. ಮತ್ತು ಕಾಲಾಂತರದಲ್ಲಿ ಅದು ಉತ್ತರದಿಂದ ದಕ್ಷಿಣಕ್ಕೆ ಹಬ್ಬಿಕೊಂಡಿರಬೇಕು.

೪.೫. ಲಾಂಛನವಾಗಿ ನಾಗ

ನಾಗಾರಾಧನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಿ ಆರಾಧನೆಗೊಳ್ಳುವ ಪ್ರತೀಕ ನಾಗ ಲಾಂಛನವಾಗಿದ್ದರೂ ಕೂಡ ಅದರ ಹಿನ್ನೆಲೆಯಲ್ಲಿ ಆರಾಧನೆಗೊಳ್ಳುವ ಶಕ್ತಿ ನಾವು ಕಾಣುವಂಥ ಪ್ರಾಣಿ ವರ್ಗಕ್ಕೆ ಸೇರಿದ ಉರಗವೋ, ಅಥವಾ ಆ ಉರಗವನ್ನು ನಿಮಿತ್ತವಾಗಿಸಿಕೊಂಡು ಬೇರೆಯೇ ಆದ ಒಂದು ವರ್ಗವೋ, ಅತಿಮಾನುಷ ವರ್ಗವನ್ನು ಸಮೀಕರಿಸಿ ಮಾಡಿದಂಥತಹ ಒಂದು ಆರಾಧನಾ ವಿಧಾನವೋ ಎನ್ನುವುದೇ ಕೌತುಕದ ವಿಚಾರ.

ನಾಗನನ್ನು ಒಂದು ಲಾಂಛನವಾಗಿ ಪರಿಗಣಿಸಿ ಅಧ್ಯಯನ ನಡೆಸಿದರೆ, ಪ್ರಾಚೀನ ಸಾಂಸ್ಕೃತಿಕ ಪರಂಪರೆಯಲ್ಲಿ ಅನೇಕ ಲಾಂಛನಗಳು ಇದ್ದುದು ಕಂಡುಬರುತ್ತದೆ. ಗರುಡ ಲಾಂಛನದವರನ್ನು ಪಕ್ಷಿಕುಲಕ್ಕೆ ಸೇರಿಸಿದಾಗ ಅದು ಕಥೆಗಷ್ಟೇ ಸೀಮಿತವಾಗುತ್ತದೆ ಹೊರತು ವಾಸ್ತವಕ್ಕೆ ಸಂಗತವಲ್ಲ. ಹೀಗಾಗಿ ಇವರನ್ನು ಆ ಲಾಂಛನ ಹೊಂದಿರುವ ಮನುಷ್ಯವರ್ಗ ಎಂದು ಗುರುತಿಸಬಹುದಾಗಿದೆ. ಅದೇ ರೀತಿ ಪುರಾಣಗಳಲ್ಲಿ ಬರುವ ವಾನರ ವರ್ಗದವರನ್ನು ಕಪಿಗಳು, ಬಾಲ ಹೊಂದಿರುವವರು ಎಂಬ ಅರ್ಥದಲ್ಲಿ ಗುರುತಿಸದೆ ಅವರನ್ನು ವಾಸ್ತವಿಕವಾಗಿ, ವೈಜ್ಞಾನಿಕವಾಗಿ ಅಧ್ಯಯನ ನಡೆಸುವಾಗ ಅವರೂ ಕೂಡ ಮನುಷ್ಯ ವರ್ಗವಾಗಿರಬೇಕು. ಅವರಲ್ಲಿ ಮನುಷ್ಯರಿಗಿಂತ ಕೆಲವು ಭಿನ್ನ ವಿಷಯಗಳಿರುವುದರಿಂದ ಅವರನ್ನು ವಾನರರೆಂದು ಕಲ್ಪಿಸಿದರೆಂದು ಭಾವಿಸಿಕೊಳ್ಳಬೇಕಾಗಿದೆ. ಈ ಎಲ್ಲ ವಿಚಾರಗಳನ್ನು ವೈಜ್ಞಾನಿಕವಾಗಿ, ವೈಚಾರಿಕವಾಗಿ ಅಧ್ಯಯನ ನಡೆಸುವಾಗ ಅದನ್ನು ಕಲ್ಪನೆಯ ಹಿನ್ನೆಲೆಯಲ್ಲಿ ವಾಸ್ತವಕ್ಕೆ ತರಬೇಕಾಗಿದೆ. ನಾಗಾರಾಧನೆಯ ಕುರಿತು ಅಧ್ಯಯನ ನಡೆಸುವಾಗ ನಾಗನನ್ನು ಲಾಂಛನವಾಗಿ ಸ್ವೀಕರಿಸಿ ಲಾಂಛನವನ್ನು ಪೂಜಿಸುವ ಒಂದು ಪದ್ಧತಿ ರೂಢಿಯಲ್ಲಿದೆ. ಅದೇ ರೀತಿ ವರಾಹ ಎಂಬುದು ಒಂದು ಲಾಂಛನ. ಇಲ್ಲಿ ವರಾಹ ಎಂಬುದು ಒಂದು ಪ್ರಾಣಿ ವರ್ಗಕ್ಕೆ ಸೇರಿದ್ದುದು. ಆದರೆ ಅದು ತುಳುನಾಡಿನಲ್ಲಿ ಕೆಲವು ಕುಟುಂಬಗಳ ಆರಾಧ್ಯ ದೈವವಾಗಿ ಪರಿವರ್ತನೆಗೊಂಡಿದೆ. ಆದರೆ ಇಲ್ಲಿ ವಾರಾಹಿಯನ್ನು ಲಾಂಛನವಾಗಿ ಪೂಜಿಸಲಾಗುತ್ತದೆಯೇ ಹೊರತು ಜೀವಂತ ಹಂದಿಯನ್ನಲ್ಲ. ಅದೇ ಹಿನ್ನೆಲೆಯಲ್ಲಿ ನಾಗ ಲಾಂಛನವನ್ನು ಪೂಜಿಸುವ ಪರಂಪರೆ ಬೆಳೆದುಬಂದಿದೆ. ಒಟ್ಟಿನಲ್ಲಿ ನಾಗನನ್ನು ಪ್ರಾಚಿನ ಸಂಸ್ಕೃತಿಯ ಆಳದಲ್ಲಿಟ್ಟು ಗಮನಿಸುವಾಗ ಅದನ್ನು ಒಂದು ರಕ್ಷಕ ಶಕ್ತಿಯಾಗಿ ಸ್ವೀಕರಿಸಿ ಅದಕ್ಕೆ ಒಂದು ಆರಾಧನ ಸ್ಥಾನ ಕಲ್ಪಿಸಿ ಪೂಜಿಸುವ ಪರಂಪರೆ ಬೆಳೆದು ಬಂದಿರುವುದನ್ನು ಗಮನಿಸಬಹುದು.

೪.೬. ಕಾಲ್ಪನಿಕ ನಾಗ

ಆರಾಧನ ಪ್ರಸ್ಥಾನದಲ್ಲಿ ಧಾರ್ಮಿಕ ಪರಂಪರೆಯು ಬಹಳ ವೈವಿಧ್ಯಪೂರ್ಣವಾದುದು. ಇಲ್ಲಿ ಅಲೌಕಿಕ ಸ್ತರದಲ್ಲಿರುವ ದೇವತೆಗಳು ಬರುತ್ತಾರೆ. ಮನುಷ್ಯ ವರ್ಗದವರು ಕಾಲಾಂತರದಲ್ಲಿ ದೈವೀ ಪದವಿಯನ್ನು ಪಡೆದು

ಆರಾಧನೆಯನ್ನು ಕೈಗೊಳ್ಳುವ ವಿಧಿ ವಿಧಾನಗಳು ಕಂಡುಬರುತ್ತವೆ. ನಂತರದ ಹಂತದಲ್ಲಿ ಮನುಷ್ಯನ ಮಟ್ಟದಿಂದ ಭಿನ್ನವಾಗಿ ಪ್ರಾಣಿ ಪ್ರಪಂಚದಲ್ಲಿರುವ ಅನೇಕ ಪ್ರಾಣಿಗಳನ್ನು ದೈವೀಕರಿಸಿ ಆರಾಧನೆ ಮಾಡುವಂಥ ಪದ್ಧತಿಯು ಆರಾಧನ ಪರಂಪರೆಯಲ್ಲಿ ಕಂಡುಬರುತ್ತದೆ. ಅದರಲ್ಲಿ ಸರ್ಪಾರಾಧನೆಯು ಕಂಡುಬರುವುದು ಕಾಲ್ಪನಿಕ ಸರ್ಪದ ನೆಲೆಯಲ್ಲಿ.

ವೈದಿಕ, ಅವೈದಿಕ ಅಥವಾ ಒಟ್ಟಾರೆಯಾಗಿ ಭಾರತೀಯ ಮನಸ್ಸು ಅಗೋಚರವಾದ ಮತ್ತು ಕಾಲ್ಪನಿಕವಾದ ಪ್ರಾಣಿ, ಪಕ್ಷಿ, ಮನುಷ್ಯ ಇವುಗಳನ್ನು ಪೂಜಿಸುತ್ತದೆಯೇ ವಿನಃ ವಸ್ತುವನ್ನಲ್ಲ. ಇಂದು ಸರ್ಪ ಇಷ್ಟು ಪ್ರಭಾವಿ ಶಕ್ತಿಯಾಗಿ ಪೂಜೆ ಕೈಗೊಳ್ಳುತ್ತಿದ್ದರೆ ಅದರ ಕಾಲ್ಪನಿಕ ರೂಪ, ಮತ್ತು ಶಕ್ತಿಯೇ ಕಾರಣ. ನಾರಾಗಾಧನೆಯ ಪರಂಪರೆಯಲ್ಲಿ ಸ್ಪಷ್ಟವಾಗಿ ನಾಗಗಳ ಕಲ್ಪಿತ ರೂಪವೊಂದನ್ನು ಸಾಕ್ಷಾತ್ಕರಿಸಲಾಗಿದೆ. ಸರ್ಪಗಳೆಲ್ಲವೂ ಈ ಕಲ್ಪಿತ ನಾಗನ ಸಾಕಾರ ರೂಪಗಳು. ಸರ್ಪವನ್ನು ಕೊಲ್ಲುವ ಸಂಪ್ರದಾಯ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತಿದೆ. ಈ ಪ್ರದೇಶದಲ್ಲಿಯೂ ನಾಗಾರಾಧನೆ ಪ್ರಚಲಿತದಲ್ಲಿದೆ. ಆದರೆ ಜೀವಂತ ಸರ್ಪಕ್ಕಲ್ಲ, ಕಾಲ್ಪನಿಕ ನಾಗನಿಗೆ ಇಲ್ಲಿ ಪೂಜೆ ಸಲ್ಲುತ್ತದೆ. ಪುರಾಣಗಳಲ್ಲಿ ಮತ್ತು ಆರಾಧನ ಪ್ರಸ್ಥಾನದಲ್ಲಿ ಕಂಡುಬರುವ ಕಲ್ಪಿತ ನಾಗವು ಬಹು ಹೆಡೆಗಳು, ಅಪಾರವಾದ ವಿಷ, ದ್ವೇಷಸಾಧಕ, ಭೂಮಿಯನ್ನು ಹೊತ್ತಿರುವ ಆದಿಶೇಷನ ಕಲ್ಪನೆ, ವಿಷ್ಣುವಿನ ಹಾಸಿಗೆ, ಸಂತಾನ ಪ್ರಾಪ್ತಿ, ಈ ಎಲ್ಲ ಪರಿಕಲ್ಪನೆಗಳು ವಾಸ್ತವ ನಾಗ ಅಥವಾ ಸರ್ಪದ ರೂಪಕ್ಕೆ ಸಾಧ್ಯವಿಲ್ಲ. ಆದರೆ ವಾಸ್ತವ ನಾಗ ಕಲ್ಪಿತ ನಾಗನನ್ನು ಪರಿಭಾವಿಸುವುದಕ್ಕೆ ಸಾಧ್ಯ ಮಾಡುತ್ತದೆ. ಇದರಿಂದಾಗಿ ಕಲ್ಪಿತ ನಾಗನಿಗೆ ಸಲ್ಲುವ ಮರ್ಯಾದೆಗಳು ಸ್ವಲ್ಪ ಪ್ರಮಾಣದಲ್ಲಿ ವಾಸ್ತವ ನಾಗನಿಗೂ ಸಲ್ಲುತ್ತದೆ. ಆದುದರಿಂದ ಆರಾಧನೆಯಲ್ಲಿ ಮತ್ತು ಧಾರ್ಮಿಕ ವಿಧಿ ವಿಧಾನಗಳಲ್ಲಿ ಪೂಜೆಗೊಳ್ಳುವ ನಾಗ ಕಲ್ಪಿತ ನಾಗನೇ ಹೊರತು ವಾಸ್ತವ ನಾಗ ಅಥವಾ ಸರ್ಪವಲ್ಲ.

೪.೭. ಮೂರ್ತಿ ಶಿಲ್ಪವಾಗಿ ನಾಗ

ನಾಗ ಅಥವಾ ಸರ್ಪವನ್ನು ಪ್ರಧಾನವಾಗಿ ಪ್ರತಿಮೆಗಳ ಮೂಲಕ ಆರಾಧಿಸಲಾಗುತ್ತದೆ. ಕೆಲವು ಆಚರಣೆಗಳಲ್ಲಿ ಮಂಡಲಗಳ ಮೂಲಕ ನಾಗನ ಪ್ರತಿಕೃತಿಗಳನ್ನು ಪಂಚವರ್ಣದ ಹುಡಿಗಳಿಂದ ರಚಿಸಿ ಆರಾಧಿಸಲಾಗುತ್ತದೆ ನಾಗಾರಾಧನೆಯಲ್ಲಿ ಪ್ರತಿಮೆಗಳಿಗೆ ವಿಶೇಷ ಪ್ರಾಧ್ಯಾನ್ಯತೆ ಇದೆ. ನಾಗನ ಪ್ರತಿಮೆಗಳಲ್ಲಿಯೂ ವೈವಿಧ್ಯತೆ ಇದೆ. ಕೇರಳದಲ್ಲಿ ಲಿಂಗವನ್ನು ನಾಗನ ಹೆಡೆಯು ಆವರಿಸಿರುವಂತೆ, ಮತ್ತು ಹಲವಾರು ಜಡೆ ನಾಗಗಳು ಲಿಂಗವನ್ನು ಆವರಿಸಿಕೊಂಡಿರುವಂಥ ಪ್ರತಿಮೆಗಳು ಕಂಡುಬರುತ್ತವೆ. ತುಳು ಸಂಸ್ಕೃತಿಯಲ್ಲಿ ಪ್ರಾಚೀನ ಶೈಲಿಯ ಪ್ರತಿಮೆಗಳ ಸ್ವರೂಪವೇ ಭಿನ್ನವಾಗಿದೆ. ಈ ಪ್ರತಿಮೆಗಳು ಪ್ರಾದೇಶಿಕವಾಗಿಯು ವಿಭಿನ್ನ ಸ್ವರೂಪದಲ್ಲಿರುವುದು ಕಂಡುಬಂದಿದೆ. ಪುರಾತನವಾದ ಕೆಲವು ಪ್ರತಿಮೆಗಳಲ್ಲಿ ಮನುಷ್ಯ ರೂಪವನ್ನು ಸರ್ಪವು ಆವರಿಸಿಕೊಂಡಿರುವಂಥ ಪ್ರತಿಮೆಗಳು ದೇಹದ ಮೇಲೆ ಮಾನವ ಆಕೃತಿ ಮತ್ತು ಕೆಳಭಾಗ ಸರ್ಪಾಕೃತಿ ಇತ್ಯಾದಿಗಳು ಕಂಡುಬರುತ್ತವೆ. ಇಂದಿನ ಆಧುನಿಕ ಸಂದರ್ಭದಲ್ಲಿ ಒಂದು ಹೆಡೆ, ಮೂರು ಹೆಡೆ, ಐದು ಹೆಡೆ ಹಾಗೂ ಏಳು ಹೆಡೆಯ ನಾಗಪ್ರತಿಮೆಗಳನ್ನು ಸಾಮಾನ್ಯವಾಗಿ ಕಾಣಬಹುದು. ಜೊತೆಗೆ ಈ ಪ್ರತಿಮೆಗಳಲ್ಲಿ ಮರಿ ಮೊಟ್ಟೆಯ ಕಲ್ಪನೆಯು ಕಂಡುಬರುತ್ತದೆ.

ತುಳು ಸಂಸ್ಕೃತಿಯನ್ನು ಹೊರತು ಪಡಿಸಿ ಉತ್ತರ ಮತ್ತು ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ನಾಗ ಮಿಥುನದ ಶಿಲ್ಪ ಮತ್ತು ಇಡಿಯ ಸರ್ಪದ ಕಲ್ಪನೆಯನ್ನು ಒಳಗೊಂಡಿರುವ ಪ್ರತಿಮೆಗಳು ಕಂಡಬರುತ್ತವೆ. ನಾಗ ಪ್ರತಿಮೆಗಳ ಕುರಿತು ಶಿಲ್ಪಶಾಸ್ತ್ರದಲ್ಲಿ ಈ ರೀತಿಯ ಉಲ್ಲೇಖ ಕಂಡುಬರುತ್ತದೆ.

ಶಿಲ್ಪರತ್ನಂ : ನಾಗಾನಾಂ ವಕ್ಷತೇರೂಪಂ ನಾಭೇರೂರ್ಧ್ವಂ ನರಾಕೃತಿ |
ಸರ್ಪಾಕಾರ ಮಧೋಭಾಗಂ ಮಸ್ತಕೇ ಭೋಗ ಮಣ್ಡಲಮ್ ||
ಏಕಂ ಪಣಾತ್ರಯಂ ವಾಪಿ ತಞ್ಚಾ ವಾ ಸಪ್ತವಾನವ |
ದ್ವಿಜಹ್ವಾಸ್ತೇ ವಿದಾತವ್ಯ ಖಡ್ಗ ಚರ್ಮ ಕರೈರ್ಯುತಾ ||

ಎಂದು ಉಲ್ಲೇಖಿಸಲಾಗಿದೆ.[೨]

ನಾಭಿಯ ಮೇಲ್ಭಾಗ ಮನುಷ್ಯರ ರೂಪವನ್ನು, ಕೆಳಗಿನ ಭಾಗ ಸರ್ಪದ ಆಕಾರವನ್ನು ಶಿರಸ್ಸಿನಲ್ಲಿ ಹೆಡೆಗಳ ಸಮೂಹವನ್ನು ಹೊಂದಿರುವವರು, ಒಂದು, ಮೂರು, ಐದು, ಏಳು ಅಥಾವಾ ಒಂಭತ್ತು ಹೆಡೆಗಳನ್ನು, ಎಲ್ಲಾ ಹೆಡೆಗಳಲ್ಲಿಯೂ ಎರಡು ನಾಲಗೆಯನ್ನು ಹೊಂದಿರುವವರು, ಮತ್ತು ಕೈಗಳಲ್ಲಿ ಖಡ್ಗ, ಚರ್ಮವನ್ನು ಧರಿಸಿರುವವರೆಂದು ತಿಳಿಯಬೇಕು. ಈ ಸ್ವರೂಪವನ್ನು ಹೊಂದಿರುವ ಹಲವಾರು ನಾಗಪ್ರತಿಮೆಗಳು ತುಳುನಾಡಿನಲ್ಲಿ ಕಂಡುಬಂದಿವೆ. ವಿಶೇಷವಾಗಿ ಕಾರ್ಕಳ ತಾಲೂಕಿನ ಸುತ್ತ ಮುತ್ತ ಅಂತಹ ಕೆಲ ಪ್ರತಿಮೆಗಳು ಕಂಡುಬಂದಿವೆ. ಈ ಪ್ರತಿಮೆಗಳಲ್ಲಿ ಮುಖ್ಯವಾಗಿ ಸರ್ಪಗಳ ಹೆಡೆಗಳಿಂದ ಆವೃತ್ತನಾಗಿ ಕುಳಿತಿರುವ ಮಾನವಾಕೃತಿ, ಕುಳಿತಿರುವ ವ್ಯಕ್ತಿಯ ಕೈಯಲ್ಲಿ ದಂಡವಿರುತ್ತದೆ. (ಕಾರ್ಕಳ ತಾಲೂಕಿನ ದುರ್ಗ ಮತ್ತು ಕೆಲ್ಲ ಪುತ್ತಿಗೆಯ ಸೂರ್ಯ ನಾರಾಯಣ ದೇವಾಲಯ) ಧ್ಯಾನ ಭಂಗಿಯಲ್ಲಿ ಕುಳಿತ ನಾಗಬ್ರಹ್ಮನ ಪ್ರತಿಮೆ (ಕಾರ್ಕಳ ತಾಲೂಕಿನ ದುರ್ಗ ಮತ್ತು ನಾರಾವಿಯ ಸೂರ್ಯನಾರಾಯಣ ದೇವಾಲಯ) ಮತ್ತು ಸೊಂಟದ ಕೆಳಗೆ ಸರ್ಪಾಕೃತಿ, ಮೇಲ್ಭಾಗ ಮನುಷ್ಯಾಕೃತಿ (ಕಾರ್ಕಳ ತಾಲೂಕಿನ ದುರ್ಗ ಮತ್ತು ಕಾಬೆಟ್ಟಿನ ಬ್ರಹ್ಮಸ್ಥಾನ) ಈ ಸ್ವರೂಪದಲ್ಲಿರುವ ಪ್ರತಿಮೆಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಈ ಪ್ರತಿಮೆಗಳು ೧೦ನೇ ಶತಮಾನದ ನಂತರದ ಪ್ರತಿಮೆಗಳೆಂದು ಊಹಿಸಬಹುದು. ಈ ಪ್ರತಿಮೆಗಳಲ್ಲಿ ಜೈನ ಸಂಸ್ಕೃತಿಯ ಪ್ರಭಾವವನ್ನು ಗಮನಿಸಬಹುದು. ೧೦, ೧೨ನೇ ಶತಮಾನದ ಕಾಲಾವಧಿಯಲ್ಲಿ ಕಾರ್ಕಳದಲ್ಲಿ ಜೈನ ಆಡಳಿತಗಾರರ ಪ್ರಭಾವ ಇದ್ದುದು ತಿಳಿದು ಬರುತ್ತದೆ. ನಾಗಾರಾಧನೆಯ ಮೇಲೂ ಈ ಸಂಸ್ಕೃತಿಯ ಪರಿಣಾಮ ಬೀರಿರಬೇಕು.

ಇದರೊಂದಿಗೆ ಈ ನಾಗ ಪ್ರತಿಮೆಗಳಲ್ಲಿ 'ಯಕ್ಷಾ'ರಾಧನೆಯ ಪ್ರಭಾವ ನಿಚ್ಚಳವಾಗಿ ಗೋಚರವಾಗುತ್ತದೆ. ಇಲ್ಲಿ ನಾಗ ಮತ್ತು ಯಕ್ಷ ಎರಡು ಪರಂಪರೆಗಳ ಸಮ್ಮಿಳನ ಕಂಡುಬರುತ್ತದೆ. ಮನುಷ್ಯರೂಪ ಮತ್ತು ನಾಗರೂಪ ಎರಡರ ಸಂಕರ ಸಮ್ಮಿಳನ ಈ ಪ್ರತಿಮೆಗಳಲ್ಲಿ ಕಂಡುಬರುತ್ತದೆ. ಅಂದರೆ ಮನುಷ್ಯನಿಗೆ ಯಕ್ಷ ರೂಪಕೊಟ್ಟಾಗ ನಾಗನನ್ನು ಅಲ್ಲಿ ಸಮೀಕರಿಸಿದಾಗ ದೇಹದ ಕೆಳಭಾಗ ಸರ್ಪರೂಪಿಯಾಗಿ ಮೇಲ್ಭಾಗ ಮನುಷ್ಯ ರೂಪಿಯಾಗಿ ಕಲ್ಪಿಸಲಾಗಿದೆ. ಅದನ್ನೆಲ್ಲ ಗಮನಿಸಿದರೆ ನಾಗಾರಾಧನೆಯಲ್ಲಿ ನಾಗ ಪರಿಕಲ್ಪನೆಯನ್ನು ಸರಳವಾಗಿ ವಿಶ್ಲೇಷಿಸುವುದು

ಕಷ್ಟಕರ. ಪ್ರಾಚೀನ ಆರಾಧನ ಪರಂಪರೆಯಲ್ಲಿ ಯಕ್ಷ ಪೂಜೆಗೆ ಬಹಳ ಮಹತ್ವವಿದ್ದಂತೆ ಕಂಡುಬರುತ್ತದೆ. ಯಕ್ಷಪೂಜೆ ಮತ್ತು ವೃಕ್ಷಪೂಜೆ ಬೌದ್ಧರ ಕಾಲದಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದ ಸಂಗತಿಯಾಗಿತ್ತು. ಹೀಗಾಗಿ ಯಕ್ಷರಿಗೆ ಲಾಂಛನವಾಗಿ ನಾಗ ಇರುವ ಸಾಧ್ಯತೆ ಇದೆ. ಯಕ್ಷ ಎಂಬ ವರ್ಗವನ್ನು ಮನುಷ್ಯರೆಂದು ಭಾವಿಸಿಕೊಂಡರೆ ಯಕ್ಷ, ಕಿನ್ನರ, ಗರುಡ, ಗಂಧರ್ವ, ಉರಗ, ಸಿದ್ಧ, ಸಾಧ್ಯ ಇವರೆಲ್ಲ ದೇವ ಯಾನಿಗಳೆಂಬ ನಂಬಿಕೆಯಿದೆ. ಅಂದರೆ ಮಾನವೀಯ ಮತ್ತು ಅತಿಮಾನುಷ ಸ್ವಭಾವವವು ಅವರಲ್ಲಿದೆ. ಎಂಬ ಕಲ್ಪನೆಯಿದೆ. ಈ ರೀತಿ ಯಕ್ಷರೆಂಬವರು ಒಂದು ಮನುಷ್ಯವರ್ಗವೆಂದು ಕಲ್ಪಿಸಿದರೆ ಅದು ಒಂದು ರೀತಿಯ ವಿಶ್ಲೇಷಣೆಗೆ ದಾರಿಯಾಗುತ್ತದೆ. ಕ.ವೆಂ.ರಾಜಗೋಪಾಲ ಅವರು ಯಕ್ಷ ಕಲ್ಪನೆ ಬೌದ್ಧ ಪೂರ್ವ ಯುಗದೆಂದು ಅಭಿಪ್ರಾಯ ಪಡುತ್ತಾರೆ. ''ರಾಮಾಯಣ, ಮಹಾಭಾರತಗಳಲ್ಲಿ ಇವರ ವಿಚಾರವಿದೆ. ದಿ.ಆನಂದ ಕುಮಾರ ಸ್ವಾಮಿಯವರು ಇದರ ಮೂಲವನ್ನು ಪರೀಕ್ಷಿಸಿ ಇದನ್ನು 'Water cosmology' ಅಥವಾ ಜಲ ಸೃಷ್ಟಿ ಪ್ರಪಂಚಕ್ಕೆ ಸೇರಿಸುತ್ತಾರೆ. ಅಂದರೆ ಯಕ್ಷರು ಮೂಲದಲ್ಲಿ ಜಲ ದೇವತೆಗಳು ಮತ್ತು ಅವುಗಳಿಗೆ ಯಾವ ರೂಪವೂ ಇದ್ದಂತೆ ಕಂಡುಬರುವುದಿಲ್ಲ. ಮುಂದಿನ ಹೆಜ್ಜೆಗೆ ಅಂದರೆ ಬೌದ್ಧ ಧರ್ಮದ ವಿಕಾಸದಲ್ಲಿ ಇವರು ವೃಕ್ಷ ದೇವತೆಗಳಾಗಿ ಕಂಡುಬರುತ್ತಾರೆ. ಆಗಲೂ ಇವುಗಳು ಅಶ್ವತ್ಥ, ಆಮ್ರ, ಕದಂಬ ಮುಂತಾದ ವೃಕ್ಷಗಳನ್ನು ಆಶ್ರಯಿಸಿರುವಂತೆ ಪ್ರತಿಮೆಗಳು ಕಂಡುಬರುತ್ತವೆ.''[೨] ಈ ವಿಚಾರವನ್ನು ಗಮನಿಸಿದರೆ ನಾಗಪ್ರತಿಮೆಗಳ ಸ್ವರೂಪ ಮತ್ತು ಹಿನ್ನೆಲೆಯಲ್ಲಿ ಬೌದ್ಧ ಧರ್ಮದ ಪ್ರಭಾವ ವಿರುವುದು ಸ್ಪಷ್ಟವಾಗುತ್ತದೆ. ನಾಗ ಶಿಲ್ಪಕಲೆಯ ಮೇಲೂ ಇದು ಪ್ರಭಾವ ಬೀರಿದೆ. ಜೊತೆಗೆ ನಾಗ ಪ್ರತಿಮೆಗಳು ನೀರಿನ ಸಮೀಪದಲ್ಲಿಯೇ ಪ್ರತಿಷ್ಠಾಪಿಸಲ್ಪಟ್ಟಿರುವುದರಿಂದ ಈ ಮಾತಿಗೆ ಪುಷ್ಟಿ ದೊರಕುತ್ತದೆ.

೪.೮. ದಕ್ಷಿಣ ಭಾರತದಲ್ಲಿ ನಾಗ ಪರಿಕಲ್ಪನೆ: ನಾಗ-ಸುಬ್ರಹ್ಮಣ್ಯ

ನಾಗ ಮತ್ತು ಸುಬ್ರಹ್ಮಣ್ಯರನ್ನು ಏಕತಾಭಾವದಿಂದ ಆರಾಧಿಸುವ ಸಂಪ್ರದಾಯ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದೆ. ಕೇರಳ ಮತ್ತು ಕರಾವಳಿ ಕರ್ನಾಟಕದ ಸುಬ್ರಹ್ಮಣ್ಯ ದೇವಾಲಯಗಳಲ್ಲಿ ನಾಗನಿಗೆ ಸಲ್ಲಿಸುವ ಸೇವೆಗಳನ್ನು ಸುಬ್ರಹ್ಮಣ್ಯನಿಗೆ ಸಲ್ಲಿಸುತ್ತಿರುವುದು ವ್ಯಕ್ತವಾಗುತ್ತದೆ. ನಾಗಾರಧನೆ ನಡೆಯುವಲ್ಲಿ ಸುಬ್ರಹ್ಮಣ್ಯ ಬೇರೆ ಅಲ್ಲ, ವಾಸುಕಿ ಬೇರೆ ಅಲ್ಲ ಎಂಬಂತೆ ಪೂಜಾದಿಗಳನ್ನು ಸಲ್ಲಿಸಲಾಗುತ್ತದೆ 'ನಾಗ ಪಂಚಮಿ' ದಿನದಂದು ಸುಬ್ರಹ್ಮಣ್ಯ ದೇವಾಲಯದಲ್ಲೂ ವಿಶೇಷ ಆರಾಧನೆಯನ್ನು ನಡೆಸಲಾಗುವುದು. ಸುಬ್ರಹ್ಮಣ್ಯ ಷಷ್ಠಿಯಂದು ನಾಗಾಲಯಗಳಲ್ಲೂ ವಿಶೇಷ ಆರಾಧನೆಯನ್ನು ನಡೆಸಲಾಸುವುದು. ಇದರ ಹಿಂದಿರುವ ಔಚಿತ್ಯವನ್ನು ತಿಳಿಯಬೇಕಾಗಿದೆ.

ಆರಾಧನಾ ಪ್ರಸ್ತಾನದಲ್ಲಿ ಸುಬ್ರಹ್ಮಣ್ಯನಿಗೆ ವಿಶಿಷ್ಟವಾದ ಸ್ಥಾನವಿದೆ. ಅವನಿಗೆ ಸ್ಕಂದ, ಕುಮಾರ, ಮಹಾಸೇನ, ಷಣ್ಮುಖ, ಶಿಖಿವಾಹನ, ಕಾರ್ತಿಕೇಯ, ಗುಹಃ, ಸೇನಾನೀ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ. ಸುಬ್ರಹ್ಮಣ್ಯನ ಕುರಿತಾದ ವಿವರಣೆಗಳು ಪುರಾಣಗಳಲ್ಲಿ ದೊರೆಯುತ್ತವೆ. 'ಸ್ಕಂದ ಪುರಾಣ'ವು ಸುಬ್ರಹ್ಮಣ್ಯನ ವರ್ಣನೆಗಾಗಿಯೇ ನಿರ್ಮಾಣವಾದ ಬೃಹತ್‌ಗ್ರಂಥ. ಇದು ಪುರಾಣಗಳಲ್ಲೇ ಅತ್ಯಂತ ವಿಸ್ತಾರವಾದುದು ಎಂಬ ಅಭಿಪ್ರಾಯವಿದೆ. ಇದರಲ್ಲಿ ಸುಬ್ರಹ್ಮಣ್ಯನ ಜನನದ ಕಾರಣ ಅವನು ಹುಟ್ಟಿದ ವಿಚಿತ್ರ ಸನ್ನಿವೇಶ, ಜನ್ಮದ

ವಿಶಿಷ್ಟಕ್ರಮ, ಅದ್ಭುತ ಬಾಲಲೀಲೆಗಳು, ಕುಮಾರನಾಗಿರುವಾಗ ಪ್ರದರ್ಶಿಸಿದ ಪರಾಕ್ರಮ, ಪವಾಡಗಳು, ದೇವ ಸೈನ್ಯದ ಅಧಿಪತಿಯಾಗಿ ತೋರಿದ ಶೌರ್ಯ ಸಾಹಸಗಳು, ತಾರಕಾಸುರ ಸಂಹಾರ, ದೇವ ಸಮೂಹದಲ್ಲಿ ಅವನಿಗೆ ದೊರೆತ ಅಗ್ರ ಪೀಠ, ಇತರ ದೇವತೆಗಳಿಗಿಂತ ಅವನಲ್ಲಿರುವ ಹೆಚ್ಚಿನ ಮಹತ್ವ ಮತ್ತು ವಿಶೇಷಗಳು, ಮೊದಲಾದವುಗಳ ಬಗ್ಗೆ ವಿಶಾಲವಾದ ವರ್ಣನೆಯಿದೆ. ಸ್ಕಂದ ಪುರಾಣದ ಕಥೆಯನ್ನೇ ಪ್ರಧಾನವಾಗಿ ಸ್ವೀಕರಿಸಿ ಮಹಾಕವಿಯಾದ ಕಾಳಿದಾಸನು ಸುಬ್ರಹ್ಮಣ್ಯ ಕುರಿತು 'ಕುಮಾರ ಸಂಭವ' ಎಂಬ ವಿಸ್ತಾರವಾದ ಮಹಾಕಾವ್ಯವನ್ನು ರಚಿಸಿರುವುದು ಉಲ್ಲೇಖನೀಯ.

ಸುಬ್ರಹ್ಮಣ್ಯನನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಈ ಹೆಸರುಗಳ ಹಿಂದಿರುವ ಹಿನ್ನೆಲೆಯನ್ನು ತಿಳಿಯಬೇಕಾಗಿದೆ. ಈ ಎಲ್ಲ ಹೆಸರುಗಳು ಅವನ ಜನ್ಮ ವಿಶೇಷದಿಂದಲೇ ಅನ್ವರ್ಥಕವಾಗಿ ಸೇರಿಕೊಂಡವುಗಳು ''ಕ್ರಿಸ್ತಪೂರ್ವ ಐದನೆಯ ಶತಮಾನದಿಂದ ಹಿಡಿದು ಎಲ್ಲಾ ಗೃಹ್ಯ ಸೂತ್ರಗಳಲ್ಲಿ ಉಲ್ಲೇಖಿಸಲ್ಪಡುವ ಒಬ್ಬ ಪ್ರಮುಖ ದೇವತೆ ಸ್ಕಂದ, ಗುಪ್ತರು ಯುದ್ಧಕ್ಕೆ ಸಾಗುವಾಗ ಈ ಸ್ಕಂದ ಸೇನಾನಿಯ ಮೂರ್ತಿಯನ್ನು ರಣರಂಗದಲ್ಲಿ ಮುಂದಿಟ್ಟುಕೊಂಡು ಮುನ್ನುಗ್ಗುತ್ತಿದ್ದರು. ವಾಕಾಟಕರು ಈ ಸ್ಕಂದನ ಆರಾಧಕರಾಗಿದ್ದರು. ಕ್ರಿಸ್ತ ಪೂರ್ವ ಕಾಲದ ಯೌಧೇಯರಿಗೆ ಸ್ಕಂದನೇ ಪ್ರಧಾನ ದೇವತೆ. ಕ್ರಿಸ್ತಪೂರ್ವದ ಮೌರ್ಯರ ಕಾಲದಲ್ಲಿ ಕೆಲವು ವಿಗ್ರಹಗಳನ್ನು ಮಾಡಿ ಪೂಜಿಸುತ್ತಿದ್ದುದರ ಬಗ್ಗೆ ಪತಂಜಲಿಯ ಉಲ್ಲೇಖವಿದೆ. ಶಿವ-ಸ್ಕಂದ, ವಿಶಾಖರ ವಿಗ್ರಹಗಳಿವು''[೨೫] ಎಂದು ಸ್ಕಂದಾರಾಧನೆಯ ಕುರಿತು ವಿದ್ವಾಂಸರು ಉಲ್ಲೇಖಿಸಿರುವುದು ಕಂಡುಬರುತ್ತದೆ. ಇವರ ಅಭಿಪ್ರಾಯದ ಪ್ರಕಾರ ಕ್ರಿಸ್ತಪೂರ್ವದಿಂದಲೂ ಸ್ಕಂದಾರಾಧನೆ ರೂಢಿಯಲ್ಲಿದ್ದುದು ವೇದ್ಯವಾಗುತ್ತದೆ. ಸುಬ್ರಹ್ಮಣ್ಯ ಅಥವಾ ಸ್ಕಂದನ ಕುರಿತಾಗಿ ಆರಾಧನಾ ಸಂದರ್ಭದಲ್ಲಿ ಉಚ್ಚರಿಸುವ ಶ್ಲೋಕ ಮಂತ್ರವೊಂದು ಈ ರೀತಿ ಇದೆ.

'ಷಡಾನನಂ ಕುಂಕುಮ ರಕ್ತ ವರ್ಣಂ

ಮಹಾಮತಿಂ ದಿವ್ಯ ಮಯೂರ ವಾಹನಂ

ರುದ್ರಸ್ಯ ಸೂನುಂ ಸುರ ಯೂಥ ನಾಥಂ

ಗುಹಂ ಸದಾ ಶರಣಮಹಂ ಪ್ರಪದ್ಯೇ'-ಎಂದು,

'ಆರು ಮುಖ ವುಳ್ಳವನೂ ಕುಂಕುಮದಂತೆ ರಕ್ತ ಬಣ್ಣ ಹೊಂದಿರುವವನೂ, ಜ್ಞಾನಿಯೂ, ದಿವ್ಯವಾದ ನವಿಲನ್ನು ವಾಹನವಾಗಿ ಉಳ್ಳವನೂ, ಶಿವನ ಪುತ್ರನೂ, ದೇವತೆಗಳ ಸಮೂಹಕ್ಕೆ ಒಡೆಯನೂ ಆದ ಗುಹನಿಗೆ ಸದಾ ಶರಣಾಗಿದ್ದೇನೆ' ಎಂಬುದಾಗಿ ಈ ಮಂತ್ರವನ್ನು ಸುಬ್ರಹ್ಮಣ್ಯನ ಪೂಜಾ ಸಂದರ್ಭದಲ್ಲಿ ಉಚ್ಚರಿಸುತ್ತಿರುವುದು ಕಂಡು ಬರುತ್ತದೆ.

ಸುಬ್ರಹ್ಮಣ್ಯನನ್ನು ವಿವಿಧ ಹೆಸರುಗಳ ಹಿನ್ನೆಲೆಯಲ್ಲಿ ಆರಾಧಿಸುವುದು ಕಂಡುಬಂದಿದೆ. ಈ ಎಲ್ಲ ಹೆಸರುಗಳು ಅವನಿಗೆ ಅನ್ವರ್ಥಕವಾಗಿ ಸೇರಿಕೊಂಡವುಗಳು ಎಂದು ಭಾವಿಸಬೇಕಾಗಿದೆ. ''ತಾರಕಾಸುರನ್ನು ವಧಿಸಲೆಂದೇ ಎಲ್ಲ ದೇವತೆಗಳ ಸೇನಾನಿಯಾಗಿ ದೇವತೆಗಳಿಗೆ ಜಯವನ್ನು ತಂದುಕೊಟ್ಟು, ಸಾವಿರಗಟ್ಟಲೆ ವರ್ಷಗಳ ದೀರ್ಘ ಸಂಕಷ್ಟದಿಂದ

ಪಾರುಮಾಡಿಕೊಟ್ಟ ಕುಮಾರನಾದುದರಿಂದ ಆತ 'ಕುಮಾರ', 'ದೇವ ಸೇನಾನಿ' ಆರು ಮಂದಿ ಕೃತ್ತಿಕೆಯರ ಮೊಲೆ ಹಾಲನ್ನು ಏಕಕಾಲದಲ್ಲಿ ಆರು ಮುಖಗಳಿಂದ ಹೀರಿದವನಾದುದರಿಂದ 'ಷಣ್ಮುಖ', ಅರ್ಮುಗ, ಕಾರ್ತಿಕೇಯ, ಸಪ್ತರ್ಷಿಗಳ ಪತ್ನಿಯರಲ್ಲಿ ಅರುಂಧತಿಯೊಬ್ಬಳ ಹೊರತು ಉಳಿದ ಆರು ಮಂದಿ ಋಷಿ ಪತ್ನಿಯರೂ ಗಂಗೆಯ ಸ್ನಾನಕ್ಕಾಗಿ ಬಂದವರು. ಅಗ್ನಿಯ ಒಡಲಲ್ಲಿ ಸೇರಿಕೊಂಡಿದ್ದ ಶಿವನ ವೀರ್ಯವನ್ನು ಧರಿಸಿ ಗರ್ಭಿಣಿಯರಾಗಿ ಹಿಮಾಲಯಕ್ಕೆ ಹೋಗಿ ಗರ್ಭಪಾತ ಮಾಡಿಸಿಕೊಂಡ ಕಾರಣ ಈತನು ಬ್ರಹ್ಮ-ಕ್ಷತ್ರಿಯ ಕುಮಾರ-ಸುಬ್ರಹ್ಮಣ್ಯನೂ ಹೌದು. ಕ್ಷತ್ರಿಯನಾದ ವಿಶ್ವಾಮಿತ್ರನನ್ನು ಬ್ರಹ್ಮರ್ಷಿಯನ್ನಾಗಿ ಮಾಡಿ ಆತನಿಂದ ತನ್ನ ಜಾತ ಕರ್ಮವೇ ಇತ್ಯಾದಿ ಸಂಸ್ಕಾರಗಳನ್ನು ಮಾಡಿಸಿಕೊಂಡ ಸುಬ್ರಹ್ಮಣ್ಯ. ಹಾಗಾಗಿ ಸುಬ್ರಹ್ಮಣ್ಯನಂಥ ಬ್ರಹ್ಮ ಕ್ಷತ್ರಿಯರಿಗೆಲ್ಲ ಆರಾಧ್ಯನಾದ ಸ್ಕಂದ ಸುಬ್ರಹ್ಮಣ್ಯ''[10] ಎಂದು ಸುಬ್ರಹ್ಮಣ್ಯನ ವಿವಿಧ ಅನ್ವರ್ಥನಾಮಗಳ ಹಿನ್ನೆಲೆಯನ್ನು ವಿಶ್ಲೇಷಿಸಿರುವುದು ಕಂಡುಬರುತ್ತದೆ. ಕರಾವಳಿ ಕರ್ನಾಟಕದ ವಿಶ್ವಾಮಿತ್ರ ಗೋತ್ರದ 'ಉಡುಪ' ಕುಲನಾಮಸ್ಥರಿಗೆ ಸ್ಕಂದನೇ ಕುಲದೈವ ಕಂದಾವರ ಇವರ ಮೂಲಸ್ಥಾವೆಂದೂ, ಇವರು ಇಲ್ಲಿಂದ ಹೋದಲ್ಲೆಲ್ಲ ಸ್ಕಂಧನನ್ನು ಕೊಂಡೊಯ್ದು ಸುಬ್ರಹ್ಮಣ್ಯ ದೇವಾಲಯವನ್ನು ನಿರ್ಮಿಸಿದ್ದಾರೆ ಎಂಬ ಪ್ರತೀತಿ ಇದೆ. ವಿಶ್ವಾಮಿತ್ರ ಗೊತ್ರದ ಬ್ರಾಹ್ಮಣರಿಗೂ ಸ್ಕಂದನಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿವುದನ್ನು ಕರಾವಳಿಯಲ್ಲಿ ಗಮನಿಸಬಹುದು.

ಸುಬ್ರಹ್ಮಣ್ಯವನ್ನು ತಮಿಳು ಸಂಸ್ಕೃತಿಯಲ್ಲಿ 'ಮುರುಗನ್' ಎಂದು ಆರಾಧಿಸಲಾಗುತ್ತದೆ. ಮೂಲತಃ ಆತ ಆದಿವಾಸಿಗಳ ದೈವವಾಗಿ ಇಲ್ಲಿ ಕಂಡುಬರುತ್ತಾನೆ. ಪರ್ವತ ಪ್ರಾಂತವಾದ 'ಕುಂಜಿಂಜಿ' ಪ್ರದೇಶದ ನಿವಾಸಿಗಳಾಗಿದ್ದ 'ಕುಱವರ್' ಬೇಟೆ ಸಂಸ್ಕೃತಿಯನ್ನೊಳಗೊಂಡಿರುವ ಒಂದು ಬಗೆಯ ಅರೆ ಒಲಸಿಗ ಸಮುದಾಯದವರು. ವೀರಾಧಿವೀರರಾಗಿದ್ದ ಅವರ ಹೆಣ್ಣು ಮಕ್ಕಳು ಪುರಾತನದಲ್ಲಿ ಮರದ ತೊಗಟೆಗಳ ಎಲೆಯುಡುಗೆಗಳನ್ನು ತೊಟ್ಟುಕೊಳ್ಳುತ್ತಿದ್ದರು. ''ಬೆಟ್ಟದ ದೇವತೆಯಾದ ಮುರುಗನ್ ಅವರ ಇಷ್ಟ ದೇವತೆಯಾಗಿದ್ದನು. ನಂತರದಲ್ಲಿ ಮುರುಗನ್ ವೇದೋತ್ತರ ಕಾಲದ ಪುರಾಣಗಳಲ್ಲಿ ಸ್ಥಾನ ಪಡೆದುಕೊಂಡಿರುವುದನ್ನು ನಾವು ಕಾಣುತ್ತೇವೆ. ಬೆಟ್ಟದ ದೇವತೆಯಾದ್ದರಿಂದ ಆತ ಸರ್ಪಗಳ (ನಾಗ) ಒಡನಾಡಿಯಾಗಿದ್ದನು. ಇಂದಿಗೂ ಕೆಲವೆಡೆಗಳಲ್ಲಿ ಮುರುಗನನ್ನು ನಾಗನ ರೂಪದಲ್ಲಿ ಆರಾಧಿಸಲಾಗುತ್ತದೆ. ಮುರುಗನನ್ನು 'ಸೇಯೋನ್' (ಕೆಂಪು ದೇವತೆ) ಎಂದು ಕರೆಯುತ್ತಿದ್ದರು. ಅವನು ಪ್ರೇಮದ ಪ್ರಥಮ ನೋಟದ ಪ್ರೇಮ ಅಧಿದೇವತೆಯಾಗಿದ್ದನು. ಬಟ್ಟೆಯ ಅವಿಷ್ಕಾರವಾಗುವ ತನಕ ಆತ ಬೆತ್ತಲೆ ದೇವತೆಯಾಗಿದ್ದನು ಮುರುಗನ್‌ಗೆ ಸಂಬಂಧಪಟ್ಟ ಆರಾಧನ ಕುಣಿತವನ್ನು 'ಮಜೆಯಾಡಲ್' ಅಥವಾ 'ವೇಲನಾಡಲ್' ಎಂದು ಕರೆಯಲಾಗುತ್ತಿತ್ತು. ಈ ಆರಾಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಪೂಜಾರಿಗಳನ್ನು ದೇವತೆಯಂತೆ 'ವೇಲನ್' ಎಂದು ಕರೆಯುತ್ತಿದ್ದರು ಈ ಎಲ್ಲಾ ಸಂದರ್ಭಗಳಲ್ಲೂ ಬೆಟ್ಟ ಪ್ರದೇಶದ ಆಯುಧವಾದ 'ಈಟಿ' (ವೇಲ್)ಯು ಪ್ರಮುಖ ಪಾತ್ರ ವಹಿಸುತ್ತಿತ್ತು. ಇದನ್ನು ಶಿಲಾಯುಗದಲ್ಲಿ ಕಲ್ಲಿನಿಂದಲೂ ಕಬ್ಬಿಣ ಯುಗದಲ್ಲಿ ಲೋಹ (ಕಬ್ಬಿಣ)ದಿಂದಲೂ ನಿರ್ಮಿಸಲಾಗುತ್ತಿತ್ತು. ಮುರುಗನ್ ಆರಾಧನೆಯ ಸಂದರ್ಭದಲ್ಲಿ ಅನ್ನ ಮತ್ತು ಮಾಂಸದಡುಗೆಯನ್ನು ನೈವೇದ್ಯವಾಗಿ ಅರ್ಪಿಸಲಾಗುತ್ತಿತ್ತು. ಇದರಿಂದ ದೇವತೆಯ ಮುನಿಸಿನಿಂದಾಗಿ ಬಂದ ಅನಿಷ್ಟ ಪರಂಪರೆಗಳೆಲ್ಲ ತೊಲಗುತ್ತವೆ ಎಂಬ ನಂಬಿಕೆ ಆ ಕಾಲದ ಜನರಲ್ಲಿತ್ತು. ಮುರುಗನಿಗೆ ಅನ್ನವನ್ನೂ, ಬಲಿಕೊಟ್ಟ

ಕೆಂಪು ಕುರಿಯ ಮಾಂಸವನ್ನು ಅರ್ಪಿಸಿದರೆ ಆತ ಪ್ರಸನ್ನ ನಾಗುತ್ತಾನೆ. ಕಷ್ಟಗಳನ್ನೆಲ್ಲ ಪರಿಹರಿಸುತ್ತಾನೆ ಎಂಬುದಾಗಿ ವೇಲನ್ (ಪೂಜಾರಿ) ಮೈಮೇಲೆ ಮುರುಗನ್ ದೈವ ಬಂದು ನುಡಿಸುತ್ತಿದ್ದ[೨೦]''

ಈ ಹಿನ್ನೆಲೆಯಲ್ಲಿ ಗಮನಿಸಿದರೆ ಸುಬ್ರಹ್ಮಣ್ಯನ ಕಲ್ಪನೆಯು ಸಂಪೂರ್ಣವಾಗಿ ಆದಿಮ ಸಂಸ್ಕೃತಿಯ ನೆಲೆಗೆ ಕೊಂಡೊಯ್ಯುತ್ತದೆ. ಆತ ಪ್ರಾರಂಭದಲ್ಲಿ ಆದಿವಾಸಿಗಳ ದೈವವಾಗಿದ್ದು ನಂತರದ ಶಿಷ್ಟ ಸಂಸ್ಕೃತಿಯ ಪ್ರವೇಶದೊಂದಿಗೆ ವೈದಿಕ ದೇವರಾಗಿ ಪರಿವರ್ತನೆ ಗೊಂಡಿರುವುದು ವ್ಯಕ್ತವಾಗುತ್ತದೆ. ದೇಶೀಯ ಹಿನ್ನೆಲೆಯಲ್ಲಿರುವ ಮುರುಗನ ಮೂಲವು ಆಂಧ್ರದಲ್ಲಿದೆ ಎಂಬ ಒಂದು ಅಭಿಪ್ರಾಯವಿದೆ. ''ಮುರುಗನ ಮೂಲವಿರುವುದು ಆಂಧ್ರಪ್ರದೇಶದ ಒಡ್ಡ ಜನಾಂಗದವರ ವೇಲನ್ ಎನ್ನುವ ದೇವತೆಯಲ್ಲಿ. ಒಡ್ಡರು ಬಂಡೆಗಳ ಮೇಲೆ ಕಲ್ಲು ಕಡಿಯುವ ಕೆಲಸದಲ್ಲಿ ನಿರತರಾಗಿರುವಾಗ ಅವರನ್ನು ಸಂಭಾವ್ಯ ಸರ್ಪಭಯದಿಂದ ರಕ್ಷಿಸುವ ದೇವತೆಯೇ ವೇಲನ್, ಅಥವಾ ವೇಲಾಯುಧನ್, ಈತನು ಕಾಮರೂಪಿ. ಕೈಯಲ್ಲಿ ಹಾವನ್ನು ಓಡಿಸಲು ಬೆತ್ತವನ್ನು ಹಿಡಿದವನು, ಸಹಜವಾಗಿ ಬಾಲಕನಿಗೆ ಮಯೂರದ ಕಡೆಗೇ ಆಕರ್ಷಣೆ, ಇದೇ ವೇಲನ್ ಕ್ರಮೇಣ ಮುರುಗನಾಗುತ್ತಾನೆ.[೨೧]'' ಎಂದು ಮುರುಗನ ಮೂಲದ ಕುರಿತು ವಿಶ್ಲೇಷಿಸಲಾಗಿದೆ.

ಪ್ರಾದೇಶಿಕವಾಗಿರುವ ಈ ಭಿನ್ನತೆಗಳನ್ನು ಗಮನಿಸಿದರೆ ಮುರುಗನ್ ಪುರಾಣದ ಸ್ಕಂದನಾಗುತ್ತಾನೆ. ಈ ರೀತಿ ಸಂಸ್ಕೃತಾನುಸರಣದ ಪ್ರಕ್ರಿಯೆಗೆ ಒಳಗಾದ ಜನಪದ ಸಂಸ್ಕೃತಿಯ ವೇಲನ್ ಸುಬ್ರಹ್ಮಣ್ಯನಾಗುತ್ತಾನೆ. ಹೀಗೆ ಪ್ರಾದೇಶಿಕ ನೆಲೆಯಲ್ಲೂ ಸುಬ್ರಹ್ಮಣ್ಯನು ವ್ಯತ್ಯಸ್ಥನಾಗಿರುವುದು ಕಂಡು ಬರುತ್ತದೆ. ಸ್ಕಂದ ಕುಮಾರನು ಸುಬ್ರಹ್ಮಣ್ಯನಾಗಿ ಪ್ರಸಿದ್ಧನಾಗುವುದು ಸ್ಕಂದ ಪುರಾಣದ ಮೂಲಕ. ಸಾಮಾನ್ಯವಾಗಿ ಸ್ಕಂದ ಅಥವಾ ಕುಮಾರನನ್ನು ಶೂಲ ಪಾಣಿಯಾಗಿ, ಮಯೂರವಾಹನನಾಗಿ ವಿಗ್ರಹ ರೂಪದಲ್ಲಿ ವಿಹರಿಸಲಾಗುತ್ತದೆ. ಆದರೆ ಪಶ್ಚಿಮ ಕರಾವಳಿಯ ಈ ಭೂಪ್ರದೇಶಗಳಲ್ಲಿ ಆರಾಧನೆ ನಡೆಯುವ ಸುಬ್ರಹ್ಮಣ್ಯನ ಜತೆಗೆ ನಾಗನ ಕಲ್ಪನೆಯೂ ಸೇರಿಕೊಂಡಿದೆ. ಇದು ಹೇಗೆ ಪ್ರಚಲಿತಕ್ಕೆ ಬಂತೆನ್ನುವುದನ್ನು ಗಮನಿಸಬೇಕು. ಇದು ಕಾಲಾಂತರದಲ್ಲಿ ವೈದಿಕ ಸಂಸ್ಕೃತಿಯಿಂದ ಆಗಿರುವ ಬದಲಾವಣೆಯೇ ಹೊರತು ಬೇರೇನು ಅಲ್ಲ. ಇದಕ್ಕೆ ಸಂಬಂಧಿಸಿದ ಪುರಾಣ ಕಥೆಯೊಂದು ಪ್ರಚಲಿತದಲ್ಲಿದೆ. ''ಸುಬ್ರಹ್ಮಣ್ಯನು ಒಂದು ದಿನ ಬ್ರಹ್ಮದೇವರ ಬಳಿಹೋಗಿ ಪ್ರಣವ ಮಂತ್ರದ ಅರ್ಥ ಕೇಳಿದನಂತೆ, ಬ್ರಹ್ಮದೇವರಿಗೆ ಇದಕ್ಕೆ ಸರಿಯಾದ ವಿವರಣೆ ಕೊಡಲಾಗಲಿಲ್ಲ. ಕೋಪಗೊಂಡ ಸುಬ್ರಹ್ಮಣ್ಯನು ಬ್ರಹ್ಮನನ್ನು ಕೋಣೆಯೊಳಗೆ ಕೂಡಿ ಹಾಕಿ ಬಾಗಿಲು ಭದ್ರಪಡಿಸಿದನಂತೆ, ತಾನೇ ಸೃಷ್ಟಿ ಕಾರ್ಯದಲ್ಲಿ ತೊಡಗಿದನಂತೆ, ಕೊನೆಗೆ ಈಶ್ವರನೇ ಬ್ರಹ್ಮನನ್ನು ಉಪಾಯದಿಂದ ಮುಕ್ತಗೊಳಿಸಿದನಂತೆ, ತಾನು ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟ ಸುಬ್ರಹ್ಮಣ್ಯನು ಸರ್ಪರೂಪವನ್ನು ತಾಳಿ ಪಶ್ಚಿಮ ಘಟ್ಟಗಳಲ್ಲಿ ಅಲೆಯುತ್ತಿದ್ದನಂತೆ. ಬಳಿಕ ಮಗನನ್ನು ಹುಡುಕುತ್ತಾ ಬಂದ ಪಾರ್ವತಿಯು ಸಹ್ಯಾದ್ರಿಯ ತಪ್ಪಲಲ್ಲಿ ಸರ್ಪರೂಪದ ಮಗನನ್ನು ಕಂಡಳು. ಅಷ್ಟರಲ್ಲಿ ಬ್ರಹ್ಮ ವಿಷ್ಣು ಮಹೇಶ್ವರಾದಿಗಳು ಅಲ್ಲಿಗೆ ಬಂದರು. ವಿಷ್ಣು ಸರ್ಪದ ಬೆನ್ನು ತಟ್ಟಿದಾಗ ಸುಬ್ರಹ್ಮಣ್ಯ ತನ್ನ ನಿಜರೂಪವನ್ನು ಪಡೆದನಂತೆ. ಈ ಘಟನೆಯ ನೆನಪಿಗಾಗಿ ಪಶ್ಚಿಮ ಕರಾವಳಿಯಲ್ಲಿ ನಾಗ ಸುಬ್ರಹ್ಮಣ್ಯ ಎಂಬ ಅಭೇದ್ಯ ಕಲ್ಪನೆಯಲ್ಲಿ ಒಂದೇ ರೂಪದಿಂದ ಪೂಜೆಗೊಳ್ಳುತ್ತಾರೆ'' ಎಂಬುದು ಪ್ರಚಲಿತ ಐತಿಹ್ಯ.[೨೨] ಐತಿಹ್ಯಗಳು ಪುರಾಣಗಳು ಏನೇ ಇದ್ದರೂ ನಾಗ ಸುಬ್ರಹ್ಮಣ್ಯನಲ್ಲಿ, ಸುಬ್ರಹ್ಮಣ್ಯ

ನಾಗನೂ ಅಲ್ಲ. ಈ ತಪ್ಪು ಕಲ್ಪನೆಯಿಂದಾಗಿ ನಾಗನನ್ನು ಸುಬ್ರಾಯ ಎಂದು ಕರೆದು ಸುಬ್ರಹ್ಮಣ್ಯನಿರಬೇಕೆಂದು ಭಾವಿಸಲಾಗಿದೆ. ಮೇಲೆ ಸೂಚಿಸಿರುವ ಕತೆಯ ಹಿನ್ನೆಲೆಯಲ್ಲಿ ಸುಬ್ರಹ್ಮಣ್ಯನಿಗೆ ಆರಾಧನೆಯ ಸ್ವರೂಪವನ್ನಾಗಲಿ ಶಕ್ತಿವಿಶೇಷವನ್ನಾಗಲೀ ಪುರಾಣಗಳು ಸೂಚಿಸಿಲ್ಲ. ಇದರಿಂದ ಹಾವು ರೂಪದ ಸ್ಕಂದನಿಗೆ ಪೂಜಾ ನಿಯಮ ನಡೆದು ಬಂದಿರಲಿಕ್ಕಿಲ್ಲ. ಶಾಪಮುಕ್ತನಾದ ಸ್ಕಂದನಿಗೆ ಷಷ್ಠಿಯಂದು ವಿಶೇಷ ಪೂಜಾ ನಿಯಮ ಬಂದಿತು ಎಂದು ಭಾವಿಸಿಕೊಳ್ಳಬಹುದು. ಪುರಾಣದ ಹಿನ್ನೆಲೆಯನ್ನು ಅನುಸರಿಸಿಕೊಂಡು ಹೀಗೊಂದು ಅಭಿಪ್ರಾಯವಿದೆ ''ಇಂದ್ರ ಸಮನಾದ ಸುಬ್ರಹ್ಮಣ್ಯ ದೇವತೆಗಳ ಸೇನಾಪನಾದ. ಆಗ ಆತನಲ್ಲಿ ದೇವ ಯೋನಿಜಾತರೆಲ್ಲ ಆಸರೆ ಪಡೆದರು. ಅಲ್ಲಿ ನಾಗಗಳೂ ಸ್ಕಂದನ ಸ್ವಾಮಿತ್ವದಲ್ಲಿ ನೆಲೆನಿಂತವು ಎನ್ನುವ ಮಾತಿದೆ. ಇದರಿಂದ ನಾಗಗಳಿಗೆ ಸುಬ್ರಹ್ಮಣ್ಯ ವಿಶೇಷವಾದ ಆಸರೆ ನೀಡಿದ್ದರಿಂದ ಸುಬ್ರಹ್ಮಣ್ಯನಿರುವಲ್ಲಿ ನಾಗಗಳ ಸನ್ನಿಧಾನ ಬಂತು. ಆಸರೆಯನ್ನು ಸಂಕೇತಿಸುವಂತೆ ಸ್ಕಂದನ ಕೈಯಲ್ಲಿ ಮರಿನಾಗನನ್ನು ತಾಂತ್ರಿಕರು ಚಿತ್ರಿಸುವುದುಂಟು. ಸಂತಾನ ಪ್ರದ ಕುಮಾರನ ಆಯುಧವೂ ಹೌದಿದು ಎನ್ನುವುದನ್ನು ಮರೆಯಲಾಗದು. ಸುಬ್ರಹ್ಮಣ್ಯನಿರುವಲ್ಲಿ ಎಲ್ಲೆಡೆ ನಾಗಗಳು ಇರಲೇಬೇಕೆನ್ನುವ ವ್ಯಾಪ್ತಿ ಇಲ್ಲ. ಹಾಗೆಯೇ ನಾಗನಿರುವಲ್ಲೆಲ್ಲ ಸುಬ್ರಹ್ಮಣ್ಯನಿದ್ದಾನೆ ಎನ್ನಲೂ ಬಾರದು. ಸುಬ್ರಹ್ಮಣ್ಯನಿಗಿಂತ ಎಷ್ಟೋ ಕಡಿಮೆ ಯೋಗ್ಯತೆ ನಾಗಗಳಿಗಿರುವುದು, ನಾಗರಾಜನೆನಿಸಿದ ಶೇಷನಾಗನೊಬ್ಬ ಮಾತ್ರ ಸುಬ್ರಹ್ಮಣ್ಯನ ತಂದೆ ಶಿವನಿಗೆ ಸಮನಾಗಿ ಸುಬ್ರಹ್ಮಣ್ಯನಿಂದಲೂ ಆರಾಧ್ಯನಾಗಿರುವನು. ಉಳಿದ ನಾಗಗಳೆಲ್ಲವೂ ಸುಬ್ರಹ್ಮಣ್ಯನ ಆರಾಧಕರು[೩]'' ಎಂದು ನಾಗಗಳು ಮತ್ತು ಸುಬ್ರಹ್ಮಣ್ಯನ ನಡುವಿನ ಅಂತರವನ್ನು ಉಲ್ಲೇಖಿಸಲಾಗಿದೆ. ಜನಪದ ಹಿನ್ನೆಲೆಯನ್ನು ಗಮನಿಸಿದರೆ ಸರ್ಪವನ್ನು 'ಸುಬ್ಬರಾಯ'ನೆಂದು ಕರೆಯುವುದು ವಾಡಿಕೆ. ಈ ಹಿನ್ನೆಲೆಯಲ್ಲಿ ಸುಬ್ಬರಾಯ ನನ್ನೇ ಸುಬ್ರಹ್ಮಣ್ಯನೆಂದು ಕರೆದಿರಬಹುದು. ಅಭಿಪ್ರಾಯಗಳು ಏನೇ ಇದ್ದರೂ ನಾಗ ಮತ್ತು ಸುಬ್ರಹ್ಮಣ್ಯರನ್ನುಸಮೀಕರಿಸಿ ಆರಾಧಿಸುವ ಪರಂಪರೆ ಈಗ ಬೆಳೆದು ಬಂದಿದೆ. ಪಶ್ಚಿಮ ಕರಾವಳಿಯ ಪ್ರಸಿದ್ಧ ಸುಬ್ರಹ್ಮಣ್ಯ ದೇವಾಲಯಗಳಾದ ಕುಕ್ಕೆ ಸುಬ್ರಹ್ಮಣ್ಯ, ಪಯ್ಯನೂರು, ಪೆರಳಶ್ಶೆರಿ ಸುಬ್ರಹ್ಮಣ್ಯ, ಕಣ್ಣೂರು ಬಾಲ ಸುಬ್ರಹ್ಮಣ್ಯ, ಮೊದಲಾದ ದೇವಾಲಯಗಳಲ್ಲಿ ನಾಗನಿಗೆ ಸಲ್ಲಬಹುದಾದ ಸೇವೆಗಳೂ ಸುಬ್ರಹ್ಮಣ್ಯನಿಗೂ ಸಲ್ಲುತ್ತಿರುವುದು ಕಂಡುಬಂದಿದೆ.

೪.೯. ನಾಗಪಂಥ

ಪ್ರಾಚೀನ ಭಾರತೀಯ ಪರಂಪರೆಯಲ್ಲಿ ನಾಗಾರಾಧನೆಯನ್ನು ಗಮನಿಸುವಾಗ ಇದು ಪಾಂಥಿಕವಾಗಿ ಬೆಳೆದಿರುವುದು ಕಂಡುಬರುತ್ತದೆ. ವೈಷ್ಣವ, ಶೈವ, ಶಾಕ್ತ, ಗಾಣಪತ್ಯ ಕಾಳಮುಖ ಪಂಥಗಳಂತೆ ನಾಗ ಪಂಥವು ಪ್ರಚಲಿತದಲ್ಲಿದ್ದುದು ಕಂಡುಬರುತ್ತದೆ. ಭಾರತದಾದ್ಯಂತ ನಾಗಪಂಥವು ಪ್ರತ್ಯೇಕ ಪಂಥವಾಗಿ ಇದ್ದುದಕ್ಕೆ ಹಲವಾರು ನಿದರ್ಶನಗಳು ಕಂಡುಬರುತ್ತವೆ. ನಾಗರನ್ನು ಋಷಿ ಕಶ್ಯಪ ಹಾಗೂ ನಾಗಕನ್ಯೆ ಕದ್ರುವಿನ ಸಂತತಿಯೆಂದು ಗುರುತಿಸಬಹುದು. ಅವರು ಪಾತಾಳ ಲೋಕದಲ್ಲಿ ವಾಸಿಸುತ್ತಾರೆ. ಎನ್ನುವ ನಂಬಿಕೆಯಿದೆ. ನಾಗಕನ್ಯೆಯರು ಬಹಳ ಸುಂದರವೆಂದು ಜನಪದ ಕತೆ ಮತ್ತು ಪುರಾಣಗಳಲ್ಲಿ ವರ್ಣಿಸುವುದನ್ನು ಗಮನಿಸಬಹುದು. ಅವರನ್ನು ಇತರ ಮನುಷ್ಯರು ಮದುವೆಯಾಗುತ್ತಿದ್ದರೆಂದು ನಂಬಲಾಗಿದೆ. ಅರ್ಜುನ ನಾಗಕನ್ಯೆ ಉಲೂಪಿಯನ್ನು ವಿವಾಹವಾಗಿರುವುದನ್ನು ಗಮನಿಸಬಹುದು.

ವಿದ್ವಾಂಸರ ಅಭಿಪ್ರಾಯದ ಪ್ರಕಾರ ಈ ಪಂಥವು ಉತ್ತರ ಮತ್ತು ದಕ್ಷಿಣ ಭಾರತದ ಚರಿತ್ರೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸಿದೆ. ''ನರ್ಮದಾ ನದಿಯ ತೀರದ ಮೂಲ ನಿವಾಸಿಗಳು ನಾಗರು. ಆಂದ್ರದ ಕೆಲವು ಭಾಗಗಳನ್ನು ಆಳಿದ ಶಾತವಾಹನರಿಗೆ ನಾಗಗಳೊಂದಿಗೆ ಸಂಬಂಧ ವಿದ್ದಿತು. ಅವರ ಹೆಸರಿನಲ್ಲಿಯೂ ಇದು ಸ್ಪಷ್ಟವಾಗಿ ಕಂಡುಬುರುತ್ತದೆ. ಸ್ಕಂದನಾಗ, ನಾಗಾನ್ನಿಕ ಮೊದಲಾದ ನಾಗ ಸಂಬಂಧಿ ಹೆಸರುಗಳು ಶಾತವಾಹನರಲ್ಲಿವೆ. ವಾಕಟಕರ ದತ್ತಿಗಳು ವಿವಿಧ ನಾಗರಾಜರುಗಳ ಆಡಳಿತವನ್ನು ಉಲ್ಲೇಖಿಸುತ್ತವೆ. ಕಲ್ಹಣನ ರಾಜ ತರಂಗಿಣಿಯಲ್ಲಿ ನಾಗ ರಾಜರುಗಳು ಮತ್ತು ಜನರ ಉಲ್ಲೇಖವಿದೆ. ಬಹುತೇಕ ಐತಿಹ್ಯಗಳು ಹಾಗೂ ಸಂಪ್ರದಾಯಗಳು ನಾಗರನ್ನು ಮನುಷ್ಯರ ಒಂದು ವರ್ಗವೆಂದೇ ಉಲ್ಲೇಖಿಸಿವೆ. ನಾಗ ಎಂಬುದು ಇತರ ಪಂಥಗಳಂತೆ ಮಾನವರ ಒಂದು ಪಂಥ ಎಂಬುದು ಸ್ಪಷ್ಟವಾಗುತ್ತದೆ.''[೨]

ನಾಗಕನ್ಯೆ ನಾಗಲೋಕ ಇತ್ಯಾದಿ ಪದಗಳು ಈ ಮಾತನ್ನು ಸಮರ್ಥಿಸುತ್ತವೆ.

ಪುರಾಣಗಳಲ್ಲಿ ಮತ್ತು ಚರಿತ್ರೆಯ ಉಲ್ಲೇಖಗಳಲ್ಲಿ ನಾಗ ಎಂಬುದನ್ನು ಸರ್ಪ ಎಂದು ಕರೆದಿರುವುದನ್ನು ಗಮನಿಸಬಹುದು. ಆರ್ಯೇತರರಾದ ದಕ್ಷಿಣ ಭಾರತದ ಜನರನ್ನು ನಾಗರು ಎಂದು ಕರೆದಿರುವುದು ಉಲ್ಲೇಖನೀಯ. ''ಭಾರತದ ಪುರಾಣಗಳಲ್ಲಿ ಅರ್ಧ ಮನುಷ್ಯ ಅರ್ಧಸರ್ಪ ರೂಪದಲ್ಲಿರುವಂತೆ ನಾಗಗಳನ್ನು ವರ್ಣಿಸಲಾಗಿದೆ. ಅಷ್ಟೇ ಅಲ್ಲದೆ ಅವರನ್ನು ಬಲಿಷ್ಠ ಸುಂದರ ಮತ್ತು ಮಾತನಾಡುವ ಸಾಮರ್ಥ್ಯವುಳ್ಳವರಾಗಿ ಹೇಳಲಾಗಿದೆ. ಅವರಿಗೆ ದೈವಿಕ ಶಕ್ತಿಗಳಿರುವುದರಿಂದ ಅವರು ಮನುಷ್ಯರಿಗಿಂತ ಮೇಲ್ಮಟ್ಟದವರು ಎಂದು ಹೇಳಲಾಗಿದೆ. ಜೈನ ಮತ್ತು ಬೌದ್ಧ ಧರ್ಮಗಳು ನಾಗರಿಗೆ ಮಹತ್ವವನ್ನು ನೀಡಿವೆ. ೮ನೇ ತಿರ್ಥಂಕರನಾದ ಚಂದ್ರಪ್ರಭಾ ಹಾಗೂ ೯ನೆಯವನಾದ ಸುವಿಧನಾಥ ಇವರು ಕೇವಲ ಜ್ಞಾನವನ್ನು ನಾಗ ವೃಕ್ಷದ ಅಡಿಯಲ್ಲಿ ಪಡೆದರು. ಬೌದ್ಧ ಪುರಾಣಗಳ ಪ್ರಕಾರ ಸರ್ಪಗಳು ಬೌದ್ಧ ಕಾನೂನಿನ ಸಂರಕ್ಷರಾಗಿದ್ದಾರೆ.''[೩] ಎಂದು ನಾಗ ಪಂಥದ ಮಹತ್ವವನ್ನು ಉಲ್ಲೇಖಿಸಲಾಗಿದೆ. ಈ ಉಲ್ಲೇಖವನ್ನು ಗಮನಿಸಿದರೆ ನಾಗ ಮತಸ್ಥರು ಶಕ್ತಿಶಾಲಿಯಾದ ಪ್ರಭಾವಿ ರಾಜರಾಗಿರಬೇಕು.

ದಕ್ಷಿಣ ಭಾರತದಲ್ಲಿ ನಾಗರ ಪ್ರಾಬಲ್ಯವಿದ್ದ ನಾಗಪಟ್ಟಣಂ, ನಾಗರಕೋವಿಲ್, ನಾಗಮಲೈ ಮೊದಲಾದ ಪಟ್ಟಣಗಳು ಇದನ್ನು ಉಲ್ಲೇಖಿಸುತ್ತವೆ. ಕರ್ನಾಟಕದಲ್ಲಿಯೂ ನಾಗಮಂಗಲ, ನಾಗರಖಂಡ, ಮೊದಲಾದ ಪ್ರದೇಶಗಳು ನಾಗ ಪಂಥದವರು ಪ್ರಾಬಲ್ಯದಲ್ಲಿವುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ ಉಳಿದ ಧರ್ಮ ಪಂಥಗಳಂತೆ ನಾಗ ಪಂಥವು ವ್ಯಾಪಕವಾಗಿತ್ತೆನ್ನುವುದು ತಿಳಿದು ಬರುತ್ತದೆ.

ಟಿಪ್ಪಣಿಗಳು

೦೧. ಪುಂಡಲೀಕ ಶೆಣೈ ಬಸ್ತಿ, ೧೯೭೭, ಬ್ರಾಹ್ಮಿ ಲಿಪಿ ಮತ್ತು ಸಿಂಧೂ ಸಂಸ್ಕೃತಿ, ಪುಟ-೩೦೭

೦೨. ಹೇರಂಜೆ ಕೃಷ್ಣ ಭಟ್ಟ್, (ಸಂ) ಬನ್ನಂಜೆ ಗೋವಿಂದಾಚಾರ್ಯ, ೧೯೯೭, ಅನಂತಧಾರೆ, ಪುಟ-೨೫

೦೩. ಹೇರಂಜೆ ಕೃಷ್ಣ ಭಟ್ಟ್, (ಸಂ) ರಮಾನಾಥ ಆಚಾರ್ಯ, ೧೯೯೭, ಅನಂತಧಾರೆ, ಪುಟ-೧೨

೦೪. ಜ್ಞಾನಾನಂದ ಜಿ. ೨೦೦೦, ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರ, ಸಂ-೩ ಪುಟ-೭೧೪

೦೫. ಗೋಪಾಲ ಕೃಷ್ಣ ಆಚಾರ್ಯ, (ಸಂ) ಆಶ್ಲೇಷ ಬಲಿ, ಪುಟ-೫೬

೦೬. ಆಚಾರ್ಯ ದ್ವಿಜೇಂದ್ರನಾಥ ಶುಕ್ಲ, ೧೯೬೮, ಪ್ರತಿಮಾ ವಿಜ್ಞಾನ ಭಾಗ-೧

೦೭. ಜ್ಞಾನಾನಂದ ಜಿ. ೨೦೦೦, ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರ ಸಂ-೨ ಪುಟ-೪೪೭

೦೮. ಪುಂಡಲೀಕ ಶೆಣೈ, ಬಸ್ತಿ, ೧೯೭೭, ಪುಟ-೩೦೧

೦೯. ಮಲ್ಲೇಪುರಂ ಜಿ. ವೆಂಕಟೇಶ್ (ಸಂ) ಶಂಬಾ ಕೃತಿ ಸಂಪುಟ, ಸಂ-೪ ಪುಟ-೧೫೫

೧೦. ಅದೇ ಪುಟ-೧೬೬

೧೧. ಮಜುಮ್‌ದಾರ್, ೧೯೯೮, ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ-೪ ಭಾಗ-೨, ಪುಟ-೧೩೭

೧೨. ಅದೇ ಪುಟ-೧೩೮

೧೩. James Fergusan, (1873)- Reprint, 2004, Tree and SurPent-Worship - page-47

೧೪. ಅದೇ ಪುಟ-೪೮

೧೫. ಅದೇ ಪುಟ-೪೯

೧೬. ಆಚಾರ್ಯ ದ್ವಿಜೇಂದ್ರನಾಥ ಶುಕ್ಲ, ೧೯೬೮, ಪ್ರತಿಮಾಲಕ್ಷಣ, ಭಾಗ-೨

೧೭. ರಾಜಗೋಪಾಲ ಕ.ವೆಂ. ೧೯೯೭, ಬೌದ್ಧ ಮತದಲ್ಲಿ ಯಕ್ಷಕಲೆ, ಪುಟ-೨

೧೮. ಶ್ರೀಪತಿ ತಂತ್ರಿ. ಪಿ. ಸ್ಕಂದ ಸುಬ್ರಹ್ಮಣ್ಯನೇ ನಾಗ ಸುಬ್ರಹ್ಮಣ್ಯನೇ, ತರಂಗ, ಪುಟ-೩೩

೧೯. ಅದೇ ಪುಟ-೩೩

೨೦. ಸುಬ್ಬಣ್ಣ ರೈ. ಎ. ೨೦೦೪, ದ್ರಾವಿಡ ಸಂಸ್ಕೃತಿ, ಪುಟ-೧೦

೨೧. ಶ್ರೀಪತಿ ತಂತ್ರಿ, ಪೂರ್ವೋಕ್ತ ಪುಟ-೩೪

೨೨. ಸುಬ್ಬಣ್ಣ ರೈ. ಎ. (ಸಂ) ಡಾ, ಮೋಹನ್ ಕುಂಟಾರ್, ೨೦೦೫, ದ್ರಾವಿಡ ಅಧ್ಯಯನ, ಸಂ-೪ ಸಂಚಿಕೆ-೧ ಪುಟ-೮೩

೨೩. ಗೋಪಾಲ ಕೃಷ್ಣ ಆಚಾರ್ಯ, ಆಶ್ಲೇಷ ಬಲಿ, ಪುಟ-೪೦

೨೪. Dravidian Encyclopaedia, 1993, Vol-II, People and Cultare.

೨೫. Dravidian Encyclopaedia, Vol-I, 1990

* * * * *

ಅಧ್ಯಾಯ - ೫

ಕೇರಳದ ನಾಗಾರಾಧನೆ: ಹಿನ್ನೆಲೆ ಮತ್ತು ಸ್ವರೂಪ

೫.೧ ಹಿನ್ನೆಲೆ

೫.೨ ಸರ್ಪಕಾವು

೫.೩ ವೈದಿಕ ಆಚರಣೆಗಳು

೫.೩.೧ ನೂರುಂ ಪಾಲುಂ

೫.೩.೨ ಸರ್ಪಬಲಿ

೫.೪ ನಾಗದೇವಾಲಯಗಳು ಮತ್ತು ಆಚರಣೆಗಳು.

೫.೪.೧ ಪಾಂಬು ಮೇಕಾಡ್ ಮನ

೫.೪.೨ ಮಣ್ಣಾರ ಶಾಲ

೫.೪.೩ ವೆಟ್ಟಿಕೋಡ್ ನಾಗರಾಜ ಸ್ವಾಮಿ ಕ್ಷೇತ್ರ.

೫.೪.೪ ನಾಗರ ಕೋವಿಲ್ ನಾಗರಾಜ ಕ್ಷೇತ್ರ.

೫.೪.೫ ಆಮೇಡ ಮಂಗಳಂ

೫.೫ ಜನಪದ ಆಚರಣೆಗಳು

೫.೫.೧ ಪುಳ್ಳುವರ ನಾಗಾರಾಧನೆ

೫.೫.೨ ಸರ್ಪಂತುಳ್ಳಲ್

೫.೫.೩ ಕುರುಂದಿನಿ ಪಾಟ್

೫.೫.೪ ನಾಗತೋಟ್ಟಂ

೫.೫.೫ ನಾಗತ್ತೆಯಂ

೫.೫.೬ ಬಾಕುಡರ ಸರ್ಪಕೋಲ

೫.೬. ಕೇರಳ: ನಾಗಾರಾಧನೆಯ ಜನಪದ ನಂಬಿಕೆಗಳು

ಪಶ್ಚಿಮ ಕರಾವಳಿಯ ಕೇರಳದ ಭೂ ಪ್ರದೇಶವು ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಷಯದಲ್ಲಿ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ. ಅದರಲ್ಲೂ ನಾಗಾರಾಧನೆಯ ಆಚರಣೆಯಲ್ಲಿ ಹಲವಾರು ವೈಶಿಷ್ಟ್ಯಪೂರ್ಣವಾದ ಪರಂಪರೆಗಳನ್ನು ಒಳಗೊಂಡಿದೆ. ಈ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನ ರೀತಿಯಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ. ಜನಾಂಗಿಕ ಹಿನ್ನೆಲೆಯಲ್ಲಿಯೂ ಅವುಗಳ ಸ್ವರೂಪಗಳು ಭಿನ್ನವಾಗಿರುವುದು ತಿಳಿದುಬರುತ್ತದೆ. ಪರಂಪರೆಯಿಂದ ನಡೆದು ಬಂದಿರುವ ಸಂಪ್ರದಾಯಗಳು ಇಂದಿಗೂ ತನ್ನ ಮೂಲ ಸತ್ವಗಳನ್ನು ಉಳಿಸಿಕೊಂಡಿವೆ. ಜನಪದ ಸಂಸ್ಕೃತಿ ಮತ್ತು ಶಿಷ್ಟ ಸಂಸ್ಕೃತಿಗಳೆರಡರಲ್ಲೂ ನಾಗಾರಾಧನೆಯು ಸಮ್ಮಿಳಿತಗೊಂಡಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಅಲ್ಲದೆ ಆರಾಧನೆಯ ಸ್ವರೂಪದಲ್ಲಿಯೂ ವೈವಿಧ್ಯತೆ ಇದೆ. 'ಸರ್ಪ' ಅಥವಾ 'ನಾಗ'ನನ್ನು ಕುಲದೇವತೆಯಾಗಿ ಆರಾಧಿಸಿಕೊಂಡು ಬಂದಿರುವ ಕೆಲವು ದಲಿತ ಕುಟುಂಬಗಳು ಇಲ್ಲಿವೆ. ಕೆಲವು ವೈದಿಕ ಕುಟುಂಬಗಳು ಕೇರಳದ ನಾಗಾಧನೆಯ ಮೇಲೆ ತಮ್ಮ ಹಿಡಿತ ಸಾಧಿಸಿಕೊಂಡಿದ್ದರೆ, ಹಿಂದುಳಿದ ಕೆಲವು ದಲಿತ ಜನಾಂಗಗಳು ತಮ್ಮ ಕುಲಕಸುಬಾಗಿ ಆರಾಧನೆಗೆ ಸಂಬಂಧಿಸಿದ ಆಚರಣೆಗಳಲ್ಲಿ ಭಾಗವಹಿಸುತ್ತಿರುವುದನ್ನು ಕಾಣಬಹುದು.

ಪ್ರಸ್ತುತ ಅಧ್ಯಾಯದಲ್ಲಿ ಈ ಎಲ್ಲ ವಿಷಯಗಳನ್ನು ವಿವರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೇರಳದ ನಾಗಾರಾಧನೆಯ ಸ್ವರೂಪ, ಐತಿಹ್ಯ, ನಾಗಕಾವುಗಳು, ನೂರುಂಪಾಲುಂ, ಸರ್ಪಬಲಿ, ನಾಗದೇವಾಲಯಗಳ ಕುರಿತು ವಿವರಿಸಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಮುಖ್ಯವೆನಿಸಿದ ಕೆಲವು ಪ್ರಕಾರಗಳನ್ನು ಬಳಸಿಕೊಳ್ಳಲಾಗಿದೆ. ಕೆಲವು ಪ್ರಸಿದ್ಧ ನಾಗದೇವಾಲಯಗಳು ಮತ್ತು ಜನಪದ ಆಚರಣೆಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಅಧ್ಯಾಯದ ಹೆಚ್ಚಿನ ಭಾಗವು ಕ್ಷೇತ್ರಾಧಾರಿತವಾಗಿದ್ದು, ಅಧ್ಯಯನದ ಸಂದರ್ಭಕ್ಕೆ ತಕ್ಕಂತೆ ಸೂಕ್ತ ಲಿಖಿತ ಆಧಾರಗಳನ್ನು ಒದಗಿಸಲಾಗಿದೆ.

೫.೧ ಹಿನ್ನೆಲೆ

ಕೇರಳದ ನಾಗಾರಾಧನೆಯ ಕುರಿತಾದ ಪ್ರಸಿದ್ಧ ಐತಿಹ್ಯಗಳು ಪ್ರಚಲಿತದಲ್ಲಿವೆ. ಇವು ಕೇರಳದ ಚರಿತ್ರೆಯಾಗಿಯೂ, ಪರಂಪರೆಯಾಗಿಯೂ ಸಂಬಂಧಪಡೆದುಕೊಂಡಿವೆ. ನಾಗಾರಾಧನೆಯೂ ಎಲ್ಲ ಪುರಾತನ ಸಂಸ್ಕೃತಿಗಳಲ್ಲಿ ಒಂದಲ್ಲ

ಒಂದು ರೀತಿಯಲ್ಲಿ ಕಂಡುಬಂದರೂ ಕೇರಳದಲ್ಲಿ ಇದಕ್ಕೆ ಅತಿ ಪುರಾತನವೂ, ಮಹತ್ವವೂ ಆದ ಸ್ಥಾನ ಲಭಿಸಿದೆ. ಇಲ್ಲಿಯ ಅತೀ ಹಳೆಯದಾದ ಮತಾನುಷ್ಠಾನವು 'ನಾಗಾರಾಧನೆ' ಎಂದು ಪರಿಗಣಿಸಲ್ಪಟ್ಟಿದೆ. ಈ ವಿಚಾರವು ಪ್ರಾದೇಶಿಕವಾಗಿ ಪ್ರಚಲಿತದಲ್ಲಿರುವ ಐತಿಹ್ಯಗಳಿಂದ ತಿಳಿದು ಬರುತ್ತದೆ.

ನಾಗಾರಾಧನೆಯ ಕುರಿತಾಗಿ ಪ್ರಚಲಿತದಲ್ಲಿರುವ ಐತಿಹ್ಯಗಳು ವಿಭಿನ್ನ ಪಠ್ಯಗಳನ್ನು ಒಳಗೊಂಡಿವೆ. ಈ ಐತಿಹ್ಯಗಳು ಪೌರಾಣಿಕ ಪುರುಷ ಪರುಶುರಾಮನೊಂದಿಗೆ ಸಂಬಂಧ ಕಲ್ಪಿಸುತ್ತವೆ. ಮತ್ತು ಸ್ಥಳೀಯ ಸಂಸ್ಕೃತಿಯ ಮೇಲೆ ಉಂಟಾದ ಆರ್ಯ ಸಂಸ್ಕೃತಿಯ ಪ್ರಭಾವವನ್ನು ಉಲ್ಲೇಖಿಸುತ್ತವೆ. ಕೇರಳೋತ್ಪತ್ತಿ, ಕೇರಳ ಮಹಾತ್ಮ್ಯಂ, ಸ್ಕಂದ ಪುರಾಣ ಮೊದಲಾದ ಗ್ರಥಗಳಲ್ಲಿರುವ ಐತಿಹ್ಯಗಳ ಪ್ರಕಾರ, ಕನ್ಯಾಕುಮಾರಿಯಿಂದ ಗೋಕರ್ಣದವರೆಗಿನ ಭೂಪ್ರದೇಶವನ್ನು ಪರಶುರಾಮನು ಸೃಷ್ಟಿಸಿದ ಹೊಸ ಭೂಮಿಯಲ್ಲಿ ಧರ್ಮಕಾರ್ಯಗಳನ್ನು ನಡೆಸುವುದಕ್ಕಾಗಿ ಪರಶುರಾಮನು ಉತ್ತರದಿಂದ ಬ್ರಾಹ್ಮಣರನ್ನು ಕರೆಸಿ ನೆಲೆಗೊಳಿಸುತ್ತಾನೆ. ಆದರೆ ಆ ಭೂಪ್ರದೇಶವು ವಾಸಕ್ಕೆ ಯೋಗ್ಯವಾಗಿರುವುದಿಲ್ಲ. ಕಾರಣ ಅಲ್ಲಿಯ ಕೆರೆ ಬಾವಿಗಳ ನೀರು ಉಪ್ಪಾಗಿದ್ದು ಕುಡಿಯಲು ಯೋಗ್ಯವಾಗಿರುವುದಿಲ್ಲ. ಎಲ್ಲೆಲ್ಲೂ ಹಾವುಗಳು ಸಂಚರಿಸುತ್ತಿರುತ್ತವೆ. ಈ ಹಾವುಗಳು ಅಲ್ಲಿ ವಾಸ್ತವ್ಯವಿರುವವರ ಮೇಲೆ ಧಾಳಿ ನಡೆಸುತ್ತಿರುತ್ತವೆ. ಹಾವುಗಳ ಉಪಟಳದಿಂದಾಗಿ ಅಲ್ಲಿಗೆ ಕರೆತಂದಿರುವ ಬ್ರಾಹ್ಮಣರು ಹೆದರಿ ತಿರುಗಿ ಓಡಿ ಹೋದರು. ಇದರಿಂದ ಚಿಂತಿತನಾದ ಪರಶುವಾಮನು ನಾಗರಾಜನಾದ 'ವಾಸುಕಿ'ಯನ್ನು ಕುರಿತು ಪ್ರಾರ್ಥಿಸುತ್ತಾನೆ. ಇದರಿಂದ ಸಂಪ್ರಿತನಾದ ವಾಸುಕಿಯು ಪರಶುರಾಮನಿಗೆ ಅಭಯವನ್ನು ನೀಡುವುದಲ್ಲದೆ, ಸರ್ಪಗಳನ್ನು ಪ್ರತಿಯೊಬ್ಬರು ಭಯ ಭಕ್ತಿಗಳಿಂದ ಪೂಜಿಸಬೇಕೆಂಬ ಸಲಹೆ ನೀಡುತ್ತಾನೆ. ನಂತರ ವಾಸುಕಿಯ ಪ್ರೇರಣೆಯಂತೆ ಪರಶುರಾಮನು ಹಿಂದಕ್ಕೆ ಹೋಗಿರುವ ಬ್ರಾಹ್ಮಣರನ್ನು ಮತ್ತೆ ಕರೆದುಕೊಂಡು ಬರುತ್ತಾನೆ. ಅವರ ವಾಸ್ತವ್ಯಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಅವರು ಅಲ್ಲೇ ಧಾರ್ಮಿಕ ಕ್ರಿಯೆಗಳನ್ನು ನಡೆಸಿಕೊಂಡಿರುವಂತೆ ಪ್ರೇರೇಪಿಸುತ್ತಾನೆ.

ಬಳಿಕ ನಾಗಗಳಿಗೆ ಪ್ರತ್ಯೇಕವಾದ ಬನಗಳನ್ನು ನಿರ್ಮಿಸಿ ಅಲ್ಲಿ ಅವುಗಳನ್ನು ಪೂಜಿಸಲಾಯಿತು. ಈ ಹಾವುಗಳು ಜನವಸತಿ ಪ್ರದೇಶಗಳನ್ನು ತೊರೆದು ಬನಗಳಲ್ಲಿ ವಾಸಿಸಲಾರಂಭಿಸಿದವು. ಕೆರೆ ಬಾವಿಗಳಲ್ಲಿಯ ನೀರು ತನ್ನ ಉಪ್ಪಿನಂಶವನ್ನು ಕಳೆದುಕೊಂಡು ಕುಡಿಯಲು ಯೋಗ್ಯವಾಯಿತು. ಹೀಗೆ ನಾಗಗಳು ಜನರಿಗೆ ವಾಸಿಸಲು ಭೂ ಪ್ರದೇಶವನ್ನು ಬಿಟ್ಟು ಕೊಟ್ಟದ್ದರಿಂದ ಕೃತಜ್ಞತಾ ಭಾವನೆಯಿಂದ ಭಯ ಭಕ್ತಿಯಿಂದ ನಾಗಾರಾಧನೆಯು ಪ್ರಚಲಿತಕ್ಕೆ ಬಂದಿತು. ಉತ್ತರದಿಂದ ಬಂದ ಬ್ರಾಹ್ಮಣರು ಪರಶುರಾಮನ ಅನುಜ್ಞೆಯಂತೆ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸುತ್ತ ಸ್ಥಿರವಾಗಿ ನಿಂತರು."[9] ಎಂಬ ಐತಿಹ್ಯ ಪ್ರಚಲಿತದಲ್ಲಿವೆ. ಈ ಐತಿಹ್ಯವು ಕೇರಳಕ್ಕೆ ವೈದಿಕ ಸಂಸ್ಕೃತಿಯ ಪ್ರವೇಶದ ಕುರಿತಾಗಿ ಬೆಳಕು ಚೆಲ್ಲುತ್ತದೆ.

ಕೇರಳದಲ್ಲಿ ನಾಗಾರಾಧನೆಯು ಪರಶುರಾಮನಿಂದ ಅಥವಾ ವೈದಿಕ ಸಂಸ್ಕೃತಿಯ ಪ್ರವೇಶದೊಂದಿಗೆ ಪ್ರಾರಂಭವಾಯಿತೇ ಅಥವಾ ಅದಕ್ಕೂ ಪೂರ್ವದಲ್ಲಿ ಅಲ್ಲಿಯ ಸ್ಥಳೀಯ ಸಂಸ್ಕೃತಿಯಲ್ಲಿ ಇತ್ತೇ ಎನ್ನುವುದು ಪ್ರಶ್ನಾರ್ಹ ವಿಷಯ. ಇದರ ಕುರಿತಾಗಿ ಹಲವಾರು ಚರ್ಚೆಗಳು ನಡೆದಿವೆ. ಒಂದು ರೀತಿಯಲ್ಲಿ ದ್ವಂದ್ವತೆಯೂ

ಕೂಡ ಇಲ್ಲಿ ಕಂಡುಬರುತ್ತದೆ. ಆರ್ಯ ಮತ್ತು ದ್ರಾವಿಡ ಪರಿಕಲ್ಪನೆಯ ಹಿನ್ನಲೆಯಲ್ಲಿ ಈ ವಿಚಾರವನ್ನು ಪರಿಶೀಲಿಸಬೇಕಾಗಿದೆ.

'ಆರ್ಯರು ದಕ್ಷಿಣಕ್ಕೆ ವಲಸೆ ಬರುವ ಸಂದರ್ಭದಲ್ಲಿ ಕೇರಳದಲ್ಲಿ ನಾಗಾರಾಧನೆಯು ತುಂಬ ಪ್ರಬಲವಾಗಿತ್ತು. ಆರ್ಯರು 'ನಾಗ'ನನ್ನು ಪೂಜಿಸುವ ದ್ರಾವಿಡರನ್ನು 'ನಾಗನ್ಮಾರ್' ಎಂದು ಕರೆಯುತ್ತಿದ್ದರು. ಇದೇ ನಾಗ ವಂಶದವರು ಮುಂದೆ 'ನಾಯನ್ಮಾರ್' (ನಾಯರ್) ಆದರೆಂದು ತಿಳಿದುಬರುತ್ತದೆ. ಹೀಗೆ ಸರ್ಪ ಪೂಜೆ ಮಾಡುವವರು ದ್ರಾವಿಡರಲ್ಲಿ ಪರಿಷ್ಕರಣೆಗೊಂಡ, ಸಂಸ್ಕಾರದಲ್ಲಿಯೂ ಎಲ್ಲ ವಿಚಾರದಲ್ಲಿಯೂ ಆರ್ಯರಿಗೆ ಸಮಾನವಾಗಿದ್ದ ಒಂದು 'ವರ್ಗದ'ವರು ಮುಂದೆ 'ಸರ್ಪ ಕಾವು' ಅಥವಾ ನಾಗಬನಗಳನ್ನು ಪ್ರಾರಂಭಿಸಿ ನಾಗ ಪೂಜನೆಯನ್ನು ಆಚರಣೆಗೆ ತಂದರು ಎಂದು ಭಾವಿಸಲಾಗಿದೆ.[೩]

ಉತ್ತರ ಮಲಬಾರನಲ್ಲಿ 'ಕೋಲಯನ್ಮಾರ್' ಎಂಬ ಜನಾಂಗವೊಂದು ಈಗಲೂ ಕಂಡುಬರುತ್ತಿದೆ. ಇವರನ್ನು 'ಮಣಿಯಾಣಿ' ಎಂದು ಕರೆಯಲಾಗುತ್ತದೆ. ನಾಯನ್ಮಾರ್ ಮತ್ತು ಕೋಲಯನ್ಮಾರ್ ಉತ್ತರ ಕೇರಳದಲ್ಲಿ ಕೆಲವು ಪ್ರಸಿದ್ಧ ನಾಗಾಲಯಗಳಲ್ಲಿ ಆರಾಧನಾ ಪ್ರಕ್ರಿಯೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಾರೆ. ಇವರಲ್ಲಿ ಕೋಲಯನ್ಮಾರರು ನಾಗ ಪೂಜಕರು ಎನ್ನುವುದಕ್ಕೆ ದೀರ್ಘವಾದ ಪರಂಪರೆಯಿದೆ. ಅವರಿಗೂ ನಾಗಾರಾಧನ ವಿಚಾರದಲ್ಲಿ ನಾಯನ್ಮಾರರಿಗಿರುವಷ್ಟೇ ಮಹತ್ವವಿದೆಯೆಂದು ಭಾವಿಸಬಹುದಾಗಿದೆ.[೪]

ಕೇರಳದಲ್ಲಿ 'ನಾಗ' ಎಂಬ ಪದಕ್ಕೆ ನಾಗನನ್ನು ಪೂಜಿಸುವ ಒಂದು ಪ್ರತ್ಯೇಕ ವರ್ಗವೆಂದು ತಿಳಿಯಲಾಗಿದೆ. ಸರ್ಪ ಆರಾಧಕರಾದ ಪ್ರಾಚೀನ ದ್ರಾವಿಡರೇ ನಾಗರು ಎಂದು ಅಭಿಪ್ರಾಯವಿದೆ. ಇವರನ್ನೇ ನಾಯರ್ ಎಂದು ವಿದ್ವಾಂಸರು ಗುರುತಿಸಿದ್ದಾರೆ. ನಾಯರ್ ಎಂಬ ಶಬ್ದವು ನಾಗ ಎಂಬ ಪದದಿಂದ ಬಂದಿದೆ ಎಂದು ಪರಿಗಣಿಸಲಾಗುತ್ತದೆ. ಈ ಹೆಸರು ಆರ್ಯರಿಂದ ಪ್ರಚಲಿತಕ್ಕೆ ಬಂದಿರಬೇಕು'[೫] ಎಂದು ವಿದ್ವಾಂಸರ ಅಭಿಮತ ಸ್ಥಳೀಯ ನಾಗಾರಾಧಕರಾದ ನಾಯರ್‌ಗಳು ಸರ್ಪಗಳಿಗೆ ವಾಸಮಾಡುವುದಕ್ಕೆ ಪ್ರತ್ಯೇಕ ಗುಡಿಗಳನ್ನು ನಿರ್ಮಿಸಿ ಹೂ, ಹಣ್ಣು, ಹಾಲು ಇತ್ಯಾದಿಗಳ ಮೂಲಕ ಕೆಲವು ಧಾರ್ಮಿಕ ಆಚರಣೆಗಳನ್ನು ಜಾರಿಗೆ ತಂದಿರಬೇಕು. ನಂತರದ ಕಾಲದಲ್ಲಿ 'ಆರ್ಯ' ಧರ್ಮದ ಪ್ರವೇಶದೊಂದಿಗೆ ಸರ್ಪಾರಾಧನೆಯ ಸ್ಥಳೀಯ ಪೂಜಾ ವಿಧಿಗಳಲ್ಲಿ ವ್ಯತ್ಯಾಸಗಳು ಉಂಟಾದವು ಎಂದು ಭಾವಿಸಿಕೊಳ್ಳಬಹುದು. ಪರಶುರಾಮನು ಕೇರಳದಲ್ಲಿ ವೈದಿಕ ಧರ್ಮವನ್ನು ಸ್ಥಾಪಿಸಿದ ಮೇಲೆ ದುರ್ಗಿ, ನಾಗ, ಭೂತ, ಇತ್ಯಾದಿಗಳನ್ನು ಸ್ಥಾಪಿಸಿದನೆಂದು ಪ್ರಚಲಿತ ನಂಬಿಕೆಗಳನ್ನು ಪರಿಗಣಿಸಿ ಭಾವಿಸಲಾಗಿದೆ.

ಮುಂದೆ ಬ್ರಾಹ್ಮಣರ ಪ್ರವೇಶದ ನಂತರ ಕೇರಳದಲ್ಲಿ 'ನಾಗಬಿಂಬ' ಮತ್ತು ವೈದಿಕ ರೀತಿಯ ಧಾರ್ಮಿಕ ಆಚರಣೆಗಳು ಪ್ರಾರಂಭವಾಯಿತೆಂದು ಭಾವಿಸಬಹುದು. ಅದಕ್ಕೂ ಪೂರ್ವದಲ್ಲಿ ಸ್ಥಳೀಯವಾದ 'ದ್ರಾವಿಡ ಶೈಲಿ'ಯ ಆಚರಣೆಗಳು ಬಳಕೆಯಲ್ಲಿದ್ದರಬೇಕು. 'ಹೊಸತಾಗಿ ಕೇರಳಕ್ಕೆ ಬಂದ ಬ್ರಾಹ್ಮರು ಸ್ಥಳೀಯರಾದ ನಾಯರ್‌ಗಳ ಸಂಪರ್ಕದೊಂದಿಗೆ ತಮ್ಮ ವಿಧಾನಗಳನ್ನು ಸೇರಿಸಿಕೊಂಡರು. ಹೀಗೆ ಬ್ರಾಹ್ಮಣರ ಆರಾಧನ ಕ್ರಮವು ನಾಯರ್‌ಗಳ ಸರ್ಪ ಗುಡಿಗಳಿಗೂ ಪ್ರವೇಶವಾಯಿತು.'[೬]

ಈಗ ಕೇರಳದಲ್ಲಿ ವೈದಿಕ ವಿಧಿ ವಿಧಾನಗಳಿಂದ ಆಚರಣೆಗೊಳಪಡುವ ನಾಗಾಲಯಗಳೊಂದಿಗೆ, ವೈದಿಕೇತರದಿಂದ ಪೂಜೆಗೊಳ್ಳಲ್ಪಡುವ ನಾಗಾಲಯಗಳನ್ನು ಕಾಣಬಹುದು. ಪರಿಪೂರ್ಣವಾಗಿ ವೈದಿಕೇತರ ರೀತಿಯಲ್ಲಿ ನಡೆಸಲ್ಪಡುವ ಜನಪದ ಆಚರಣೆಗಳನ್ನು ಕೂಡ ಕಾಣಬಹುದು. ಕೇರಳದ ಸಮಗ್ರವಾದ ನಾಗಾರಾಧನೆಯ ಆಚರಣೆಗಳನ್ನು ಗಮನಿಸುವಾಗ ಇಲ್ಲೆಲ್ಲ 'ಆರ್ಯ' ಮತ್ತು ದ್ರಾವಿಡ ಸಂಸ್ಕೃತಿಗಳ ಪಡಿಯಚ್ಚುಗಳು ಸ್ಪಷ್ಟವಾಗಿ ಕಂಡುಬರುತ್ತವೆ. ವೈದಿಕ ರೀತಿಗಳಿಂದ ಆಚರಿಸಲ್ಪಡುವ ಹೆಚ್ಚಿನೆಲ್ಲ ಕ್ಷೇತ್ರಗಳಲ್ಲೂ ನಾಗಾರಾಧಾನೆಯು 'ಶೈವ' ಸಂಪ್ರದಾಯದಂತೆ ನಡೆದು ಬರುತ್ತಿದೆ. ಈ ಎಲ್ಲ ವಿಚಾರಗಳಿಗೆ ಸಂಬಂಧಿಸಿದ ಪ್ರಾಮುಖ್ಯವೆನಿಸಿದ ಕೆಲವು ಆಚರಣೆಗಳನ್ನು ಮುಂದೆ ವಿಶ್ಲೇಷಿಸಲಾಗುವುದು.

೫:೨ ಸರ್ಪಕಾವು

ಸರ್ಪಗಳ ವಾಸಕ್ಕಾಗಿ ನಿರ್ಮಿಸಲಾದ ಪ್ರತ್ಯೇಕವಾದ ಆರಾಧನ ಸ್ಥಳವನ್ನು 'ಸರ್ಪಕಾವು' ಎಂದು ಕರೆಯಲಾಗುತ್ತದೆ. ಕೇರಳದ ಉತ್ತರಕ್ಕಿರುವ ತುಳುನಾಡಲ್ಲಿ ಈ ರೀತಿಯ ಸ್ಥಳವನ್ನು 'ನಾಗಬನ' ಎಂದು ಕರೆಯುತ್ತಾರೆ. ತಮಿಳುನಾಡಿನಲ್ಲಿ ಸರ್ಪಕಾವುಗಳನ್ನು 'ನಾಗ ಕಾಳು' ಎಂದು ಕರೆಯುತ್ತಾರೆ.[೬] ಕೇರಳದ ಪ್ರತಿಯೊಂದು ಹಿಂದೂ ಕುಟುಂಬವು ಪ್ರತ್ಯೇಕವಾದ ನಾಗ ಕಾವುಗಳನ್ನು ಒಳಗೊಂಡಿರುತ್ತದೆ. ನಾಗ ಕಾವುಗಳನ್ನು ಹೆಚ್ಚಾಗಿ ತಮ್ಮ ಜಮೀನಿನ 'ನೈರುತ್ಯ' ಭಾಗದಲ್ಲಿ ಸ್ಥಾಪಿಸಲಾಗುತ್ತದೆ. ನಾಗಾಲಯಗಳು ಹಿಂದುಗಳ ಮನೆ, ಕುಟುಂಬದ ಹಿರಿಯರ ಮನೆ ಅಥವಾ 'ತರವಾಡು ಮನೆ' ಮತ್ತು 'ಮೂಲಸ್ಥಾನಗಳಲ್ಲಿ' ಕುಟುಂಬಕ್ಕೊಂದರಂತೆ ಕಂಡುಬರುತ್ತದೆ. ಅಲ್ಲದೆ ಪ್ರತಿಯೊಂದು ದೇವಾಲಯಗಳಲ್ಲಿಯೂ ಪ್ರತ್ಯೇಕವಾದ ನಾಗಕಾವುಗಳನ್ನು ನೈರುತ್ಯ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತದೆ.

ಕುಟುಂಬಕ್ಕೆ ಸಂಬಂಧಿಸಿದ ಅಥವಾ ಮೂಲಸ್ಥಾನವೆನಿಸಿಕೊಂಡ ಸ್ಥಳಗಳ ಸರ್ಪಕಾವುಗಳನ್ನು ನದಿ, ಹಳ್ಳ ಅಥವಾ ತೊರೆಗಳ ಸಮೀಪ ಸ್ಥಾಪಿಸುತ್ತಾರೆ. ಬೇರೆ ಬೇರೆ ಜಾತಿಗಳಿಗೆ ಸಂಬಂಧಿಸಿದ ಪ್ರತ್ಯೇಕ ನಾಗಕಾವುಗಳನ್ನು ಇಲ್ಲಿ ಕಾಣಬಹುದು. ಪ್ರಮುಖವಾಗಿ ತೀಯರು ಪ್ರತ್ಯೇಕ ನಾಗ ಕಾವುಗನ್ನು ಮತ್ತು ಮೂಲಸ್ಥಾನಗಳನ್ನು ಒಳಗೊಂಡಿರುವುದು ತಿಳಿದು ಬಂದಿದೆ. ಸರ್ಪಕಾವುಗಳಲ್ಲಿ ನಡೆಯುವ ಆಚರಣೆಗಳು ಸಂಬಂಧಿಸಿದ ಧರ್ಮಕ್ಕೆ ಅನುಗುಣವಾಗಿ ನಡೆಯಲ್ಪಡುತ್ತವೆ. ಕೆಲವು ಕಾವುಗಳಲ್ಲಿ ವೈದಿಕ ರೀತಿಯಿಂದ ವಿಧಿಗಳು ನಡೆದರೆ ಕೆಲವು ಕಾವುಗಳು ವೈದಿಕೇತರ ರೀತಿಯಿಂದ ಆಚರಣೆಗೆ ಒಳಪಡುತ್ತವೆ.

ಸ್ವರೂಪ: ಸರ್ಪಕಾವುಗಳು ಅಥವಾ ನಾಗಬನಗಳು ವಿವಿಧ ರೀತಿಯ ವೃಕ್ಷಗಳಿಂದ ಆವರಿಸಲ್ಪಟ್ಟಿರುತ್ತವೆ. ಮುಖ್ಯವಾಗಿ ಪಾಲೆ, ಅಶ್ವತ್ಥ, ಚೈನೆ (ಈಚಲು) ಮೊದಲಾದ ವೃಕ್ಷಗಳೊಂದಿಗೆ ವಿವಿಧ ಜಾತಿಯ ಔಷಧೀಯ ವೃಕ್ಷಗಳಿದ್ದು ಈ ಪ್ರದೇಶವು ಪುಟ್ಟ ಅಭಯಾರಣ್ಯದಂತೆ ಕಂಡುಬರುತ್ತದೆ. ಇಲ್ಲಿ ಹೊರಗಿನ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸಲಾಗಿರುತ್ತದೆ. ಈರೀತಿಯ ವಿವಿಧ ಜಾತಿಯ ವೃಕ್ಷ ಸಂಕುಲಗಳಿಂದ ಬನವು ತುಂಬಿದ್ದು ಸುತ್ತಲೂ ಮನುಷ್ಯ ಮತ್ತು ಪ್ರಾಣಿಗಳಿಂದ ರಕ್ಷಿಸುವುದಕ್ಕಾಗಿ ಆವರವನ್ನು ನಿರ್ಮಿಸಲಾಗುತ್ತದೆ. ಇಲ್ಲಿರುವ ಪುರಾತನವಾದ ವಿವಿಧ ಜಾತಿಯ ವೃಕ್ಷ ಸಂಕುಲಗಳನ್ನು ಕಡಿಯುವುದನ್ನು ನಿರ್ಬಂಧಿಸಲಾಗುತ್ತದೆ. ಈ ಪ್ರದೇಶದಲ್ಲಿ ಹಾವುಗಳು

ನಿರ್ಭಯವಾಗಿ ಸಂಚರಿಸುತ್ತಿರಬೇಕು. ಮತ್ತು ಸಂತಾನ ಕ್ರಿಯೆ ಇತ್ಯಾದಿಗಳನ್ನು ನಡೆಸುತ್ತಿರಬೇಕು ಎಂಬ ಕಾರಣದಿಂದ ಈ ವ್ಯವಸ್ಥೆಯನ್ನು ಅಳವಡಿಸಿರುವುದನ್ನು ಇಲ್ಲಿ ಗಮನಿಸಬೇಕು. ಬನದ ನಡುವೆ ಸಣ್ಣ ಕಲ್ಲಿನ ಕಟ್ಟೆಯನ್ನು ಕಟ್ಟಿ ನಡುವೆ ನಾಗನ ಕಲ್ಲಿನ ಪ್ರತಿಮೆಯನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಕಟ್ಟೆಯ ನಡುವೆ ನಾಗ ಪ್ರತಿಮೆಯ ಹಿಂಭಾಗದಲ್ಲಿ 'ಚಿತ್ರ ಕೂಟಂ' ಎಂಬ ಶಿಲೆ ಕಲ್ಲುಗಳಿಂದ ನಿರ್ಮಿಸಿದ ಚಿಕ್ಕದಾದ ಗೋಪುರ ಕಂಡುಬರುತ್ತದೆ. ಗೋಪುರದ ಒಳಗಿನಿಂದ ಕೆಳಗಿರುವ ಭೂಮಿಗೆ ಸಂಪರ್ಕ ಕಲ್ಪಿಸುವ ಸರಳವಾದ ದ್ವಾರವನ್ನು ಅಳವಡಿಸಲಾಗಿರುತ್ತದೆ. ಈ ದ್ವಾರದ ಮೂಲಕ ಹಾವುಗಳು ಚಿತ್ರಕೂಟವನ್ನು ಪ್ರವೇಶಿಸಿ ಅಲ್ಲಿ ವಾಸ್ತವ್ಯ ನಡೆಸುತ್ತವೆ. ಅಥವಾ ಹಾವುಗಳ ಸಂಚಾರಕ್ಕೆ ಇದರಿಂದ ಅನುಕೂಲವಾಗುತ್ತದೆ ಎಂಬ ನಂಬಿಕೆಯಿದೆ. ಸರ್ಪಕಾವು ಅಥವಾ ನಾಗ ಬನಗಳು ನೂರಾರು ವರ್ಷಗಳಿಂದ ಕೇರಳದ ಜನತೆಯ ಪರಂಪರೆಯೊಂದಿಗೆ ಬೆಳೆದು ಬಂದಿವೆ. ಪ್ರಸ್ತುತ ಸಂದರ್ಭದಲ್ಲಿ ಮಿತಿ ಮೀರಿದ ಜನಸಂಖ್ಯಾ ಒತ್ತಡದಿಂದಾಗಿ ಕೆಲವು ನಾಗಬನಗಳನ್ನು ಸ್ಥಳಾಂತರಿಸುತ್ತಿರುವುದು ಕಂಡುಬಂದಿದೆ. ಇಲ್ಲಿಯ ನಾಗ ಪ್ರತಿಮೆಗಳನ್ನು ಸ್ಥಳೀಯ ನಾಗಾಲಯಗಳಿಗೆ ಹಸ್ತಾಂತರಿಸಿ ಅಲ್ಲಿಯೇ ಕಾಣಿಕೆ ಇತ್ಯಾದಿ ಸಲ್ಲಿಸುವ ಪರಂಪರೆ ಬೆಳೆದು ಬರುತ್ತಿದೆ. ಬನಗಳಲ್ಲಿ ಯಾವುದೇ ರೀತಿಯಲ್ಲಿ ಭೂಮಿಯನ್ನು ಹಾರೆಯಿಂದ ಕೀಳುವ ವೃಕ್ಷಗಳನ್ನು ಕಡಿಯುವ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ. ಇಲ್ಲಿ ಕುಟುಂಬ ಶ್ರೇಯೋಭಿವೃದ್ಧಿಗಾಗಿ ವಾರ್ಷಿಕ ಪೂಜೆ ನಡೆಯುತ್ತದೆ. ಅದನ್ನು 'ನೂರು ಪಾಲಂ' ಎನ್ನುತ್ತಾರೆ. ಮತ್ತು ಕೆಲವು ವಿಶೇಷ ಆಚರಣೆಗಳು ಕೂಡ ನಡೆಯುತ್ತವೆ. ಕೇರಳದ ನಾಗಾರಾಧನೆಯ ಪರಿಕಲ್ಪನೆಯಲ್ಲಿ ಅಷ್ಟನಾಗಗಳನ್ನು ಪೂಜಿಸಲಾಗುತ್ತದೆ. ಅವುಗಳನ್ನು ಪ್ರಧಾನವಾಗಿ ಅನಂತ, ವಾಸುಕಿ, ತಕ್ಷಕ, ಕಾರ್ಕೋಟಕ, ಸಂಕನ್, ಗುಳಿಕನ್, ಪದ್ಮನ್ ಮತ್ತು ಮಹಾಪದ್ಮನ್ ಎಂದು ಗುರುತಿಸಲಾಗಿದೆ. ಅನಂತ ಮತ್ತು ವಾಸುಕಿಗಳನ್ನು ಪ್ರಧಾನವಾಗಿ ಕೆಲವು ನಾಗದೇವಾಲಯಗಳಲ್ಲಿ ಪ್ರಧಾನ ದೇವತೆಯಾಗಿ ಪೂಜಿಸಲಾಗುತ್ತದೆ. ವೈಷ್ಣವ ಸಂಪ್ರದಾಯದಲ್ಲಿ 'ಅನಂತ'ನಿಗೆ ಹೆಚ್ಚಿನ ಪ್ರಾಧಾನ್ಯತೆ ಇದ್ದರೆ ಶೈವ ಸಂಪ್ರದಾಯದವರು ವಾಸುಕಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಾರೆ.[4] ಉಳಿದಂತೆ ಆರಾಧನ ಪರಿಕಲ್ಪನೆಯಲ್ಲಿ ನಾಗರಾಜಾವು, ಸರ್ಪಯಕ್ಷಿ, ನಾಗಕನ್ನಿಕಾ ಅಥವಾ ನಾಗಯಕ್ಷಿ ಮೊದಲಾದ ಪ್ರಧಾನ ನಾಗ ದೇವತೆಗಳಿದ್ದರೆ, ಕೆಲವು ಮೂಲಸ್ಥಾನಗಳಲ್ಲಿ ನಾಗದೇವತೆಗಳೊಂದಿಗೆ ಗಂಧರ್ವ, ಶಾಸ್ತ, ದುರ್ಗಿ ಮೊದಲಾದ ಶಕ್ತಿಗಳನ್ನು ಆರಾಧಿಸಲಾಗುತ್ತದೆ. ಈ ದೈವ ಸಂಕೀರ್ಣವು ತುಳುನಾಡಿನ ಶಕ್ತಿ ಸ್ಥಳವಾದ 'ಆಲಡೆ' ಗಳಿಗೆ ಸಮಾನವಾಗಿ ಕಂಡುಬರುತ್ತದೆ.

ಚಾತುರ್ವರ್ಣ ಮತ್ತು ನಾಗಕಲ್ಪನೆ.

ಕೇರಳದ ನಾಗಾರಾಧನೆಯ ಪರಿಕಲ್ಪನೆಯಲ್ಲಿ 'ಚತುರ್ವರ್ಣ'ದ ನಾಗಗಳ ಆರಾಧನ ಪರಂಪರೆಯು ಕಂಡುಬರುತ್ತದೆ. ನಾಗಗಳಲ್ಲಿಯೂ ಆರಾಧನೆಯ ಹಿನ್ನಲೆಯಲ್ಲಿ ಜಾತೀಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸರ್ಪಾರಾಧನೆಯಲ್ಲಿ ನಾಲ್ಕು ಜಾತಿಯ ಸರ್ಪಗಳಿವೆಯೆಂದು ತಿಳಿದು ಬಂದಿದೆ.[5] ಆಯಾ ಜಾತಿಗೆ ವರ್ಣಕ್ಕೆ ಸಂಬಂಧಿಸಿದ ಸರ್ಪಗಳಿಗೆ ಪ್ರತ್ಯೇಕ ಪೂಜಾವಿಧಿಗಳನ್ನು ಕಲ್ಪಿಸಲಾಗಿದೆ. ಬ್ರಾಹ್ಮಣ ನಾಗ, ಕ್ಷತ್ರಿಯನಾಗ, ವೈಶ್ಯನಾಗ ಮತ್ತು ಶೂದ್ರ ನಾಗ ಎನ್ನುವುದು ಪ್ರಚಲಿತದಲ್ಲಿರುವ ವರ್ಣ ವ್ಯವಸ್ಥೆ. ವರ್ಣಗಳಿಗೆ ಅನುಸಾರವಾಗಿ ನಾಗಗಳನ್ನು ಮತ್ತು ಪೂಜಾವಿಧಿ

ವಿಧಾನಗಳನ್ನು ವ್ಯವಸ್ಥೆಗೊಳಿಸಲಾಗಿದೆ. ನಾಗರಾಜಾವು (ನಾಗರಾಜ) ನಾಗಕನ್ನಿಕಾ ಮೊದಲಾದ ಸರ್ಪಗಳು ಬ್ರಾಹ್ಮಣ ಸರ್ಪಗಳ ಸಾಲಿನಲ್ಲಿ ಬರುತ್ತವೆ. ಈ ಸರ್ಪಗಳಿಗೆ ನಿತ್ಯವೂ ಬನದಲ್ಲಿ ದೀಪ ಹಚ್ಚಬೇಕು. ಅಭಿಷೇಕ, ಹಾಲು-ಹಣ್ಣು ಇತ್ಯಾದಿಗಳನ್ನು ನೈವೇಧ್ಯದ ರೂಪದಲ್ಲಿ ಅರ್ಪಿಸಲಾಗುತ್ತದೆ. ಅಪ್ಪ, ತ್ರಿಮದು, ಹಾಲು ಪಾಯಸ, ಪಾಯಸ ಮುಂತಾದವುಗಳನ್ನು ನೈವೇದ್ಯದರೂಪದಲ್ಲಿ ನೀಡುವುದಿದೆ. ಅಕ್ಕಿ ಹಿಟ್ಟು-ಹಾಲು ಅನ್ನ ಇತ್ಯಾದಿ ಬಗೆ ಬಗೆಯ ವಸ್ತುಗಳನ್ನು ಈ ನಾಗ ದೇವರುಗಳಿಗೆ ಒಪ್ಪಿಸುತ್ತಾರೆ. ಬ್ರಾಹ್ಮಣ ಸರ್ಪಗಳ ಶಿರಸ್ಸಿನಲ್ಲಿ 'ನಾಗಮಾಣಿಕ್ಯ' ಅಥವಾ 'ನಾಗಮಣಿ' ಇದೆಯೆಂಬ ಜನಪದ ನಂಬಿಕೆ ಪ್ರಚಲಿತದಲ್ಲಿದೆ. ಸರ್ಪಗಳು ಪೂಜೆಯಿಂದ ಸಂತೃಪ್ತರಾದರೆ ಪೂಜಿಸುವವರಿಗೆ ಮಾಣಿಕ್ಯವನ್ನು ಬಿಟ್ಟು ಕೊಡುತ್ತವೆ ಎಂದೂ, ತಮಗೆ ಲಭಿಸಿದ ಮಾಣಿಕ್ಯವನ್ನು ಸರ್ಪಗಳನ್ನು ಆರಾಧಿಸುವಂತೆ ಆರಾಧಿಸಬೇಕೆಂದೂ, ಅದು ಕೈಬಿಟ್ಟು ಹೋದರೆ ಸರ್ಪಕೋಪಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ನಂಬಿಕೆ ಜನಮಾನಸದಲ್ಲಿದೆ.

ವಾಸುಕಿಯನ್ನೊಳಗೊಂಡ ಸರ್ಪಗಳು ಕ್ಷತ್ರಿಯ ಸರ್ಪಗಳು. ಈ ಸರ್ಪಗಳಿಗೂ ಯಾವುದೇ ರೀತಿಯ ಧಾರ್ಮಿಕ ಲೋಪವಾಗದಂತೆ ಆಚರಣೆಗಳನ್ನು ನಡೆಸಲಾಗುತ್ತದೆ. ವೈಶ್ಯ ಕುಲದ ನಾಗಗಳು ಒಳ್ಳೆಯದನ್ನೂ, ಕೆಟ್ಟದನ್ನೂ ಮಾಡುತ್ತವೆಂಬ ನಂಬಿಕೆಯಿದೆ. 'ಕರಿನಾಗ'ಗಳನ್ನು ಶೂದ್ರ ಕುಲದ ನಾಗಗಳೆನ್ನುವರು. ಇವುಗಳಿಗೆ ವೈದಿಕ ರೀತಿಯ ಆಚರಣೆಗಳು ಬೇಕೆಂದಿಲ್ಲ. ದೀಪಗಳನ್ನು ಹಚ್ಚಿಡಬೇಕಾಗಿಲ್ಲ. ದೂರದಿಂದ 'ದೀಪ' ತೋರಿಸಿದರೂ ಸಾಕು ಎಂಬ ನಂಬಿಕೆಯಿದೆ. ಈರೀತಿಯ ಎಲ್ಲ ಸರ್ಪಗಳಲ್ಲಿ ನಾಗರಾಜನಿಗೂ ನಾಗಯಕ್ಷಿಗಳಿಗೂ ಪ್ರಾಧಾನ್ಯತೆಯನ್ನು ಕಲ್ಪಿಸಲಾಗಿದೆ. ಆರಾಧನೆಯ ಹಿನ್ನೆಲೆಯಲ್ಲಿರುವ ಈ ಪರಿಕಲ್ಪನೆಯು ಜನಾಂಗಿಕ ಹಿನ್ನೆಲೆಯಲ್ಲಿ ಬೆಳೆದು ಬಂದಿರಬೇಕೆಂದು ಭಾವಿಸಲಾಗಿದೆ.

ಸಮಗ್ರವಾಗಿ ಕೇರಳದ ಸರ್ಪಕಾವುಗಳನ್ನು ಪರಿಶೀಲಿಸಿದರೆ ಇಂದು ಅವು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ನಗರಗಳಲ್ಲಿ ಜನಸಂಖ್ಯಾ ಹೆಚ್ಚಳದಿಂದಾಗಿ ಸ್ಥಳಾವಕಾಶ ಕಡಿಮೆಯಾದುದರಿಂದ ನಾಗಬನಗಳ ಸಂರಕ್ಷಣೆಯು ವಿರಳವಾಗಿದೆ. ಗ್ರಾಮೀಣ ಪ್ರದೇಶದ ಜನತೆ ತಮ್ಮ ಜಮೀನನ್ನು ಮಾರುವ ಸಂದರ್ಭ ಬಂದಾಗ ನಾಗಪ್ರತಿಮೆಗಳನ್ನು ಪಾಂಬು ಮೆಕಾಡ್, ಮನ್ನಾರ ಶಾಲ ಅಥವಾ ಸ್ಥಳೀಯ ನಾಗದೇವಾಲಯಗಳಿಗೆ ಒಪ್ಪಿಸಿ ಕಾಣಿಕೆ ಸಲ್ಲಿಸುತ್ತಾರೆ. ಮತ್ತೆ ವರ್ಷಕ್ಕೊಮ್ಮೆ ಸ್ಥಳೀಯ ದೇವಾಲಯವನ್ನು ಸಂದರ್ಶಿಸಿ ವಿಶೇಷ ಸೇವೆಗಳನ್ನು ಒಪ್ಪಿಸುತ್ತಾರೆ. ಮೂಲತಃ ನಾಗಪ್ರತಿಮೆಗಳನ್ನು ಸ್ಥಳಾಂತರಿಸುವ ವಿಶೇಷ ಅಧಿಕಾರವನ್ನು ಹೊಂದಿರುವ ಕೆಲವು ನಾಗದೇವಾಲಯದ ನಂಬೂದಿರಿಗಳು ಈ ಕಾರ್ಯವನ್ನು ನಡೆಸುತ್ತಾರೆ. ಇದರ ಕುರಿತು ಮುಂದಿನ ಅಧ್ಯಾಯಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಅಲ್ಲದೆ ತಮ್ಮ ಸಣ್ಣ ಜಮೀನುಗಳಲ್ಲಿ ಅಭಿವೃದ್ಧಿಯ ಕಾರ್ಯನಡೆಸುವ ಸಂದರ್ಭಗಳಲ್ಲಿ ನಾಗಬನಗಳಿಂದ ತೊಡಕಾಗುವುದರಿಂದ ನಾಗಬನಗಳನ್ನು ತೆರವುಗೊಳಿಸುವ ಆತಂತಕಾರಿ ಬೆಳವಣಿಗೆ ಕೂಡ ನಡೆಯುತ್ತಿದೆ. ಪ್ರಾಕೃತಿಕ ಮತ್ತು ಧಾರ್ಮಿಕ ಹಿತದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಭಾವಿಸಲಾಗಿದೆ.

೫. ೩ ವೈದಿಕ ಆಚರಣೆಗಳು

ವೈದಿಕ ಸಂಸ್ಕೃತಿಯು ಕೇರಳದ ಧಾರ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ಪ್ರಧಾನ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಕೇರಳದ ಹೆಚ್ಚಿನೆಲ್ಲ ಧಾರ್ಮಿಕ ಸಂಪ್ರದಾಯಗಳು ಶೈವ ಸಂಪ್ರದಾಯದಂತೆ ನಡೆಯುತ್ತವೆ. ನಾಗಾರಾಧನೆಯ ವಿಚಾರದಲ್ಲಿಯೂ ಈ ಪ್ರಕಾರವು ಹೊರತಾಗಿಲ್ಲ. ಪುರಾಣ ಪುರುಷನಾದ ಪರಶುರಾಮನಿಂದ ಕೇರಳಕ್ಕೆ ವೈದಿಕ ಸಂಸ್ಕೃತಿಯ ಪ್ರವೇಶ ಆಯಿತು ಎಂಬುದು ಐತಿಹ್ಯ. ಈಗ ಕೇರಳದಲ್ಲಿರುವ ಎಲ್ಲ ಶೈವ ಮತ್ತು ವೈಷ್ಣವ ದೇವಾಲಯಗಳಲ್ಲೂ ವೈದಿಕ ಪರಂಪರೆಯ ಹಿನ್ನೆಲೆಯಲ್ಲಿ ಆಚರಣೆಗಳು ನಡೆಯುತ್ತಿವೆ. ಕೆಲವು ಸ್ಥಳೀಯ 'ಗ್ರಾಮ್ಯ' ದೇವಾಲಯಗಳಲ್ಲಿ ವೈದಿಕೇತರರಿಂದ ಆಚರಣೆಗಳು ನಡೆಸಲ್ಪಡುತ್ತವೆ. ವೈದಿಕ ಮತಾನುಯಾಯಿಗಳು ವೈದಿಕ ಸಂಪ್ರದಾಯದಂತೆ ನಡೆದು ಕೊಳ್ಳುತ್ತಾರೆ. ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ವೇದೋಕ್ತವಾಗಿ ಪ್ರತಿಷ್ಠಾಪನೆಗೊಂಡ ನಾಗ ವಿಗ್ರಹಗಳನ್ನು ವೈದಿಕರನ್ನು ಹೊರತುಪಡಿಸಿ ಇತರರು ಸ್ಪರ್ಶಿಸುವುದಿಲ್ಲ. ವೈದಿಕರೂ ಕೂಡಾ ಪೂಜೆಯ ಸಂದರ್ಭದಲ್ಲಿ ಮಾತ್ರ ಪ್ರತಿಮೆಯನ್ನು ಸ್ಪರ್ಶಿಸುತ್ತಾರೆ. ಉಳಿದ ಯಾವುದೇ ಸಂದರ್ಭದಲ್ಲಿಯೂ ನಾಗ ಪ್ರತಿಮೆಯನ್ನು ಸ್ಪರ್ಶಿಸುವುದಿಲ್ಲ. ಮತ್ತು ಪ್ರತಿಮೆಗೆ ಅನತಿ ದೂರದಿಂದಲೇ ಪ್ರದಕ್ಷಿಣೆ ಬರಲಾಗುತ್ತದೆ.

೫.೩.೧. ನೂರುಂ ಪಾಲುಂ

ನಾಗ ಕಾವುಗಳಲ್ಲಿ ವರ್ಷಕ್ಕೊಮ್ಮೆ ನಡೆಸುವ ವಿಶೇಷವಾದ ಆಚರಣೆಯ ಪ್ರಕಾರವನ್ನು 'ನೂರುಂ ಪಾಲುಂ' ಎಂದು ಕರೆಯಲಾಗುತ್ತದೆ. ಇಲ್ಲಿ 'ನೂರುಂ' ಮತ್ತು 'ಪಾಲುಂ' ಎಂಬ ಎರಡು ಪದಗಳ ಸಹಯೋಗದೊಂದಿಗೆ ಈ ಆಚರಣೆಯನ್ನು ಆಚರಿಸಲಾಗುತ್ತದೆ. 'ನೂರುಂ' ಎಂದರೆ 'ಅಕ್ಕಿಹಿಟ್ಟು' ಮತ್ತು 'ಪಾಲುಂ' ಎಂದರೆ ಹಾಲು ಎಂದರ್ಥ. ಅಕ್ಕಿ ಹಿಟ್ಟು, ಹಳದಿ, ಹಾಲು ಇವುಗಳ ಮಿಶ್ರಣದಿಂದ ನಡೆಸುವ ಒಂದು ಆರಾಧನ ಪ್ರಕಾರ ಎಂದಾಗುತ್ತದೆ. ಮನೆಗೆ ಸಂಬಂಧಿಸಿದ ಕುಟುಂಬದ, ಮೂಲಸ್ಥಾನಗಳ, ಮತ್ತು ದೇವಾಲಯಗಳ ನಾಗಕಾವುಗಲ್ಲಿ ಈ ಸೇವೆಯನ್ನು ನಡೆಸಲಾಗುತ್ತದೆ. ಕೆಲವು ನಾಗಾಲಯಗಳಲ್ಲಿ ಪ್ರಮುಖವಾಗಿ ಮಣ್ಣಾರ ಶಾಲೆಯಲ್ಲಿ ಅಲ್ಲಿಯ ಸ್ತ್ರೀ ಅರ್ಚಕಿಯೂ ಕೂಡ ಈ ಸೇವೆಯನ್ನು ನಡೆಸಿಕೊಡುತ್ತಾಳೆ. ವರ್ಷಕೊಮ್ಮೆ ಈ ರೀತಿಯ ವಿಶೇಷ ಆಚರಣೆಯನ್ನು ನಡೆಸಲಾಗುತ್ತದೆ. ಕಾರ್ತಿಕ ಮಾಸದ ಆಶ್ಲೇಷ ನಕ್ಷತ್ರ ಅಥವಾ ಇನ್ನಿತರ ಯಾವುದೇ ನಾಗಸಂಬಂಧಿಯಾದ ವಿಶೇಷ ದಿನದಂದು ಈ ಆಚರಣೆಯನ್ನು ನಡೆಸಲಾಗುತ್ತದೆ.

ಆಚರಣೆಯ ಸ್ವರೂಪ

ನೂರುಂ ಪಾಲುಂ ಜನಪದ ಹಿನ್ನೆಲೆಯಲ್ಲಿ ಆಚರಿಸುವ ವೈದಿಕ ಆಚರಣೆ, ಬಳಸುವ ವಸ್ತುಗಳು, ಆಚರಣೆಯ ವಿಧಾನ ಇತ್ಯಾದಿಗಳನ್ನು ಗಮನಿಸಿದರೆ ವೈದಿಕ ಆಚಾರದೊಂದಿಗೆ ತಾಂತ್ರಿಕ ವಿಚಾರಗಳು ಕೂಡ ಕಂಡುಬರುತ್ತವೆ. ಆಚರಣೆಯ ಈ ಸಂದರ್ಭದಲ್ಲಿ ಪ್ರಧಾನವಾಗಿ ಅಕ್ಕಿಹಿಟ್ಟು, ಹಾಲು, ಹಳದಿ ಪುಡಿ, ಅರಳು, ಅವಲಕ್ಕಿ, ಹೂ, ಹಣ್ಣು ಎಳನೀರು ಇತ್ಯಾದಿ ವಸ್ತುಗಳನ್ನು ಬಳಸಲಾಗುತ್ತದೆ. ಪ್ರಾರಂಭದಲ್ಲಿ ನಾಗಕಾವುಗಳನ್ನು ತೆಂಗಿನ ಎಳೆಯ 'ತಿರಿ'ಗಳಿಂದ ತೋರಣ ನಿರ್ಮಿಸಿ ಶೃಂಗರಿಸಲಾಗುತ್ತದೆ. ತೆಂಗಿನ ತಿರಿಗಳಿಂದ ತೋರಣ ನಿರ್ಮಿಸುವುದು ಕೇರಳದ

ಸಾಂಸ್ಕೃತಿ ಮತ್ತು ಧಾರ್ಮಿಕ ಸಂದರ್ಭಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ತೆಂಗಿನ ಎಳೆಯ ಎಸಳುಗಳನ್ನು ಸೀಳಿ ಕತ್ತರಿಸಿ ದಾರಕ್ಕೆ ಬಿಗಿದು ಅದನ್ನೇ ತೋರಣವಾಗಿ ಬಳಸಲಾಗುತ್ತದೆ.

ಪ್ರಾರಂಭದಲ್ಲಿ ಋತ್ವಿಜರಿಂದ ನಾಗ ಪ್ರಾರ್ಥನೆಯ ಬಳಿಕ ಪ್ರತಿಮೆಗಳನ್ನು ನೀರಿನಿಂದ ಶುದ್ಧೀಕರಿಸಲಾಗುತ್ತದೆ. ತದನಂತರ ನೀರು, ಹಾಲು, ಎಳನೀರು ಇತ್ಯಾದಿಗಳಿಂದ ಅಭಿಷೇಕ ನಡೆಸಿ ಹಳದಿ ಎರಚಲಾಗುತ್ತದೆ. ಪುಷ್ಪಾದಿಗಳಿಂದ ಪ್ರತಿಮೆಯನ್ನು ಅಲಂಕರಿಸಿದ ಬಳಿಕ ಅರಳು, ಅವಲಕ್ಕಿ, ಹಣ್ಣು, ಬೆಲ್ಲ, ಎಳನೀರು ಇತ್ಯಾದಿಗಳನ್ನು ಅರ್ಪಿಸಲಾಗುತ್ತದೆ. ತೆಂಗಿನ ಕಾಯಿಗಳನ್ನು ಒಡೆಯುವ ಸಂಪ್ರದಾಯ ಕಂಡುಬಂದಿಲ್ಲ. ಈ ಸಂದರ್ಭದಲ್ಲಿ ಅಕ್ಕಿಹಿಟ್ಟನ್ನು ಪ್ರಮುಖವಾಗಿ ಬಳಸಲಾಗುತ್ತದೆ. ತೊಳೆದು ಒಣಗಿಸಿ ಪುಡಿಮಾಡಿದ ಅಕ್ಕಿ ಹಿಟ್ಟು ಮತ್ತು ಹಳದಿಯನ್ನು ಹಾಲಿನೊಂದಿಗೆ ಗಟ್ಟಿಯಾಗಿ ಕಲಸಿ ನಿರ್ಮಿಸಿರುವ ಮಿಶ್ರಣವನ್ನು ಆರಾಧನೆಯಲ್ಲಿ ಬಳಸಲಾಗುತ್ತದೆ. ಹಲಸಿನ ಎಲೆಯ ತುದಿ ಭಾಗವನ್ನು ಮಡಚಿ ಕಡ್ಡಿ ತೂರಿಸಿ ಅದನ್ನು 'ಕೊಟ್ಟೆ'ಯನ್ನಾಗಿ ಮಾಡಿಕೊಳ್ಳಲಾಗುತ್ತದೆ. ಈ ಕೊಟ್ಟೆಗಳನ್ನು ಮೂರು, ಐದು, ಏಳು, ಅಥವಾ ಒಂಬತ್ತು ಸಂಖ್ಯೆಯಲ್ಲಿ ಬಾಳೆಎಲೆಯ ಮೇಲಿಟ್ಟು ನಾಗ ಪ್ರತಿಮೆಗಳ ಮುಂದೆ ಇಡಲಾಗುತ್ತದೆ. ಹಲಸಿನ ಎಲೆಯ ದೊನ್ನೆ (ತುಳು-ಕೊಟ್ಟೆ)ಗಳಲ್ಲಿ ಮೊದಲೇ ನಿರ್ಮಿಸಿರುವ ಅಕ್ಕಿ ಹುಡಿಯ ಮಿಶ್ರಣವನ್ನು ತುಂಬಿಸಲಾಗುತ್ತದೆ. ಬಳಿಕ ಅಷ್ಟೇ ಪ್ರಮಾಣದ ಸಣ್ಣ ಪಂಜು (ತುಳು-ಕಕ್ಕಡ)ಗಳನ್ನು ಎಲೆಯ ಸಮೀಪವೇ ಉರಿಸಿ ಇಡಬೇಕು. ಬಳಿಕ ಪೂಜಾದಿಗಳು ನಡೆದು ಕುಟುಂಬದ ಶ್ರೇಯಸ್ಸಿಗೆ ವೈದಿಕರ ಮುಖೇನ ಪ್ರಾರ್ಥನೆ ಸಲ್ಲುತ್ತದೆ.

ಹಲಸಿನ ಎಲೆಯಲ್ಲಿ ಈ ರೀತಿಯ ಮಿಶ್ರಣವನ್ನು ಬಳಸಿ ಆಚರಣೆ ನಡೆಸುವುದರಿಂದ ಹಾವುಗಳು ಬಂದು ಆಹಾರವನ್ನು ತಿನ್ನುತ್ತವೆಂಬ ನಂಬಿಕೆಯಿದೆ. ಪೂಜೆ ಮತ್ತು ಪ್ರಾರ್ಥನೆಯ ಬಳಿಕ ನಾಗ ಕಾವುಗಳಲ್ಲಿ ಅರ್ಪಿಸಿರುವ ಹಲಸಿನ ಎಲೆಯಲ್ಲಿ ತುಂಬಿಸಿರುವ ವಸ್ತುಗಳನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಗುತ್ತದೆ. ಸಮಗ್ರವಾಗಿ ನಡೆಸುವ ಈ ಆಚರಣೆಯು 'ನೂರುಂ ಪಾಲುಂ' ಎಂಬ ಹಿನ್ನೆಲೆಯಲ್ಲಿ ಕರೆಯಲ್ಪಡುತ್ತದೆ. ಸರ್ಪ ಪ್ರೀತ್ಯರ್ಥವಾಗಿ ಸರ್ಪದೋಷ ನಿವಾರಣೆಗಾಗಿ ಈ ಆಚರಣೆಯನ್ನು ನಡೆಸುತ್ತಿರುವುದು ಕಂಡುಬಂದಿದೆ. ಇದರಿಂದ ಸರ್ಪಗಳು ಸಂತೃಪ್ತಿಗೊಂಡು ಕುಟುಂಬದ ವ್ಯಕ್ತಿಗಳನ್ನು ಅನುಗ್ರಹಿಸುತ್ತವೆಂಬ ನಂಬಿಕೆಯಿದೆ.

ಮೊದಲೇ ಸೂಚಿಸಿರುವಂತೆ ಮೇಲು ನೋಟಕ್ಕೆ ವೈದಿಕವೆಂದು ಕಂಡುಬಂದರೂ ಈ ಆಚರಣೆಯಲ್ಲಿ ತಾಂತ್ರಿಕ ಅಂಶಗಳೂ ಇವೆ. ಆಚರಿಸುವ ವಿಧಾನ, ದೊಂದಿಯ ದೀಪ, ಇತ್ಯಾದಿಗಳನ್ನು ಗಮನಿಸಿದರೆ ಇದೊಂದು ಸಂಪೂರ್ಣವಾದ ದ್ರಾವಿಡ ಶೈಲಿಯ ಆಚರಣೆ ಎನ್ನುವುದು ವೇದ್ಯವಾಗುತ್ತದೆ.

೫.೩.೨ ಸರ್ಪಬಲಿ

ನಾಗಸಂಬಂಧಿ 'ಸರ್ಪದೋಷ' ನಿವಾರಣೆಗಾಗಿ ನಡೆಸುವ ಒಂದು ಪ್ರಸಿದ್ಧ ಆಚರಣ ವಿದಿಯೇ 'ಸರ್ಪಬಲಿ'. ಪ್ರತಿ ನಕ್ಷತ್ರಕ್ಕೂ ಬೇರೆ ಬೇರೆ ಅಧಿದೇವತೆಗಳಿದ್ದಾರೆ. ಆಶ್ಲೇಷ ನಕ್ಷತ್ರಕ್ಕೆ ಅಭಿಮಾನಿ ದೇವತೆ ಸರ್ಪ. ಆದ್ದರಿಂದ ಸರ್ಪಗಳಿಗೆ ಆಶ್ಲೇಷ ನಕ್ಷತ್ರದ ದಿನ, ಆಶ್ಲೇಷಾ ನಕ್ಷತ್ರ ನಿಯಮಕ ಸರ್ಪಗಳಿಗೆ ಕೊಡುವ ಬಲಿದಾನವೇ ಆಶ್ಲೇಷ ಬಲಿದಾನ. ತುಳುನಾಡಿನಲ್ಲಿ ಇದನ್ನು 'ಆಶ್ಲೇಷ ಬಲಿ' ಎಂದು ಕರೆದರೆ ಕೇರಳದಾದ್ಯಂತ 'ಸರ್ಪಬಲಿ' ಎಂದು

ಕರೆಯಲಾಗುತ್ತದೆ. ಆಚರಣೆಯ ಉದ್ದೇಶ ಒಂದೆ ಆಗಿದ್ದರೂ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಮತ್ತು ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಆಚರಿಸುತ್ತಿರುವುದು ಕಂಡುಬಂದಿದೆ. ಕೇರಳದಲ್ಲಿ ಈ ಆಚರಣೆಯನ್ನು ಸಂಜೆಯ ಸೂರ್ಯಸ್ತದ ಸಂದರ್ಭದಲ್ಲಿ ಆಚರಿಸಲಾಗುತ್ತದೆ. ಇದು ಸಂಪೂರ್ಣವಾಗಿ ವೈದಿಕ ಹಿನ್ನಲೆಯಲ್ಲಿ ಪಂಚವರ್ಣದ ಹುಡಿಗಳಿಂದ ಮಂಡಲ ರಚಿಸಿ ಆರಾಧಿಸುವ ಆಚರಣೆ. ಸರ್ಪದೋಷ ನಿವಾರಣೆಗಾಗಿ ಸಂತಾನ ಹೀನತೆ ಚರ್ಮರೋಗ, ಇತ್ಯಾದಿಗಳ ಸಂದರ್ಭದಲ್ಲಿ ನಾಗ ಕಾವುಗಳಲ್ಲಿ, ಮೂಲಸ್ಥಾನಗಳಲ್ಲಿ, ನಾಗದೇವಾಲಯಗಳಲ್ಲಿ, ಈ ಸೇವೆಯನ್ನು ನಡೆಸಬಹುದಾಗಿದೆ. ನಾಗ ಸಾನಿಧ್ಯದ ಸಮೀಪವೇ ಈ ವಿಧಿಯನ್ನು ನಡೆಸಲಾಗುತ್ತದೆ. ಕೇರಳದ ಸುಬ್ರಹ್ಮಣ್ಯ, ಮತ್ತು ನಾಗ ದೇವಾಲಯಗಳಲ್ಲಿ ಸಂಜೆಯ ಹೊತ್ತು ಹರಕೆಯ ರೂಪದಲ್ಲಿ ಸಾಮೂಹಿಕ ಸರ್ಪಬಲಿ ಸೇವೆ ನಡೆಸುವ ವಿಶೇಷ ಸಂಪ್ರದಾಯವಿದೆ.

ಹಿನ್ನೆಲೆ

ಸರ್ಪಬಲಿಗೆ ಪೂರಕವಾಗಿ ಮಹಾಭಾರತದಲ್ಲಿ ಉಲ್ಲೇಖಿಸಿರುವ 'ಸರ್ಪಯಜ್ಞ'ದ ಉಲ್ಲೇಖವನ್ನು ಬಳಸಿಕೊಳ್ಳಲಾಗಿದೆ. ಇಡೀ ದೇಶದ ಪ್ರತಿನಿಧಿಯಾದ ಚಕ್ರವರ್ತಿಯೊಬ್ಬ ನಡೆಸಿದ ಅಭೂತಪೂರ್ವ ಸರ್ಪಸತ್ರ. ಅದರ ಪರಿಣಾಮವಾಗಿ ನಡೆದ ಕೋಟಿಗಟ್ಟಲೆ ಸರ್ಪಗಣಗಳ ಹತ್ಯೆ ಇದು ದೇಶದ ಎಲ್ಲ ಪ್ರಜೆಗಳ ಮನಸ್ಸನ್ನು ಕಲಕಿದ ಹಾಗೆ ಕಾಣುತ್ತದೆ. ನರಕುಲದಿಂದ ನಡೆದ ನಾಗ ಹತ್ಯೆ ಇದು. ಈ ನಾಗ ಶಾಪ ಅಲ್ಲಿನ ಋತ್ವಿಕ್ಕುಗಳಿಗೂ ಯಜಮಾನನಾದ ಜನಮೇಜಯನಿಗೂ, ಸಮಸ್ತದೇಶದ ಪ್ರಜೆಗಳಿಗೂ ತಟ್ಟಿತು. ಅನಂತರದ ಕಾಲಗಳಲ್ಲಿ ಇದಕ್ಕೆ ಪ್ರತ್ಯೇಕ ಪರಿಹಾರವನ್ನು ಕಂಡುಹಿಡಿಯಲಾಯಿತು. ಈ ಮೃತ ನಾಗಗಳೊಂದಿಗೆ ನಾಗಶಾಪದಿಂದಾಗಿ ಸರ್ಪಸತ್ರದಲ್ಲಿ ಮುಖ್ಯ ಭಾಗವನ್ನು ವಹಿಸಿದ ಋತ್ವಿಕ್ಕುಗಳೂ, ಯಜಮಾನನಾದ ಜನಮೇಜಯನೂ ಸೇರಿಕೊಂಡ. ಆ ಮೃತಾತ್ಮಗಳ ಶಾಂತಿಗೋಸ್ಕರ ಒಂದು ರೀತಿಯ ಪ್ರಾಯಶ್ಚಿತ್ತ ನಿರೂಪಣೆಯುಂಟಾಯಿತು. ಅದೇ ಆಶ್ಲೇಷ ಬಲಿ,' ಸರ್ಪಬಲಿಗೆ ಈ ಹಿನ್ನೆಲೆ ಇದ್ದರೂ ಕೂಡ ನಾಗ ಸಂಬಂಧಿಯಾದ ಯಾವುದೇ ರೀತಿಯ ದೋಷ ನಿವಾರಣೆಗೆ ಪರಿಹಾರ ರೂಪದಲ್ಲಿ ಈ ಆಚರಣೆಯನ್ನು ನಡೆಸಲಾಗುತ್ತದೆ.

ಮನುಷ್ಯನು ಜನ್ಮ ಜನ್ಮಾಂತರಗಳಲ್ಲಿ ತಿಳಿದೋ ತಿಳಿಯದೆಯೋ ಮಾಡಿರಬಹುದಾದ ನಾಗ ವಧೆ, ನಾಗ-ಮರಿ, ಮೊಟ್ಟೆ ನಾಶ, ಹುತ್ತಗಳು, ನಾಗ ವೀಧಿ ಮೊದಲಾದೆಡೆ ಸರ್ಪಗಳ ವಾಸ. ಸಂಚಾರಕ್ಕೆ ಅಡಚಣೆ ಉಂಟುಮಾಡುವುದು, ಮುಂತಾದವುಗಳಿಂದ ಒದಗಿ ಬಂದಿರುವ ಪಾಪದ ಪರಿಹಾರಕ್ಕಾಗಿ ಸರ್ಪಬಲಿಯನ್ನು ಮಾಡಲಾಗುವುದು.

ಆಚರಣೆಯ ಸ್ವರೂಪ

ವಿಶೇಷವಾಗಿ ತಿಂಗಳಿಗೊಮ್ಮೆ ಬರುವ ಆಶ್ಲೇಷ ನಕ್ಷತ್ರದಂದು ಅಥವಾ ಆಶ್ಲೇಷ ನಕ್ಷತ್ರಕ್ಕೆ ತಾರಾನುಕೂಲವಾಗುವ ದಿನದಂದು ಹಗಲು ಅಥವಾ ರಾತ್ರಿ ಸರ್ಪಬಲಿ ಆಚರಣೆಯನ್ನು ಮಾಡಲಾಗುತ್ತದೆ. ಆಶ್ಲೆಷ ನಕ್ಷತ್ರವನ್ನು ಈ ಭಾಗದಲ್ಲಿ 'ಆಯಿಲ್ಯ' ಎಂದು ಕರೆಯುವುದು ವಾಡಿಕೆ. ಪ್ರಾರಂಭದಲ್ಲೇ ಸೂಚಿಸಿರುವಂತೆ ಇಲ್ಲಿ ಸರ್ಪಬಲಿಯನ್ನು

ಸೂರ್ಯಾಸ್ತದ ಸಂದರ್ಭದಲ್ಲಿ ನೆರವೇರಿಸಲಾಗುತ್ತದೆ. ಸುಮಾರು ಮೂರರಿಂದ ನಾಲ್ಕು ಗಂಟೆಗಳ ಕಾಲಾವಧಿಯಲ್ಲಿ ಇಬ್ಬರು ಮೂವರು ಋತ್ವಿಕರ ಸಹಾಯದಿಂದ ನೆರವೇರಿಸಲಾಗುತ್ತದೆ. ಸರ್ಪಬಲಿಯನ್ನು ಮನುಷ್ಯರಿಗೆ ಆರೋಗ್ಯ ಭಾಗ್ಯ, ಸಂತಾನ ಅಭಿವೃದ್ಧಿ, ಸಂಪತ್ತು ಸಿದ್ಧಿಗಳಿಗಾಗಿ ನಡೆಸಲಾಗುತ್ತದೆ. ಇದರಿಂದ ಮಹಾಪಾಪಗಳು ನಿವಾರಣೆಯಾಗುತ್ತದೆ. ಬ್ರಹ್ಮ ಹತ್ಯಾದಿ ಮಹಾಪಾತಕಗಳು ಆಗಮ್ಯಾಗಮನಾಧಿ ಅನುಪಾತಕಗಳು, ಗೋವದಾಧಿ ಉಪಪಾತಕಗಳು ಎಲ್ಲವೂ ನಿವಾರಣೆಯಾಗುತ್ತವೆಂಬ ನಂಬಿಕೆಯಿದೆ. ಬಿಳಿತೊನ್ನು ಚರ್ಮವ್ಯಾಧಿ, ಕುಷ್ಟ, ಅಪಸ್ಮಾರ ಇತ್ಯಾದಿ ರೋಗ ಪರಿಹಾರ ಬಂಜೆತನಾಧಿಗಳ ನಿವಾರಣೆಯಾಗಿ 'ಸತ್' ಸಂತಾನ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ.

ಪ್ರಾರಂಭದಲ್ಲಿ ಸರ್ಪಬಲಿ ಮಂಡಲ ರಚಿಸಲಾಗುತ್ತದೆ. ಅಕ್ಕಿಹುಡಿ ಮತ್ತು ಹಳದಿಯಿಂದ ಒಂಭತ್ತು ಪದಗಳಿರುವ ಒಂದು 'ಪದ್ಮಕಳಂ' ಮತ್ತು ಎಂಬತ್ತೊಂದು ಪದಗಳ ಇನ್ನೊಂದು ಮಂಡಲವನ್ನು ಒಟ್ಟಿನಲ್ಲಿ ಎರಡು ಮಂಡಲಗಳನ್ನು ರಚಿಸಬೇಕು. 'ಪದ್ಮಕಳಂ'ದ ನಡುವೆ ಇರುವ ಸ್ವಸ್ತಿಕದಲ್ಲಿ ಅಕ್ಕಿ, ಬತ್ತ, ತೆಂಗಿನಕಾಯಿಯನ್ನು ಇಟ್ಟು 'ಚಂಡೇಶ್ವರ'ನನ್ನು ಸಂಕಲ್ಪ ಮಾಡಿ ಪೂಜೆ ಮಾಡಲಾಗುತ್ತದೆ ಬಾಕಿ ಇರುವ ಇನ್ನೊಂದು ಮಂಡಲದಲ್ಲಿ ಅನಂತನ್, ವಾಸುಕಿ, ತಕ್ಷಕನ್, ಕರ್‌ಕೋಟಕನ್, ಪದ್ಮ, ಮಹಾಪದ್ಮನ್, ಶಂಕಪಾಲನ್, ಗುಳಿಕನ್ ಮುಂತಾದ ಅಷ್ಟನಾಗಗಳು ಅಲ್ಲದೆ, ಜರ್ವರನ್, ದೃತರಾಷ್ಟ್ರನ್, ಗ್ಲಾವನ್, ಅಗಜಾಭನ್, ಸಿದಿಪೃಷ್ಟನ್, ಶಿಖನ್, ಅತಿಶಿಖನ್ ಮುಂತಾದ ಅನೇಕ ಸರ್ಪಗಳನ್ನು ಸಂಕಲ್ಪಮಾಡಿ, ಮಂತ್ರೋಕ್ತವಾಗಿ ಆವಾಹಿಸಿ ಅರ್ಘ್ಯ, ಪಾದ್ಯ ಇತ್ಯಾದಿ ಪೂಜೆಗಳನ್ನು ನಡೆಸಬೇಕು. ಈ ದೇವತೆಗಳನ್ನು ಉದ್ದೇಶಿಸಿ ನಮ್ಮ ಸಮಸ್ಯೆ ನಿವಾರಣೆ, ರೋಗ ನಿವಾರಣೆ, ಸಂತತಿ ಭಾಗ್ಯ ಇತ್ಯಾದಿ ಇಷ್ಟಾರ್ಥಸಿದ್ಧಿಯ ಪ್ರಾರ್ಥನೆಯನ್ನು ವೈದಿಕರ ಮುಖೇನ ಮಾಡಿಕೊಳ್ಳಬೇಕು. ತದನಂತರ ಬಲಿಕ್ರಿಯೆಯನ್ನು ಪ್ರಾರಂಭಿಸಬೇಕು.

ಮಂಡಲ ಪೂಜೆಯ ಬಳಿಕ ಹಳದಿ ಮಿಶ್ರಣದ 'ಹವಿಸ್ಸನ್ನು' ಪಿಂಡ (ಉಂಡೆ) ಮತ್ತು ಗೋದಿ ಹಿಟ್ಟಿನ ಅಪೂಪ (ಅಪ್ಪ)ಗಳನ್ನು ದೀಪ ಸಹಿತವಾಗಿ ಆಯಾಯ ಪದಗಳಲ್ಲಿಟ್ಟು, ದೇವತೆಗಳಿಗೆ ಮಂತ್ರ ಮುಖೇನ ಸಮರ್ಪಿಸಲಾಗುವುದು. ಪ್ರತಿಯೊಂದು ಪಿಂಡಕ್ಕೂ ಸಂಬಂಧಿಸಿದ ಪ್ರತ್ಯೇಕ ನಾಗದೇವತೆಯ ಮಂತ್ರವನ್ನು ಉಚ್ಚರಿಸಿ 'ಬಲಿ'ದಾನ ನಡೆಸಲಾಗುವುದು. ಬಲಿಯಲ್ಲಿ ಪ್ರಧಾನವಾಗಿ ಅಪ್ಪಂ, ಹಣ್ಣು, ಹಾಲು, ತುಪ್ಪ, ಅರಳು, ಅಕ್ಕಿಹುಡಿ ಮುಂತಾದ ಸಾಮಗ್ರಿಗಳನ್ನು ಬಳಸಲಾಗುತ್ತದೆ. ಬಳಿಕ ದೊಡ್ಡ ಪದ್ಮಕಳಂದ ಉತ್ತರ ಭಾಗದಲ್ಲಿ ಪ್ರತ್ಯೇಕವಾದ ಸಣ್ಣ ಪದ್ಮರಚಿಸಿ ಅದರಲ್ಲಿ ದೊಡ್ಡ ಪಾತ್ರೆ ಇಟ್ಟು 'ನೂರುಂ, ಪಾಲುಂ' ಅನ್ನು ಅಷ್ಟನಾಗಗಳಿಗೆ ನೈವೇದ್ಯ ಮಾಡಬೇಕು. ಬಳಿಕ ಮಹಾಪೂಜೆಯನ್ನು ನೆರವೇರಿಸಲಾಗುವುದು. ಕರ್ತೃಗಳಿಗೆ 'ಅಪ್ಪಂ' ಅನ್ನು ಹವಿಸ್ಸು ಇತ್ಯಾದಿಗಳನ್ನು ಪ್ರಸಾದ ರೂಪದಲ್ಲಿ ವಿತರಿಸಲಾಗುವುದು. ಸರ್ಪಬಲಿಯನ್ನು ಮತ್ತು ಪೂಜೆ ನಡೆದ ಬಳಿಕ ಆ ಸ್ಥಳವನ್ನು ಯಾರೂ ನೋಡಬಾರದೆಂಬ ಪ್ರತೀತಿ ಇದೆ. ಪೂಜೆ ಮುಗಿದ ಬಳಿಕ ಸರ್ಪಗಳು ಬಂದು ಆಹಾರವನ್ನು ಸ್ವೀಕರಿಸುತ್ತವೆಂದು ಮನುಷ್ಯ ಪ್ರವೇಶದಿಂದ ಅವುಗಳಿಗೆ ತೊಂದರೆಯಾಗುತ್ತದೆಂದು ನಂಬಿಕೆಯಿದೆ. ಮರುದಿನ ಸರ್ಪಬಲಿಯ ಪಿಂಡಾದಿ ತ್ಯಾಜ್ಯಗಳನ್ನು ನೀರಲ್ಲಿ ಬಿಡುವುದು ಒಂದು ಪದ್ಧತಿಯಾಗಿದೆ.

ಕೇರಳದ ಪ್ರಸಿದ್ಧ ಸುಬ್ರಹ್ಮಣ್ಯ ಮತ್ತು ನಾಗದೇವಾಲಯಗಳಲ್ಲಿ ಪ್ರತಿದಿನವೂ ಹರಕೆಯ ರೂಪದಲ್ಲಿ ಸಂಜೆಯ ಹೊತ್ತು ಈಸೇವೆಯನ್ನು ನಡೆಸಲಾಗುತ್ತದೆ. ಈ ದೇವಾಲಯಗಳಲ್ಲಿ ನಡೆಯುವ ವಿಶೇಷ ಸೇವೆಯೇ ಸರ್ಪಬಲಿಯಾಗಿದೆ. ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಯಲ್ಲಿ ಮನೆಗಳಲ್ಲಿ ಸರ್ಪಬಲಿಯನ್ನು ಅತಿ ವಿರಳವಾಗಿ ನಡೆಸುತ್ತಿರುವುದು ಕಂಡುಬಂದಿದೆ.

ಕೇರಳದಾದ್ಯಂತ ಪ್ರಚಲಿತವಿರುವ ಸರ್ಪಬಲಿ ಆಚರಣೆಗಳಲ್ಲಿ ಮತ್ತು ಕಲ್ಪನೆಗಳಲ್ಲಿ ಬದಲಾವಣೆಗಳು ಇವೆ. ಈ ಆಚರಣೆಯನ್ನು ದೇವಾಲಯಗಳಲ್ಲಿ ಸಾಮೂಹಿಕ ನೆಲೆಯಲ್ಲಿ ನಡೆಸುವುದರಿಂದ ಸೇವೆಯನ್ನು 'ಹರಕೆ' ಎಂಬ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ನಡೆಸಲಾಗುತ್ತಿದೆ. ಜೊತೆಗೆ ತುಳುನಾಡಿನಿಂದ ವಲಸೆ ಬಂದಿರುವ ತುಳು ವೈಷ್ಣವ ಬ್ರಾಹ್ಮಣರು ವೈಷ್ಣವ ಸಂಪ್ರದಾಯದಂತೆ ಕಂಡುಬಂದಿದೆ. ಈ ವಿಚಾರಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ವಿಶ್ಲೇಸಿಸಲಾಗುವುದು. ನಡೆಸುತ್ತಿರುವುದು ಕಂಡುಬಂದಿದೆ. ಈ ವಿಷಯಗಳ ಕುರಿತು ವಿಶ್ಲೇಷಿಸುವುದಾದರೆ ಆರಾಧನೆಯಂಥ ಸಾಂಪ್ರದಾಯಿಕ ವಿಚಾರವನ್ನು ಎತ್ತಿಕೊಂಡ ಮಾತ್ರಕ್ಕೆ ಅದರಲ್ಲಿ ಅಡಗಿರುವ ಸರ್ವ ವಿಚಾರಗಳನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳಬೇಕಾಗಿಲ್ಲ. ಅಥವಾ ಸಮರ್ಥಿಸಬೇಕಿಲ್ಲ. ಆರಾಧನೆ ವ್ಯವಸ್ಥೆಯ ವಿವರಗಳನ್ನು ಮುಖ್ಯವಾಗಿ ಸಾಂಸ್ಕೃತಿಕ ದಾಖಲಾತಿಯ ದೃಷ್ಟಿಯಿಂದ ಗಮನಿಸಬೇಕೇ ಹೊರತು, ಪರಂಪರೆಯಿಂದ ಬಂದ ಎಲ್ಲಾ ವಿಧಿಗಳು ಚಾಚುತಪ್ಪದೆ ಹಾಗೆಯೇ ಮುಂದುರೆದುಕೊಂಡು ಹೋಗಬೇಕೆಂಬ ಸಂಪ್ರದಾಯಕರಣ ನಿಲುವು ಅಲ್ಲ. ಈ ಆರಾಧನಾ ವ್ಯವಸ್ಥೆಯಲ್ಲಿನ ಕಲಾತ್ಮಕತೆ ಮತ್ತು ಧಾರ್ಮಿಕ ವೈಶಿಷ್ಟ್ಯತೆಯನ್ನು ಮಾತ್ರ ಗುರುತಿಸಬೇಕು.

೫.೪ ನಾಗ ದೇವಾಲಯಗಳು ಮತ್ತು ಆಚರಣೆಗಳು

ಕೇರಳದ ನಾಗದೇವಾಲಯಗಳು ನಾಗಾರಾಧನೆಯ ಪರಿಧಿಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಈ ನಾಗಾಲಯಗಳು ಪ್ರತ್ಯೇಕ ಕುಟುಂಬಗಳಿಗೆ ಸಂಬಂಧಿಸಿದವುಗಳಾದುದರಿಂದ ಇವುಗಳನ್ನು ಕೌಟುಂಬಿಕ ದೇವಾಲಯಗಳೆಂದು ಕರೆಯುವುದು ಹೆಚ್ಚು ಸೂಕ್ತ. ಕೇರಳದ ನಾಗಾರಾಧನೆಯ ಮೇಲೆ ನಾಗ ದೇವಾಲಯಗಳು ಮತ್ತು ಸಂಬಂಧಿಸಿದ ಕುಟುಂಬಗಳು ಬಿಗಿ ಹಿಡಿತವನ್ನು ಸಾಧಿಸಿರುವುದು ಕಂಡುಬರುತ್ತದೆ. ಈ ಎಲ್ಲ ದೇವಾಲಯಗಳನ್ನು ನಡೆಸುವವರು ನಂಬೂದಿರಿ ಬ್ರಾಹ್ಮಣರು. ಪ್ರತಿಯೊಂದು ದೇವಾಲಯಗಳಿಗೂ ಅಲ್ಲಿಯದೇ ಆದ ವೈಶಿಷ್ಟ್ಯತೆ, ಪರಂಪರೆ, ವಿಭಿನ್ನ ರೀತಿಯ ಆಚರಣೆ, ಸಂಪ್ರದಾಯಗಳಿರುವುದು ಕಂಡುಬರುತ್ತದೆ. ಇದರೊಂದಿಗೆ ನಾಗಾರಾಧನೆಯು ವೈದಿಕ ಶಕ್ತಿಯ ಪ್ರಭುತ್ವದಲ್ಲಿರುವುದು ವೇದ್ಯವಾಗುತ್ತದೆ. ನಿರ್ದಿಷ್ಟ ದೇವಾಲಯಗಳಲ್ಲಿ ಪೂಜಿಸಲ್ಪಡುವ ನಾಗದೇವತೆಯು ಆಯಾ ಮನೆತನಗಳ ಕುಲದೇವತೆಯಾಗಿಯೂ ಆರಾಧಿಸಲ್ಪಡುತ್ತದೆ. ಈ ನಾಗಾಲಯಗಳು ಸಾರ್ವಜನಿಕರ ಪ್ರಧಾನ ನಾಗಾರಾಧನ ಕೇಂದ್ರಗಳಾಗಿಯೂ ಗುರುತಿಸಲ್ಪಟ್ಟಿವೆ.

ಕೇರಳದ ನಾಗಾರಾಧನೆಯಲ್ಲಿ ಹಲವಾರು ಕೌಟುಂಬಿಕ ದೇವಾಲಯಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಈ ದೇವಾಲಯಗಳು ವಿಭಿನ್ನ ಐತಿಹ್ಯಗಳನ್ನು, ಸಂಸ್ಕಾರಗಳನ್ನು ಒಳಗೊಂಡಿದ್ದುದು ಕಂಡುಬರುತ್ತದೆ. ಕೆಲವು ಅತಿ ಪುರಾತನವಾದ ನಾಗದೇವಾಲಯಗಳನ್ನು ಇಲ್ಲಿ ಗುರುತಿಸಲಾಗಿದೆ. ಅವುಗಳಲ್ಲಿ ಅತೀ ಪ್ರಸಿದ್ಧ ಮತ್ತು ಪ್ರಮುಖವಾದವುಗಳೆಂದರೆ

೦೧. ಪಾಂಬುಮೇಕಾಡ್ ಮನ (ಮುಕುಂದ ಪುರಂ ತಾಲೂಕು)

೦೨. 'ಅಟ್ಟಿಪಟ್ಟು' ಅಥವಾ ಪಾಥರಿಕುನ್ನತ್ ಮನ (ಒಟ್ಟಪ್ಪಳಂ ತಾಲೂಕು)

೦೩. ಆ ಮೇಡ ಇಲ್ಲಂ, ಉದಯಂ ಪೆರೂರು ಸಮೀಪ (ಕನ್ನನೂರು ತಾಲೂಕು)

೦೪. ಕೋಲಪುರುಂ ಇಲ್ಲಂ ಉದಿಯಂ ಪೂರು ಸಮೀಪ (ಕನ್ನನೂರು ತಾಲೂಕು)

೦೫. ನಾಗನ್ ಪ್ಪೋಜಿ (ಳ) ಮನ (ವೈಕಂ ತಾಲೂಕು)

೦೬. ಪರಂಬೂರ್ ಮನ (ಕೊಟ್ಟಾಯಂ ತಾಲೂಕು)

೦೭. ಮನ್ನಾರ ಶಾಲ ಇಲ್ಲಂ (ಕಾರ್ತಿಕ ಪ್ಪಲ್ಲಿ ತೂಲೂಕು)

೦೮. ವೆಟ್ಟಿಕೋಡ್ ಮನ (ಮಾಮಕರ ತಾಲೂಕು)

೦೯. ನಾಗರಕೋವಿಲ್-ನಾಗರಾಜ ಕ್ಷೇತ್ರ ಕನ್ಯಾಕುಮಾರಿ ಜಿಲ್ಲೆ

ಮೊದಲಾದ ನಾಗಾಲಯಗಳು ಅತೀ ಪ್ರಾಚೀನ ಕ್ಷೇತ್ರಗಳೆಂದು ಭಾವಿಸಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿರುವ ಕೆಲವು ಪ್ರಸಿದ್ಧ ನಾಗಾಲಯಗಳ ಕುರಿತು ಉಲ್ಲೇಖಿಸಲಾಗುವುದು. ಅಧ್ಯಯನದ ಈ ಭಾಗವು ಸಂಪೂರ್ಣ ಕ್ಷೇತ್ರಾಧಾರಿತವಾದುದು ಮತ್ತು ವಕ್ತೃಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಒಳಗೊಂಡಿರುತ್ತದೆ.

೫.೪.೧ ಪಾಂಬು ಮೇಕ್ಕಾಡ್ ಮನ

'ಪಾಂಬು ಮೇಕಾಡ್ ಮನ' ಕೇರಳದ ಸುಪ್ರಸಿದ್ಧವಾದ ನಾಗಾರಾಧನೆ ಕೇಂದ್ರವಾಗಿದೆ. ಮತ್ತು ಕೇರಳದ ನಾಗಾರಾಧನೆಯ ಪ್ರಧಾನ ಕೇಂದ್ರಸ್ಥಾನವಾಗಿದ್ದು. ಒಂದು ಕೌಟುಂಬಿಕ ದೇವಾಲಯವಾಗಿದೆ. ಈ ದೇವಾಲಯ ತ್ರಿಶೂರ್ ಜಿಲ್ಲೆಯ 'ಮುಕುಂದಪುರ' ತಾಲೂಕಿನ 'ವಡಮ' ಎಂಬ ಗ್ರಾಮದಲ್ಲಿದೆ. ಇಲ್ಲಿಗೆ ಭಕ್ತಾದಿಗಳು ಭಕ್ತಿ ಮತ್ತು ವ್ರತ, ನಿಷ್ಠೆಯಿಂದ ಬಂದು ದೇವರ ದರ್ಶನ ಪಡೆಯುತ್ತಾರೆ. ಮನೆಯ ಪೂರ್ವಭಾಗದಲ್ಲಿ 'ಕಿಯಕ್ಕಿನಿ' ಎಂದು ಕರೆಯಲ್ಪಡುವಲ್ಲಿ ನಾಗಸಾನ್ನಿಧ್ಯವಿದೆ. ನಾಗ ಸಾನಿಧ್ಯವಿರುವ ಮನೆಯು ಚಚ್ಚೌಕವಾಗಿದೆ. ಕಿಯಕ್ಕಿನಿಯ ವಿಶೇಷತೆಯೆಂದರೆ ಅಲ್ಲಿ ವಿಗ್ರಹ ಪ್ರತಿಷ್ಠೆ ಇಲ್ಲ. ಸದಾ ನಂದಾದೀಪ ಉರಿಯುತ್ತಿರುತ್ತದೆ. ಕಿಯಕ್ಕಿನಿಯಲ್ಲಿ ನಾಗದೇವತೆಗಳಿಗೆ ನಿತ್ಯ ಪೂಜೆ ನಡೆಯುತ್ತದೆ. ಮನೆಯ ಸುತ್ತಲೂ ನಾಗ ಪ್ರತಿಮೆಗಳಿರುವ ಐದು ನಾಗಕಾವು ಸಂಕೀರ್ಣಗಳಿವೆ. ಇಲ್ಲಿ 'ನಾಗರಾಜ' 'ನಾಗಯಕ್ಷಿ'ಯನ್ನು ಹಳೆಯ ತರವಾಡು ಮನೆಯಲ್ಲಿಯೇ ಪೂಜಿಸಲಾಗುತ್ತದೆ. ಈ ನಾಗಲಯ ಪ್ರಸಿದ್ಧವಾದ 'ಮೇಕಾಡ್ ಮನ' ನಂಬೂದಿರಿಗಳ ಒಡೆತನದಲ್ಲಿದೆ. ಪೂರ್ವದಲ್ಲಿ ಈ ಮನೆತನಕ್ಕೆ ಮೇಕಾಟ್ಟು ಮನ ಎಂಬ ಹೆಸರಿತ್ತು. ಇಲ್ಲಿಗೆ 'ಪಾಂಬು ಮೇಕಾಡ್ ಮನ' ಎಂಬ ಹೆಸರಾದುದಕ್ಕೆ ಒಂದು ಪ್ರಸಿದ್ಧವಾದ ಐತಿಹ್ಯ ಪ್ರಚಲಿತದಲ್ಲಿದೆ. ಮಲೆಯಾಳಿ ಭಾಷೆಯಲ್ಲಿ 'ಪಾಂಬು' ಎಂದರೆ ಹಾವು ಎಂದರ್ಥ.

ಪುರಾತನದಲ್ಲಿ ಈ ಮನೆತನದಲ್ಲಿ ಈಶ್ವರ ಭಕ್ತರೂ, ಮಂತ್ರ, ತಂತ್ರ ಪ್ರಾವೀಣ್ಯರೂ ಆಗಿದ್ದ ನಂಬೂದಿರಿ ಬ್ರಾಹ್ಮಣರು ವಾಸವಾಗಿದ್ದರು. ಆದರೆ ಮನೆಯಲ್ಲಿ ತುಂಬ ಬಡತನವಿತ್ತು. ಮನೆಯ ದಾರಿದ್ರ್ಯ ನಿವಾರಣೆಗಾಗಿ ಯಜಮಾನನಾದ ಬ್ರಾಹ್ಮಣನು ನೆರೆಯ 'ತಿರುವಂಜಿ ಕುಳ' ಮಹಾದೇವ ಮಂದಿರದಲ್ಲಿ ಭಕ್ತಿ ಪೂರ್ವಕವಾಗಿ

ಭಜನೆ ಮಾಡಲಾರಂಭಿಸಿದನು. ಈ ರೀತಿ ನಿರಂತರ ಹನ್ನೆರಡು ವರ್ಷಗಳ ವರೆಗೆ ಭಜನೆ ನಡೆಸಿದನು. ಒಂದು ದಿನ ಕ್ಷೇತ್ರದಲ್ಲಿ ಸಂಜೆಯ ಪೂಜೆ ಮುಗಿಸಿ ಎಲ್ಲರೂ ಹೋದ ನಂತರ ನಂಬೂದಿರಿಯು ನೀರು ತರಲೆಂದು ಸಮೀಪದ ಕೆರೆಯ ಬಳಿಗೆ ಹೋದನು. ಆಗ ಅಲ್ಲಿ ಅವನು ಓರ್ವ ತೇಜಸ್ವಿಯಾದ ವ್ಯಕ್ತಿಯನ್ನು ಕಂಡನು. ಆ ವ್ಯಕ್ತಿಯ ಕೈಯಲ್ಲಿ ಹೊಳೆಯುವ ಪ್ರಕಾಶಮಾನವಾದ ವಸ್ತುವೊಂದನ್ನು ಕಂಡು ನಂಬೂದಿರಿಯು ಆ ವ್ಯಕ್ತಿಯನ್ನು ಕುರಿತು ನೀವು ಯಾರೆಂದು ಕೇಳಿದನು. ಆಗ ವ್ಯಕ್ತಿಯು ''ನಾನು ಯಾರಾದರೆ ಮೆಯ್‌ಕಾಡ್‌ಗೆ ಏನಾಗಬೇಕು? ನೀರು ಬೇಕಾದರೆ ತೆಗೆದುಕೊಂಡು ಹೋಗು'' ಎಂದು ಹೇಳಿತು. ಮಾತಿನಲ್ಲೂ ತೇಜಸ್ಸಿನಲ್ಲೂ ಆ ವ್ಯಕ್ತಿ ಸಾಮಾನ್ಯನಲ್ಲವೆಂದು ಗಮನಿಸಿದ ನಂಬೂದಿರಿಯು ಸುಮ್ಮನೆ ನಿಂತನು. ಆಗ ಆ ದಿವ್ಯ ಪುರುಷನ ಕೈಯಲ್ಲಿ ಬೆಂಕಿಯಂತೆ ಹೊಳೆಯುವ ವಸ್ತುವನ್ನು ಕಂಡು ನಂಬೂದಿರಿಯು ಅದು ಏನು? ಎಂದು ಪ್ರಶ್ನಿಸಿದನು. ಅದಕ್ಕೆ ಸಮರ್ಪಕವಾದ ಉತ್ತರ ಹೇಳದ ಆ ಪುರುಷನು ''ಮೆಯ್‌ಕಾಡು ಮಾಣಿಕ್ಯವನ್ನು ನೋಡಿದ್ದೀಯಾ'' ಎಂದು ಕೇಳಿತು. ಇಲ್ಲವೆಂದು ನಂಬೂದಿರಿಯು ಉತ್ತರಿಸಿದನು. ನೋಡು ಎಂದು ದಿವ್ಯ ಪುರುಷನು ನಂಬೂದಿರಿಗೆ ಹೊಳೆಯುವ ಮಾಣಿಕ್ಯದ ಕಲ್ಲನ್ನು ನೀಡುತ್ತಾನೆ. ರತ್ನವನ್ನು ನೋಡಿದ ನಂಬೂದಿರಿಯು ಇದನ್ನು ಊರಿನ ರಾಜನಿಗೆ ತೋರಿಸಿ ಕೂಡಲೇ ಹಿಂದಕ್ಕೆ ತರುತ್ತೇನೆ ಎಂದು ಕೇಳಿಕೊಳ್ಳುತ್ತಾನೆ. ಕೂಡಲೇ ಬರಬೇಕೆಂದೂ, ನಾನು ಹೆಚ್ಚು ಕಾಯುವುದಿಲ್ಲವೆಂದು ಹೇಳಿ ಆ ದಿವ್ಯ ಪುರುಷನು ನಂಬೂದಿರಿಗೆ ಮಾಣಿಕ್ಯವನ್ನು ತಿರುಗಿ ನೀಡುತ್ತಾನೆ.

ಬಳಿಕ ಊರಿನ 'ತಂಬುರಾನ್'ನಿಗೆ ಆ ಮಾಣಿಕ್ಯವನ್ನು ನಂಬೂದಿರಿಯು ತೋರಿಸುತ್ತಾನೆ. ಅದನ್ನು ನೋಡಿದ ತಂಬುರಾನ್ ರಾಜನು ಅದಕ್ಕೆ ಎಷ್ಟು ಬೆಲೆಯಾದರೂ ನಾನು ಕೊಡುತ್ತೇನೆ, ಇದು ನನಗೆ ಬೇಕು ಎಂದು ಹೇಳುತ್ತಾನೆ. ಆಗ ನಂಬೂದಿರಿಯು ನಾನು ಮಾತು ಕೊಟ್ಟಂತೆ ಹಿಂದಿರುಗಿಸದಿದ್ದರೆ ನನ್ನ ಸತ್ಯಕ್ಕೆ ಭಂಗ ಉಂಟಾಗುತ್ತದೆ, ಆದ್ದರಿಂದ ಇದನ್ನು ನಿನಗೆ ಕೊಡಲಾಗುವುದಿಲ್ಲ ಎಂದು ಹೇಳಿ ಮಾಣಿಕ್ಯವನ್ನು ಹಿಂದಕ್ಕೆ ಪಡೆದುಕೊಂಡನು.

ಬಳಿಕ ನಂಬೂದಿರಿಯು ಹಿಂತಿರುಗಿ ಬಂದು ಮಾಣಿಕ್ಯವನ್ನು ದಿವ್ಯ ಪುರುಷನಿಗೆ ಹಿಂತಿರುಗಿಸಿದನು. ಮಾಣಿಕ್ಯವನ್ನು ತೆಗೆದುಕೊಂಡು ಆ ದಿವ್ಯ ಪುರುಷನು ಅದೃಶ್ಯನಾದನು. ಅಲ್ಲಿಯವರೆಗೆ ಆ ಪ್ರದೇಶದಲ್ಲೆಲ್ಲ ಇದ್ದ ತೇಜಸ್ಸು ಎಲ್ಲ ಮಾಯವಾಗಿ ಎಲ್ಲೆಲ್ಲೂ ಕತ್ತಲೆ ಆವರಿಕೊಂಡಿತು. ಬಳಿಕ ಕತ್ತಲೆಯಲ್ಲೇ ಸುಧಾರಿಸಿಕೊಂಡು ನಂಬೂದಿಯು ನೀರು ತೆಗೆದುಕೊಂಡು ಮನೆಗೆ ಬಂದನು. ರಾತ್ರಿಯೆಲ್ಲ ಈ ಚಿಂತೆಯಲ್ಲೇ ನಿದ್ದೆ ಬಾರದೆ ಒದ್ದಾಡಿದ. ಸ್ವಲ್ಪ ಹೊತ್ತಿನಲ್ಲಿಯೇ ಬೆಳಕಾದಂತೆ ಎಲ್ಲೆಲ್ಲೂ ಪ್ರಕಾಶಮಾನವಾದ ಬೆಳಕು ಕಂಡು ಬೆಳಗಾಯಿತೆಂದು ನಂಬೂದಿರಿ ಭಾವಿಸಿದನು. ಸ್ನಾನಕ್ಕೆ ಮತ್ತು ಭಜನೆಗೆ ಹೊತ್ತಾಯಿತೆಂದು ತಿಳಿದು ಎದ್ದು ಹೊರಗೆ ಕೊಳದ ಸಮೀಪಕ್ಕೆ ಬಂದನು. ಆಗ ಅದೇ ಕೊಳದ ಸಮೀಪದಲ್ಲಿ ತೇಜಸ್ವಿಯಾದ ಅದೇ ದಿವ್ಯ ಪುರುಷನು ನಂಬೂದಿರಿಯನ್ನು ಕುರಿತು ''ಮೆಯಕಾಟ್ಟುವಿನ ಸ್ನಾನಕ್ಕೆ ಸಮಯವಾಗಲಿಲ್ಲ, ಹೋಗಿ ಮಲಗು ಬೆಳಿಗ್ಗೆ ಬೇಗ ಎದ್ದು ಸ್ನಾನಮಾಡು'' ಎಂದು ಹೇಳಿತು. ಇದನ್ನು ಕೇಳಿದ ನಂಬೂದಿರಿಯು ಇದು ಯಾರೋ ದಿವ್ಯ ಪುರುಷನೇ ಇರಬೇಕೆಂದು ತಿಳಿದು ಆ ವ್ಯಕ್ತಿಗೆ ಉದ್ದಂಡ ನಮಸ್ಕರಿಸಿ ನೀನು ಯಾರೆಂದು ದಯವಿಟ್ಟು ನಿಜ ಹೇಳಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಆಗ ಆ ತೇಜಸ್ವಿಯು ಬೇರೆ ದಾರಿ ಕಾಣದೆ 'ನಾನು ನಾಗರಾಜ ವಾಸುಕಿ' ಎಂದು ನಿಜ ಹೇಳುತ್ತಾನೆ. ಕೂಡಲೇ ನಂಬೂದಿರಿಯು ತಾವು ತಮ್ಮ ನಿಜ

ಸ್ವರೂಪವನ್ನು ನನಗೆ ತೋರಿಸಬೇಕೆಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ವಾಸುಕಿಯು ಬೇಡವೆಂದು ನೀನು ನನ್ನ ನಿಜ ಸ್ವರೂಪವನ್ನು ನೋಡಿದರೆ ಭಯಗೊಳ್ಳುತ್ತೀಯೆಂದೂ ಹೇಳುತ್ತಾನೆ. ಬ್ರಾಹ್ಮಣನು ಒತ್ತಾಯಮಾಡಿದಾಗ ವಾಸುಕಿಯು ಪರಮೇಶ್ವರನ ಕೈಯ ಬೆರಳಿನ ಉಂಗುರದಷ್ಟು ಚಿಕ್ಕದಾಗಿ ತನ್ನ ಸ್ವರೂಪವನ್ನು ತೋರಿಸಿದನು. ಇದನ್ನು ನೋಡಿ ಬ್ರಾಹ್ಮಣನು ಮೂರ್ಚೆಹೋದನು. ಸ್ವಲ್ಪ ಸಮಯದ ಬಳಿಕ ನಂಬೂದಿರಿಗೆ ಪ್ರಜ್ಞೆ ಮರಳಿದ ಮೇಲೆ ವಾಸುಕಿಯು ಏನು ವರಬೇಕೆಂದು ಕೇಳಿದನು, ಅದಕ್ಕೆ ಬ್ರಾಹ್ಮಣನು ಬೇರೇನು ಬೇಡ ನಿಮ್ಮ ಸಾನ್ನಿಧ್ಯ ನನ್ನ ಮನೆಯಲ್ಲಿ ಸದಾ ಇರಬೇಕು. ತಾವು ನನ್ನ ಮನೆಯಲ್ಲಿದ್ದು ನನ್ನ ದಾರಿದ್ರ್ಯ ನಿವಾರಣೆಯಾಗಬೇಕು ಎಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ವಾಸುಕಿಯು ಒಪ್ಪಿ ಮೆಯಕಾಟ್ಟುವಿನ ೧೨ ವರ್ಷಗಳ ಭಜನೆ ಮುಗಿಯಲು ಇನ್ನು ಮೂರು ದಿನ ಬಾಕಿ ಇದೆ. ಮೂರು ದಿವಸ ಇಲ್ಲಿದ್ದು ಭಜನೆ ಮುಗಿಸಿ ನಿನ್ನ ಮನೆಗೆ ಹೋಗು. ಅಷ್ಟರಲ್ಲಿ ನಾನು ಅಲ್ಲಿಗೆ ಬಂದು ನಿನ್ನ ಇಷ್ಟವನ್ನೆಲ್ಲ ಪೂರ್ಣಗೊಳಿಸುತ್ತೇನೆ ಎಂದು ಹೇಳಿ ನಂಬೂದಿರಿಯನ್ನು ಸ್ನಾನಕ್ಕೆ ಕಳುಹಿಸಿ ವಾಸುಕಿಯು ಮರೆಯಾದನು.

ನಂಬೂದಿರಿಯು ಮೂರು ದಿನಗಳ ಭಜನೆಯನ್ನು ಮುಗಿಸಿ ತನ್ನ ಮನೆಯನ್ನು ಸೇರಿದನು. ತನ್ನ ಓಲೆ ಕೊಡೆಯನ್ನು ಕೆರೆಯ ದಂಡೆಯಲ್ಲಿಟ್ಟು ಸ್ನಾನಾದಿಗಳನ್ನು ಪೂರೈಸಿ ಕೊಡೆಯ ಬಳಿಗೆ ಬಂದಾಗ ಅಲ್ಲಿ ಹಾವನ್ನು ಕಂಡು ಭಯ ಭೀತನಾಗುತ್ತಾನೆ. ಕೊಡೆಯಲ್ಲಿದ್ದ ಹಾವು ಕೂಡಲೇ ಕೆಳಗಿಳಿದು ತನ್ನ ದಿವ್ಯ ರೂಪವನ್ನು ತೋರಿಸಿ ನಾನು ಅದೇ ವಾಸುಕಿಯೆಂದೂ ನಾನು ನಿನ್ನೊಂದಿಗೆ ಬರುತ್ತೇನೆಂದು ಹೇಳಿತು. ನಿನ್ನ ಶ್ರದ್ಧೆ ಮತ್ತು ಭಕ್ತಿಯಿಂದ ಪರಮೇಶ್ವರನು ಸಂತುಷ್ಟನಾಗಿದ್ದಾನೆ ಎಂದು ಹೇಳಿ ತನ್ನ ಕೈಯಲ್ಲಿರುವ ಮಾಣಿಕ್ಯವನ್ನು ಅವನಿಗೆ ನೀಡಿ, ಇದರಿಂದ ನಿನ್ನ ಬಡತನ ನಿವಾರಣೆಯಾಗುತ್ತದೆಂದೂ, ಇದಿರುವಲ್ಲಿ ಬಡತನ, ದಾರಿದ್ರ್ಯ ಸುಳಿಯುವುದಿಲ್ಲವೆಂದು ಹೇಳಿತು. ಬಳಿಕ ಇದನ್ನು ಜೋಪಾನವಾಗಿಟ್ಟುಕೋ, ಇನ್ನು ಇಲ್ಲಿ ನಾಗಯಕ್ಷಿಯೂ ಬಂದು ಸೇರಿಕೊಳ್ಳುತ್ತಾಳೆ. ಆಗಲೂ ನೀನು ಹೆದರಬೇಕಾಗಿಲ್ಲ ಎಂದು ಹೇಳಿತು.

ಇಷ್ಟು ಹೇಳಿದಾಗ ಆ ಮನೆಯ ಹಿರಿಯ ಸ್ತ್ರೀ 'ಅಂತಃರ್ಜನಂ' ಮನೆಗೆ ಬಂದಳು. ಮನೆಗೆ ಬಂದವಳೇ ತನ್ನ 'ತಾಳೆ'ಯ ಕೊಡೆಯನ್ನು ಚಾವಡಿಯಲ್ಲಿರಿಸಿ ಒಳಗೆ ಹೋದಳು, ಆಗ ಆ ಕೊಡೆಯಿಂದ ಒಂದು ಹಾವು ಇಳಿದು 'ಕಿಯಕ್ಕಿನಿ'ಯನ್ನು ತಲುಪಿತು. ಆ ಹಾವು ದಿವ್ಯ ಹೆಂಗಸಿನ ರೂಪ ಧರಿಸಿ ವಾಸುಕಿಯ ಬಳಿಗೆ ಹೋಯಿತು. ಆಗ ವಾಸುಕಿಯು ನಂಬೂದಿರಿಗೆ ನಮ್ಮಿಬ್ಬರನ್ನು ಕಿಯಕ್ಕಿಣಿಯಲ್ಲಿ ಪ್ರತಿಷ್ಠಾಪಿಸಿ ನಮ್ಮನ್ನು ಕುಟುಂಬ ದೇವತೆಗಳೆಂದು ಭಾವಿಸಿ ಪೂಜಿಸಬೇಕೆಂದು ಹಾಗೆ ಮಾಡಿದರೆ ಇಲ್ಲಿ ಮುಂದಕ್ಕೆ ಸಂಪತ್ತು ಶ್ರೇಯಸ್ಸುಗಳು ಉಂಟಾಗುವುದೆಂದು ಹೇಳಿತು. ವಾಸುಕಿಯ ನಿರ್ದೇಶನದಂತೆ ನಂಬೂದಿರಿಯು ವಾಸುಕಿಯನ್ನು ನಾಗಯಕ್ಷಿಯನ್ನು ಮನೆಯಲ್ಲಿ ಪ್ರತಿಷ್ಠಾಪಿಸಿದನು. ಅಂದಿನಿಂದ ಮೇಕಾಡ್ ಮನೆಯು 'ಪಾಂಬು ಮೇಕಾಡ್ ಮನೆ' ಯಾಯಿತು. ವಾಸುಕಿ ಮತ್ತು ನಾಗಯಕ್ಷಿ ಈ ಮನೆಯ ಕುಟುಂಬದ ಕುಲದೇವತೆಗಳಾದರು.

ನಂಬಿಕೆಗಳು: ಪಾಂಬುಮೇಕಾಡ್ ನಾಗಾಲಯಕ್ಕೆ ಇಲ್ಲಿಯದೇ ಆದ ಕೆಲವು ನಂಬಿಕೆ ಮತ್ತು ಆಚರಣೆಗಳಿವೆ. ಕ್ಷೇತ್ರಕ್ಕೆ ದಿನವೂ ನೂರಾರು ಮಂದಿ ನಾಗದೋಷ ಪರಿಹಾರಕ್ಕಾಗಿ ಆಗಮಿಸುತ್ತಾರೆ. ಇಲ್ಲಿಗೆ ಬರುವ ಭಕ್ತಾದಿಗಳು

ಇಲ್ಲಿಯ ಪಾವಿತ್ರ್ಯತೆ ಮತ್ತು ಶುದ್ಧಾಚಾರಗಳನ್ನು ಪಾಲಿಸಬೇಕಾಗುತ್ತದೆ. ಮನೆಯ ಸಮೀಪ ಎರಡು ಕೆರೆಗಳಿವೆ ಒಂದು ಬ್ರಾಹ್ಮಣ ವರ್ಗಕ್ಕೆ ಮತ್ತೊಂದು ಬ್ರಾಹ್ಮಣೇತರರ ಸ್ನಾನಕ್ಕೆ. ಇಲ್ಲಿಗೆ ಬರುವ ಭಕ್ತಾದಿಗಳು ಈ ಕೆರೆಗಳಲ್ಲಿ ಸ್ನಾನ ಮಾಡಿ ಸಮೀಪದಲ್ಲಿರುವ ಮನೆಗೆ ಒದ್ದೆ ಬಟ್ಟೆಯಲ್ಲೇ ಬರಬೇಕಾಗುತ್ತದೆ. ಹಿಂದು ವೇತರರಿಗೆ ಇಲ್ಲಿ ಪ್ರವೇಶವಿಲ್ಲ. ವಿಶೇಷ ದಿನಗಳಲ್ಲಿ ಎಲ್ಲ ವರ್ಗದವರಿಗೆ ನಾಗ ಸಂಕೀರ್ಣವಿರುವಲ್ಲಿವರಿಗೆ ಪ್ರವೇಶಾವಕಾಶವಿದೆ. ಉಳಿದ ದಿನಗಳಲ್ಲಿ ಕೇವಲ ಮೇಲ್ವರ್ಗದವರಿಗೆ ಮಾತ್ರ ಪ್ರವೇಶವಿದೆ. ಇದು ಇಲ್ಲಿಯ ಸಂಪ್ರದಾಯ.

ಈ ಪರಿಸರದಲ್ಲೆಲ್ಲ ಸರ್ಪಗಳು ಸುತ್ತಾಡುತ್ತಿರುತ್ತವೆ ಎಂದು ಪ್ರತೀತಿ ಇದೆ. ಅವುಗಳ ವಾಸಕ್ಕಾಗಿಯೇ ವಿಶಾಲವಾದ ಬನಗಳನ್ನು ಸಂರಕ್ಷಿಸಿಡಲಾಗಿದೆ. ಇಲ್ಲಿರುವ ನಂಬಿಕೆಯ ಪ್ರಕಾರ ಈ ಮನೆ ಮತ್ತು ಹಿತ್ತಲು, ಹಾವುಗಳ ವಾಸಕೇಂದ್ರವೆಂದು ಭಾವಿಸಲಾಗಿದೆ. ಸುತ್ತಮುತ್ತಲಿನ ಪರಿಸರದಲ್ಲಿ ಯಾವುದೇ ರೀತಿಯ ಅಶುದ್ಧ ನಡೆಯಬಾರದೆಂಬ ಪ್ರತೀತಿ ಇದೆ. ನೆಲ ಅಗೆಯುವಂತಿಲ್ಲ, ಪಕ್ಕದಲ್ಲಿರುವ ಉಪಭವನದಲ್ಲೇ ವಿಶೇಷ ಆಚರಣೆಗಳನ್ನೆಲ್ಲ ನಡೆಸಲಾಗುತ್ತದೆ. ಇಲ್ಲಿ ಕಂಡು ಬರುವ ಹಾವುಗಳು ಕಚ್ಚಿದರೂ ಮನೆಯವರಿಗೆ ವಿಷ ಬಾದೆ ತಟ್ಟುವುದಿಲ್ಲ, ಬದಲಾಗಿ ಆ ಹಾವುಗಳಿಗೇ ವಿಷಬಾದೆ ತಟ್ಟಬಹುದು ಎಂದು ನಂಬಿಕೆಯಿದೆ. ನಾಗರಾಜ ಮತ್ತು ನಾಗಯಕ್ಷಿಯರನ್ನು ಪ್ರತಿಷ್ಠಾಪಿಸಿದ 'ಕಿಯಕ್ಕಿಣಿ'ಯಲ್ಲಿ ಎರಡು ದೀಪಗಳನ್ನು ಸದಾ ಉರಿಸಲಾಗುತ್ತದೆ. ಆ ದೀಪಗಳ ಮಸಿ, ಹಾಗೂ ಎಣ್ಣೆ ಸರ್ಪ ಕೋಪದಿಂದ ಉಂಟಾಗುವ ಚರ್ಮವ್ಯಾದಿಗಳಿಗೆ ಸಿದ್ಧೌಷದವೆಂದು ಭಾವಿಸಲಾಗಿದೆ. ಇಲ್ಲಿ ವಿಶಿಷ್ಟವಾದ ಒಂದು ಪಾರಂಪರಿಕ ನಂಬಿಕೆ ಪ್ರಚಲಿತದಲ್ಲಿದೆ. ಕುಟುಂಬದ ಮನೆಯಲ್ಲಿ ಒಂದು ಮಗು ಜನಿಸಿದರೆ ಆ ಮಗುವನ್ನು ಸ್ವೀಕರಿಸಲು ನಾಗಗಳೆಲ್ಲವೂ ಬರುತ್ತವೆಂದೂ, ಮನೆಯಲ್ಲಿ ಒಂದು ಮೃತ್ಯುವಾದರೆ ಒಂದು ನಾಗವೂ ಸಹ ಜೊತೆಯಲ್ಲಿ ಸಾಯುತ್ತದೆಂದು, ಸತ್ತು ಹೋದ ನಾಗವನ್ನು ದಹನ ಮಾಡಿದ ನಂತರವೇ ತೀರಿ ಹೋದ ನಂಬೂದಿರಿಯ ಚಿತೆಗೆ ಅಗ್ನಿ ಸ್ಪರ್ಷ ಮಾಡಬೇಕೆನ್ನುವ ನಂಬಿಕೆಯಿದೆ.

ಆಚರಣೆಗಳು: ಪಾಂಬು ಮೇಕಾಡ್ ಕೌಟುಂಬಿಕ ನಾಗದೇವಾಲಯದಲ್ಲಿ ಪುರಾತನದಿಂದಲೂ ಹಲವಾರು ಆಚರಣೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಇಲ್ಲಿಯ ಅಧಿಕಾರ ತಂದೆಯಿಂದ ಮಗನಿಗೆ ವಂಶಪಾರಂಪರ್ಯವಾಗಿ ಹರಿದು ಬರುತ್ತದೆ. ತಲೆ ತಲಾಂತರದಿಂದ ನಡೆದುಕೊಂಡು ಬಂದಿರುವ ಕೆಲವು ನಂಬಿಕೆ ಮತ್ತು ಆಚರಣೆಗಳನ್ನು ಈಗಲೂ ಕಟ್ಟುನಿಟ್ಟಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ನಂಬಿಕೆ ಆಚರಣೆಗಳೆಲ್ಲವೂ ಯಥಾವತ್ತಾಗಿ ಮುಂದಿನ ತಲೆಮಾರಿಗೆ ಮುಂದುವರಿಯಬೇಕೆಂಬ ನಿಯಮವಿದೆ. ಆದರೆ ಪರಿಸ್ಥಿತಿಗೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಕೆಲವು ಆಚರಣೆಗಳನ್ನು ಸಡಿಲಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ಎಣ್ಣೆಯಲ್ಲಿ ನೋಡುವುದು: ಮನೆಯ ಕಿಯಕ್ಕಿಣೆಯಲ್ಲಿ ಸದಾ ಒಂದು ನಂದಾದೀಪ ಉರಿಯುತ್ತಿರುತ್ತದೆ. ದೀಪದ ಎಣ್ಣೆಯನ್ನು ತೆಗೆದು ಅದರಲ್ಲಿ ನೋಡುವುದರ ಮೂಲಕ ಸರ್ಪದೋಷದ ಬಗ್ಗೆ ಜ್ಯೋತಿಷ್ಯ ನುಡಿಯಲಾಗುತ್ತಿತ್ತು. ಸರ್ಪದೋಷದ ಬಗ್ಗೆ ಏನು ಪರಿಹಾರ ಮಾಡಬೇಕೆಂದು ಹೇಳಿಕೊಡುವಂಥ ಆರಾಧನೆ ಸಂಪ್ರದಾಯ ಇದಾಗಿತ್ತು. ಮನೆಯ ಹಿರಿಯ ಅಂತಃರ್ಜನಂ ಈ ಕಾರ್ಯವನ್ನು ನಡೆಸುತ್ತಿದ್ದರು. ಆದರೆ ಈಗ ಈ ಆಚರಣೆ ವಿರಳವಾಗುತ್ತಿದೆ.

ವಿಷವನ್ನು ತೆಗೆಯುವುದು: ಹಿಂದೆ ಹಾವು ಕಡಿತದಿಂದ ವಿಷವೇರಿರುವ ವ್ಯಕ್ತಿಗಳಿಗೆ ಈ ಮನೆಯ ನಂಬೂದಿರಿಗಳು ವಿಷವನ್ನು ತೆಗೆಯುತ್ತಿದ್ದರು. ನಂದಾದೀಪದ ಎಣ್ಣೆಯನ್ನು ಸರ್ಪವಿಷದ ಚಿಕಿತ್ಸೆಯಲ್ಲಿ ಬಳಸುತ್ತಿದ್ದರೆಂದು ತಿಳಿದುಬಂದಿದೆ. ಆದರೆ ಈಗ ವಿಜ್ಞಾನ ಮುಂದುವರಿದಿರುವುದರಿಂದ ಅದಕ್ಕೆ ಕೆಲವು ವ್ಯವಸ್ಥೆಗಳನ್ನು ಪಾಲಿಸಬೇಕಾಗಿರುವುದರಿಂದ ಈಗಿನ ತಲೆಮಾರಿನವರು ಇದನ್ನು ಪಾಲಿಸುತ್ತಿಲ್ಲ.

ನಾಗಬನ ಆವಾಹನೆ: ಕೇರಳದ ಯಾವುದೇ ಭಾಗದಲ್ಲಿರುವ ನಾಗ ಬನಗಳನ್ನು ಸ್ಥಳಾಂತರಿಸುವ, ವರ್ಗಾಯಿಸುವ ಅಧಿಕಾರ ಹಿಂದೆ ಪಾಂಬುಮೇಕಾಡ್ ನಂಬೂದಿರಿಗಳಿಗೆ ಸೀಮಿತವಾಗಿತ್ತು. ಅಂತಹ ಸಂದರ್ಭ ಬಂದಾಗ ಈ ಮನೆಯ ನಂಬೂದಿರಿಯು ಸಂಬಂಧಿಸಿದ ವ್ಯಕ್ತಿಯ ನಾಗಬನದಲ್ಲಿ ಬಂದು ಆವಾಹನೆಯನ್ನು ಮಾಡುವುದರ ಮೂಲಕ ಕಾರ್ಯವನ್ನು ನೆರವೇರಿಸುತ್ತಿದ್ದರು. ಆವಾಹನೆಯ ಬಳಿಕ ಆ ಬನವನ್ನು ವಿಸರ್ಜಿಸಿ ಅಲ್ಲಿರುವ ನಾಗಪ್ರತಿಮೆಗಳನ್ನು ಪಾಂಬುಮೇಕಾಡ್‌ಗೆ ಒಯ್ಯಲಾಗುತ್ತಿತ್ತು. ಅಲ್ಲಿ ಇಂತಹ ಸಾವಿರಾರು ವಿಭಿನ್ನ ರೀತಿಯ ನಾಗಪ್ರತಿಮೆಗಳು ದೇವಾಲಯದ ಸುತ್ತಲೂ ಕಂಡು ಬರುತ್ತವೆ. ಅಲ್ಲಿಗೆ ಕೊಂಡು ಹೋದ ನಂತರ ಈ ಪ್ರತಿಮೆಗಳಿಗೆ ಅಲ್ಲಿ ಯಾವುದೇ ರೀತಿಯ ಪೂಜೆ ಪುನಸ್ಕಾರಗಳು ನಡೆಯುವುದಿಲ್ಲ.

ಆವಾಹನೆಯು ಮೂರು ರೀತಿಯಲ್ಲಿ ನಡೆಯುತ್ತದೆ. ಒಂದು ಸ್ಥಳದಲ್ಲಿರುವ ನಾಗಬನನ್ನು ಸಂಪೂರ್ಣವಾಗಿ ಬೇರೊಂದು ಕಡೆ ವರ್ಗಾಯಿಸುವುದು, ಈಗಿರುವ ನಾಗಬನದ ವಿಸ್ತೀರ್ಣವನ್ನು ಕಡಿಮೆಗೊಳಿಸುವ ಅಥವಾ ಸಂಪೂರ್ಣವಾಗಿ ತೆರವುಗೊಳಿಸುವ ಸಂದರ್ಭ ಬಂದಾಗ, ಅಥವಾ ಒಂದು ಊರಿನ ಹಲವಾರು ನಾಗಬನಗಳನ್ನು ಒಟ್ಟು ಸೇರಿಸಿ ಒಂದೇ ನಾಗಬನವಾಗಿ ಪರಿವರ್ತನೆ ಮಾಡುವ ಸಂದರ್ಭ ಬಂದಾಗ ಪಾಂಬು ಮೇಕಾಡ್ ನಂಬೂದಿರಿಗಳು ಪ್ರಧಾನ ಪಾತ್ರ ವಹಿಸುತ್ತಾರೆ. ಈಗ ಭಾಗಶಃ ತ್ರಿಶೂರು ಮತ್ತಿತರ ಸುತ್ತ ಮುತ್ತಲಿನ ಜಿಲ್ಲೆಗಳ ಜನತೆ ಇವರನ್ನು ಅವಲಂಭಿಸುತ್ತಾರೆ. ಈ ರೀತಿ ತಂದಿರುವ ನಾಗಪ್ರತಿಮೆಗಳೆಲ್ಲ ಪಾಂಬುಮೇಕಾಡ್ ಮನೆಯ ದಕ್ಷಿಣ ಭಾಗದಲ್ಲಿ ಸ್ಥಾಪಿಸಲಾಗಿದೆ. ಬಳಿಕ ಸಂಬಂಧಿಸಿದವರು ಇಲ್ಲಿಯೇ ಒಂದು ಸೇವೆಸಲ್ಲಿಸುತ್ತಿರುವುದು ಕಂಡುಬಂದಿದೆ.

ವಿಶೇಷ ಆರಾಧನ ದಿನಗಳು: ಪಾಂಬು ಮೇಕಾಡ್ ನಾಗಾಲಯದಲ್ಲಿ ವಿಶೇಷವಾಗಿ ಸರ್ಪದೋಷ ಪರಿಹಾರ ನಡೆಯುತ್ತದೆ. ನೆರೆಯ ರಾಜ್ಯಗಳಿಂದಲೂ ಭಕ್ತಾದಿಗಳು ಇಲ್ಲಿಗೆ ಆಗಮಿಸುತ್ತಾರೆ. ಇಲ್ಲಿ ಮೊದಲೇ ಸೂಚಿಸಿರುವಂತೆ ಕಟ್ಟುನಿಟ್ಟಾದ ಸಂಪ್ರದಾಯ ಮತ್ತು ಪದ್ಧತಿಗಳನ್ನು ಅನುಸರಿಸಲಾಗುತ್ತದೆ. ಇಲ್ಲಿ ಬರುವವರು ಇಲ್ಲಿಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ನಾಗದೋಷ ಪರಿಹಾರಕ್ಕಾಗಿ ಹಲವು ರೀತಿಯ ಸೇವೆಗಳನ್ನು ಮತ್ತು ಪರಿಹಾರಗಳನ್ನು ಇಲ್ಲಿ ನಡೆಸಲಾಗುತ್ತದೆ. ಪ್ರಧಾನವಾಗಿ ನಾಗಪ್ರತಿಷ್ಠೆ, ನೂರುಂ ಪಾಲುಂ, ಅಭಿಷೇಕ, ಪುಷ್ಪಾಂಜಲಿ, ಪ್ರತಿಮಾ ಪೂಜೆ, ಸರ್ಪಬಲಿ, ತುಲಾಭಾರ, ಚೋರುಣ್ ಇತ್ಯಾದಿಗಳನ್ನು ಭಕ್ತಾದಿಗಳ ಇಚ್ಛೆಯ ಮೇರೆಗೆ ನಡೆಸಲಾಗುತ್ತದೆ. ಸರ್ಪಬಲಿಯನ್ನು ಹರಕೆಯ ರೂಪದಲ್ಲಿ ದಿನವೂ ಸಂಜೆಯ ಹೊತ್ತು ನಡೆಸಲಾಗುತ್ತದೆ. ಸರ್ಪಗಳಿಗೆ ಪ್ರಿಯವಾದ ಕದಳೀ ಬಾಳೆಹಣ್ಣಿನ ನೈವೇದ್ಯ ನಡೆಯುತ್ತದೆ. ನೂರುಂ ಪಾಲುಂಗಳನ್ನು ವಿಶೇಷದಿನಗಳಲ್ಲಿ ಮಾತ್ರ ನಡೆಸುತ್ತಾರೆ. ನಾಮಕರಣ ಮೊದಲಾದ ಹರಕೆಗಳು ದಿನವೂ ನಡೆಯುತ್ತದೆ.

ವಿಶೇಷ ಆಚರಣೆಗಳು: ದೇವಾಲಯದಲ್ಲಿ ವರ್ಷದ ಕೆಲವು ತಿಂಗಳುಗಳು ಕೆಲವು ವಿಶೇಷ ಆಚರಣೆಗಳು ನಡೆಸಲ್ಪಡುತ್ತವೆ. ಕೆಲವು ದಿನಗಳನ್ನು ವಿಶೇಷ ದಿನಗಳೆಂದು ಗುರುತಿಸಲಾಗಿದೆ. ಪಾಂಬು ಮೇಕಾಡ್ ಮನೆಯ ಅತೀ ಪ್ರಧಾನವಾದ ವಿಶೇಷದಿನ ಕಾರ್ತಿಕಮಾಸದ ಒಂದನೇ ತಾರೀಕು ಅಂದು ಇಲ್ಲಿ ಸರ್ಪದೇವತೆಗಳ ಉತ್ಸವದ ದಿನ. ಅಂದು ಇಲ್ಲಿರುವ ಎಲ್ಲ ನಾಗಬನಗಳಲ್ಲೂ 'ನೂರುಂ ಪಾಲುಂ' ಆರಾಧನೆ ನಡೆಯುತ್ತದೆ. ಈ ದಿನದಿಂದ ತೊಡಗಿ ಮುಂದಿನ ೪೧ ದಿನಗಳವರೆಗೆ ಸಾಯಂಕಾಲ ಸರ್ಪಬಲಿ ನಡೆಸುತ್ತಾರೆ. ಇಲ್ಲಿ ವಿಶೇಷವಾಗಿ ಏಪ್ರಿಲ್ ತಿಂಗಳಲ್ಲಿ ಸರ್ಪಂಪಾಟ್ ನಡೆಸಲಾಗುತ್ತದೆ. 'ಕುರುಪ್' ಎನ್ನುವ ಪಂಗಡಕ್ಕೆ ಸೇರಿದವರು ಇದನ್ನು ನಡೆಸಿಕೊಡುತ್ತಾರೆ. ಪುಳ್ಳವನ್ ಪಾಟು ನಡೆಸಲಾಗುವುದಿಲ್ಲ. ಉಳಿದಂತೆ ಭಾದ್ರಪದ ಮಾಸದ ಆಶ್ಲೇಷ ನಕ್ಷತ್ರ, ಪಾಲ್ಗುಣ ಮಾಸದ ಶ್ರವಣ ನಕ್ಷತ್ರದಿಂದ ಭರಣಿ ನಕ್ಷತ್ರದವರೆಗಿನ ದಿನಗಳು ಮತ್ತು ಚೈತ್ರ ಮಾಸದ ೧ಂನೇ ತಾರೀಖಿನ ದಿನಗಳನ್ನು ವಿಶೇಷ ದಿನಗಳೆಂದು ಪರಿಗಣಿಸಲಾಗಿದೆ. ಇದರೊಂದಿಗೆ ಇನ್ನು ಕೆಲವು ವಿಶೇಷ ಹರಕೆಗಳನ್ನು ಇಲ್ಲಿ ಒಪ್ಪಿಸಲಾಗುತ್ತದೆ.

ಮೇಕಾಟ್ ನಂಬೂದಿರಿ ಮತ್ತು ನಾಗರಕೋಯಿಲ್: ಮೇಕಾಡ್ ನಂಬೂದಿರಿಗಳಿಗೂ ನಾಗರಕೋಯಿಲ್ ನಾಗರಾಜ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ಈಗ ತಮಿಳುನಾಡು ರಾಜ್ಯದ ಅಧೀನದಲ್ಲಿರುವ ನಾಗರಕೋಯಿಲ್ ಪೂರ್ವದಲ್ಲಿ ಕೇರಳದ ರಾಜರುಗಳ ಅಧೀನದಲ್ಲಿತ್ತು. ಈ ಕುರಿತಾದ ಪ್ರಚಲಿತ ನಂಬಿಕೆಯೊಂದು ಹೀಗಿದೆ.

ಆ ಸಂದರ್ಭದಲ್ಲಿ ಅಲ್ಲಿಯ ಓರ್ವ 'ಪಾಂಡ್ಯ' ರಾಜನಿಗೆ ಕುಷ್ಠರೋಗ ತಗುಲಿ, ಯಾವುದೇ ರೀತಿಯ ಚಿಕಿತ್ಸೆ ಮಾಡಿದರೂ ಗುಣವಾಗಲಿಲ್ಲ. ಹೀಗಿರುವಾಗ ಪಾಂಬು ಮೇಕಾಡ್ ನಂಬೂದಿರಿಯನ್ನು ರಾಜನ ಬಳಿಗೆ ಕರೆಸಿ ಚಿಕಿತ್ಸೆ ನಡೆಸಲಾಯಿತು. ಕ್ರಮೇಣ ರೋಗವು ಸಂಪೂರ್ಣವಾಗಿ ಗುಣಮುಖವಾಯಿತು. ನಂಬೂದಿರಿಯು ಚಿಕಿತ್ಸೆಯನ್ನು ನೆರವೇರಿಸಿ ಅಲ್ಲಿಂದ ಹಿಂದಿರುಗುವಾಗ ದಕ್ಷಿಣ ತಿರುವಾಂಕೂರಿನ ಪ್ರಧಾನ ನಗರವಾದ 'ನಾಗರ ಕೋವಿಲ್' ಎಂಬಲ್ಲಿ ಬರುವಾಗ ಮಾರ್ಗದಲ್ಲಿ ಒಂದು ಆರ್ತನಾದವನ್ನು ಕೇಳಿದನು. ಆ ರೋದನವನ್ನು ಗುರುತಿಸಿ ಅಲ್ಲಿಗೆ ಹೋದಾಗ ಅಲ್ಲಿ ಓರ್ವ ಸ್ತ್ರೀ ಕುಳಿತು ಅಳುತ್ತಿರುವುದು ಕಂಡುಬರುತ್ತಿತ್ತು. ಅವಳ ದುಃಖಕ್ಕೆ ಕಾರಣವನ್ನು ಕೆಳಿದಾಗ 'ಆಕೆ ಓರ್ವ ಚಂಡಾಲೆಯೆಂದೂ ಆ ಸ್ಥಳದಲ್ಲಿ ಹುಲ್ಲು ಕೋಯ್ಯುತ್ತಿರುವಾಗ ಕತ್ತಿಯು ಒಂದು ಶಿಲಾ ಪ್ರತಿಮೆಗೆ ತಗುಲಿ ಅದರಿಂದ ಗಾಯವಾಗಿ ರಕ್ತ ಹರಿಯಲಾರಂಭಿಸಿರುವುದನ್ನು ಗಮನಿಸಿ ಆಕೆ ರೋದಿಸತೊಡಗಿದಳು' ಎಂಬ ವಿಷಯ ನಂಬೂದಿರಿಗೆ ತಿಳಿದು ಬಂತು.

ನಂಬೂದಿರಿಯು ತನ್ನ ಸೇವಕರಿಂದ ಹುಲ್ಲನ್ನು ಕೀಳಿಸಿ ನೋಡಿದಾಗ ಅಲ್ಲೊಂದು ಐದು ಹೆಡೆಯ ಸರ್ಪದ ಪ್ರತಿಮೆಯಿರುವುದು ಕಂಡುಬಂದಿತು. ಆ ಪ್ರತಿಮೆಯ ಹೆಡೆಯ ಭಾಗದಲ್ಲಿ ರಕ್ತ ಪ್ರವಾಹವಾಗುತ್ತಿದ್ದು, ನಂಬೂದಿರಿಯು ತನ್ನ ಮಂತ್ರದ ಪ್ರಭಾವದಿಂದ ರಕ್ತ ಹರಿಯುವುದನ್ನು ನಿಲ್ಲಿಸಿದನು. ಬಳಿಕ ಆ ಹರಿಜನ ಸ್ತ್ರೀಗೆ ಸಮಾದಾನವನ್ನು ಹೇಳಿದನು. ನಂತರ ಸ್ಥಳೀಯ ಜನರನ್ನು ಸೇರಿಸಿಕೊಂಡು ಆ ನಾಗಪ್ರತಿಮೆಯನ್ನು ಅಲ್ಲೇ ಪ್ರತಿಷ್ಠಾಪಿಸಿ ಪೂಜೆಯನ್ನು ನೆರವೇರಿಸಿದನು. ಊರ ಜನತೆಗೆ ಆ ನಾಗ ಪ್ರತಿಮೆಯ ಮಹತ್ವವನ್ನು ತಿಳಿಹೇಳಿ, ಗ್ರಾಮವಾಸಿಗಳ ಸಹಾಯದಿಂದ ಅಲ್ಲೇ ಒಂದು ಗುಡಿಯನ್ನು ನಿರ್ಮಿಸಿದನು. ಅಂದಿನಿಂದ ಊರಿನ ಜನತೆ ಆ ದೇವಾಲಯವನ್ನು

'ನಾಗರ ಕೋವಿಲ್' ಎಂದು ಕರೆಯಲಾರಂಭಿಸಿದರು. ಬಳಿಕ ಆ ದೇವಾಲಯದ ವಾರ್ಷಿಕ ಪೂಜೆ ಮತ್ತು 'ತಂತ್ರ'ವನ್ನು ವರ್ಷಕ್ಕೊಂದಾವರ್ತಿ ಬಂದು ಆ ನಂಬೂದಿರಿಯು ನೆರವೇರಿಸಲಾರಂಭಿಸಿದನು. ಈ ಪರಂಪರೆ ಪ್ರಾಚೀನದಿಂದ ಇಂದಿನವರೆಗೂ ಅದೇ ರೀತಿ ಮುಂದುವರೆದಿದೆ. ಇಂದಿಗೂ ಕೂಡಾ ಅಲ್ಲಿಯ 'ತಂತ್ರ' ನಡೆಸುವ ಅಧಿಕಾರ ಪಾಂಬು ಮೇಕಾಡು ನಂಬೂದಿರಿಗಳಿಗೆ ಸೀಮಿತವಾಗಿದೆ.

ಒಟ್ಟಿನಲ್ಲಿ ಸರ್ಪದೇವರ ಅನುಗ್ರಹ, ಆಯಸ್ಸು, ಸಂಪತ್ತು, ಆರೋಗ್ಯಕ್ಕೋಸ್ಕರ, ಸಾವಿರಾರು ಭಕ್ತರು, ಪಾಂಬು ಮೇಕಾಡಿಗೆ ಆರಾಧನೆಗೋಸ್ಕರ ಬರುತ್ತಾರೆ. ಸರ್ಪದೋಷದಿಂದ ಬಳಲುವವರು ಇಲ್ಲಿಗೆ ಬಂದು ಸಾಂತ್ವನವನ್ನು ಪಡೆಯುತ್ತಾರೆ. ಭಕ್ತರ ಇಷ್ಟಾರ್ಥ ಕೈಗೂಡುವ ನಾಗಾಲಯ ಎಂಬ ನಂಬಿಕೆ ಇದೆ.

೫.೪.೨ ಮಣ್ಣಾರ ಶಾಲ

ಕೇರಳದ ಒಂದು ಪ್ರಸಿದ್ಧವಾದ ನಾಗಾರಾಧನಾ ಕೇಂದ್ರ. ಇದು ಅತಿ ಪುರಾತನವೂ, ನಾಗಾರಾಧಕರಿಗೆ ಅಭಯ ಕೇಂದ್ರವೂ ಆದ ಒಂದು 'ಸರ್ಪರಾಜ' ಕ್ಷೇತ್ರವಾಗಿದೆ. ಇಲ್ಲಿ ಶೈವ ಸಂಪ್ರದಾಯದಂತೆ ಆರಾಧನೆ ನಡೆಯುತ್ತದೆ. ಈ ಕ್ಷೇತ್ರವು 'ಅಲೆಪ್ಪಿ' ಜಿಲ್ಲೆಯ 'ಹರಿಪ್ಪಾಡ್' ನಿಂದ ಅನತಿ ದೂರದಲ್ಲಿದೆ. ಕ್ಷೇತ್ರದಲ್ಲಿ ಹಲವಾರು ವೈವಿಧ್ಯಪೂರ್ಣವಾದ ಮತ್ತು ವೈಶಿಷ್ಟ್ಯಪೂರ್ಣವಾದ ಆಚರಣೆಗಳು ನಡೆಯುತ್ತವೆ. ಇಲ್ಲಿಯ ವಿಶೇಷವೆಂದರೆ ಇಲ್ಲಿ ಪ್ರಧಾನ ಅರ್ಚಕಿ ಸ್ತ್ರೀ. ಇದು ಒಂದು ಕುಟುಂಬಕ್ಕೆ ಸಂಬಂಧಿಸಿದ ದೇವಾಲಯ. ಪ್ರಧಾನವಾಗಿ 'ನಾಗರಾಜ' ಗರ್ಭಗುಡಿಯಲ್ಲಿ ಪೂಜಿಸಲ್ಪಟ್ಟರೆ, ಕ್ಷೇತ್ರದ ನೈರುತ್ಯದಲ್ಲಿರುವ ಚಿತ್ರಕೂಟಗಳಲ್ಲಿ ನಾಗಚಾಮುಂಡಿ, (ನಾಗರಾಜನ ಸಹೋದರಿ) ಮತ್ತು ನಾಗಯಕ್ಷಿಯೂ (ನಾಗರಾಜನ ಪ್ರಿಯತಮೆಯಾಗಿ ಕಲ್ಪಿಸಲ್ಪಡುವ ದೇವತೆ) ಪೂಜಿಸಲ್ಪಡುತ್ತದೆ. ಈ ದೇವಾಲಯದ ಸಮೀಪವೇ ಅರ್ಚಕರ ಮನೆ ಮತ್ತು ಐತಿಹ್ಯ ಪ್ರಸಿದ್ಧವಾದ ನೆಲಮಾಳಿಗೆಯೂ ಇದೆ. ಇಲ್ಲಿ ನಾಗರಾಜನೊಂದಿಗೆ ಉಳಿದ ದೇವತೆಗಳಾದ ಶಿವ, 'ವಿಷ್ಣು', ಗಣಪತಿ, ಶಾಸ್ತವು, ದುರ್ಗಾ ಮುಂತಾದ ಉಪದೇವತೆಗಳ ಗುಡಿಗಳನ್ನು ದೇವಾಲಯದ ಸುತ್ತಮುತ್ತಲ ಪ್ರದೇಶದಲ್ಲಿ ಕಾಣಬಹುದು. ಈ ಕ್ಷೇತ್ರವು ವಿಶಾಲವಾದ ಅರಣ್ಯ ಪ್ರದೇಶಗಳಿಂದ, ವಿವಿಧ ರೀತಿಯ ಸರ್ಪ ಪ್ರತಿಮೆಗಳಿಂದ, ಔಷಧೀಯ ಗಿಡಗಳು ಹೆಮ್ಮರಗಳಿಂದ ಆವೃತವಾಗಿದೆ. ನೆಲಮಾಳಿಗೆಯ ವಾಯವ್ಯ ದಿಕ್ಕಿನಲ್ಲಿ 'ಅಪ್ಪೂಪ್ಪನ್ ಕಾವ್' ಎಂಬ ಕುಟುಂಬದವರು ಭಕ್ತಿಯಿಂದ ಕರೆಯುವ ಅನಂತನ ನೆಮ್ಮದಿಯ ವಿಹಾರತಾಣವಿದೆ. ಬಳಿಕ ಧರ್ಮ ಶಾಸ್ತಾವಿನ, ಹಾಗೂ ಭದ್ರಕಾಳಿಯ ನಿವಾಸಕೇಂದ್ರಗಳೂ, ಪ್ರತಿಷ್ಠೆಗಳೂ ಇವೆ. ಕ್ಷೇತ್ರಕೊಳದ ಉತ್ತರ ಭಾಗದಲ್ಲಿರುವ ಬಿಲ್ವಕಟ್ಟೆಯಲ್ಲಿ ನಾನಾ ರೀತಿಯ ನಾಗ ಪ್ರತಿಮೆಗಳನ್ನು ಕಾಣಬಹುದು. ಅಲ್ಲದೆ ನಾಗಾಲಯದ ಸುತ್ತ ಮತ್ತಲ ಪರಿಸರದಲ್ಲೆಲ್ಲ ಹಲವಾರು ರೀತಿಯ, ವಿಭಿನ್ನ ಶೈಲಿಯ ನಾಗಪ್ರತಿಮೆಗಳು ಕಂಡುಬರುತ್ತವೆ.

ಹಿನ್ನೆಲೆ: ಪ್ರಚಲಿತ ನಂಬಿಕೆಯ ಪ್ರಕಾರ ಪರಶುರಾಮನು ಇಲ್ಲಿ ಸರ್ಪಬನಗಳನ್ನು ನಿರ್ಮಿಸಿ ಸರ್ಪಗಳನ್ನು ತಂದಿರಿಸಿದ. ಬನದ ಮಧ್ಯದಲ್ಲಿ ನಾಗರಾಜನಾದ ವಾಸುಕಿಯನ್ನೂ, ಪತ್ನಿಯರಾದ ಸರ್ಪಯಕ್ಷಿ, ನಾಗಯಕ್ಷಿಯರನ್ನೂ, ಭಗಿನಿಯಾದ ನಾಗಚಾಮುಂಡಿಯನ್ನು ಪ್ರತಿಷ್ಠಾಪಿಸಿದ. ಕ್ಷೇತ್ರದ ಈಶಾನ್ಯ ಮೂಲೆಯಲ್ಲಿ ತನ್ನ ಆಯುಧವಾದ ಕೊಡಲಿಯಿಂದ ನೀರಿನ ಚಿಲುಮೆ ಉಕ್ಕಿಸಿ, ಅದರಲ್ಲಿ ಸ್ನಾನಮಾಡಿ, ತೀರ್ಥದಿಂದ ಭಗವಂತನಿಗೆ

ಅಭಿಷೇಕವನ್ನು ಮಾಡುವುದರೊಂದಿಗೆ ದೇವಾಲಯವನ್ನು ಪ್ರತಿಷ್ಠಾಪಿಸಿದನೆಂದು ಪ್ರತೀತಿ ಇದೆ. ಪ್ರತಿಷ್ಠಾ ಸಮಯದಲ್ಲಿ ಶೈವಾತ್ಮಕವಾದ ಶಕ್ತಿಗೆ ಪ್ರಾಧಾನ್ಯವು ಲಭಿಸಿದ್ದರಿಂದ ಶೈವಾರಾಧನಾ ಸಂಪ್ರದಾಯವನ್ನು ಅನುಸರಿಸುತ್ತಿರುವ ಅನುಷ್ಠಾನಗಳಿಗೆ ಇಲ್ಲಿ ಪ್ರಾಧಾನ್ಯತೆ ಇದೆ ಎಂದು ತಿಳಿದುಬಂದಿದೆ.

ಐತಿಹ್ಯ: 'ಮಣ್ಣಾರ್ ಶಾಲ' ಕುರಿತಾದ ಜನಜನಿತವಾದ ಐತಿಹ್ಯವೊಂದು ಪ್ರಚಲಿತದಲ್ಲಿದೆ. ಇದು ಸ್ಥಳನಾಮವಾಗಿಯೂ ಹೆಸರು ಪಡೆದುಕೊಂಡಿದೆ. 'ಮಣ್ಣಾರ್ ಶಾಲ' ಎಂದರೆ 'ಮಣ್ಣು ಆರಿದ ಸ್ಥಳ' ಎಂದರ್ಥ, ಇದರ ಕುರಿತಾದ ಐತಿಹ್ಯವು ಈ ರಿತಿ ಇದೆ.

'ಪುರಾಣ ಪುರುಷ ಪರಶುರಾಮನು ಈ ಸ್ಥಳದಲ್ಲಿ ನಾಗಾಲಯವನ್ನು ಪ್ರತಿಷ್ಠಾಪಿಸಿದ ಮೇಲೆ ಪೂಜಾಕಾರ್ಯಗಳಿಗಾಗಿ 'ಇರಿಂಜಾಲಕ್ಕುಡದ ಇರಿಇೌಡಪಳ್ಳಿ' ಮನೆತನದ ವಾಸುದೇವನ್ ನಂಬೂದಿರಿ ಮತ್ತು 'ಶ್ರೀದೇವಿ ಅಂತಃರ್ಜನಂ' ದಂಪತಿಗಳಿಗೆ ಒಪ್ಪಿಸಿದನು. ಈ ದಂಪತಿಗಳು ಮಣ್ಣಾರ ಶಾಲ ಮನೆತನದ ಆಗ್ನೇಯದಲ್ಲಿರುವ ಹರಿಪ್ಪಾಡ್ ದೇವಸ್ಥಾನದ ಉತ್ತರದಲ್ಲಿರುವ ಮನೆಯಲ್ಲಿ ವಾಸಿಸತೊಡಗಿದರು. ನಾಗರಾಜ ಕ್ಷೇತ್ರದಲ್ಲಿ ತಮಗೆ ಒಪ್ಪಿಸಿರುವ ಪೂಜೆ ನಡೆಸುತ್ತಾ ಬಂದರು. ಆದರೆ ಕ್ರಮೇಣ ಅವರಿಗೆ ಸಂತಾನಭಾಗ್ಯವಿಲ್ಲದೆ ನೋವು ಅವರನ್ನು ಅತಿ ದುಃಖಕ್ಕೆ ಈಡುಮಾಡಿತು. ಆದರೂ ಕೂಡ ನಾಗರಾಜನನ್ನು ಆ ಭಾಗ್ಯಕ್ಕಾಗಿ ತದೇಕ ಚಿತ್ತದಿಂದ ಪೂಜಿಸುತ್ತಲೇ ಬಂದರು.

ಕಾಲಕ್ರಮೇಣದಲ್ಲಿ ಉಂಟಾದ ಖಾಂಡವ ದಹನ ಕಾಲದಲ್ಲಿ ಹರಡಿದ ಕಾಳ್ಗಿಚ್ಚಿನಿಂದ ಪರ್ಣಶಾಲೆಯ ಹತ್ತಿರದಲ್ಲಿದ್ದ ನಾಗಬನವೂ ಕೂಡ ಬೆಂಕಿಗಾಹುತಿಯಾಗಿ ಹೊತ್ತಿ ಉರಿಯಲಾರಂಭಿಸಿತು. ಆ ಸಂದರ್ಭದಲ್ಲಿ ಬೆಂಕಿಯ ಜ್ವಾಲೆಯಿಂದ ಉಸಿರುಗಟ್ಟಿದ ನಾಗಗಳನ್ನು, ವಾಸುದೇವನೂ, ಶ್ರೀದೇವಿಯೂ ರಕ್ಷಿಸಿದರು. ಸರ್ಪಸಂತಾನಕ್ಕೆ ತೀರ್ಥಕೊಳದ ತಣ್ಣೀರು, ಅರಸಿನ, ಹಾಲು ಇತ್ಯಾದಿಗಳಿಂದ ಉಪಚರಿಸಿದರು. ಕೊಳದಿಂದ ನೀರುನ್ನು ತಂದು ಬೆಂಕಿಯನ್ನು ಆರಿಸಿದರು. ಬಿಸಿ ಆರಿ ನೆಲ ತಂಪಾಯಿತು. ಹಾಗೇ ಅಂದು ಆ ಮಣ್ಣಿನ ಬಿಸಿ ಆರಿದ್ದರಿಂದ, ನೆಲ ತಂಪುಗೊಂಡಿದ್ದರಿಂದ, ಆ ಸ್ಥಳಕ್ಕೆ 'ಮಣ್ಣಾರಿದ ಪರ್ಣಶಾಲೆ' ಎಂದೂ, ಕ್ರಮೇಣ 'ಮಣ್ಣಾರ್ ಶಾಲೆ' ಎಂದೂ ಹೆಸರಾಯಿತೆಂದು ಪ್ರತೀತಿ ಇದೆ. ದಂಪತಿಗಳ ಈ ರೀತಿಯ ಉಪಚಾರದಿಂದ ಸಂತುಷ್ಟಗೊಂಡ ನಾಗರಾಜನು ಅವರನ್ನು ಅನುಗ್ರಹಿಸಿದನು. ಅಂದು ರಾತ್ರಿ ಆ ಶ್ರೀದೇವಿ ಅಂತಃರ್ಜನಂ (ಬ್ರಾಹ್ಮಣ ಸ್ತ್ರೀ) ಪಂಚ ಮುಖನಾದ ಒಂದು ಸರ್ಪಶಿಶುವಿಗೂ, ಒಂದು ಮನುಷ್ಯ ಶಿಶುವಿಗೂ ಜನ್ಮ ನೀಡಿದಂತೆ ಕನಸು ಕಂಡಳು. ಕಾಲಾನಂತರದಲ್ಲಿ ಈ ಕನಸು ಸಾಕಾರಗೊಂಡಿತು. ಕುಂಭ ಮಾಸದ ಆಶ್ಲೇಷದಂದು ಮನುಷ್ಯ ಶಿಶುವನ್ನು, ಜೊತೆಗೆ ಐದು ತಲೆಯಿರುವ ಸರ್ಪ ಮರಿಯನ್ನು ಪ್ರಸವಿಸಿದಳು. ಮುಂದಿನ ದಿನಗಳಲ್ಲಿ ತಮ್ಮನು ಗೃಹಸ್ಥಾಶ್ರಮವನ್ನು ಸ್ವೀಕರಿಸಿದನು, ಹಾವಿನ ರೂಪದ ಜೇಷ್ಠನು ಮನೆಯಲ್ಲಿರುವ ನೆಲಮಾಳಿಗೆಯಲ್ಲಿ ಮರೆಯಾದನು.

ನೆಲ ಮಾಳಿಗೆಯ ಮುತ್ತಜ್ಜ: 'ಮುನ್ನಾರ ಶಾಲ' ನಾಗಾಲಯದ ಪರಿಸರದಲ್ಲಿಯೇ ಇರುವ, ಅತೀ ಹಳೆಯದಾದ ಅರ್ಚಕರ ವಾಸದ ಮನೆಯನ್ನು 'ನಾಲ್‌ಕೆಟ್ಟು ಮನ' ಎಂದು ಕರೆಯುತ್ತಾರೆ. ಈ ಮನೆಯ ಒಳಭಾಗದಲ್ಲಿ 'ನೆಲವರ' ಎನ್ನುವ ಪವಿತ್ರವಾದ ನೆಲಮಾಳಿಗೆಯಿದೆ. ಹಿಂದೆ ನೆಲಮಾಳಿಗೆಯಲ್ಲಿ ಲೀನವಾಗಿದ್ದ ಐದು ಹೆಡೆಯ ಸರ್ಪವನ್ನು

ಮರುದಿನವೂ, ನಂತರದ ಐದನೇ ದಿನವೂ, ಕುಟುಂಬ ಸದಸ್ಯರೆಲ್ಲರೂ ನೆಲಮಾಳಿಗೆಯ ಬಾಗಿಲಲ್ಲಿ ವಾಸಿಸುತ್ತಾರೆ. ಹಿರಿಯಮ್ಮ ಪ್ರಸಾದ ತೆಗೆದು ನೀಡುತ್ತಾಳೆ. ಅದು ಸೇವಿಸಿದ ನಂತರವೇ ಅಂದಿನ ಆಹಾರ ಸೇವಿಸುವರು. ಅಂದು ಮಾತ್ರವೇ ಮಣ್ಣಾರ ಶಾಲಾ ಕುಟುಂಬದ ಸದಸ್ಯರು ಒಂದಾಗಿರುವುದನ್ನು ಕಾಣಲು ಸಾಧ್ಯ. ಯಾವುದೇ ಕೆಲಸದ ಒತ್ತಡವಿದ್ದರೂ ಅಂದು ಇಲ್ಲಿ ಒಂದು ಸೇರುತ್ತಾರೆ. ಈ ಪರಂಪರೆ ಈಗಲೂ ಮುಂದುವರಿದು ಬಂದಿದೆ. ಈ ಪ್ರವಿತ್ರವಾದ ನೆಲಮಾಳಿಗೆಯನ್ನು ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಮತ್ತಾರು ಪ್ರವೇಶಿಸುವಂತಿಲ್ಲ. ನೆಲಮಾಳಿಗೆಯನ್ನು ಪ್ರವೇಶಿಸಿದರೂ ಕೋಣೆಯ ನೈಋತ್ಯ ಮೂಲೆಯನ್ನು ನೋಡುವುದಿಲ್ಲ. ಯಾಕೆಂದರೆ ಅಲ್ಲಿ ಮುತ್ತಜ್ಜನಾದ ನಾಗರಾಜನ ಶಕ್ತಿ ಇದೆಯೆಂದೂ, ಒಂದು ವೇಳೆ ನೋಡಿದರೆ ಅವನ ಅಮಿತವಾದ ಪ್ರಭಾಪೂರದಿಂದಾಗಿ ದೃಷ್ಟಿಕಳೆದುಕೊಳ್ಳುವ ಸಾಧ್ಯತೆಯಿದೆಯೆಂದೂ ಕುಟುಂಬ ವಲಯದಲ್ಲಿ ನಂಬಿಕೆಯಿದೆ. ಶಿವರಾತ್ರಿಯ ಮರುದಿನವಲ್ಲದೆ ಬೇರೆ ದಿವಸಗಳಲ್ಲಿ ನೆಲಮಾಳಿಗೆಯೊಳಗೆ ದೀಪ ಹಚ್ಚುವುದೂ ಇಲ್ಲ. ನೆಲಮಾಳಿಗೆಯ ಬಾಗಿಲಲ್ಲಿ ಮಾತ್ರ ದೀಪ ಹಚ್ಚುವರು.

ದೇವಾಲಯದ ಅಮ್ಮ: 'ಮಣ್ಣಾರ ಶಾಲ' ನಾಗರಾಜ ದೇವಾಲಯದ ಪ್ರಧಾನ ಅರ್ಚಕಿಯನ್ನು 'ಅಮ್ಮ' ಎಂದು ಕರೆಯಲಾಗುತ್ತದೆ. ಈಕೆ ವಿಧಿಪ್ರಕಾರ ಅರ್ಚಕಿಯಾಗಿ ನಿಯುಕ್ತಿಗೊಳ್ಳುತ್ತಾಳೆ. ಒರ್ವ ಅಂತಃರ್ಜನಂ ತಾಂತ್ರಿಕ ವಿಧಿಯಲ್ಲಿ ನೈಪುಣ್ಯತೆ ಪಡೆದು ತಪೋ ವೃತ್ತಿಯಿಂದ ಕೂಡಿದ ನಾಗ ಪೂಜೆ ನಡೆಸುವ ಕ್ಷೇತ್ರ ಎನ್ನುವ ಅಸಾಧಾರಣತ್ವವು ಈ ಕ್ಷೇತ್ರಕ್ಕೆ ಅತೀ ಶ್ರೇಷ್ಠವಾದ ಸ್ಥಾನವನ್ನು ನೀಡಿದೆ.

ಪ್ರಚಲಿತ ಐತಿಹ್ಯದ ಪ್ರಕಾರ ಖಾಂಡವ ದಹನ ಕಾಲದಲ್ಲಿ ಈ ನಂಬೂದಿರಿ ಮನೆಯ ಬ್ರಾಹ್ಮಣ ಸ್ತ್ರೀಯರು ಕೊಳದಿಂದ ನೀರನ್ನು ತಂದು ಸರ್ಪಗಳನ್ನು ರಕ್ಷಿಸಿದ್ದರಿಂದ, ಬೆಂಕಿಯನ್ನು ನಂದಿಸಿ ನೆಲವನ್ನು ತಂಪುಗೊಳಿಸಿದ್ದರಿಂದ ಸರ್ಪಗಳು ಸ್ತ್ರೀಯರ ಮೇಲೆ ಸಂತುಷ್ಟಗೊಳುತ್ತವೆ. ಬ್ರಾಹ್ಮಣ ಸ್ತ್ರೀಯರು ತಮ್ಮ ವಂಶವನ್ನು ರಕ್ಷಿಸಿದ್ದರಿಂದ ಇನ್ನು ಮುಂದೆ ತಮ್ಮನ್ನು ಬ್ರಾಹ್ಮಣ ಸ್ತ್ರೀಯರೇ ಪೂಜಿಸುವುದರಿಂದ ತಮಗೆ ತೃಪ್ತಿಯಾಗುವುದೆಂದು ಮುಂದಕ್ಕೆ ಕುಟುಂಬದ ಹಿರಿಯ ಸ್ತ್ರೀಯೇ ಆ ಕಾರ್ಯವನ್ನು ಕೈಗೊಳ್ಳಬೇಕೆಂದು ನಾಗರಾಜನು 'ವರ'ದೊಂದಿಗೆ ಪೂಜೆಯ ಅಧಿಕಾರವನ್ನು ನೀಡುತ್ತಾನೆ. ಅಂದಿನಿಂದ ಆ ಮನೆಯ ಹಿರಿಯ ಸ್ತ್ರೀಯರೆ ದೇವಾಲಯದ 'ಪ್ರಧಾನ ಅರ್ಚಕಿ'ಯ ಕಾರ್ಯವನ್ನು ನಿಭಾಯಿಸುತ್ತಾರೆ. ನಿಯಮದಂತೆ ವೃಶ್ಚಿಕ ಮಾಸವೊಂದನ್ನು ಹೊರತುಪಡಿಸಿ ವರ್ಷದ ಹನ್ನೊಂದು ತಿಂಗಳು ಆ ದೇವಾಲಯದಲ್ಲಿ ಮಧ್ಯಾಹ್ನದ ಮಹಾಪೂಜೆಯನ್ನು ಮಹಿಳೆಯೇ ನೆರವೇರಿಸುತ್ತಾಳೆ. ಇಡೀಯ ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಮಹಿಳಾ ಅರ್ಚಕಿಯಾಗಿ ನಾಗದೇವಾಲಯದಲ್ಲಿ ಪೂಜೆ ಮಾಡುವುದನ್ನು ಇಲ್ಲಿಮಾತ್ರ ಕಾಣಲುಸಾಧ್ಯ.

ಕುಟುಂಬದ ಹಿರಿಯ ಹೆಂಗಸು 'ಅಮ್ಮ' ಅಥವಾ 'ಕ್ಷೇತ್ರದ ಅರ್ಚಕಿ'ಯಾಗಿ ನಿಯುಕ್ತಿಗೊಳ್ಳುತ್ತಾಳೆ. ಈ ಪರಂಪರೆಯು ಹೀಗೆಯೇ ಮುಂದುರೆಯುತ್ತದೆ. ಅಮ್ಮನಾಗಿ ನಿಯುಕ್ತಿಗೊಂಡ ಮೇಲೆ ಆಕೆ ಗಂಡನಿಂದ ಪ್ರತ್ಯೇಕಗೊಳ್ಳಬೇಕಾಗುತ್ತದೆ. ಗಂಡನಾದವನು ಬೇರೆ ವಿವಾಹ ಮಾಡಿಕೊಳ್ಳಲು ಅಧಿಕಾರವಿದೆ. ಗಂಡನಿಂದ ಪ್ರತೇಕಗೊಂಡ ಮೇಲೆ ಆ ಸ್ತ್ರೀಯು ಜೀವನ ಪೂರ್ತಿ 'ಬ್ರಹ್ಮಚರ್ಯ'ವನ್ನು ಪಾಲಿಸಬೇಕಾಗಿದ್ದು, ಕುಟುಂಬದಿಂದ

ಪ್ರತ್ಯೇಕವಾಗಿ ವಾಸಿಸುತ್ತಾಳೆ. ನೆಲವರವನ್ನು ಹೊಂದಿರುವ 'ನಾಲ್‌ಕೆಟ್ಟು'ಮನ ದಲ್ಲಿಯೇ ವಾಸಮಾಡುತ್ತಾಳೆ. ಆಕೆ ದೇವಾಲಯದ ಪರಿಸರವನ್ನು ಬಿಟ್ಟು ಹೊರಗೆಲ್ಲೂ ಹೋಗುವಂತಿಲ್ಲ. ಅಮ್ಮನಿಗೆ ನಿತ್ಯವೂ ಪ್ರತ್ಯೇಕವಾದ ಪೂಜಾಕಾರ್ಯಗಳಿವೆ. ಇಲ್ಲಿನ ಗಂಡಸರು ಬೆಳಗಿನ ಪೂಜೆ ಮುಗಿಸಿ ಮಧ್ಯಾಹ್ನದ ವೈವೇಧ್ಯದವರೆಗಿನ ಧಾರ್ಮಿಕ ವಿಧಿಗಳನ್ನು ನಡೆಸಿ ಪೂಜೆ ನಿಲ್ಲಿಸುತ್ತಾರೆ. ಉಳಿದ ಪೂಜೆಯನ್ನು ಹಿರಿಯ ಅಮ್ಮ ಮುಂದುವರೆಸುತ್ತಾಳೆ. ಇದು ಬೇರೆಲ್ಲೂ ಕಂಡುಬರದ ಆಚರಣೆಯಾಗಿದೆ. ಒಂದು ಪೂಜೆಯ ಅರ್ಧವನ್ನೊಬ್ಬರು ಉಳಿದರ್ಧವನ್ನು ಮತ್ತೊಬ್ಬರು ಮಾಡುವ ಏರ್ಪಾಡಾಗಿದೆ. ಯಾವುದಾದರೂ ರೀತಿಯಲ್ಲಿ ನಿತ್ಯಪೂಜೆಗಳೊಂದಿಗೆ ವಿಶೇಷ ಪೂಜೆಗಳನ್ನು ನಡೆಸಲು ಸಾಧ್ಯವಾಗದಿದ್ದರೆ ಆ ಪೂಜೆಯನ್ನು ಬೇರೆಯಾರೂ ನಡೆಸಲು ಅನುಮತಿ ಇಲ್ಲ. ಒಂದರ್ಥದಲ್ಲಿ ಆಕೆ ಸಂಪೂರ್ಣ ಸನ್ಯಾಸತ್ವವನ್ನು ಸ್ವೀಕರಿಸುತ್ತಾಳೆ. ನೆಲಮಾಳಿಗೆಯನ್ನು ಪ್ರವೇಶಿಸುವ ಮತ್ತು ಪೂಜೆಯನ್ನು ನಡೆಸುವ ಎಲ್ಲ ಅಧಿಕಾರವು ಕೇವಲ ಈ ಅಮ್ಮನಿಗೆ ಮೀಸಲಾಗಿದೆ. ದೇವಾಲಯದ ವಾರ್ಷಿಕ ಉತ್ಸವದ ಸಂದರ್ಭದಲ್ಲಿ ಮತ್ತು ಕೆಲವು ವಿಶೇಷ ದಿನಗಳಲ್ಲಿ ನಾಗರಾಜನ ವಿಗ್ರಹವನ್ನು ಹೊರುವ ದೇವಾಲಯದ ಸುತ್ತ ಪ್ರದಕ್ಷಿಣೆ ಬರುವ ಕಾರ್ಯವನ್ನು ಅಮ್ಮನೇ ಮಾಡಬೇಕಾಗುತ್ತದೆ.

ಕೇರಳದ ಹೆಚ್ಚಿನೆಲ್ಲ ನಾಗಾಲಯಗಳಲ್ಲಿ ಸಾಯಂಕಾಲದ ಪೂಜೆ ನಡೆಯುವುದಿಲ್ಲ. ಬೆಳಿಗ್ಗೆ ಮತ್ತು ಮಧ್ಯಾಹ್ನ ಮಾತ್ರ ಪೂಜೆ ನೆರವೇರಿಸಲಾಗುತ್ತದೆ. ಸಂಜೆಯ ಹೊತ್ತು ದೀಪವನ್ನು ಮಾತ್ರ ಹಚ್ಚಲಾಗುತ್ತದೆ ಇಲ್ಲಿ ಪೂಜೆಗೆ ಮೊದಲು ಸಮೀಪದ ಕೊಳದಲ್ಲಿ ಮಿಂದು ಪೂಜೆ ನಡೆಸಲಾಗುತ್ತದೆ. ಈ ಕೊಳವನ್ನು ಬೇರೆಯಾರು ಸ್ಪರ್ಶಿಸುವಂತಿಲ್ಲ. ವೃಶ್ಚಿಕ ಮಾಸ 'ಪಂದೀರಡಿ'ಯ (ಹನ್ನೆರಡು) (ನವಕ ಪೂಜೆಯು ಕಲಶಾಭಿಷೇಕವೂ ಶ್ರೀ ಭೂತಬಲಿಯೂ ಇರುವ ಮಾಸ) ವಿನಃ ಎಲ್ಲ ಮಾಸಗಳಲ್ಲೂ ಅಮ್ಮ ಮಧ್ಯಾಹ್ನದ ಪೂಜೆ ಮುಗಿಸುತ್ತಾಳೆ. ಅಮ್ಮ ಪೂಜೆ ನಡೆಸುವ ಈ ದಿನಗಳಲ್ಲಿ ಕ್ಷೇತ್ರದಲ್ಲಿ ಪೂಜೆಯ ಸಂದರ್ಭದಲ್ಲಿ ಗಂಟೆ ಬಾರಿಸುವ ಸಂಪ್ರದಾಯವಿಲ್ಲ. ಈ ದಿವಸಗಳಲ್ಲಿ ಧೂಪ, ದೀಪ, ಮುದ್ರೆಗಳನ್ನು ತೋರಿಸಿ ಪೂಜಿಸಲಾಗುವುದು.

ಈ ಕುಟುಂಬದ ಮತ್ತು ಕ್ಷೇತ್ರದ ಇನ್ನೊಂದು ವೈಶಿಷ್ಟ್ಯವೆಂದರೆ ಕುಟುಂಬದ ಪುರುಷರು ತಮ್ಮ ಹೆಸರಿನೊಂದಿಗೆ ಮನೆಯ ಅಮ್ಮನ ಮತ್ತು ನಾಗದೇವರ ಹೆಸರನ್ನು ಜೋಡಿಸಿಕೊಳ್ಳುವುದು. ಉದಾ: ವಾಸುಕಿ ಶ್ರೀದೇವಿ ಕೃಷ್ಣನ್ ಎಂದಿದ್ದರೆ ಇದರಲ್ಲಿ ವಾಸುಕಿ ಕುಲದೇವತೆ ನಾಗರಾಜನ ಹೆಸರು. ಶ್ರೀದೇವಿ ಮನೆಯ ಹಿರಿಯ ಹೆಂಗಸು ಅಥವಾ ಅಮ್ಮನ ಹೆಸರು. ಮತ್ತು ಕೃಷ್ಣನ್ ಎಂಬುದು ನಿರ್ದಿಷ್ಟ ವ್ಯಕ್ತಿಯ ಹೆಸರಾಗಿದೆ. ಇಂದಿಗೂ ಈ ಸ್ಥಳನಾಮವನ್ನು ಲಿಖಿತ ರೀತಿಯಲ್ಲಿ ಉಪಯೋಗಿಸುತ್ತ ಬರಲಾಗುತ್ತಿದೆ. ಈ ಪರಂಪರೆ ವಂಶಪಾರಂಪರ್ಯವಾಗಿ ಮುಂದುವರಿದಿದೆ. ಅಲ್ಲದೆ ಇಂದಿಗೂ ಕುಟುಂಬಸ್ಥರಲ್ಲಿ ಅತೀ ಹಿರಿಯರಾದ ಮುತ್ತಜ್ಜಿಯ ವಾರ್ಷಿಕ ತಿಥಿಯನ್ನು ನಿಲ್ಲಸದೆ ಮುಂದುವರೆಸುತ್ತಾ ಬಂದಿದ್ದಾರೆ. ಇದು ಮತ್ಯಾವ ಕುಟುಂಬದಲ್ಲೂ ಇಲ್ಲದ ಸಂಪ್ರದಾಯವಾಗಿದೆ. ಅಮ್ಮನು ಮಧ್ಯಾಹ್ನದವರೆಗೆ ದೇವಾಲಯದ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾಳೆ. ನಂತರ ಆಹಾರ ಸೇವನೆ ಮತ್ತು ಅಲ್ಪ ವಿರಾಮದ ಬಳಿಕ ಸಾಯಂಕಾಲದ ಹೊತ್ತು ತನ್ನ ವಾಸಸ್ಥಾನವಾದ 'ನಾಲ್‌ಕೆಟ್ಟು ಮನ'ದಲ್ಲಿ ಭಕ್ತಾದಿಗಳಿಗೆ

ಪ್ರತ್ಯೇಕವಾಗಿ ವಾಸಿಸುತ್ತಾಳೆ. ನೆಲವರವನ್ನು ಹೊಂದಿರುವ 'ನಾಲ್‌ಕೆಟ್ಟು'ಮನ ದಲ್ಲಿಯೇ ವಾಸಮಾಡುತ್ತಾಳೆ. ಆಕೆ ದೇವಾಲಯದ ಪರಿಸರವನ್ನು ಬಿಟ್ಟು ಹೊರಗೆಲ್ಲೂ ಹೋಗುವಂತಿಲ್ಲ. ಅಮ್ಮನಿಗೆ ನಿತ್ಯವೂ ಪ್ರತ್ಯೇಕವಾದ ಪೂಜಾಕಾರ್ಯಗಳಿವೆ. ಇಲ್ಲಿನ ಗಂಡಸರು ಬೆಳಗಿನ ಪೂಜೆ ಮುಗಿಸಿ ಮಧ್ಯಾಹ್ನದ ನೈವೇಧ್ಯದವರೆಗಿನ ಧಾರ್ಮಿಕ ವಿಧಿಗಳನ್ನು ನಡೆಸಿ ಪೂಜೆ ನಿಲ್ಲಿಸುತ್ತಾರೆ. ಉಳಿದ ಪೂಜೆಯನ್ನು ಹಿರಿಯ ಅಮ್ಮ ಮುಂದುವರೆಸುತ್ತಾಳೆ. ಇದು ಬೇರೆಲ್ಲೂ ಕಂಡುಬರದ ಆಚರಣೆಯಾಗಿದೆ. ಒಂದು ಪೂಜೆಯ ಅರ್ಧವನ್ನೊಬ್ಬರು ಉಳಿದರ್ಧವನ್ನು ಮತ್ತೊಬ್ಬರು ಮಾಡುವ ಏರ್ಪಾಡಾಗಿದೆ. ಯಾವುದಾದರೂ ರೀತಿಯಲ್ಲಿ ನಿತ್ಯಪೂಜೆಗಳೊಂದಿಗೆ ವಿಶೇಷ ಪೂಜೆಗಳನ್ನು ನಡೆಸಲು ಸಾಧ್ಯವಾಗದಿದ್ದರೆ ಆ ಪೂಜೆಯನ್ನು ಬೇರೆಯಾರೂ ನಡೆಸಲು ಅನುಮತಿ ಇಲ್ಲ. ಒಂದರ್ಥದಲ್ಲಿ ಆಕೆ ಸಂಪೂರ್ಣ ಸನ್ಯಾಸತ್ವವನ್ನು ಸ್ವೀಕರಿಸುತ್ತಾಳೆ. ನೆಲಮಾಳಿಗೆಯನ್ನು ಪ್ರವೇಶಿಸುವ ಮತ್ತು ಪೂಜೆಯನ್ನು ನಡೆಸುವ ಎಲ್ಲ ಅಧಿಕಾರವು ಕೇವಲ ಈ ಅಮ್ಮನಿಗೆ ಮೀಸಲಾಗಿದೆ. ದೇವಾಲಯದ ವಾರ್ಷಿಕ ಉತ್ಸವದ ಸಂದರ್ಭದಲ್ಲಿ ಮತ್ತು ಕೆಲವು ವಿಶೇಷ ದಿನಗಳಲ್ಲಿ ನಾಗರಾಜನ ವಿಗ್ರಹವನ್ನು ಹೊರುವ ದೇವಾಲಯದ ಸುತ್ತ ಪ್ರದಕ್ಷಿಣೆ ಬರುವ ಕಾರ್ಯವನ್ನು ಅಮ್ಮನೇ ಮಾಡಬೇಕಾಗುತ್ತದೆ.

ಕೇರಳದ ಹೆಚ್ಚಿನೆಲ್ಲ ನಾಗಾಲಯಗಳಲ್ಲಿ ಸಾಯಂಕಾಲದ ಪೂಜೆ ನಡೆಯುವುದಿಲ್ಲ. ಬೆಳಿಗ್ಗೆ ಮತ್ತು ಮಧ್ಯಾಹ್ನ ಮಾತ್ರ ಪೂಜೆ ನೆರವೇರಿಸಲಾಗುತ್ತದೆ. ಸಂಜೆಯ ಹೊತ್ತು ದೀಪವನ್ನು ಮಾತ್ರ ಹಚ್ಚಲಾಗುತ್ತದೆ ಇಲ್ಲಿ ಪೂಜೆಗೆ ಮೊದಲು ಸಮೀಪದ ಕೊಳದಲ್ಲಿ ಮಿಂದು ಪೂಜೆ ನಡೆಸಲಾಗುತ್ತದೆ. ಈ ಕೊಳವನ್ನು ಬೇರೆಯಾರು ಸ್ಪರ್ಶಿಸುವಂತಿಲ್ಲ. ವೃಶ್ಚಿಕ ಮಾಸ 'ಪಂದೀರಡಿ'ಯ (ಹನ್ನೆರಡು) (ನವಕ ಪೂಜೆಯು ಕಲಶಾಭಿಷೇಕವೂ ಶ್ರೀ ಭೂತಬಲಿಯೂ ಇರುವ ಮಾಸ) ವಿನಃ ಎಲ್ಲ ಮಾಸಗಳಲ್ಲೂ ಅಮ್ಮ ಮಧ್ಯಾಹ್ನದ ಪೂಜೆ ಮುಗಿಸುತ್ತಾಳೆ. ಅಮ್ಮ ಪೂಜೆ ನಡೆಸುವ ಈ ದಿನಗಳಲ್ಲಿ ಕ್ಷೇತ್ರದಲ್ಲಿ ಪೂಜೆಯ ಸಂದರ್ಭದಲ್ಲಿ ಗಂಟೆ ಬಾರಿಸುವ ಸಂಪ್ರದಾಯವಿಲ್ಲ. ಈ ದಿವಸಗಳಲ್ಲಿ ಧೂಪ, ದೀಪ, ಮುದ್ರೆಗಳನ್ನು ತೋರಿಸಿ ಪೂಜಿಸಲಾಗುವುದು.

ಈ ಕುಟುಂಬದ ಮತ್ತು ಕ್ಷೇತ್ರದ ಇನ್ನೊಂದು ವೈಶಿಷ್ಟ್ಯವೆಂದರೆ ಕುಟುಂಬದ ಪುರುಷರು ತಮ್ಮ ಹೆಸರಿನೊಂದಿಗೆ ಮನೆಯ ಅಮ್ಮನ ಮತ್ತು ನಾಗದೇವರ ಹೆಸರನ್ನು ಜೋಡಿಸಿಕೊಳ್ಳುವುದು. ಉದಾ: ವಾಸುಕಿ ಶ್ರೀದೇವಿ ಕೃಷ್ಣನ್ ಎಂದಿದ್ದರೆ ಇದರಲ್ಲಿ ವಾಸುಕಿ ಕುಲದೇವತೆ ನಾಗರಾಜನ ಹೆಸರು. ಶ್ರೀದೇವಿ ಮನೆಯ ಹಿರಿಯ ಹೆಂಗಸು ಅಥವಾ ಅಮ್ಮನ ಹೆಸರು. ಮತ್ತು ಕೃಷ್ಣನ್ ಎಂಬುದು ನಿರ್ದಿಷ್ಟ ವ್ಯಕ್ತಿಯ ಹೆಸರಾಗಿದೆ. ಇಂದಿಗೂ ಈ ಸ್ಥಳನಾಮವನ್ನು ಲಿಖಿತ ರೀತಿಯಲ್ಲಿ ಉಪಯೋಗಿಸುತ್ತ ಬರಲಾಗುತ್ತಿದೆ. ಈ ಪರಂಪರೆ ವಂಶಪಾರಂಪರ್ಯವಾಗಿ ಮುಂದುವರಿದಿದೆ. ಅಲ್ಲದೆ ಇಂದಿಗೂ ಕುಟುಂಬಸ್ಥರಲ್ಲಿ ಅತೀ ಹಿರಿಯರಾದ ಮುತ್ತಜ್ಜಿಯ ವಾರ್ಷಿಕ ತಿಥಿಯನ್ನು ನಿಲ್ಲಿಸದೆ ಮುಂದುವರೆಸುತ್ತಾ ಬಂದಿದ್ದಾರೆ. ಇದು ಮತ್ಯಾವ ಕುಟುಂಬದಲ್ಲೂ ಇಲ್ಲದ ಸಂಪ್ರದಾಯವಾಗಿದೆ. ಅಮ್ಮನು ಮಧ್ಯಾಹ್ನದವರೆಗೆ ದೇವಾಲಯದ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾಳೆ. ನಂತರ ಆಹಾರ ಸೇವನೆ ಮತ್ತು ಅಲ್ಪ ವಿರಾಮದ ಬಳಿಕ ಸಾಯಂಕಾಲದ ಹೊತ್ತು ತನ್ನ ವಾಸಸ್ಥಾನವಾದ 'ನಾಲ್‌ಕೆಟ್ಟು ಮನ'ದಲ್ಲಿ ಭಕ್ತಾದಿಗಳಿಗೆ

ದರ್ಶನ ನೀಡುತ್ತಾಳೆ. ಅವರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಪರಿಹಾರಗಳು ಮತ್ತು ವಿಭೂತಿ ರೂಪದ ಪ್ರಸಾಧಗಳನ್ನು ನೀಡುವುದರ ಮೂಲಕ ಭಕ್ತಾದಿಗಳನ್ನು ಆಶೀರ್ವದಿಸುತ್ತಾಳೆ.

ಅರ್ಚಕಿಯಾಗಿ ನಿಯುಕ್ತಿಗೊಂಡಿರುವ ಆ ಅಂತಃರ್ಜನಂ ಸ್ತ್ರೀಯು ತನಗೆ ದೈಹಿಕ ಸಾಮರ್ಥ್ಯವಿರುವಲ್ಲಿಯವರೆಗೆ ವೃತ, ನೇಮ ನಿಷ್ಠೆಯಿಂದಿದ್ದು ತನ್ನ ಕರ್ತವ್ಯವನ್ನು ಪೂರೈಸುತ್ತಾಳೆ. ಈಕೆಯ ನಿಧನದ ನಂತರ ಮನೆಯ ನಂತರದ ಹಿರಿಯವನ ಧರ್ಮಪತ್ನಿಗೆ ದೀಕ್ಷೆ ನೀಡಲಾಗುತ್ತದೆ. ಮೃತ ಶರೀರವನ್ನು ಅಗ್ನಿಗೆ ಸಮರ್ಪಣೆ ಮಾಡುವ ಮುನ್ನ ಅರ್ಚಕಿಯಾಗಿ ನಿಯುಕ್ತಿಗೊಳ್ಳುವ ಆ ಸ್ತ್ರೀಯನ್ನು ದಕ್ಷಿಣ ಅಂಗಳದ ಒಕುಳಿ ಅರ್ಪಿಸುವ ಬಲಿಕಲ್ಲಿನಲ್ಲಿ ಕುಳ್ಳಿರಿಸಿ ದೀಕ್ಷಾ ವಿಧಿಯನ್ನು ಮತ್ತು ಕೆಲವು ಧಾರ್ಮಿಕ ವಿಧಿಗಳನ್ನು ನಡೆಸಲಾಗುವುದು ದೊಡ್ಡಮ್ಮನ ಪಾದತೀರ್ಥವನ್ನು ಸೇವಿಸಿ ಪ್ರೊಕ್ಷಿಸಲಾಗುವುದು. ತದನಂತರ ವೈದಿಕ ಕ್ರಮಗಳೊಡನೆ ಅಭಿಷೇಕವನ್ನು ಮಾಡಿದ ಬಳಿಕವೇ ನಂತರದ ಅಮ್ಮನಾಗಿ ಆಕೆ ಧೀಕ್ಷಾ ಬದ್ಧಳಾಗುತ್ತಾಳೆ. ಸಂಸಾರದೊಂದಿಗೆ ಇದ್ದುಕೊಂಡೇ ಪೂಜಾರಿಣಿಯಾಗಿ ಸನ್ಯಾಸಿಯಾಗುತ್ತಾಳೆ. ಈ ಪರಂಪರೆ ತಲೆಮಾರಿನಿಂದ ತಲೆಮಾರಿಗೆ ಮುಂದುವರಿಯುತ್ತಿರುತ್ತದೆ.

ವಿಶೇಷ ಆಚರಣೆಗಳು: ಮಣ್ಣಾರ ಶಾಲ ನಾಗ ದೇವಾಲಯದಲ್ಲಿ ಬೇರೆಲ್ಲೂ ಇಲ್ಲದಂತಹ ಕೆಲವು ವೈಶಿಷ್ಟ್ಯಪೂರ್ಣವಾದ ಆಚರಣೆಗಳು ಪ್ರಚಲಿತದಲ್ಲಿವೆ. ಕೇರಳದ ಪ್ರತಿಯೊಂದು ನಾಗ ಕ್ಷೇತ್ರಗಳೂ ಒಂದೊಂದು ರೀತಿಯಲ್ಲಿ ಪ್ರಾಧಾನ್ಯತೆಯನ್ನು ಪಡೆದಿರುತ್ತವೆ. ಭಕ್ತರ ಆಗಮನ, ನಂಬಿಕೆ, ಉದ್ದೇಶಿತ ಕಾರ್ಯಸಿದ್ಧಿಗಳಿಂದಾಗಿ ಮಾತ್ರ ಕೆಲವು ಕ್ಷೇತ್ರಗಳಿಗೆ ಪ್ರತ್ಯೇಕ ಪ್ರಾಮುಖ್ಯತೆ ಕಲ್ಪಿಸಲಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಸಂಪ್ರದಾಯಗಳು ನಂಬಿಕೆಗಳು ಮೊದಲಾದ ಪ್ರಧಾನ ಅನುಭವ ಕಥೆಗಳು ಮಾತ್ರವೇ ನಮಗೆ ಆಧಾರ. ಇಲ್ಲಿ ಸಂತಾನಲಬ್ಧಿಗೆ, ರೋಗಶಮನಕ್ಕೆ, ಐಶ್ವರ್ಯಕ್ಕೆ, ಕುಟುಂಬ ಕ್ಲೇಷಗಳನ್ನು ನಿವಾರಿಸಲು, ನೇತ್ರರೋಗ, ಚರ್ಮರೋಗಗಳನ್ನು ಪರಿಹರಿಸಲು ಇಲ್ಲಿರುವ ಕೆಲವು ಆಚರಣೆಗಳಿಂದ ಸಾಧ್ಯ ಎಂಬ ನಂಬಿಕೆಯಿದೆ. ಅದಕ್ಕಾಗಿಯೇ ಭಕ್ತಾದಿಗಳು ನಾಗದೇವಾಲಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ತಮ್ಮ ಹರಕೆಗಳನ್ನು ಒಪ್ಪಿಸುತ್ತಾರೆ. ಇಲ್ಲಿಯೂ ಕೂಡ ಅಂತಹ ವೈಶಿಷ್ಟ್ಯಪೂರ್ಣವಾದ ಕೆಲವು ಆಚರಣೆಗಳಿವೆ ಕೆಲವು ಪ್ರಮುಖ ಆಚರಣೆಗಳನ್ನು ಮುಂದೆ ವಿವರಿಸಲಾಗುವುದು.

ಉರುಳಿ ಕವುಚಿ ಹಾಕುವುದು: ಸಂತಾನಲಬ್ಧಿಗಾಗಿ ಹಲವಾರು ಭಕ್ತಜನರು ಅಥವಾ ಸಂತಾನ ಹೀನರು ಈ ಕ್ಷೇತ್ರದಲ್ಲಿ ಬಂದು ಉರುಳಿ ಎಂಬ ಚಿಕ್ಕ ಕಂಚಿನ ಪಾತ್ರೆಯನ್ನು ಹರಕೆಯಾಗಿ ಒಪ್ಪಿಸುತ್ತಾರೆ. ಇದರಿಂದ ಸಂತಾನವನ್ನು ಪಡೆಯುಬಹುದೆಂಬ ದೃಢವಾದ ನಂಬಿಕೆಯಿದೆ. ಇದಕ್ಕೆ ಸಂಬಂಧಿಸಿದ ಐತಿಹ್ಯವೊಂದು ಈ ರೀತಿ ಇದೆ. 'ಹಿಂದೆ ಸಂತಾನಭಾಗ್ಯವಿಲ್ಲದ ಓರ್ವಸ್ತ್ರೀ ಸಂತಾನ ಭಾಗ್ಯಕ್ಕಾಗಿ ಕ್ಷೇತ್ರದರ್ಶನಕ್ಕಾಗಿ ಇಲ್ಲಿಗೆ ಬಂದಳು. ಇಲ್ಲಿಗೆ ಬಂದಾಗ ಕೆಲವು ಸ್ಥಳೀಯರು ಇಲ್ಲಿಯ ಅಮ್ಮನೂ ಕೂಡ ಬಹುಕಾಲದ ನಂತರವೇ ಪ್ರಸವಿಸಿದ್ದೆಂದೂ ಅದೂ ಕೂಡ ನಾಗರಾಜನ ಅನುಗ್ರಹ ಮೂಲದಿಂದಾಗಿ ಆ ಭಾಗ್ಯ ಲಭಿಸಿತ್ತೆಂದೂ ಹೇಳಿದರು. ಆ ಸ್ತ್ರೀ ಅಮ್ಮನನ್ನು ಕಂಡು ತನ್ನ ಮನಸ್ಸಿನ ಸಂಕಟವನ್ನು ದುಃಖವನ್ನು ನಿವೇದಿಸಿಕೊಂಡಳು. ಅಮ್ಮ ನಾಗದೇವರಲ್ಲಿ ಪ್ರಾರ್ಥಿಸಿ ಪ್ರಸಾದವಾಗಿ ಭಸ್ಮವನ್ನು ಜಪಿಸಿ ನೀಡಿದಳು. ಹಸಿದು ಬಂದಿರುವ ಆಕೆಗೆ ಊಟವನ್ನು ನೀಡಿದಳು. ಅಂದು ಅಮ್ಮ ಅನ್ನ ತಂದ ಉರುಳಿಯ

ಬದಿಯು ಸ್ವಲ್ಪ ಒಡೆದು ಹೋಗಿತ್ತು. ಆ ಸ್ತ್ರೀ ಮನೆಗೆ ಹೋಗಿ ಸ್ವಲ್ಪ ದಿನಗಳನಂತರ ಹೊಸ ಉರುಳಿಯೊಂದಿಗೆ ಬಂದಳು. ತಂದು ಅದನ್ನು ಅಮ್ಮನಿಗೆ ಅರ್ಪಿಸಿದಳು. ಈ ಉರುಳಿಯು ಮುಂದೆ ದೇವಾಲಯದ ಉಪಯೋಗಕ್ಕಾಯಿತು ಎಂದು ಉದ್ದೇಶಿಸಿ ಅಮ್ಮ ಅದನ್ನು ತೀರ್ಥಕೊಳದಲ್ಲಿ ಮುಳುಗಿಸಿ, ನೆಲಮಾಳಿಗೆಯಲ್ಲಿ ಕವುಚಿ ಇಟ್ಟಳು. ಆ ರೀತಿ ಉರುಳಿಯನ್ನು ನೆಲ ಮಾಳಿಗೆಯಲ್ಲಿ ಕವುಚಿ ಇಟ್ಟನಂತರ ಒಂದು ಅದ್ಭುತವೇ ನಡೆಯಿತು. ಆ ಸ್ತ್ರೀ ಮನೆಗೆ ತಲುಪಿದ ಕೆಲ ದಿನಗಳಲ್ಲಿಯೇ ಗರ್ಭಧರಿಸಿದಳು. ಮುಂದೆ ಕಾಲಾನಂತರದಲ್ಲಿ ಸುಂದರವಾದ ಗಂಡು ಮಗುವಿಗೆ ಜನ್ಮ ನೀಡಿದಳು. ಇದರಿಂದಾಗಿ ಎರಡೂ ಕಡೆಯವರಿಗೂ ಆ ಉರುಳಿಯ ಮೇಲೆ ವಿಶ್ವಾಸ ಹುಟ್ಟಿತು. ಈ ರೀತಿ 'ಉರುಳಿ ಕವುಚಿ' ಹಾಕಿ ಅದರಿಂದ ತನಗೆ ಪ್ರತಿಫಲ ದೊರಕಿತೆಂದು ಭಾವಿಸಿದ ಆ ಹೆಂಗಸು ತನ್ನ ಮಗುವಿನೊಂದಿಗೆ ಕ್ಷೇತ್ರದರ್ಶನ ನಡೆಸಿ ಕ್ಷೇತ್ರದ ಅಮ್ಮನ ಆಶೀರ್ವಾದ ಪಡೆದುಕೊಂಡಳು.

ಕಾಕತಾಳೀಯವೆಂಬಂತೆ ಅದುವರೆಗೆ ಯಾವುದಕ್ಕೂ ಉಪಯೋಗಿಸದೆ ಕವುಚಿ ಹಾಕಿದ್ದ ಉರುಳಿಯಲ್ಲಿ ಅಡಗಿದ್ದ ದಿವ್ಯತ್ವವನ್ನು ಅರಿತುಕೊಂಡು ಅಮ್ಮ ಅದರಲ್ಲಿ ಕ್ಷೀರಪಾಯಸವನ್ನಿಟ್ಟು ಭಗವಂತನಿಗೆ ಅರ್ಪಿಸಿದಳು. ಈ ರೀತಿಯ ವ್ಯವಸ್ಥೆಯು ಒಂದು ಆಚರಣೆಯಾಗಿಯೇ ಬೆಳೆದು ಬಂತು'. ಈಗಲೂ ಈ ಪರಂಪರೆ ಯಥಾವತ್ತಾಗಿ ಮುಂದುವರಿದುಕೊಂಡು ಬಂದಿದೆ.

ಸಂತಾನಾಪೇಕ್ಷಿಗಳಾದ ದಂಪತಿಗಳು ತರುವ ಉರುಳಿಯನ್ನು ಅವರಿಂದಲೇ ಪ್ರಾರ್ಥಿಸಿ, ಪ್ರದಕ್ಷಿಣೆ ಮೊದಲಾದ ಧಾರ್ಮಿಕ ಕಾರ್ಯಗಳ ನಂತರ ಕ್ಷೇತ್ರದ ಹೊಸ್ತಿಲಲ್ಲಿ ಇರಿಸಲಾಗುತ್ತದೆ. ನಂತರ ದೊಡ್ಡಮ್ಮ ಅದನ್ನು ತೆಗೆದು ನೆಲಮಾಳಿಗೆಯಲ್ಲಿ ಕವುಚಿ ಇರಿಸುವಳು. ದಂಪತಿಗಳು ಮಗುವಾದ ಆರನೇ ತಿಂಗಳಿನಲ್ಲಿ ಮಗುವಿನೊಂದಿಗೆ ಬಂದು, ಉರುಳಿಯನ್ನು ನೇರವಾಗಿರಿಸಿ ಹರಕೆಯ ಪರಿಸಮಾಪ್ತಿಯನ್ನು ನಡೆಸುತ್ತಾರೆ. ಈ ಹಿನ್ನೆಲೆಯಲ್ಲಿ ಕ್ಷೇತ್ರದಲ್ಲಿ ಉರುಳಿ ಕವುಚಿ ಹಾಕುವ ಹರಕೆ ಬೆಳೆದು ಬಂತು. ನೂರಾರು ಮಂದಿ ಭಕ್ತರು ಕ್ಷೇತ್ರದಲ್ಲಿ ಹರಕೆಯನ್ನು ಸಲ್ಲಿಸಿ ಫಲ ಪಡೆದುಕೊಳ್ಳುತ್ತಾರೆ.

ಕನ್ಯಾ ಮಾಸದ ಆಶ್ಲೇಷ

ಕೇರಳದ ಎಲ್ಲ ನಾಗರಾಜ ಕ್ಷೇತ್ರಗಳು ಆಚರಿಸುವಂತೆ 'ಕನ್ಯಾಮಾಸದ ಆಶ್ಲೇಷ'ದ ದಿನವನ್ನು ಈ ಕ್ಷೇತ್ರದಲ್ಲಿ ಉತ್ಸವದ ದಿನವಾಗಿ ಆಚರಿಸಲಾಗುತ್ತದೆ. ಅಂದು ನಾಗರಾಜನ ಜನ್ಮದಿನವೆಂದು ಭಾವಿಸಲಾಗಿದೆ. ಭಾರತದ ಇತರ ಪ್ರದೇಶಗಳಲ್ಲಿ ಅಂದಿನ ದಿನವನ್ನು 'ನಾಗರಪಂಚಮಿ' ಎಂದು ಆಚರಿಸಲಾಗುತ್ತದೆ. ಸ್ವರ್ಗಲೋಕದ ಸರ್ಪಗಳು, ಭೂಲೋಕ, ಪಾತಾಳ ಲೋಕದ ಸರ್ಪಗಳೂ ತಮ್ಮ ಚಕ್ರವರ್ತಿಯನ್ನು ವಂದಿಸಲು ಅಂದು ಕ್ಷೇತ್ರದರ್ಶನ ನಡೆಸುತ್ತವೆ ಎಂಬ ನಂಬಿಕೆಯಿದೆ. ವೃಷಭ ಹದಿನೈದರಿಂದ ಕನ್ಯಾಮಾಸದ ಆಶ್ಲೇಷದವರೆಗೆ ಸರ್ಪಗಳು ಚಾತುರ್ಮಾಸ ವ್ರತ ಮಾಡುತ್ತವೆಂಬ ನಂಬಿಕೆಯಿದೆ. ಆದ್ದರಿಂದ ನೂರುಂ ಪಾಲುಂ ಸರ್ಪಬಲಿ, ಸರ್ಪಪಾಟ್ ಮತ್ತು ಸರ್ಪಕಾವ್‌ಗಳಲ್ಲಿ ಪೂಜೆ, ಪ್ರತಿಷ್ಠೆ ಮುಂತಾದವುಗಳನ್ನು ನಡೆಸಲಾಗುವುದಿಲ್ಲ. ಯಾವ ಕಾರಣದಿಂದಲೂ ಈ ದಿವಸಗಳಲ್ಲಿ ಯಾವ ವಿಧದ ಪೂಜೆಯನ್ನು ಸಲ್ಲಿಸುವುದು ಶುಭಕರವಲ್ಲ. ಸಮಾಧಿಸ್ತವಾಗಿರುವ ಸರ್ಪಗಳು ಸಮಾಧಿಯಿಂದ

ಎಚ್ಚರಗೊಳ್ಳುವುದು ಕನ್ಯಾಮಾಸದ ಆಶ್ಲೇಷದಂದು ಎಂದು ಭಾವಿಸಲಾಗಿದೆ. ಹೀಗೆ ಈ ದಿವಸ ನಾಗದೇವರಿಗೆ ಹಲವು ರೀತಿಯಲ್ಲಿ ವಿಶೇಷವೆನಿಸಿಕೊಂಡಿದೆ.

ಕನ್ಯಾ, ತುಲಾ, ಕುಂಭ ಮಾಸಗಳ ಆಶ್ಲೇಷವೂ, ಶಿವರಾತ್ರಿಯೂ ಈ ಕ್ಷೇತ್ರದ ಉತ್ಸವ ದಿವಸಗಳಾದರೂ, ತುಲಾ ಮಾಸದ ಆಶ್ಲೇಷವು ಶ್ರೇಷ್ಠವೆಂದು ಭಾವಿಸಲಾಗಿದೆ. ಅಂದು ಸೂರ್ಯ ಭೂಮಿಯ ನೇರಕ್ಕೆ ಬರುವಾಗ, ಕನ್ಯಾ, ತುಲಾ ಮಾಸದ ಆಶ್ಲೇಷ ದಿವಸಗಳಲ್ಲಿ ಮಧ್ಯಾಹ್ನ ಪೂಜೆ ಮುಗಿದಿರಬೇಕೆಂಬುದು ಮಾಡಿಕೊಂಡ ವ್ಯವಸ್ಥೆಯಾಗಿದೆ. ಬಾಲ ಸೂರ್ಯನು ಕ್ಷೇತ್ರದ ಕರ್ಪೂರಾಧನೆ ಕಂಡು ಸರ್ಪರಾಜನನ್ನು ವಂದಿಸುವನೆಂಬುದು ಇಲ್ಲಿರುವ ನಂಬಿಕೆ. ಅದಲ್ಲದೆ ಅಂದು ಎಲ್ಲ ಜಾತಿ ಮತದವರು ಕ್ಷೇತ್ರವನ್ನು ಪ್ರವೇಶಿಸಿ ಭಗವಂತನ ದರ್ಶನ ಮಾಡಬಹುದಾಗಿದೆ.

ಆಶ್ಲೇಷದ ಹಿಂದಿನ ದಿವಸದ ರಾತ್ರಿ ಭೋಜನ 'ಮಾರಾರ್ ಸದ್ಯ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಭಕ್ತಜನರು ದೂರದೂರದ ಊರುಗಳಿಂದ ತಾವು ಬರುವಾಗಲೇ ಕೊಂಡು ತರುತ್ತಾರೆ. ಅಂದಿನ ದಿನ ನಡೆಯುವ ಆ ಊಟಕ್ಕೆ ಭಗವಂತನಾದ ವಾಸುಕಿಯು ಮಾರುವೇಷದಲ್ಲಿ ಬಡಿಸಲು ಬರುತ್ತಾನೆಂದು ಜನರಲ್ಲಿ ನಂಬಿಕೆಯಿದೆ.

ನಂತರದ 'ಪುಷ್ಯ' ದಿವಸದ ರಾತ್ರಿ ಭೋಜನದ 'ಮುಳವುಷ್ಯಂ' ಬಹಳ ಪ್ರಸಿದ್ಧವಾಗಿದೆ. ಗುಣವಾಗದ ರೋಗಗಳಿಗೂ ಹಲವಾರು ರೀತಿಯ ವ್ಯಾಧಿಗಳಿಗೆ ಈ 'ಊಟ'ದಿಂದ ಪರಿಹಾರ ದೊರೆಯುವುದೆಂದು ನಂಬಿಕೆಯಿದೆ. ಅದಕ್ಕಾಗಿ ದೂರ ದೂರದ ಊರುಗಳಿಂದ ಭಕ್ತಜನರು 'ಮುಳವುಷ್ಯಂ' ಗೋಸ್ಕರವಾಗಿ ಧಾವಿಸಿ ಬರುತ್ತಾರೆ.

ಆಶ್ಲೇಷದಂದು ಮಧ್ಯಾಹ್ನದ ನಂತರ ಅಮ್ಮ ತೀರ್ಥಕೊಳದಲ್ಲಿ ಸ್ನಾನ ಮಾಡಿ ಬಂದು ಕ್ಷೇತ್ರವನ್ನು ತಲುಪಿ ಭಗವಂತನನ್ನು ಪೂಜಿಸಿ, ನಂತರ 'ತಿರುವಾಭರಣ'ವನ್ನು ಎತ್ತಿಕೊಂಡು ಸರ್ಪಗಳು ಕುಣಿಯುವಂತೆ ಕುಣಿದುಕೊಂಡು ಪುಳ್ಳವರು ಹಾಡುವ 'ಪುಳ್ಳವ ಪಾಟ್ಟು'ಗೆ ಸರಿಯಾಗಿ ಹೆಜ್ಜೆ ಹಾಕುತ್ತಾಳೆ. ಈ ದೃಶ್ಯ ಭಕ್ತಾದಿಗಳಿಗೆ ಭಯ ಭಕ್ತಿಯನ್ನು ಉಂಟುಮಾಡುತ್ತದೆ.

ತುಲಾ ಮಾಸದ ಆಶ್ಲೇಷ: ಈ ಮಾಸದ ಉತ್ಸವ ಆರಂಭವಾಗುವುದಕ್ಕೆ ಪೂರ್ವದಲ್ಲಿ ಕನ್ಯಾಮಾಸದ ಆಶ್ಲೇಷದಲ್ಲಿ ಮಾತ್ರವೇ ಉತ್ಸವ ನಡೆಯುತಿತ್ತು. ಮಣ್ಣಾರ ಶಾಲ ಇಲ್ಲಂ ಇರುವ 'ತುಲಾ ಪರಂಬ್' ವ್ಯಾಪ್ತಿಯಲ್ಲಿ ಬರುವ ರಾಜ್ಯದ ರಾಜರುಗಳು ಈ ಕ್ಷೇತ್ರದರ್ಶನ ನಡೆಸುವ ರೂಢಿ ಇತ್ತು. 'ಕಾಯಂ ಕುಳಂ' ರಾಜರುಗಳೂ ತಿರುವಾಂಕೂರ್ ರಾಜರುಗಳು ಕ್ಷೇತ್ರದ ದರ್ಶನ ನಡೆಸಿಕೊಂಡು ಬರುತ್ತಿದ್ದರು.

ಒಂದು ಸಲದ 'ಕನ್ಯಾ ಆಶ್ಲೇಷ'ಕ್ಕೆ ಅಂದಿನ ತಿರುವಾಂಕೂರ್ ರಾಜನಾದ 'ಆಶ್ಲೇಷ ತಿರುನಾಳು'ಗೆ ಅಶುದ್ಧಿ ಬಂದಿದ್ದರಿಂದ ಕ್ಷೇತ್ರದರ್ಶನ ನಡೆಸಲಾಗಲಿಲ್ಲ. ಆದ್ದರಿಂದ ತುಲಾ ಮಾಸದ ಆಶ್ಲೇಷವನ್ನು ಕನ್ಯಾಮಾಸದಂತೆ ಎಲ್ಲಾ ಆಚರಣೆಗಳೊಂದಿಗೆ ನಡೆಸಬೇಕೆಂದು ಏರ್ಪಾಡು ಮಾಡಲಾಯಿತು. ಆ ವಿಶೇಷ ಉತ್ಸವದ ಖರ್ಚಿಗಾಗಿ ರಾಜನು ಉಂಬಳಿ ಇತ್ಯಾದಿಗಳನ್ನು ಬಿಟ್ಟನು. ಹೀಗೆ ತುಲಾ ಮಾಸದ ಆಶ್ಲೇಷೋತ್ಸವವು ಪ್ರಾರಂಭವಾಯಿತು. ತುಲಾ ಮಾಸದ ಆಶ್ಲೇಷವು ಮಹಾರಾಜನ ಉತ್ಸವವಾದರಿಂದ ರಾಜಮನ್ನಣೆ ದೊರಕಿದ್ದರಿಂದಲೂ ಹೆಚ್ಚಿನ ಪ್ರಚಾರ

ದೊರಕಿದ್ದರಿಂದಲೂ ಭಕ್ತ ಜನರು ಹೆಚ್ಚಾಗಿ ಬಂದು ಸೇರುತ್ತಿದ್ದರಿಂದ ಇದಕ್ಕೆ ಬೇರೆಲ್ಲ ಉತ್ಸವಕ್ಕಿಂತ ಅಗ್ರಸ್ಥಾನ ನೀಡಲು ಸಾಧ್ಯವಾಯಿತು.

ಮಹಾಶಿವರಾತ್ರಿ: ಕ್ಷೇತ್ರದ ವಿಶೇಷ ಉತ್ಸವ ಮತ್ತು ಆಚರಣೆಗಳು ನಡೆಯುವ ದಿವಸವಾಗಿ ಶಿವರಾತ್ರಿಯನ್ನು ವೈಭವೋಪೇತವಾಗಿ ಆಚರಿಸಲಾಗುತ್ತದೆ. ಅಂದು ಕ್ಷೇತ್ರ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಆಗಮಿಸುತ್ತಾರೆ. ಅಂದು ದಿನಪೂರ್ತಿ ದೇವಾಲಯದಲ್ಲಿ ಪೂಜಾದಿ ಕಾರ್ಯಗಳು ನಡೆಯುತ್ತವೆ.

ಆ ದಿನ ವಿಶೇಷವಾಗಿ ಅಭಿಷೇಕ ಉಷಾ ಪೂಜ, ಪಂದೀರಡಿ, ಪಂಚಗವ್ಯ, ನವಕ. ಪೆರಿಕಲಶ, ಬ್ರಹ್ಮಕಲಾಶಾದಿ ಅಭಿಷೇಕಗಳೂ ಮಧ್ಯಾಹ್ನದ ಸಮಯದಲ್ಲಿ ನೆರವೇರುತ್ತದೆ. ಸಂಧ್ಯಾಕಾಲದಲ್ಲಿ ಮೊದಲಾಗಿ ಬಾಗಿಲು ತೆರೆದು ನಿರ್ಮಲ ತೆಗೆದು ಅಭಿಷೇಕಾಧಿಗಳನ್ನು ಮಾಡಿ ನಂತರ ಪೂಜೆಯು ಮುಂದುವರೆಯುವುದು. ಶಿವರಾತ್ರಿ ದಿವಸದ ಪೂಜೆಯನ್ನು ಕುಟುಂಬದ ಹಿರಿಯರು ನೆರವೇರಿಸುವರು ಅವರಿಗೆ ಅಸೌಖ್ಯವಾಗಿದಲ್ಲಿ ಅವರ ನಂತರದ ಕುಟುಂಬದ ಹಿರಿಯರು ನಡೆಸಬಹುದಾಗಿದೆ.

ಅಂದು ರಾತ್ರಿ ವಿಶೇಷವಾಗಿ ಪೂಜೆಯ ಬಳಿಕ ಶಂಖ ಮೊಳಗಿಸಿ ನಾಗರಾಜನನ್ನು, ಸರ್ಪಯಕ್ಷಿಯನ್ನೂ, ದಕ್ಷಿಣ ಮಂಟಪದಲ್ಲಿ ಪದ್ಮರಚಿಸಿ, ಪಟ್ಟೆ ಹಾಸಿ, ಸಜ್ಜೆ ಮಾಡಿರುವ ಪೀಠದಲ್ಲಿ ಮೆರವಣಿಗೆಯಲ್ಲಿ ತಂದು ಕೂರಿಸಲಾಗುತ್ತದೆ. ಪೂಜೆ ನೂರುಂಪಾಲುಂ ಸರ್ಪಬಲಿ ಮುಂತಾದವುಗಳನ್ನು ನೆರವೇರಿಸಲಾಗುತ್ತದೆ. ಈ ಎಲ್ಲ ಕಾರ್ಯಗಳನ್ನು ದೇವಾಲಯದ ಅಮ್ಮನೇ ನೆರವೇರಿಸುತ್ತಾಳೆ. ಅಮ್ಮನಿಗೆ ಅಸೌಖ್ಯವಾದಲ್ಲಿ ಆಚರಣೆಗಳಿಗೆ ತಡೆ ಆದಂತೆಯೇ ಅಂದರೆ ಅಮ್ಮನ ಬದಲಿಗೆ ಬೇರೆ ಯಾರೂ ಭಾಗವಹಿಸುವಂತಿಲ್ಲ.

ಅಂದು ಸರ್ಪಬಲಿ, ನೂರುಂ ಪಾಲುಂಗಾಗಿ ಇರುವ ಹಿಟ್ಟುಕುಟ್ಟುವ ಕಾರ್ಯವನ್ನು ಕುಟುಂಬಸ್ಥರೆಲ್ಲ ಸೇರಿ ನಿರ್ವಹಿಸುತ್ತಾರೆ. ಇತರ ವ್ಯಕ್ತಿಗಳು ಈ ಕಾರ್ಯದಲ್ಲಿ ಭಾಗಿಗಳಾಗುವಂತಿಲ್ಲ. ಇದು ಬಹಳ ಪವಿತ್ರವಾದ ಕಾರ್ಯವೆಂದು ನಂಬಿಕೆ. ಸಮಾವರ್ತನ ಮುಗಿದ ಇಲ್ಲಂನ ಗಂಡಸರೂ ಇಲ್ಲಂಗೆ ವಿವಾಹವಾಗಿ ಕರೆದು ತಂದಿರುವ 'ಅಂತರ್ಜನ'ರೂ ಹಿಟ್ಟು ಕುಟ್ಟುವ ಕಾರ್ಯವನ್ನು ಕ್ರಮವತ್ತಾಗಿ ವ್ರತ ಶುದ್ಧಿಯೊಂದಿಗೆ ಮೂರು ದಿವಸ ಮಾಡುತ್ತಾರೆ.

ನಾಗಾರಾಜನ ಎದುರಿಗಿರುವ ಮಂಟಪದಲ್ಲಿ ಸರ್ಪಬಲಿಯ ನೈವೇಧ್ಯ ಮುಗಿದ ನಂತರವೇ ಹಿಟ್ಟುಕುಟ್ಟುವ ಕಾರ್ಯ ಆರಂಭವಾಗುತ್ತದೆ. ರಾತ್ರಿಯ ಎರಡನೇ ಜಾವದಲ್ಲಿ ಸರ್ಪಯಕ್ಷಿ ದೇಗುಲದ ಮುಂಭಾಗದಲ್ಲಿ ಮತ್ತು ಭಗವತಿಯ ಮುಂಭಾಗದಲ್ಲಿ 'ಪದ್ಮ' ರಚಿಸಿ ಅದರ ಮೇಲೆ 'ಒರಳನ್ನು' ಇಡುತ್ತಾರೆ. ಒರಳಿಗೆ ರೇಷ್ಮೆಯ ಪಟ್ಟೆಯನ್ನು ಉಡಿಸಿ ಅಲಂಕರಿಸಲಾಗುತ್ತದೆ. ಒರಳಿನ ನಡುವಿನ ಸುತ್ತ ಹಿಂಗಾರವನ್ನು ಚುಚ್ಚಿ ನಿಲ್ಲಿಸಲಾಗುತ್ತದೆ. ಹಿಟ್ಟುಕುಟ್ಟುವ ಜನರ ಸಂಖ್ಯೆಗನುಗುಣವಾಗಿ ಶುದ್ಧಿ ಮಾಡಿದ ಒನಕೆಗಳನ್ನು ತಲೆಕೆಳಗಾಗಿ ಒರಳಿನ ಸುತ್ತ ಆನಿಸಿ ನಿಲ್ಲಿಸಲಾಗುತ್ತದೆ. ಗಣಪತಿ ಪೂಜೆಯ ನಂತರ ಒರಳು ಪೂಜೆ ನಡೆಯುತ್ತದೆ.

ಹಿಟ್ಟುಕುಟ್ಟಲು ಸಿದ್ಧರಾದವರು ಸ್ನಾನಾಧಿಗಳ ನಂತರ ನಾಗರಾಜನನ್ನು, ಭಗವತಿಯನ್ನು ನಮಿಸಿ ವಂದಿಸುತ್ತಾರೆ. ಹಿಟ್ಟು ಕುಟ್ಟುವ ಕಾರ್ಯವನ್ನು ಅಮ್ಮ ಮೊದಲು ಪ್ರಾರಂಭಿಸುತ್ತಾರೆ. ನಂತರ ಹಿರಿಯರಾಧಿಯಾಗಿ ಕಿರಿಯರವರೆಗೆ

ಅಂತರ್ಜನರು ಒಬ್ಬೊಬ್ಬರೇ ಪ್ರಾರಂಭಿಸುತ್ತಾರೆ. ನಾಗರಾಜನನ್ನು, ಸರ್ಪಯಕ್ಷಿ ಮತ್ತು ಅಮ್ಮನನ್ನು ವಂದಿಸುತ್ತಾರೆ. ಕೈ ಚಾಚಿ ಎರಡು ಕೈಗಳ ತುದಿಯನ್ನು ಸೇರಿಸಿ ಒರಳಿನ ಮೇಲೆ ತೋರಿಸುತ್ತಾ ಬಗ್ಗಿ ನಿಲ್ಲುತ್ತಾರೆ.

ಒರಳಿಗೆ ಹಾಕಿದ್ದ ಹಿಂಗಾರದ ಹೂವನ್ನು ಪೂರ್ವದಿಂದ ತೊಡಗಿ ಒಂದೊಂದೇ ತೆಗೆಯುತ್ತಾ ಅಮ್ಮ ಮಂತ್ರ ಹೇಳುತ್ತ ಅಂತರ್ಜನರ ಹಸ್ತಕ್ಕೆ ಒಂದೊಂದಾಗಿ ಹಾಕುವರು. ಕುಟ್ಟಲು ಇಟ್ಟಿರುವ ನೆನೆಹಾಕಿದ ಒಣ ಅಕ್ಕಿಯನ್ನು ಎರಡೂ ಕೈಗಳಿಂದ ಚಾಚಿ ತೆಗೆದು ಹಿಂಗಾರದ ಮೇಲಿನಿಂದ ಕೈಯಲ್ಲಿ ಸಮರ್ಪಿಸುವರು.

ಅಂತರ್ಜನ ಎರಡೂ ಕೈಗಳ ಕಿರುಬೆರಳಿನಿಂದ ಹಿಂಗಾರವನ್ನು ಮೆಲ್ಲಗೆ ಒತ್ತಿ ಅಕ್ಕಿಯನ್ನು ಮಾತ್ರ ಒರಳಿಗೆ ಬೀಳಿಸುತ್ತಾರೆ. ಹೀಗೆ ಮೂರು ಸಲ ಆದಾಗ ಒರಳಿನಲ್ಲಿ ಅಲಂಕರಿಸಿಟ್ಟಿರುವ ಒನಕೆಯನ್ನು ಪೂರ್ವದಿಂದ ತೊಡಗಿ ತೆಗೆದುಕೊಡುತ್ತಾರೆ. ಹಿಂಗಾರವನ್ನು ಕೈಯಲ್ಲೇ ಇಟ್ಟುಕೊಂಡು ಎರಡೂ ಕೈಗಳನ್ನು ಸೇರಿಸಿ ಅಮ್ಮನಿಂದ ಅಂತಃ ರ್ಜನರು ಒನಕೆಯನ್ನು ಪಡೆದುಕೊಳ್ಳುತ್ತಾರೆ. ಭಗವತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ನಾಲ್ಕೈದು ಬಾರಿ ಕುಟ್ಟುತ್ತಾರೆ. ಆಗ ಹಿಂಗಾರವು ಒರಳಿನಲ್ಲಿ ಬೀಳುತ್ತದೆ.

ಬಳಿಕ ಒನಕೆಯ ತುದಿಯನ್ನು ಮೇಲೆ ಮಾಡಿ ಎರಡೂ ಕೈಗಳಲ್ಲಿ ಹಿಂಗಾರವನ್ನು ಹಿಡಿದು ನಮಸ್ಕರಿಸುತ್ತ ಭಗವತಿಯ ಮುಂದೆ ಸರಿದು ನಿಲ್ಲುವರು. ಹೀಗೆ ಒಬ್ಬೊಬ್ಬರಾಗಿ ಅಂತರ್ಜನಗಳು ನಮಸ್ಕರಿಸಿದ ನಂತರದ ಸರದಿ ಗಂಡಸರದ್ದು. ಕಾರಣವರ್ ಎನಿಸಿಕೊಳ್ಳುವ ಮನೆಯ ಹಿರಿಯರು ಒಬ್ಬೊಬ್ಬರಾಗಿ ಬರುವರು. ನಾಗರಾಜನನ್ನು ಭಗವತಿಯನ್ನು ನಮಸ್ಕರಿಸುವರು. ಅಮ್ಮನಿಗೂ ವಂದಿಸಿ ಕಾರ್ಯಕ್ಕೆ ಮುಂದಾಗುವರು. ಅಂತಃರ್ಜನಗಳಿಗೆ ಕೊಟ್ಟಂತೆಯೇ ಅಮ್ಮ ಹಿಂಗಾರ, ಅಕ್ಕಿ ಒನಕೆ ಮುಂತಾದವುಗಳನ್ನು ಕೊಡುವರು. ಬಳಿಕ ಗಂಡಸರು ಒರಳಿನಲ್ಲಿ ನಾಲ್ಕೈದುಬಾರಿ ಬಲವಾಗಿ ಅಕ್ಕಿಯನ್ನು ಕುಟ್ಟುವರು. ಕೊನೆಗೆ ಒನಕೆಯನ್ನು ಒರಳಿನಲ್ಲಿ ಗುದ್ದಿ ಹಿಂದಿರುಗಿಸುತ್ತಾರೆ. ಹಿಂಗಾರವನ್ನು ಒರಳಿನ ಕೆಳಗೆ ಆರಾಧಿಸುತ್ತಾರೆ. ಭಗವತಿಗೂ ಅಮ್ಮನಿಗೂ ವಂದಿಸಿ ಹಿಂದಿರುಗುವರು.

ಗಂಡಸರೆಲ್ಲ ಅಕ್ಕಿ ಕುಟ್ಟಿದ ನಂತರ ಅಂತರ್ಜನಗಳು ಪುನಃ ಬಂದು ಹಿಟ್ಟನ್ನು ಕುಟ್ಟುವರು. ಚದುರಿ ಹಾರಿರುವ ಅಕ್ಕಿಹುಡಿಯ ಹಕ್ಕುದಾರರಾಗಿ ಭೂತಗಣಗಳು ಕಾದಿರುತ್ತವೆ ಎಂಬ ನಂಬಿಕೆಯಿದೆ. ಹಿಟ್ಟು ಕುಟ್ಟುವಾಗ ಪ್ರತ್ಯೇಕ ರೀತಿಯಲ್ಲಿ ಚಂಡೆಯ ಶಬ್ದ ಕೇಳಿದಾಗ ಭೂತಗಣಗಳು ಬಂದು ಆ ಪ್ರದೇಶದಲ್ಲಿ ಸೇರಿಕೊಳ್ಳುತ್ತವೆ ಎಂಬ ನಂಬಿಕೆಯಿದೆ.

ಅಂತರ್ತಃರ್ಜನಗಳು ಎರಡನೆಯ ಸಲ ಹಿಟ್ಟು ಕುಟ್ಟುವ ಸಮಯದಲ್ಲಿ ಅಮ್ಮ ದೇವಸ್ಥಾನದ ದಕ್ಷಿಣ ಮಂಟಪಕ್ಕೆ ಬರುವರು. ಬಳಿಕ ಪೂಜೆಯ ಉಳಿದ ಭಾಗ ಮುಂದುವರಿಯುತ್ತದೆ. ಪ್ರಸನ್ನ ಪೂಜೆಯ ಜಲಾದಿ-ಜಲಾಂತ ಮುಗಿದ ಬಳಿಕ ಅಮ್ಮ ತಿರುಗಿ ಒರಳಿನ ಹತ್ತಿರ ಬರುವರು. ಆ ಹೊತ್ತಿಗಾಗಲೇ ಹಿಟ್ಟುಕುಟ್ಟುವ ಕಾರ್ಯ ಸುಮಾರಾಗಿ ಮುಗಿದಿರುತ್ತದೆ. ಅಂತಃರ್ಜನಗಳ ಕೈಯಿಂದ ಒನಕೆಗಳನ್ನು ಒಂದೊಂದಾಗಿ ಹಿಂದಕ್ಕೆ ಪಡೆಯಲಾಗುತ್ತದೆ. ಅಮ್ಮ ಮತ್ತೊಮ್ಮೆ ಕೊನೆಯದಾಗಿ ಹಿಟ್ಟನ್ನು ಕುಟ್ಟಿ ಈ ಕಾರ್ಯವನ್ನು ನಿಲ್ಲಿಸುತ್ತಾರೆ. ಹಿಟ್ಟು ಕುಟ್ಟುವ ಆರಂಭ ಮತ್ತು ಮುಕ್ತಾಯವನ್ನು ಅಮ್ಮನೇ ನಿರ್ವಹಿಸುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಬಳಿಕ ನಾಗರಾಜನಿಗೆ ನೂರುಂ ಪಾಲುಂ ಸಮರ್ಪಣೆಯ ಬಳಿಕ ಕ್ಷೇತ್ರದ ದಕ್ಷಿಣ ಭಾಗದಲ್ಲಿರುವ ಶಿವರಾತ್ರಿ ಮಂಟಪಕ್ಕೆ ಬರುತ್ತಾರೆ. ಆಕಾಶ

ಸರ್ಪಗಳು, ಪಾತಾಳ ಸರ್ಪಗಳು, ಬಾಧಕ ಸರ್ಪಗಳು, ಅಖಿಲ ಸರ್ಪಗಳು ಅವರಿಗೆಲ್ಲ ಪೂಜೆಯನ್ನು, ನೂರು ಪಾಲುಂಅನ್ನು ಸಮರ್ಪಿಸುತ್ತಾರೆ. ಪುನಃ ಮಂಟಪಕ್ಕೆ ಬಂದು ಪೂಜೆಯನ್ನು ಪೂರ್ತಿಗೊಳಿಸುತ್ತಾರೆ. ಉತ್ತರ ದೇಗುಲದ ಮಂಟಪದಲ್ಲಿ ಒಕುಳಿಯ ನಂತರ ನಾಗರಾಜನನ್ನು ಎದುರುಗೊಳ್ಳಲಾಗುತ್ತದೆ. ಈ ಕಾರ್ಯಕ್ರಮಗಳೆಲ್ಲ ನಡೆಯುವಾಗ ಸಾಮಾನ್ಯವಾಗಿ ಮುಂಜಾನೆಯ ಹೊತ್ತು ಆವರಿಸಿರುತ್ತದೆ. ಈಗ ಶಂಖದೊಂದಿಗೆ ವಿವಿಧ ವಾದ್ಯ, ಮೇಳಗಳನ್ನು ಮೊಳಗಿಸಲಾಗುತ್ತದೆ. ವಿವಿಧ ರೀತಿಯ ದೀಪಗಳನ್ನು ಬೆಳಗುತ್ತಾರೆ. ಬೆಳ್ಳಿಕೊಡೆ, ಮುತ್ತುಕೊಡೆ, ಧ್ವಜ, ತೋರಣ, ಛತ್ರ ಚಾಮರಗಳನ್ನು ಸಿದ್ಧಗೊಳಿಸುವರು. ಪ್ರತ್ಯೇಕ ರೀತಿಯಲ್ಲಿ ಹೊಲಿದ ಕೆಂಪು ರೇಷ್ಮೆಯ ಉತ್ತರೀಯವನ್ನು ಟೊಪ್ಪಿಯನ್ನು ಧರಿಸಿದ ಕುಟುಂಬದ ಕಾರಣವರ್ ಅವರ ನಂತರದ ಹಿರಿಯರು ಸೇರಿ ನಾಗರಾಜನನ್ನು ಸರ್ಪಯಕ್ಷಿಯನ್ನು ಯಥಾಕ್ರಮ ಮೆರವಣಿಗೆಯಲ್ಲಿ ತರುತ್ತಾರೆ. ಕ್ಷೇತ್ರಂಗೆ ಪ್ರದಕ್ಷಿಣೆ ಬಂದು ಇಲ್ಲಂಗೆ ತಲುಪಿ, ನೆಲಮಾಳಿಗೆಯಲ್ಲಿರುವ ಮುತ್ತಜ್ಜನನ್ನು ಮನಸಾರೆ ವಂದಿಸಿ ಪಿತೃಗಳಿಗೆ ನಮಿಸಿ, ಪೂರ್ವದಲ್ಲಿರುವ ಕಾರೊಳಿ ಎಂಬ ಕೊಳದ ಬಳಿಗೆ ತಲುಪುತ್ತಾರೆ.

ಅಲ್ಲಿ ಕೊಳದ ಸಮೀಪದಲ್ಲಿ ಚಪ್ಪರ ಹಾಕಿ, ದೀಪಹಚ್ಚಿ ಪೀಠದ ಮೇಲೆ ರೇಷ್ಮೆಯ ವಸ್ತ್ರವನ್ನು ಹಾಸಿ ಸಜ್ಜೆಗೆ ಮೊದಲೇ ಸಿದ್ಧಪಡಿಸಿರುತ್ತಾರೆ. ಅಲ್ಲಿ ನಾಗರಾಜನನ್ನು ಭಗವತಿಯನ್ನು ಯಥಾಸ್ಥಾನದಲ್ಲಿ ಕುಳ್ಳಿರಿಸುತ್ತಾರೆ. ಇಲ್ಲಿ ಕೆಲವು ಆಚರಣೆ ವಿಧಿಗಳು ಮುಗಿದ ಬಳಿಕ ದೇವರ ಪ್ರತಿಮೆಗಳನ್ನು ಗರ್ಭಗುಡಿಯ ಒಳಗೆ ಸ್ಥಳಾಂತರಿಸಿ ಗರ್ಭಗುಡಿಯ ಬಾಗಿಲು ಮುಚ್ಚುತ್ತಾರೆ. ಇದರೊಂದಿಗೆ ಉತ್ಸವದ ವಿಶೇಷ ಕಾರ್ಯಕ್ರಮವು ಮುಕ್ತಾಯಗೊಳ್ಳುವುದು.

ಕುಂಭ ಮಾಸದ ಆಶ್ಲೇಷ: ಅಂದು ನೆಲಮಾಳಿಗೆಯ ಭಗವಂತನ ಜನ್ಮದಿನ, ಕನ್ಯಾ, ತುಲಾ, ಆಶ್ಲೇಷದ ಹಾಗೆ ಕುಂಭ ಮಾಸದ ಆಶ್ಲೇಷದಂದು ವಿಶೇಷ ಪೂಜೆಯೂ, ಮೆರವಣಿಗೆಯೂ ಇರುತ್ತದೆ. ಅಂದು ಕುಟುಂಬದ ಹಿರಿಯರು ದೇವಸ್ಥಾನದಲ್ಲಿ ಪೂಜೆ ನಡೆಸುತ್ತಾರೆ.

ಅಂದು ಮಧ್ಯಾಹ್ನದ ಪೂಜೆ ಮುಗಿದ ನಂತರ ಮೆರವಣಿಗೆ ನಡೆಯುತ್ತದೆ. ಮೆರವಣಿಗೆಯಲ್ಲಿ ಅಮ್ಮನು ನಾಗರಾಜನನನ್ನೂ ಕುಟುಂಬದ ಹಿರಿಯರೂ ಸರ್ಪಯಕ್ಷಿಯನ್ನು ತರುತ್ತಾರೆ. ವಾದ್ಯಮೇಳಗಳೊಂದಿಗೆ ಮೆರಮಣಿಗೆಯಲ್ಲಿ ಕರೆತಂದು ಇಲ್ಲಂನಲ್ಲಿ ಕೂರಿಸಿ ಆಶ್ಲೇಷ ಪೂಜೆ, ನೂರುಂ ಪಾಲುಂ, ಒಕುಳಿ ಮುಂತಾದುವುಗಳನ್ನು ಅಮ್ಮ ನಿರ್ವಹಿಸುತ್ತಾಳೆ. ಕುಂಭಮಾಸದ ಆಶ್ಲೇಷ ಪೂಜೆ ರಾತ್ರಿ ಬಹಳ ಹೊತ್ತಿನವರೆಗೆ ಇರುವುದಿಲ್ಲ.

ಕನ್ಯಾ, ತುಲಾ, ಆಶ್ಲೇಷ ದಿವಸಗಳಲ್ಲಿ ನಾಗರಾಗಜನನ್ನು ಅಮ್ಮನೂ, ಸರ್ಪಯಕ್ಷಿಯನ್ನು ನಾಗಚಾಮುಂಡಿಯನ್ನು ಮತ್ತು ನಾಗಯಕ್ಷಿಯನ್ನು ಕುಟುಂಬದ ಇತರ ಹಿರಿಯರು ಮೆರವಣಿಗೆಯಲ್ಲಿ ತರುತ್ತಾರೆ. ಆದರೆ ಕುಂಭ ಮಾಸದಲ್ಲಿ ನಾಗರಾಜನನ್ನು ಸರ್ಪಯಕ್ಷಿಯನ್ನು ಮಾತ್ರವೇ ಮೆರವಣಿಗೆಯಲ್ಲಿ ಕರೆತರಲಾಗುತ್ತದೆ. ಕುಂಭ ಮಾಸದ ಆಶ್ಲೇಷವು ಈ ರೀತಿಯಲ್ಲಿ ಭಿನ್ನವಾಗಿ ಆಚರಿಸಲ್ಪಡುತ್ತದೆ.

ಸರ್ಪಂಪಾಟ್ಟು: ಇದು ಮಣ್ಣಾರ ಶಾಲ ಶ್ರೀ ನಾಗರಾಜ ಕ್ಷೇತ್ರದ ಒಂದು ಪ್ರತ್ಯೇಕ ಆಚಾರ ಅನುಷ್ಠಾನವಾಗಿದೆ. ಸರ್ಪಪಾಟುನಲ್ಲಿ ಸರ್ಪ ಕುಣಿತಕ್ಕೆ ಇಲ್ಲಂನ ದಕ್ಷಿಣಕ್ಕಿರುವ ಅಂಗಳವನ್ನೇ ವೇದಿಕೆಯಾಗಿ ಪರಿವರ್ತಿಸಲಾಗುತ್ತದೆ. ಈ ಪ್ರದೇಶವು ಹಿಂದೆ ಪುರಾಣದಲ್ಲಿ ಖಾಂಡವ ದಹನ ನಡೆದಾಗ ಘೋರ ಬೆಂಕಿಯಿಂದ ರಕ್ಷೆ ಪಡೆಯಲು ಸರ್ಪಗಳು

ಓಡಿ ಬಂದು ಬವಳಿ ಬಿದ್ದ ಪುಣ್ಯ ಭೂಮಿ, ಎಂದು ಭಾವಿಸಲಾಗಿದೆ. ಹಳೆಯ ಪರ್ಣಶಾಲೆಯ ಅಂಗಳದಲ್ಲಿ ಯಜ್ಞಶಾಲೆಯನ್ನು ನಿರ್ಮಿಸಲಾಗಿದೆ. ಭಕ್ತ ಜನಗಳ ಹರಕೆಯಾಗಿ ಬರುವ ಸರ್ಪಬಲಿ ಮುಂತಾದ ಆಚರಣೆಗಳನ್ನು ಇಲ್ಲಿ ನಡೆಸಲಾಗುತ್ತದೆ. ಈ ಸ್ಥಳದಲ್ಲಿ 'ಸರ್ಪಪಾಟು' ನಡೆಸಲಾಗುತ್ತದೆ. ಇದನ್ನು 'ಸರ್ಪ ಗಾನ' ಎಂದೂ ಕರೆಯುತ್ತಾರೆ. ಸರ್ಪಗಳ ಮಹತ್ವ, ಮಹಿಮೆ ಮತ್ತು ಪುರಾಣಗಳ ಸರ್ಪಗಳಿಗೆ ಸಂಬಂಧಿಸಿದ ಕತೆಗಳನ್ನು 'ಪುಳ್ಳವ' ಜನಾಂಗದವರು ಹಾಡುತ್ತಾರೆ. ಇದೊಂದು ಅದ್ದೂರಿಯಾದ ಆಚರಣೆ. ಇದನ್ನು ಹನ್ನೆರಡು ವರ್ಷಗಳಿಗೊಮ್ಮೆ ವಿಶೇಷವಾಗಿ ಆಚರಿಸುವುದು ಸಂಪ್ರದಾಯ. ಸುಮಾರು ೪೧ ವರ್ಷಗಳಿಗೊಮ್ಮೆ ವಿಶೇಷವಾದ 'ಸರ್ಪಂಪಾಟು' ಆಚರಿಸಲಾಗುತ್ತದೆ. ಸರ್ಪಪಾಟುನೊಂದಿಗೆ ವಿಶೇಷವಾದ 'ಸರ್ಪಂ ತುಳ್ಳಲ್' ಕಾರ್ಯಕ್ರಮ ಕೂಡಾ ನಡೆಯುತ್ತದೆ. 'ನಂಬಿಯಾತಿ' ಹೆಂಗಸರು ವ್ರತ, ನೇಮದಿಂದಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಇದು ನಾಗದೇವರಿಗೆ ಅತಿ ಪ್ರಿಯವಾದ ಆಚರಣೆಯಾಗಿದೆ. ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ 'ಸರ್ಪಪಾಟ್ಟು' ಅತ್ಯಂತ ವಿಜ್ರಂಭಣೆಯ ಸಮಾರಂಭವಾಗಿದೆ. ಇದು ಎಲ್ಲ ನಾಗಗಳನ್ನು ಸಂತೃಪ್ತಿಗೊಳಿಸಲು ನೆರವೇರಿಸುವ ಕಾರ್ಯಕ್ರಮ ಪ್ರಸ್ತುತ ಸಂದರ್ಭದಲ್ಲಿ ಬಹಳ ದುಬಾರಿ ಹಾಗೂ ಆಚರಿಸಲು ಕಷ್ಟಕರವಾದ ಕಾರ್ಯಕ್ರಮವಾದುದರಿಂದ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಮಣ್ಣಾರ ಶಾಲದಲ್ಲಿ ಈ ಮಹೋತ್ಸವ ಜರಗುವುದು.

ಈ ಕಾರ್ಯಕ್ರಮದಲ್ಲಿ ನಡೆಯುವ 'ತುಳ್ಳಲ್'ಗಾಗಿ ಒಂಬತ್ತು ಕನ್ಯೆಯರನ್ನು ಆಯ್ಕೆ ಮಾಡಲಾಗುವುದು. ಈ ಒಂಭತ್ತು ಕನ್ಯೆಯರು 'ನಂಬಿಯಾಡಿ' ಮನೆತನದವರಾಗಿರಬೇಕು. ಅಥವಾ ಉಪವಾಸವಿದ್ದು ವ್ರತ ನಿಷ್ಠರಾದ ನಾಯರ್ ಕುಟುಂಬದ ಕನ್ನೆಯರಿಗೂ ಅವಕಾಶವಿದೆ. ಭಾಗವಹಿಸುವ ಯುವತಿಯರು ದೇವರಿಗೆ ನೂರುಂ ಪಾಲುಂ ನೀಡುವರು ಮತ್ತು ಸರ್ಪಪಾಟ್ಟ್ ನಡೆಯುವ ಸಂದರ್ಭದಲ್ಲಿ ಮುಖ್ಯವಾಗಿ 'ತುಳ್ಳಲ್' ವ್ರತ ಮಾಡುವರು. ಅಡಕೆಯ ಹಿಂಗಾರವನ್ನು ಹಿಡಿದುಕೊಂಡು ಆವೇಶಭರಿತರಾಗಿ ಕಂಪಿಸುತ್ತಾ ಹಾವುಗಳಂತೆ ಹೊರಳಾಡುತ್ತಾ ನರ್ತಿಸುವರು. ಕೊನೆಗೆ ಸರ್ಪಪಾಟ್‌ನ ಮುಕ್ತಾಯದೊಂದಿಗೆ ತುಳ್ಳಲ್ ಕೂಡ ಕೊನೆಗೊಳ್ಳುವುದು. ಇದೊಂದು ವಿಶೇಷವಾದ ಆಚರಣೆ.

ಗಂಧರ್ವಗಾನ: ಸರ್ಪಪಾಟ್ಟು ಅಥವಾ ಸರ್ಪಗಾನ ಮುಗಿದ ನಂತರದ ವರ್ಷ 'ಗಂಧರ್ವ ಪಾಟ್ಟು' ನಡೆಸಲಾಗುವುದು. ಸರ್ಪಗಾನದ ಸಂದರ್ಭದಲ್ಲಿ ನಾಗಾರಾಧನೆಗೆ ಬಂದು ಸೇರುವ ಗಂಧರ್ವರಿಗೆ ಅಶಾಸ್ತ್ರೀಯವೂ, ರಾಗ, ತಾಳ, ವೈಕಲ್ಯವಿರುವ ಪುಳ್ಳುವನ್ ಪಾಟು ಕೇಳಿ ರೋಷಾವೇಷಕ್ಕೆ ಒಳಗಾಗುವರೆಂದೂ, ಅವರನ್ನು ಪ್ರೀತಿಗೊಳಿಸಲೋಸುಗ ನಂತರದ ವರ್ಷ ಇದೇ ವೇದಿಕೆಯಲ್ಲಿ ಗಂಧರ್ವಗಾನವನ್ನು ನಡೆಸಲಾಗುವುದು. ಇದು ಕೇವಲ ಒಂದು ನಂಬಿಕೆಯೆಂದು ಭಾವಿಸಲಾಗಿದೆ.

'ಕುರುಪನ್' ಎಂಬ ವಿಶೇಷ ಜನಾಂಗದವರು ರಂಗೋಲಿ ಬರೆದು, ಶಾಸ್ತ್ರೀಯ ಸಂಗೀತವನ್ನು ಆಲಾಪಿಸುತ್ತಾರೆ. ಅಂದು ಇಲ್ಲಂನ ಅಮ್ಮ ಪೂಜಾಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿ ಗಂಧರ್ವಸಾನ್ನಿಧ್ಯ ಉಂಟಾಗುವುದೆಂದೂ, ಆಗ ಶಾಸ್ತ್ರೀಯ ಸಂಗೀತವನ್ನು ಆಲಾಪಿಸುವವರನ್ನು ಗಂಧರ್ವರು ಅನುಗ್ರಹಿಸುತ್ತಾರೆಂದೂ ನಂಬಲಾಗಿದೆ. ಆದ್ದರಿಂದ ಗಂಧರ್ವಗಾನ ನಡೆಸುವಾಗ ಗಾನ ವಿದ್ಯಾರ್ಥಿಗಳು, ಅಧ್ಯಾಪಕರುಗಳು, ಭಾಗವತರು,

ಮತ್ತಿತರ ಕಲಾವಿದರುಗಳು ತಮ್ಮ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸುತ್ತಾರೆ. ಹಿಂದೆ ಸರ್ಪಗಾನ, ಗಂಧರ್ವಗಾನ ನಡೆಯುತ್ತಿದ್ದ ಸಂದರ್ಭಗಳಲ್ಲಿ ರಾಜರುಗಳು ಕ್ಷೇತ್ರದರ್ಶನ ನಡೆಸುವುದು ರೂಢಿಯಾಗಿತ್ತು. ಈಗ ವಿದ್ವಾಂಸರುಗಳೊಂದಿಗೆ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾವಹಿಸುತ್ತಾರೆ.

ಮಣ್ಣಾರ ಶಾಲ ಜನಪದ ನಂಬಿಕೆಗಳು: ಮಣ್ಣಾರ ಶಾಲ ಕುರಿತಂತೆ ಹಲವಾರು ಜನಪದ ನಂಬಿಕೆಗಳು ಕುಟುಂಬ ಮಯದಲ್ಲಿ ಮತ್ತು ಜನಪದರಲ್ಲಿ ಬೇರೂರಿದೆ. ಮನ್ನಾರ ಶಾಲ ನಾಗ ದೇವಾಲಯವನ್ನು ಅತೀ ಪ್ರಾಚೀನ ನಾಗ ದೇವಾಲಯವೆಂದು ಭಾವಿಸಲಾಗಿದೆ. ಅಲ್ಲಿನ ನಾಗ ಮೂರ್ತಿಗಳು ಮತ್ತು ಅದರ ಬಳಿಯ ಜಮೀನು ಸಾಮಾನ್ಯವಾಗಿ ಮಣ್ಣಾರ ಶಾಲ ಸಂಕೇತ ಭೂಮಿ ಎಂದು ಕರೆಯಲ್ಪಡುತ್ತದೆ. ಈ ಸಂಕೇತ ಭೂಮಿಯು ನಾಗರಾಜನ ವಿಶೇಷ ಅಧಿಕಾರದ ಪ್ರದೇಶ ಮತ್ತು ಇದರ ವ್ಯಾಪ್ತಿಯೊಳಗೆ ಯಾವುದೇ ಮನುಷ್ಯನು ಹಾವು ಕಚ್ಚಿ ಸಾಯುವುದಿಲ್ಲ ಎಂಬ ನಂಬಿಕೆಯಿದೆ. ಇಲ್ಲಿನ ಪರಿಸರದಲ್ಲಿ ನೂರಾರು ಪ್ರಭೇದದ ನಾಗರಹಾವುಗಳು ವಾಸಿಸುತ್ತವೆಂದು ಇಲ್ಲಿರುವ ನಂಬಿಕೆಯ ಪ್ರಕಾರ ಪ್ರದೇಶದಲ್ಲಿ ಇದುವರೆಗೆ ಯಾರಿಗೂ ಹಾವು ಕಡಿದ ಪ್ರಕರಣಗಳು ಇಲ್ಲ. ಅಲ್ಲದೆ ಒಂದು ವೇಳೆ ಹಾವು ಕಡಿದರೆ ಯಾವುದೇ ರೀತಿಯ ಚಿಕಿತ್ಸೆಯು ಈ ಸಂಕೇತ ಭೂಮಿಯಲ್ಲಿ ಬೇಕಾಗಿಲ್ಲ ಎಂಬ ಪುರಾತನ ನಂಬಿಕೆಯಿದೆ.

ಇಲ್ಲಿ ನಾಗ ದೇವತೆಗಳನ್ನು ಅತ್ಯಂತ ಶ್ರದ್ಧೆಯಿಂದ ಪೂಜಿಸಲಾಗುತ್ತದೆ. ದಿನವೂ ನೂರಾರು ಭಕ್ತರು ಆ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಬರುವಾಗ ತರಕಾರಿಗಳು ವಿವಿಧ ರೀತಿಯ ಧಾನ್ಯಗಳು, ಹಣ್ಣು ಹಂಪಲು ಇತ್ಯಾದಿಗಳನ್ನು ನಾಗದೇವರಿಗೆ ಅರ್ಪಿಸುತ್ತಾರೆ. ಕೆಳವರ್ಗದ ಜನರು ತಮ್ಮ ಕೊಡುಗೆಯನ್ನು 'ವಾಂಚಿ'ಎಂಬ ಹೆಸರಿನಿಂದ ನೀಡುತ್ತಾರೆ. ಊರಿನ ಜನತೆ ತಮ್ಮ ಮನೆಯ ಸಮೀಪ ವಿಷ ಸರ್ಪವನ್ನು ಕಂಡಾಗ ಅದರ ನಿವಾರಣೆಗಾಗಿ ಮಣ್ಣಾರ ಶಾಲ ದೇವತೆಯನ್ನು ಪ್ರಾರ್ಥಿಸುತ್ತಾರೆ. ಹಾವು ತೆರಳಿದ ನಂತರ ಮುಂದೆ ಕ್ಷೇತ್ರಕ್ಕೆ ಕಾಣಿಕೆ ಸಲ್ಲಿಸುತ್ತಾರೆ. ರೈತನೊಬ್ಬನ ಬೆಳೆಯು ಹುಳು ಹುಪ್ಪಟೆಗಳಿಂದ ಹಾಳಾದರೆ ಆತನು ನಾಗರಾಜನಿಗೆ ಇಷ್ಟು ಪ್ರಮಾಣದ ಧಾನ್ಯವನ್ನು ನೀಡುತ್ತೇನೆ ಎಂದು ಸಮಸ್ಯೆಯ ನಿವಾರಣೆಗೆ ಪ್ರಾರ್ಥಿಸಿಕೊಳ್ಳುತ್ತಾನೆ.

೫.೪.೩ 'ವೆಟ್ಟಿಕೋಡ್' ನಾಗರಾಜ ಸ್ವಾಮಿಕ್ಷೇತ್ರ

ಇದು ಕೇರಳದ ಒಂದು ಪ್ರಸಿದ್ಧವಾದ ನಾಗಾರಾಧನ ಕ್ಷೇತ್ರ. ಈ ದೇವಾಲಯವನ್ನು ಪರಶುರಾಮನು ಸ್ಥಾಪಿಸಿದನೆಂದು ಪ್ರತೀತಿ ಇದೆ. ಇದರ ಪೂರ್ಣ ಹೆಸರು 'ಆದಿ ಮೂಲ ವೆಟ್ಟಿಕೋಡ್ ನಾಗರಾಜ ಸ್ವಾಮಿಕ್ಷೇತ್ರ' ಎಂದಾಗಿದ್ದು ಕ್ಷೇತ್ರವು ಆಲೆಪ್ಪಿ ಜಿಲ್ಲೆಯ ಕಾಯಂ ಕುಳ ಪುಟ್ಟಣದ ಸಮೀಪದಲ್ಲಿದೆ. ಪುನಲೂರು ಮಾರ್ಗದಲ್ಲಿ ಕಾಯಂಕುಳಂ ಪ್ರದೇಶವಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಿನ್ನೆಲೆಯನ್ನು ಸೂಚಿಸುವುದಾದರೆ ಪರಶುರಾಮನು ಪ್ರತಿಷ್ಠಾಪಿಸಿದ ಮೊತ್ತಮೊದಲ ನಾಗಕ್ಷೇತ್ರ ಇದೆಂಬ ಪ್ರತೀತಿ ಇದೆ. ಈ ಭೂಭಾಗದಲ್ಲಿದ್ದ ಸರ್ಪಗಳು ಮನುಷ್ಯ ವಾಸಕ್ಕೆ ಅವಕಾಶವನ್ನು ಕೊಟ್ಟಿರುವ ಸ್ಮರಣಾರ್ಥವಾಗಿ ಪರಶುರಾಮನು ಅಸುರ ಶಿಲ್ಪಿ ಮಯನ ಸಹಕಾರದಿಂದ 'ಅನಂತ'ನ ವಿಗ್ರಹವನ್ನು ರಚಿಸಿ ಇಲ್ಲಿ ಪ್ರತಿಷ್ಠಾಪಿಸಿದನೆಂದು ಪ್ರಚಲಿತ ಐತಿಹ್ಯವಿದೆ. ಇಲ್ಲಿನ ಪ್ರಧಾನ ದೇವತೆ ಅನಂಥನ್ ಮತ್ತು ನಾಗಯಕ್ಷಿ. ವೈಷ್ಣವರು ಅನಂಥನ್‌ನನ್ನು ಮತ್ತು ಶೈವರು ಶಿವನ ಕುತ್ತಿಗೆಯಲ್ಲಿರುವ ವಾಸುಕಿಯನ್ನು ನಾಗರಾಜನೆಂದು ತಿಳಿಯುತ್ತಾರೆ. ಇಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನ ಮಾತ್ರ ಪೂಜೆ ನಡೆಯುತ್ತದೆ.

ಸಾಯಂಕಾಲದಲ್ಲಿ ದೇವಸ್ಥಾನ ತೆರೆದಿರುತ್ತದೆ. ಮತ್ತು ಕೇವಲ ದೀಪ ಮಾತ್ರ ಹಚ್ಚಿಡಲಾಗುತ್ತದೆ. ಇಲ್ಲಿಯ ಪೂಜಾರಿಗಳು ಮೇಪಳ್ಳಿ ಮನೆತನದ ನಂಬೂದಿರಿಗಳು ಇದರ ಪೂರ್ಣ ಜವಾಬ್ದಾರಿ ಅವರಿಗೇ ಸೇರಿದ್ದು.

ಇಲ್ಲಿ ಕನ್ಯಾ, ತುಲಾ ಮಾಸಗಳಲ್ಲಿ ಪೂಯಂ ಮತ್ತು ಆಯಿಲ್ಲಂ ನಕ್ಷತ್ರದಲ್ಲಿ ದೀಪಾರಾದನೆ ವಿಶೇಷ ಪೂಜೆಯಾಗಿ ಜರುಗುತ್ತದೆ. ಕನ್ಯಾಮಾಸದ ಆಯಿಲ್ಯದಲ್ಲಿ ಉತ್ಸವ ನಡೆಯುತ್ತದೆ. ಶಿವರಾತ್ರಿಯಂದು ಕೂಡ ವಿಶೇಷ ಉತ್ಸವಾದಿಗಳು ನಡೆಯುತ್ತವೆ. ಇಲ್ಲಿ ಚರ್ಮರೋಗಾದಿಗಳಿಗೆ ವಾಸುಕಿ ಬಿಂಬಕ್ಕೆ ಅಭಿಷೇಕ ಮಾಡಿದ ಎಣ್ಣೆಯನ್ನು ಔಷಧವಾಗಿ ಬಳಸುತ್ತಾರೆ. ರಾಹುದೋಷ ಪರಿಹಾರ ಸರ್ಪಬಲಿ, ನೂರುಂ ಪಾಲುಂ ಇತ್ಯಾದಿ ಸೇವೆಗಳು ನಡೆಯುವುವು.

೫.೪.೪ ನಾಗರ ಕೋವಿಲ್ ನಾಗರಾಜ ಕ್ಷೇತ್ರ

ತಮಿಳುನಾಡು ರಾಜ್ಯದ ಕನ್ಯಾಕುಮಾರಿ ಜಿಲ್ಲೆಯ 'ನಾಗರಕೋವಿಲ್' ಎಂಬ ಪಟ್ಟಣದ ಕೇಂದ್ರ ಭಾಗದಲ್ಲಿ ಈ ನಾಗಾಲಯವಿದೆ. ಕೇರಳದಾದ್ಯಂತ ನಾಗ ದೇವಾಲಯಗಳಿದ್ದರೂ ನಾಗನ ಹೆಸರಿನಿಂದಲೇ ಪ್ರಾರಂಬವಾಗುವ ಊರೇ 'ನಾಗರ ಕೋವಿಲ್'. ಇದು ದಕ್ಷಿಣ ಭಾರತದ ಪ್ರಸಿದ್ಧವಾದ ನಾಗದೇವಾಲಯ. ತಮಿಳು ಭಾಷೆಯಲ್ಲಿ 'ಕೋವಿಲ್' ಎಂದರೆ ದೇವಾಲಯ ಎಂದರ್ಥ. ಈ ದೇವಾಲಯ ಹೇಗೆ ನಿರ್ಮಾಣವಾಯಿತು, ಯಾವಾಗ ನಿರ್ಮಾಣವಾಯಿತು ಎಂಬುದಕ್ಕೆ ಯಾವುದೇ ಇತಿಹಾಸವಿಲ್ಲ. ಹಾಗೂ ಯಾವುದೇ ಶಾಸನಗಳಿಲ್ಲ. ಆದರೆ ಕನ್ಯಾಕುಮಾರಿಯಲ್ಲಿರುವ ಮಹೇಂದ್ರಗಿರಿಯಲ್ಲಿ ಅಧಿಕ ಸಂಖ್ಯೆಯಲ್ಲಿ ನಾಗರಹಾವುಗಳು ಇದ್ದ ಕುರಿತು ವಾಲ್ಮೀಕಿ ರಾಮಾಯಣದ ಮೂಲಕ ತಿಳಿದು ಬರುತ್ತದೆ. ಈ ದೇವಾಲಯವು ವಾಲ್ಮೀಕಿಯ ಕಾಲದಲ್ಲೇ ನಿರ್ಮಾಣವಾಗಿರಬೇಕೆಂದು ವಿದ್ವಾಂಸರುಗಳು ಅಭಿಪ್ರಾಯ ಪಡುತ್ತಾರೆ.[೨೦]

ಹಿನ್ನೆಲೆ: 'ನಾಗರ ಕೋವಿಲ್' ನಗರದ ಕೇಂದ್ರ ಭಾಗದಲ್ಲಿರುವ ನಾಗರಾಜ ದೇವಾಲಯವು ಕನ್ಯಾಕುಮಾರಿ ಜಿಲ್ಲೆಯ ವ್ಯಾಪ್ತಿಯಲ್ಲಿದೆ. ಈ ದೇವಾಲಯವು 'ಕನ್ಯಾಕುಮಾರಿ ದೇವಸಂ ಬೋರ್ಡ್'ನ ಅಧೀನದಲ್ಲಿದ್ದು ಮುಖ್ಯ ಕಛೇರಿಯು ನೆರೆಯ ಪುರಾತನ ಪ್ರಸಿದ್ಧವಾದ 'ಸುದೀಂದ್ರಂ' ದೇವಾಲಯದಲ್ಲಿದೆ. ಕನ್ಯಾಕುಮಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳು ದೇವಾಲಯದ ಮುಖ್ಯಾಧಿಕಾರಿಗಳಾಗಿದ್ದಾರೆ. ಮೂಲದಲ್ಲಿ ಈ ಜಿಲ್ಲೆಯು ಕೇರಳ ರಾಜ್ಯದ ವ್ಯಾಪ್ತಿಯಲ್ಲಿತ್ತು. ೧೯೫೬ ರ ಭಾಷಾವಾರು ಪ್ರಾಂತ್ಯ ವಿಭಜನೆಯ ನಂತರ ಈ ಜಿಲ್ಲೆಯು ತಮಿಳುನಾಡಿಗೆ ಸೇರಿಕೊಂಡಿತು. ದೇವಾಲಯದಲ್ಲಿ ಪ್ರಧಾನವಾಗಿ 'ನಾಗರಾಜ'ನನ್ನು ಆರಾಧಿಸಲಾಗುತ್ತದೆ. ಗರ್ಭಗುಡಿಯಲ್ಲಿ ಎಡಬಲಗಳಲ್ಲಿ ಈಶ್ವರ ಮತ್ತು ವಿಷ್ಣುವಿನ ಪ್ರತಿಮೆಗಳಿದ್ದರೆ ನಡುವೆ ಐದು ಹೆಡೆಯ ನಾಗ ಪ್ರತಿಮೆ ಇದೆ. ಇದನ್ನು ನಾಗರಾಜನೆಂದು ಪೂಜಿಸಲಾಗುತ್ತದೆ. ನಾಗರಾಜನೇ ಇಲ್ಲಿಯ ಪ್ರಧಾನ ದೇವತೆ. ಉಳಿದಂತೆ ಗಣಪತಿಯ ಗುಡಿಯೂ ಕಂಡುಬರುತ್ತದೆ. ಗರ್ಭಗುಡಿಯ ಮುಂದಿರುವ ತೀರ್ಥಮಂಟಪದ ಗೋಡೆ ಮತ್ತು ಕಂಭಗಳಲ್ಲಿ ಜೈನರ ಪದ್ಮಾವತಿ, ಪಾರ್ಶ್ವನಾಥ ಹಾಗೂ ಮಹಾವೀರರ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ದೇವಾಲಯದ ಮುಂಭಾಗದಲ್ಲಿ ಪುಷ್ಕರಣಿ ಇದ್ದು ಪಕ್ಕದಲ್ಲೇ 'ನಾಗಮಣಿ' 'ಬೂದತ್ತಾನ್' ಮತ್ತು 'ಶಾಸ್ತ'ಗಳ ಮೂರ್ತಿಗಳಿವೆ. ದೇವಾಲಯದ ಸುತ್ತು ವಠಾರದಲ್ಲೇ ದುರ್ಗಾದೇವಿಗೆ ಪ್ರತ್ಯೇಕವಾದ ದೇವಾಲಯವನ್ನು ಕಟ್ಟಲಾಗಿದೆ. ಇಲ್ಲಿರುವ

ಪ್ರತಿಮೆಯು ಈ ಕೊಳದಲ್ಲಿ ಸಿಕ್ಕಿದ್ದೆಂದು ಪ್ರತೀತಿ ಇದೆ. ದೇವಾಲಯದ ಸುತ್ತಲೂ ನೂರಾರು ನಾಗ ಪ್ರತಿಮೆಗಳಿವೆ. ಈ ನಾಗರಾಜ ದೇವಾಲಯದ ಕುರಿತಾದ ಜನಜನಿತವಾದ ಐತಿಹ್ಯವೊಂದು ಪ್ರಚಲಿತದಲ್ಲಿವೆ.

ಐತಿಹ್ಯ: ವಾಸುಕಿಯ ನಿರ್ದೇಶನದಂತೆ ಪಾಂಬು ಮೇಕ್ಕಾಡ್ ನಂಬೂದಿರಿ ಚರ್ಮರೋಗ ಮತ್ತು ವಿಷ ಚಿಕಿತ್ಸೆಯನ್ನು ನಡೆಸುತ್ತಾ ಬಂದಿದ್ದನು. ಒಮ್ಮೆ ಪಾಂಡ್ಯ ರಾಜನಿಗೆ ಕಠಿಣವಾದ ಚರ್ಮರೋಗ ಬಾಧಿಸಿತು. ಯಾವುದೇ ರೀತಿಯ ಚಿಕಿತ್ಸೆ ಫಲಕಾರಿಯಾಗಲಿಲ್ಲ. ಕೊನೆಗೆ ಪಾಂಬು ಮೇಕ್ಕಾಡ್ ನಂಬೂದಿರಿಗೆ ಹೇಳಿಕಳುಹಿಸಲಾಯಿತು. ನಂಬೂದಿರಿಯು ರಾಜನಿಗೆ ಚಿಕಿತ್ಸೆ ನೀಡಿ ಹಿಂತಿರುಗುವಾಗ, ಈಗಿರುವ 'ನಾಗರ ಕೋವಿಲ್' ಮುಖಾಂತರ ಸಂಚರಿಸುತ್ತಿದ್ದನು. ದಾರಿಯಲ್ಲಿ ಒಂದು ಹೆಂಗಸು ರೋದಿಸುತ್ತಿರುವುದು ಕಂಡುಬಂದಿತು. ವಿಚಾರಿಸಲಾಗಿ ಹುಲ್ಲು ಕೊಯ್ಯುತ್ತಿರುವಾಗ ತನ್ನ ಕತ್ತಿ ತಾಗಿ ಕಲ್ಲಿನಿಂದ ರಕ್ತ ಪ್ರವಹಿಸುವುದನ್ನು ಕಂಡು ತಾನು ಹೆದರಿರುವುದಾಗಿ ಆಕೆ ತಿಳಿಸಿದಳು. ನಂಬೂದಿರಿಯು ಹೋಗಿ ನೋಡಿದಾಗ ಐದು ಹೆಡೆಯ ನಾಗ ಪ್ರತಿಮೆಯಿದ್ದು, ಆ ಪ್ರತಿಮೆಯಿಂದ ರಕ್ತ ಸೋರಿಕೆಯಾಗುತ್ತಿತ್ತು. ವಿಗ್ರಹದಿಂದ ಆಗುತ್ತಿದ್ದ ರಕ್ತ ಪ್ರವಾಹವನ್ನು ನಂಬೂದಿರಿಯು ತನ್ನ ಮಂತ್ರ ಶಕ್ತಿಯಿಂದ ನಿಲ್ಲಿಸಿದನು. ಬಳಿಕ ಊರಿನ ಜನತೆಯ ಸಹಾಯದಿಂದ ಮುಂದೆ ಅಲ್ಲಿ ಸಣ್ಣಗುಡಿಯೊಂದನ್ನು ನಿರ್ಮಿಸಿದನು. ಮುಂದಿನ ವರ್ಷಗಳಲ್ಲಿ ನೆರೆಯ 'ಕಲಕಾಡ್'ನ್ನು ಆಳುತ್ತಿದ್ದ ರಾಜನೋರ್ವ ಕುಷ್ಠರೋಗದಿಂದ ಬಳಲುತ್ತಿದ್ದು ಇಲ್ಲಿಯ ನಾಗರಾಜನ ಮಹಿಮೆಯನ್ನು ಅರಿತು, ನಾಗನನ್ನು ಆದಿತ್ಯವಾರದ ದಿನಗಳಲ್ಲಿ ಪೂಜಿಸುತ್ತಾ ಬಂದನು. ಇದರಿಂದ ಅವನು ರೋಗದಿಂದ ಗುಣಮುಖನಾದುದರಿಂದ ಆದಿತ್ಯವಾರದ ದಿನ ಇಲ್ಲಿ ವಿಶೇಷ ಎಂಬುದಾಗಿ ಆಚರಣೆಗೆ ಬಂದಿತು. ಬಳಿಕ ರಾಜನು ಆ ಸಣ್ಣ ಗುಡಿಯನ್ನು ಕೇರಳ ದೇವಾಲಯಗಳ ಶೈಲಿಯಲ್ಲಿ ಕಟ್ಟಿಸಿದನೆಂದು, ಈ ಸ್ಥಳಕ್ಕೆ ಮುಂದೆ 'ನಾಗರ ಕೋವಿಲ್' ಎಂಬ ಹೆಸರಾಯಿತೆಂದು ಪ್ರಚಲಿತ ಐತಿಹ್ಯವಿದೆ.

ವೈಶಿಷ್ಟ್ಯಗಳು: ದೇವಾಲಯದ ಗರ್ಭಗುಡಿಯ ತಳಭಾಗವು ನೀರಿನಿಂದ ಆವೃತವಾಗಿದ್ದು ನೆಲ ಮಟ್ಟಕ್ಕಿಂತ ಸ್ವಲ್ಪ ತಗ್ಗಿನ ಪ್ರದೇಶದಲ್ಲಿದೆ. ಈ ನೀರಿನಲ್ಲಿರುವ ಮರಳನ್ನೇ ಪ್ರಸಾದದ ರೂಪದಲ್ಲಿ ಭಕ್ತಾದಿಗಳಿಗೆ ವಿತರಿಸಲಾಗುತ್ತದೆ. ಗರ್ಭಗುಡಿಯಲ್ಲಿರುವ ಮಣ್ಣಿನ ಬಣ್ಣವು ೬ ತಿಂಗಳು ಬಿಳಿಯಾಗಿದ್ದು ಉಳಿದ ಆರು ತಿಂಗಳು ಕಪ್ಪು ಬಣ್ಣದಿಂದ ಕೂಡಿರುತ್ತದೆಂದು ಕಂಡುಬಂದಿದೆ. ಪ್ರಸಾದ ರೂಪದ ಮಣ್ಣು ಮತ್ತು ಮರಳಿನಿಂದ ಚರ್ಮರೋಗ ನಿವಾರಣೆಯಾಗುತ್ತದೆಂದು ನಂಬಿಕೆಯಿದೆ. ಇಲ್ಲಿ ಹಿಂದೂ ಮತಸ್ಥರಿಗೆ ಮಾತ್ರ ಪ್ರವೇಶವಿದೆ.

ಗರ್ಭಗುಡಿಯ ಹಿಂಭಾಗದಲ್ಲಿ ಗರ್ಭಗುಡಿಗೆ ತಾಗಿಕೊಂಡು ಒಂದು ಪ್ರಕಾರವಿದ್ದು ಅದನ್ನು ಮೂಲಸ್ಥಾನವೆಂದು, ಪೂರ್ವದಲ್ಲಿ ನಂಬೂದಿರಿಯು ನಿರ್ಮಿಸಿದ ಗುಡಿ ಇದ್ದ ಭಾಗವೇ ಈ ಪ್ರಾಕಾರವೆಂದು, ಇದನ್ನು ನಾಗರಾಜನ ಅಣತಿಯಂತೆ ಕಾಯ್ದಿರಿಸಲಾಗಿದೆ ಎಂಬ ನಂಬಿಕೆಯಿದೆ. ಜೀವಂತ ಹಾವುಗಳು ಈ ಭಾಗದಲ್ಲಿ ಬಂದು ವಾಸಿಸುತ್ತವೆಂಬ ಪ್ರತೀತಿಯೂ ಇದೆ. ಪ್ರಾಕಾರದ ಗೋಡೆಯಲ್ಲಿರುವ ಚಿಕ್ಕಕಿಂಡಿಯ ಮೂಲಕ ಭಕ್ತಾದಿಗಳು ಕೋಳಿ ಮೊಟ್ಟೆಗಳನ್ನು ಹರಕೆಯ ರೂಪದಲ್ಲಿ ಇಲ್ಲಿ ಒಪ್ಪಿಸಿ ಹೋಗುತ್ತಾರೆ. ಇಲ್ಲೆಲ್ಲ ವಿಭಿನ್ನ ರೀತಿಯ ನಾಗ ಪ್ರತಿಮೆಗಳು ಕಂಡುಬರುತ್ತವೆ.

ಪೂರ್ವದಲ್ಲಿ ಈ ಭಾಗದಲ್ಲಿ ಕುಷ್ಠರೋಗವನ್ನು ಗುಣಪಡಿಸುವ ಬಳ್ಳಿಯೊಂದು ಈಗಿರುವ ಬೇವಿನ ಮರವನ್ನು ಆಧರಿಸಿಕೊಂಡಿತ್ತೆಂದು, ಮುಂದೆ ಇಲ್ಲಿ ಸ್ವಚ್ಛತೆ ಮಾಡುವ ಸಂದರ್ಭದಲ್ಲಿ ಯಾರೋ ನೌಕರರುಗಳು ಆ ಬಳ್ಳಿಯನ್ನು

ಕತ್ತರಿಸಿ ಹಾಕಿದರೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಆ ಬಳ್ಳಿಯ ಒಂದೊಂದು ಎಲೆಯೂ ಒಂದೊಂದು ರೀತಿಯ ರುಚಿಯನ್ನು ಕೊಡುತ್ತಿತ್ತೆಂದು ತಿಳಿದುಬಂದಿದೆ. ಈಗ ಕೇವಲ ಬೇವಿನ ಮರ ಮಾತ್ರ ಕಂಡುಬರುತ್ತದೆ. ನಾಗರ ಕೋವಿಲ್ ನಾಗರಾಜ ದೇವಾಲಯವಿರುವ ಸುತ್ತಮುತ್ತಲಿನ ಪರಿಸರದಲ್ಲಿ ಯಾರಿಗೂ ಹಾವುಗಳು ಕಚ್ಚುವುದಿಲ್ಲವೆಂಬ ನಂಬಿಕೆಯಿದೆ. ಕಚ್ಚಿದರೂ ಕೂಡ ಹಾವುಗಳೇ ಸಾಯುತ್ತವೆಂದು ಸ್ಥಳೀಯರ ಅಂಬೋಣ.

ದೇವಾಲಯದ ಒಳ ಅಂಕಣದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಎರಡು ಎತ್ತರವಾದ ನಾಗಪ್ರತಿಮೆಗಳಿವೆ. ಒಳಗಿರುವ ಸ್ತಂಭವೊಂದರಲ್ಲಿ ಒಂದು ಹಾವು ಜೈನ ತೀರ್ಥಂಕರರಾದ ಪಾರ್ಶ್ವನಾಥ ಸ್ವಾಮೀಜಿಗಳನ್ನು ಸುತ್ತುಹಾಕಿ ಅವರಿಗೆ ನೆರಳು ನೀಡುತ್ತಿರುವಂತೆ ಕಂಡು ಬರುತ್ತದೆ. ಆದ್ದರಿಂದ ಈ ದೇವಾಲಯದಲ್ಲಿ ಹಿಂದೂ ಹಾಗೂ ಜೈನ ಸಂಸ್ಕೃತಿಗಳ ಸಮ್ಮೇಳನವನ್ನು ಕಾಣಬಹುದಾಗಿದೆ. ಕೇರಳದ ಬೇರಾವುದೇ ನಾಗದೇವಾಲಯಗಳಲ್ಲಿ ಈ ರೀತಿಯ ಸಾಂಸ್ಕೃತಿಕ ಸಮ್ಮಿಳನವನ್ನು ಕಾಣಲು ಸಾಧ್ಯವಿಲ್ಲ.

ವಿಶೇಷ ಆಚರಣೆಗಳು: ದೇವಾಲಯದ ನಿತ್ಯ ಪೂಜೆಗೆ ಮೂರು ಜನ ಪೂಜಾರಿಗಳಿದ್ದಾರೆ. ಅವರನ್ನು 'ಮೇಲ್‌ಶಾಂತಿ' ಎಂದು ಕರೆಯಲಾಗುತ್ತದೆ. ಹತ್ತು ದಿನಕ್ಕೆ ಒಬ್ಬರಂತೆ ಕ್ರಮವಾಗಿ ಅರ್ಚಕ ವರ್ಗದವರು ಸರದಿಯಂತೆ ಪೂಜೆ ನಡೆಸುತ್ತಾರೆ. ದೇವಾಲಯದ ವಾರ್ಷಿಕೋತ್ಸವವು ಜನವರಿ ತಿಂಗಳಲ್ಲಿ ಹತ್ತು ದಿನಗಳವರೆಗೆ ವಿವಿಧ ರೀತಿಯ ಆಚರಣೆಗಳೊಂದಿಗೆ ನಡೆಯುತ್ತದೆ. ಪ್ರತೀ ತಿಂಗಳ 'ಆಶ್ಲೇಷ' ನಕ್ಷತ್ರದಂದು ವಿಶೇಷ ಪೂಜೆ ನಡೆಯುತ್ತದೆ. ಪ್ರತೀ ಆದಿತ್ಯವಾರವು ಈ ಕ್ಷೇತ್ರದ ವಿಶೇಷ ದಿನ ಸಪ್ಟೆಂಬರ್ (ಆವಣಿ) ಮಾಸದಲ್ಲಿ ಬರುವ ಪ್ರತಿ ಆದಿತ್ಯವಾರವನ್ನು ಕೂಡ ವಿಶೇಷವಾಗಿ ಆಚರಿಸಲಾಗುವುದು. ಆ ದಿನಗಳಲ್ಲಿ ಊರಿನ ಜನತೆ ಕ್ಷೇತ್ರಕ್ಕೆ ಬಂದು ಹಾಲು, ಕಾಳುಮೆಣಸು, ಅಕ್ಕಿ, ಇತ್ಯಾದಿಗಳನ್ನು ತಂದು ಒಪ್ಪಿಸುವರು. ಕೇರಳದ ಕ್ರೈಸ್ತ ಭಕ್ತರೊಬ್ಬರು ಈ ದೇವಾಲಯಕ್ಕೆ ನೀಡಿದ ನಾಗನ ಮರದ ಶಿಲೆಯೊಂದು ಅತೀ ಸುಂದರವಾಗಿದೆ.

ಇಲ್ಲಿಗೆ ಬರುವ ಭಕ್ತಾದಿಗಳ ಇಷ್ಟಾರ್ಥ ನೆರವೇರುತ್ತದೆನ್ನುವುದು ನಂಬಿಕೆ. ಕುಷ್ಠರೋಗ, ಅಂಧತ್ವ, ಚರ್ಮವ್ಯಾಧಿ, ಮನೋರೋಗ ಸಂತಾನ ಹೀನತೆ ನರರೋಗ, ಮೊದಲಾದ ನಾಗದೋಷಗಳಿಂದ ಬರುವ ತೊಂದರೆಗಳು ನಿವಾರಣೆಯಾಗುತ್ತದೆನ್ನುವುದು ತಿಳಿದುಬಂದಿದೆ.

೫.೪.೫ ಆಮೇಡ ಮಂಗಳಂ

ಕೇರಳದ ಎರ್ನಾಕುಳಂ ಜಿಲ್ಲೆಯಿಂದ ಪೂರ್ವಕ್ಕೆ ಸುಮಾರು ೨೦ ಕಿ.ಮೀ.ಅಂತರದಲ್ಲಿರುವ ಕನಯನ್ನೂರು ತಾಲೂಕಿನ ಉದಯಂ ಪೇರೂರು ಗ್ರಾಮದಲ್ಲಿ 'ಆಮೇಡ ಮಂಗಳಂ' ನಾಗಾಲಯವಿದೆ. ಇದು ಒಂದು ಕುಟುಂಬಕ್ಕೆ ಸಂಬಂಧಿಸಿರುವ ನಾಗದೇವಾಲಯ. ಮಂಗಳಂ ಅಥವಾ 'ಮಂಗಳತ್ ಮನ' ಎಂಬ ನಂಬೂದಿರಿ ಕುಟುಂಬದ ಅಧೀನದಲ್ಲಿದೆ. ನಾಗ ಸಂಬಂಧಿಯಾದ ತೊಂದರೆಗಳು ಸರ್ಪದೋಷ ಇತ್ಯಾದಿಗಳು ಇಲ್ಲಿ ಪರಿಹಾರವಾಗುತ್ತದೆಂಬ ನಂಬಿಕೆ ಇದೆ.

ಐತಿಹ್ಯ: ಆಮೇಡ ಅಂದರೆ ಮಲೆಯಾಳಿ ಭಾಷೆಯಲ್ಲಿ 'ಆಮ ಇರುನ್ನ ಇಡಂ' ಎಂದರ್ಥ ಅಂದರೆ 'ಆಮೆ ಕುಳಿತ ಸ್ಥಳ' ಎಂದರ್ಥ. ದೇವಾಲಯದ ಸ್ಥಾಪನೆಯ ಕುರಿತಾದ ಐತಿಹ್ಯವೊಂದು ಸ್ಥಳೀಯವಾಗಿ ಪ್ರಚಲಿತದಲ್ಲಿದೆ.

ಆಮೇಡ ಮಂಗಳಂ ನಾಗಾಲಯವನ್ನು ಪುರಾಣ ಪುರುಷ ಪರಶುರಾಮ ಸೃಷ್ಟಿಸಿದ ಎಂದು ಐತಿಹ್ಯಗಳು ಹೇಳುತ್ತವೆ. ಅದರ ಪ್ರಕಾರ 'ಸಪ್ತಮಾತೃಕೆಗಳು ಮತ್ತು ಸರ್ಪ ಆಮೆಯ ಮೇಲೆ ಕುಳಿತು ಸಂಚರಿಸುತ್ತಿರುವಾಗ ಪರಶುರಾಮನಿಂದ ಪಶ್ಚಿಮ ಕರಾವಳಿಯ ಭೂಭಾಗದ ಸೃಷ್ಟಿಯಾಗುತ್ತದೆ. ಸಮುದ್ರದ ನೀರು ಹಿಂದಕ್ಕೆ ಸರಿದು ಭೂಭಾಗ ಗೋಚರಿಸುತ್ತದೆ. ನೀರಿನಲ್ಲಿ ಸಂಚರಿಸುತ್ತಿದ್ದ ಆಮೆಯು ಹೊಸ ಭೂಭಾಗದಲ್ಲಿ ಗಟ್ಟಿಯಾಗಿ ನಿಂತುಬಿಡುತ್ತದೆ. ಆಮೆಯೊಂದಿಗೆ ಸಪ್ತಮಾತೃಕೆಯರು ಮತ್ತು ಸರ್ಪವು ಈ ಸ್ಥಳದಲ್ಲಿ ನೆಲೆಯಾಗುತ್ತಾರೆ. ಹಾಗೆ ಆಮೆ ನಿಂತ ಈ ಸ್ಥಳವೇ ಮುಂದೆ 'ಆಮೆ ಇರುನ್ನ ಇಡಂ' ಎಂದಾಯಿತು. ಮುಂದೆ ಪರಶುರಾಮನು ಈ ಸ್ಥಳದಲ್ಲಿ ದೇವಾಲಯವನ್ನು ನಿರ್ಮಿಸಿ ಅದರ ಒಡೆತನವನ್ನು ಮಂಗಳತ್ ಮನ ನಂಬೂದಿರಿಗಳ ಒಡೆತನಕ್ಕೆ ನೀಡಿದ ಮೇಲೆ ಸ್ಥಳ ಪುರಾಣದೊಂದಿಗೆ ಅರ್ಚಕರ ಮನೆತನದ ಹೆಸರೂ ಸೇರಿಕೊಂಡು ಕ್ರಮೇಣ 'ಆಮೇಡ ಮಂಗಳಂ' ಎಂದಾಯಿತೆಂದು' ಕ್ಷೇತ್ರಕಾರ್ಯ ಹಿನ್ನೆಲೆಯಲ್ಲಿ ತಿಳಿಯಲಾಗಿದೆ.

ದೇವಾಲಯದ ಗರ್ಭಗುಡಿಯಲ್ಲಿ ಪ್ರಧಾನವಾಗಿ ಒಂಬತ್ತು ಪ್ರತಿಮೆಗಳನ್ನು ಪೂಜಿಸಲಾಗುತ್ತದೆ. ಮುಖ್ಯವಾಗಿ ಸಪ್ತಮಾತೃಕೆಗಳಾದ ಬ್ರಹ್ಮಾಣಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿಯರೊಂದಿಗೆ ವೀರಭದ್ರ ಮತ್ತು ಗಣಪತಿಯನ್ನು ಆರಾಧಿಸಲಾಗುತ್ತದೆ. ಒಂಭತ್ತು ಪ್ರತಿಮೆಗಳು ಒಂದೇ ಸಂಕೀರ್ಣದಲ್ಲಿದ್ದು ಸಪ್ತಮಾತೃಕೆಗಳ ಪ್ರತಿಮೆಗಳು ಪೂರ್ವಾಭಿಮುಖವಾಗಿದ್ದರೆ. ವೀರಭದ್ರ ಪ್ರತಿಮೆಯು ಉತ್ತರಾಭಿಮುಖವಾಗಿದೆ. ಗಣಪತಿ ಪ್ರತಿಮೆಯು ದಕ್ಷಿಣಾಭಿಮುಖವಾಗಿದ್ದು, ವೀರಭದ್ರ ಮತ್ತು ಗಣಪತಿ ಪ್ರತಿಮೆಗಳು ಪರಸ್ಪರ ಅಭಿಮುಖವಾಗಿವೆ. ದೇವಾಲಯದ ಹೊರಭಾಗದ ಈಶಾನ್ಯ ದಿಕ್ಕಿನಲ್ಲಿ ನಾಗಯಕ್ಷಿ ಮತ್ತು ನಾಗರಾಜನ ಪ್ರತ್ಯೇಕವಾದ ಗುಡಿಯಿದ್ದು, ದೇವಾಲಯದ ಸುತ್ತಮುತ್ತಲೂ ವಿಬಿನ್ನಶೈಲಿಯ ನಾಗಪ್ರತಿಮೆಗಳಿವೆ. ದೇವಾಲಯದ ಹೊರ ಪ್ರಾಕಾರದಲ್ಲಿ ಆಮೆ, ಸರ್ಪ ಮತ್ತು ಸಪ್ತಮಾತೃಕೆಗಳ ಪ್ರತ್ಯೇಕವಾದ ಸಂಕೀರ್ಣವೊಂದು ಕಂಡುಬರುತ್ತದೆ.

ವೈಶಿಷ್ಟ್ಯತೆಗಳು

ಸರ್ಪ ಮತ್ತು ಸಪ್ತಮಾತೃಕೆಗಳನ್ನು ಒಂದೇ ಶಕ್ತಿಯಾಗಿ ಪೂಜಿಸುವುದು ಇಲ್ಲಿಯ ವೈಶಿಷ್ಟ್ಯ. ದೇವಾಲಯದ ಪಕ್ಕದಲ್ಲೇ ವಿಶಾಲವಾದ ನದೀ ತೀರವು ಕಂಡುಬರುತ್ತದೆ. ಇಲ್ಲಿರುವ ನದೀ ಜಲಾಶಯದಲ್ಲಿ 'ಜಲಯಕ್ಷಿ' ಎಂಬ ಜಲದೇವತೆಯಿದೆ ಎಂದು ನಂತ್ತಾರೆ. ಮಕ್ಕಳಾಗದ ಸಂತಾನ ಹೀನರು ಇಲ್ಲಿ ಬಂದು ಜಲಯಕ್ಷಿಯನ್ನು ಪ್ರಾರ್ಥಿಸಿದರೆ ಸಂತಾನ ಭಾಗ್ಯ ಲಭಿಸುತ್ತದೆಂಬ ಪ್ರತೀತಿ ಇದೆ. ತಾಮ್ರದ ಕಲಶದಲ್ಲಿ ದಕ್ಷಿಣೆ ಅಕ್ಕಿ ಇತ್ಯಾದಿಗಳನ್ನು ತುಂಬಿಸಿ ಜಲಯಕ್ಷಿಯನ್ನು ಪ್ರಾರ್ಥಿಸಿ ನೀರಲ್ಲಿ ಹಾಕುವುದರಿಂದ ತಮ್ಮ ಇಷ್ಟಾರ್ಥ ನೆರವೇರುತ್ತದೆಂದು ಪ್ರತೀತಿ.

ದೇವಾಲಯದ ಗರ್ಭಗುಡಿಯಲ್ಲಿ ಪರಶುರಾಮ ಹಚ್ಚಿದನೆಂದು ನಂಬಲಾಗಿರುವ ನಂದಾದೀಪವೊಂದು ಉರಿಯುತ್ತಿರುತ್ತದೆ. ಇದರಲ್ಲಿರುವ ಎಣ್ಣೆಯನ್ನು ಬಳಸುವುದರಿಂದ ಚರ್ಮರೋಗ ನಿವಾರಣೆಯಾಗುತ್ತದೆಂಬ ಪ್ರತೀತಿ ಇದೆ. ಸರ್ಪದೋಷ ಪರಿಹಾರಕ್ಕಾಗಿ ಸರ್ಪಬಲಿಯನ್ನು ಸಂಜೆಯ ಹೊತ್ತು ನಡೆಸುತ್ತಾರೆ. ಗರ್ಭಗುಡಿಗೆ ಮೂರು ಬಾಗಿಲುಗಳಿದ್ದು ಉತ್ಸವದ ಸಂದರ್ಭದಲ್ಲಷ್ಟೇ ಮೂರು ಬಾಗಿಲುಗಳನ್ನು ತೆಗೆಯಲಾಗುತ್ತದೆ.

ಈ ದೇವಾಲಯದ ಅರ್ಚಕರಾಗಿ ಆಮೇಡ ಮಂಗಳಂ ಮನೆತನದ ನಂಬೂದಿರಿಗಳು ಕಾರ್ಯ ನಿರ್ವಹಿಸುತ್ತಾರೆ. ಕುಟುಂಬವು ಈಗ ನಾಲ್ಕು ವರ್ಗಗಳಾಗಿ ವಿಂಗಡಣೆಗೊಂಡಿದೆ. ಪ್ರಸ್ತುತ ಕ್ರಮವಾಗಿ ಮೂರು ತಿಂಗಳಿಗೆ ಒಂದು ಕುಟುಂಬದಂತೆ ಸೇವೆ ನಿರ್ವಹಿಸುತ್ತಾರೆ.

ವೃಶ್ಚಿಕ ೧ ರಿಂದ ಧನು ೧೧ರವರೆಗೆ (ನವಂಬರ್ ದಶಂಬರ್ ತಿಂಗಳ ನಡುವೆ) ೪೧ ದಿನಗಳು ಚಾಮುಂಡಿಗೆ 'ಕುರುಂದಿ' ತರ್ಪಣವಿದೆ. ೪೦ನೆಯ ದಿನದವರೆಗೆ ಒಂದೇ ಪಾತ್ರೆಯಲ್ಲಿ ೪೧ರಂದು ೧೨ ಪಾತ್ರೆಗಳಲ್ಲಿ ಕುರುಂದಿ (ಓಕುಳಿ) ತರ್ಪಣ ನೀಡಲಾಗುತ್ತದೆ. ೪೧ ದಿನಗಳ ಈ ಮಂಡಲ ಪೂಜೆಯ ಸಂದರ್ಭದಲ್ಲಿ ಮನೆಯ ಹಿರಿಯ ಯಜಮಾನ ಪೂಜೆ ನಡೆಸಬೇಕಾಗುತ್ತದೆ.

ಕೇರಳದ ನಾಗ ದೇವಾಲಯಗಳನ್ನು ನಡೆಸುವ ನಾಗ ಪೂಜಕರು ಶ್ರೇಷ್ಠವ್ಯಕ್ತಿಗಳು ಮತ್ತು ದೇವರಿಗೆ ತುಂಬ ಸಮೀಪದ ವ್ಯಕ್ತಿಗಳೆಂದು ಗುರುತಿಸಲ್ಪಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಇಲ್ಲಿನ ನಂಬೂದಿರಿ ಕುಟುಂಬಗಳು ನಾಗದೇವರುಗಳು ಮತ್ತು ದೇವತೆಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿದ್ದಾರೆ. ಆ ನಾಗದೇವರುಗಳು ಮತ್ತು ದೇವತೆಗಳು ಭಯಾನಕ ಗುಂಪುಗಳಿಗೆ ಸೇರಿದವುಗಳು ಎಂಬ ನಂಬಿಕೆಯಿದೆ. ಯಾಕೆಂದರೆ ಜನಸಾಮಾನ್ಯರಿಂದ ಅವರಿಗೆ ಅರಿವಿಲ್ಲದೇ ಸಣ್ಣ ಪುಟ್ಟ ತಪ್ಪುಗಳು ಈ ದೇವರುಗಳ ಮೇಲೆ ನಡೆದರೆ ಅಶುದ್ಧವೆನಿಸುವುದು. ಮತ್ತು ದೇವರುಗಳು ಕೋಪಗೊಳ್ಳುವವು ಎಂದು ನಂಬಲಾಗಿದೆ. ಕೋಪಿತ ನಾಗದೇವರುಗಳು ಮತ್ತು ದೇವತೆಗಳು ಅಶುದ್ಧಗೊಂಡು ಮಾಲಿನ್ಯಗೊಂಡು ತಮ್ಮ ಸಂತತಿಯ ಬೆಂಬಲದೊಂದಿಗೆ ಜನರಿಗೆ ಮಾನಸಿಕ ಮತ್ತು ದೈಹಿಕ ಶಿಕ್ಷೆಯನ್ನು ನೀಡಿಯಾವು. ಇಂತಹ ನಾಗದೇವತೆಗಳನ್ನು ಸಮಾಧಾನ ಗೊಳಿಸುವುದಕ್ಕೆ ಕೇರಳದಲ್ಲಿ ನಾಗದೇವರ ಆಚರಣೆಗಳನ್ನು ನಡೆಸಲಾಗುವುದು. ಅದರಲ್ಲಿ ನಾಗಾಲಯಗಳು ಮತ್ತು ಅಲ್ಲಿಯ ಅರ್ಚಕ ಕುಟುಂಬದ ನಂಬೂದಿರಿಗಳು ಪ್ರಧಾನ ಪಾತ್ರ ವಹಿಸುತ್ತಾರೆ. ಸರ್ಪಗಳು ಅವರ ಮಾತಿನಂತೆ ನಡೆದುಕೊಳ್ಳುತ್ತವೆ. ಮತ್ತು ಅವರ ಆಜ್ಞೆಯನ್ನು ಕೂಡ ಪಾಲಿಸುತ್ತವೆ ಎಂಬ ನಂಬಿಕೆ ಪ್ರಬಲವಾಗಿ ಕಂಡುಬರುತ್ತದೆ. ಸರ್ಪಗಳನ್ನು ನಿಯಂತ್ರಿಸುವ ಅಧಿಕಾರ ಮತ್ತು ವೈದಿಕ ರೀತಿಯ ಆಚರಣೆಗಳನ್ನು ನೆರವೇರಿಸುವ ಅಧಿಕಾರ ಕೇವಲ ನಂಬೂದಿರಿ ಅರ್ಚಕ ಕುಟುಂಬಗಳಿಗೆ ಮಾತ್ರ ಮೀಸಲಾಗಿದೆ.

ಒಂದು ದೃಷ್ಟಿಯಿಂದ ಗಮನಿಸಿದರೆ ವೈದಿಕ ಸಂಸ್ಕೃತಿ ನಾಗಾರಾಧನೆಯ ಮೇಲೆ ಹಿಡಿತವನ್ನು ಸಾಧಿಸಿರುವುದು ಕಂಡುಬರುತ್ತದೆ. 'ಆಚರಣೆ' ಮತ್ತು 'ಆರಾಧನೆ' ಎಂಬ ಹೆಸರಲ್ಲಿ ನಿರಂತರ ಶೋಷಣೆ ಮುಂದುವರಿಯುತ್ತಿದೆ. ಆಚರಣೆಯ ಒಂದು ಪ್ರಕಾರಕ್ಕೆ ಇಂತಿಂಥ ವಸ್ತುಗಳು ಇಷ್ಟೇ ಪ್ರಮಾಣದಲ್ಲಿ ಬೇಕು. ಇಂತಹ ಆಚರಣೆಯನ್ನೇ ನಡೆಸಬೇಕು ಎನ್ನುವುದರ ಹಿಂದಿರುವ ವಸ್ತುಸ್ಥಿತಿಯನ್ನು ಗಮನಿಸಬೇಕಾಗಿದೆ. ಆದರೂ ಜನತೆ ಧರ್ಮ ಮತ್ತು ದೇವರು ಎಂಬ ಒಂದು ಆರಾಧನ ಪ್ರಕಾರಕ್ಕೆ ಭಯ ಮತ್ತು ಭಕ್ತಿಯ ಹಿನ್ನೆಲೆಯಲ್ಲಿ ಸಂಪ್ರದಾಯ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿರುವುದು ಕಂಡುಬಂದಿದೆ. ಮೃತ ಸರ್ಪಕ್ಕೆ ಸಂಸ್ಕಾರ, ನಾಗಶಿಲಾ ಪ್ರತಿಷ್ಠೆ ಇತ್ಯಾದಿಗಳು ವಿರಳವಾಗಿ ನಡೆಸಲ್ಪಡುತ್ತಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬಂದಿದೆ. ಸರ್ಪಬಲಿಯನ್ನು ವಿಶೇಷವಾಗಿ ನಾಗಾಲಯಗಳಲ್ಲಿ ಮತ್ತು ಕೌಟುಂಬಿಕ ನೆಲೆಯಲ್ಲಿ ನಡೆಸುತ್ತಿರುವುದು ತಿಳಿದು ಬಂದಿದೆ.

೫.೫ ಜನಪದ ಆಚರಣೆಗಳು

ಕೇರಳದ ಜನಪದ ಆಚರಣೆಗಳು ಅಲ್ಲಿಯ ಸಂಸ್ಕೃತಿಯ ಪ್ರಧಾನ ಅಂಶಗಳಾಗಿ ಕಂಡುಬರುತ್ತಿವೆ. ವಿಭಿನ್ನ ಸಾಂಸ್ಕೃತಿಕ, ಧಾರ್ಮಿಕ ಪ್ರಕಾರಗಳಿಗೆ ಸೇರಿದ ಜನಪದ ಆಚರಣೆಗಳು ಕೇರಳದ ಜನಮಾನಸದಲ್ಲಿ ಹಾಸು ಹೊಕ್ಕಾಗಿವೆ. ಜನಪದ ಆಚರಣೆಗಳು ಮತ್ತು ಆರಾಧನಾ ಪ್ರಕಾರಗಳು ಜನತೆಯ ಬದುಕಿನ ಮುಖ್ಯವಾದ ಒಂದು ಭಾಗವನ್ನು ಆವರಿಸಿಕೊಂಡಿರುವುದು ಕಂಡುಬರುತ್ತದೆ. ಕೇರಳದಲ್ಲಿ ಪ್ರಚಲಿತದಲ್ಲಿರುವ ಜನಪದ ಆಚರಣೆಯ ರೀತಿಗಳಿಗೆ ಅನಂತ ಮುಖಗಳಿವೆ. ಆರಾಧನೆಗೆ ಸಂಬಂಧಿಸಿದ ಆಚರಣೆಗಳಲ್ಲಿ ಭಾಗವಹಿಸುವವರು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದವರು. ಮುಖ್ಯವಾಗಿ ನಾಗಾರಾಧನೆಯ ಪ್ರಕಾರದಲ್ಲಿ ಸರ್ಪಂತುಳ್ಳಲ್ ಮತ್ತು ಸರ್ಪಪಾಟು ನಡೆಸುವವರು 'ಪುಳ್ಳುವರು' ಥೈಯಂಪಾಡಿಗಳ 'ನಾಗತೋಟಂ' ಮತ್ತು ವಣ್ಣಾನ್ ಸಮುದಾಯದವರು ನಡೆಸಿಕೊಡುವ 'ಕುರುಂದಿನಿ ಪಾಟ್' ಪ್ರಸಿದ್ಧವಾದವುಗಳು. ಈ ಆಚರಣೆಗಳಲ್ಲಿ ಎಲ್ಲ ಜಾತಿ ವರ್ಗಗಳವರೂ ಭಾಗವಹಿಸುತ್ತಿರುವುದು ಕಂಡುಬಂದಿದೆ. ಆ ಮೂಲಕ ಸಾಮಾಜಿಕ ಹಿನ್ನೆಲೆಯಲ್ಲಿ ಈ ವರ್ಗಗಳಿಗೆ ಸಾಮಾಜಿಕ ಸ್ಥಾನಮಾನ ದೊರಕುತ್ತಿರುವುದು ಗಮನೀಯ. ಹಿಂದುಳಿದ ವರ್ಗಗಳವರು ಆಚರಿಸುವ ಆಚರಣೆಗಳಲ್ಲಿ ಎಲ್ಲ ಜನವರ್ಗಗಳವರು ಭಾಗಿಗಳಾಗುವುದು ವಿಶಿಷ್ಟವಾಗಿದೆ.

ನಾಗಾರಾಧನೆಯ ಸಂದರ್ಭದಲ್ಲಿಯೂ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಪ್ರಭಾವವನ್ನು ಗುರುತಿಸಿಕೊಳ್ಳಬಹುದಾಗಿದೆ. ಸಾಮಾನ್ಯವಾಗಿ ಜನಪದ ಸಂಸ್ಕೃತಿಯಲ್ಲಿ ಗ್ರಾಮವೆಂದರೆ ಅನೇಕ ಜಾತಿಗಳು ಸೇರಿಕೊಂಡಿರುವ ಒಂದು ಘಟಕವಾಗಿರುತ್ತದೆ. ಇಲ್ಲಿ ಪ್ರತಿಯೊಂದು ಜಾತಿಯೂ ಒಂದೊಂದು ವೃತ್ತಿಯಿಂದ ಗುರುತಿಸಲ್ಪಡುತ್ತದೆ. ತಮ್ಮ ವೃತ್ತಿಯನ್ನು ನಿರ್ವಹಿಸುವುದು ಮತ್ತು ಅದಕ್ಕೆ ವೇತನವನ್ನು ಪಡೆದುಕೊಳ್ಳುವುದು ಜನರ ಕರ್ತವ್ಯ ಮತ್ತು ಹಕ್ಕುಗಳಾಗಿದ್ದುವು. ಸಮಾಜದ ಒಂದೊಂದು ಅವಶ್ಯಕತೆಗಳನ್ನು ಪೂರೈಸುವುದು ಆಯಾ ಜಾತಿಯ ಕರ್ತವ್ಯವಾಗಿತ್ತು. ನಾಗಾರಾಧನೆಯಂತಹ ಸಂದರ್ಭದಲ್ಲಿಯೂ ನಿರ್ದಿಷ್ಟ ವರ್ಗಗಳವರು ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸಿ ಹಕ್ಕುಗಳನ್ನು ಉಳಿಸಬೇಕಾದುದು ಅವಶ್ಯಕವಾಗಿತ್ತು.

ಪ್ರಸ್ತುತ ಅಧ್ಯಾಯದಲ್ಲಿ ಜಾತೀಯತೆಯ ಹಿನ್ನೆಲೆಯಲ್ಲಿ ನಡೆಸಲ್ಪಡುವ ನಾಗಾರಾಧೆಯ ಕೆಲವು ಪ್ರಮುಖ ಜನಪದ ಆಚರಣೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಆಚರಣೆಯಲ್ಲಿ ಭಾಗವಹಿಸುವ ಸಮುದಾಯಗಳನ್ನು ಕೂಡ ಪಾರಂಭದಲ್ಲೇ ಉಲ್ಲೇಖಿಸಲಾಗಿದೆ. ಅಧ್ಯಯನದ ಈ ಭಾಗಕ್ಕೆ ಪ್ರಧಾನವಾಗಿ ಕ್ಷೇತ್ರಕಾರ್ಯದ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೫.೫.೧. 'ಪುಳ್ಳುವರ' ನಾಗಾರಾಧನೆ

'ಪುಳ್ಳುವರು' ಕೇರಳದಲ್ಲಿ ಸಾಮಾಜಿಕವಾಗಿ ಹಿಂದುಳಿದ ಒಂದು ಸಣ್ಣ ಸಮುದಾಯ. ಇವರು ಕೊಲ್ಲಂ, ಅಲೆಪ್ಪಿ, ಕೊಟ್ಟಾಯಂ ಎರ್ನಾಕುಳಂ, ತ್ರಿಶೂರ್, ಮಲಪ್ಪುರಂ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ವಿರಳವಾಗಿ ಕಂಡುಬರುತ್ತಾರೆ. ಇವರ ಮಾತೃಭಾಷೆ ಮಲೆಯಾಳಿ. ಈ ಜನಾಂಗದ ಗಂಡಸರನ್ನು 'ಪುಳ್ಳುವ ಪಣಿಕ್ಕನ್' ಎಂದೂ ಸ್ತ್ರೀಯರನ್ನು 'ಪುಳ್ಳುವತಿ' ಅಥವಾ 'ಪುಳ್ಳುವ ಪನಿಕ್ಕತಿ' ಎಂದು ಕರೆಯಲಾಗುತ್ತದೆ. ವಿದ್ವಾಂಸರಾದ ಥರ್‌ಶ್ಚನ್[೧೧] (೧೯೯೭)

ಮತ್ತು ಅನಂತಕೃಷ್ಣ ಅಯ್ಯರ್[೧೨] (೧೯೮೧) ಅವರು ಪುಳ್ಳವನ್ ಎಂಬ ಪದವು 'ಪುಳ್ಳು' ಎಂಬ ಪದದಿಂದ ಬಂದಿದೆ ಎನ್ನುತ್ತಾರೆ. ಪುಳ್ಳು ಎಂದರೆ ಒಂದು ಜಾತಿಯ 'ಹುಲ್ಲು' ಎಂದರ್ಥ.

ಜನಾಂಗಿಕ ಹಿನ್ನೆಲೆ: ಪುಳ್ಳವ ಜನಾಂಗದ ಹಿನ್ನೆಲೆಯ ಕುರಿತಂತೆ ವಿಭಿನ್ನ ದಂತ ಕತೆಗಳು ಪ್ರಚಲಿತದಲ್ಲಿವೆ. ಪ್ರಚಲಿತದಲ್ಲಿರುವ ಒಂದು ದಂತ ಕತೆಯ ಪ್ರಕಾರ ಪರಶುರಾಮನು ಪಶ್ಚಿಮ ಕರಾವಳಿಯಲ್ಲಿ ನಾಗಾರಾಧನೆಯನ್ನು ನಡೆಸುವುದಕ್ಕಾಗಿಯೇ ಅವರನ್ನು ಸೃಷ್ಟಿಸಿದನೆಂದು ತಿಳಿದು ಬರುತ್ತದೆ. ಒಮ್ಮೆ ಪರಶುರಾಮನು ಕರಾವಳಿಯ ಭೂಪ್ರದೇಶವನ್ನು ಸೃಷ್ಟಿಸಿದ ನಂತರ, ತನ್ನ ಹೊಸ ಭೂಪ್ರದೇಶದಲ್ಲಿ ನಾಗಾರಾಧನೆಯನ್ನು ನಡೆಸುವುದಕ್ಕಾಗಿ, ಅರ್ಚಕರನ್ನು ಪಡೆಯುವುದಕ್ಕಾಗಿ ಬ್ರಹ್ಮನನ್ನು ಕುರಿತು ಘೋರವಾದ ಅಪಸ್ಸನ್ನು ನಡೆಸುತ್ತಾನೆ. ತಪಸ್ಸಿಗೆ ಒಲಿದ ಬ್ರಹ್ಮನು ನಾಲ್ಕು ರೀತಿಯ ಹುಲ್ಲಿನಿಂದ ಅಗ್ನಿಯಲ್ಲಿ ಹವನವನ್ನು ನಡೆಸಿ, ಒರ್ವವ್ಯಕ್ತಿಯನ್ನು ಸೃಷ್ಟಿಸುತ್ತಾನೆ. ಬ್ರಹ್ಮನು ಬಳಸಿದ ಆ ನಾಲ್ಕು ರೀತಿಯ ಹುಲ್ಲುಗಳೆಂದರೆ ಇಲ್ಲ್ಯ, ಕರುಕ, ಧರ್ಬ ಮತ್ತು ಚಮಟ. ತಾನು ನಡೆಸಿದ ಯಜ್ಞದಿಂದ ಸೃಷ್ಟಿಯಾದ ಆ ಪುರುಷನನ್ನು ಬ್ರಹ್ಮನು ಪರಶುರಾಮನಿಗೆ ಧಾರ್ಮಿಕ ಕಾರ್ಯಗಳಿಗಾಗಿ ಒಪ್ಪಿಸುತ್ತಾನೆ. ಈ ರೀತಿಯಾಗಿ ಹುಲ್ಲನ್ನು ಬಳಸಿ ಯಜ್ಞವನ್ನು ನಡೆಸಿದುದರಿಂದ, ಹುಲ್ಲಿನಿಂದ ಹುಟ್ಟಿ ಬಂದ ಆ ಮೂಲ ಪುರುಷನನ್ನು ಪುಳ್ಳು ಅಥವಾ ಪುಳ್ಳವ ಎಂದು ಕರೆಯಲಾಯಿತು. ಬಳಿಕ ಶಿವನು ಈ ಜನಾಂಗದ ಮೂಲ ಪುರುಷನಿಗೆ ಸರ್ಪಗಳನ್ನು ತೃಪ್ತಿಪಡಿಸುವುದಕ್ಕಾಗಿ 'ವೀಣೆ'ಯನ್ನು ಅನುಗ್ರಹಿಸಿದನೆಂದು ಪ್ರತೀತಿ ಇದೆ. ಮುಂದೆ ಮೂಲ ಪುರುಷನಿಂದ ಈ ಜನಾಂಗದವರು ಪುಳ್ಳವರು ಎಂದು ಕರೆಸಿಕೊಳ್ಳತ್ತಾ ನಾಗಾರಾಧನೆಯನ್ನೇ ಕುಲಕಸುಬನ್ನಾಗಿ ಮಾಡಿಕೊಂಡು ಪರಶುರಾಮನ ಆದೇಶವನ್ನು ಪಾಲಿಸಿಕೊಂಡು ಬಂದರು[೧೩] ಎಂದು ತಿಳಿದು ಬರುತ್ತದೆ.

ಪುಳ್ಳವರ ಮೂಲದ ಕುರಿತಂತೆ ಈ ಜನಾಂಗದಲ್ಲಿ ಇನ್ನೊಂದು ಐತಿಹ್ಯವು ಪ್ರಚಲಿತದಲ್ಲಿದೆ. ಅವರು ತಮ್ಮನ್ನು ನಾಗ ವಂಶಸ್ಥರೆಂದು ಕರೆಸಿಕೊಳ್ಳುತ್ತಾರೆ. 'ನಾಗಾರಾಧನೆ' ಎಂಬ ಈ ಕಸುಬು ನಮಗೆ ಸರ್ಪಗಳಿಂದ ದೊರಕಿರುವ ವಿಶೇಷ ಅನುಗ್ರಹ ಎಂದು ನಂಬಿಕೊಂಡಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಖಾಂಡವ ದಹನದಲ್ಲಿ ಅಗ್ನಿಯಲ್ಲಿ ಸಿಲುಕಿರುವ ಐದು ಹೆಡೆಯ ಸರ್ಪಕ್ಕೆ ಓರ್ವ ಬ್ರಾಹ್ಮಣ ಸ್ತ್ರೀಯು ರಕ್ಷಣೆ ನೀಡಿದ್ದರಿಂದ ಆಕೆಯು 'ಪುಳ್ಳುವೆತ್ತಿ'ಯಾಗಿ ಮಾರ್ಪಟ್ಟಳೆಂದು ಪ್ರತೀತಿ ಇದೆ.

ಖಾಂಡವ ವನವನ್ನು ಅಗ್ನಿಯು ಅರ್ಜುನನ ಸಹಾಯದಿಂದ ಸುಡುತ್ತಿರುವಾಗ ಒಂದು ಕರಿನಾಗ ಸರ್ಪವು ತಪ್ಪಿಸಿಕೊಂಡು ಅರೆಬೆಂದ ಸ್ಥಿತಿಯಲ್ಲಿ ಓರ್ವ ಬ್ರಾಹ್ಮಣ ಸ್ತ್ರೀಯ ಸಮೀಪಕ್ಕೆ ಸಹಾಯಕ್ಕಾಗಿ ಓಡಿಬರುತ್ತದೆ. ಆಗ ಆ ಹೆಂಗಸು ಕೊಡದಲ್ಲಿ ನೀರನ್ನು ತಂದು ಆ ಹಾವನ್ನು ಉಪಚರಿಸಿದಳು. ಬಳಿಕ ತನ್ನ ಗಂಡನಲ್ಲಿ ಈ ವಿಷಯವನ್ನು ಹೇಳಿದಳು. ವಿಷಯವನ್ನು ತಿಳಿದ ಗಂಡನು ಹೆಂಡತಿಯನ್ನು ಗದರಿಸಿ ಹೊರಗೆ ಹೋಗುವ ಮಾರಿಯನ್ನು ನೀನೇಕೆ ಒಳಗೆ ಕರೆದು ತಂದೆ, ನೀನೆ ಅದಕ್ಕೆ ಒಂದು ವ್ಯವಸ್ಥೆ ಮಾಡು ಎಂದು ಹೇಳಿದನು. ಆಗ ಆ ಹೆಂಗಸು ಒಂದು ಕೊಡದಲ್ಲಿ ಆ ಹಾವನ್ನು ತುಂಬಿಸಿ, ಬಟ್ಟೆಯಿಂದ ಕೊಡದ ಬಾಯಿಯನ್ನು ಕಟ್ಟಿ ಗುಂಡು ಮಲ್ಲಿಗೆ ಗಿಡದ ಅಡಿಯಲ್ಲಿ ಕವುಚಿಹಾಕಿದಳು. ಆ ಬ್ರಾಹ್ಮಣ ಹೆಂಗಸು ಏಳು ದಿನಗಳ ನಂತರ ಅಲ್ಲಿ ನೋಡಲಾಗಿ ಕೊಡವು ಏಳು ಕೋನಗಳಿರುವ ಹುತ್ತವಾಗಿ ಪರಿಣಮಿಸಿತ್ತು. ಬಳಿಕ ಆ ದಿನ ರಾತ್ರಿ ಹೆಂಗಸಿಗೆ ಕನಸಲ್ಲಿ ನಾಗರಾಜನು ಕಾಣಿಸಿಕೊಂಡು ''ನೀನು

ನನ್ನನ್ನು ಅಗ್ನಿಯಿಂದ ರಕ್ಷಿಸಿರುವುದರಿಂದ ನಿನಗೆ ಮುಂದೆ ಒಳ್ಳೆಯದಾಗುತ್ತದೆಂದು ಹೇಳಿ, ನೀನು ನನ್ನನ್ನು ಸ್ಪರ್ಶಿಸಿದ್ದುದರಿಂದ ಪುಳ್ಳವೆತ್ತಿಯಾಗಿ ಪರಿವರ್ತಿಸಿದ್ದಿಯೆಂದೂ ಹೇಳಿತು. ಮುಂದೆ ಜೀವನ ನಿರ್ವಹಣೆಗಾಗಿ ಒಂದು ಮಣ್ಣಿನ ಕೊಡ ತಂದು ಅದರ ಕೆಳಭಾಗದಲ್ಲಿ ತೂತುಮಾಡಿ ಅದಕ್ಕೆ ದನದ ಚರ್ಮವನ್ನು ಹೊದಿಸಿ ಒಂದು ವಾದನವನ್ನು ನಿರ್ಮಿಸಿ, ಅಷ್ಟನಾಗಗಳ ಹೆಸರು ಹೇಳಿ ನುಡಿಸಿದರೆ ನಿನಗೆ ಮತ್ತು ಕೇಳಿದವರಿಗೆ ಇದರಿಂದ ಶುಭವಾಗುತ್ತದೆ. ನೀನು ನುಡಿಸುವ ಕೊಡದ ಧ್ವನಿ ಮತ್ತು ಹಾಡುವ ಅಷ್ಟನಾಗಗಳ ಮಹಿಮೆಯನ್ನು ಕೇಳಿದವರಿಗೆ ಬರಬಹುದಾದ ಸರ್ಪದೋಷ ನಿವಾರಣೆಯಾಗುತ್ತದೆ.ಚರ್ಮರೋಗ, ಸಂತಾನಹೀನತೆ, ಉಬ್ಬಸದಂತ ವ್ಯಾದಿಗಳು ಕುಷ್ಠರೋಗ, ಮುಂತಾದ ರೋಗಗಳು ನಿವಾರಣೆಯಾಗುತ್ತದೆ. ನಾನು ಊರಲ್ಲಿ ಮನುಷ್ಯರಿಗೆ ಬರುವ ೯೬ ನಾನಾ ರೀತಿಯ ರೋಗಗಳನ್ನು ಸೃಷ್ಟಿಸುತ್ತೇನೆ. ಆಗ ನೀನು ಕೊಡವನ್ನು ನುಡಿಸಿ ನನ್ನ ಮಹಿಮೆಯನ್ನು ಹಾಡಿದರೆ ಜನರಿಗೆ ಬಂದಿರುವ ಸಂಕಷ್ಟ ನಿವಾರಣೆಯಾಗುತ್ತದೆ. ನೀನು ನೀಡುವ ಔಷಧ ಮತ್ತು ಮಂತ್ರ ತಂತ್ರಕ್ಕೆ ನಾನು ಜೊತೆಗಿದ್ದು ಅನುಗ್ರಹ ನೀಡುತ್ತೇನೆ'' ಎಂದು ಬ್ರಾಹ್ಮಣ ಸ್ತ್ರೀಗೆ ಅನುಗ್ರಹಿಸಿ ವರ ನೀಡಿದನು. ಈ ವಿಚಾರ ತಿಳಿದ ಮನೆಯವರು ಆಕೆಯನ್ನು ಮನೆಯಿಂದ ಹೊರಗೆ ಹಾಕಿದರು. ಮುಂದೆ ಆಕೆಯು ಕನಸ್ಸಿನಲ್ಲಿ ಬಂದಿರುವ ನಾಗರಾಜನ ಅಣತಿಯಂತೆ ಪುಳ್ಳವೆತ್ತಿ ಯಾಗಿ ಜೀವಿಸಿದಳು. ಇವಳಿಂದ ಮುಂದೆ ಆಗಿರುವ ಜನಾಂಗವೇ ಪುಳ್ಳವರು ಎಂದು ಪುಳ್ಳವ ವರ್ಗದಲ್ಲಿ ಪ್ರಚಲಿತ ಐತಿಹ್ಯವಿದೆ.

ಕೇರಳದಾದ್ಯಂತ ಇರುವ ಪುಳ್ಳವ ಜನಾಂಗವು ನಾಲ್ಕು ಮನೆತನ (ಪಂಗಡ)ಗಳಲ್ಲಿ ಹಂಚಿಹೋಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.[೧೯]

೧. ಪತಿಯೂರು ೨. ಪಳ್ಳೆದಂ ೩.. ಥುಂಪಾನ್ ಮತ್ತು ಇಡಕ್ಕಾಡ್. ಪೂರ್ವದಲ್ಲಿ ಒಂದೇ ಮನೆತನಗಳೊಳಗಿನ ಸದಸ್ಯರುಗಳಲ್ಲಿ ವೈವಾಹಿಕ ಸಂಬಂಧಗಳು ನಡೆಯುತ್ತಿರಲಿಲ್ಲ. ಹಿಂದೆ ಇವರಲ್ಲಿ ಬಹುಪತ್ನಿತ್ವ ವ್ಯವಸ್ಥೆ ಆಚರಣೆಯಲ್ಲಿದ್ದು, ವಿಚ್ಛೇಧನವಾದರೆ ಹೆಣ್ಣಿಗೆ ವರದಕ್ಷಿಣೆ ಮತ್ತು ತಾಳಿಯನ್ನು ಹಿಂದಕ್ಕೆ ಕೊಡಬೇಕಾಗಿತ್ತು, ಆದರೆ ಈಗ ಈ ಕಟ್ಟುಪಾಡುಗಳೆಲ್ಲ ಸಡಿಲಗೊಂಡಿವೆ.

ನಂಬಿಕೆ ಮತ್ತು ಸಂಪ್ರದಾಯಗಳು: 'ಪುಳ್ಳವರು ಸರ್ಪ ಅಥವಾ ನಾಗದೇವತೆಯ ಆರಾಧಕರು. ನಾಗರಾಜ ಮತ್ತು ನಾಗಯಕ್ಷಿಯನ್ನು ತಮ್ಮ ಕುಲದೇವತೆಯೆಂದು ಆರಾಧಿಸಿಕೊಂಡು ಬರುತ್ತಾರೆ. ನಾಗಾರಾಧನೆಯೇ ಇವರ ಕುಲಕಸುಬು. ಮಂತ್ರ ತಂತ್ರಗಳಲ್ಲಿಯೂ ಕೂಡ ಇವರು ಸರ್ಪವನ್ನು ಅಧಿದೇವತೆಯಾಗಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ನಾಗನೊಂದಿಗೆ ಶಿವ, ವಿಷ್ಣು, ಶಾಸ್ತ, ಸುಬ್ರಹ್ಮಣ್ಯ, ಮತ್ತು ಭಗವತಿಯನ್ನು ಕೂಡ ಆರಾಧಿಸುತ್ತಾರೆ. ಆದಿತ್ಯವಾರದ ದಿನಗಳಲ್ಲಿ ಮತ್ತು ಪ್ರತೀ ತಿಂಗಳ ಆಶ್ಲೇಷ ನಕ್ಷತ್ರದಂದು ನಾಗನಿಗೆ ತಮ್ಮ ಮನೆಗಳಲ್ಲಿ ವಿಶೇಷ ಪೂಜೆ ನಡೆಸುತ್ತಾರೆ.

ಪುಳ್ಳವರ ವಿಶೇಷವಾದ ಒಂದು ವೃತ್ತಿಯೇ 'ಸರ್ಪ ಪಾಟ್ಟು' ಅಥವಾ ಸರ್ಪಗಾನ. ಇದನ್ನು ಇವರು ತಮ್ಮ ಪರಂಪರೆಯಾಗಿಯು ವೃತ್ತಿಯಾಗಿಯೂ ನಡೆಸಿಕೊಂಡು ಬಂದಿದ್ದಾರೆ. ತಮ್ಮ ವಿರಾಮದ ಸಂದರ್ಭದಲ್ಲಿ ಅಥವಾ ಮಳೆಗಾಲದ ಸಮಯದಲ್ಲಿ ಮನೆಮನೆಗಳಿಗೆ ತಮ್ಮ 'ಪುಳ್ಳವ ಕೊಡ' ಮತ್ತು 'ವೀಣೆ'ದೊಂದಿಗೆ ತೆರಳಿ

ಸರ್ಪಗಾನವನ್ನು ನಡೆಸಿಕೊಡುತ್ತಾರೆ. ಸರ್ಪಗಳಿಗೆ ಸಂಬಂಧಿಸಿದ ಪುರಾಣದ ಕತೆಗಳನ್ನು ಹಾಡಿನ ರೂಪದಲ್ಲಿ ಹಾಡುತ್ತಾರೆ. ಇದರಿಂದ ಅವರಿಗೆ ನಿರ್ದಿಷ್ಟವಾದ ಸಂಭಾವನೆ ದೊರಕುತ್ತದೆ. ಹಾಡನ್ನು ಹಾಡಿಸಿದವರಿಗೆ ಸಂಬಂಧಿಸಿದ ಸರ್ಪದೋಷ ನಿವಾರಣೆಯಾಗುತ್ತದೆ. ಎಂಬ ಪ್ರತೀತಿ ಇದೆ. ಹೆಚ್ಚಾಗಿ ಪುಳ್ಳವ ಹೆಂಗಸರು ಈ ಕಾರ್ಯವನ್ನು ನಡೆಸಿಕೊಡುತ್ತಾರೆ. ಕೊಡ ಮತ್ತು ವೀಣೆಯನ್ನು ಹೊತ್ತು ತಿರುಗುವ ಹೆಂಗಸನ್ನು ಕಂಡರೆ ನಿರ್ದಿಷ್ಟವಾಗಿ ಈಕೆ ಪುಳ್ಳವೆತ್ತಿ ಎಂದು ಗುರುತಿಸಬಹುದಾಗಿದೆ. ಕೆಲವು ಪುಳ್ಳವ ಹೆಂಗಸರು ನಾಗದೇವಾಲಯಗಳಲ್ಲಿ ದಿನವೂ ಸರ್ಪಗಾನ ಹಾಡುವ ಕಾಯಕವನ್ನು ನಡೆಸುತ್ತಾರೆ. ನಾಗದೇವಾಲಯಗಳ ಹೊರ ಆವರಣಗಳಲ್ಲಿ ಇವರು ತಮ್ಮ ವೀಣೆಯೊಂದಿಗೆ ಕುಳಿತಿದ್ದು, ಬರುವ ಭಕ್ತಾದಿಗಳು ಇವರಿಂದ ಸರ್ಪಗಾನ ಹಾಡಿಸುತ್ತಾರೆ.

ಪುಳ್ಳವರ ಪಾರಂಪರಿಕ ವೃತ್ತಿಯೇ 'ಸರ್ಪಂತುಳ್ಳಲ್'. ಸರ್ಪದೋಷಕ್ಕೆ ಒಳಗಾದವರು ಇವರ ಮುಖೇನ ಈ ಆಚರಣೆಯನ್ನು ನಡೆಸುತ್ತಾರೆ. ಇದು ಇವರಿಗೆ ಸಾಮಾಜಿಕವಾಗಿಯೂ ಮನ್ನಣೆಯನ್ನು ತಂದು ಕೊಡುತ್ತದೆ. ಇವರ ಆಚರಣೆಯಲ್ಲಿ ಸಮಾಜದ ಮೇಲ್‌ಸ್ತರದಲ್ಲಿರುವ ವ್ಯಕ್ತಿಗಳು ಭಾಗವಹಿಸುವುದು ವಿಶೇಷವೇ ಸರಿ. ಉಳಿದಂತೆ ಪುಳ್ಳವರು ಮಂತ್ರ ತಂತ್ರಗಳಲ್ಲೂ ನಿಪುಣರು. ಸರ್ಪವಿಷವನ್ನು ತೆಗೆಯುವ ಪಂಡಿತ ವೃತ್ತಿಯನ್ನು ಕೂಡ ನಡೆಸುತ್ತಾರೆ.

ಸಾಮಾಜಿಕವಾಗಿ ಪುಳ್ಳವರು ಕೆಳ ಸ್ತರದಲ್ಲಿದ್ದಾರೆ. ಪಿತೃಮೂಲೀಯ ವ್ಯವಸ್ಥೆ ಇವರಲ್ಲಿ ಬಳಕೆಯಲ್ಲಿದೆ. ಮೊದಲ ಮಗನೇ ಮನೆಯ ಯಜಮಾನ. ಇವರ ಕುಟುಂಬಗಳಲ್ಲಿ ಸ್ತ್ರೀಯರಿಗೂ ಪುರುಷರಂತೆ ಸಮಾನ ಮಾನ್ಯತೆ ಇದೆ. ಪುಳ್ಳವರು ಇಂದಿನ ಬದಲಾದ ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಂಡಿದ್ದಾರೆ. ಹೊಸ ತಲೆಮಾರಿನ ಯಾವ ಜನತೆ ಬೇರೆ ಬೇರೆ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವುದರಿಂದ, ಪಾರಂಪರಿಕ ವೃತ್ತಿಯನ್ನು ನಡೆಸುವವರ ಸಂಖ್ಯೆ ಕ್ಷೀಣಿಸುತ್ತಿದೆ. ಕೇರಳದ ಕೆಲವೇ ಕೆಲವು ಪುಳ್ಳವ ಕುಟುಂಬಗಳು ಮಾತ್ರ ಈ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ.

೫.೫.೨ ಸರ್ಪಂತುಳ್ಳಲ್

ಕೇರಳದ ನಾಗಾರಾಧನೆಗೆ ಸಂಬಂಧಿಸಿದ ಪ್ರಸಿದ್ಧವಾದ ಜನಪದ ಆಚರಣೆ. ಇದನ್ನು 'ಪಾಂಬಿನ್ ತುಳ್ಳಲ್', 'ಸರ್ಪನೃತ್ಯ', 'ಸರ್ಪಉತ್ಸವ', 'ಹಾವಿನ ಕಳ', ಎಂದು ಕರೆಯುತ್ತಾರೆ. ಪುಳ್ಳವ ಸಮುದಾಯದವರು ಈ ಆಚರಣೆಯನ್ನು ನಡೆಸಿಕೊಡುತ್ತಾರೆ. ಇವರ ಮಾರ್ಗದರ್ಶನದಲ್ಲಿ ಮತ್ತು ಸಾರಥ್ಯದಲ್ಲಿ ಸಂಪೂರ್ಣ ಆಚರಣೆ ನಡೆಯುತ್ತದೆ. ಪಂಚವರ್ಣದ ಹುಡಿಗಳಿಂದ ಸರ್ಪನ ವಿವಿಧ ರೀತಿಯ ಚಿತ್ರಗಳನ್ನು ನೆಲದಲ್ಲಿ ಬರೆದು ಹಾಡುತ್ತ ಸ್ತುತಿಸುವ ಆರಾಧನ ಸಂಪ್ರದಾಯವೇ ಸರ್ಪಂತುಳ್ಳಲ್. ಇದನ್ನು 'ಕಳಮೆಳತ್ತುಂ ಪಾಟುಂ' ಎಂದೂ ಕರೆಯುತ್ತಾರೆ.

ನಾಗಕ್ಷೇತ್ರಗಳಲ್ಲಿ, ಸರ್ಪಕಾವುಗಳಲ್ಲಿ ಹಾಗೂ ಅಪರೂಪವಾಗಿ ತರವಾಡು ಮನೆಗಳಲ್ಲಿ ಪುಳ್ಳವ ಜನಾಂಗದವರು ನಡೆಸುವ ಸಾಂಪ್ರದಾಯಿಕ ಧಾರ್ಮಿಕ ಕಲೆ ಇದಾಗಿದೆ. ಸರ್ಪಂತುಳ್ಳಲ್ ಅಲಂಕರಿಸಿದ ಚಪ್ಪರದಲ್ಲಿ ಪಂಚವರ್ಣದ ಹುಡಿಗಳಿಂದ ನಾಗಕಳವನ್ನು ರಚಿಸುವರು. ಕಳಂ ಪೂಜೆಯ ನಂತರ ತುಳ್ಳಲ್ ಕುಣಿತ ಆರಂಭಿಸುವರು. ಪುಳ್ಳವ ಕುಡಂ, ಇಳತಾಳ (ಸಣ್ಣತಾಳ) ಎಂಬ ವಾದ್ಯಗಳ ಹಿನ್ನೆಲೆಯೊಂದಿಗೆ ಪುಳ್ಳವರು ಹಾಡುವ ಹಾಡಿಗೆ ಸರಿಯಾಗಿ

ಸ್ತ್ರೀಯರು ಕುಣಿಯುತ್ತಾರೆ. ಕಳವನ್ನು ಉಜ್ಜುವುದರ ಮೂಲಕ ಕುಣಿತ ಕೊನೆಗೊಳ್ಳುವುದು. ಸರ್ಪದೋಷ ನಿವಾರಣೆ, ಸಂತಾನ ಲಾಭ, ಹಾಗೂ ಸಂಪತ್ತು ಅಭಿವೃದ್ಧಿಗಾಗಿ ಸರ್ಪಂತುಳ್ಳಲ್ ನಡೆಸುವರು.

'ಸಾಂಪ್ರದಾಯಿಕ ವಿಧಿಗಳಿಂದ ದೇವತೆಗಳ ದೂಳಿ ಚಿತ್ರಗಳನ್ನು ರಚಿಸಿ, ಅವರನ್ನು ಸ್ತುತಿಸಿ ಹಾಡಿ ತೃಪ್ತಿ ಪಡಿಸುವ ರೀತಿ ಹಿಂದಿನ ಕಾಲದಲ್ಲಿಯೇ ರೂಢಿಯಲ್ಲಿತ್ತು. ಮಾಂತ್ರಿಕ ಕಳ(ಮಂಡಲ)ಗಳನ್ನು ರಚಿಸಿ, ಪೂಜಿಸಿ ಅದರ ಮುಂಭಾಗದಲ್ಲಿ ರಕ್ತಬಲಿಯನ್ನು ನಡೆಸಿದ ನಂತರ ಆವೇಶಗೊಂಡು ಕುಣಿಯುವ ವೇಲರ ಕುರಿತು 'ಸಂಘಂ' ಕೃತಿಗಳಲ್ಲಿ ಉಲ್ಲೇಖಗಳಿವೆ. ಈ ಆಚರಣೆಯನ್ನು 'ಕಳಮೆಳತ್ತು' ಮತ್ತು 'ಪಾಟ್ಟು' ಎಂದೂ ಕರೆಯುತ್ತಿದ್ದರು. ಇದರಿಂದಲೇ ಕಲಮೆಳತ್ತು ಪಾಟ್ಟು ವಿಕಾಸಗೊಂಡಿರಬೇಕು ಎಂಬುದು ವಿದ್ವಾಂಸರ ಅಭಿಮತ.'[೧೫]

ಕೇರಳದಾದ್ಯಂತ ನಾಗಾರಾಧನೆ ಪ್ರಚಲಿತದಲ್ಲಿದ್ದರೂ ಅದು ಏಕರೂಪವಾಗಿಲ್ಲ. ಪ್ರಾದೇಶಿಕವಾಗಿ ಆಚರಣೆಗಳು ವಿಭಿನ್ನ ಸ್ವರೂಪದಲ್ಲಿ ನಡೆಯುತ್ತಿರುವುದು ಕಂಡುಬಂದಿದೆ. ಪ್ರಧಾನವಾಗಿ ಸರ್ಪಂತುಳ್ಳಲ್ ಆಚರಣೆಯನ್ನು ಗಮನಿಸಿದರೆ, ಇದು ಮಧ್ಯ ಕೇರಳದ ಕೆಲವು ಜಿಲ್ಲೆಗಳಾದ ಎರ್ನಾಕುಳಂ, ತ್ರಿಶೂರ್, ಕೊಟ್ಟಾಯಂ, ಪಾಲಕ್ಕಾಡ್, ಅಲೆಪ್ಪಿ, ಮೊದಲಾದ ಪ್ರದೇಶಗಳಲ್ಲಿ ಪ್ರಚಲಿತದಲ್ಲಿದೆ. ಈ ಆಚರಣೆ ಬಯಲಿನಲ್ಲಿ ನಡೆಯುವ ಕಾರ್ಯಕ್ರಮವಾಗಿರುವುದರಿಂದ ಡಿಸೆಂಬರ್ ತಿಂಗಳಿನಿಂದ ಎಪ್ರಿಲ್ ತಿಂಗಳ ಕೊನೆಯವರೆಗೆ, ಅಂದರೆ ಮಳೆಗಾಲ ಪ್ರಾರಂಭವಾಗುವಲ್ಲಿಯವರೆಗೆ ನಡೆಯುತ್ತಿರುತ್ತದೆ.

ಸರ್ಪಂತುಳ್ಳಲ್‌ನ್ನು ಮಂಡಲದಲ್ಲಿ ವಿವಿಧ ಸ್ವರೂಪದ ಸರ್ಪ ಪ್ರತಿರೂಪಗಳನ್ನು ರಚಿಸುವುದರೊಂದಿಗೆ ಆಚರಿಸಲಾಗುತ್ತದೆ. ಇಲ್ಲಿ ರಚಿಸಲ್ಪಡುವ ಮಂಡಲಗಳು ಬೇರೆ ಬೇರೆ ಹಿನ್ನೆಲೆಯಲ್ಲಿ ಆರಾಧಿಸಲ್ಪಡುತ್ತವೆ. ಅಷ್ಟನಾಗ ಕಳಂ ನಾಗ ಪ್ರೀತ್ಯರ್ಥವಾಗಿ ರಚಿಸಲ್ಪಟ್ಟರೆ. ಸಂತಾನ ಕಳಂ ಸಂತಾನ ಭಾಗ್ಯದ ಹಿನ್ನೆಲೆಯಲ್ಲಿ ರಚಿಸಲ್ಪಡುತ್ತದೆ. ಅದೇ ರೀತಿ ಒಂದೊಂದು ಮಂಡಲಗಳಿಗೆ ಒಂದೊಂದು ಉದ್ದೇಶವಿರುವುದು ತಿಳಿದು ಬರುತ್ತದೆ.

ಸರ್ಪಂತುಳ್ಳಲ್‌ನಲ್ಲಿ ಪ್ರಧಾನವಾದ ಮಂಡಲಗಳು (ಕಳಂ) ಈ ರೀತಿ ಇವೆ.

೦೧. ಅಷ್ಟನಾಗ ಕಳಂ

೦೨. ಸಂತಾನ ಕಳಂ

೦೩. ನಾಗಯಕ್ಷಿ ಕಳಂ

೦೪. ನಾಗರಾಜಾವು ಕಳಂ

೦೫. ಅನಂತಶಯನ ಕಳಂ

೦೬. ಭೂತ ಕಳಂ

೦೭. ಪಚ್ಚಕಟ್ಟು ಕಳಂ

೦೮. ಪುಟ್ ಕಳಂ

೦೯. ಭಸ್ಮ ಕಳಂ

೧೦. ಸುದರ್ಶನ ಕಳಂ

ಮೇಲೆ ಸೂಚಿಸಿರುವ ಪ್ರಕಾರಗಳಲ್ಲಿ ಕೆಲವನ್ನು ಹಗಲಿನಲ್ಲಿಯೂ ಕೆಲವನ್ನು ರಾತ್ರಿಯಲ್ಲಿಯೂ ಆಚರಿಸಲಾಗುವುದು. ಪ್ರಸ್ತುತ ಅಧ್ಯಯನದಲ್ಲಿ ಕೆಲವು ಪ್ರಕಾರಗಳನ್ನಷ್ಟೇ ಬಳಸಿಕೊಳ್ಳಲಾಗಿದೆ.

ಸರ್ಪಕಳವನ್ನು ರಚಿಸಿ 'ಪುಳ್ಳವರು' ನಡೆಸುವ ಪಾಟ್ಟ್', ಹಾಗೂ 'ಕಣಿಯರ್' ಕಳ ರಚಿಸಿ ಹಾಡುವ 'ಗಂಧರ್ವನ್ ಪಾಟ್', ಮತ್ತು ವಣ್ಣಾನ್ ವರ್ಗದವರು ರಚಿಸುವ 'ಚಾತ್ತನ್ ಕಳ' ಮತ್ತು ಪಾಟ್, ಇದೇ ವಿಭಾಗಕ್ಕೆ ಸೇರುತ್ತವೆ. ಆದರೆ ಆಚರಣೆಯ ಸ್ವರೂಪದಲ್ಲಿ ಭಿನ್ನತೆ ಇದೆ. ಇವೆಲ್ಲ ಕುಟುಂಬ ಸಂಬಂಧಿ ಮತ್ತು ದೇವಾಲಯ ಸಂಬಂಧಿಯಾದ ಒಂದು ಸಾಂಪ್ರದಾಯಿಕ ಆರಾಧನ ಕಲೆಯಾಗಿವೆ. ಅದೇರೀತಿ ಕುಟುಂಬ ಕೇಂದ್ರಿತ ತರವಾಡು ಮನೆಗಳಲ್ಲಿಯೂ ಪಾಟು ನಡೆಸುವ ಸಂಪ್ರದಾಯ ಇಂದಿಗೂ ರೂಢಿಯಲ್ಲಿದೆ.

ಸಾಂಪ್ರದಾಯಿಕ ಆರಾಧನ ಕಲೆಗಳಾಗಿರುವ ಪಾಟ್ ಪ್ರಕಾರದಲ್ಲಿ 'ಸರ್ಪಂತುಳ್ಳಲ್' ಪ್ರಸಿದ್ಧವಾದ ಆಚರಣೆಯಾಗಿದೆ. ಕೇರಳದ ಸಂಸ್ಕೃತಿಯಲ್ಲಿ ಸಂಪತ್ತು ಮತ್ತು ಸಮೃದ್ಧಿಯ ಸಂಕೇತವಾಗಿ ನಾಗನನ್ನು ಪೂಜಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಾಗಾರಾಧನೆಯ ಪ್ರಮುಖ ಜನಪದ ಆಚರಣೆಯಾಗಿ ಸರ್ಪಕಳ ಮತ್ತು ಪಾಟು ನಡೆದು ಬಂದಿದೆ. ಪುಳ್ಳವರು ಇದರ ಪಾರಂಪರಿಕ ಕರ್ಮಿಗಳು ಜೊತೆಗೆ ಪುಳ್ಳವ ಮಹಿಳೆಯರು ನಾಗದೇವತೆಯ ಅನುಗ್ರಹ ಪಡೆದವರು ಎಂಬುದು ಇದರ ಹಿಂದಿರುವ ನಂಬಿಕೆ.

ಸರ್ಪಂತುಳ್ಳಲ್ ಆಚರಣೆಯನ್ನು ಕುಟುಂಬದ ಸಂಬಂಧಿತ ಮೂಲ ಸ್ಥಾನಗಳಲ್ಲಿ, ತರವಾಡು ಮನೆಗಳಲ್ಲಿ, ನಾಗದೇವಾಲಯಗಳಲ್ಲಿ ನಡೆಸಲಾಗುತ್ತದೆ. ನಾಗದೋಷ ಪರಿಹಾರ, ಸಂತಾನ ಹೀನತೆ, ಮಾನಸಿಕ ವಿಕ್ಷಿಪ್ತತೆ, ಮತ್ತು ಕುಷ್ಠರೋಗ, ಮೊದಲಾದ ಸಂದರ್ಭಗಳಲ್ಲಿ ಈ ಆಚರಣೆಯನ್ನು ಹರಕೆಯ ರೂಪದಲ್ಲಿಯೂ, ಮತ್ತು ನಾಗದೇವಾಲಯಗಳಲ್ಲಿ ವಾರ್ಷಿಕ ಆಚರಣೆಯಾಗಿಯೂ ನಡೆಸಲಾಗುತ್ತದೆ. ಪುಳ್ಳವರ ನೇತೃತ್ವದಲ್ಲಿ ನಡೆಸಲ್ಪಡುವ ಈ ವಿಶೇಷ ಆಚರಣೆಯಲ್ಲಿ ಸಮಾಜದ ಎಲ್ಲ ವರ್ಗದವರೂ ಭಾಗವಹಿಸುತ್ತಿದ್ದಾರೆ. ಸರ್ಪ ಸಂಪ್ರೀತಿಗಾಗಿ ನಡೆಸಲ್ಪಡುವ ಈ ಆಚರಣೆ ಸಂಗೀತ ಪ್ರಧಾನವಾದುದು. ಇದರೊಂದಿಗೆ ವಿಶೇಷವಾಗಿ ನಡೆಸುವ ಮೊರಂ ಪೂಜೆ, (ಗರುಡ ಪೂಜೆ) ಪೂವಾಟ, ಸರ್ಪಪಾಟು, ಪುಳ್ಳವನ ಬೆಂಕಿಯ ನೃತ್ಯ, ಕೊನೆಗೆ ಕುಟುಂಬದ ಹೆಂಗಸರು ಆವೇಶಗೊಂಡು ನಡೆಸುವ 'ತುಳ್ಳಲ್' ಇವೆಲ್ಲವೂ ಒಂದು ರೀತಿಯ ಮಾಂತ್ರಿಕ ಲೋಕವನ್ನೇ ಸೃಷ್ಟಿಸುತ್ತದೆ. ಅಲ್ಲಿ ಬಳಸುವ ಪರಿಕರಗಳು, ಆಚರಣೆಯ ಸ್ವರೂಪ ಎಲ್ಲವೂ ಕೂಡ ಗಮನ ಸೆಳೆಯುವಂತವುಗಳಾಗಿವೆ.

ಪಂದಲ್ ಕರ್ಮ (ಕಂಬ ಮುಹೂರ್ತ)

ಸರ್ಪಂತುಳ್ಳಲ್ ಆಚರಣೆಯ ಪೂರ್ವಭಾವಿಯಾಗಿ ನಡೆಯುವ ಒಂದು ಸಣ್ಣ ಧಾರ್ಮಿಕ ವಿಧಿ ವಿಧಾನ, ಒಂದು ಶುಭ ದಿನದಂದು ಪುಳ್ಳವ ಮುಖಂಡ, ಕಾರ್ಯಕ್ರಮದ ಕರ್ತೃಗಳು, ಮತ್ತು ಊರಿನ ವಿಶ್ವಕರ್ಮ ಜನಾಂಗದ ಆಚಾರಿ ಇವರೆಲ್ಲ ತುಳ್ಳಲ್ ನಡೆಯುವ ಪ್ರದೇಶದಲ್ಲಿ ಸೇರುತ್ತಾರೆ. ಕುಲದೇವರಲ್ಲಿ, ನಾಗದೇವರಲ್ಲಿ ಎಲ್ಲರೂ

ಸೇರಿ ಪ್ರಾರ್ಥಿಸಿ ಕಾರ್ಯಕ್ರಮ ನಿರ್ವಿಘ್ನವಾಗಿ ನಡೆಯಬೇಕೆಂದು ಬೇಡಿಕೊಳ್ಳುತ್ತಾರೆ. ನಂತರ ಪ್ರದರ್ಶನ ನಡೆಯುವ ಅಂಗಳದಲ್ಲಿ ಮುಂದೆ ಹಾಕುವ ಚಪ್ಪರಕ್ಕಾಗಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ, ಅಷ್ಟ ದಿಕ್ಕುಗಳನ್ನು ಗುರುತಿಸಿ ಪೂರ್ವಭಾಗದಲ್ಲಿ ಒಂದು ಕಂಬವನ್ನು, ಜೊತೆಗೆ ಬಾಳೆ ಗಿಡವನ್ನು ಕೂಡ ನೆಡಲಾಗುತ್ತದೆ. ಇದು ಮುಂದೆ ನಡೆಯುವ ಧಾರ್ಮಿಕ ಆಚರಣೆಗೆ ವಿದ್ಯುಕ್ತ ಚಾಲನೆ. ನಂತರ ಸುಮಾರು ೭ ದಿನಗಳಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ. ಸರ್ಪಂತುಳ್ಳಲ್ ಸುಮಾರು ಮೂರು, ಐದು, ಏಳು ದಿನಗಳವರೆಗೂ ಕೂಡ ನಡೆಯುತ್ತದೆ. ಪಂದಲ್‌ಕರ್ಮದ ಬಳಿಕ 'ಕಳಂ ಕರಿಕುಗ' ಎಂಬ ವಿಧಿ ಇದೆ. ಮಂಡಲ ಕಳ ರಚನೆಗೆ ಬೇಕಾಗುವ ಸಾಮಾಗ್ರಿಗಳ ಪಟ್ಟಿ ಮಾಡುವುದು ಅದೇ ದಿನ. ಅಂದಿನಿಂದ ಕಳಮೆಳತ್ತು ಪಾಟು ನಡೆಯುವವರೆಗೆ ಕಳಮೆಳತ್ತು ಪಾಟು ನಡೆಸುವ ತರವಾಡು ಸದಸ್ಯರು, ಕರ್ಮಿಗಳಾದ ಪುಳ್ಳವರು ತುಳ್ಳಲ್‌ನಲ್ಲಿ ಭಾಗವಹಿಸುವ ಸ್ತ್ರೀಯರು, ಮದ್ಯಮಾಂಸಾದಿಗಳನ್ನು ವರ್ಜಿಸಿ ವ್ರತ ಶುದ್ಧಿಯಿಂದಿರಬೇಕು.

ಸರ್ಪಂತುಳ್ಳಲ್ ನಡೆಸಿಕೊಡುವ 'ಪುಳ್ಳವ'ರು ಕುಟುಂಬ ಸಮೇತರಾಗಿ ಭಾಗವಹಿಸುತ್ತಾರೆ. ಸುಮಾರು ೮ ರಿಂದ ೧೦ ಮಂದಿ ಒಂದೇ ಕುಟುಂಬದ ಸದಸ್ಯರುಗಳು ಭಾಗಿಗಳಾಗುತ್ತಾರೆ. ಮಂಡಲ ರಚನೆ ಇತ್ಯಾದಿಗಳಲ್ಲಿ ಹೆಂಗಸರು ಕೂಡ ಪಾತ್ರವಹಿಸುತ್ತಾರೆ. ಸರ್ಪಪಾಟ್ಟ್ ಹಾಡುವಲ್ಲಿಯೂ ಕೂಡ ಹೆಂಗಸರು ಗಂಡಸರೊಂದಿಗೆ ಜೊತೆಗೂಡುತ್ತಾರೆ. ಪೂರ್ವ ನಿರ್ಧಾರಿತ ದಿನದಂದು ಪುಳ್ಳವರು ತಮ್ಮ ಪರಿಕರಗಳೊಂದಿಗೆ ಆಚರಣೆ ನಡೆಯುವ ಪ್ರದೇಶಕ್ಕೆ ಮುಂಚಿತವಾಗಿಯೇ ಬರುತ್ತಾರೆ. ಸರ್ಪಂತುಳ್ಳಲ್ ಸಾಮಾನ್ಯವಾಗಿ ಕುಟುಂಬದ ಮೂಲಸ್ಥಾನಗಳಲ್ಲಿ ಹೆಚ್ಚಾಗಿ ನಡೆಯುತ್ತದೆ. ಈ ಆರಾಧನಾ ಕೇಂದ್ರವು ತುಳುನಾಡಿನ ಆಲಡೆಗಳಿಗೆ ಸಂವಾದಿಯಾಗಿರುತ್ತದೆ. ಇಲ್ಲಿ ನಾಗನೊಂದಿಗೆ ಪರಿವಾರ ದೇವತೆಗಳಾದ ಭಗವತಿ, ರುದ್ರ ಭಗವತಿ, ಹನುಮಾನ್, ಭುವನೇಶ್ವರಿ, ನಾಗ ಇತ್ಯಾದಿ ದೇವತೆಗಳಿರುತ್ತವೆ. ಪ್ರಸ್ತುತ ತೀಯ ಸಮಾಜದ ಆರಾಧನ ಕೇಂದ್ರದಲ್ಲಿ ಕ್ಷೇತ್ರಕಾರ್ಯ ನಡೆಸಿರುವುದರಿಂದ ಅಲ್ಲಿಯ ಆರಾಧನಾ ವಿಧಿಗಳನ್ನೇ ಗಮನಿಸಿಲಾಗಿದೆ. ಈ ಮೂಲಸ್ಥಾನದ ಅರ್ಚಕರಾಗಿ ಕುಟುಂಬಿಕರೇ ಇರುವುದು ಕಂಡು ಬಂದಿರುತ್ತದೆ.

ತುಳ್ಳಲ್ ನಡೆಯುವ ಸ್ಥಳದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಚಪ್ಪರ ಇತ್ಯಾದಿಗಳನ್ನು ಹಾಕಿದ ನಂತರ ಆಚರಣೆಯ ದಿನ ಆ ಪ್ರದೇಶವನ್ನು ತಳಿರು ತೋರಣಗಳಿಂದ ಅಲಂಕರಿಸಿ ಶುದ್ಧೀಕರಣಗೊಳಿಸಲಾಗುತ್ತದೆ. ಅಂಗಳದ ನಡುವೆ ಚೌಕಾಕಾರದಲ್ಲಿ ಸುಮಾರು ೪ ಅಡಿ ಅಗಲ ೭ ಅಡಿ ಎತ್ತರಕ್ಕೆ ನಾಲ್ಕು ಕಂಬಗಳನ್ನು ನೆಟ್ಟು, ಸುತ್ತಲೂ ಎಳೆಯ ತೆಂಗಿನ ಗರಿಯ 'ತಿರಿ' ಯಿಂದ ತೋರಣ, ಮತ್ತು ಬಾಳೆಯ ಗಿಡಗಳಿಂದ ಅಲಂಕರಿಸಲಾಗುತ್ತದೆ. ಚಪ್ಪರದ ಮೇಲ್ಭಾಗದಲ್ಲಿ 'ತಿರಿ'ಯಿಂದ ನಿರ್ಮಿಸಿದ ವಿವಿಧ ರೀತಿಯ ಪ್ರಾಣಿ, ಪಕ್ಷಿಗಳ ಗೊಂಬೆ ಅಥವಾ ಪ್ರತಿಕೃತಿಗಳನ್ನು ತೂಗು ಬಿಡಲಾಗುತ್ತದೆ. ಇಲ್ಲೆಲ್ಲ ದೇವತೆಗಳು ಬಂದು ಆಸೀನರಾಗಿರುತ್ತಾರೆ ಎಂಬ ನಂಬಿಕೆಯಿದೆ. ನಾಲ್ಕು ಕಂಬಗಳಿಂದ ವಿಶೇಷವಾಗಿ ನಿರ್ಮಿಸಿರುವ ಈ ಚೌಕಾಕಾರದ ಅಂಕಣವನ್ನು 'ಸ್ಥಾನ ಕಾಲ್' ಎಂದು ಕರೆಯಲಾಗುತ್ತದೆ. ಇದರ ನಡುವಿನ ಭಾಗದಲ್ಲಿ ಮಂಡಲ ರಚಿಸುತ್ತಾರೆ.

ಕಳಂ ಎಳತ್ತು (ಮಂಡಲ ರಚನೆ)

ಮಂಡಲ ರಚನೆಗೆ ಮೊದಲು ಪುಳ್ಳವರಿಂದ ಪಿತೃ ಪೂಜೆ ನಡೆಯುತ್ತದೆ. ತಮಗೆ ನೀಡಲಾಗಿರುವ ಸ್ಥಳದಲ್ಲಿ. ದೀಪ ಹಚ್ಚಿ, ಬಾಳೆ ಎಲೆಯಲ್ಲಿ ಅರಳು, ಬತ್ತ, ಬಾಳೆಹಣ್ಣು, ದ್ರಾಕ್ಷಿ, ಸಕ್ಕರೆ, ಇತ್ಯಾದಿಗಳನ್ನಿಟ್ಟು ಪಿತೃಗಳನ್ನು ಪ್ರಾರ್ಥಿಸುತ್ತಾರೆ. ತಮ್ಮ ಪರಿಕರಗಳಾದ ಪುಳ್ಳವ ಕೊಡ, ವೀಣೆ ಇತ್ಯಾದಿಗಳಿಗೂ ಪೂಜೆ ನಡೆಯುತ್ತದೆ.

ತದನಂತರ 'ಸ್ಥಾನಕಾಲ್' ನ ನೈರುತ್ಯ ಭಾಗದಲ್ಲಿ (ಕನ್ನಿಮೂಲ) 'ಪದ್ಮ' ವನ್ನು ರಂಗೋಲಿಯಿಂದ ರಚಿಸಿ, ದೀಪ, ಅಕ್ಕಿ, ಅರಳು, ಭತ್ತ ಇತ್ಯಾದಿಗಳನ್ನಿಟ್ಟು ಗಣಪತಿ ಪೂಜೆ ನಡೆಸಲಾಗುತ್ತದೆ. ಕುಟುಂಬದ ಸದಸ್ಯ ಓರ್ವ ಈ ದಿನದ ಪೂಜಾ ಕಾರ್ಯಕ್ರಮದ ಪೌರೋಹಿತ್ಯವನ್ನು ವಹಿಸುತ್ತಾನೆ. ಅವನನ್ನು 'ಕಳತ್ತಿ ಕಮ್ಮಳ್' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಅವನಿಗೆ ಆಚರಣೆಯ ವಿಧಿ ವಿಧಾನಗಳ ಕುರಿತು ಪುಳ್ಳವ ಮುಖಂಡನು ಮಾರ್ಗದರ್ಶನ ನೀಡುತ್ತಾನೆ. ಕಾರ್ಯಕ್ರಮದ ಯಶಸ್ಸಿಗೆ ಕುಟುಂಬದ ಸದಸ್ಯರೊಂದಿಗೆ ಪುಳ್ಳವ ಮುಖಂಡನೂ ಇದ್ದು ಪ್ರಾರ್ಥನೆ ನಡೆಸಲಾಗುತ್ತದೆ.

ಬಳಿಕ ಸ್ಥಾನಕಾಲ್ ನಡುವೆ ಚಪ್ಪರದ ಒಳಭಾಗದಲ್ಲಿ ಕೆಂಪು ಬಟ್ಟೆಯ ಮೇಲ್‌ಕಟ್ಟನ್ನು ಹೊದಿಸಲಾಗುತ್ತದೆ. ಇದನ್ನು 'ಕೂರಾ ಇಡಲ್ ಚಡಂಗ' ಎಂದು ಕರೆಯುತ್ತಾರೆ. ಈ ಅಂಗವನ್ನು ಪುಳ್ಳವರು ನಡೆಸಿಕೊಡುತ್ತಾರೆ. ನಾಲ್ಕು ಕಂಬಗಳ ನಡುವೆ ನಿಂತು ಮಂಡಲಕ್ಕೆ ಅಭಿಮುಖವಾಗಿ ಕಾರ್ಯಕ್ರಮವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಡಬೇಕೆಂದು ಭಗವತಿಯಲ್ಲಿ ಪ್ರಾರ್ಥಿಸಲಾಗುತ್ತದೆ. ಮೇಲೆ ಹೊದಿಸಿರುವ ಕೆಂಪು ಬಟ್ಟೆಯನ್ನು ಭಗವತಿಯ ಪ್ರತೀಕವೆಂದು ಭಾವಿಸಲಾಗುತ್ತದೆ. ಕಾರ್ಯಕ್ರಮವೆಲ್ಲ ಮುಗಿದ ಬಳಿಕ ಬಟ್ಟೆಯನ್ನು ತೆಗೆಯಲಾಗುತ್ತದೆ.

ಕುಟ್ಟಿ ಅರಿಪ್ಪು

ಇದೊಂದು ವಿಶೇಷವಾದ ಆಚರಣೆ, ಮುಂದೆ ನಡೆಯಲಿರುವ ಕಾರ್ಯಕ್ರಮಕ್ಕೆ ಅಲ್ಲಿರುವ ಎಲ್ಲ ಪರಿವಾರ ದೇವತೆಗಳನ್ನು, ಊರಿನ ಜನತೆಯನ್ನು ಪುಳ್ಳವ ಕೊಡ ಮತ್ತು ತಾಳಗಳ ನಾದದ ಮೂಲಕ ಆಹ್ವಾನಿಸಲಾಗುವುದು. ಇದನ್ನು 'ಕುಟ್ಟಿ ಅರಿಪ್ಪು' ಎಂದು ಕರೆಯುತ್ತಾರೆ. ಪುಳ್ಳವ ಕೊಡ ಇದು ನಾಗಾರಾಧನೆಗಾಗಿಯೇ ವಿಶೇಷವಾಗಿ ತಯಾರಿಸಲ್ಪಟ್ಟ ವಿಶಿಷ್ಟ ಝೇಂಕಾರದ ನಾದವನ್ನು ಒಳಗೊಂಡಿರುವ ಒಂದು ರೀತಿಯ ವಾದನ. ಹಿಂದೆ ಇದನ್ನು ತಯಾರಿಸುವುದಕ್ಕೆ ಮಣ್ಣಿನ ಕೊಡವನ್ನು ಬಳಸುತ್ತಿದ್ದರು. ಈಗ ಅದು ದುರ್ಲಬವಾಗುತ್ತಿರುವುದರಿಂದ ಪ್ಲಾಸ್ಟಿಕ್ ಕೊಡಗಳನ್ನು ಬಳಸುತ್ತಿರುವುದು ಕಂಡು ಬಂದಿದೆ. ಕೊಡದ ತಳಭಾಗಕ್ಕೆ ದನದ ಚರ್ಮವನ್ನು ಬಿಗಿದು ಕಟ್ಟುತ್ತಾರೆ. ಕೊಡದ ತಳಭಾಗದಲ್ಲಿ ಚಿಕ್ಕದಾದ ತೂತು ನಿರ್ಮಿಸಲಾಗುತ್ತದೆ. ಒಳಭಾಗದಿಂದ ಚರ್ಮದ ದಾರವೊಂದನ್ನು ತಂದು ಅದನ್ನು ಒಂದು ಮರದ ಪಟ್ಟಿಗೆ ಕಟ್ಟುತ್ತಾರೆ. ಪಟ್ಟಿಯನ್ನು ಕಾಲಿನ ಆಧಾರದಲ್ಲಿ ಅದುಮಿಕೊಂಡು ಕೊಡವನ್ನು ಹೆಗಲಿನ ಹಿಂಭಾಗಕ್ಕೆ ಬರುವಂತೆ ಆನಿಸಿ, ನಡುವೆ ಇರುವ ಚರ್ಮದ ದಾರವನ್ನು ಮರದ ಸಣ್ಣ ಪಟ್ಟಿಯಿಂದ ನುಡಿಸುತ್ತಾರೆ. ಆಗ ಆ ಕೊಡದಿಂದ ಗಟ್ಟಿಯಾದ ಝೇಂಕಾರ ನಾದ ಹೊರಹೊಮ್ಮುತ್ತದೆ. ಇದು ನಾಗನಿಗೆ ಶ್ರೇಷ್ಠವೆಂದು ನಂಬುತ್ತಾರೆ.

ಪುಳ್ಳವರು ಉಪಯೋಗಿಸುವ ಇನ್ನೊಂದು ವಾದ್ಯ ಉಪಕರಣವೇ ಪುಳ್ಳವ ವೀಣೆ. ಅದಕ್ಕಾಗಿಯೇ ವಿಶೇಷವಾಗಿ ನಿರ್ಮಿಸಿರುವ ಹಲಸಿನ ಹಲಗೆಗೆ ಉಡದ ಚರ್ಮವನ್ನು ಒಂದು ಭಾಗದಲ್ಲಿ ಎಳೆದು ಬಿಗಿಯುತ್ತಾರೆ. ಇದರ ಮೇಲ್ಭಾಗದಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಗೆ ಬೆತ್ತದಿಂದ ತಯಾರಿಸಿರುವ ದಾರಗಳನ್ನು ಎಳೆದು ಕಟ್ಟಿರುತ್ತಾರೆ. ಈ ವೀಣೆಯ ಮೇಲ್ಭಾಗದಲ್ಲಿ ಸಣ್ಣ ತಾಳಗಳನ್ನು ಅಳವಡಿಸಲಾಗಿರುತ್ತದೆ. ದಾರಗಳನ್ನು 'ವೀಣೆಕೋಲ್' ಎಂಬ ಪಟ್ಟಿಯಿಂದ ನುಡಿಸಲಾಗುತ್ತದೆ. ಇದರಿಂದ ಹೊರ ಹೊಮ್ಮುವ ನಾದ ಪಿಟೀಲಿನ ನಾದದಂತೆ ಇರುತ್ತದೆ. ಇದರೊಂದಿಗೆ 'ಇಳತ್ತಾಳಂ' ಎಂಬ ಕಂಚಿನ ದಪ್ಪನೆಯ ತಾಳವನ್ನು ನುಡಿಸುತ್ತಾರೆ.

ಇಲ್ಲಿರುವ ಕಂಚಿನ ತಾಳ ಮತ್ತು ಕೊಡವನ್ನು ನುಡಿಸುವುದರೊಂದಿಗೆ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಗುತ್ತದೆ. ಇದರ ನಂತರ ಮಂಡಲ ರಚನೆ ಪ್ರಾರಂಭವಾಗುತ್ತದೆ. ಮಂಡಲ ರಚನೆ ಮತ್ತು ಬಣ್ಣಗಳ ಮಿಶ್ರಣದಲ್ಲಿ ಪುಳ್ಳವ ಗಂಡಸರೊಂದಿಗೆ ಹೆಂಗಸರೂ ಕೂಡ ಭಾಗವಹಿಸುತ್ತಾರೆ. ಬಣ್ಣಗಳ ಮಿಶ್ರಣವನ್ನು ಪುಳ್ಳವ ಹೆಂಗಸರು ನಡೆಸುತ್ತಾರೆ. ಮಂಡಲ ರಚನೆಯಲ್ಲಿ ಪಂಚವರ್ಣದ ಹುಡಿಗಳನ್ನು ಬಳಸಲಾಗುತ್ತದೆ. ಬಿಳಿ ಬಣ್ಣವಾಗಿ ಅಕ್ಕಿ ಹುಡಿ, ಕೆಂಪು ಬಣ್ಣವಾಗಿ ಹಳದಿ ಮತ್ತು ಸುಣ್ಣದ ಮಿಶ್ರಣ, ಹಸಿರು ಬಣ್ಣವಾಗಿ ಮಂಜಾಡಿ ಎಂಬ ಸೊಪ್ಪಿನ ಹುಡಿ, ಮಂಜಾಡಿ ಸೊಪ್ಪನ್ನು ತುಳುನಾಡಿನಲ್ಲಿ 'ಜಂಗಮ ಸೊಪ್ಪು' ಎಂದು ಕರೆಯುತ್ತಾರೆ. ಈ ರೀತಿಯಾಗಿ ಬಣ್ಣಗಳ ಮಿಶ್ರಣದಿಂದ ಪಂಚವರ್ಣದ ಹುಡಿಗಳನ್ನು ತಯಾರಿಸಿಕೊಳ್ಳುತ್ತಾರೆ. ಮಂಡಲ ರಚಿಸುವುದಕ್ಕಾಗಿ ವಿಶಿಷ್ಟ ರೀತಿಯಲ್ಲಿ ಕತ್ತರಿಸಿ ತೂತು ನಿರ್ಮಿಸಿರುವ ಗೆರಟೆಗಳನ್ನು ಬಳಸಿಕೊಳ್ಳುತ್ತಾರೆ. ಗೆರಟೆಗಳ ತೂತುಗಳಲ್ಲಿಯೂ ವೈವಿಧ್ಯತೆ ಇರುತ್ತದೆ.

ಪ್ರಾರಂಭದಲ್ಲಿ 'ಸ್ಥಾನಕಾಲ್' ನ ನಡುವೆ ಹಳದಿ ಬಣ್ಣದಿಂದ ಹಲವಾರು ಚೌಕಾಕೃತಿಗಳನ್ನು ನಿರ್ಮಿಸುತ್ತಾರೆ. ಬಳಿಕ ಇದರ ಮೇಲೆ ಕಪ್ಪು ಬಣ್ಣವನ್ನು ಚೆಲ್ಲುತ್ತಾರೆ. ನಂತರ ಬಿಳಿ ಬಣ್ಣದಿಂದ ನಡು ಭಾಗದಲ್ಲಿ ಪದ್ಮ ರಚಿಸುತ್ತಾರೆ. ಈ ಕಾರ್ಯದಲ್ಲೆಲ್ಲ ಪುಳ್ಳವ ಹೆಂಗಸರು, ಗಂಡಸರಿಗೆ ಸಹಕರಿಸುತ್ತಾರೆ. ಸ್ಥಾನಕಾಲ್‌ನ ಒಳಭಾಗದಲ್ಲಿ ಎರಡು ಹಾವಿನ ಸುರುಳಿಯಾಕಾರದ ರಚನೆ ಮಾಡುತ್ತಾರೆ. ಸ್ಥಾನಕಾಲ್‌ನ ಹೊರಭಾಗದ ನಾಲ್ಕು ದಿಕ್ಕಿನಲ್ಲೂ ಸರ್ಪದ ಹೆಡೆಗಳನ್ನು ರಚಿಸುತ್ತಾರೆ. ನಂತರ ಎಲ್ಲ ಹೆಡೆಗಳನ್ನು ಆವರಿಸಿಕೊಂಡಿರುವಂತೆ ಬಣ್ಣಗಳಿಂದ ಆವರಣ ನಿರ್ಮಿಸುತ್ತಾರೆ. ಇಲ್ಲಿ ರಚಿಸಿರುವ ಹೆಡೆಗಳು ನೋಡುಗರಿಗೆ ಭಯ ಉಂಟು ಮಾಡುವಂತಿರುತ್ತವೆ. ಪ್ರತಿಯೊಂದು ದಿಕ್ಕಿನಲ್ಲೂ ಎರಡೆರಡು ಹೆಡೆಗಳನ್ನು ರಚಿಸಲಾಗುತ್ತದೆ. ಈ ಪ್ರಕಾರವನ್ನು 'ಅಷ್ಟನಾಗ ಕಳ' ಎಂದು ಕರೆಯಲಾಗುತ್ತದೆ. ಈ ರೀತಿಯ ಮಂಡಲಗಳಲ್ಲಿ ನಾಲ್ಕು, ಎಂಟರಿಂದ ತೊಡಗಿ ೧೦೧ ಸರ್ಪಗಳ ಚಿತ್ರವನ್ನು ಒಂದೇ ಕಳದಲ್ಲಿ ಬಿಡಿಸಬಹುದಾಗಿದೆ. ನಾಗರಾಜನ ಒಂದೇ ರೂಪವನ್ನು ಬರೆಯುವುದೂ ಇದೆ. ಕೇರಳದಲ್ಲಿ ಸರ್ಪಗಳ ಶರೀರವನ್ನು ಮೊದಲಿಗೆ ಕೊನೆಗೆ ಬಾಲವನ್ನು ಚಿತ್ರಿಸುತ್ತಾರೆ. ಈ ಮಂಡಲದಲ್ಲಿ ಪ್ರಧಾನ ಶಕ್ತಿಯಾಗಿ ಶಿವನನ್ನು ಆರಾಧಿಸಲಾಗುತ್ತದೆ. ಉಳಿದಂತೆ ಅಷ್ಟನಾಗಗಳ ಕಲ್ಪನೆ ಬರುತ್ತದೆ. ದಕ್ಷಿಣ ಮತ್ತು ಉತ್ತರ ದಿಕ್ಕಿನಲ್ಲಿ ಕರಿನಾಗ, ಇಲ್ಲಿರುವ ಹೆಡೆಗಳನ್ನು ಕಪ್ಪು ಬಣ್ಣದಿಂದ ರಚಿಸಲಾಗುತ್ತದೆ. ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಶಿವ ಶಕ್ತಿಗಳಿವೆ ಎಂಬ ನಂಬಿಕೆಯಿಂದ. ಈ ಭಾಗದಲ್ಲಿ ಹಳದಿ ಬಣ್ಣದಲ್ಲಿ ಹೆಡೆ ಬಿಡಿಸಲಾಗುತ್ತದೆ. ಈ ಪ್ರಕಾರವಾಗಿ ಪಂಚವರ್ಣದ

ಹುಡಿಗಳಿಂದ ಸುರುಳಿ ಸುರುಳಿಯಾಕಾರದ ಬೃಹತ್ ನಾಗ ಪ್ರತಿಕೃತಿಯನ್ನು ರಚಿಸಲಾಗುತ್ತದೆ.

ಸಂಪೂರ್ಣ ಮಂಡಲ ರಚನೆಯಾದ ಬಳಿಕ ಮಂಡಲದ ಪಶ್ಚಿಮ ಭಾಗದಲ್ಲಿ ಕಲಶವಿಟ್ಟು, ಅದರಲ್ಲಿ ತೆಂಗಿನ ಹೂವಿನ ಗೊನೆಯನ್ನು ಇಟ್ಟು ಅಲಂಕರಿಸಲಾಗುತ್ತದೆ. ನಾಲ್ಕು ದಿಕ್ಕುಗಳಲ್ಲಿಯೂ ದೀಪಗಳನ್ನಿಟ್ಟು, ಅಕ್ಕಿ, ಭತ್ತ, ವೀಳ್ಯದೆಲೆ, ಅಡಿಕೆ, ಹಿಂಗಾರ, ಅರಳು ಇತ್ಯಾದಿಗಳಿಂದ ಅಲಂಕರಿಸುತ್ತಾರೆ.

ಪ್ರತೀ ದಿಕ್ಕುಗಳಲ್ಲಿಯೂ ಸಂಬಂಧಿಸಿದ ಮತ್ತು ಆ ಕ್ಷೇತ್ರದಲ್ಲಿರುವ ಅದಿದೇವತೆಗಳ ನಿರ್ದಿಷ್ಟ ಆಯುಧಗಳನ್ನು ವಸ್ತುಗಳನ್ನು ಇಟ್ಟು ಅಲಂಕರಿಸುತ್ತಾರೆ. ಜೊತೆಗೆ ಗರುಡ ಪೂಜೆಗಾಗಿ ವಿಶಿಷ್ಟ ಮಾದರಿಯ ಮೊರವನ್ನು ಬಳಸುತ್ತಾರೆ. ದೊಡ್ಡ ಪಾತ್ರೆಯಲ್ಲಿ ಓಕುಳಿ ನೀರು ಇತ್ಯಾದಿಗಳನ್ನು ಮಂಡಲದ ಸುತ್ತಲೂ ಇಡುತ್ತಾರೆ.

ಮೊರಂ ಪೂಜ: (ಗೆರಸೆ)

ಇದು ಗರುಡ ಪೂಜೆಗೆ ಅನ್ವರ್ಥನಾಮ, ಮಂಡಲ ರಚನೆ, ಬಳಿಕ ಮೊರಂ ಪೂಜ ಅಥವಾ ಗರುಡ ಪೂಜ ಗರುಡನ ಪ್ರತೀಕವಾಗಿ ಮಂಡಲದ ಪಶ್ಚಿಮ ಭಾಗದಲ್ಲಿ ಸಣ್ಣ 'ಮೊರ'ವನ್ನು ಇಡಲಾಗುತ್ತದೆ. ಪೂಜೆಯ ಈ ಭಾಗದಲ್ಲಿ ನಾಗನ ಪ್ರತಿನಿಧಿಯಾಗಿ ಪುಳ್ಳವ ವ್ಯಕ್ತಿಯು ಭಾಗವಹಿಸಿದರೆ ಗರುಡನ ಪ್ರತೀಕವಾಗಿ ಅರ್ಚಕನಾಗಿರುವ 'ಕಳತ್ತಿ ಕಂಬಳ್' ಭಾಗವಹಿಸುತ್ತಾನೆ. ಗೆರಸೆಯಲ್ಲಿ ದೀಪ ಬೆಳಗಿಸಿ ಲಯಬದ್ಧವಾಗಿ ಮಂಡಲಕ್ಕೆ ಪ್ರದಕ್ಷಿಣೆ ಬರುವುದೇ ಮೊರಂ ಪೂಜೆ.

ಲಯ ಬದ್ಧವಾಗಿ ಪುಳ್ಳವರು ತಮ್ಮ ವಾದನಗಳನ್ನು ನುಡಿಸುತ್ತಿರುತ್ತಾರೆ. ಈ ನಾದಕ್ಕೆ ಅನುಸಾರವಾಗಿ ಪುಳ್ಳವ ಮತ್ತು ಕಳತ್ತ್ ಕಂಬಳ್ ಮಂಡಳಕ್ಕೆ ಪ್ರದಕ್ಷಿಣೆ ಬರುತ್ತಾರೆ. ಮುಂದಿನಿಂದ ಪುಳ್ಳವನು ಸರ್ಪದಂತೆ ಅಣುಕು ನೃತ್ಯವನ್ನು ನಡೆಸುತ್ತಾ ಮುಂದೆ ನಡೆದರೆ, ಹಿಂದಿನಿಂದ ಅರ್ಚಕನು ಗೊರಬಿನಲ್ಲಿ ದೀಪವನ್ನು ಹಿಡಿದುಕೊಂಡು ಅವನನ್ನು ಅನುಸರಿಸುತ್ತಾನೆ. ಪುಳ್ಳವರ ಹಾಡಿಗೆ ಅನುಸಾರವಾಗಿ ಈ ನೃತ್ಯ ಮುಂದುವರೆಯುತ್ತದೆ. ಕೊನೆಗೆ ಹಲವಾರು ಪ್ರದಕ್ಷಿಣೆ ಬಂದ ಮೇಲೆ ನೃತ್ಯದ ಗತಿಯು ವೇಗಗೊಂಡು ನೃತ್ಯದ ಈ ವಿಧಿ ಕೊನೆಗೊಳ್ಳುತ್ತದೆ. ಗರುಡ ಪೂಜೆ ಗರುಡನನ್ನು ಒಲಿಸಿಕೊಳ್ಳಲು ನಡೆಸುವ ಆಚರಣೆ ಎಂಬ ನಂಬಿಕೆಯಿದೆ. ಇದು ಸಂಪೂರ್ಣವಾದ ತಾಂತ್ರಿಕ ರೀತಿಯ ಆಚರಣೆಯಾಗಿದೆ. ಮಧ್ಯೆ ಮಧ್ಯೆ ಪುಳ್ಳವನು ಅರ್ಚಕನಿಗೆ ಮಾಡಬೇಕಾಗಿರುವ ಕಾರ್ಯಗಳ ಕುರಿತು ನಿರೂಪಣೆ ನೀಡುತ್ತಾನೆ.

ಪಾಲಕ್ಕೊಂಬು ಎಳುನುಲ್ಲಿಕೆಲ್

ಕ್ಷೇತ್ರದ ಪರಿವಾರ ದೈವಗಳಿಗೆ ಮತ್ತು ಮಂಡಲಕ್ಕೆ ಕುಟುಂಬಿಕರು ವಿಶೇಷವಾಗಿ ನಡೆಸುವ ಪೂಜೆ.

ಸರ್ಪಂ ತುಳ್ಳಲ್‌ನಲ್ಲಿ ವಿಶೇಷವಾಗಿ ಮಂಡಲವನ್ನು 'ಅಳಿಸುವ' ತುಳ್ಳಲ್ ಕಾರ್ಯವನ್ನು ನಡೆಸುವವಂಥ ವ್ರತಧಾರಿಗಳಾದ ಹೆಂಗಸರು ಅಥವಾ ಕನ್ನೆಯರು ಅವರು ೨, ೩, ೫, ೭, ಅಥವಾ ೯ ಈ ಸಂಖ್ಯೆಯಲ್ಲಿಯೂ ಇರಬಹುದು. ಅಥವಾ ಹರಕೆಯ ರೂಪದ ಆಚರಣೆಯಾಗಿದ್ದಲ್ಲಿ, ಹರಕೆಗೆ ಕಾರಣರಾದವರು ಮಾತ್ರ ಭಾಗವಹಿಸಬಹುದು. ಈ ಹೆಂಗಸರುಗಳನ್ನು 'ಪಿಣೆಯಾಳು' ಗಳು ಎಂದು ಕರೆಯುತ್ತಾರೆ. ಇವರು

ನಿಯಮಾನುಸಾರವಾಗಿ ವ್ರತದಲ್ಲಿ ಇರಬೇಕಾಗುತ್ತದೆ. ಈಗ ಮಂಡಲದ ತುಳ್ಳಲ್‌ನಲ್ಲಿ ಭಾಗವಹಿಸುವವರನ್ನು ಇಲ್ಲಿಗೆ ಕರೆ ತರಲಾಗುತ್ತದೆ.

ಪುಳ್ಳವ ಮುಖಂಡ ಇದರ ಮಹತ್ವವನ್ನು ವಿವರಿಸಿ ಹೇಳುತ್ತಾನೆ. ಇಲ್ಲಿರುವ ತಟ್ಟೆಗಳನ್ನು ತೆಗೆದುಕೊಳ್ಳುವಂತೆ ಕುಟುಂಬದ ಮಹಿಳೆಯರಿಗೆ ವಿನಂತಿಸುತ್ತ, ಯಾರಿಗೆ ಮಕ್ಕಳಿಲ್ಲ, ಯಾರು ಚರ್ಮವ್ಯಾಧಿ ಮೊದಲಾದ ನಾಗದೋಷಗಳಿಂದ ಬಳಲುತ್ತಿದ್ದಾರೆ, ಅಂಥಃವರು ಮುಂದೆ ಬಂದು ಇಲ್ಲಿ ನಿಲ್ಲಬೇಕೆಂದು ವಿನಂತಿಸುತ್ತಾನೆ. ಬಳಿಕ ಹೆಂಗಸರು ಮಕ್ಕಳು ಸಾಲಾಗಿ ಬಂದು ನಿಲ್ಲುತ್ತಾರೆ. ಜೊತೆಗೆ ಅಲ್ಲಿರುವ ಇತರ ಪರಿವಾರ ದೇವತೆಗಳ ಪ್ರತಿನಿಧಿಗಳಾಗಿ ಭಾಗವಹಿಸುವ ಪುರುಷರೂ ಆಗಮಿಸುತ್ತಾರೆ. ಪುಳ್ಳವ ನಾಯಕನ ಪ್ರಾರ್ಥನೆಯೊಂದಿಗೆ ಅಲ್ಲಿ ಮೊದಲೇ ಇಟ್ಟಿರುವ ಎಲ್ಲ ತಟ್ಟೆಗಳಲ್ಲಿರುವ ದೀಪಗಳನ್ನು ಹಚ್ಚುತ್ತಾರೆ. ಅಲ್ಲಿರುವ ಒಂದೊಂದೇ ವಸ್ತುಗಳನ್ನು ಒಬ್ಬೊಬ್ಬರಂತೆ ಎತ್ತಿಕೊಳ್ಳುತ್ತಾರೆ. ಮುಂದೆ ಪುಳ್ಳವ ತನ್ನ ವೀಣೆ ನುಡಿಸುತ್ತಾ, ಹಿಂದೆ ಉಳಿದ ಸದಸ್ಯರು, ಮೊದಲು ಕಳಕ್ಕೆ ಪ್ರದಕ್ಷಿಣೆ ಬಂದು ಬಳಿಕ ಅಲ್ಲಿಯ ಎಲ್ಲ ಗುಡಿಗಳಿಗೆ ಪ್ರದಕ್ಷಿಣೆ ಬರುತ್ತಾರೆ. ನಂತರ ನಾಗಗುಡಿಯಲ್ಲಿ ಹೋಗಿ ಅಲ್ಲಿ ಅಭಿಷೇಕಾದಿಗಳನ್ನು ನಡೆಸಿ ಅಲ್ಲಿಂದ ಹಿಂತಿರುಗಿ ಮಂಡಲ ಇರುವ ಪ್ರದೇಶಕ್ಕೆ ಬರುತ್ತಾರೆ. ಬಳಿಕ ಮಂಡಲಕ್ಕೆ ಪ್ರದಕ್ಷಿಣೆ ಬಂದು ಎಲ್ಲ ವಸ್ತುಗಳನ್ನು ಮೊದಲಿನಂತೆಯೇ ಯಥಾ ಸ್ಥಾನದಲ್ಲಿಡುತ್ತಾರೆ.

ಈ ಮೂಲಕ ಗುಡಿಗಳಲ್ಲಿರುವ ಎಲ್ಲ ದೈವ ಶಕ್ತಿಗಳನ್ನು ಕರೆತಂದು ಇಲ್ಲಿ ಸ್ಥಾಪಿಸಲಾಗುತ್ತದೆ. ಬಳಿಕ ಮಂಡಲಪೂಜೆ ನಡೆಯುತ್ತವೆ. ಸಮಗ್ರವಾದ ಈ ಆಚರಣೆಯನ್ನು 'ಪಾಲಕ್ಕೊಂಬು ಎಳುನಲ್ಲಿಕೆಲ್' ಎಂದು ಕರೆಯಲಾಗುತ್ತದೆ. ಪಾಲಕ್ಕೊಂಬು ಎಂದರೆ ತೆಂಗಿನ ಮರದ ಹೂ ಅಥವಾ ಹಿಂಗಾರ. ಇಲ್ಲಿ ನಡೆಯುವ ಮಂಡಲ ಪೂಜೆಗೆ ತೆಂಗಿನ ಮರದ ಹೂವನ್ನು ಕಳದಲ್ಲಿ ಬಳಸುವುದರಿಂದ ಕಳಶ ಪೂಜೆಯೆಂದು ಕೂಡಾ ಕರೆಯುತ್ತಾರೆ. ಈ ಸಂದರ್ಭದಲ್ಲಿ ಪುಳ್ಳವ ಕೊಡವನ್ನು ನುಡಿಸಲಾಗುತ್ತದೆ.

ಮಂಡಲ ಪೂಜೆಯ ಬಳಿಕ ಮತ್ತೊಮ್ಮೆ ಅರ್ಚಕನು ಮೊರಂ ಪೂಜೆ ನಡೆಸುತ್ತಾನೆ. ಹಿನ್ನೆಲೆಯಾಗಿ ಪುಳ್ಳವರು ಥೈಥಕಾ, ಹೂರ್ರಾ, ಹೇಯಾ, ಎಂಬಂತೆ ಆಲಾಪಗಳನ್ನು ತಮ್ಮ ಕೊಡಗಳ ಝೇಂಕಾರದೊಂದಿಗೆ ಹೇಳುತ್ತಿರುತ್ತಾರೆ. ಬಳಿಕ ನೂರುಂಪಾಲುಂ ಪೂಜೆ ನಡೆಸಿ ಪ್ರಸಾದ ವಿತರಣೆಯಾಗುತ್ತದೆ. ಈ ಪ್ರಸಾದವನ್ನು 'ಪಾಲುಂ ಪುಡಿ' ಪ್ರಸಾದ ಎಂದು ಕರೆಯುತ್ತಾರೆ. ಅರಶಿನ, ಅಕ್ಕಿಹುಡಿ, ಹಾಲು ಸಕ್ಕರೆ, ಹಣ್ಣು, ಎಳನೀರು ಇತ್ಯಾದಿಗಳಿಂದ ಪೂಜೆ ನಡೆಸಲಾಗುತ್ತದೆ.

ಪೂಜೆಯ ಈ ಸಂದರ್ಭದಲ್ಲಿ

''ಜಲ ಚಂದನಾದಿ ಕುಸುಮಾದಿ ದೂಪ ದೀಪಂ

ಪಂಚಾರ್ಚನಗಳು ವಿರವೊಡೆ ಕಳುಕ್ಕ ನನ್ನಾಯ್

ಅಷ್ಟಾದಿ ನಾಗಂ ಅವರ್‌ಕಂ ಬೇಡು ನೇದ್ಯಮಾಗಿರ್

ಇಷ್ಟತ್ತಿಲ್ ವನ್ನು ಅವರು ಓನೆ ತೃಪ್ತಿನಲ್ಲುಂ'' ಎಂದು ಪೂಜಾವಿಧಿಗಳನ್ನು

ಪುಳ್ಳವರು ಹಾಡುತ್ತಾರೆ.

ಪೂವಾಟಂ

ಮಂಡಲ ಪೂಜೆಯ ಪ್ರಸಾದ ವಿತರಣೆಯ ಬಳಿಕ ಭದ್ರಕಾಳಿ ಪೂಜೆ ನಡೆಯುತ್ತದೆ. ಈ ಆಚರಣೆ ಕೇವಲ ಸಾಂಕೇತಿಕವಾಗಿ ನಡೆಯುವ ಆಚರಣೆ. ಆ ಸಂದರ್ಭದಲ್ಲಿ ಪುಳ್ಳವ ಮುಖಂಡನು ಅರ್ಚಕನಿಗೆ ಮುಂದೆ ಏನೇನು ಮಾಡಬೇಕೆಂಬುದರ ಕುರಿತು ಆಜ್ಞೆ ಮಾಡುತ್ತಿರುತ್ತಾನೆ. ಅವನ ಅನೂಜ್ಞೆಯಂತೆ ಅರ್ಚಕನು ನಡೆದುಕೊಳ್ಳುತ್ತಾನೆ. ಅಷ್ಟ ದಿಕ್ಕುಗಳಲ್ಲಿರುವ ದೀಪಗಳನ್ನು ಉರಿಸುವುದರೊಂದಿಗೆ ಪೂವಾಟ ಆರಂಭವಾಗುತ್ತದೆ.

ಪೂವಾಟವನ್ನು ಧಾರ್ಮಿಕ ಆಚರಣೆಯ ನಡುವೆ ಇರುವ ಒಂದು ಮನೋರಂಜನ ಕಾರ್ಯಕ್ರಮ ಎಂದು ಭಾವಿಸಲಾಗಿದೆ. ಆದರೂ ಇದಕ್ಕೆ ಧಾರ್ಮಿಕ ಪ್ರಾವಿತ್ರ್ಯತೆ ಕಲ್ಪಿಸಲಾಗಿದೆ. ಹಲವಾರು ಮಂದಿ ಹಿಂಗಾರ ಹೂವಿನ ಎಸಳನ್ನು ಹಿಡಿದುಕೊಂಡು ಮಂಡಲದ ಸುತ್ತ ನರ್ತಿಸುವುದನ್ನು ಪೂವಾಟ ಅಥವಾ ಹೂ ಆಟ ಎಂದು ಹೇಳಬಹುದು. ಹಿನ್ನೆಲೆಯಾಗಿ ಪುಳ್ಳವರ ಕೊಡ, ಮತ್ತು ತಾಳವನ್ನು ಲಯಬದ್ಧವಾಗಿ ನುಡಿಸಲಾಗುತ್ತದೆ.

ಥೈ, ಥೈ, ಥ,

ಂದ ಥೈಥಕ, ಥೈಥಕ, ಥ,

ಥೈದ, ಂದ, ಥ....

ಎನ್ನುವ ತಾಳಕ್ಕೆ ಅನುಗುಣವಾಗಿ ಯುವಕರು ಮತ್ತು ನೆರೆದವರು ಹೆಜ್ಜೆ ಹಾಕುತ್ತಾರೆ. ಜೊತೆಯಲ್ಲಿ ಪುಳ್ಳವ ವ್ಯಕ್ತಿಯೂ ಭಾಗವಹಿಸುತ್ತಾನೆ. ಸುಮಾರು ಅರ್ಧಗಂಟೆಯ ನೃತ್ಯದ ಬಳಿಕ ಕೊನೆಗೊಳ್ಳುತ್ತದೆ.

ತಿರಿ ಉಳಚ್ಚಲ್

ಇದೊಂದು ವಿಶೇಷವಾದ ಮತ್ತು ರೋಮಾಂಚನವಾದ ಆಚರಣೆ. ವಿಧಿ ಇದನ್ನು 'ಬೆಂಕಿ ನೃತ್ಯ' ಎಂದು ಕೂಡ ಕರೆಯುತ್ತಾರೆ. ಇದನ್ನು ನಡೆಸಿ ಕೊಡುವವನು ಪುಳ್ಳವ ಮುಖಂಡ.

ಅರ್ಚಕನು ಪೂವಾಟದ ಬಳಿಕ ಇದಕ್ಕಾಗಿಯೇ ವಿಶೇಷವಾಗಿ ನಿರ್ಮಿಸಿರುವ ಸಣ್ಣ 'ದೊಂದಿ' ಯೊಂದನ್ನು ಹಚ್ಚಿ ಪುಳ್ಳವನಿಗೆ ನೀಡುತ್ತಾನೆ. ಇದನ್ನು 'ಪಂದಲ್ ಉಳಚಲ್' ಎನ್ನುತ್ತಾರೆ. ಎಂದರೆ ಮುಂದಿನ ಕಾರ್ಯಕ್ರಮಗಳನ್ನೆಲ್ಲ ಈತನೇ ನಡೆಸುವುದು ಎಂದರ್ಥ. ಪುಳ್ಳವನು ಉರಿಯುತ್ತಿರುವ ದೊಂದಿಯೊಂದಿಗೆ ಮಂಡಲಕ್ಕೆ ಪ್ರದಕ್ಷಿಣೆ ಬರುತ್ತಾ ವಿವಿಧ ರೀತಿಯ ಕಸರತ್ತುಗಳನ್ನು ನಡೆಸುತ್ತಾನೆ. ವಿವಿಧ ಭಂಗಿಗಳಲ್ಲಿ ಬೆಂಕಿಯೊಂದಿಗೆ ಕಸರತ್ತು ನಡೆಯುತ್ತದೆ. ಸುಮಾರು ಅರ್ಧಗಂಟೆಗಳವರೆಗೆ ಬೆಂಕಿಯೊಂದಿಗೆ ನೃತ್ಯ, ಕಸರತ್ತುಗಳು ನಡೆದು. ಕೊನೆಯ ಅಂಗವಾಗಿ ಅಲ್ಲಿರುವ 'ಓಕುಳಿ' ಅಥವಾ 'ಕುರಿಂದಿ' ನೀರಿನಲ್ಲಿ ದೊಂದಿಯನ್ನು ಮುಳುಗಿಸುವುದರೊಂದಿಗೆ ಈ ಪ್ರದರ್ಶನ ಮುಕ್ತಾಯಗೊಳ್ಳುತ್ತದೆ. ಬಳಿಕ ಪುಳ್ಳವನು ತಟ್ಟೆಯೊಂದಿಗೆ ಸಭೆಗೆ ಬಂದು ಜನತೆ ಕೊಡುವ ಹಣವನ್ನು ಸಂಗ್ರಹಿಸಿಕೊಂಡು ಹೋಗುತ್ತಾನೆ.

ಸರ್ಪಪಾಟ್ಟ್

ವಿಧಿ ಆಚರಣೆಗಳು ಕ್ರಮವಾಗಿ ನಡೆದ ಬಳಿಕ ನಂತರದ ಪ್ರಧಾನ ಮತ್ತು ಕೊನೆಯ ಭಾಗವೇ ತುಳ್ಳಲ್ ಅಥವಾ ಸರ್ಪ ನೃತ್ಯ, ಪ್ರಾರಂಭದಲ್ಲಿ ಪುಳ್ಳವರು ಸರ್ಪಪಾಟ್ಟ್ ಪ್ರಾರಂಭಿಸುತ್ತಾರೆ. ಹಿನ್ನೆಲೆಯಾಗಿ ವೀಣೆಯನ್ನು ಮಾತ್ರ ಬಳಸಲಾಗುತ್ತದೆ. ಮೂರು ಮಂದಿ ಗಂಡಸರು ವೀಣೆ ನುಡಿಸುತ್ತಾರೆ. ಪುಳ್ಳವೆತ್ತಿಯು ಹಾಡುವ ಹಾಡಿಗೆ ಉಳಿದವರೆಲ್ಲರೂ ದನಿಗೂಡಿಸುತ್ತಾರೆ.

ಪ್ರಾರಂಭದಲ್ಲಿ ಗಣಪತಿ ಸ್ತುತಿಯೊಂದಿಗೆ ಪ್ರಾರಂಭಿಸಿ, ಬಳಿಕ ಸರ್ಪ ಸಂಬಂಧಿಯಾದ ಹಾಡುಗಳನ್ನು ಹಾಡುತ್ತಾರೆ. ಸರತಿಯಂತೆ ಒಬ್ಬರ ನಂತರ ಇನ್ನೊಬ್ಬರು ಹಾಡಿದರೆ, ಉಲಿದವರೆಲ್ಲರೂ ಹಾಡುವ ಗಾಯಕನನ್ನು ಅನುಸರಿಸುತ್ತಾರೆ. ಹಾಡಿನಲ್ಲಿ ಮುಖ್ಯವಾಗಿ ನಾಗಗಳ ಪುರಾಣವನ್ನು ಕುರಿತಾಗಿ ಹಾಡಲಾಗುತ್ತದೆ. ಸರ್ಪಗಳ ಜನನ, ಬಾಲ್ಯ, ಅವುಗಳ ಮಹಿಮೆ, ಇತ್ಯಾದಿಯೊಂದಿಗೆ ವಿವಿಧ ನಾಗಗಳ ವಿವಿಧ ಹೆಸರುಗಳನ್ನು ಕುರಿತು ಹಾಡುತ್ತಾರೆ. ಬ್ರಾಹ್ಮಣನಾಗ, ಕ್ಷತ್ರಿಯನಾಗ, ವೈಶ್ಯನಾಗ, ಶೂದ್ರನಾಗ, ಅಷ್ಟನಾಗಗಳು, ಮೊದಲಾದ ಸರ್ಪಗಳ ವರ್ಣಗಳನ್ನು ಕುರಿತು ಹಾಡುತ್ತಾರೆ. ಅನಂತರ ಸರ್ಪಗಳ ಕಥೆಯನ್ನು ಹಾಡುತ್ತಾರೆ. ಅನಂತ, ವಾಸುಕಿ, ತಕ್ಷಕ, ಕಾರ್ಕೋಟಕ, ಶಂಕಪಾಲ, ಮಹಾಪದ್ಮ, ಪದ್ಮ, ಕಾಳೀಯ ಎಂಬ ಅಷ್ಟನಾಗಗಳನ್ನು ಆವಾಹಿಸಿಕೊಂಡು ಹಾಡುತ್ತಾರೆ.

ಅಷ್ಟನಾಗಂ ಓಳೆ ಕೆಟ್ಟಿ ಅಣೆ ಇಗೊರುಂಬು

ತುಷ್ಟಿ ಕಲರ್ನೀಳುಂ ಪಂದಲದಿನ್

ಪಾಲುಮೇ ಪೊಡಿಯುಮೇ ಪಂಚಾಮೃತಂ ಓಳುಂ

ನಾಳಿಕೇರಂ ಮೂಲ ತೇನ್ ಗೂಳವೂಂ

ಏವ ಮೊರೋನ್ನೆ ಇನಾನ್ ನಿಂಜಡೇ ಮುಂಬಿಲ್

ಆವೋಳಂ ವೆಚ್ಚ್ ಇನಾನ್ ಪೂಜಿ ಕುನ್ನೇನ್

ಕೆಟ್ಟಿ ವಿಳಿಚ್ಚು ಇನ್ ಪಾತುನ್ನ ನೌರತ್ತು

ಎಂದು ಲಯ ಬದ್ಧವಾಗಿ ಹಾಡುತ್ತಾರೆ.

ಸುಮಾರು ಒಂದರಿಂದ ಎರಡು ಗಂಟೆಗಳ ಕಾಲ ಹಾಡು ಮುಂದುವರಿಯುತ್ತದೆ. ಹಾಡಿನಲ್ಲಿ ನಮ್ಮ ಈ ಸೇವೆಯಿಂದ ಸಂತೃಪ್ತಿಗೊಳ್ಳಬೇಕೆಂದು ನಾಗನನ್ನು ಕೇಳಿಕೊಳ್ಳಲಾಗುತ್ತದೆ.

ತುಳ್ಳಲ್

ಹಾಡು ಮುಗಿಯುತ್ತಿದ್ದಂತೆ ಮಂಡಲದ ಸುತ್ತ ತುಳ್ಳಲ್‌ಗಾಗಿ ಸಿದ್ಧತೆ ನಡೆಯುತ್ತದೆ. ಮೊದಲೇ ವೃತ ನೇಮಗಳಲ್ಲಿದ್ದು, ಸ್ನಾನಾದಿಗಳಿಂದ ಶುದ್ಧರಾಗಿದ್ದ 'ಪಿನಿಯಾಳು' ಗಳನ್ನು ಮಂಡಲಕ್ಕೆ ಕರೆತರುತ್ತಾರೆ. ಈ ಪಿಣೆಯಾಳುಗಳು ನಾಗರಾಜ, ನಾಗಯಕ್ಷಿ, ಸರ್ಪಯಕ್ಷ, ಮಣಿನಾಗ, ಎರಿನಾಗ, ಕರಿನಾಗ, ಕುಯಿನಾಗ, ಪರನಾಗ,

ಕನ್ಯಾವು ಮೊದಲಾದ ಹಲವು ತರಹದ ನಾಗಗಳನ್ನು ಪ್ರತಿನಿಧಿಸುತ್ತಾರೆ ಎಂಬ ನಂಬಿಕೆಯಿದೆ. ಬಳಿಕ ಇಬ್ಬರು ಹೆಂಗಸರು ಬಲಗಾಲಿಟ್ಟು ಮಂಡಲದ ಮೇಲೆ ಪ್ರವೇಶಿಸುತ್ತಾರೆ. ಕೈಯಲ್ಲಿ ಹಿಂಗಾರವನ್ನು ಹಿಡಿದುಕೊಂಡು, ಕೆದರಿದ ತಲೆಕೂದಲುಗಳಿಂದ ಮಂಡಲದಲ್ಲಿ ಸರ್ಪದ ಹೆಡೆಯ ಭಾಗದಲ್ಲಿ ಆಸೀನರಾಗುತ್ತಾರೆ. ಜೊತೆಗೆ ಮಂಡಲದ ಸುತ್ತಲೂ ಹಲವು ಮಂದಿ ಶ್ವೇತ ವಸ್ತ್ರಧಾರಿಗಳು ತುಳ್ಳಲ್‌ಗಾಗಿ ಸಿದ್ಧರಾಗುತ್ತಾರೆ. ಪರಿವಾರ ದೈವಗಳ ಪ್ರತಿನಿಧಿಗಳಾಗಿ ಒಂದೊಂದು ದೈವಗಳಿಗೆ ಒಬ್ಬೊಬ್ಬರಂತೆ ಆವೇಶಕ್ಕೆ ಸಿದ್ಧರಾಗುತ್ತಾರೆ. ಅಲ್ಲಿರುವ ಆಯಾ ದೈವಕ್ಕೆ ಸಂಬಂಧಿಸಿದ ಲಾಂಛನಗಳನ್ನು ಕೈಯಲ್ಲಿ ಹಿಡಿದುಕೊಂಡು ಆವೇಶಕ್ಕೆ ಒಳಗಾಗುತ್ತಾರೆ.

ಪುಳ್ಳವರು ಲಯಬದ್ಧವಾಗಿ ಮತ್ತು ವೇಗವಾಗಿ ತಮ್ಮ ಕೊಡವನ್ನು ನುಡಿಸುತ್ತಾರೆ. ಹಾಡಿನ ಮತ್ತು ಕೊಡದ ಝೇಂಕಾರ ಆವೇಶದ ಗತಿಯನ್ನು ಹೆಚ್ಚಿಸುತ್ತದೆ. ಮಂಡಲದ ಎರಡು ಕಡೆಗಳಲ್ಲಿ ಪೂರ್ವಾಭಿಮುಖವಾಗಿ ಎರಡು ಕರಿನಾಗ ಮತ್ತು ಕನ್ನಿನಾಗಗಳ ಪ್ರತಿನಿಧಿಗಳಾದ ಹೆಂಗಸರು ಕೂಡ ಆವೇಶಕ್ಕೆ ಒಳಗಾಗುತ್ತಾರೆ. ಹಾಡಿನ ಲಯಕ್ಕೆ ಹೊಂದಿಕೊಂಡು ಕನ್ಯೆಯರು ನಿಧಾನವಾಗಿ ಕುಣಿಯಲು ಆರಂಭಿಸುತ್ತಾರೆ. ಈ ಕುಣಿತವು

ಇಳಗ್ ಇಳಗೆಂಡೇ ನಾಗಮೇ

ಇಳಗಿಚ್ ವಾಯೋ ಎಂಡೆ ಮಂಡಲತ್ತಿಲುಂ

ಎಂಬ ದ್ರುತ ಗತಿಯ ಹಾಡಿನೊಂದಿಗೆ ತೀವ್ರವಾಗುತ್ತದೆ. ಮತ್ತೆ ಮುಂದುವರಿದು

ಅಡಿಯುಳಗಿ ಮುಡಿಯಳಗಿ, ಪಿಡಿಚ್ಚೊರು ಪೂಂಗುಲಯುಡೆ

ತರಿಪೊಳುಯುಮಾರ್, ಕನ್ನಿಯಾಕೆ ನೀ ಪ್ರವೇಶಿಚ್ಚ ಆಡಿವಾಯುನಿ!

ಕರಿನಾಗಮೇ, ನಾಗರಾಜವೇ, ಅಂಜನ ಮಣಿನಾಗಮೇ

ಇಾನಿಟ್ಟ ಕಳಂ ಕೊಳ್ಳು, ಪೂಜ ಕೊಳ್ಳು.....

ಎಂದು ನಾಗಗಳನ್ನು ಕುರಿತು ಪ್ರಾರ್ಥಿಸುತ್ತಾರೆ.

ಹೀಗೆ ಕರೆಯುವಾಗ ಪಿನಿಯಾಳುಗಳು ಮಂಡಲದಲ್ಲಿ ವೃತ್ತಾಕಾರದಲ್ಲಿ ಚಲಿಸುತ್ತಾ ನವಿಲಿನಂತೆ ತಲೆಗೂದಲನ್ನು ಸುತ್ತುತ್ತಾ ನಾಗಗಳಂತೆ ಆಡುವರು, ಕಳಂ ಉಜ್ಜಲು ತೊಡಗುವರು. ಆವೇಶ ಹೆಚ್ಚುತ್ತಿದ್ದಂತೆ ಮಂಡಲದ ಹೊರಗಿರುವ ದೈವ ಪ್ರತಿನಿಧಿಗಳು ತಮ್ಮ ದೈವದ ಸಂಕೇತವಾದ ಆಯುಧಗಳೊಂದಿಗೆ ಹುಚ್ಚೆದ್ದು ಕುಣಿಯಲಾರಂಭಿಸುತ್ತಾರೆ. ಮಂಡಲದಲ್ಲಿ ಕುಳಿತಿರುವ ಸ್ತ್ರೀಯರು ತಮ್ಮ ಕೈಯಲ್ಲಿರುವ ಹಿಂಗಾರದಿಂದ ಮತ್ತು ಬಿಚ್ಚಿರುವ ಮುಡಿಯಿಂದ ಮಂಡಲವನ್ನು ಅಳಿಸುತ್ತಾ ಕುಳಿತ ಭಂಗಿಯಲ್ಲಿಯೇ ಚಲಿಸುತ್ತಾ ಪ್ರದಕ್ಷಿಣೆ ಬರುತ್ತಾರೆ. ತಲೆಯನ್ನು ತಿರುಗಿಸುತ್ತಾ ಕುಳಿತ ಬಂಗಿಯಲ್ಲಿಯೇ ಮುಂದೆ ಮುಂದೆ ಚಲಿಸುತ್ತಾ ಪ್ರದಕ್ಷಿಣೆಯೊಂದಿಗೆ ಸಂಪೂರ್ಣ ಮಂಡಲವನ್ನು ಅಳಿಸಿ ಹಾಕುತ್ತಾರೆ. ಕೊನೆಯ ಅಂಗವಾಗಿ 'ಸ್ಥಾನ ಕಾಲ್' ನಲ್ಲಿ ಕಟ್ಟಿರುವ ತಳಿರು ತೋರಣಗಳು, ಇತ್ಯಾದಿಗಳನ್ನೆಲ್ಲ ಕಿತ್ತೆಸೆದು ಅಸ್ತವ್ಯಸ್ಥಗೊಳಿಸುತ್ತಾರೆ. ಅದೇ ರೀತಿ ಉಳಿದ ದೈವದ ಪ್ರತಿನಿಧಿಗಳು ಕೂಡ ಆಯಾ ದೈವಗಳ ಗುಡಿಗಳ ಮುಂದೆ ಆವೇಶದಿಂದ ಕುಣಿಯುತ್ತಿರುತ್ತಾರೆ.

ಪುಳ್ಳವನು ಆವೇಶಕ್ಕೆ ಒಳಗಾಗಿರುವ ಪಿಣಿಯಾಳುಗಳಲ್ಲಿ ಹೇಳಿಕೆ ಕೇಳಿಕೆ (ಸಂಭಾಷಣೆ) ನಡೆಸುತ್ತಾನೆ. ಯಾವ ನಾಗ ಆವೇಶಗೊಂಡಿರುವುದು, ನಾಗನಿಗೆ ತೃಪ್ತಿಯಾಗಿದೆಯೇ? ಇತ್ಯಾದಿಗಳನ್ನು ಕೇಳಿ ಅಭಯಗಳನ್ನು ಪಡೆಯಲಾಗುತ್ತದೆ. ಅದೇ ರೀತಿ ಉಳಿದ ದೈವಗಳಿಂದಲೂ ಹೇಳಿಕೆ ಕೇಳಿಕೆ ನಡೆಯುತ್ತದೆ. ಬಳಿಕ ಎಲ್ಲ ದೈವಗಳ ಆವೇಶ ಕೊನೆಗೊಳ್ಳುತ್ತದೆ.

ನಂತರ ಮಂಡಲ ವಿಸರ್ಜನ ಪೂಜೆ, ಪ್ರಸಾದ ವಿತರಣೆ, ಇತ್ಯಾದಿಗಳೆಲ್ಲ ನಡೆಯುತ್ತದೆ. ಮಂಡಲ ವಿಸರ್ಜನೆಯ ಅಂಗವಾಗಿ ಕೊನೆಗೆ ಎಣ್ಣೆ ತುಂಬಿರುವ ಕಲಶವನ್ನು ಕವುಚಿ ಹಾಕಲಾಗುತ್ತದೆ. ಅಲ್ಪ ವಿರಾಮದ ಬಳಿಕ ಮುಂದಿನ ಕಳಕ್ಕೆ ಸಿದ್ಧತೆ ನಡೆಯುತ್ತದೆ.

ಪಚ್ಚಕಟ್ಟ್ ಕಳಂ

ಇದು ಮೊದಲನೆಯ ದಿನದ ಕಾರ್ಯಕ್ರಮದ ಎರಡನೆಯ ಭಾಗ. ಸರ್ಪಕಳದ ಮಂಡಲಗಳನ್ನು ಮೊದಲೇ ತುಳ್ಳಲ್‌ನಿಂದ ಅಳಿಸಲಾಗಿರುತ್ತದೆ. ಬಳಿಕ ವಿಸರ್ಜಿಸಿದ ಉಳಿದ ವಸ್ತುಗಳನ್ನೆಲ್ಲ ತೆಗೆದು ಗುಡಿಸಿ ಶುದ್ಧಮಾಡಿ ಹೊಸ ಮಂಡಲ ರಚಿಸಲಾಗುತ್ತದೆ. ಪಂಚ ವರ್ಣದ ಹುಡಿಗಳಿಂದ ಮಂಡಲ ರಚಿಸಲಾಗುತ್ತದೆ. ಇದರಲ್ಲಿ ಪ್ರಧಾನವಾಗಿ ಹಸಿರು ಬಣ್ಣವನ್ನು ಬಳಸಲಾಗುತ್ತದೆ. ಈ ಮಂಡಲದಲ್ಲಿ ಕೇವಲ ಒಂದು ಹೆಡೆಯಿರುವ ಸರ್ಪನ ಕಳ ರಚಿಸಲಾಗುತ್ತದೆ.

ಇಲ್ಲಿಯೂ ಕೂಡ ಮೊದಲಿನಂತೆಯೇ ಯಥಾವತ್ ಆಚರಣೆಗಳು ನಡೆಯುತ್ತವೆ. ಪ್ರಾರಂಭದಲ್ಲಿ ಮೊರಂ ಪೂಜೆ, ಬಳಿಕ ಕಳತ್ತ್‌ಕಮ್ಮಳ್‌ನಿಂದ ಮಂಡಲ ಪೂಜೆಯಾಗುತ್ತದೆ. ಈ ಸಂದರ್ಭದಲ್ಲಿ ಪೂವಾಟ ಇತ್ಯಾದಿ ಆಚರಣೆಗಳು ಇಲ್ಲ. ಸಾಂಕೇತಿಕವಾಗಿ ಸರ್ಪಪಾಟ್ ಹಾಡಲಾಗುತ್ತದೆ. ನೇರವಾಗಿ ತುಳ್ಳಲ್ ಪ್ರಾರಂಭವಾಗುತ್ತದೆ. ತುಳ್ಳಲ್‌ಗಾಗಿ ಮೊದಲೇ ಸಿದ್ಧರಾಗಿರುವ ಹೆಂಗಸರು ಮಂಡಲದಲ್ಲಿ ಸಿದ್ಧರಾಗುತ್ತಾರೆ. ಇಲ್ಲಿಯೂ ಕೂಡ ಮೊದಲಿನಂತೆಯೇ ಆವೇಶಗೊಂಡ ಪಿಣಿಯಾಳಂಗಳು ಮಂಡಲವನ್ನು ಹಿಂಗಾರದಿಂದ ಮತ್ತು ಬಿಚ್ಚಿರುವ ಮುಡಿಗಳಿಂದ ಅಳಿಸಿಹಾಕಿ ಅಸ್ತವ್ಯಸ್ತಗೊಳಿಸುತ್ತಾರೆ. ಕೊನೆಗೆ ಹೇಳಿಕೆ ಕೇಳಿಕೆಗಳು ನಡೆದ ಮೇಲೆ ಪಿಣಿಯಾಳುಗಳಿಗೆ ಬಂದಿರುವ ನಾಗನ ಆವೇಶ ಕೊನೆಗೊಳ್ಳುತ್ತದೆ. ಮಂಡಲ ವಿಸರ್ಜನೆ, ಪ್ರಸಾದ ವಿತರಣೆ, ಇತ್ಯಾದಿಗಳೊಂದಿಗೆ ಅಂದಿನ ಸರ್ಪಂತುಳ್ಳಲ್ ಕಾರ್ಯಕ್ರಮ ಮುಕ್ತಾಯಗೊಳ್ಳುತ್ತದೆ. ಈ ಆಚರಣೆ ಸಾಯಂಕಾಲದಿಂದ ತೊಡಗಿ ಇಡೀ ರಾತ್ರಿ ನಡೆಯುತ್ತದೆ. ಸಾಮಾನ್ಯವಾಗಿ ಮುಂಜಾನೆಯ ಹೊತ್ತಿಗೆ ಕೊನೆಗೊಳ್ಳುತ್ತದೆ. ಹಲವಾರು ಮಂದಿ ಪ್ರೇಕ್ಷಕರು ಕುಟುಂಬ ಸದಸ್ಯರೊಂದಿಗೆ ಭಾಗವಹಿಸುತ್ತಾರೆ. ಇದೇ ರೀತಿ ಈ ಆಚರಣೆ ಮೂರು, ಐದು, ಏಳು ದಿನಗಳವರೆಗೂ ನಡೆಯುತ್ತದೆ. ಕುಟುಂಬಿಕರ ಆರ್ಥಿಕ ಅನುಕೂಲತೆ ಮತ್ತು ಹರಕೆಯ ಅಥವಾ ವಾರ್ಷಿಕ ಆಚರಣೆಯ ಸ್ವರೂಪವನ್ನು ಅವಲಂಬಿಸಿ ಆರಾಧನೆ ನಡೆಯುತ್ತದೆ. ಪ್ರತೀ ದಿನವೂ ಇದೇ ರೀತಿ ಮಂಡಲ ರಚಿಸಿ ಕುಟುಂಬದ ಶುದ್ಧಾಚಾರದಲ್ಲಿರುವ ಸ್ತ್ರೀಯರು ಅಥವಾ ಸಣ್ಣ ವಯಸ್ಸಿನ ಬಾಲಕಿಯರಿಂದ ಕಳವನ್ನು ಅಳಿಸುವುದರೊಂದಿಗೆ ವಿಧ್ಯುಕ್ತ ರೀತಿಯಲ್ಲಿ ಆಚರಣೆ ನಡೆಸಲಾಗುತ್ತದೆ. ಸಂತಾನ ಕಳಂನಲ್ಲಿ ಮುಖ್ಯವಾಗಿ ಎಳೆಯ ವಯಸ್ಸಿನ

ಬಾಲಕಿಯರನ್ನೇ ಆವೇಶಕ್ಕಾಗಿ ಆಯ್ಕೆ ಮಾಡಲಾಗುತ್ತದೆ. ಹಾಡಿನ ಕೊನೆಯಲ್ಲಿ ಮಕ್ಕಳು ಆವೇಶಕ್ಕೆ ಒಳಗಾಗಿ ಕಳವನ್ನು ಅಳಿಸಬೇಕು. ಭಸ್ಮ ಕಳ ಮೊದಲಾದ ಕೆಲವು ಕಳಗಳಲ್ಲಿ ಹೆಂಗಸರನ್ನು ಕೂರಿಸುವುದಿಲ್ಲ.

ಕೇರಳದಲ್ಲಿ ಪ್ರಚಲಿತದಲ್ಲಿರುವ ಸರ್ಪಂತುಳ್ಳಲ್ ಆಚರಣೆಯಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಆಚರಣೆಯಲ್ಲಿ ಏಕರೂಪತೆಯಿಲ್ಲ, ಕೆಲವು ಪುಳ್ಳವ ಕುಟುಂಬಗಳಲ್ಲೇ ಆಚರಣೆಯಲ್ಲಿ ಭಿನ್ನತೆ ಇವೆ. ತ್ರೀಶೂರ್‌ನ ಕೆಲವು ಕಡೆಗಳಲ್ಲಿ ನಾಯರ್‌ಗಳ ನೇತೃತ್ವದಲ್ಲಿ ಮತ್ತು ಪೌರೋಹಿತ್ಯದಲ್ಲಿ ಈ ಧಾರ್ಮಿಕ ಆಚರಣೆಯನ್ನು ನಡೆಸಲಾಗುತ್ತದೆಂದು ಶ್ರೀ ಟಿ.ಕೆ. ಗೋಪಾಲ್ ಪಣಿಕ್ಕರ್ ಉಲ್ಲೇಖಿಸಿದ್ದಾರೆ.[೭] ತುಳ್ಳಲ್‌ನ ಆವೇಶದಲ್ಲಿ ಭಾಗವಹಿಸುವವರು ಕೂಡಾ ನಾಯರ್ ಹೆಂಗಸರೇ ಮತ್ತೆ ಉಳಿದಂತೆ ಆಚರಣೆಯ ಕೆಲವು ವಿಧಿಗಳು ಒಂದೇ ರೀತಿಯಲ್ಲಿರುತ್ತದೆ ಎಂದು ಉಲ್ಲೇಖಿಸಲಾಗಿದೆ.

೫.೫.೩. ಕುರುಂದಿನಿ ಪಾಟ್

ಕೇರಳದ ಉತ್ತರ ಭಾಗದಲ್ಲಿ ಪ್ರಚಲಿತದಲ್ಲಿರುವ 'ವಣ್ಣಾನ್ ಮಾರ್' ಸಮುದಾಯದವರು ನಡೆಸಿಕೊಡುವ ಒಂದು ಆರಾಧನ ಪ್ರಕಾರವೇ ಕುರುಂದಿನಿ ಪಾಟ್, 'ಕುರುಂದಿ' ಎಂದರೆ 'ಓಕುಳಿ ನೀರು' ಎನ್ನುವ ಅರ್ಥವಿದೆ. ಪ್ರಧಾನವಾಗಿ ಈ ಆಚರಣೆ ಸ್ತ್ರೀಯರಿಗಾಗಿ ನಡೆಸಿಕೊಡುವ ಜನಪದ ಆರಾಧನ ವಿಧಿ. ಸಂತಾನ ಹೀನರು ಸಂತಾನ ಭಾಗ್ಯಕ್ಕಾಗಿ ಈ ಆಚರಣೆಯನ್ನು ನಡೆಸುತ್ತಾರೆ. ಇದರಿಂದ ಮುಂದೆ ಸಂತಾನ ಭಾಗ್ಯವಾಗುತ್ತದೆಂಬ ನಂಬಿಕೆಯಿದೆ. ಈ ಆಚರಣೆ ಒಂದು ಹಗಲು ಮತ್ತು ರಾತ್ರಿ ನಿರಂತರವಾಗಿ ನಡೆಯುವ ಆರಾಧನ ಪ್ರಕ್ರಿಯೆ. ಪ್ರಸ್ತುತ ಸಂದರ್ಭದಲ್ಲಿ ಅತಿ ವಿರಳವಾಗಿ ನಡೆಸಲ್ಪಡುವ ಅನುಷ್ಠಾನ ಕಲೆಯಾಗಿದೆ.

ಕುರುಂದಿನಿ ಪಾಟ್ ಹಾಡಿನ ಸಂಪ್ರದಾಯದಲ್ಲಿ ಆಚರಿಸಲ್ಪಡುವ ಆರಾಧನ ಕಲೆ. ಸರ್ಪಂತುಳ್ಳಲ್‌ನಂತೆ ಇಲ್ಲಿಯು ಹಾಡೇ ಪ್ರಧಾನ. ಹಾಡಿನಲ್ಲಿ ಪ್ರಧಾನವಾಗಿ ಸರ್ಪಗಳ ಪುರಾಣದ ಕಥೆಯನ್ನು ಆಚರಣೆಯೊಂದಿಗೆ ಹಾಡಲಾಗುತ್ತದೆ. ಸುಮಾರು ೭, ೮ ಗಂಟೆಯ ತನಕ ವಿವಿಧ ಸಂದರ್ಭಗಳಲ್ಲಿ ದೀರ್ಘಕಾಲದವರೆಗೆ ಹಾಡುವ ಸಂಪ್ರದಾಯ ಈ ಆಚರಣೆಯಲ್ಲಿದೆ. ನಾಗೋತ್ಪತ್ತಿ, ಖಾಂಡವದಹನಂ ಮೊದಲಾದ ಪುರಾಣದ ಕತೆಗಳನ್ನು ಹಾಡಲಾಗುತ್ತದೆ.

ಕುರುಂದಿನಿ ಪಾಟ್ ಪ್ರಾರಂಭವಾಗುವುದೇ 'ನೂರುಂಪಾಲುಂ' ಆಚರಣೆಯೊಂದಿಗೆ. ಹಾಲು, ಎಳನೀರು, ಮುಂತಾದವುಗಳನ್ನು ಸೇರಿಸಿ ವಣ್ಣಾನ್ ಕಲಾವಿದರು ನೂರುಂಪಾಲುಂ ತಯಾರಿಸುತ್ತಾರೆ. ಬಳಿಕ ಮಾವಿನ ಕುಡಿ, ಹಲಸಿನ ಕುಡಿ, ವೀಳ್ಯದೆಲೆ, ಮುಂತಾದವುಗಳನ್ನು ಕಲಶದಲ್ಲಿಟ್ಟು ಅದರಲ್ಲಿ ನೂರುಂಪಾಲುಂ ತುಂಬಿಸಲಾಗುತ್ತದೆ. ವಿಶೇಷವಾಗಿ ಕೆಂದಾಳೆ ಎಳನೀರು, ವೀಳ್ಯದೆಲೆ ಅಡಿಕೆಯನ್ನು ಕಲಶದಲ್ಲಿಟ್ಟು ಬತ್ತಿ ಹಚ್ಚಿ ದೀಪ ಉರಿಸಲಾಗುತ್ತದೆ. ಯಾವ ಸ್ತ್ರೀಗಾಗಿ ಈ ಆಚರಣೆಯನ್ನು ನಡೆಸಲಾಗುತ್ತದೆಯೋ ಆಕೆ ಈ ಕಾರ್ಯವನ್ನು ಮಾಡಬೇಕಾಗುತ್ತದೆ. ನೂರುಂಪಾಲುಂ ಕೊಡುವ ಸಂದರ್ಭದಲ್ಲಿ ವಣ್ಣಾನ್ ಕಲಾವಿದರು 'ನಾಗೋತ್ಪತ್ತಿ'ಯ ಹಾಡನ್ನು ಹಾಡುತ್ತಾರೆ. ಹಾಡು ಮುಗಿದ ಬಳಿಕ ವಣ್ಣಾನ್‌ನವರು ನೂರುಂಪಾಲುಂ ತೆಗೆದು ಹಾಲುಬರುವ ಪಾಲೆ, ಅತ್ತಿ, ಇತ್ಯಾದಿ ವೃಕ್ಷದ ಅಡಿಯಲ್ಲಿ ಇಡುತ್ತಾರೆ. ಈ ರೀತಿ ನಾಲ್ಕು ಸಲ ನೂರುಂಪಾಲುಂ ಅರ್ಪಿಸಲಾಗುತ್ತದೆ. ಪ್ರತಿಸಲವೂ ನೂರುಂಪಾಲುಂ

ಕೊಟ್ಟ ಬಳಿಕ ನಾಗ ಸಂಬಂಧಿಯಾದ ಹಾಡುಗಳನ್ನು ವಣ್ಣಾನ್ ತಂಡದವರು ಹಾಡುತ್ತಾರೆ. ಈ ರೀತಿ ಹಾಡು ಹೇಳಿ ನೂರುಂಪಾಲುಂ ಅರ್ಪಿಸುವುದರಿಂದ ಸರ್ಪದೋಷ ನಿವಾರಿಸಲಾಗುತ್ತದೆ ಎನ್ನುವುದು ಅದರ ಹಿಂದಿರುವ ಅಭಿಮತ.

ಮಡಕೆಯ ಬಾಯಿ ಕಟ್ಟುವುದು ಮತ್ತು ಬಾಯಿ ಬಿಚ್ಚುವುದು ಇಲ್ಲಿರುವ ಇನ್ನೊಂದು ಆಚರಣೆ, ಏಳು ಹೊಸ ಸಣ್ಣ ಮಡಿಕೆಗಳನ್ನು ಇಲ್ಲಿ ಬಳಸಲಾಗುತ್ತದೆ. ಅದರಲ್ಲಿ ಅಕ್ಕಿ, ಕದಳಿ ಹಣ್ಣು, ಹೂವು, ಸಂಪಿಗೆ ಹೂವು, ತುಳಸಿ ಇತ್ಯಾದಿ ಒಂದೊಂದು ರೀತಿಯ ವಸ್ತುಗಳನ್ನು ತುಂಬಿಸಿಡಲಾಗುತ್ತದೆ. ಮಡಿಕೆಯ ಬಾಯಿಯನ್ನು ಹೊಸ ಬಟ್ಟೆಯಲ್ಲಿ ಮುಚ್ಚಿ ಕಟ್ಟಲಾಗುತ್ತದೆ. ಏಳು ಮಡಿಕೆಗಳಲ್ಲೂ ವಸ್ತುಗಳಿರಬೇಕು ಇವುಗಳಲ್ಲಿ ಒಂದು ಮಡಿಕೆಯಲ್ಲಿ ಮಾತ್ರ ಕೆಂದಾಳೆ ಎಳನೀರನ್ನು ತುಂಬಿಸಿಡಲಾಗುತ್ತದೆ. ಈ ಮಡಿಕೆಯನ್ನೇ 'ಗರುಡ ಮಡಿಕೆ' ಎಂದು ಕರೆಯಲಾಗುತ್ತದೆ. ಗರುಡನ ಉತ್ಪತ್ತಿಯೇ ಇಲ್ಲಿರುವ ಸಂಕಲ್ಪ. ಈ ಸಂದರ್ಭದಲ್ಲಿ ಗರುಡೋತ್ಪತ್ತಿಗೆ ಸಂಬಂಧಿಸಿದ ಹಾಡನ್ನು ಹಾಡಲಾಗುತ್ತದೆ. ಆಚರಣೆ ರಾತ್ರಿಯ ಹೊತ್ತು ನೆರವೇರುತ್ತದೆ.

ಹಾಡು ಮುಗಿದ ಬಳಿಕ ಮಡಿಕೆ ಬಾಯಿಗೆ ಬಿಗಿದಿರುವ ಕಟ್ಟನ್ನು ಬಿಚ್ಚಲಾಗುತ್ತದೆ. ಮಡಿಕೆಯಲ್ಲಿ ಗರುಡನ ಆವಾಹನೆ ಆಗಿರುತ್ತದೆಂದು ಸಂಕಲ್ಪಿಸಲಾಗುತ್ತದೆ.

ಬಳಿಕ ಪಂಚ ವರ್ಣದ ಹುಡಿಯಿಂದ 'ಕಳಂ' ರಚಿಸಲಾಗುತ್ತದೆ. ಕಳದಲ್ಲಿ ಒಂದು ದೊಡ್ಡ ತಾಮ್ರದ ಪಾತ್ರೆಯನ್ನಿಟ್ಟು ಅದರಲ್ಲಿ ಹಳದಿ, ಹಾಗೂ ಸುಣ್ಣವನ್ನು ಸೇರಿಸಿ, ನೀರನ್ನು ತುಂಬಿಸಿ ಕುರುಂದಿನಿ ತಯಾರಿಸಲಾಗುತ್ತದೆ. ಯಾವ ಸ್ತ್ರೀಯನ್ನು ಉದ್ದೇಶಿಸಿ ಹಾಡಲಾಗುತ್ತದೆಯೋ ಆ ಸ್ತ್ರೀಯು ತೆಂಗಿನ ಓಲೆಯಿಂದ ಮಾಡಿರುವ ಆಭರಣವನ್ನು ಧರಿಸಬೇಕು. ಕೈಯಲ್ಲಿ ಹೂವಿನ ಗೊನೆಯೊಂದಿಗೆ ಕುರುಂದಿನಿಯ ಬಳಿಯಲ್ಲಿ ಕುಳಿತುಕೊಳ್ಳಬೇಕು. ಮಧ್ಯ ರಾತ್ರಿಯ ಸಂದರ್ಭದಲ್ಲಿ ಬೇರೆ ಬೇರೆ ಕುರುಂದಿನಿ ವೇಷಗಳು ಪ್ರವೇಶವಾಗುತ್ತವೆ. ಕುರುಂದಿನಿ ಭಗವತಿಯೊಂದಿಗೆ ಈ ವೇಷಗಳು ಮಂಡಲದ ಸುತ್ತಲೂ ಹಿನ್ನೆಲೆಯ ವಾದ್ಯಘೋಷದೊಂದಿಗೆ ನರ್ತಿಸುತ್ತವೆ. ಆಗ ಕುರುಂದಿನಿ ಕುಳಿತ ಸ್ತ್ರೀಯು 'ಕುರುಂದಿ' ನೀರಿನಲ್ಲಿ ಬಿದ್ದು ಹೊರಳಾಡುತ್ತಾಳೆ. ಇಲ್ಲಿ ಪ್ರಧಾನವಾಗಿ ಕುರುಂದಿ ಅಲಂಕಾರ, ದೀಪಗಳು, ಹಾಡು, ವಾದ್ಯಘೋಷ ಎಲ್ಲವೂ ಒಂದು ಅಸಾಧಾರಣ ರಂಗವನ್ನು ಸೃಷ್ಟಿಸುತ್ತವೆ. ಸಣ್ಣದೊಂದಿಗಳನ್ನು ಹಚ್ಚಿ ಇಟ್ಟು, ಹಳದಿ, ಸುಣ್ಣ, ಮಿಶ್ರಣದಿಂದ ತಯಾರಿಸಿರುವ ಕುರುಂದಿ ನೀರಿನಿಂದಾಗಿಯೇ ಈ ಆಚರಣೆಗೆ ರುಂದಿನಿ ಪಾಟ್ ಎಂಬ ಹೆಸರು ಬಂದಿರುವುದು ವ್ಯಕ್ತವಾಗುತ್ತದೆ. ಇದು ಒಂದು ತಾಂತ್ರಿಕ ಕ್ರಿಯೆಯಂತೆ ಕಂಡು ಬರುತ್ತದೆ.

೫.೫.೪. ನಾಗತೋಟಂ

ಉತ್ತರ ಕೇರಳದ ಭಗವತಿ ಕ್ಷೇತ್ರಗಳಲ್ಲಿ 'ವೆಟಕ್ಕ್ ಒರುಮಗನ್' ಅಥವಾ ಅಯ್ಯಪ್ಪ ಗುಡಿಗಳಲ್ಲಿ, ನಾಗಗುಡಿಗಳಲ್ಲಿ, ಮತ್ತು ಬ್ರಾಹ್ಮಣರ ಮನೆಗಳಲ್ಲಿ ವಿವಿಧ ರೀತಿಯ ನಾಗಕಳವನ್ನು ಬರೆದು ನಾಗ ಪುರಾಣದ ಹಾಡುಗಳನ್ನು ಹಾಡಲಾಗುತ್ತದೆ. ನಾಗ ಅಥವಾ ಸರ್ಪನಿಗೆ ಸಂಬಂಧಿಸಿದ ಪುರಾಣದ ಕಥೆಗಳನ್ನು ಹಾಡಿನ ರೂಪದಲ್ಲಿ ಹಾಡುವ ಈ ಧಾರ್ಮಿಕ ಜನಪದ ಗೀತ ಪ್ರಕಾರವನ್ನು ನಾಗತೋಟಂ ಎಂದು ಕರೆಯಲಾಗುತ್ತದೆ. ಈ ರೀತಿಯ ಕಲಾ ಪ್ರಕಾರವನ್ನು ಹಿಂದುಳಿದ ವರ್ಗದವರಾದ 'ತೈಯ್ಯಂಪಾಡಿಗಳು' ನಡೆಸಿಕೊಡುತ್ತಾರೆ. ಈ ವರ್ಗದವರನ್ನು

ನಿರ್ದಿಷ್ಟವಾಗಿ 'ದೇವರ ಹಾಡು ಹಾಡುವವರು' ಎಂದು ಕೂಡಾ ಕರೆಯಲಾಗುತ್ತದೆ. ಈ ಕಲಾ ಪ್ರಕಾರವು ಇವರ ವೃತ್ತಿ ಕಸುಬಾಗಿರುವುದು ಕಂಡು ಬರುತ್ತದೆ. ಇದು ಈ ವರ್ಗದವರಿಗೆ ತಂದೆಯಿಂದ ಮಗನಿಗೆ ಹೀಗೆ ವಂಶಪಾರಂಪರ್ಯವಾಗಿ ಮುಂದುವರಿದುಕೊಂಡು ಬರುತ್ತದೆ. ಇವರು ಉತ್ತರ ಕೇರಳದ ಕೆಲವು ಪ್ರದೇಶಗಳಲ್ಲಿ, 'ಇರಿಟ್ಟಿ'ಯ ಸಮೀಪದಲ್ಲಿರುವ 'ಪುನ್ನಾಡ' ಎಂಬ ಪ್ರದೇಶದಲ್ಲಿಯೂ ಕಂಡು ಬರುತ್ತಾರೆ. ಉತ್ತರ ಕೇರಳದಲ್ಲಿ ಇವರು ಅತಿ ವಿರಳ ಸಂಖ್ಯೆಯಲ್ಲಿರುವುದು ಕಂಡು ಬಂದಿದೆ. ಈ ವರ್ಗದವರು ತಮ್ಮ ವೃತ್ತಿಗಾಯನದಲ್ಲಿ ಪ್ರಧಾನವಾಗಿ ದಾರುವದಂ, ಯಕ್ಷಿ, ಅಯ್ಯಪ್ಪ, ನಾಗ ಮುಂತಾದ ದೈವಗಳ ಕುರಿತಾಗಿ ಹಾಡುಗಳನ್ನು ಹಾಡುತ್ತಾರೆ. ಈ ರೀತಿಯ ಪ್ರತ್ಯೇಕ ದೈವಗಳ ಕುರಿತಾಗಿ ಹಾಡುವುದಾದರು ನಾಗನ ಕುರಿತಾಗಿ ಹಾಡುವ ಹಾಡಿನ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಹಾಗೂ ಧಾರ್ಮಿಕ ಹಿನ್ನೆಲೆ ಇದೆ. ಇವರಿಗೆ ಧಾರ್ಮಿಕ ಆಚರಣೆಯನ್ನು ಆಚರಿಸುವುದಕ್ಕೆ ಹೇಳಿಕೆ ನೀಡುವುದರೊಂದಿಗೆ ವಿದ್ಯುಕ್ತವಾಗಿ ಆಹ್ವಾನಿಸಬೇಕಾಗುತ್ತದೆ. ಈ ಸಮುದಾಯದವರು ನಾಗನ ಕುರಿತಾದ 'ನಾಗತೋಟಂ' ಅನ್ನು ಹೆಚ್ಚಾಗಿ ಆಚರಿಸುವುದರಿಂದ ಜನತೆಯೂ ಕೂಡಾ ಈ ಧಾರ್ಮಿಕ ವಿಧಿಗಾಗಿಯೇ ಆಹ್ವಾನಿಸುವುದರಿಂದ, ಇದರಿಂದಾಗಿಯೇ ಪ್ರಸಿದ್ಧಿಗೆ ಬಂದಿರುವುದು ತಿಳಿದು ಬರುತ್ತದೆ.

ಕರ್ತೃಗಳು ಬಯಸಿದಲ್ಲಿ ಅಂದರೆ ಬ್ರಾಹ್ಮಣರ ಮನೆ ದೇವಾಲಯ ಇತ್ಯಾದಿಗಳಲ್ಲಿ ಇವರು ಹಾಡುವುದರಿಂದ ವಿಶೇಷ ಸಂದರ್ಭಗಳಲ್ಲಿ ಇವರನ್ನು ಆಹ್ವಾನಿಸಲಾಗುತ್ತದೆ. ಅಲಂಕಾರ ಮಾಡಿದ ಪ್ರತ್ಯೇಕ ಸ್ಥಳದಲ್ಲಿ ಬಿಳಿಯ ರಂಗೋಲಿ ಹುಡಿಯಿಂದ ದೊಡ್ಡದಾದ ಹೆಡೆಯರಳಿಸಿರುವ 'ನಾಗಕಳಂ' ಅಥವಾ ಸರ್ಪದ ಪ್ರತಿಕೃತಿಯನ್ನು ರಚಿಸುತ್ತಾರೆ. ಕಳದಲ್ಲಿ ಪ್ರಮುಖ 'ನಾಗರಾಜಾವು' ಮತ್ತು 'ನಾಗೇಶ್ವರಿ' ಮುಂತಾದ ಸರ್ಪಗಳ ಪ್ರತಿಕೃತಿಗಳನ್ನು ರಚಿಸಲಾಗುತ್ತದೆ. ಈ ರೀತಿಯಾಗಿ ರಚಿಸಿದ ಮಂಡಲಗಳನ್ನು ಹೂ, ದೀಪ, ವಿವಿಧ ರೀತಿಯ ಫಲವಸ್ತುಗಳಿಂದ ಸುಂದರವಾಗಿ ಅಲಂಕರಿಸಲಾಗುತ್ತದೆ. ಜೊತೆಗೆ ನೂರುಂಪಾಲುಂ ಇತ್ಯಾದಿಗಳನ್ನು ನಡೆಸಲಾಗುತ್ತದೆ. ಇಲ್ಲಿ ನಡೆಯುವ ಧಾರ್ಮಿಕ ವಿಧಿಯ ನೇತೃತ್ವವನ್ನು ಇವರ ಮುಖಂಡನೇ ವಹಿಸಿಕೊಳ್ಳುತ್ತಾನೆ. ಜಾಗಟೆಯಿಂದ ಲಯಬದ್ಧವಾಗಿ ತಾಳಹಾಕುತ್ತ ಹಾಡು ಹಾಡುತ್ತಾರೆ. ಓರ್ವ ಕೈಯಲ್ಲೊಂದು ಎಣ್ಣೆಯ ತಟ್ಟೆಯನ್ನು ಹಿಡಿದುಕೊಂಡಿರುತ್ತಾನೆ. ಇದು ಕೇವಲ ಸಾಂಕೇತಿಕವಾದ ಸಂಕಲ್ಪವಾಗುತ್ತದೆ. ಯಾವುದೇ ರೀತಿಯ ಎಣ್ಣೆ ತಟ್ಟೆಯಲ್ಲಿರುವುದಿಲ್ಲ. ಆರಾಧನೆಯ ನಂಬಿಕೆಯಲ್ಲಿರುವ ಮಂತ್ರ ಎಣ್ಣೆ, ತಂತ್ರಎಣ್ಣೆ, ಯಂತ್ರ ಎಣ್ಣೆಯಂತಹ ವಿಭಾಗದಲ್ಲಿ ಅದು ತಂತ್ರ ಎಣ್ಣೆಯಾಗಿದೆ.

ಈ ರೀತಿಯಾಗಿ ತೈಯಂಪಾಡಿಗಳು ಹಾಡುವ ನಾಗನ ಹಾಡುಗಳ ಈ ಪ್ರಕ್ರಿಯೆ ಕೆಲವು ದಿನಗಳವರೆಗೆ ಮುಂದುವರೆಯುತ್ತದೆ. ಪ್ರತಿದಿನವೂ ಬರೆದ ಕಳವನ್ನು ವಿಸರ್ಜಿಸಿ ಮರುದಿನ ಹೊಸಕಳವನ್ನು ರಚಿಸಲಾಗುತ್ತದೆ. ಪ್ರತಿದಿನವೂ ವಿವಿಧ ರೀತಿಯ ಸರ್ಪಕಳವನ್ನು ರಚಿಸಲಾಗುತ್ತದೆ. ಇದರೊಂದಿಗೆ ಅಮೃತ ಮಥನಂ, ಆನಾಗೋತ್ಪತ್ತಿ ಮೊದಲಾದ ಪುರಾಣದ ಕಥೆಗಳನ್ನು ಥೈಯಂಪಾಡಿಗಳು ಹಾಡುತ್ತಾರೆ. ಥೈಯಂಪಾಡಿಗಳು ಹಾಡುವ ಹಾಡುಗಳು ಪ್ರಾಚೀನ ಪುರಾಣದ ಗದ್ಯ ಕಥೆಗಳಾಗಿರುತ್ತವೆ. ಇಲ್ಲಿ ತೋಟಂ ಎಂಬ ಪದಕ್ಕೆ 'ಸ್ತುತಿ' ಎಂದು ಅರ್ಥೈಸಿಕೊಳ್ಳಬೇಕಾಗಿದೆ. ನಾಗತೋಟಂದಲ್ಲಿ ನಾಗರಾಜನ ಹಾಗೂ ನಾಗೇಶ್ವರಿಯ ಕಥೆಗಳನ್ನು ವಿವರಿಸುತ್ತಾರೆ. ಹಾಡಿನ ರೂಪದಲ್ಲಿರುವ ಈ ಕಥೆಗಳು ಪುರಾಣದ ಕಥೆಗಳೊಂದಿಗೆ ಸಂಬಂಧ ಹೊಂದಿರುವುದು ತಿಳಿದು ಬರುತ್ತದೆ.

ಸರ್ಪದೋಷ ನಿವಾರಣೆ, ಸಂತಾನ ಹೀನತೆ, ಮೊದಲಾದ ಸಂದರ್ಭಗಳಲ್ಲಿ ದೋಷ ಪರಿಹಾರಾರ್ಥವಾಗಿ 'ನಾಗತೋಟಂ' ಆಚರಿಸಲಾಗುತ್ತದೆ.ಇದನ್ನು ಧಾರ್ಮಿಕ ಕ್ಷೇತ್ರಗಳಲ್ಲಿ ವಾರ್ಷಿಕ ಆಚರಣೆಯಾಗಿಯೂ ಆಚರಿಸಲಾಗುತ್ತದೆ. ಈಗ ಮುಖ್ಯವಾಗಿ ಈ ಪ್ರಕಾರವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿರುವದರಿಂದ ಸಣ್ಣ ರೀತಿಯಲ್ಲಿ ಕಳ ರಚಿಸಿ 'ನಾಗತೋಟಂ' ಆಚರಿಸುತ್ತಿರುವುದು ಕಂಡು ಬಂದಿದೆ.

೫.೫.೫. ನಾಗತ್ತೆಯಂ

ಉತ್ತರ ಕೇರಳದ ಕಣ್ಣಾನೂ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿರುವ ವಿಶಿಷ್ಟ ರೀತಿಯ ನಾಗಾರಾಧನೆಯ ಜನಪದ ಪ್ರಕಾರವೇ 'ಸರ್ಪಕೋಲ' ಅಥವಾ 'ನಾಗತ್ತೆಯಂ'. ಇದನ್ನು 'ತಿರಾ' ಎಂದು ಕೂಡಾ ಕರೆಯಲಾಗುತ್ತದೆ. ನಾಗ, ದೇವರು ವೀರ ಪುರುಷರು, ಮತ್ತು ನಾಗರಾಜ, ನಾಗಕನ್ನಿ, ಮೊದಲಾದ ದೈವಗಳ ವೇಶಗಳನ್ನು ಕಟ್ಟಿ ಕುಣಿಸುತ್ತಾರೆ. ನಾಗಗಳನ್ನು ಈ ಪ್ರದೇಶದಲ್ಲಿ ದೈವಗಳ ರೂಪದಲ್ಲಿ ಆರಾಧಿಸಲಾಗುತ್ತದೆ.

ವಣ್ಣಾನ್

ಉತ್ತರ ಕೇರಳದ ತೆಯ್ಯಂ ಕಟ್ಟುವ ಒಂದು ಜನಾಂಗ. ಇವರು 'ತೆಯ್ಯಂ ಕಟ್ಟು' ಹಕ್ಕು ಪಡೆದವರು. ಸಾಮಾಜಿಕವಾಗಿ ಹಿಂದುಳಿದ ಇವರು ತೀಯರ ಉಪಜಾತಿ ಎಂಬ ಒಂದು ವಾದವು ಇದೆ. ಇವರು ಮೂರ್ತಿಗಾರಿಕೆ ವೃತ್ತಿಯನ್ನು ಕೂಡ ಮಾಡಿಕೊಂಡಿದ್ದುದು ಇದಕ್ಕೆ ಒಂದು ಕಾರಣವಾಗಿರಬಹುದು. ಸಾಮಾಜಿಕ ಆಚರಣೆಯಲ್ಲಿಯೂ ಅವರಿಗೆ ತೀಯ ಜಾತಿಯೊಂದಿಗೆ ಸಂಬಂಧವಿರುವುದು ಕಂಡು ಬಂದಿದೆ. ಇವರು ಕೌಟುಂಬಿಕವಾಗಿ 'ಮರುಮಕ್ಕತ್ತಾಯ' ಪದ್ಧತಿಯನ್ನು ಅನುಸರಿಸುತ್ತಾರೆ. ವಣ್ಣಾನ್‌ರು ಪೂರ್ವದಲ್ಲಿ ತೀಯರ ಮಡಿವಾಳರು ಎಂಬುದು ಕೂಡ ಇದಕ್ಕೆ ಪೂರಕ ನಿದರ್ಶನವಾಗಿದೆ.

ಇಂದು ವಣ್ಣಾನ್ ಸಮುದಾಯದವರು ಎಲ್ಲ ವೃತ್ತಿಗಳನ್ನು ಉಪಜೀವನಕ್ಕೆ ಮಾರ್ಗವಾಗಿ ಸ್ವೀಕರಿಸಿದ್ದರೂ ತಮ್ಮ ವೃತ್ತಿಯಾದ ತೈಯ್ಯಂ ಅನ್ನು ಕೆಲವೇ ಕುಟುಂಬಗಳವರು ಮುಂದುವರೆಸಿಕೊಂಡು ಬರುತ್ತಿರುವುದು ಕಂಡು ಬಂದಿದೆ. ಇವರು ಇದರೊಂದಿಗೆ ಜನಪದ ವೈದ್ಯರಾಗಿಯೂ, ನದಿಗಳಲ್ಲಿ ಮೀನು ಹಿಡಿಯುವ ಇತರ ಕೆಲಸಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದು, ಸರಕಾರಿ ನೌಕರಿಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಇವರ ಕುಲದೈವ ಮುತ್ತಪ್ಪನ್.

ಹಿನ್ನೆಲೆ

ಉತ್ತರ ಕೇರಳದ ಮಲಬಾರು ಪ್ರದೇಶದಲ್ಲಿ ವಿಶೇಷವಾಗಿ ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ಪ್ರಚಲಿತದಲ್ಲಿರುವ ಒಂದು ಆರಾಧನ ಸಂಪ್ರದಾಯ ತೆಯ್ಯಾಟಂ, ಅಥವಾ ತೈಯ್ಯಂ. ಇದು ದಕ್ಷಿಣ ಕನ್ನಡದಲ್ಲಿ ಪ್ರಚಲಿತದಲ್ಲಿರುವ 'ದೆಯ್ಯಾ' ಆರಾಧನೆಯನ್ನು ಹೋಲುವ ಕಲಾ ರೂಪ, ಅನುಕ್ರಮವಾಗಿ ಮಲಯಾಳಂ ಮತ್ತು ತುಳು ಭಾಷೆಯ 'ಧೈಯಂ' ಮತ್ತು 'ದೆಯ್ಯಾ' ಎಂಬೀ ಪದಗಳಿಗೆ ಕನ್ನಡದಲ್ಲಿ ದೈವ ಎಂದು ಅರ್ಥ ಇದೆ. ತೆಯ್ಯಾಟಂಗೆ ದೈವಾಟಂ, ತಿರಯಾಟಂ, ಎಂಬೀ ಹೆಸರುಗಳೂ ಇವೆ. ತುಳುನಾಡಿನ 'ದೆಯ್ಯಾ'ಗಳಲ್ಲಿನ 'ಪಾರ್ತನ'

ಬಳಕೆಯಲ್ಲಿದ್ದರೆ ತೆಯ್ಯಂನಲ್ಲಿ 'ತೋಟ್ಟಂ' ಇದೆ. ವೀರರ ಆರಾಧನೆಯ ಪ್ರತೀಕವಾಗಿ ತೆಯ್ಯಾಟಂ ರೂಪು ಪಡೆದಿರುವುದು ಕಂಡುಬರುತ್ತದೆ. ಯಕ್ಷಗಾನ ಗಂಧರ್ವರು, ದೇವ ದೇವತೆಗಳು, ನಾಗರು, ತೀರಿಕೊಂಡ ಹಿರಿಯರು, ಊರಿನ ಏಳ್ಗೆಗಾಗಿ ಮಡಿದ ವೀರರು ಮೊದಲಾದವರನ್ನು ಸಂಕೇತಿಸುವಂತೆ ವೇಷಧರಿಸಿ ಆರಾಧಿಸುವ ವಿಶಿಷ್ಟವಾದ ಜನಪದ ಕಲೆ ಇದು. ತೆಯ್ಯಾಟದಲ್ಲಿ ಆರಾಧನ ಮೂರ್ತಿಯ ವಿವಿಧ ಪ್ರವೃತ್ತಿಗಳನ್ನು ತಾಳಬದ್ಧವಾಗಿ ಕುಣಿದು ನರ್ತಿಸಿ, ಪ್ರದರ್ಶಿಸಲಾಗುತ್ತದೆ.

ವಿವಿಧ ದೈವಗಳಿಗೆ ಈ ಪ್ರದೇಶದಲ್ಲಿ ತೈಯಂ ನಡೆಯುವಂತೆ ನಾಗ ಅಥವಾ ಸರ್ಪವನ್ನು ದೈವದ ರೂಪದಲ್ಲಿ ಆವಿರ್ಭವಿಸಿ ಕೋಲ ನಡೆಸುವ ಸಂಪ್ರದಾಯ ಪ್ರಚಲಿತದಲ್ಲಿದೆ. ಕುಟುಂಬ ಮಟ್ಟದಲ್ಲಿ ಮತ್ತು ಗ್ರಾಮ ಮಟ್ಟದಲ್ಲಿಯೂ ಈ ಆಚರಣೆಯು ನಡೆಯುತ್ತಿರುವುದು ಕಂಡು ಬಂದಿದೆ. ಸರ್ಪವನ್ನು ವಿವಿಧ ದೈವಗಳೊಂದಿಗೆ ಸಮೀಕರಿಸಿ, ಆ ದೈವದ ರೂಪವನ್ನು ಧರಿಸಿ ಮನುಷ್ಯ ಆವೇಶಗೊಂಡು ಕುಣಿದು, ದೈವವನ್ನು ಸಂಪ್ರೀತಗೊಳಿಸುವ ಆರಾಧನಾ ಪದ್ಧತಿ ಪಾಲಕ್ಕಾಡ್, ಮಲಪ್ಪುರಂ, ಕಲ್ಲಿಕೋಟೆ, ಕಾಸರಗೋಡು ಮೊದಲಾದ ಕರಾವಳಿ ಪ್ರದೇಶಗಳಲ್ಲಿ ಸಾಮಾನ್ಯವಾಗಿದೆ. ವಿಶೇಷವಾಗಿ ತನ್ನ ಉದ್ದೇಶದಲ್ಲಿ, ಕೋಲ ಕಟ್ಟಿ ಆಡಿಸುವುದರಿಂದ ದೈವವು ಸಂತುಷ್ಟಗೊಳ್ಳುತ್ತದೆ ಎಂಬುದು ಈ ಆಚರಣೆಯ ಹಿಂದಿರುವ ನಂಬಿಕೆಯಾಗಿದೆ. ಮನೆ ಹಾಗೂ ಬಯಲುಗಳಲ್ಲಿ ಆಚರಣೆಗಳು ನಡೆಯುತ್ತಿದ್ದರೂ, ಸಮುದಾಯದ ಭೌತಿಕ ಜೀವನವನ್ನು ನಿಯಂತ್ರಿಸುವ ಸಾರ್ವಜನಿಕ ಸಂಸ್ಥೆಗಳಲ್ಲಿ ಅದಕ್ಕೆ ಪ್ರಾಧಾನ್ಯವಿದೆ. ಸರ್ಪಕೋಲ ಗ್ರಾಮಮಟ್ಟದಲ್ಲಿ ಕೆಲವು ಪ್ರದೇಶಗಳಲ್ಲಿ ನಡೆಯುವುದರಿಂದ ಈ ವಿಷಯವನ್ನು ಸ್ಪಷ್ಟವಾಗಿ ಪರಿಗಣಿಸಬಹುದು.

ಸರ್ಪವನ್ನು ದೈವದ ರೂಪದಲ್ಲಿ ಆವಿರ್ಭವಿಸಿ ಕೋಲ ನಡೆಸುವ ಸಂಪ್ರದಾಯಕ್ಕೆ ಪ್ರಾದೇಶಿಕವಾದ ಭಿನ್ನತೆಯೇ ಮತ್ತು ಸ್ಥಳೀಯ ಸಂಸ್ಕೃತಿಯ ಪ್ರಭಾವವೇ ಕಾರಣವೆಂದು ಭಾವಿಸಲಾಗಿದೆ. ಉತ್ತರ ಕೇರಳದ ಈ ಪ್ರದೇಶಗಳಲ್ಲಿ ಜನಪದ ಸಂಸ್ಕೃತಿಯಲ್ಲಿ ತೈಯಂ ತುಂಬ ಪ್ರಭಾವಶಾಲಿಯಾಗಿರುವುದರಿಂದ ಸರ್ಪಕ್ಕೂ ಈ ಆರಾಧನಾ ಪರಂಪರೆಯನ್ನು ಸೇರಿಸರಬೇಕೆಂದು ಭಾವಿಸಲಾಗಿದೆ. ಇಲ್ಲಿ ಸರ್ಪವು ದೇವತೆಯಾಗಿಯೇ ತೆಯ್ಯಂ ಮೂಲಕ ಪ್ರತ್ಯಕ್ಷವಾಗುತ್ತದೆ. ನಾಗಕನ್ನಿ, ನಾಗರಾಜ, ನಾಗೇಶ್ವರಿ, ನಾಗತ್ತಾನ್, ನಾಗಪೋದಿ, ನಾಗಚಾಮುಂಡಿ ಮೊದಲಾದ ಸರ್ಪದ ವಿವಿಧ ದೈವ ರೂಪಗಳಿಗೆ ತೆಯ್ಯಂಗಳನ್ನು ನಡೆಸಲಾಗುತ್ತದೆ. ಇದು ಕುಟುಂಬ ಮಟ್ಟದಲ್ಲಿ ಮತ್ತು ಗ್ರಾಮ ಮಟ್ಟದಲ್ಲಿ ನಡೆದರೆ ಕೆಲವು ನಿರ್ದಿಷ್ಟವಾದ ಜನಾಂಗಗಳು ಸರ್ಪವನ್ನು ಕುಲದೇವತೆಯೆಂದು ಭಾವಿಸಿ ಕೋಲ ನಡೆಸುತ್ತಿರುವುದು ಕಂಡು ಬಂದಿದೆ. ಪ್ರಮುಖವಾಗಿ ಅತೀ ಪ್ರಾಚೀನವೆಂದು ಭಾವಿಸಲಾಗಿರುವ ಉತ್ತರ ಕೇರಳದ ಕೆಲವು ನಾಗಗುಡಿಗಳಲ್ಲಿ ಈ ಆಚರಣೆ ನಡೆಯುತ್ತಿರುವುದು ಕಂಡು ಬಂದಿದೆ. ಮುಖ್ಯವಾಗಿ ಕೈಯತ್‌ನಾಗಂ, ಮೊಯತ್‌ನಾಗಂ, ಇರುಂಪಾಲನಾಗಂ, ಕರಿಪಾಲ್‌ನಾಗಂ, ಎಡಾಟ್ಟುನಾಗಂ, ಮುಂತಾದವು ಸಾರ್ವಜನಿಕರ ಗಮನವನ್ನು ಸೆಳೆದಿರುವ ವಿವಿಧ ಆರಾಧನ ಕೇಂದ್ರಗಳು. ಬೇರೆ ನಾಗಾರಾಧನ ಕೇಂದ್ರಗಳಿಗಿಂತ ಇಲ್ಲಿ ಭಿನ್ನ ಆಚರಣೆಯಾಗಿರುವ ತೈಯಂ ಇಲ್ಲಿನ ವಿಶೇಷತೆಯಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಗ್ರಾಮಮಟ್ಟದಲ್ಲಿ ಕರಿಪ್ಪಾಲ್ ನಾಗರಾಜ ಕ್ಷೇತ್ರ, ಮತ್ತು ಜನಾಂಗಿಕವಾಗಿ ಬಾಕುಡರ ಸರ್ಪಕೋಲವನ್ನು ಆಧಾರವಾಗಿಟ್ಟುಕೊಂಡು ಈ ಭಾಗದ ವಿಶ್ಲೇಷಣೆ ನಡೆಸಲಾಗಿದೆ.

ಕರಿಪ್ಪಾಲ್ ನಾಗರಾಜ ಕ್ಷೇತ್ರ

ಕರಿಪ್ಪಾಲ್ ನಾಗರಾಧನ ಕೇಂದ್ರವು ಕಣ್ಣೂರು, ಜಿಲ್ಲೆಯ, ತಳಿಪರಂಬು ತಾಲೂಕಿನ 'ವೆಳ್ಳೂರ' ಗ್ರಾಮ 'ಕರಿಪ್ಪಾಲ್' ಎಂಬಲ್ಲಿದೆ. ಇಲ್ಲಿರುವ ಸೋಮೇಶ್ವರಿ ದೇವಾಲಯದ ಅನತಿ ದೂರದಲ್ಲಿ, ಪಶ್ಚಿಮ ಭಾಗದಲ್ಲಿ ಈ ಪ್ರದೇಶವಿದೆ. ಇಲ್ಲಿ ಪ್ರಧಾನವಾಗಿ 'ನಾಗರಾಜಾವು' ಮತ್ತು 'ನಾಗೇಣೆಯಮ್ಮ' ಎಂಬ ಎರಡು ನಾಗ ಪ್ರತೀಕಗಳಿವೆ. ದೇವಾಲಯದಿಂದ ಅನತಿ ದೂರದಲ್ಲಿರುವ ಈ ನಾಗಕಾವುವಿನಲ್ಲಿ ನಾಗಪ್ರತಿಮೆಗಳ ಮೂಲಕ ನಾಗನನ್ನು ದೈವಗಳ ರೂಪದಲ್ಲಿ ಆರಾಧಿಸಲಾಗುತ್ತದೆ. ನಾಗೇಣೆಯಮ್ಮ ಸುಮಾರು ಒಂದು ಅಡಿ ಎತ್ತರದ ಕರೀ ಶಿಲೆಯ ಪ್ರತಿಮೆಯಾಗಿದ್ದು ಸ್ತ್ರೀ ರೂಪವನ್ನು ನಾಗಹೆಡೆಯು ಹಿಂದಿನಿಂದ ಆವರಿಸಿಕೊಂಡಿದೆ. ನಾಗರಾಜಾವು ಕೂಡ ಅಷ್ಟೇ ಉತ್ತರದ ಪ್ರತಿಮೆಯಾಗಿದ್ದು ಲಿಂಗವನ್ನು ಹೆಡೆಯರಳಿಸಿದ ನಾಗರ ಹಾವು ಸುತ್ತಿಕೊಂಡಿದ್ದು, ಹೆಡೆಯು ಲಿಂಗದ ಮೇಲಿಂದ ಎದ್ದು ಕಾಣುತ್ತದೆ. ಈ ಎರಡು ಪ್ರತಿಮೆಗಳು ಪ್ರತ್ಯೇಕವಾಗಿದ್ದು 'ಪಡುವರಂ' ಎಂಬ ಚೌಕಾಕೃತಿಯ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿವೆ. ಇದರ ನಡುವೆ ಚಿತ್ರಕೂಟಂ ನಿರ್ಮಿಸಲಾಗಿದೆ. ನಾಗಪ್ರತಿಮೆಗಳಿಗೆ ಸುತ್ತಲೂ ಪ್ರಕಾರಗಳನ್ನು ನಿರ್ಮಿಸಿಲಾಗಿದ್ದು ಪ್ರಕಾರದ ಒಳಗೆ ನಂಬೂದಿರಿಗಳು, ಅಥವಾ ಬ್ರಾಹ್ಮಣರನ್ನು ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶವಿಲ್ಲ. ಇಲ್ಲಿ ಹಲವಾರು ನಿಯಮ ನಿಬಂಧನೆಗಳನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬರಲಾಗುತ್ತಿದೆ. ಅದರಂತೆ ಯಾವುದೇ ರೀತಿಯ ಛಾಯಾಚಿತ್ರ ತೆಗೆಯುವುದು ಇತ್ಯಾದಿಗಳ ಮೇಲೆ ನಿಷೇಧ ಹೇರಲಾಗಿದೆ. ಕಾವಿನ ಸುತ್ತ ಮುತ್ತಲಿನ ಪರಿಸರದಲ್ಲಿ ಹಲವಾರು ರೀತಿಯ 'ಹಾಲು' ಬರುವ ಪಾಲೆಯಂತಹಾ ಮರಗಳನ್ನು ಬೆಳೆಸಲಾಗಿದೆ. ಈ ರೀತಿಯ ಮರಗಳಿರುವುದರಿಂದ ಹಾವುಗಳು ಮುಖ್ಯವಾಗಿ ಸರ್ಪಗಳು ಪರಿಸರವನ್ನು ಇಷ್ಟಪಡುತ್ತವೆ ಎಂಬ ನಂಬಿಕೆಯಿದೆ. ಮತ್ತು ಇಂಥ ಪರಿಸರವು ಅವುಗಳ ಸಂತಾನೋತ್ಪತ್ತಿಗೂ ಸಹಾಯಕವಾಗುತ್ತದೆ. ಎಂದು ಭಾವಿಸಲಾಗಿದೆ. ಪ್ರಸ್ತುತ ಆರಾಧನ ಕೇಂದ್ರವು ಹಿಂದೆ 'ಕರಿಪ್ಪಾಲ್' ಎಂಬ ಕುಟುಂಬಕ್ಕೆ ಸಂಬಂಧಿಸಿದ್ದುದರಿಂದ ಈ ಹೆಸರು ಬಂತೆಂದು ಪ್ರತೀತಿ ಇದೆ. ಈಗ ಇಡೀಯ ಊರಿಗೆ ಸಂಬಂಧಿಸಿದ ಕ್ಷೇತ್ರವಾಗಿ ಪರಿಣಮಿಸಿದೆ.

ವೈಶಿಷ್ಟ್ಯ

ಇಲ್ಲಿನ ಮುಖ್ಯವಾದ ಆರಾಧನೆ ತೆಯ್ಯಂ. ಇಲ್ಲಿರುವ ಪ್ರಧಾನ ಆರಾಧನ ಮೂರ್ತಿಗಳಾದ ನಾಗರಾಜಾವು ಮತ್ತು ನಾಗೇಣೆಯಮ್ಮ ಈ ಶಕ್ತಿಗಳಿಗೆ ತೆಯ್ಯಂ ನಡೆಸಲಾಗುತ್ತದೆ. ಇದು ಕೇರಳದ ವಿಶಿಷ್ಟವಾದ ಒಂದು ಜನಪದ ಆರಾಧನ ಪ್ರಕಾರ. ಈ ಪ್ರಕಾರವು ತಲೆ ತಲಾಂತರದಿಂದ ನಡೆದುಕೊಂಡು ಬಂದಿದೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿರುತ್ತದೆ. ವೈದಿಕ ದೇವರುಗಳಾದ ನಾಗ, ನಾಗರಾಜ, ನಾಗಯಕ್ಷಿಯನ್ನು ಜನಪದ ರೂಪದಲ್ಲಿ ಆರಾಧಿಸಿ, ವಿಶಿಷ್ಟ ರೀತಿಯ ದ್ರಾವಿಡ ಶೈಲಿಯ ಕೋಲದ ಮೂಲಕ ತೃಪ್ತಿ ಪಡಿಸುವುದು ಇಲ್ಲಿನ ವಿಶೇಷತೆಯಾಗಿದೆ. ಇಲ್ಲಿಗೆ ಬಂದು ದರ್ಶನ ನೀಡುವುದರಿಂದ ಮತ್ತು 'ತೆಯ್ಯಂ' ಸಂದರ್ಭದಲ್ಲಿ ತೆಯ್ಯಂ

ವೇಷಧಾರಿಯು ನೀಡುವ ಅಭಯ ಮತ್ತು ಆತ ಕೊಡುವ 'ಏಳನೀರು' ಇದರಿಂದ ಸರ್ಪದೋಷ ನಿವಾರಣೆಯಾಗುತ್ತದೆಂದು, ಸಂತಾನ ಹೀನರಿಗೆ ಸಂತಾನ ಭಾಗ್ಯದೊರಕುವುದೆಂಬ ಪ್ರತೀತಿ ಇದೆ.

ಆಚರಣೆಯ ಸ್ವರೂಪ

ಧನುರ್ಮಾಸದ ಆಯಿಲ್ಯ ನಕ್ಷತ್ರದಂದು (ಡಿಸೆಂಬರ್ ತಿಂಗಳು) ಪ್ರಾರಂಭವಾಗಿ ನಿರಂತರ ಮೂರು ದಿನಗಳವರೆಗೆ ಇಲ್ಲಿರುವ ಸೋಮೇಶ್ವರಿ ದೇವಾಲಯ ಮತ್ತು ನಾಗಕ್ಷೇತ್ರದಲ್ಲಿ ಕಳಿಯಾಟ ಮತ್ತು ವಿವಿಧ ರೀತಿಯ ಆರಾಧನ ಪ್ರಕಾರಗಳು ನಡೆಯುತ್ತವೆ. ನಾಗಕಾವುಗಳಲ್ಲಿ ನೂರುಂಪಾಲುಂ ಮತ್ತು ಸರ್ಪಬಲಿ ಇಲ್ಲಿನ ವಿಶೇಷ. ರಾತ್ರಿಯ ಹೊತ್ತು ನಾಗಕಾವು ಅಥವಾ ನಾಗಕ್ಷೇತ್ರದಲ್ಲಿ ಕಳಿಯಾಟ ಅಥವಾ ತೆಯ್ಯಂ ಆರಂಭವಾಗುತ್ತದೆ. ಸುಮಾರು ಮುಂಜಾನೆಯವರೆಗೆ ಆಚರಣೆಯ ವಿಧಿ ವಿಧಾನಗಳು ನೆರವೇರುತ್ತವೆ. ಇಲ್ಲಿರುವ ಭೂತ ಮಾಧ್ಯಮದವರು 'ವಣ್ಣಾನ್' ಎಂಬ ಜನಾಂಗದವರು. ತೆಯ್ಯಂಗೆ ಸಂಬಂಧಿಸಿದ ಕೆಲವು ಆಚರಣ ವಿಧಿಗಳನ್ನು 'ನಂಬ್ಯಾರ್ ಸಮುದಾಯದವರು ನಡೆಸಿಕೊಡುತ್ತಾರೆ. ನಂಬ್ಯಾರ್ ವಣ್ಣಾನ್ ಮೊದಲಾದ ಭಾಗಿಗಳು ತೆಯ್ಯಂ ಕೊನೆಗೊಳ್ಳುವ ಮೂರು ದಿನಗಳವರೆಗೂ ವ್ರತ ನೇಮದಿಂದಿರಬೇಕಾಗುತ್ತದೆ.

ಪ್ರಾರಂಭದಲ್ಲಿ 'ನಂಬ್ಯಾರ್' ಅರ್ಚಕನು 'ಕೊಡಿಯಿಲ ವಾಂಗಲ್' ಎಂಬ ಆಚರಣೆಯನ್ನು ನಡೆಸುತ್ತಾನೆ. ಬಾಳೆಯ 'ಕೊಡಿ ಎಲೆ' ಯಲ್ಲಿ ಅಕ್ಕಿ ಹೂ, ಹತ್ತಿಯ ದೀಪ ಇಟ್ಟು ವಣ್ಣಾನ್ ಕಲಾವಿದರನ್ನು ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಆಹ್ವಾನಿಸುತ್ತಾನೆ. ಬಳಿಕ ವ್ರತ, ನಿಷ್ಠೆಯಲ್ಲಿರುವ ವಣ್ಣಾನ್, ತೆಯ್ಯಂ ಬಣ್ಣಗಾರಿಕೆಯಲ್ಲಿ ತೊಡಗುತ್ತಾನೆ. ನಾಗಕಾವಿನ ದಕ್ಷಿಣ ಭಾಗದಲ್ಲಿ ಇದಕ್ಕೆಂದೇ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಕಣ್ಣಿನ ಸುತ್ತಲೂ ಕಪ್ಪು ಬಣ್ಣ ಮತ್ತು ಮುಖ ತುಂಬ ಹಳದಿ ಲೇಪಿತ ಬಣ್ಣವನ್ನು ಬಳಿದುಕೊಂಡು ಕಾಲಿಗೆ ಗಗ್ಗರ ತೊಟ್ಟುಕೊಂಡು, ವಿವಿಧ ರೀತಿಯ ವೇಷ ಮತ್ತು ಆಭರಣಗಳನ್ನು ತೊಟ್ಟುಕೊಂಡು, ನಾಗರಾಜಾವು ವೇಷಧಾರಿಯು ಸರ್ಪಗಳ ಹಲವಾರು ಹೆಡೆಗಳಿಂದ ಅಲಂಕೃತವಾಗಿರುವ ಅಣಿಯನ್ನು ತೊಟ್ಟುಕೊಳ್ಳುತ್ತಾನೆ. ಅದೇ ರೀತಿ ನಾಗೇಣಿಯಮ್ಮ ವೇಷಧಾರಿಯು ಕೂಡ ತುದಿಯಲ್ಲಿ ಚೂಪಾಗಿರುವ ಬಿದಿರಿನಿಂದ ನಿರ್ಮಿಸಿರುವ ಎತ್ತರವಾದ ಅಣಿಯನ್ನು ಧರಿಸಿಕೊಂಡು ತೆಯ್ಯಂ ನಡೆಯುವ ಅಂಗಳಕ್ಕೆ ಬರುತ್ತಾನೆ. ಇಲ್ಲಿ ನಡೆಯುವ ತೆಯ್ಯಂ ಪ್ರಕಾರದಲ್ಲಿ ತುಳುನಾಡಿನ ಭೂತ ಕೋಲಗಳಲ್ಲಿ ನಡೆಯುವಂತೆ ಯಾವುದೇ ಅಬ್ಬರ, ಅಥವಾ ಅಟ್ಟಹಾಸಗಳು ಕಂಡುಬರುವುದಿಲ್ಲ. ಸಂಪೂರ್ಣವಾಗಿ ಭಿನ್ನರೀತಿಯಲ್ಲಿ ಸೌಮ್ಯ ರೀತಿಯಲ್ಲಿ ಆಚರಿಸಲಾಗುತ್ತದೆ.

ನಾಗ ಪ್ರತಿಮೆಗಳ ಮುಂಭಾಗದಲ್ಲಿ ಸಣ್ಣ ಚಪ್ಪರ ನಿರ್ಮಿಸಿ ಅಲ್ಲಿ ದೈವಗಳಿಗೆ ಸಂಬಂಧಿಸಿದ ವಿವಿಧ ಆಯುಧಗಳನ್ನು ಇಡಲಾಗುತ್ತದೆ. ದೈವಗಳ ವೇಷಗಳು ಅಂಗಳಕ್ಕೆ ಬಂದ ಕೂಡಲೇ ನಂಬ್ಯಾರ್ ಅರ್ಚಕನು ಈ ಆಯುಧಗಳಿಗೆ ಪೂಜೆ ನಡೆಸಿ ವೇಷಧಾರಿಗಳಿಗೆ ನೀಡುತ್ತಾನೆ. ನಿಧಾನವಾಗಿ ಆವೇಶಕ್ಕೆ ಒಳಗಾಗುವ ವೇಷಧಾರಿಗಳು ಹೆಜ್ಜೆಯನ್ನು ಹಿಂದಕ್ಕೂ ಮುಂದಕ್ಕೂ ಇಡುತ್ತಾ 'ನಾಗತೋಟ್ಟಂ' ಪ್ರಾರಂಭಿಸುತ್ತಾರೆ. ಹಿನ್ನೆಲೆಯಲ್ಲಿ ವಣ್ಣಾನ್ ಪಂಗಡದವರು ಚಕ್ರತಾಳ ಮತ್ತು ಚಂಡೆಯನ್ನು ನಿಧಾನ ಗತಿಯಲ್ಲಿ ನುಡಿಸುತ್ತ ಕಲಾವಿದರು ಹಾಡುವ ಹಾಡಿಗೆ

ಹಿನ್ನೆಲೆಯನ್ನು ನೀಡುತ್ತಾರೆ. ಪ್ರಧಾನವಾಗಿ 'ನಾಗತೋಟ್ಟಂ' ನಲ್ಲಿ ನಾಗನ ಸ್ತುತಿ ಗೀತೆಗಳನ್ನು ಹಾಡಲಾಗುತ್ತದೆ.

ತೆಯ್ಯಂ ಕಲಾವಿದರು ನಾಗತೋಟಂ ನಡೆಸುತ್ತಿರುವಾಗ ಅಂಗಳದ ಇನ್ನೊಂದು ಭಾಗದಲ್ಲಿ ನಂಬ್ಯಾರ್ ಅರ್ಚಕನು ವಿಶಿಷ್ಟ ಕ್ರಿಯೆಯಲ್ಲಿ ತೊಡಗಿರುತ್ತಾನೆ. ಇದನ್ನು 'ಕುತ್ತಿ ಚಟಚ್' ಎಂದು ಕರೆಯಲಾಗುತ್ತದೆ. ಕೆಂಪು ಬಟ್ಟೆಯನ್ನು ಸೊಂಟಕ್ಕೆ ಅಡ್ಡವಾಗಿ ಉಟ್ಟುಕೊಂಡಿರುವ ನಂಬ್ಯಾರ್‌ನು ನಾಗ ದೈವಗಳ ನೈವೇದ್ಯಕ್ಕಾಗಿ ಸಿದ್ಧಪಡಿಸುತ್ತಾನೆ. ಅಕ್ಕಿ, ಹಣ್ಣು, ಹಾಲುಗಳನ್ನು ಮರದ ಒರಳಿನಲ್ಲಿ ಹಾಕಿ ಒನಕೆಯ ಮೂಲಕ ಅದನ್ನು ಗುದ್ದುವಂತೆ ಸಾಂಕೇತಿಕವಾಗಿ ನಟಿಸುತ್ತಾನೆ. ಈ ಕ್ರಿಯೆಯನ್ನು 'ತೋಟ್ಟಂ ಪಾಟ್ಟು' ಮುಗಿಯುವವರೆಗೆ ಮುಂದುವರೆಸುತ್ತಾನೆ.

'ತೋಟ್ಟಂ ಪಾಟ್ಟು' ಮುಗಿಯುತ್ತಿದ್ದಂತೆ ಸಿದ್ಧಪಡಿಸಿದ್ದ ವಸ್ತುಗಳನ್ನು ಬಾಳೆ ಎಲೆಯಲ್ಲಿಟ್ಟು ಅದರ ಮೇಲೆ ದೀಪ ಇಟ್ಟು ದೈವಕ್ಕೆ ಸಾಂಕೇತಿವಾಗಿ ಅರ್ಪಿಸಲಾಗುತ್ತದೆ. ಇಲ್ಲಿ ಯಾವುದೇ ರೀತಿಯ 'ರಕ್ತಾಹಾರ' ಕಂಡು ಬರುವುದಿಲ್ಲ. ದೈವಗಳು ಆಹಾರವನ್ನು ಸ್ವೀಕರಿಸುವ ಈ ಸಂದರ್ಭದಲ್ಲಿ ನೆರೆದಿರುವ ಮಹಿಳೆಯರೆಲ್ಲ 'ಕುರವ' ಎಂದು ಕರೆಯಲ್ಪಡುವ ವಿಶಿಷ್ಟ ರೀತಿಯ ಕೂಗನ್ನು ಹೊರಡಿಸುತ್ತಾರೆ.

ಆಚರಣೆಯ ಕೊನೆಯ ಕ್ಷಣದಲ್ಲಿ ಭಕ್ತಾದಿಗಳೊಂದಿಗೆ ದೈವ ಮಾಧ್ಯಮದ ಮುಖಾಮುಖಿ ನಡೆಯುತ್ತದೆ. ಸಮಸ್ಯೆಗೆ ಪರಿಹಾರ ಹೇಳಲಾಗುತ್ತದೆ. ಮಕ್ಕಳಾಗದವರಿಗೆ ದೈವ ಪಾತ್ರದಾರಿಯು ಎಳನೀರು ನೀಡುತ್ತಾನೆ. ಅದನ್ನು ದಂಪತಿಗಳು ಕುಡಿಯಬೇಕು. ಮುಂದೆ ಸಂತಾನ ಲಭಿಸಿದ ಮೇಲೆ ಇಲ್ಲಿ ಬಂದು ಯಾವುದೇ ರೀತಿಯ ಸೇವೆ ನೀಡಬಹುದು. ಹೀಗೆ ನೆರೆದಿರುವ ಭಕ್ತಾದಿಗಳಿಗೆ ಅಭಯದಾನವಾಗುವುದರೊಂದಿಗೆ ಆಚರಣೆ ಕೊನೆಗೊಳ್ಳುತ್ತದೆ.

ಕರಿಪ್ಪಾಲ ನಾಗರಾಜ ಕ್ಷೇತ್ರದಲ್ಲಿ ವಾರ್ಷಿಕ ಆಚರಣೆಯ ಹಿನ್ನೆಲೆಯಲ್ಲಿ ತೆಯ್ಯಂ ನಡೆಸಲಾಗುತ್ತದೆ. ಇಲ್ಲಿ ನಡೆಯುವ ಆಚರಣೆಗಳು ಸಂಪೂರ್ಣವಾಗಿ ಜನಪದ ಹಿನ್ನೆಲೆಯಲ್ಲಿ ನಡೆಯುತ್ತವೆ. ಯಾವ ಕಾರಣದಿಂದ ಇಲ್ಲಿ ತೆಯಂ ಆಚರಣೆಗೆ ಬಂತು, ಯಾವ ಕಾಲದಿಂದ ಬಳಕೆಗೆ ಬಂತು ಎಂಬುದಕ್ಕೆ ಸ್ಪಷ್ಟ ನಿದರ್ಶನಗಳು ಕಂಡು ಬಂದಿಲ್ಲ. ಆದರೂ ಸ್ಥಳೀಯ ಸಂಸ್ಕೃತಿಯಲ್ಲಿ ಇತರ ದೈವಗಳಿಗೆ ತೆಯ್ಯಂ ವಿಶೇಷ ಸೇವೆಯಾಗಿರುವುದರಿಂದ ಇಲ್ಲಿಯೂ ಕೂಡ ಈ ಪ್ರಕಾರಗಳನ್ನು ಬಳಕೆಗೆ ತಂದಿರುವ ಸಾಧ್ಯತೆ ಇದೆ. ಇದು ಹಿಂದೆ ಒಂದು ಕುಟುಂಬಕ್ಕೆ ಸಂಬಂಧಿಸಿದಾಗಿತ್ತು. ಈಗ ಈ ಪ್ರದೇಶವು ಒಂದು ಸಮುದಾಯದ ಎಲ್ಲ ಸದಸ್ಯರನ್ನು ಪ್ರತಿನಿಧೀಕರಿಸುವುದರಿಂದ ಇಲ್ಲಿ ಕಟ್ಟುವ ತೆಯ್ಯಂಗಳು ಸಮುದಾಯಕ್ಕೆ ಸಾಮಾನ್ಯವಾದುದಾಗಿದೆ.

ಈ ಸಂದರ್ಭದಲ್ಲಿ ಕಟ್ಟುವ ವೇಷಭೂಷಣಗಳಲ್ಲಿಯೂ ವೈವಿಧ್ಯತೆ ಕಂಡು ಬರುತ್ತದೆ. ನಾಗರಾಜಾವು ಕಟ್ಟುವ ವೇಷಕ್ಕೆ ನಾಗಮುಡಿ ಎಂಬ ಹೆಸರಿದೆ. ಉಳಿದಂತೆ ವೇಷಭೂಷಣ ಮತ್ತು ಅಲಂಕಾರಗಳಲ್ಲಿ ನಾಗನ ಅನೇಕ ರೂಪಗಳನ್ನು ಕಾಣಬಹುದು. ತೆಂಗಿನ ಗರಿಯ ಮುಡಿ ಹಾಗೂ ಹಾಳೆಯ ಮುಖವಾಡಗಲ್ಲಿ ನಾಗನ ಚಿತ್ರಗಳಿರುತ್ತವೆ. ಪ್ರಕೃತಿಯಿಂದ ಲಭಿಸುವ ತೆಂಗಿನ ಗರಿ, ಬಣ್ಣಗಳು, ಹಾಳೆ ಮೊದಲಾದ ವಸ್ತುಗಳನ್ನು ಇಲ್ಲಿ ಬಳಸಲಾಗುತ್ತದೆ. ನೃತ್ಯ ಶೈಲಿಯಲ್ಲಿ ಒಂದು ರೀತಿಯ ಆವೇಗ ಕಂಡು ಬರದೆ ಸೌಮ್ಯತೆ ಇದೆ. ತೆಯ್ಯಂದ ಅಲಂಕಾರಗಳು ಅತೀ ವರ್ಣರಂಜಿತವಾಗಿದ್ದು ಭಯಾನಕತೆಯನ್ನು ಉಂಟುಮಾಡುತ್ತವೆ.

೫.೫.೬. ಬಾಕುಡರ ಸರ್ಪಕೋಲ

ಕೇರಳದ ಅತೀ ಉತ್ತರಭಾಗ ಮತ್ತು ಕರಾವಳಿ ಕರ್ನಾಟಕದ ದಕ್ಷಿಣ ಭಾಗವೇ ಕಾಸರಗೋಡು. ಇಲ್ಲಿ ಬಾಕುಡರೆಂಬ ಮೂಲ ನಿವಾಸಿಗಳಿದ್ದಾರೆ. ಬಾಕುಡರ ಕುರಿತು ವಿದ್ವಾಂಸ ವೆಂಕಟರಾಜ ಪುಣಿಂಚಿತ್ತಾಯರು ವಿಶೇಷ ಮಾಹಿತಿಯನ್ನು ಸಂಗ್ರಹಿಸಿದ್ದಾರೆ.[೯೭] ಬಾಕುಡರು ನಾಗ ಅಥವಾ ಸರ್ಪವನ್ನು ಕುಲದೈವವಾಗಿ ಆರಾಧಿಸುತ್ತಿರುವುದು ಕಂಡು ಬಂದಿದೆ. ಇವರು ಭೂತಾರಾಧನೆಯ ಪದ್ಧತಿಯಂತೆ ಸರ್ಪಾರಾಧನೆ ನಡೆಸುತ್ತಿದ್ದು, ಸರ್ಪವನ್ನು ದೈವದ ರೂಪದಲ್ಲಿ ಪೂಜಿಸುತ್ತಿರುವುದನ್ನು ಕಾಣಬಹುದು. ತಮ್ಮನ್ನು ತಾವು 'ದಿರಡೇರ್' (ದ್ರಾವಿಡರು) ಎಂದು ಕರೆದುಕೊಳ್ಳುವ ಇವರು ತಾವು ಈ ನೆಲದ ಮೂಲ ನಿವಾಸಿಗಳೆಂದು ಹೇಳಿಕೊಳ್ಳುತ್ತಾರೆ. ಕಾಸರಗೋಡು ಜಿಲ್ಲೆಯ ಇಚ್ಲಾಡಿಯಿಂದ ತಲಪ್ಪಾಡಿವರೆಗಿನ ಪ್ರದೇಶಗಳಲ್ಲಿ ವಿರಳವಾಗಿ ಕಂಡು ಬರುತ್ತಾರೆ. ಇವರು ತಮ್ಮ ಮನೆಗಳ ಸಮೀಪದಲ್ಲಿ ಪುರಾತನದಿಂದಲೂ ನಾಗಬನಗಳಲ್ಲಿ ನಾಗದೇವತೆ ಅಥವಾ ದೈವವನ್ನು ಆರಾಧಿಸಿಕೊಂಡು ಬಂದಿದ್ದಾರೆ. ಬೇಸಾಯದ ಮತ್ತು ಕೃಷಿ ಕಾರ್ಯಗಳಲ್ಲಿ ಸಹಾಯಕವಾಗಿ ದುಡಿಯುವುದರಿಂದ ಇವರನ್ನು 'ಬೈಲ ಬಾಕುಡರ್' ಎಂದು ಕೂಡ ಕರೆಯುವುದಿದೆ. ಇಚ್ಲಾಡಿಯಿಂದ ತಲಪ್ಪಾಡಿವರೆಗೆ ಬಾಕುಡರದು ಒಟ್ಟು ೧೮ ಸ್ಥಾನಗಳು ಕಂಡು ಬರುತ್ತವೆ. ಈ ಸ್ಥಾನಗಳಲ್ಲಿ ಅವರು ತಮ್ಮ ಕುಲದೇವತೆಯಾದ 'ಸರ್ಪ'ದ ಆರಾಧನೆ ನಡೆಸುತ್ತಾರೆ. ಈ ಸ್ಥಾನಗಳಲ್ಲಿರುವ ನಾಗಬನಗಳ ಬಳಿಯಲ್ಲಿ ಸರ್ಪಭೂತಾರಾಧನೆ ನಡೆಯುತ್ತದೆ. ವಿವಧ ರೀತಿಯ ಸರ್ಪಗಳನ್ನು ಕೋಲಗಳ ಮೂಲಕ ಆರಾಧಿಸುತ್ತಾರೆ.

ಆಚರಣೆಯ ಸ್ವರೂಪ

ಬಾಕುಡ ಸಮುದಾಯದವರು ವಿವಿಧ ಸರ್ಪಗಳನ್ನು ಆರಾಧಿಸುತ್ತಿದ್ದಾರೆ. ಪ್ರಧಾನವಾಗಿ ನೇಲ್ಯ ಉಲ್ಲಾಳ್ತಿ ಅಥವಾ ನಾಗಯಕ್ಷಿ, ಎಲ್ಯ ಉಲ್ಲಾಳ್ತಿ, ಸಂಕಪಾಲೆ, ಮತ್ತು ಕೃಷ್ಣಸರ್ಪ, ಈ ಸರ್ಪಗಳನ್ನು ನೇಮ ಕೋಲಗಳ ಮೂಲಕ ಆರಾಧಿಸುತ್ತಾರೆ. ನೇಲ್ಯ ಉಲ್ಲಾಳ್ತಿ ಮತ್ತು ಎಲ್ಯ ಉಲ್ಲಾಳ್ತಿ ಇವು ಅಕ್ಕ ತಂಗಿ ದೈವಗಳು, ಸಂಕಪಾಲೆ ಇದರಲ್ಲಿ ಕರಿಯ ಸಂಕಪಾಲೆ ಮತ್ತು ಬೊಳಿಯ ಸಂಕಪಾಲೆ ಎಂಬುದಾಗಿ ಎರಡು ಜಾತಿಯಾಗಿ ಆರಾಧಿಸಲಾಗುತ್ತದೆ. ಈ ಸಂಕಪಾಲನಿಗೆ ಏಳುನೂರ ಎಪ್ಪತ್ತೇಳು ಹೆಡೆಗಳೆಂದು ಪ್ರತೀತಿ ಇದೆ. ಇದರಲ್ಲಿ ಕೃಷ್ಣಸರ್ಪವು ಶ್ರೇಷ್ಠವಾದ ಮತ್ತು ಉತ್ತಮ ಜಾತಿಯ ಸರ್ಪವೆಂದು ಪ್ರತೀತಿ. ಈ ಸರ್ಪಭೂತಗಳಿಗೆ ನಲಿಕೆಯವರು ಕೋಪಾಳ ಜನಾಂಗದವರು ಕೋಲ ಕಟ್ಟುವ ವಾಡಿಕೆ ಇದೆ.

ಸರ್ಪಕೋಲ ಒಂದು ರಾತ್ರಿಯಿಡೀ ನಡೆಯುವ ಕಾರ್ಯಕ್ರಮ. ಉಳಿದೆಲ್ಲ ಭೂತಗಳಿಗೆ ಕೋಲ ನಡೆಯುವಂತೆ ಇಲ್ಲಿಯೂ ವೇಷ ತೊಟ್ಟುಕೊಳ್ಳಲಾಗುತ್ತದೆ. ಕೋಲದ ಮೂಲಕ ಆರಾಧಿಸಿಕೊಳ್ಳುವ ಸಂಕಪಾಲ ದೈವಕ್ಕೆ ಎಪ್ಪತ್ತೇಳು ಹೆಡೆಗಳೆಂದು ಪ್ರತೀತಿ ಇದೆ. ಅದಕ್ಕಾಗಿ ಈ ಭೂತಕ್ಕೆ ಕಟ್ಟುವ ಅಣಿ ಅಥವಾ ಮುಡಿಯನ್ನು ಸಹ ದೊಡ್ಡದಾಗಿ ಶಂಕು ಆಕಾರದಲ್ಲಿ ನಿರ್ಮಿಸಲಾಗುತ್ತದೆ. ಅಣಿಯ ತುಂಬಾ ಹಾಳೆಯಿಂದ ನಿರ್ಮಿಸಿರುವ ಸರ್ಪದ ಹೆಡೆಗಳನ್ನು ಅಣಿಗೆ ಬಿಗಿದು ಅದರಿಂದಲೇ ಅಲಂಕಾರ ಮಾಡಿರುತ್ತಾರೆ. ಹೆಡೆಯ ಆಕಾರದಲ್ಲಿ ಕತ್ತರಿಸಿರುವ ಹಾಳೆಯ ಮೇಲೆ ಹಲವಾರು ಹೆಡೆಯ ರೂಪಗಳನ್ನು ರಚಿಸಲಾಗುತ್ತದೆ.

ಈ ರೀತಿ ನಿರ್ಮಿಸಿರುವ ಅಣೆ ಅಥವಾ ಮುಡಿಯು ಅತ್ಯಂತ ಭಾರ ಮತ್ತು ಅತೀ ಎತ್ತರವಾಗಿರುವುದರಿಂದ ಇದನ್ನು ಭೂತ ಪಾತ್ರಿಯೊಂದಿಗೆ ಸಹಾಯಕರು ಆಧರಿಸಿ ಹಿಡಿದುಕೊಂಡಿರುತ್ತಾರೆ. ಭೂತ ಮುಂದಕ್ಕೆ ನಡೆದಾಗ ಮುಂದಕ್ಕೂ ಹಿಂದಕ್ಕೂ ನಡೆದಾಗ ಹಿಂದಕ್ಕೂ ಚಲನೆಗೆ ಅನುಗುಣವಾಗಿ ಮಾಡಿಯನ್ನು ಹೊತ್ತುಕೊಂಡು ತಿರುಗುತ್ತಾರೆ.

ಕೋಲದ ನಡುವಿನ ವಿರಾಮದ ಸಂದರ್ಭದಲ್ಲಿ ಕೋಡಂಗಿ ಅಥವಾ ಕುಂಡಂಗೆರ್ ಎಂಬ ಪಾತ್ರವನ್ನು ನಲಿಕೆಯ ಹೆಂಗಸು ಅಭಿನಯಿಸುವುದರ ಮೂಲಕ ನೆರೆದಿರುವವರಿಗೆ ಮನೋರಂಜನೆಯನ್ನು ನೀಡುತ್ತಾಳೆ. ಈ ಪ್ರಕಾರವು ತುಳುನಾಡಿನ ಹೆಚ್ಚಿನೆಲ್ಲ ಭೂತಕೋಲಗಳಲ್ಲಿ ಕಂಡು ಬಂದರೆ ಅಲ್ಲೆಲ್ಲ ಪುರುಷ ಪಾತ್ರದಾರಿಗಳು ಅಥವಾ ಎಳೆಯ ಮಕ್ಕಳು ಮನೋರಂಜನೆಯನ್ನು ನೀಡುತ್ತಾರೆ.

ಕೋಲದ ಕೊನೆಯ ಹಂತವಾಗಿ ಕೃಷ್ಣಸರ್ಪನಿಗೆ ಕೋಲ ನಡೆಯುತ್ತದೆ. ಕೃಷ್ಣಸರ್ಪದ ಪಾತ್ರದಾರಿಯು ಸರ್ಪದ ಹೆಡೆಯನ್ನು ಹೋಲುವ ಹಾಳೆಯಿಂದ ತಯಾರಿಸಿರುವ ಮೂರು ಹೆಡೆಗಳನ್ನು ತಲೆಗೆ ಧರಿಸಿರುತ್ತಾನೆ. ಉಳಿದಂತೆ ಕಣ್ಣಿನ ಸುತ್ತಲೂ ಕಪ್ಪು ಬಣ್ಣವನ್ನು ಮತ್ತು ಮುಖಕ್ಕೆ ಹಳದಿ ಬಣ್ಣವನ್ನು ಲೇಪಿಸಿಕೊಂಡಿರುತ್ತಾನೆ. ಉಳಿದಂತೆ ಕಾಲ್ಗೆ ಗಗ್ಗರ ಇತ್ಯಾದಿಗಳನ್ನು ತೊಟ್ಟುಕೊಂಡು ನೋಡುಗರಿಗೆ ವೇಷವು ಅಲಂಕಾರದ ದೃಷ್ಟಿಯಿಂದ ಅದ್ಭುತವಾಗಿ ಕಂಡು ಬರುತ್ತದೆ. ಕೋಲದ ಸಂದರ್ಭದಲ್ಲಿ ದೈವದ ಪಾತ್ರದಾರಿಯು ಆವೇಶದ ಹಿನ್ನೆಲೆಯಲ್ಲಿ ಕೆಲವು ಅದ್ಭುತಗಳನ್ನು ಪ್ರದರ್ಶಿಸುತ್ತಾನೆ. ಸಮೀಪದ ಗದ್ದೆಗೆ ಬಂದು ಅಲ್ಲಿ ಹಾವಿನಂತೆ ಹಲವಾರು ಹಾವಭಾವಗಳನ್ನು ಪ್ರದರ್ಶಿಸುತ್ತಾನೆ. ಮೊದಲೇ ಗದ್ದೆಯಲ್ಲಿರುವ ಕಸ ಕಡ್ಡಿಗಳನ್ನೆಲ್ಲ ತೆರೆದು ಕೃಷ್ಣಸರ್ಪ ವೇಷದಾರಿಗೆ ಹೋಗಲು ಪ್ರತ್ಯೇಕ ದಾರಿ ನಿರ್ಮಿಸಲಾಗಿರುತ್ತದೆ. ಇವೆಲ್ಲವೂ ಸಾಂಕೇತಿಕವಾಗಿ ನಡೆಸುವ ಕ್ರಿಯೆಗಳಾಗಿವೆ. ಗದ್ದೆಯ ನಡುವೆ ಮೊದಲೇ ಮಾವಿನ ಎಲೆಗಳಿಂದ ತುಂಬಿರುವ ಕೊಂಬೆಗಳನ್ನು ಹುಗಿದು, ಕೃತಕ ಮರದ ಕಲ್ಪನೆಯನ್ನು ಉಂಟುಮಾಡಲಾಗುತ್ತದೆ. ಕೃಷ್ಣಸರ್ಪದ ಪಾತ್ರದಾರಿಯು ಈ ಹೊಲದಲ್ಲಿ ಮಲಗಿ ಹಾವಿನಂತೆ ಹರಿದಾಡುತ್ತಾ ಹೊಟ್ಟೆಯೆಳೆದುಕೊಂಡು ನೆಟ್ಟಿರುವ ಈ ಕೃತಕ ಮಾವಿನ ಮರದ ಬಳಿ ಬರುತ್ತಾನೆ. ಆಗ ಬ್ರಾಹ್ಮಣ ಮಂತ್ರವಾದಿಯನ್ನು ಸಂಕೇತಿಸುವ ಇನ್ನೊಬ್ಬ ಪಾತ್ರದಾರಿಯು ಬಂದು ಮಾವಿನ ಸೊಪ್ಪನ್ನು ಸರ್ಪ ವೇಷದಾರಿಯು ಮೇಲೆ ಎಸೆಯುತ್ತಾನೆ. ಆಗ ಸರ್ಪ ವೇಶದಾರಿಯು ಆವೇಶಗೊಂಡಂತೆ ಕೋಪದಿಂದ ಬುಸುಗುಡುತ್ತ ಹೆಡೆ ಎತ್ತಿದಂತೆ ನಟಿಸಿ, ಅಲ್ಲಿ ನೆಟ್ಟಿರುವ ಮಾವಿನ ಸೊಪ್ಪಿನ ಮೇಲೆ ಮಲಗುತ್ತದೆ. ನಂತರ ಮಂತ್ರವಾದಿಯು ಸರ್ಪವನ್ನು ಸ್ವಾದೀನ ಪಡಿಸಿ ಶಾಂತಗೊಳಿಸಿದಂತೆ ಕಂಡು ಬರುತ್ತದೆ.

ಬಾಕುಡರ ಸರ್ಪಾರಾಧನೆ ತುಂಬ ವಿಶಿಷ್ಟವಾದುದು. ಬಾಕುಡರಲ್ಲಿ ಸರ್ಪಾರಾಧನೆ ಪ್ರಚಲಿತಕ್ಕೆ ಬಂದಿರುವ ಹಿನ್ನೆಲೆಗೆ ಸಂಬಂಧಿಸಿದಂತೆ ವಿದ್ವಾಂಸರುಗಳು ಐತಿಹ್ಯವೊಂದನ್ನು ಹೀಗೆ ವಿವರಿಸಿದ್ದಾರೆ. ಅಣ್ಣಪ್ಪ ರಾಜ್ಯದಲ್ಲಿ ನಾರಾಯಣ ದೇವರು ಇದ್ದರು. ಅವರ ಹೆಂಡತಿ ಮುಂಗುಡೆ ದೆಯ್ಯಾರ್, ಆ ದಂಪತಿಗಳಿಗೆ ಬಹುಕಾಲ ಮಕ್ಕಳಾಗಲಿಲ್ಲ, ಮುಂಗುಡೆ ದೆಯ್ಯರು ''ನನ್ನಂಥ ಹೆಂಗಸರು ತಿಂಗಳು ತಿಂಗಳು ಮೀಯುತ್ತಾರೆ. ಬಸುರಿಯರಾಗಿ ವರ್ಷದೊಳಗೆ ಹೆರುತ್ತಾರೆ. ನಾನು ಮೀಯುವುದು ಮೀನುಮಿಂದ ಹಾಗೆ ಆಯ್ತಲ್ಲ'' ಎಂದು ದುಃಖಿಸುತ್ತಾಳೆ. ಆಕೆಯ ದುಃಖ ದೇವರಿಗೆ ಕೇಳಿಸಿರಬೇಕು. ಆಗಲೇ ಆಕೆ ಹೊರಗು (ರಜಸ್ವಲೆ) ಯಾದಳು. ನಾಲ್ಕನೇ ದಿನ ಎಣ್ಣೆ, ಅರಸಿನ ಹುಡಿ,

ಸೀಗೆ ಹುಡಿ, ತೆಕ್ಕೊಂಡು ಹೊಳೆಗೆ ಮೀಯಲು ಹೋದಳು. ಅಲ್ಲಿ ಕಲ್ಲಿನ ಮೇಲೆ 'ಅಯ್ಯೋ' ಎಂದು ಮತ್ತೆ ಮರುಗಿದಳು. "ಮೀನುಗಳಿಗಾದರೂ ಮರಿಗಳಾಗುತ್ತವೆ. ನನಗೆ ಮಕ್ಕಳಾಗಲಿಲ್ಲ", ಎಂದು ದುಃಖಿಸುತ್ತಾಳೆ. ಸ್ವಲ್ಪ ಅಕ್ಕಿ, ವೀಳ್ಯದೆಲೆ, ಅಕ್ಕಿ, ಅಡಿಕೆಗಳನ್ನು ಒಂದು ಕೊಡಿಯೆಲೆ (ಬಾಳೆಎಲೆ) ಯಲ್ಲಿಟ್ಟು ಹರಕೆಯಾಗಿ ಸಂಕಲ್ಪಿಸಿ ನೀರ ಮೇಲೆ ತೇಲಿ ಬಿಡುತ್ತಾಳೆ. ಆಕೆಗೇನೋ ಶುಭಲಕ್ಷಣ ಕಂಡಿತು. ಸಂತೋಷದಿಂದ ಮಿಂದು ಬರುತ್ತಾಳೆ. ಮುಂದಿನ ತಿಂಗಳು ಆಕೆ ಹೊರಗು (ಮುಟ್ಟು) ಆಗಲಿಲ್ಲ. ಬಸುರಿಯಾದ ಸುದ್ದಿ ಊರು ಹರಡಿತು. ಏಳನೇಯ ತಿಂಗಳಲ್ಲಿ ಸೊಸೆಗೆ ಹೊಟ್ಟೆಯ ಬಯಕೆ, ಬಾಯಿಯ ಆಸೆ ತೀರಿಸಬೇಕೆಂದು ಅತ್ತೆ ಭಾವಿಸಿದಳು. ಕಡುಬು, ಸಮ್ಮಾನ, ಸಿಹಿ, ಹೊದಳು ಸಮ್ಮಾನಗಳಾದವು. ಹತ್ತನೆ ತಿಂಗಳಲ್ಲಿ ಆಕೆಗೆ ಬೇನೆ ಶುರುವಾಯಿತು. ಒಂದು ಬೇನೆ ಬಂದಾಗ ಒಂದು ಮಾಲೆ ಹಾವಿನ ತತ್ತಿಗಳು, ಎರಡನೇ ಬೇನೆ ಬಂದಾಗ ಎರಡುಮಾಲೆ ತತ್ತಿಗಳು, ಮೂರನೇ ಬೇನೆ ಬಂದಾಗ ಮೂರುಮಾಲೆ ತತ್ತಿಗಳು, ಹೀಗೆಯೇ ತತ್ತಿಗಳನ್ನಿಡುತ್ತಾ ಹೋದಳು. ಏಳನೇಯ ಬೇನೆಯಲ್ಲಿ ಎಪ್ಪತ್ತೇಳು ಕೋಟಿ ಹೆಡೆಯುಳ್ಳ ಕರಿಯ ಸಂಕಪಾಳೆ (ಕಾಳಿಂಗ ಸರ್ಪ) ಹುಟ್ಟುತ್ತದೆ. ನಾರಾಯಣ ದೇವರು ಕರಿಯ ಸಂಕಪಾಲನನ್ನು ಕರೆದು 'ನೀನು ಭೂಲೋಕ ಪಾತಾಳ ಲೋಕಗಳ ಅಧಿಪತಿಯಾಗಿ ನಾಗರಾಜನೆಂಬ ಖ್ಯಾತಿಯಿಂದ ಜೀವಿಸು' ಎಂದು ಹರಸುತ್ತಾರೆ. ಒಂದುದಿನ ಕರಿಯ ಸಂಕಪಾಲನು ಪಾತಾಳದಿಂದ ಮೇಲಕ್ಕೆ ತಲೆ ಎತ್ತಿ 'ನನಗೆ ಬೇಕಾದ ವ್ಯಕ್ತಿ ಎಲ್ಲಿರಬಹುದು' ಎಂದು ನೋಡುತ್ತಾನೆ. ಅವನಿಗೆ ಕೊಡಂಚಿರ್‌ನಲ್ಲಿರುವ 'ಪಳ್ಳಿ ತೋಕುರು ಬಾಕುಡ್ತಿ' ಕಾಣಿಸುತ್ತಾಳೆ. (ಆಕೆಯ ಹುಟ್ಟೂರು ಸಾರ್ಯ, ನೇಲ್ಯ ಸಂಕರಮೆ ಮತ್ತು ಎಲ್ಯ ಸಂಕರಮೆ ಎಂಬವರು ಆಕೆಯ ಸಹೋದರರು).

ಕಾಳಿಂಗ ಸರ್ಪ ಅಥವಾ ಕರಿಯ ಸಂಕಪಾಳನು ಹೆದರಬೇಡ ನನ್ನನ್ನು ಆರಾಧನೆ ಮಾಡು ಎನ್ನುತ್ತಾನೆ. ಹಾಗೆಯೇ ಆಕೆ 'ಕೊಡೆಂಚಿರ್' ನಲ್ಲಿ ಸ್ಥಾನ ಕಟ್ಟಿಸಿ ಕಾಳಿಂಗ ಸರ್ಪನನ್ನು ಆರಾಧನೆ ಮಾಡುತ್ತಾಳೆ. ಅಂದಿನಿಂದ ಬಾಕುಡರಲ್ಲಿ ಸರ್ಪಾರಾಧನೆ ರೂಢಿಗೆ ಬಂತು. ಎಂಬುದಾಗಿ ಪ್ರಚಲಿತ ಐತಿಹ್ಯವನ್ನು ವಿದ್ವಾಂಸರುಗಳು ಉಲ್ಲೇಖಿಸಿದ್ದಾರೆ.[೨೦]

ಐತಿಹ್ಯಗಳು ಈ ರೀತಿಯದ್ದಾದ ಹಿನ್ನೆಲೆಯೊಂದಿಗೆ ಬಾಕುಡರಲ್ಲಿ ಸರ್ಪಾರಾಧನೆ ಮತ್ತು ಸರ್ಪಕೋಲ ಪ್ರಚಲಿತಕ್ಕೆ ಬಂತು ಎಂದು ಸೂಚಿಸಿದರೆ, ಸಾಮಾಜಿಕವಾದ ಜಾತೀಯತೆಯ ಅಂತರವೇ ಮತ್ತು ಪ್ರಾದೇಶಿಕವಾದ ಸಾಂಸ್ಕೃತಿಕ ಭಿನ್ನತೆಯೂ ಅವರಲ್ಲಿ ಈ ಆಚರಣೆಗೆ ಪ್ರೇರಣೆ ನೀಡಿರಬೇಕು. ಬಾಕುಡರು ಸರ್ಪವನ್ನು ಕೋಲದ ಮೂಲಕ ಆರಾಧಿಸುವಂತೆ ತುಳುನಾಡಿನ ಆದಿಮೂಲ ದೈವವೆಂದು ಭಾವಿಸಲಾಗಿರುವ 'ನಾಗಬೆರ್ಮರ್'ನ್ನು ಕೂಡ ಆರಾಧಿಸುತ್ತಿರುವುದು ಕಂಡು ಬಂದಿದೆ. ಬಾಕುಡ ಹೆಂಗಸರು 'ಬೆರ್ಮೆರೆ ಸೇವೆ' ಎಂಬ ಸೇವಾ ರೂಪದ ಹರಕೆಯನ್ನು ಸಲ್ಲಿಸುತ್ತಿರುವುದು ಕಂಡು ಬಂದಿದೆ. ಇದರಿಂದ ಬಾಕುಡರು ಕರಾವಳಿಯ ಪುರಾತನವಾದ ನಾಗಾರಾಧಕರು ಎಂದು ಭಾವಿಸಬಹುದಾಗಿದೆ.

೫.೫.೭. ಕೇರಳದ ನಾಗಾರಾಧನೆಯ ಜನಪದ ನಂಬಿಕೆಗಳು

ಕೇರಳದಾದ್ಯಂತ ನಾಗ ಅಥವಾ ಸರ್ಪವನ್ನು ಸಾಮೂಹಿಕ ನೆಲೆಯಲ್ಲಿ ಮತ್ತು ಸಾಮುದಾಯಿಕವಾಗಿಯೂ ಪೂಜನೀಯ ಸ್ಥಾನದಲ್ಲಿ ಗೌರವಿಸಲಾಗುತ್ತದೆ. ಜೀವಂತ ಸರ್ಪವನ್ನು ಎಲ್ಲೂ, ಯಾರೂ ಕೊಲ್ಲುವ ಸಂಪ್ರದಾಯವಿಲ್ಲ. ಆ ರೀತಿ ಕೊಂದಲ್ಲಿ ಮುಂದೆ ಸರ್ಪದೋಷ ಪ್ರಾಪ್ತಿಯಾಗಿ ಇದರಿಂದ ಸಂತಾನ ಹೀನತೆ,

ದೃಷ್ಟಿದೋಷ, ಬುದ್ಧಿಮಾಂದ್ಯ ಮಕ್ಕಳ ಜನನ, ಕುಷ್ಠರೋಗ, ವ್ಯವಹಾರದಲ್ಲಿ ಹಾನಿ, ಸಂಪತ್ತಿನ ನಾಶ, ದುರ್ಬುದ್ಧಿಯ ಮಕ್ಕಳ ಜನನ ಇತ್ಯಾದಿಗಳು ಉಂಟಾಗುತ್ತದೆಂಬ ನಂಬಿಕೆ ಜನಮಾನಸದಲ್ಲಿ ಪ್ರಚಲಿತದಲ್ಲಿದೆ. ಈ ಹಿನ್ನೆಲೆಯಲ್ಲಿ ಸರ್ಪವನ್ನು ಗೌರವಿಸಲಾಗುತ್ತದೆ. ಆದಕಾರಣವೇ ನಾಗ ಬನಗಳನ್ನು, ಸರ್ಪಗುಡಿಗಳನ್ನು ನಾಶಮಾಡಲು, ಹುತ್ತವನ್ನು ಹಾಳುಗೆಡವಲು ಜನತೆ ಹಿಂಜರಿಯುತ್ತಾರೆ. ಈ ಹಿನ್ನೆಲೆಯಲ್ಲಿ ಮೃತ ಸರ್ಪವನ್ನು ಕಂಡಾಗ ಅದನ್ನು ಹಾಗೆಯೇ ಬಿಟ್ಟು ಹೋಗಬಾರದೆಂಬ ನಂಬಿಕೆಯಿಂದೆ. ವೈದಿಕರ ಮುಖೇನ ಅದಕ್ಕೆ ವೇದೋಕ್ತ ರೀತಿಯಲ್ಲಿ 'ದಹನ' ಕ್ರಿಯೆ ಮತ್ತು ಮುಂದೆ 'ಸಂಸ್ಕಾರ' ಕ್ರಿಯೆಯನ್ನು ನಡೆಸಬೇಕೆಂಬ ನಂಬಿಕೆಯಿದೆ. ಒಂದು ವೇಳೆ ಬಿಟ್ಟು ಹೋದಲ್ಲಿ ಮುಂದೆ ಸರ್ಪದೋಷ ಪ್ರಾಪ್ತಿಯಾಗುತ್ತದೆಂಬ ನಂಬಿಕೆಯಿಂದೆ.

ಜಾತಕದೋಷ, ಮತ್ತು ಕೌಟುಂಬಿಕವಾಗಿ ಬಂದಿರುವ ಸರ್ಪದೋಷದಿಂದಾಗಿ 'ಸ್ವಪ್ನ' ದಲ್ಲಿ ಸರ್ಪ ಬಂದು ಕಾಡುತ್ತದೆಂಬ ನಂಬಿಕೆಯಿದೆ. ಇವೆಲ್ಲವೂ ಸರ್ಪ ಪೂಜನೆಯಿಂದ ಪರಿಹಾರವಾಗುತ್ತದೆಂಬ ಭಾವನೆಯಿದೆ.

ಸರ್ಪ ಅಥವಾ ನಾಗ ಯಾವುದೇ ಒಂದು ನಿರ್ದಿಷ್ಟವಾದ ಜಾತಿಗೆ ಸಂಬಂಧಿಸಿದ ದೇವರು ಅಥವಾ ದೈವವಲ್ಲ, ಅದು ಪ್ರಾದೇಶಿಕವಾದ ಇಡೀಯ ಸಮಾಜಕ್ಕೆ ಸಂಬಂಧಿಸಿದ್ದುದು ಎಂದು ಭಾವಿಸಲಾಗಿದೆ. ಆದ್ದರಿಂದಲೇ ಅದಕ್ಕೆ ತೊಂದರೆ ಉಂಟಾದಾಗ ಉಪಟಳ ನೀಡಿದ ಯಾವ ವ್ಯಕ್ತಿಗೂ ತೊಂದರೆ ತಪ್ಪಿದಲ್ಲ. ಇದು ಪ್ರಚಲಿತದಲ್ಲಿರುವ ಒಂದು ಪ್ರದೇಶದ ಸಮುದಾಯದ ನಂಬಿಕೆ, ಸರ್ಪವನ್ನು ಸಂಪತ್ತಿನ, ಸಂತಾನದ ಅಧಿದೇವತೆ ಎಂದು ಭಾವಿಸಲಾಗುತ್ತದೆ. ಸಂತಾನ ಹೀನರು ನಾಗಾಲಯಗಳಲ್ಲಿ ವಿಶೇಷ ಸೇವೆಗಳನ್ನು ನಡೆಸುವುದರಿಂದ ಮುಂದೆ ಸಂತಾನ ಭಾಗ್ಯ ಲಭಿಸುವುದೆಂಬ ನಂಬಿಕೆಯಿದೆ. ಕೃಷಿ ಸಂಸ್ಕೃತಿಯ ಹಿನ್ನೆಲೆಯಲ್ಲಿಯೂ ನಾಗನನ್ನು 'ಫಲೋತ್ಪತ್ತಿ' ಯ ಸಂಕೇತವಾಗಿ ಪೂಜಿಸುತ್ತಿರುವದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಕೃಷಿಕರು ತಾವು ಬೆಳೆದಿರುವ ವಸ್ತುಗಳಲ್ಲಿ ಸ್ವಲ್ಪ ಭಾಗವನ್ನು ವರ್ಷಕ್ಕೊಂದು ಬಾರಿ ಸಮೀಪದ ನಾಗಾಲಯಗಳಿಗೆ ಒಪ್ಪಿಸುವ ಸಂಪ್ರದಾಯವಿದೆ.

ಕೇರಳದ ನಾಗಾರಾಧನ ಮನೋಭಾವವು ಹಲವು ರಂಗಗಳಲ್ಲಿ ಕಂಡು ಬರುತ್ತದೆ. ಜನಪದ ಆರಾಧನೆಯ ವೇಷಭೂಷಣಗಳಲ್ಲಿ ಶಿಲ್ಪಕಲೆ, ವಸ್ತು ನಿರ್ಮಾಣ, ಚಿತ್ರಕಲೆ, ರಂಗಕಲೆ, ಮುಂತಾದವುಗಳಲ್ಲಿ ಕಂಡು ಬರುತ್ತದೆ. ಈ ಮನೋಭಾವನೆಯಿಂದಲೇ ಸ್ತ್ರೀಯರು 'ನಾಗತಾಲಿ' (ಸರ್ಪಹೆಡೆ ತಾಳಿ) ಎಂಬ ಆಬರಣವನ್ನು ಕುತ್ತಿಗೆಯಲ್ಲಿ ಧರಿಸಿಕೊಳ್ಳುತ್ತಾರೆ. ಕೇವಲ ನಾಯರ್ ಸ್ತ್ರೀಯರು ಮಾತ್ರವಲ್ಲದೆ ಬ್ರಾಹ್ಮಣ ಸ್ತ್ರೀಯರು, ಹಾಗೂ ಇತರ ಜಾತಿಯ ಸ್ತ್ರೀಯರು ಕೂಡ ನಾಗತಾಲಿ ಧರಿಸಿಕೊಳ್ಳುತ್ತಾರೆ. ನಾಗಹೆಡೆಯ ಉಂಗುರವು ಕೂಡ ಪ್ರಚಾರದಲ್ಲಿದೆ. ವಿಷಹಾರ ಚಿಕಿತ್ಸೆಯಲ್ಲಿ ಇದರ ಬಳಕೆಯಾಗುತ್ತದೆಂಬ ಜನಪದ ನಂಬಿಕೆಯಿದೆ.

'ಆಯಿಲ್ಯ' ಅಥವಾ 'ಆಶ್ಲೇಷ' ನಕ್ಷತ್ರವು ಸರ್ಪಪೂಜನೆಗೆ ಶ್ರೇಷ್ಟ ದಿನವೆಂಬ ಭಾವನೆಯಿದೆ. ಆಯಿಲ್ಯ ವ್ರತ ಹಿಡಿದು ನಾಗಾರಾಧನೆ ನಡೆಸಿದರೆ ಸಂತಾನ ಪ್ರಾಪ್ತಿ ಉಂಟಾಗುವುದೆಂಬುದು ಜನರ ವಿಶ್ವಾಸ, ಕೇರಳದ ಕೆಲವು ನಾಗಾಲಯಗಳಲ್ಲಿ 'ಮೊಟ್ಟೆ ಹರಕೆ' ಒಂದು ವಿಶೇಷ ನಂಬಿಕೆಯಾಗಿದೆ. ಕೋಳಿಯ ಮೊಟ್ಟೆಯನ್ನು ದೇವಾಲಯದ ಹೊರ ಅಂಗಣದಲ್ಲಿರುವ ಚಿತ್ರ ಕೂಟದಲ್ಲಿ ಇಡಲಾಗುತ್ತದೆ. ಮತ್ತೆ ಇದೇ ಮೊಟ್ಟೆಗಳನ್ನು ತೆಗೆದು ಉಳಿದ ಭಕ್ತಾದಿಗಳಿಗೆ ನೀಡಲಾಗುತ್ತದೆ.

ಮಕ್ಕಳಾಗದ ದಂಪತಿಗಳು ನದೀ ಅಥವಾ ಕೆರೆಯ ಸಮೀಪದಲ್ಲಿರುವ ಅಶ್ವತ್ಥ ಮರದ ಬುಡದಲ್ಲಿ ನಾಗ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ಆರಾಧಿಸುತ್ತಾರೆ. ಇದರಿಂದ ಮುಂದೆ ಅವರಿಗೆ ಮಕ್ಕಳಾಗುತ್ತದೆಂಬ ಪ್ರತೀತಿ ಇದೆ.

ಈ ರೀತಿಯಾಗಿ ನಾಗನ ಅನುಗ್ರಹದಿಂದ ಜನಿಸಿದ ಮಕ್ಕಳಿಗೆ ನಾಗ ಸಂಬಂಧಿಯಾದ ಹೆಸರನ್ನಿಡುವುದು ವಾಡಿಕೆಯಾಗಿದೆ.

ಕೆಲವು ನಾಗ ಸಂಬಂಧಿ ಕೌಟುಂಬಿಕ ದೇವಾಲಯಗಳಲ್ಲಿ ಸರ್ಪದೋಷದಿಂದ ಬರಬಹುದಾದ ಚರ್ಮವ್ಯಾಧಿಯ ನಿವಾರಣೆಗೆ ಎಣ್ಣೆಯನ್ನು ನೀಡಲಾಗುತ್ತದೆ. ಇದನ್ನು ಬೇರೆ ಎಣ್ಣೆಯೊಂದಿಗೆ ಬೆರೆಸಿ ಉಪಯೋಗಿಸುವುದರಿಂದ ಚರ್ಮವ್ಯಾಧಿ ನಿವಾರಣೆಯಾಗುತ್ತದೆಂಬ ಭಾವನೆಯಿದೆ. ಅಲ್ಲದೆ ಸರ್ಪದೇವಾಲಯದ ಸುತ್ತ ಮುತ್ತಲಿನ ಪರಿಸರದಲ್ಲಿ ಸರ್ಪಗಳು ಕಚ್ಚುವುದಿಲ್ಲವೆಂಬ ಪ್ರತೀತಿ ಇದೆ. ಒಂದು ವೇಳೆ ಕಚ್ಚಿದರೂ ಮನುಷ್ಯರಿಗೆ ಅದರಿಂದ ಯಾವುದೇ ರೀತಿಯ ತೊಂದರೆ ಉಂಟಾಗದೆ ಕಚ್ಚಿದ ಹಾವುಗಳಿಗೇ ವ್ಯತಿರಿಕ್ತ ಪರಿಣಾಮ ಉಂಟಾಗುವುದೆಂದು ನಂಬಿಕೆಯಿದೆ. ಗಿಡ ಮೂಲಿಕೆಗಳಿಂದ, ಮತ್ತು ಮಾಂತ್ರಿಕ, ತಾಂತ್ರಿಕ ರೀತಿಯಿಂದ ಸರ್ಪ ವಿಷ ನಿವಾರಣೆ ಮಾಡುವ ಜನಪದ ವೈದ್ಯರು ಮತ್ತು ಸರ್ಪ ಆರಾಧನೆ ಮಾಡುವ ಕೆಲವು ಸಮುದಾಯಗಳು ಕೇರಳದ ಕೆಲವು ಭಾಗಗಳಲ್ಲಿ ಕಂಡು ಬರುತ್ತಾರೆ.

ಕೆಲವು ಕೌಟುಂಬಿಕ ನಾಗದೇವಾಲಯಗಳಲ್ಲಿ ಪ್ರಮುಖವಾಗಿ ಮಣ್ಣಾರ ಶಾಲ ಪಾಂಬು ಮೇಕಾಡ್ ಮೊದಲಾದೆಡೆಗಳಲ್ಲಿ, ಪುರಾತನದಲ್ಲಿ ಹಾವುಗಳು ಮನೆಯಲ್ಲಿಯೇ ವಾಸವಾಗಿದ್ದವೆಂದು, ಅವು ಮನೆಯ ಯಜಮಾನನ ಆಜ್ಞೆಯನ್ನು ಪಾಲಿಸುತ್ತಿದ್ದವೆಂದು ಪ್ರತೀತಿ ಇದೆ. ಆದರೆ ಈಗ ಪ್ರಸ್ತುತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಂಥ ಪ್ರಕರಣಗಳು ಎಲ್ಲೂ ಪತ್ತೆಯಾಗಿಲ್ಲ. ಒಟ್ಟಿನಲ್ಲಿ ಕೇರಳದಾದ್ಯಂತ ನಾಗ ಅಥವಾ ಸರ್ಪನಿಗೆ ಪೂಜನೀಯ ಮತ್ತು ಗೌರವದ ಸ್ಥಾನ ಇರುವುದು ಕಂಡು ಬಂದಿದೆ.

ಟಿಪ್ಪಣಿಗಳು

೦೧. ಕೊಟ್ಟಾರತ್ತಿಲ್ ಸಂಗುಣ್ಣಿ, ೧೯೮೮, ಐತಿಹ್ಯ ಮಾಲ

೦೨. ವಿಷ್ಣು ನಂಬೂದಿರಿ, ಎಂ.ವಿ. ೧೯೭೭ 'ಪುಳ್ಳುವ ಪಾಟುಂ ನಾಗಾರಾಧನೆಯುಂ' ಪುಟ-೩೦

೦೩. ಅದೇ ಪುಟ-೩೧.

೦೪. Krishan Iyear, L,A, 1970. Socieal History of Kerala. vol-11. The Dravidians. page-117.

೦೫. ವಿಷ್ಣು ನಂಬೂದಿರಿ, ೧೯೭೭, ಪೂರ್ವೋಕ್ತ ಪುಟ-೩೨.

೦೬. Kurup, K.K.N. 1977 Aryan and Dravidians Elliments in Mallabar Folklcre, page-44.

೦೭. Subramanya Namoodiri, 1991, The great Mother, page-11.

೦೮. ಅಂಬಲ ಪುರ ಶಾರದಮ್ಮ, ೨೦೦೩, ಶ್ರೀ ಮದ್ ನಾಗಪುರಾಣಂ, ಪುಟ-೧೪೨.

೦೯. ಗೋಪಾಲ ಭಟ್ಟ ಕೆ.ವಿ. ಅಶೋಕ ಭಟ್ಟ ೨೦೦೩, ನಾಗದೇವರ ಚರಿತ್ರೆ ಮತ್ತು ಪ್ರಬಂಧಗಳ ಸಂಕಲನ ಪುಟ-೨೭.

೧೦. ಡಾ. ಪದ್ಮನಾಭನ್, ಎಸ್. ೨೦೦೧, ನಾಗಾವಜಿ ಪದುಮ್ ನಾಗರಾಜರಾಲಯಂ

೧೧. Iyear, L.K.A. (1909) Re Print 1981,The Tribes and Caustes of cochin, I, page-145-154

೧೨. Thruston, (1909) Re Print, 1975, caustes and Tribes of Southern India, VI, (page-226-235)

೧೩. Singh K.S. 2002, People of India, Kerala, xxvii, (page-1279)

೧೪. Singh K.S. 2002, People of India (1280)

೧೫. ಡಾ.ವೆಳ್ಳಾಯಿನಿ ಅರ್ಜುನನ್ (ಸಂ) ೧೯೮೧, ಸರ್ವ ವಿಜ್ಞಾನ ಕೋಶ, ಸಂ-vi, ಪುಟ-೭೪೨.

೧೬. Gopal Panikkar, 1983, malabar and its Folk, page-146.

೧೭. ವೆಂಕಟರಾಜ ಪುಣಿಂಚಿತ್ತಾಯ, ೧೯೯೮, ತುಳು ನಡೆನುಡಿ,

೧೮. ಅದೇ ಪುಟ-೬೪.

****

ಅಧ್ಯಾಯ - ೬

ಕರಾವಳಿ ಕರ್ನಾಟಕದ ನಾಗಾರಾಧನೆಯ ಹಿನ್ನೆಲೆ ಮತ್ತು ಸ್ವರೂಪ

ಕರಾವಳಿ ಕರ್ನಾಟಕದ ನಾಗಾರಾಧನೆಯ ಹಿನ್ನೆಲೆ ಮತ್ತು ಸ್ವರೂಪ

ಪ್ರಸ್ತುತ ಅಧ್ಯಯನದಲ್ಲಿ ಕರಾವಳಿ ಕರ್ನಾಟಕದ ಪ್ರಮುಖ ಅಂಗವಾಗಿರುವ ತುಳುನಾಡನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ. ಕರಾವಳಿ ಕರ್ನಾಟಕ ಎಂದು ಸೂಚಿಸುವಾಗ ಕನ್ನಡದ ಸಮಗ್ರ ಕರಾವಳಿಯ ತೀರ ಪ್ರದೇಶವು ಒಳಪಡುತ್ತದೆ. ಆದ್ದರಿಂದ ಅಧ್ಯಯನಕ್ಕೆ ಸೀಮಿತವಾದ ವ್ಯಾಪ್ತಿ ಪ್ರದೇಶವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯತೆ ಇರುವುದರಿಂದ ಈ ರೀತಿಯ ಏರ್ಪಾಟನ್ನು ಮಾಡಿಕೊಳ್ಳಲಾಗಿದೆ.

ಅಧ್ಯಯನದ ಪ್ರಾರಂಭದಲ್ಲಿಯೇ ಸೂಚಿಸಿರುವಂತೆ ತುಳುನಾಡಿಗೆ ಪ್ರತ್ಯೇಕವಾದ ಸಾಂಸ್ಕೃತಿಕ ವೈಶಿಷ್ಟ್ಯತೆ ಇದೆ. ಇದಕ್ಕೆ ಇಲ್ಲಿಯ ಪ್ರಾಕೃತಿಕ ಸ್ವರೂಪವೇ ಕಾರಣವೆಂದು ಭಾವಿಸಲಾಗಿದೆ. ನಾಗಾರಾಧನೆಯ ವಿಷಯವನ್ನು ಗಮನಿಸುವಾಗ ಸಾಂಸ್ಕೃತಿಕ ಪರಂಪರೆಯಲ್ಲಿ, ನಂಬಿಕೆ ಆಚರಣೆ ಇತ್ಯಾದಿಗಳ ಸ್ವರೂಪದಲ್ಲಿಯೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆ ಇರುವುದನ್ನು ಗುರುತಿಸಲಾಗಿದೆ. ಸ್ವರೂಪ ಭಿನ್ನವಾದರೂ ಆಚರಣೆಯ ಉದ್ದೇಶ ಆಶಯ ಇತ್ಯಾದಿಗಳಲ್ಲಿ ಭಿನ್ನತೆ ಇಲ್ಲ. ಪ್ರಸ್ತುತ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದ ಪ್ರಧಾನ ನಾಗಾರಾಧನಾ ಪ್ರದೇಶವಾದ ತುಳುನಾಡೆಂದು ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳುವ ಭೂಭಾಗದ ನಾಗಾರಾಧನೆಯ ಸ್ವರೂಪಗಳನ್ನು ವಿಶ್ಲೇಷಿಸಲಾಗುವುದು. ಅಧ್ಯಯನದ ಅನುಕೂಲತೆಗೆ ತಕ್ಕಂತೆ ಕೆಲವು ಪ್ರಕಾರಗಳನ್ನು ವಿಶ್ಲೇಷಣೆಗೆ ಆಯ್ಕೆ ಮಾಡಿಕೊಂಡಿದ್ದು ಉಳಿದಂತೆ ಸಾಂದರ್ಭಿಕವಾಗಿ ವಿಶ್ಲೇಷಣೆ ನಡೆಸಲಾಗಿದೆ.

ತುಳುನಾಡಿನಲ್ಲಿ ನಾಗಾರಾಧನೆಗೆ ಅತ್ಯಂತ ಪ್ರಾಮುಖ್ಯತೆ ನೀಡಿರುವುದು ಕಂಡುಬರುತ್ತದೆ. ನಾಗ ತುಳುವರ ಧಾರ್ಮಿಕ ಮತ್ತು ಸಾಮಾಜಿಕ ಬದುಕಿನ ಒಂದು ಅಂಗವಾಗಿರುವುದು ತಿಳಿದುಬರುತ್ತದೆ. ಮದುವೆ, ಗೃಹಪ್ರವೇಶ ಯಾವುದೇ ಶುಭಕಾರ್ಯಗಳ ಸಂದರ್ಭದಲ್ಲಿ ನಾಗನಿಗೆ ವಿಶೇಷ ಪೂಜೆ ನಡೆಸಲಾಗುತ್ತದೆ. ಗೃಹ ನಿರ್ಮಾಣ, ಬಾವಿ, ಕೃಷಿಕಾರ್ಯ ಇತ್ಯಾದಿಗಳ ಸಂದರ್ಭದಲ್ಲಿ 'ನಾಗ ಬೀದಿ'ಯ ಬಗ್ಗೆ ವಿಶೇಷ ಗಮನ ನೀಡಲಾಗುತ್ತದೆ. ತುಳುವರ ಬದುಕಲ್ಲಿ ಇಷ್ಟು ಪ್ರಭಾವ ಬೀರಿರುವ ನಾಗ ಅಥವಾ ಸರ್ಪದ ಆರಾಧನೆಯಲ್ಲಿ ಹಲವಾರು ಪ್ರಕಾರಗಳು ಪ್ರಚಲಿತದಲ್ಲಿವೆ. ಪ್ರಮುಖವಾಗಿ ನಾಗತನು, ನಾಗದರ್ಶನ, ಸರ್ಪಸಂಸ್ಕಾರ, ವಟು ಆರಾಧನೆ, ಆಶ್ಲೇಷಬಲಿ, ಬ್ರಹ್ಮಸ್ಥಾನಗಳು, ಡಕ್ಕೆಬಲಿ, ನಾಗಮಂಡಲ, ಇಷ್ಟೇ ಅಲ್ಲದೆ ಕೆಲವು ಜನಪದ ಆರಾಧನ ಪ್ರಕಾರಗಳು ತುಳು

ಮತ್ತು ನೆರೆಯ ಕನ್ನಡ ಪ್ರದೇಶದಲ್ಲೂ ಪ್ರಚಲಿತದಲ್ಲಿವೆ. ಪ್ರಮುಖವಾಗಿ ಕಾಡ್ಯನ ಆರಾಧನೆ, ಪಾಣರಾಟ ಅಥವಾ ಸ್ವಾಮಿಕೋಲ, ಇತ್ಯಾದಿ ಪ್ರಕಾರಗಳ ಮೂಲಕ ಪ್ರಸ್ತುತ ಸಂದರ್ಭದಲ್ಲಿ ನಾಗನನ್ನು ಆರಾಧಿಸಿಕೊಂಡು ಬರಲಾಗುತ್ತಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಮೇಲೆ ಸೂಚಿಸಿರುವ ವಿಷಯಗಳ ಕಡೆಗೆ ವಿಶೇಷ ಆದ್ಯತೆ ನೀಡಲಾಗಿದೆ.

೬.೧ ಹಿನ್ನೆಲೆ

ತುಳುನಾಡಿನಲ್ಲಿ ನಾಗಾರಾಧನೆ ಎಂದಿನಿಂದ ಪ್ರಚಲಿತಕ್ಕೆ ಬಂತು ಎನ್ನುವುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಇಲ್ಲಿರುವ ನಾಗಾರಾಧನೆಯ ವೈದಿಕ ಮತ್ತು ಅವೈದಿಕ ಸ್ವರೂಪಗಳನ್ನು ಗಮನಿಸಿದರೆ ಆದಿಮ ಸಂಸ್ಕೃತಿಯಿಂದಲೂ ಇಲ್ಲಿ ನಾಗ ಪೂಜಕರು ಇದ್ದರು ಎಂದು ಭಾವಿಸಿಕೊಳ್ಳಬಹುದಾಗಿದೆ. ಪರಶುರಾಮನು ಪಶ್ಚಿಮ ಕರಾವಳಿಯ ತೀರ ಪ್ರದೇಶವನ್ನು ಸೃಷ್ಟಿಸಿ ಇಲ್ಲಿ ನಾಗ, ದುರ್ಗಿಗಳನ್ನು ಆರಾಧಿಸುವಂತೆ ಬ್ರಾಹ್ಮಣರನ್ನು ನಿಯಮಿಸಿದನೆಂದು ಪ್ರಚಲಿತ ಐತಿಹ್ಯವಿದೆ. ಇದಕ್ಕೆ ಯಾವುದೇ ರೀತಿಯ ಆಧಾರಗಳು ಕಂಡುಬರುವುದಿಲ್ಲ. ಆದರೂ ಈ ಸಂದರ್ಭದಲ್ಲಾದ ವೈದಿಕ ಸಂಸ್ಕೃತಿಯ ಪ್ರವೇಶದೊಂದಿಗೆ ನಾಗಾರಾಧನೆಯು ಮತ್ತಷ್ಟು ಪ್ರಭಾವಶಾಲಿಯಾಯಿತು ಎಂದು ಭಾವಿಸಿಕೊಳ್ಳಬಹುದು. ಕರಾವಳಿ ಕರ್ನಾಟಕದ ಈ ಭೂಭಾಗವು ಹಿಂದೆ 'ನಾಗರ ಖಂಡ' ಎನ್ನುವ ಹೆಸರಿನಿಂದ ಕರೆಯಲ್ಪಡುತ್ತಿತ್ತು.[೧] ಶ್ರೀಮಾನ್ ಗೋವಿಂದ ಪೈಯವರು ಜನಾಂಗಿಕ ಹಿನ್ನೆಲೆಯೊಂದಿಗೆ ಸರ್ಪಾರಾಧನೆಗೆ ಸಂಬಂಧ ಕಲ್ಪಿಸುತ್ತಾ ''ಈ ಭೂಭಾಗದಲ್ಲಿ ನಾಗರೆಂಬ ಜನರಿದ್ದರೆಂದು 'ನಾಗನಂದ' 'ಅವಧಾನ ಕಲ್ಪಲತಾ' ಗ್ರಂಥದಲ್ಲಿ ಹೇಳಿದೆ. ಇಲ್ಲಿ ಶಂಖ ಕುಲದ ನಾಗರೆಂಬ ಜನಾಂಗ ವಾಸಿಸುತ್ತಿತ್ತೆಂದೂ ಹೀಗಾಗಿ ಈ ಪ್ರದೇಶವನ್ನು ನಾಗರಖಂಡವೆಂದು ಕರೆಯಲಾಗುತ್ತಿತ್ತು. ಸರ್ಪಕುಲ ಲಾಂಛನವಾಗಿದ್ದ ಈ ಜನರಲ್ಲಿ ಸರ್ಪಾರಾಧನೆ ಒಂದು ಸ್ಥಳಿಕ ಮತಾಚರಣೆಯಾಗಿ ಬಳಕೆಯಾಗುತ್ತಿರಬೇಕು'' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೨] ಕರಾವಳಿಯ ಪ್ರಾಚೀನ ಮತ್ತು ಪ್ರಸಿದ್ಧ ಅರಸುಮನೆತನಗಳಲ್ಲಿ ಒಂದಾದ ಆಲೂಪರು ನಾಗವಂಶಸ್ಥರೆಂದು ವಿದ್ವಾಂಸರುಗಳ ಅಭಿಮತ. ''ಸೋಮವಂಶಕ್ಕೆ ಸೇರಿರುವ ಅವರ ಶಿಲಾಶಾಸನ ಒಂದರಲ್ಲಿ ಮೇಲ್ಗಡೆ ಸುರುಳಿ ಹಾಕಿ ಕೂತು ಹೆಡೆಯನ್ನು ಬಿಚ್ಚಿದ ಹಾವಿನ ನಕ್ಷೆ ಇದೆ. ಇದರಿಂದ ಅವರು ನಿಜವಾಗಿ ನಾಗವಂಶಸ್ಥರೆಂದು ಭಾವಿಸಬಹುದು. ಮೌರ್ಯ ಸಿಂಹಾಸನವು ಬಿದ್ದು ಹೋದ ಬಳಿಕ ದಕ್ಷಿಣಾ ಪಥದಲ್ಲಿ ಪ್ರಬಲರಾಗಿ ಶಾಲಿವಾಹನ ಶಕವನ್ನು ಸ್ಥಾಪಿಸಿದ ಶಾತವಾಹನರೂ ನಾಗವಂಶದವರಾಗಿದ್ದರು. ಶಾತವಾಹನರ ಉಪ ರಾಜರಾಗಿ ಬನವಾಸಿಯಲ್ಲಿ ಆಳುತ್ತಿದ್ದ ಅವರ ಕಿರಿಶಾಖೆಯಾದ ಚುಟು ಕುಲದ ಅರಸನನ್ನು ಕದಂಬರ ಮೊದಲಿನ ಅರಸನಾದ ಮಯೂರ ವರ್ಮನು ಜಯಿಸಿ, ಬನವಾಸಿಯ ರಾಜ್ಯವನ್ನು ತನ್ನ ಕೈವಶಮಾಡಿಕೊಂಡ ಬಳಿಕ ಚುಟುಕುಲದವರು ತುಳುವಕ್ಕೆ ಬಂದು ಸೇರಿಕೊಂಡು ಅಲ್ಲಿ ಚಿಕ್ಕ ಸಂಸ್ಥಾನವೊಂದರಲ್ಲಿ ಆಳತೊಡಗಿ ಆಳುಪರೆಂಬ (ಆಲೂಪ) ಹೆಸರು ಅವರಿಗೆ ತುಳುವದಲ್ಲಿ ಬಂದಿರಬೇಕು''[೩] ಎಂದು ವಿದ್ವಾಂಸರ ಅಭಿಪ್ರಾಯವಿದೆ. ಆಳುಪ ಅರಸರ ಶಾಸನವೊಂದರಲ್ಲಿ ನಾಗನ ಹೆಡೆಯ ಲಾಂಛನವಿರುವುದರಿಂದ ಅವರನ್ನು ನಾಗಕುಲದವರೆಂದು ಪರಿಭಾವಿಸಲು ಸಾಧ್ಯವಿಲ್ಲ. ಯಾಕಂದರೆ ಈ ಪ್ರದೇಶದಲ್ಲಿ ನಾಗಾರಾಧನೆಯು ಅತೀ ಪುರಾತನವಾದ ಧರ್ಮವಾಗಿದ್ದರಿಂದ ಆ ಪರಂಪರೆಯನ್ನು ಆಳುಪ ಅರಸರು ಮುಂದುವರೆಸಿಕೊಂಡು ಬಂದಿರಬಹುದು. ಮತ್ತು ಸ್ಥಳೀಯ ಪ್ರಭಾವೀ ಆರಾಧನ ಶಕ್ತಿಯಾಗಿರುವ ನಾಗನನ್ನೇ ಲಾಂಛನವಾಗಿ

ಇಟ್ಟುಕೊಂಡಿದ್ದಿರಬಹುದು. ಒಟ್ಟಿನಲ್ಲಿ ನಾಗ ಈ ಪ್ರದೇಶದ ಪುರಾತನವಾದ ಆರಾಧ್ಯದೈವ ಮುಂದೆ ಕಾಲಾಂತರದಲ್ಲಿ ವಿವಿಧ ಧರ್ಮಗಳ ಪ್ರವೇಶದೊಂದಿಗೆ ಆಚರಣೆಗಳ ಸ್ವರೂಪದಲ್ಲಿಯೂ ವ್ಯತ್ಯಾಸಗಳು ಮತ್ತು ಬದಲಾವಣೆಗಳು ಆಗಿರಬಹುದು. ಪ್ರೊ.ಎ.ವಿ.ನಾವಡ ಮತ್ತು ಗಾಯತ್ರಿ ನಾವಡ ಅವರು ಈ ಭೂಭಾಗದ ಆದಿಮೂಲ ದೈವ ನಾಗನೇ ಇರಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ''ಕರಾವಳಿಯ ಉಪಾಸನಾ ಪಂಥದ ಇತಿಹಾಸವನ್ನು ಗಮನಿಸಿದಾಗ ಆ ಪ್ರದೇಶದ ಆದಿ ಮೂಲ ದೈವ ನಾಗನೇ ಇರಬೇಕು. ಎಲ್ಲ ಜನ ವರ್ಗದವರೂ ನಾಗನನ್ನು ಬೇರೆ ಬೇರೆ ರೂಪಗಳಲ್ಲಿ ಭಿನ್ನ ಭಿನ್ನ ಆರಾಧನ ಪ್ರಕ್ರಿಯೆಗಳಿಂದ ಪೂಜಿಸುತ್ತಾ ಬಂದಿರುವುದು ಕಂಡುಬರುತ್ತದೆ. ತುಳುವ ಪ್ರದೇಶದ ಆಲಡೆ (ತುಳು: ಬೆರ್ಮರೆ ಗುಂಡ) ನಾಗನನ್ನು ಒಳಗೊಂಡಿರುವ ಒಂದು ದೈವ ಸಂಕೀರ್ಣ. ಇಲ್ಲಿ ನಾಗ, ಬೆರ್ಮರ್, ನಂದಿಗೋಣ, ಲೆಕ್ಕಿಸಿರಿ ಮತ್ತು ಕ್ಷೇತ್ರಪಾಲರಿಗೆ ಆರಾಧನೆ ನಡೆಯುತ್ತದೆ. ಕನ್ನಡ ಪ್ರದೇಶದಲ್ಲಿ ಇದಕ್ಕೆ ಸಂವಾದಿಯಾದ ಚಿತ್ತೇರಿ ಎಂಬ ದೈವ ಸಂಕೀರ್ಣವಿದ್ದು ಅಲ್ಲಿ ನಾಗ, ಬ್ರಹ್ಮ, ನಂದಿ, ಚಿಕ್ಕು, ಮತ್ತು ಕ್ಷೇತ್ರಪಾಲರಿಗೆ ಆರಾಧನೆ ನಡೆಯುತ್ತದೆ''[೪] ನಾಗ ಈ ಭಾಗದ ಪ್ರಭಾವೀ ಆರಾಧನ ಶಕ್ತಿಯಾಗಿರುವ ಹಿನ್ನೆಲೆಯಲ್ಲಿ ಈ ಅಭಿಪ್ರಾಯ ಸಮರ್ಥನೀಯ. ಕೆಲವು ಜನಪದ ಹಿನ್ನೆಲೆಯಲ್ಲಿ ನಡೆಸುತ್ತಿರುವ 'ಕಾಡ್ಯನ ಆರಾಧನೆ' ಯಂತಹ ನಾಗಾರಾಧನಾ ಪ್ರಕಾರಗಳ ಆಚರಣೆಯ ವಿಧಿಗಳಲ್ಲಿ ಆದಿಮ ಸಂಸ್ಕೃತಿಯ ಕುರುಹುಗಳನ್ನು ಗಮನಿಸಬಹುದಾಗಿದೆ.

೬.೨ ನಾಗಬನಗಳು

ತುಳುವರ ಪ್ರಾಥಮಿಕ ಮತ್ತು ಪ್ರಧಾನ ನಾಗಾರಾಧನ ಕೇಂದ್ರಗಳೇ ನಾಗಬನಗಳು. ನಾಗಬನಗಳು ಪ್ರತಿಯೊಂದು ಮನೆ ಅಥವಾ ಕುಟುಂಬಕ್ಕೊಂದರಂತೆ, ಊರಿಗೊಂದರಂತೆಯೂ ಇರುತ್ತವೆ. ಪ್ರತಿಯೊಂದು ಊರಿನ ಅಥವಾ ಗ್ರಾಮದ ದೇವಾಲಯಗಳಲ್ಲಿ ನಾಗನನ್ನು ಪ್ರತ್ಯೇಕವಾಗಿ ಪೂಜಿಸಲಾಗುತ್ತದೆ. ತುಳುನಾಡಿನಾದ್ಯಂತ ಕಂಡುಬರುವ ವಿಶಿಷ್ಟವಾದ ನಾಗಬನಗಳು ಈ ಪ್ರದೇಶದಲ್ಲಿ ವ್ಯಾಪಕವಾಗಿ ಹರಡಿದ್ದ ನಾಗಾರಾಧನೆಗೆ ಸಾಕ್ಷಿಯಾಗಿವೆ.

'ನಾಗಬನ' ಎಂದರೆ 'ನಾಗ' ಪೂಜೆಗಾಗಿ ಪ್ರತ್ಯೇಕವಾಗಿ ಕಾಯ್ದಿಟ್ಟ ಪ್ರದೇಶ. ನಾಗಬನದ ವ್ಯಾಖ್ಯಾನವನ್ನು ವಿದ್ವಾಂಸರು ಈ ರೀತಿ ನಿರೂಪಿಸಿದ್ದಾರೆ. ನಾಗ ವಾಸಿಸುವ ಸ್ಥಳವೆಂದು ಭಾವಿಸಿ ನಾಗನಿಗೆ ಸಾಂಕೇತಿಕವಾಗಿ ಪೂಜೆ ನಡೆಸುವ, ಮತ್ತು ಮರ, ಗಿಡ, ಬಳ್ಳಿ, ಪೊದರುಗಳಿಂದ ತುಂಬಿರುವ ಪ್ರದೇಶವನ್ನು ನಾಗಬನ ಎಂದು ಕರೆಯುವುದು ವಾಡಿಕೆ. ತುಳುನಾಡಿನಲ್ಲಿ ಇಂಥ ಹಲವಾರು ನಾಗಬನಗಳು ಕಂಡುಬರುತ್ತವೆ.[೫] ಈ ಪ್ರದೇಶವು ವಿವಿಧ ಜಾತಿಯ ಮುಖ್ಯವಾಗಿ ಅಶೋಕ, ಅಶ್ವತ್ಥ, ಬೈನೆ ಮೊದಲಾದ ಔಷಧೀಯ ವೃಕ್ಷ ಸಂಕುಲಗಳಿಂದ ಕೂಡಿರುತ್ತವೆ. ನಾಗಬನಗಳನ್ನು ಅತಿ ಪುರಾತನದಿಂದಲೂ ಅದರಲ್ಲಿರುವ ಸಸ್ಯ ಸಂಕುಲಗಳ ಜೊತೆಗೆ ಸಂರಕ್ಷಿಸಿಕೊಂಡು ಬರಲಾಗುತ್ತಿದೆ. ನಾಗಬನಗಳು ಮನೆಯ ಈಶಾನ್ಯ ಭಾಗದಲ್ಲಿದ್ದು ನದಿ ಅಥವಾ ಕೆರೆ, ತೊರೆಗಳ ಸಮೀಪದಲ್ಲಿರುತ್ತವೆ. ಹುತ್ತಗಳು ಹೂಗಿಡಗಳು ಪ್ರಾಚೀನವಾದ ವಿವಿಧ ರೀತಿಯ ಬಳ್ಳಿಗಳು ಇವೆಲ್ಲವುಗಳಿಂದ ಆ ಸ್ಥಳವು ಆವರಿಸಿಕೊಂಡಿದ್ದು ತಂಪಿನಿಂದ ಕೂಡಿರುತ್ತದೆ. ನಾಗಬನಗಳನ್ನು ಅತ್ಯಂತ ಪಾವಿತ್ರ್ಯತೆಯಿಂದ ಕಾಯ್ದುಕೊಂಡು ಬರಲಾಗುತ್ತಿದೆ. ಬ್ರಾಹ್ಮಣ ಅರ್ಚಕರನ್ನು ಹೊರತುಪಡಿಸಿ ಉಳಿದವರು ಯಾರೂ ಈ ಸ್ಥಳವನ್ನು ಪ್ರವೇಶಿಸುವುದಿಲ್ಲ. ನಾಗಪ್ರತಿಮೆಗಳನ್ನು

ಸ್ಪರ್ಶಿಸುವುದಿಲ್ಲ. ಇಲ್ಲಿರುವ ಯಾವುದೇ ಗಿಡ, ಬಳ್ಳಿ, ಮರಗಳನ್ನು ಕಡಿಯುವುದಿಲ್ಲ. ನಾಗ ಬನಗಳಲ್ಲಿ ಸರ್ಪವು ವಾಸಿಸುತ್ತದೆಂದು ಮತ್ತು ತನ್ನ ಸಂತಾನೋತ್ಪತ್ತಿ ಕ್ರಿಯೆಯನ್ನು ನಡೆಸುತ್ತದೆಂದು ಪ್ರತೀತಿ ಇದೆ. ''ಕರ್ನಾಟಕದ ಬಯಲು ನಾಡಿನಲ್ಲಿಯೂ ಇಂಥ ನಾಗಬನಗಳಿಲ್ಲದಿಲ್ಲ. ಆ ಪ್ರದೇಶಗಳಲ್ಲಿ ಅವುಗಳನ್ನು 'ನಾಗರಕಲ್ಲು' ಎಂದು ಕರೆಯಲಾಗುತ್ತದೆ. ಅರಳೀ ಮರದ ಕಟ್ಟೆಯಲ್ಲಿ ಪ್ರತಿಷ್ಠಾಪಿಸಲಾಗಿರುವ ಇಂಥ ಸಾವಿರಾರು ನಾಗರ ಕಲ್ಲುಗಳನ್ನು ನಾವು ಕಾಣಬಹುದು. ಕೋಲಾರ ಜಿಲ್ಲೆಯ ವಿದುರಾಶ್ವತ್ಥದ ಮರಗಳ ತೋಪಿನಲ್ಲಿ ನೂರಾರು ನಾಗರ ಕಲ್ಲುಗಳು ವೈವಿಧ್ಯಮಯವಾಗಿ ಪ್ರತಿಷ್ಠಾಪಿತವಾಗಿರುವುದನ್ನು ನೋಡಬಹುದಾಗಿದೆ. ಸ್ವತಃ 'ಅರಳಿ ಮರ' ಮತ್ತು 'ನಾಗ' ಇವೆರಡೂ ಫಲೋತ್ಪತ್ತಿ ಪ್ರತೀಕಗಳೇ ಆಗಿದ್ದು ವಿಶೇಷವಾಗಿ ಹೆಣ್ಣು ಮಕ್ಕಳು ಇವುಗಳ ಪೂಜೆ ಮಾಡುವುದನ್ನು ನಾಡಿನಾದ್ಯಂತ ಕಾಣಬಹುದಾಗಿದೆ. ಈ ಮೂಲಕ ವೃಕ್ಷಕ್ಕೂ ನಾಗನಿಗೂ ಇರುವ ಅವಿನಾಭಾವ ಸಂಬಂಧ ಕೂಡ ವ್ಯಕ್ತವಾಗುತ್ತದೆ.[5] ನಾಗನಿಗೂ ನೀರಿಗೂ ಅನ್ಯೋನ್ಯವಾದ ಸಂಪರ್ಕವಿದ್ದಂತೆ ಕಂಡುಬರುತ್ತದೆ. ನಾಗನನ್ನು ಜಲದೇವತೆ ಎಂದು ಕೂಡಾ ಪೂಜಿಸುತ್ತಾರೆ.[6] ನಾಗಬನಗಳ ಸಮೀಪ ಅನಾದಿ ಕಾಲದಲ್ಲಿ ನೀರಿನ ಆಶ್ರಯ ವಿಶೇಷವಾಗಿತ್ತು. ನೀರಿನ ಆಶ್ರಯವಿಲ್ಲದಿದ್ದಲ್ಲಿ ನಾಗಬನಗಳನ್ನು ನಿರ್ಮಿಸುತ್ತಿರಲಿಲ್ಲ. ಈಗಲೂ ಕೂಡ ತುಳುನಾಡಿನಾದ್ಯಂತ ಇರುವ ಹೆಚ್ಚಿನೆಲ್ಲ ನಾಗಬನಗಳು ನದಿ ಕೆರೆ ಬಾವಿ ಇತ್ಯಾದಿಗಳ ಸಮೀಪವೇ ಕಂಡುಬರುತ್ತದೆ. ನಾಗಬನಗಳಿಗೆ ಮನುಷ್ಯರ ಪ್ರಾಣಿಗಳ ಪ್ರವೇಶದಿಂದಾಗುವ ಮೈಲಿಗೆ ಇತ್ಯಾದಿಗಳಿಂದ ಸಂರಕ್ಷಿಸುವುದಕ್ಕಾಗಿ ಆವರಣವನ್ನು ನಿರ್ಮಿಸಲಾಗುತ್ತದೆ.

ನಾಗಬನಗಳಲ್ಲಿ ನೂರಾರು ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದಿರುವ ವಿವಿಧ ರೀತಿಯ ಪ್ರತಿಮೆಗಳಿರುತ್ತವೆ. ಹೊಸ ಪ್ರತಿಮೆಯೊಂದನ್ನು ಪ್ರತಿಷ್ಠಾಪಿಸುವ ಸಂದರ್ಭ ಬಂದಾಗ ಪ್ರಾಚೀನವಾದ ಪ್ರತಿಮೆಗಳ ಸಾಲಿನಲ್ಲಿ ನೆಲದಲ್ಲೇ ಪ್ರತಿಷ್ಠಾಪಿಸಲಾಗುತ್ತದೆ. ಹಳೆಯ ಅಥವಾ ಯಾವುದೇ ಪ್ರತಿಮೆಗೆ ಭಿನ್ನ ಉಂಟಾದಾಗ, ಮತ್ತು ಕುಟುಂಬದ ಯಾವುದೇ ಸದಸ್ಯನಿಗೆ ನಾಗದೋಷವಿದೆ ಎಂಬ ವಿಚಾರ ತಿಳಿದುಬಂದಾಗ ಇಲ್ಲಿ ಹೊಸ ಪ್ರತಿಮೆಗಳನ್ನು ತಂದು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಗುವುದು. ಸಂತಾನಹೀನತೆ ಮೊದಲಾದ ಸಂದರ್ಭಗಳಲ್ಲಿಯೂ ನಾಗಪ್ರತಿಷ್ಠೆ ನಡೆಸಲಾಗುತ್ತದೆ. ನಾಗಬನಗಳಿಗೆ ಮನುಷ್ಯರ ಪ್ರವೇಶ ನಿಷಿದ್ಧವಾಗಿರುವುದರಿಂದ ಇಲ್ಲಿ ಸ್ವಾಭಾವಿಕವಾಗಿಯೇ ಹುತ್ತ ಬೆಳೆದಿರುತ್ತದೆ. ಈ ಭಾಗದಲ್ಲಿ ನಾಗಬನಗಳಲ್ಲಿರುವ ಹುತ್ತ ಮಾತ್ರವಲ್ಲದೆ ಬೇರೆ ಕಡೆಗಳಲ್ಲಿರುವ ಹುತ್ತಗಳನ್ನು ಕೂಡ ಕೆಡಹುವ ಸಂಪ್ರದಾಯವಿಲ್ಲ. ಇಲ್ಲಿ ಹುತ್ತಕ್ಕೂ ಪ್ರಾಮುಖ್ಯತೆಯನ್ನು ಕಲ್ಪಿಸಲಾಗಿದೆ. ತುಳುನಾಡಿನ ನಾಗಾರಾಧನೆಯ ಇನ್ನೊಂದು ಪ್ರಕಾರವಾದ ದಲಿತರು ಆರಾಧಿಸುವ 'ಕಾಡ್ಯನ ಮನೆ'ಗಳಲ್ಲಿಯೂ ಹುತ್ತಗಳಿಗೆ ಪಾವಿತ್ರ್ಯತೆ ಇರುವುದು ಕಂಡುಬಂದಿದೆ.

ಕಲ್ಲಿನಲ್ಲಿ ಕೆತ್ತಿದ ನಾಗನಪ್ರತಿಮೆಯನ್ನು ಬನಗಳಲ್ಲಿ ಪೂಜಿಸುವ ಪದ್ಧತಿ ಒಂದಾದರೆ, ನಾಗನ ಆವಾಸಸ್ಥಾನವಾದ ಹುತ್ತವನ್ನೇ ಪೂಜಿಸುವುದು ಮತ್ತೊಂದು ಪದ್ಧತಿ. ಈ ಪದ್ಧತಿ ಕೂಡ ನಾಡಿನಾದ್ಯಂತ ಜನಪ್ರಿಯವಾಗಿದೆ. ಇದು ಅತ್ಯಂತ ಪ್ರಾಚೀನ ಪದ್ಧತಿ ಎಂಬ ನಂಬಿಕೆಯೂ ಉಂಟು. ''ಬೇರೆ ಬೇರೆ ಹೆಸರುಗಳಿಂದ ಆರಾಧಿಸಲ್ಪಡುತ್ತಿರುವ ಇವತ್ತಿನ ಎಷ್ಟೋ ದೈವಗಳ ಮೂಲಸ್ಥಾನ ಹಿಂದೆ 'ಹುತ್ತ'ಗಳಾಗಿದ್ದು ನಾಗಾರಾಧನೆಯ ಮೂಲ ಕೇಂದ್ರಗಳಾಗಿದ್ದವು ಎಂಬ ನಂಬಿಕೆಯೂ ಇದೆ. ಇಲ್ಲಿನ ಮೂಲ ನಿವಾಸಿಗಳಾದ ಹೊಲೆ ಮಾದಿಗರನ್ನೊಳಗೊಂಡು ಅನೇಕ ಬುಡಕಟ್ಟುಗಳು ಪೂಜಿಸುತ್ತಿದ್ದ ಹುತ್ತಗಳ ಮೇಲೆ ಪಶುಪಾಲಕರಾಗಿ ಬಂದ ವಲಸೆಗಾರರು ಸ್ವಯಂಭೂಲಿಂಗಗಳನ್ನು ಸ್ಥಾಪಿಸಿದರು

ಎಂಬುದು ಕೆಲವು ವಿದ್ವಾಂಸರ ವಾದ"[6] ಒಟ್ಟಾರೆ ನಾಗನ ಆವಾಸಸ್ಥಾನವಾದ ಹುತ್ತ ಪ್ರಾಚೀನ ಕಾಲದಿಂದಲೂ ಪೂಜಿಸಲ್ಪಡುತ್ತಿತ್ತು ಎಂಬುದು ಸ್ಪಷ್ಟ. ಜಿಲ್ಲೆಯ ಪ್ರಸಿದ್ಧ ನಾಗಾರಾಧನ ಕೇಂದ್ರವಾಗಿರುವ 'ಕುಕ್ಕೆಸುಬ್ರಹ್ಮಣ್ಯ', 'ಮಂದಾರ್ತಿ' ಮೊದಲಾದೆಡೆಗಳಲ್ಲಿ ಹುತ್ತವನ್ನು ಆರಾಧಿಸುವ ಸಂಪ್ರದಾಯವಿದೆ. ಸುಬ್ರಹ್ಮಣ್ಯದಲ್ಲಿ 'ಆದಿಸ್ಥಳ'ವೆಂದು ಆರಾಧಿಸಿಕೊಂಡು ಬರುವ ಸಂಕೀರ್ಣದಲ್ಲಿ ಹುತ್ತವನ್ನು ಪೂಜಿಸಲಾಗುತ್ತದೆ. ಹುತ್ತದ ಮೃತ್ತಿಕೆಯನ್ನೇ ಪ್ರಸಾದ ರೂಪದಲ್ಲಿ ವಿತರಿಸಲಾಗುತ್ತದೆ.

ನಾಗಬನಗಳನ್ನು ಸ್ವಚ್ಛಗೊಳಿಸುವ ಸಂದರ್ಭ ಬಂದಾಗ ಕರ್ಕಾಟಕ ಮಾಸದ ಅಮವಾಸ್ಯೆಯಂದು ಅವಕಾಶವಿದೆ. ಅಂದು ಬ್ರಾಹ್ಮಣರು ಬನವನ್ನು ಪ್ರವೇಶಿಸಿ ಅಲ್ಲಿ ಪ್ರತಿಮೆಗಳಿಗೆ ಆವರಿಸಿರುವ ಗಿಡಗಂಟೆಗಳನ್ನು ಒಣಗಿದ ಮರಗಳನ್ನು ತೆಗೆದು ಸ್ವಚ್ಛಗೊಳಿಸುತ್ತಾರೆ. ನಾಗಾರಾಧನೆ ಸರ್ವವರ್ಣಗಳಿಂದಲೂ ಬೇರೆ ಬೇರೆ ವಿಧಾನಗಳಿಂದ ನಡೆಯುತ್ತವೆ. ಬ್ರಾಹ್ಮಣೇತರರು ಹಾಗೂ ಸ್ತ್ರೀಯರೇ ಪ್ರಧಾನವಾಗಿ ಆಚರಿಸುವ ವಿಧಾನವು ದೇಶದಾದ್ಯಂತ ಕೆಲವು ಕಡೆ ಪ್ರಚಲಿತದಲ್ಲಿದೆ. ಹುತ್ತಕ್ಕೆ ಹಾಲೆರೆಯುವ ವಿಧಾನ ಮೈಸೂರು ಕಡೆಯೂ, ನಾಗಪ್ರತಿಮೆಗಳಿಗೆ ಸ್ತ್ರೀಯರು ಪೂಜೆ ಸಲ್ಲಿಸುವ ವಿಧಾನ ಉತ್ತರ ಕರ್ನಾಟಕದಲ್ಲಿಯೂ, ಮತ್ತು ಪ್ರತ್ಯಕ್ಷ ನಾಗಗಳಿಗೆ ಹಾಲು ಕುಡಿಸುವ ವಿಧಾನ ಸಲ್ಲಿಸುವ ವಿಧಾನ ಮಹಾರಾಷ್ಟ್ರದಲ್ಲಿಯೂ ಪ್ರಸಿದ್ಧವಾಗಿದೆ. ಸುಂದರ ನಾಗವಿಗ್ರಹಗಳ ಕೆತ್ತನೆ ಇತ್ತೀಚಿನದಾಗಿದ್ದು ಪ್ರಾಚೀನಕುಲದಲ್ಲಿ ದೊಡ್ಡ ಕೆಂಪು ಕಲ್ಲನ್ನೆ ನಾಗನೆಂದು ಸಂಕಲ್ಪಿಸಿ ಆರಾಧಿಸುವ ರೂಢಿ ಇತ್ತೆಂದು ಕಾಣುತ್ತದೆ.

ನೂರಾರು ವರ್ಷಗಳಿಂದ ವೈವಿಧ್ಯಮಯವಾದ ಸಸ್ಯ ಸಂಕುಲಗಳನ್ನು ಒಳಗೊಂಡಿರುವ ಪ್ರಕೃತಿಯಲ್ಲಿ ವಿಶೇಷವಾದ ನಾಗಬನಗಳು ಇಂದು ತಮ್ಮ ಆಶಯವನ್ನು ಕಳೆದುಕೊಳ್ಳುತ್ತಿವೆ. ಜ್ಯೋತಿಷಿಗಳು, ನಾಗಪಾತ್ರಿಗಳು ಅರ್ಚಕರು ಇಂದು ನಾಗಾರಾಧನೆಯ ಆಶಯಗಳನ್ನು ಮರೆತಂತಿದೆ. ಆಧುನಿಕತೆಯ ಮತ್ತು ನಾಗಬನಗಳ ಜೀರ್ಣೋದ್ಧಾರದ ನೆಪದಲ್ಲಿ ನಾಗಬನಗಳನ್ನು ಕಡಿದು ಅಲ್ಲಿ ನಾಗನಿಗಾಗಿ 'ಸಿಮೆಂಟು ಗುಡಿ'ಗಳನ್ನು ನಿರ್ಮಿಸಲಾಗುತ್ತಿದೆ. ಈ ವಿಚಾರವನ್ನು ಪರಿಸರಾಸಕ್ತರು, ಮತ್ತು ಜನಸಾಮಾನ್ಯರು ಗಂಭೀರವಾಗಿ ಗಮನಿಸಬೇಕಾಗಿದೆ. ನಾಗಬನಗಳ ಮೂಲ ಪರಿಕಲ್ಪನೆಯೇ ಮರೆಯಾಗುತ್ತಿದೆ. ಅಲ್ಲಿರುವ ಬೆಲೆಬಾಳುವ, ನಮ್ಮ ಹಿರಿಯರು ಇದುವರೆಗೆ ಸಂರಕ್ಷಿಸಿಕೊಂಡು ಬಂದಿರುವ ಮರಗಳನ್ನು ಕಡಿದು 'ಬನ'ದ ಕಲ್ಪನೆಯೇ ಇಂದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವುದು ಚಿಂತಿಸಬೇಕಾದ ವಿಚಾರವಾಗಿದೆ.

೬.೩ ಮೂಲಸ್ಥಾನಗಳು

ತುಳುನಾಡಿನ ಪ್ರತಿಯೊಂದು ಹಿಂದೂ ಕುಟುಂಬಗಳು ಪುರಾತನದಿಂದಲೂ ನಾಗಪೂಜನೆಗೆ ವಿಶೇಷ ಆದ್ಯತೆ ಕೊಟ್ಟಿರುವುದು ವೇದ್ಯವಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಕುಟುಂಬದ ಹಿರಿಯ ಮನೆಯಲ್ಲಿರುವ ನಾಗನಿಗೆ ವರ್ಷಕ್ಕೊಮ್ಮೆ 'ತಂಬಿಲ' ಇತ್ಯಾದಿಗಳಿಂದ ಪೂಜಿಸುವ ಪದ್ಧತಿ ಇದೆ. ತುಳುವರಲ್ಲಿ 'ಮೂಲಸ್ಥಾನ' ಎನ್ನುವ ಪರಿಕಲ್ಪನೆ ಪ್ರಚಲಿತದಲ್ಲಿದೆ. ಯಾವುದೇ ಜಾತಿ, ಜನಾಂಗ ಅಥವಾ ಕುಟುಂಬದ ಆದಿ ಮೂಲ ಸ್ಥಳದಲ್ಲಿರುವ ನಾಗ ಮತ್ತು ದೈವ ದೇವರುಗಳನ್ನು ಮೂಲಸ್ಥಾನಗಳೆಂದು ಭಾವಿಸಲಾಗುತ್ತದೆ. ಇಂಥ ಹಲವಾರು ಮೂಲಸ್ಥಾನಗಳು

ತುಳುನಾಡಿನಲ್ಲಿವೆ. ಇವು ಪ್ರತಿಯೊಂದು ಜಾತಿ, ವರ್ಗಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಬೇರೆ ಬೇರೆ ಪ್ರದೇಶಗಳಲ್ಲಿರುತ್ತವೆ. ಈ ಮೂಲಸ್ಥಾನಗಳಿಗೆ ಸಂಬಂಧಿಸಿದವರು ವರ್ಷಕ್ಕೊಮ್ಮೆ ಇಲ್ಲಿಗೆ ಬಂದು ಪೂಜೆ ನಡೆಸಿ ಹೋಗುವ ಪರಿಪಾಠವಿದೆ. ಕೆಲವೊಮ್ಮೆ ಸರ್ಪದೋಷ ಉಂಟಾದಾಗ ತಮ್ಮ ಮೂಲಸ್ಥಾನದ ಅರಿವಿಲ್ಲದಿದ್ದಾಗ ಜ್ಯೋತಿಷ್ಯದ ಮೊರೆ ಹೋಗುವುದರ ಮೂಲಕ ಮೂಲ ಸ್ಥಾನಗಳನ್ನು ಕಂಡುಕೊಳ್ಳುವುದಿದೆ. ಮೂಲಸ್ಥಾನದ ಕಲ್ಪನೆ ಕುಟುಂಬದಲ್ಲಿ ಪರಂಪರೆಯಾಗಿ ಮುಂದುವರಿಯುತ್ತದೆ. ಮೂಲ ಸ್ಥಾನಗಳಲ್ಲಿರುವ ನಾಗ ಅಥವಾ ಇನ್ನಿತರ ದೈವಗಳ ಜೀರ್ಣೋದ್ಧಾರ ಇತ್ಯಾದಿಗಳು ನಡೆಯುವಾಗ ಸಂಬಂಧ ಪಟ್ಟವರು ತಮ್ಮ ಶಕ್ತ್ಯಾನುಸಾರ ಕಾಣಿಕೆಗಳನ್ನು ನೀಡುತ್ತಾರೆ. ಮೂಲಸ್ಥಾನಗಳಲ್ಲಿರುವ ಜಮೀನನ್ನು ಮಾರುವ ಸಂದರ್ಭ ಬಂದಾಗಲೂ ಸ್ಥಾನದ ಕಲ್ಪನೆ ಹಾಗೆಯೇ ಉಳಿದಿರುತ್ತದೆ. ಅಧಿಕಾರ ವರ್ಗಾವಣೆಯಾಗುತ್ತದೆಯೇ ಹೊರತು ಸಂಬಂಧ ಯಾವುದೇ ಕಾರಣಕ್ಕೂ ವರ್ಗಾವಣೆಯಾಗುವುದಿಲ್ಲ.

೬.೪ ಬ್ರಹ್ಮಸ್ಥಾನಗಳು

ತುಳುನಾಡಿನ ಪ್ರಸಿದ್ಧವಾದ ಜನಪದ ಆರಾಧನ ಕೇಂದ್ರಗಳೇ ಬ್ರಹ್ಮಸ್ಥಾನಗಳು. ಇವು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಕಾರ್ಕಳ, ಮಂಗಳೂರು ಮೊದಲಾದ ತಾಲ್ಲೂಕುಗಳಲ್ಲಿ ಪ್ರತಿ ಊರಿಗೊಂದರಂತೆ ಕಂಡುಬರುತ್ತವೆ. ಒಂದು ಗ್ರಾಮದಲ್ಲಿ ಹಲವಾರು ಬ್ರಹ್ಮಸ್ಥಾನಗಳಿರುತ್ತವೆ. ಬ್ರಹ್ಮಸ್ಥಾನಗಳೆಂದರೆ ನಾಗನೊಂದಿಗೆ ಹಲವಾರು ದೈವಗಳಿರುವ ಒಂದು ಸಂಕೀರ್ಣ ಪ್ರಧಾನವಾಗಿ ಬ್ರಹ್ಮ, ನಾಗ, ರಕ್ತೇಶ್ವರಿ, ನಂದಿಗೋಣ, ಕ್ಷೇತ್ರಪಾಲ ಎಂಬ ಪಂಚ ದೈವಗಳನ್ನೊಳಗೊಂಡ ಪೂಜಾಸ್ಥಳ ಬ್ರಹ್ಮಸಾನಿಧ್ಯದಲ್ಲಿ ಬೊಬ್ಬರ್ಯ ನಂದಿಕೇಶ್ವರ ಉನ್ನತ್ತ ಧೂಮಾವತಿ, ವಾರಾಹಿ, ಪಂಜುರ್ಲಿ ಮೊದಲಾದ ದೈವಗಳಿದ್ದರೆ, ಶಕ್ತಿ ಸಾನ್ನಿಧ್ಯದಲ್ಲಿ ಗಣಪತಿ, ವೀರಭದ್ರ, ಅಡ್ಕತ್ತಾಯ ಅಬ್ಬಗ ದಾರಗ ಮತ್ತು ಪರಿವಾರ ದೈವಗಳಿರುತ್ತವೆ. ನಾಗ ಮತ್ತು ಕ್ಷೇತ್ರ ಪಾಲರನ್ನು ಪ್ರತ್ತೇಕವಾಗಿ ಆರಾಧಿಸಲಾಗುತ್ತದೆ. ಈ ಎಲ್ಲ ದೈವ ಸಂಕೀರ್ಣಗಳನ್ನು ಒಟ್ಟು ಸೇರಿಸಿ 'ಆಲಡೆ'ಗಳೆಂದು ಕರೆಯಲಾಗುತ್ತದೆ.

ಹಿರಿಯಡಕ, ನಂದಳಿಕೆ, ಕಬತಾರು ಮೊದಲಾದ ಆಲಡೆಗಳಲ್ಲಿ ಸಿರಿ ಆರಾಧನೆ ನಡೆಯುವುದನ್ನು ಗಮನಿಸಬಹುದಾಗಿದೆ. ಆಲಡೆಗಳಲ್ಲಿರುವ ಬ್ರಹ್ಮನನ್ನು ನಾಗನೊಂದಿಗೆ ಸಮೀಕರಿಸಿ ಉಲ್ಲೇಖಿಸುತ್ತಿರುವುದು ಕಂಡುಬರುತ್ತದೆ. 'ನಾಗಬೆರ್ಮೆರ್' ಎಂಬುದಾಗಿ ತುಳುವರು ಬ್ರಹ್ಮನನ್ನು ಕರೆಯುವುದು ವಾಡಿಕೆಯಾಗಿದೆ. ಆಲಡೆಯ ದೈವಗಳಾದ ನಾಗ ಹಾಗೂ ಬ್ರಹ್ಮ ಬೆಸೆದು ನಾಗಬ್ರಹ್ಮ ಎಂಬ ಹೆಸರಿನಿಂದ ಆರಾಧನೆಗೊಳ್ಳುವುದನ್ನು ಗಮನಿಸಬಹುದು. ತುಳುವರ ಈ ಬ್ರಹ್ಮ ಪೂರ್ವದಲ್ಲಿ ಜನಪದ ದೈವವಾಗಿರಬೇಕು. ನಂತರ ಕಾಲಾಂತರದಲ್ಲಿ ಅದು ವೈದಿಕೀಕರಣಗೊಂಡಿರಬೇಕು. ಯಾಕೆಂದರೆ ಇಂದಿಗೂ ಬ್ರಹ್ಮನಿಗೆ ಕೊಡುವ ವಾರ್ಷಿಕ ಪೂಜೆಯನ್ನು 'ಭೋಗ' ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ನಾಗಬ್ರಹ್ಮರಿಗೆ ಸಂಬಂಧಿಸಿದ ಹಲವಾರು ಪ್ರತಿಮೆಗಳು ಕಾರ್ಕಳ ತಾಲೂಕಿನ ಸುತ್ತಮುತ್ತ ಕಂಡುಬಂದಿವೆ. ಕಾರ್ಕಳ ತಾಲೂಕು ದುರ್ಗದ ಬಳಿಯಲ್ಲಿ ಧ್ಯಾನಭಂಗಿಯಲ್ಲಿ ಕುಳಿತ ನಾಗಬ್ರಹ್ಮನ ಪ್ರತಿಮೆಯಿದೆ. ಇಂಥ ಪ್ರತಿಮೆಯು ನಾರಾವಿಯ ಸೂರ್ಯ ನಾರಾಯಣ ದೇವಾಲಯದ ಬಳಿಯಲ್ಲೂ ಪತ್ತೆಯಾಗಿದೆ. ಸೊಂಟದ ಕೆಳಗೆ

ಸರ್ಪಾಕೃತಿ ಮತ್ತು ಮೇಲ್ಭಾಗ ಮನುಷ್ಯಾಕೃತಿ ಇರುವ ಪ್ರತಿಮೆಯು ಕಾರ್ಕಳದ ದುರ್ಗ ಮತ್ತು ಕಾಬೆಟ್ಟಿನ ಬಳಿ ಕಂಡುಬಂದಿದೆ. ಈ ಪ್ರತಿಮೆಗಳು ಅತಿ ಪುರಾತನವಾದುದೆಂದು ಭಾವಿಸಲಾಗಿದೆ.

ಬೆರ್ಮೆರನ್ನು ತುಳುನಾಡಿನ ಆದಿಮೂಲ ದೈವವೆಂದು ಭಾವಿಸಲಾಗಿದೆ. ಬೆರ್ಮರಷ್ಟು ಪುರಾತನ ದೈವರಿಲ್ಲ ಎಂಬ ನಂಬಿಕೆಯಿದೆ. ಆದ್ದರಿಂದಲೇ ಬೆರ್ಮರೆ ತಾಣ ಅಥವಾ 'ಬ್ರಹ್ಮಸ್ಥಾನ'ವನ್ನು ಆದಿಸ್ಥಾನವೆಂದೂ ಆದಿ ಆಲಡೆ ಸ್ಥಾನವೆಂದು ತುಳುವರು ಈಗಲೂ ನಂಬುತ್ತಾರೆ. ಪೀಟರ್ ಜೆ ಕ್ಲಾಸ್ ಅವರು 'ಆಲಡೆ' ಎಂಬುದನ್ನು ಕುಟುಂಬದ ಧಾರ್ಮಿಕ ಹಾಗೂ ರಾಜಕೀಯ ಕೇಂದ್ರಸ್ಥಾನ ಎನ್ನುತ್ತಾರೆ.

''ಅರಮನೆಯ ವಿವರಣೆಯಲ್ಲಿ ಬಳಸಿದ ಪದಗಳನ್ನೇ ಆಲಡೆಗಳ ವಿವರಣೆಗಳಲ್ಲಿ ಬಳಸಲಾಗಿದೆ. ಈ ಗುಡಿಗಳು ಜನ ದೂರವಾದ ಬಂಜರುಭೂಮಿಗಳಲ್ಲಿ ಕಾಡಿನ ಸಮೀಪದಲ್ಲಿರುವುದು ಒಂದು ಗಮನಾರ್ಹ ಸಂಗತಿ. ಇದು ಸಾಮಾನ್ಯವಾಗಿ ಪವಿತ್ರ ಸ್ಥಾನವಾಗಿರುವ ಮೂಲಸ್ಥಾನದ ಜೊತೆಗೇ ಇರುತ್ತದೆ. ಇಲ್ಲಿಯೇ ತುಳುವರು ತಮ್ಮ ಪಿತೃಪೂಜೆಯನ್ನು ನಡೆಸುತ್ತಾರೆ. ಸಿರಿ ದೈವಾವೇಶ ಮತಾಚರಣೆಯು ಇಲ್ಲಿಯೇ ನಡೆಯುತ್ತದೆ. ತುಳು ಜನರು ವಾರ್ಷಿಕ ಹಬ್ಬ ಜಾತ್ರೆಗಳ ಸಂದರ್ಭಗಳಲ್ಲಿ ತಮ್ಮನ್ನು ಪ್ರತಿನಿಧಿಸಲು ಮನೆಯಿಂದ ಒಬ್ಬನನ್ನಾದರೂ ಕಳುಹಿಸಿಕೊಡುತ್ತಾರೆ. ಹಾಗೆಯೇ ಹೋಗದಿದ್ದಲ್ಲಿ ಕುಟುಂಬದ ಭೂತಗಳು ಹಾಗೂ ಅವುಗಳ ಅಂಕೆಯೊಳಗಿರುವ ಪೂರ್ವಜರ ಪ್ರೇತಾತ್ಮಗಳು ಗೋಳು ಹುಯಿಸಿ ಸೇಡು ತೀರಿಸಿಕೊಳ್ಳುತ್ತವೆ ಎಂಬ ನಂಬಿಕೆಯಿದೆ. ಮೂಲಸ್ಥಾನವೂ ಕುಟುಂಬವು ಆದಿಯಲ್ಲಿ ನೆಲೆಸಿದ ನೆಲೆ ಎಂಬುದು ಖಚಿತ. ಒಟ್ಟಿನಲ್ಲಿ ಅವು ಒಂದು ಕುಟುಂಬದ ಧಾರ್ಮಿಕ ಹಾಗೂ ರಾಜಕೀಯ ಕೇಂದ್ರಸ್ಥಾನವೆನ್ನಬಹುದು. ಒಂದು ಕುಟುಂಬವು ಯಾವುದೋ ಒಂದು ಅಲೌಕಿಕ ಕಾರಣಗಳಿಗಾಗಿ ಕ್ಲೇಷಕ್ಕೊಳಪಟ್ಟಾಗ ಅದರ ಸದಸ್ಯರು ಮೂಲಸ್ಥಾನಕ್ಕೆ ತೆರಳಿ ತಾವು ಬದುಕಿನಲ್ಲಿ ಏನು ತಪ್ಪು ಮಾಡಿದೆವು ಎಂಬುದನ್ನು ಬೆರ್ಮೆ ಆಳುವರು ಸಿರಿ ಪಾಡ್ದನದಲ್ಲಿ ಕೇಳಿದಂತೆ ದೈವಾವೇಶಕ್ಕೆ ಒಳಗಾದವರಲ್ಲಿ ಕೇಳುವುದು ಇದೆ. ಹೆಚ್ಚಿನ ಮೂಲಸ್ಥಾನಗಳಲ್ಲಿ ಕುಟುಂಬದ ಸದಸ್ಯರು ತಮ್ಮ ಕುಲದೈವಗಳಿಂದ ಸಾಮೂಹಿಕವಾಗಿ ದೈವಾವೇಶಕ್ಕೆ ಒಳಗಾಗುವುದು ಇದೆ. ದೈವಾವೇಶಕ್ಕೆ ಒಳಗಾಗದೆ ಹೋದ ಸದಸ್ಯರು ಅವರಿಗೆ ಗೌರವ ಸೂಚಿಸಿ ತಮ್ಮ ಕಷ್ಟಗಳಿಗೆ ಕಾರಣವನ್ನು ಹೇಳಬೇಕಾಗಿ ಅವರಲ್ಲಿ ಕೇಳಿಕೊಳ್ಳುತ್ತಾರೆ. ಇಂತಹ ಗುಡಿ ಸಂಕೀರ್ಣದ ಯಜಮಾನಿಕೆಯನ್ನು ಹೊಂದಿರುವ ಶ್ರೀಮಂತ ಪ್ರಭು ವರ್ಗದವರ ಪಾತ್ರ ಮಹತ್ವದ್ದು. ಕುಟುಂಬದ ಹಿರಿಯನಾದವನು ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಹಾಜರಿದ್ದು ನಡಾವಳಿಯನ್ನು ನಡೆಸಿಕೊಡಬೇಕು. ಹಾಗೂ ದೈವಕ್ಕೆ ಗೌರವ ಸೂಚಕವಾಗಿ ಕಾಣಿಕೆಯನ್ನು ಒಪ್ಪಿಸಲೇಬೇಕು. ದೈವಕ್ಕೆ ಕುಟುಂಬದ ಪರವಾಗಿ ನಡೆಸತಕ್ಕ ಆಚರಣೆಗಳನ್ನು ಮೊದಲು ಅವನೇ ನಿಂತು ನಡೆಸಿಕೊಡಬೇಕು. ಮತ್ತು ಸಂಬಂಧಪಟ್ಟ ಉತ್ಸವಾಚರಣೆಗಳನ್ನು ತೊಡಗಿಸಿ ಮುಂದೆ ಸಾರ್ವಜನಿಕರಿಗೆ ಮುಂದುವರಿಸಲು ಅವಕಾಶ ಮಾಡಿಕೊಡಬೇಕು''[6] ಎಂದು ಬ್ರಹ್ಮಸ್ಥಾನಗಳ ಮಹತ್ವದ ಕುರಿತು ಉಲ್ಲೇಖಿಸಿದ್ದಾರೆ.

ಕ್ಲಾಸ್ ಅವರು ಹೇಳುವಂತೆ ತುಳುನಾಡಿನ ಆಲಡೆಯ ಬ್ರಹ್ಮರು ನಿರ್ದಿಷ್ಟ ಮನೆತನದ ಖಾಸಗಿ ವಲಯಕ್ಕೆ ಸೇರಿರುತ್ತಾರೆ. ಆದರೆ ಆಲಡೆಯ ವ್ಯಾಪ್ತಿ ಮಾತ್ರ ಒಂದೇ ಕುಟುಂಬದ ವಲಯದಲ್ಲಿ ಇರುವುದಿಲ್ಲ. ಒಂದೇ ಜಾತಿಯ ಮಿತಿಯಲ್ಲಿಯೂ ಇರುವುದಿಲ್ಲ. ಇದು ನಿರ್ದಿಷ್ಟ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲ ಜನ

ವರ್ಗಗಳಿಗೂ ಸಂಬಂಧಿಸಿರುತ್ತದೆ. ಇಲ್ಲಿಯ ಮೂಲ ನಿವಾಸಿಗಳಾದ ತುಳುವರು ಒಂದಲ್ಲ ಒಂದು ಬ್ರಹ್ಮಸ್ಥಾನದ ಮೂಲಕ ತಮ್ಮ ಮೂಲವನ್ನು ಗುರುತಿಸುತ್ತಾರೆ. ವಾರ್ಷಿಕ ಜಾತ್ರೆಯಂದು ಹರಕೆ, ಸೇವೆ ಇತ್ಯಾದಿಗಳನ್ನು ಒಪ್ಪಿಸುತ್ತಾರೆ.

ಬ್ರಹ್ಮಸ್ಥಾನಗಳನ್ನು ತುಳುನಾಡಿನಲ್ಲಿ ವಿವಿಧ ಹೆಸರಿನಿಂದ ಕರೆಯುವುದು ರೂಢಿಯಲ್ಲಿದೆ. ವೈದಿಕರ ಚತುರ್ಮುಖ ಬ್ರಹ್ಮ, ಜೈನರ ಯಕ್ಷಬ್ರಹ್ಮ, ತುಳುವರ ಭೂತಬ್ರಹ್ಮ, ನಾಗಬ್ರಹ್ಮರಲ್ಲದೆ ಬ್ರಹ್ಮಲಿಂಗೇಶ್ವರ ಎಂಬ ಹೆಸರಿನಲ್ಲಿಯೂ ಆರಾಧಿಸುತ್ತಿರುವುದು ಕಂಡುಬರುತ್ತದೆ. ತುಳುವರ ಬ್ರಹ್ಮಸ್ಥಾನ ನಾಗ, ಬೆರ್ಮೆರ್ ನಂದಿಗೋಣ, ಲಕ್ಕೆಸಿರಿ ಮತ್ತು ಕ್ಷೇತ್ರಪಾಲರನ್ನು ಒಳಗೊಂಡಿರುವ ಆರಾಧನ ಸಂಕೀರ್ಣವಾದರೆ ತುಳುನಾಡಿನ ಉತ್ತರ ಭಾಗದಲ್ಲಿರುವ ಕನ್ನಡ ಪ್ರದೇಶದಲ್ಲಿ 'ಆಲಡೆ'ಗಳಿಗೆ ಸಂವಾದಿಯಾದ ಆರಾಧನಾ ಸಂಕೀರ್ಣವನ್ನು 'ಚಿತ್ತೇರಿ' ಎಂದು ಕರೆಯುತ್ತಾರೆ. ''ಇಂತಹ ಚಿತ್ತೇರಿಗಳು ಸಮೀಪದ ಬಂಟ ನಾಡವರ ಮನೆತನಗಳ ಆಡಳಿತಕ್ಕೆ ಒಳಪಟ್ಟಿರುತ್ತವೆ. ಆದರೆ ಬ್ರಾಹ್ಮಣ ಅರ್ಚಕರಿಂದಲೇ ಪೂಜೆ ನಡೆಯುತ್ತಿರುವುದು ಕಂಡುಬರುತ್ತದೆ. ಚಿತ್ತೇರಿಯಲ್ಲಿ ಇಷ್ಟೇ ದೈವಗಳಿರಬೇಕೆಂಬ ನಿಗದಿಯೇನಿಲ್ಲ. ನಾಗ, ಬ್ರಹ್ಮ, ಹಾಯ್ಗುಳಿ ಚಿಕ್ಕು, ಕ್ಷೇತ್ರಪಾಲ, ಕಲ್ಕುಡ, ಚೌಂಡಿ ಮುಂತಾದ ದೈವಗಳು ಇಲ್ಲಿ ನೆಲೆಸಿರುತ್ತವೆ. ಇವುಗಳಲ್ಲಿ ಪ್ರಧಾನ ನಾಗ ಹಾಗೂ ಬ್ರಹ್ಮ''[೧೦] ''ಆಲಡೆಗಳಿಗೆ ಸಂವಾದಿಯಾದ ಈ ಸಂಕೀರ್ಣವನ್ನು 'ಹುಟ್ಟಿನ ಚಿತ್ತೇರಿ' ಎಂದು ಕೂಡ ಕರೆಯುತ್ತಾರೆ. ಇಲ್ಲಿನ ಹುಟ್ಟಿನ ಚಿತ್ತೇರಿಯಲ್ಲಿ ಬ್ರಹ್ಮಸ್ಥಾನದಲ್ಲಿರುವ ದೈವಗಳು ಬೇರೆ ಬೇರೆ ಹೆಸರಿನಲ್ಲಿ ಇವೆ. ಆದರೆ ಸಿರಿ ಬಳಗವಿರುವುದಿಲ್ಲ.''

ಕರಾವಳಿಯ ಕನ್ನಡ ಪ್ರದೇಶದ 'ನಾಡವರು' 'ಸ್ವಾಮಿ' ಎಂಬ ದೈವ ಸಂಕೀರ್ಣವನ್ನು ಆರಾಧಿಸುತ್ತಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ನಾಗನನ್ನೊಳಗೊಂಡ ಸ್ಥಳೀಯ ದೈವ ಸಮುದಾಯಗಳಿಗೆ ಜಿಲ್ಲೆಯ ಪ್ರಧಾನ ಭೂತ ಮಾಧ್ಯಮ ಜನಾಂಗಗಳಲ್ಲಿ ಒಂದಾದ ಪಾಣರು ಗ್ರಾಮ ಮಟ್ಟದಲ್ಲಿ ಅಥವಾ ಮನೆತನದ ಮಟ್ಟದಲ್ಲಿ ನಡೆಸುವ ಒಂದು ವೈದಿಕೇತರ ಆಚರಣೆ-ಪಾಣರಾಟ. ''ಸ್ಥಳೀಯ ಬ್ರಾಹ್ಮಣೇತರ ಜನವರ್ಗದ ದೃಷ್ಟಿಯಲ್ಲಿ ನಾಗರೂಪಿಯಾದ ಸ್ವಾಮಿ ಒಂದು ಆರ್ಯೇತರ ದೈವ ಕರಾವಳಿಯ ಅತ್ಯಂತ ಪ್ರಭಾವಿ ಕೃಷಿಮೂಲದ ಜನಾಂಗ ನಾಡವರು (ಬಂಟರು) ತಮ್ಮ ಮನೆಯ ಆವರಣದೊಳಗಿರುವ ನಾಗನಿಗೆ ಬ್ರಾಹ್ಮಣರಿಂದ ಉಪಚಾರ ನಡೆಸಿದರೆ ತಮ್ಮ ಮನೆ ದೈವವಾದ ಸ್ವಾಮಿಗೆ ನಿತ್ಯದಲ್ಲಿ ಹೂ ನೀರು ಹಾಕಿ ತಾವೇ ಪೂಜೆ ನಡೆಸುತ್ತಾರೆ. ಗ್ರಾಮಮಟ್ಟದಲ್ಲಿ ಪಾಣರ ಮೂಲಕ ನಡೆಸುವ ವಾರ್ಷಿಕ ಆರಾಧನೆಯೇ ಪಾಣರಾಟ. ಇದು ಅವರ ಪಾಲಿಗೆ ಸ್ವಾಮಿಕೋಲ, ಸ್ವಾಮಿಯೊಂದಿಗೆ ಹಾಯ್ಗುಳಿ, ಮಾಂಕಾಳಿಯಮ್ಮ, ಹಳೆಯಮ್ಮ, ಎಳೆಯಮ್ಮ, ಚಿಕ್ಕಮ್ಮ, ಮಂತ್ರಿಗಣ, ಕ್ಷೇತ್ರಪಾಲ ಹೀಗೆ ಹಲವಾರು ದೈವಗಳಿಗೆ ಕೋಲ, ಡಕ್ಕೆ ಬಲಿಗಳ ರೂಪದಲ್ಲಿ ನಡೆಸುವ ಉಪಚಾರದಲ್ಲಿ ಸಮಾಜದ ವಿಭಿನ್ನ ವರ್ಗದವರು ಅರ್ಚಕರಾಗಿ, ಪಾತ್ರಿಯಾಗಿ, ದೈವ ಮಾಧ್ಯಮವಾಗಿ ಇನ್ನಿತರ ಸೇವಾಕಾರ್ಯ ನಡೆಸುವವರಾಗಿ ಪಾಲ್ಗೊಳ್ಳುತ್ತಾರೆ.[೧೧] ಕುಂದಾಪುರ ಕಡೆಯ ಕೆಲವು ಮೂಲ ಮನೆಗಳಲ್ಲಿ ಸ್ವಾಮಿಯನ್ನು ಹುತ್ತದ ರೂಪದಲ್ಲಿ ಪೂಜಿಸುವುದು ಕಂಡುಬರುತ್ತದೆ.

ತುಳುವರು ಆರಾಧಿಸುವ ಆಲಡೆಗಳಲ್ಲಿ ನಿತ್ಯಪೂಜೆ ನಡೆಯುತ್ತದೆ. ಕೆಲವು ಕುಟುಂಬಕ್ಕೆ ಸಂಬಂಧಿಸಿದ ಬ್ರಹ್ಮಸ್ಥಾನಗಳಲ್ಲಿ ಮಾಸಿಕ ಪೂಜೆ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ದೀಪೋತ್ಸವ ನಡೆಯುತ್ತದೆ. ವಾರ್ಷಿಕ

ಪೂಜೆಯಾಗಿ ವಿಶೇಷವಾದ 'ಡಕ್ಕೆಬಲಿ' ಅಥವಾ 'ಬ್ರಹ್ಮ ಮಂಡಲ' ನಡೆಯುತ್ತದೆ.

ತುಳುನಾಡಿನ ದಕ್ಷಿಣ ಭಾಗದ ಕೆಲವು ಪ್ರದೇಶಗಳಲ್ಲಿ ಬೆರ್ಮೆರಿಗೆ ಕೋಲ ನಡೆಯುವ ಸಂಪ್ರದಾಯವಿದೆ. ಇದನ್ನು 'ಬೆರ್ಮೆರೆ ಕೋಲ' ಎಂದು ಕರೆಯುತ್ತಾರೆ ''ಪುತ್ತೂರು ತಾಲೂಕಿನ ಮುಂಡಾಲ ಗುತ್ತಿನಲ್ಲಿ ಈ ಕೋಲ ನಡೆಯುತ್ತದೆ. ಇಲ್ಲಿ ಚಾವಡಿಯ ಉಯ್ಯಾಲೆಯಲ್ಲಿ ಬೆರ್ಮೆರ ಬಿಲ್ಲು ಬಾಣ ಹಾಗೂ ತ್ರಿಶೂಲ ಇದೆ. ಇವು ಬೆರ್ಮೆರ ಆಯುಧಗಳು. ಅಲ್ಲಿಯ ವಾರ್ಷಿಕ ಕೋಲದ ದಿನ 'ಅಜಾಲರು' ಎಂಬ ವರ್ಗದವರು ಬೆರ್ಮೆರ ಕೋಲದ ದೈವ ಮಾಧ್ಯಮರಾಗುತ್ತಾರೆ. ಹೊರ ಅಂಗಳದಲ್ಲಿ ಒಂದು ಕಲ್ಲು ಇದೆ. ಇದನ್ನು 'ಬೆರ್ಮೆರ ಕಲ್ಲು' ಎನ್ನುತ್ತಾರೆ. ರಾತ್ರಿ ೧೨ ಗಂಟೆಯ ಬಳಿಕ ಕೋಲ ಆಚರಿಸುತ್ತಾರೆ. ಕೋಲದ ಸಂದರ್ಭದಲ್ಲಿ ಅಜಾಲರ ವರ್ಗದ ಬೆರ್ಮೆರ ದೈವ ಮಾಧ್ಯಮನು ಗುತ್ತಿನ ಚಾವಡಿಯ ಉಯ್ಯಾಲೆಯಲ್ಲಿ ಇದ್ದ ಬಿಲ್ಲು ಬಾಣವನ್ನು ಕೈಯಲ್ಲಿಹಿಡಿದು ಆವೇಶಗೊಂಡು ಈ ಕಲ್ಲಿನ ಮೇಲೆ ನಿಲ್ಲುತ್ತಾನೆ. ಹೂಂಕಾರ ಮಾಡಿ ದಶ ದಿಕ್ಕುಗಳಿಗೂ ಬಾಣ ಬಿಡುತ್ತಾನೆ. ಪೂರ್ವ ದಿಕ್ಕಿನಿಂದ ಬಾಣ ಬಿಡುವ ಪ್ರಕ್ರಿಯೆ ಆರಂಭವಾಗುತ್ತದೆ.[೨] ಹಾಗೆಯೇ ಬ್ರಹ್ಮನನ್ನು ತುಳುನಾಡಲ್ಲಿ ವಿವಿಧ ಪ್ರಕಾರಗಳಲ್ಲಿ ಆರಾಧಿಸುವ ಸಂಪ್ರದಾಯವು ರೂಢಿಯಲ್ಲಿದೆ.

೬.೫ ವೈದಿಕ ಆಚರಣೆಗಳು

ತುಳುನಾಡಿನ ಸಂಸ್ಕೃತಿಯಲ್ಲಿ ಮತ್ತು ಆರಾಧನಾ ವಿಧಾನಗಳಲ್ಲಿ ವೈದಿಕ ಮತ್ತು ವೈದಿಕೇತರ ಸಂಸ್ಕೃತಿಗಳ ಸಂಕರ ಅಥವಾ ಸಮ್ಮಿಳನ ಕಾಲ ಕಾಲಕ್ಕೆ ಆಗುತ್ತಾ ಹೋಗಿದೆ. ಆದ್ದರಿಂದ ಪರಿಶುದ್ಧವಾಗಿ ಅಥವಾ ಕೇವಲವಾಗಿ ಇದೇ ವೈದಿಕ ಇದೇ ಅವೈದಿಕ ಎಂದು ಇಂದಿನ ಸಂದರ್ಭದಲ್ಲಿ ಅದನ್ನು ವಿಭಜಿಸಿ ವಿಶ್ಲೇಷಣೆಮಾಡಿ ಹೇಳುವ ಹಾಗಿಲ್ಲ. ಯಾಕೆಂದರೆ ಹಿಂದಿನಿಂದಲೂ ಅಂದರೆ ವೈದಿಕ ಯುಗದ ಕಾಲದಿಂದಲೂ ಈ ರೀತಿ ಸಂಸ್ಕೃತಿಗಳ ಸಮ್ಮಿಳನ ಸಮ ಪಾತಳಿಯಲ್ಲಿ ನಡೆಯುತ್ತಾ ಬಂದಿದೆ. ಆದ್ದರಿಂದ ಒಂದು ಸಂಸ್ಕೃತಿ ಇನ್ನೊಂದರಿಂದ ಎಷ್ಟನ್ನು ಎಲ್ಲಿಂದ ಸ್ವೀಕಾರ ಮಾಡಿತು ಎಂದು ಹೇಳುವುದು ಕಷ್ಟದ ವಿಚಾರ. ಆದ್ದರಿಂದ ನಾಗಾರಾಧನೆ ಎಂಬುದು ವೈದಿಕ ಪದ್ಧತಿಯಿಂದಲೇ ಪೂರ್ಣ ಸ್ವೀಕಾರ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ. ಇದು ನಿಸರ್ಗದತ್ತವಾದ ಒಂದು ಪ್ರಕ್ರಿಯೆ ಎಂದು ಭಾವಿಸಲಾಗಿದೆ. 'ನಾಗ' ಎನ್ನುವುದು ಪ್ರಕೃತಿಯಲ್ಲಿ ಕಾಣುವಂಥ ಚೋದ್ಯಕರವಾದ 'ಉರಗ' ಜಂತು. ಅದು ವೈದಿಕರ ಅಥವಾ ಆರ್ಯರ ಗಮನಕ್ಕೆ ಬಂದಾಗ ಅವರು ಅದಕ್ಕೆ ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸಿರಬಹುದು. ಇತರರು ಬೇರೆ ರೀತಿಯಲ್ಲಿ. ಆದರೆ ಆರಾಧನೆಯ ಒಂದು ಸ್ಥಾವರಕ್ಕೆ ಬಂದಾಗ ಗುಡಿ ಕಟ್ಟಿ ಪೂಜೆ ಮಾಡುವಂಥ ವಿಷಯಗಳು ಸ್ಥಾಪಿತವಾದಾಗ ಅಲ್ಲಿ ವೈದಿಕ ಮತ್ತು ಅವೈದಿಕ ವಿಷಯಗಳು ಕಾಲಕಾಲಕ್ಕೆ ಒಂದಾಗುವುದನ್ನು ಕಾಣಬಹುದಾಗಿದೆ. ಆ ಸಂದರ್ಭದಲ್ಲಿ ನಾಗಾರಾಧನೆಗೆ ವಿಶಿಷ್ಟವಾದ ಸ್ವರೂಪ ಬರುವಾಗ ಎಷ್ಟೋ ಕತೆ, ಪುರಾಣಗಳನ್ನು ಭಿನ್ನ ಭಿನ್ನ ಪರಂಪರೆಗಳನ್ನು ಸೃಷ್ಟಿ ಮಾಡಿರಬೇಕು. ಈ ರೀತಿ ಇದು ಶಿಷ್ಟ ಮತ್ತು ಜಾನಪದ ಸಂಸ್ಕೃತಿಗಳಲ್ಲಿ ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡಿರಬೇಕು.

ಪ್ರಸ್ತುತ ಸಂದರ್ಭದಲ್ಲಿ ತುಳುನಾಡಿನ ನಾಗರಾಧನೆಯಲ್ಲಿ ವೈದಿಕ ಸಂಪ್ರದಾಯದ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ಸರ್ಪ ಎಲ್ಲ ವರ್ಗದ ಜನರ ಆರಾಧ್ಯ ದೈವವಾದರೂ ಅದಕ್ಕೆ ಸಂಬಂಧಪಟ್ಟ ಹೋಮ, ಪೂಜೆ,

ಬಲಿ, ಪ್ರತಿಷ್ಠೆ, ತಂಬಿಲ ಮುಂತಾದ ಆಚರಣೆಗಳು ವೈದಿಕ ಕ್ರಿಯೆಗಳಾಗಿ ಬ್ರಾಹ್ಮಣ ವರ್ಗದ ಅರ್ಚಕರಿಂದಲೇ ನಡೆಯುತ್ತದೆ. ಇತ್ತೀಚಿನ ವರ್ಷಗಳಲ್ಲಿ ನಾಗನಿಗೆ ವಿಶೇಷವಾಗಿ ಬ್ರಹ್ಮಕಲಶವನ್ನು ನಡೆಸಲಾಗುತ್ತದೆ. ನಾಗಮಂಡಲದಲ್ಲಿ ಅಥವಾ ನಾಗದರ್ಶನದಲ್ಲಿ ಮೈಮೇಲೆ ಆವೇಶ ಬರಿಸಿಕೊಳ್ಳುವ ಪಾತ್ರಗಳಾಗಿಯೂ ಅವರೇ ಭಾಗವಹಿಸುತ್ತಾರೆ. ನಾಗಮಂಡಲದ ನರ್ತನ ಸೇವೆಯಲ್ಲಿ ಜನಪದ ಸಂಪ್ರದಾಯದ ಆಚರಣೆಗಳು ಕಂಡು ಬಂದರೂ ನರ್ತನದಲ್ಲಿ ವೈದ್ಯರೆನ್ನುವ ವಿಶಿಷ್ಟ ಬ್ರಾಹ್ಮಣ ವರ್ಗದವರೇ ಭಾಗವಹಿಸುತ್ತಾರೆ.

ಅಧ್ಯಯನದ ಈ ಭಾಗದಲ್ಲಿ ತುಳುನಾಡಿನ ನಾಗಾರಾಧನೆಯ ಆಚರಣೆಯಲ್ಲಿ ವೈದಿಕ ಹಿನ್ನೆಲೆಯಲ್ಲಿ ನಡೆಸುವ ಕೆಲವು ಆಚರಣೆಗಳನ್ನು ವಿವರಿಸಲಾಗುವುದು. ಪ್ರಮುಖವಾಗಿ ತನು ಅಥವಾ ತಂಬಿಲ, ಸರ್ಪಸಂಸ್ಕಾರ, ಆಶ್ಲೇಷಬಲಿ, ಢಕ್ಕೆಬಲಿ, ನಾಗಮಂಡಲ ತನುತರ್ಪಣ ಮತ್ತು ವಿಶೇಷ ಆಚರಣೆಗಳಾದ ಷಷ್ಠಿ, ನಾಗರಪಂಚಮಿ ಇತ್ಯಾದಿಗಳ ಕುರಿತು ವಿವೇಚಿಸಲಾಗುವುದು. ಉಳಿದಂತೆ ಜನಪದ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಡೆಸುವ ಕೆಲವು ಆಚರಣೆಗಳನ್ನು ಪ್ರತ್ಯೇಕವಾಗಿ ವಿಶ್ಲೇಷಿಸಲಾಗುವುದು.

೬.೫.೧ ನಾಗ ತನುತಂಬಿಲ

ನಾಗಬನಗಳಲ್ಲಿ ವಿಶೇಷ ದಿನಗಳಲ್ಲಿ ಅಥವಾ ಹರಕೆಯ ರೂಪದಲ್ಲಿ ನಾಗಪ್ರತಿಮೆಗಳಿಗೆ ಹಾಲು, ಪಂಚಾಮೃತ ನೀರು, ಎಳನೀರು ಇತ್ಯಾದಿಗಳನ್ನು ಅಭಿಷೇಕ ಮಾಡಿ, ಬಾಳೆಹಣ್ಣಿನ ಗೊನೆಯನ್ನು ಅರ್ಪಿಸಿ ನಡೆಸುವ ಆಚರಣೆಯೇ 'ನಾಗತನು' ಅಥವಾ ತಂಬಿಲ, 'ತಂಬಿಲ' ಎನ್ನುವುದಕ್ಕೆ ತುಳು ನಿಘಂಟುವಿನಲ್ಲಿ 'ಭೂತ ಮತ್ತು ನಾಗಗಳಿಗೆ ನಡೆಸುವ ವಿಶೇಷ ಪೂಜೆ' ಎನ್ನುವ ಅರ್ಥವಿದೆ. ನಾಗನಿಗೆ ವೈದಿಕರಿಂದ ಕೌಟುಂಬಿಕ ನೆಲೆಯಲ್ಲಿ ಮತ್ತು ದೇವಾಲಯಗಳಲ್ಲಿ ನಿತ್ಯವೂ ಕೆಲವು ಪ್ರದೇಶಗಳಲ್ಲಿ ಪೂಜೆ ನಡೆಸುವ ಸಂಪ್ರದಾಯ ರೂಢಿಯಲ್ಲಿದೆ. ಕೆಲವೊಮ್ಮೆ ವಿಶೇಷ ದಿನಗಳಲ್ಲಿ, ಮತ್ತು ವಿಶೇಷ ಸಂದರ್ಭಗಳಲ್ಲಿಯೂ ಹರಕೆಯ ರೂಪದಲ್ಲಿ ಆರಾಧಿಸುವ ಸಂಪ್ರದಾಯವಿದೆ. ನಾಗನಿಗೆ ನಡೆಸುವ ಪ್ರಾಥಮಿಕ ಹಂತದ ಈ ಆರಾಧನ ಕ್ರಿಯೆಯನ್ನು 'ನಾಗತನು' ಎಂಬ ಹೆಸರಿನಲ್ಲಿ ವಿಶೇಷವಾಗಿ ತುಳುನಾಡಿನಲ್ಲಿ ಕರೆಯಲಾಗುತ್ತದೆ.

ಷಷ್ಠಿ ನಾಗರಪಂಚಮಿ ಮೊದಲಾದ ನಾಗಸಂಬಂಧಿ ವಿಶೇಷ ದಿನಗಳಲ್ಲಿ ತನು ಹಾಕುವ ಸಂಪ್ರದಾಯವಿದೆ. ಸರ್ಪಸಂಬಂಧಿಯಾದ ಸಣ್ಣಪುಟ್ಟ ದೋಷಕಾರಕಗಳಿಗೂ, ಜಾನುವಾರುಗಳಿಗೆ ಬರುವ ತೊಂದರೆಗಳು, ಕೃಷಿ ಸಂಬಂಧಿಯಾದ ವಿಚಾರಗಳು, ಮನೆಯ ಸಮೀಪ ನಾಗರಹಾವು ಕಾಣಿಸಿಕೊಂಡರೆ, ಹೊಸತಾಗಿ ಬಾವಿ ನಿರ್ಮಿಸಿ ಅದರಲ್ಲಿ ನೀರು ಬಾರದಿದ್ದರೆ, ಈ ಎಲ್ಲ ಸಂದರ್ಭಗಳಲ್ಲಿ ಬ್ರಾಹ್ಮಣರು, ಬ್ರಾಹ್ಮಣೇತರರು ತಮಗೆ ಸಂಬಂಧಿಸಿರುವ ನಾಗಬನಗಳಲ್ಲಿ ವೈದಿಕ ಅರ್ಚಕರಿಂದ 'ನಾಗತನು' ಪೂಜೆ ನಡೆಸುತ್ತಾರೆ. ನಾಗತನುವಿನಲ್ಲಿ ವಿಷೇಷವಾಗಿ ಕದಳಿ ಬಾಳೆಹಣ್ಣಿನ ಗೊನೆಯನ್ನು ಅರ್ಪಿಸಲಾಗುತ್ತದೆ. ತನು ಅಥವಾ ತಂಬಿಲ ಎಂದರೆ ಬಾಳೆಗೊನೆಯ ಅರ್ಪಣೆ ಎಂಬ ಸಾಮಾನ್ಯ ಭಾವನೆ ಪ್ರಚಲಿತದಲ್ಲಿದೆ. ಕೃಷಿಕರು ತಾವು ಹೊಸತಾಗಿ ಬೆಳೆದ ಬೆಳೆಯನ್ನು ಮನೆಗೆ ತರುವ ಸಂದರ್ಭದಲ್ಲಿ 'ಬಾಳೆಗೊನೆ' ಅರ್ಪಣೆಯ ಮೂಲಕ ನಾಗನಿಗೆ ಪೂಜೆ ನಡೆಸುತ್ತಾರೆ. ನಿತ್ಯ ಪೂಜೆಯ ಸಂದರ್ಭದಲ್ಲಿ ಈ ಸಂಪ್ರದಾಯವಿಲ್ಲ. ರೂಢಿಯಲ್ಲಿ ಈ ಆಚರಣೆಯನ್ನು ತನು ಹಾಕಿಸುವುದು ಎನ್ನುತ್ತಾರೆ.

ಗೊತ್ತುಪಡಿಸಿದ ನಿರ್ದಿಷ್ಟ ದಿನದಂದು ನಾಗಬನಕ್ಕೆ ಬಾಳೆಹಣ್ಣು ಪಂಚಾಮೃತ ಸಾಹಿತ್ಯ, ಎಳನೀರು, ನೀರು ಇತ್ಯಾದಿ ಪೂಜಾ ಸಾಮಗ್ರಿಗಳೊಂದಿಗೆ ಕತೃಗಳು ಮತ್ತು ಅರ್ಚಕರು ಹೋಗುತ್ತಾರೆ. ಪ್ರಾರಂಭದಲ್ಲಿ ಪೂಜೆಯ ಉದ್ದೇಶ ಇತ್ಯಾದಿಗಳನ್ನು ಕತೃವಿನ ಸಮ್ಮುಖದಲ್ಲಿ ಅರ್ಚಕರು ಪ್ರಾರ್ಥಿಸಿಕೊಳ್ಳುತ್ತಾರೆ. ಬಳಿಕ ನೀರು, ಪಂಚಾಮೃತ, ಎಳನೀರು ಇತ್ಯಾದಿಗಳನ್ನು ನಾಗ ಪ್ರತಿಮೆಗಳಿಗೆ ಅಭಿಷೇಕ ನಡೆಸಲಾಗುತ್ತದೆ. ಪಂಚಾಮೃತದಲ್ಲಿ ಹಾಲು, ಮೊಸರು, ತುಪ್ಪ, ಜೇನು ಮತ್ತು ಸಕ್ಕರೆ ಎಂಬ ಐದು ದ್ರವ್ಯಗಳನ್ನು ಬಳಸಲಾಗುತ್ತದೆ. ಇದು ಅಮೃತಕ್ಕೆ ಸದೃಶವಾದುದು ಎಂಬ ನಂಬಿಕೆಯಿದೆ. ಪಂಚಾಮೃತ ಅಭಿಷೇಕ ನಾಗನಿಗೆ ಶ್ರೇಷ್ಠ ಎಂಬ ನಂಬಿಕೆಯಿದೆ. ಮುಂದೆ ತೀರ್ಥದ ರೂಪದಲ್ಲಿ ಇದನ್ನೇ ವಿತರಿಸಲಾಗುತ್ತದೆ. ಬಾಳೆಗೊನೆಯನ್ನು ಅರ್ಪಿಸಿ ವಿಧಿವತ್ತಾಗಿ ಪೂಜೆ ನಡೆಸಲಾಗುತ್ತದೆ.

ಉತ್ತರ ಕರ್ನಾಟಕ, ತುಮಕೂರು ಮೊದಲಾದೆಡೆಗಳಲ್ಲಿ ಇದಕ್ಕೆ ಸಂವಾದಿಯಾದ ಪೂಜೆ ಪ್ರಚಲಿತದಲ್ಲಿದೆ. ಅದನ್ನು 'ಮುನಿಯಪ್ಪನ ಸೇವೆ,' 'ಮುನಿ ಮಾಡುವುದು' ಮುಂತಾಗಿ ಹೇಳುತ್ತಾರೆ. ''ಸಮೃದ್ಧವಾಗಿ ಬೆಳೆದ ಹೊಲದಲ್ಲಿ ಹಸುರಿನ ಕಾಲದಲ್ಲಿ ಈ ಸೇವೆ ಮಾಡಲಾಗುತ್ತದೆ. ಕುರಿ ಅಥವಾ ಕೋಳಿಯನ್ನು ಬಲಿಕೊಟ್ಟು ಮಾಡುವ ಈ ಸೇವೆಯಲ್ಲಿ ನಾಗಪ್ಪನಿಗೆ ಹಾಲಿನ ಬದಲು ಮಾಂಸಾಹಾರದ ಊಟ ಇಡಲಾಗುತ್ತದೆ. ಸಮೃದ್ಧಿ ಮತ್ತು ಸಂತಾನದ ಸಂಕೇತವಾದ ಈ ಮುನಿಸೇವೆಯನ್ನು ಹೊಲದ ತುಂಬ ಹೊಸಬೆಳೆ ಬಂದಾಗ ಮಾಡುವುದರಲ್ಲಿ ಅರ್ಥವಿದೆ.''[೧೯] ಹೀಗೆ ಪ್ರಾದೇಶಿಕವಾಗಿ ಭಿನ್ನ ರೀತಿಯಲ್ಲಿ ಆಚರಿಸುವ ಸಂಪ್ರದಾಯವಿದೆ.

ನಾಗ ತನು ವೈದಿಕರಿಂದ ಯಾರೂ ನಡೆಸಬಹುದಾದ ಒಂದು ಆರಾಧನ ಸಂಪ್ರದಾಯ. ತುಳುವರು ತಮ್ಮ ಮೂಲಸ್ಥಾನಗಳಿಗೆ ವರ್ಷಕ್ಕೊಮ್ಮೆ ತೆರಳಿ ನಾಗತನು ಅಥವಾ ತಂಬಿಲ ನಡೆಸುವ ಸಂಪ್ರದಾಯವಿದೆ. ಕದಳಿ ಬಾಳೆಗೊನೆ ಹಾಲು, ಎಳನೀರು ಇತ್ಯಾದಿಗಳಿಂದ 'ನಾಗದೇವತೆ' ಸಂತೃಪ್ತಿಗೊಳ್ಳುತ್ತದೆ ಎಂದೂ, ಬರಬಹುದಾದ ದೇಹ ಸಂಬಂಧಿ ರೋಗಗಳು ಇದರಿಂದ ನಿವಾರಣೆಯಾಗುತ್ತದೆಂಬ ನಂಬಿಕೆ ಇದೆ.

೬.೫.೨ ನಾಗಶಿಲಾ ಪ್ರತಿಷ್ಠೆ

ಶಿಲೆಯಲ್ಲಿ ಕೆತ್ತಿಸಿರುವ ನಾಗನ ಬಿಂಬವನ್ನು ಶಾಸ್ತ್ರೋಕ್ತ ರೀತಿಯಲ್ಲಿ ನಾಗಬನಗಳಲ್ಲಿ ಪ್ರತಿಷ್ಠಾಪಿಸುವ ವಿದ್ಯುಕ್ತ ಆಚರಣೆಯೇ ನಾಗಪ್ರತಿಷ್ಠೆ. ಸಂತಾನ ಹೀನತೆ, ಕುಷ್ಠಾದಿ ಚರ್ಮ ರೋಗಗಳು, ದೃಷ್ಟಿದೋಷ, ಮನೋರೋಗ, ಸಂಪತ್ತು ನಾಶ ಮೊದಲಾದ ಸಂದರ್ಭಗಳಲ್ಲಿ ಸರ್ಪದೋಷ ಪರಿಹಾರವಾಗಿ ವಿದ್ಯುಕ್ತವಾಗಿ ನಾಗಪ್ರತಿಷ್ಠೆ ಮಾಡಿಸಲಾಗುತ್ತದೆ. ನಾಗನ ವಿವಿಧ ಸ್ವರೂಪದ ಮರಿ, ಮೊಟ್ಟೆಯೊಂದಿಗಿರುವ ಒಂದು, ಮೂರು, ಐದು ಮತ್ತು ಏಳು ಹೆಡೆಯಿರುವ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ನಾಗಪ್ರತಿಮೆಯ ಈ ಪ್ರತಿಷ್ಠಾವಿಧಿಯನ್ನು ಕುಟುಂಬದ ಹಿರಿಯ ಮನೆ ಅಥವಾ ತಾವು ವಾಸ್ತವ್ಯವಿರುವ ಸ್ಥಳಕ್ಕೆ ಸಂಬಂಧಿಸಿದ ನಾಗಬನಗಳಲ್ಲಿ ಅಥವಾ ಮೂಲಸ್ಥಾನಗಳಲ್ಲಿ ನೆರವೇರಿಸಲಾಗುವುದು. ನಾಗಪ್ರತಿಮೆಯನ್ನು ಯಾವ ರೀತಿಯ ಕಲ್ಲಿನಲ್ಲಿ ಕೆತ್ತಿಸಬೇಕು ಮತ್ತು ಎಲ್ಲಿ ಪ್ರತಿಷ್ಠಾಪಿಸಬೇಕು ಎನ್ನುವ ಕುರಿತು ವಿದ್ವಾಂಸರು ಉಲ್ಲೇಖಿಸುತ್ತಾ ನಾಗಪ್ರತಿಷ್ಠೆ ಮಾಡಬೇಕಾದರೆ 'ಗಂಡು' ಜಾತಿಯ ಕಲ್ಲಿನ ಮೇಲೆ ನಾಗರ ಹಾವಿನ ರೂಪವನ್ನು ಕೆತ್ತಿ ಅಶ್ವತ್ಥ ವೃಕ್ಷದ ಬುಡದಲ್ಲಿ ಶಾಸ್ತ್ರೋಕ್ತವಾಗಿ ಪ್ರತಿಷ್ಠೆಮಾಡುವ ಸಂಪ್ರದಾಯವಿದೆ.ನಾಗರಹಾವು ಲಿಂಗದ ಸಂಕೇತವೆನ್ನಲಾಗಿದೆ. ನಾಗರ ಕಲ್ಲಿನಲ್ಲಿ ಹಾವಿನ ರೂಪವನ್ನು ನೋಡಿದಾಗ

ಮನಸ್ಸಿನ ಮೇಲುಂಟಾಗುವ ಪ್ರಚೋದನೆಯಿಂದ ಮಿದುಳಿನ ಮೇಲೆ ಪರಿಣಾಮ ಬೀರುತ್ತದೆ ಎನ್ನಲಾಗಿದೆ. ಮಾನವನ ಮಿದುಳು ಹಾವಿನ ಹೆಡೆಯ ರೂಪವನ್ನು ಹೋಲುವಂತಿದೆ. ಕತ್ತಿನ ಹಿಂಭಾಗದಲ್ಲಿರುವ ಮಿದುಳಿನ ಭಾಗದಿಂದ ನರಗಳು ಹುರಿ ಹಗ್ಗದಂತೆ ಕೆಳಗಿಳಿದು ಶರೀರದ ವಿವಿಧ ಅಂಗಗಳಿಗೆ ಸರಬರಾಜಾಗುತ್ತವೆ. ಕತ್ತಿನ ಮೇಲಿರುವ ಈ ಭಾಗಕ್ಕೆ 'ಕುಂಡಲಿನಿ' ಎನ್ನುವರು. ಈ ಭಾಗವನ್ನು ಉದ್ರೇಕಿಸಿ ಸಂತಾನ ಪಡೆಯುವುದಕ್ಕೆ ಮನಸ್ಸನ್ನು ಕೇಂದ್ರೀಕರಿಸಿದರೆ ಸಂಬಂಧಪಟ್ಟ ನರಗಳ ಮೇಲೆ ಪ್ರಭಾವ ಬೀರುತ್ತದೆ." ಎಂದು ಮನಶಾಸ್ತ್ರದ ವಿಶ್ಲೇಷಣೆಯನ್ನು ವಿವರಿಸಿದ್ದಾರೆ.

ನಾಗಶಿಲಾ ಪ್ರತಿಷ್ಠೆಗೆ ಪೂರ್ವಭಾವಿಯಾಗಿ ನಾಗಬಿಂಬನನ್ನು 'ಜಲಾಧಿವಾಸ' ಮಾಡುವ ಸಂಪ್ರದಾಯವಿದೆ. ನಾಗ ಪ್ರತಿಮೆಯನ್ನು ಶಿಲ್ಪಶಾಲೆಯಿಂದ ತಂದ ಬಳಿಕ ಬಿಳಿ ಬಟ್ಟೆಯಿಂದ ಸುತ್ತಿ ನೀರಿನಲ್ಲಿ ಸುಮಾರು ೪೮ ದಿನಗಳ ಕಾಲ ಮುಳುಗಿಸಿ ಇಡಬೇಕಾಗುತ್ತದೆ. ತದನಂತರ ಒಂದು ನಿರ್ದಿಷ್ಟ ಶುಭ ಮೂಹೂರ್ತದಂದು ಜಲಾಧಿವಾಸ ಮಾಡಿರುವ ಪ್ರತಿಮೆಯನ್ನು ನೀರಿನಿಂದ ತೆಗೆದು ಪ್ರತಿಷ್ಠಾವಿಧಿಗಳನ್ನು ನಡೆಸಲಾಗುತ್ತದೆ. ಹಲವಾರು ಧಾರ್ಮಿಕ ಆಚರಣೆಗಳೊಂದಿಗೆ ವಿದ್ಯುಕ್ತವಾಗಿ ಈ ಕ್ರಿಯೆಯನ್ನು ನೆರವೇರಿಸಲಾಗುತ್ತದೆ.

ಪ್ರತಿಷ್ಠೆಯ ಮುನ್ನಾದಿನ ಸಾಯಂಕಾಲ ವಿಗ್ರಹವನ್ನು ನೀರಿನಿಂದ ತೆಗೆದು ಶುದ್ಧೀಕರಿಸಿದ ಬಳಿಕ ಧಾರ್ಮಿಕ ವಿಧಿ ವಿಧಾನಗಳನ್ನು ಆರಂಭಿಸಲಾಗುತ್ತದೆ. ಪ್ರಾರ್ಥನೆ, ಸ್ವಸ್ತಿವಾಚನ ಇತ್ಯಾದಿಯೊಂದಿಗೆ ಪ್ರತಿಷ್ಠೆಯ ಸ್ಥಳವನ್ನು ಮಂತ್ರೋಕ್ತವಾಗಿ ಶುದ್ಧೀಕರಿಸಲಾಗುವುದು. ನಾಗನಿಗೆ ಪ್ರತ್ಯೇಕವಾದ ಗುಡಿಯನ್ನು ನಿರ್ಮಿಸಿದ್ದಲ್ಲಿ 'ವಾಸ್ತು' 'ರಾಕ್ಷೋಘ್ನಾ'ದಿ ಹವನಗಳಿಂದ ಸ್ಥಳವನ್ನು ಶುದ್ಧೀಕರಿಸಲಾಗುವುದು. ನಂತರ ವಿಗ್ರಹಕ್ಕೆ ಪಂಚಾಮೃತಾದಿ ಅಭಿಷೇಕ, ಪುರುಷ ಸೂಕ್ತಾದಿ ಅಭಿಷೇಕಗಳನ್ನು ಮಾಡಿ 'ಧಾನ್ಯಾಧಿವಾಸ' ಮಾಡಲಾಗುತ್ತದೆ. ಬಿಳಿಯ ಬಟ್ಟೆಯನ್ನು ಹರಡಿ ಅದರ ಮೇಲೆ ಭತ್ತವನ್ನು ಹರಡಿ ಭತ್ತದ ಮೇಲೆ ವಿಗ್ರಹವನ್ನಿಟ್ಟು ಅದರ ಮೇಲೆ ಭತ್ತವನ್ನು ಹಾಕಿ, ಆ ಬಟ್ಟೆಯನ್ನೇ ಮುಸುಕು ಹಾಕಿ ಮುಚ್ಚಿಡುತ್ತಾರೆ. ಬಳಿಕ ಪೂಜೆ ನಡೆಸಲಾಗುತ್ತದೆ.

ಮರುದಿನ ಬೆಳಿಗ್ಗೆ, ಸ್ವಸ್ತಿ ಪುಣ್ಯಾಹವಾಚನದೊಂದಿಗೆ ಶುಭ ಮುಹೂರ್ತದಲ್ಲಿ ದಾನ್ಯಾಧಿವಾಸದಿಂದ ಪ್ರತಿಮೆಯನ್ನು ಹೊರ ತೆಗೆದು ಪ್ರತಿಷ್ಠಾಪಿಸುವ ನಿರ್ದಿಷ್ಟ ಸ್ಥಳದಲ್ಲಿ ಇಡಲಾಗುತ್ತದೆ. ಪ್ರತಿಮೆ ಸ್ಥಾಪಿಸುವ ನೆಲದ ತಳದಲ್ಲಿ 'ಪಂಚರತ್ನಗಳನ್ನು' ಮತ್ತು 'ಪಂಚಮೃತ್ತಿಕೆ'ಗಳನ್ನು ಹಾಕಿ ಮಣ್ಣನ್ನು ಮುಚ್ಚಿ ಪ್ರತಿಮೆಗೆ 'ಪ್ರಾಣಪ್ರತಿಷ್ಠೆ'ಯೊಂದಿಗೆ 'ನೇತ್ರೋನ್ಮೀಲನ' ಮೊದಲಾದ ತಾಂತ್ರಿಕ ವಿಧಿಗಳನ್ನು ವಿಗ್ರಹದಲ್ಲಿ ಶಕ್ತಿಯನ್ನು ಆವಾಹಿಸಲಾಗುತ್ತದೆ. ಈ ರೀತಿ ಪ್ರತಿಮೆಯಲ್ಲಿ 'ಶಕ್ತಿ' ಯನ್ನು ಆವಾಹಿಸಿದ ಮೇಲೆ 'ನವಕ ಪ್ರಧಾನ' ಕಲಶಾಭಿಷೇಕ ನಡೆಸಲಾಗುತ್ತದೆ. ಅಷ್ಟಕುಲ ನಾಗಗಳೊಂದಿಗೆ ವಾಸುಕಿಯನ್ನು ಸೇರಿಸಿ ಎಲ್ಲ ಒಂಭತ್ತು ನಾಗದೇವರನ್ನು ಒಂಭತ್ತು ಕಲಶಗಳಲ್ಲಿ ಆವಾಹಿಸಿ ನೂತನ ನಾಗಶಿಲಾ ಬಿಂಬಕ್ಕೆ ಅಭಿಷೇಕ ನಡೆಸಲಾಗುವುದು. ಇದರಿಂದ ಪ್ರತಿಮೆಯಲ್ಲಿ ದೈವೀಶಕ್ತಿಯನ್ನು ವಿದ್ಯುಕ್ತವಾಗಿ ನೀಡಿದಂತಾಗುವುದು.

ಬಳಿಕ 'ಷೋಡಷೋಪಚಾರ' ಪೂಜೆಗಳಿಂದ ಅರ್ಚಿಸಲಾಗುತ್ತದೆ. ಪೂಜೆಯ ಬಳಿಕ ಅಷ್ಟಕುಲ ನಾಗಗಳಿಗೆ ಪ್ರೀತ್ಯರ್ಥವಾಗಿ ಎಂಟುಜನ 'ಬ್ರಹ್ಮಚಾರಿ'ಗಳನ್ನು ಗೋಪಿ, ದಕ್ಷಿಣೆ, ಯಜ್ಞೋಪವೀತ ಮತ್ತು ಫಲವಸ್ತ್ರಾದಿಗಳಿಂದ ಸತ್ಕರಿಸಿ ಅವರಿಂದ ಆಶೀರ್ವಾದ ಪಡೆಯಲಾಗುತ್ತದೆ. ತದನಂತರ ನೆರೆದಿರುವ ಸಮಸ್ತರಿಗೂ ಅನ್ನಸಂತರ್ಪಣೆ

ನಡೆಸಲಾಗುತ್ತದೆ. ರೀತಿ ವಿದ್ಯುಕ್ತವಾಗಿ ನಾಗಪ್ರತಿಷ್ಠೆ ನಡೆಸುವುದರಿಂದ ಸರ್ಪದೋಷ ಪರಿಹಾರವಾಗಿ ಸತ್‌ಫಲ ದೊರಕುತ್ತದೆ. ಸಂತಾನಾದಿ ಬಯಕೆ ನೆರವೇರುತ್ತದೆ ಎನ್ನುವ ನಂಬಿಕೆಯಿದೆ.

ಬ್ರಹ್ಮಚಾರಿ ಆರಾಧನೆ: (ವಟು ಆರಾಧನೆ) ಬ್ರಹ್ಮೋಪದೇಶವನ್ನು ಹೊಂದಿರುವ ಬಾಲವಟುವನ್ನು 'ಬ್ರಹ್ಮಚಾರಿ' ಎಂದು ಪೂಜಿಸುವ ಸಂಪ್ರದಾಯ ತುಳುನಾಡಿನಲ್ಲಿ ನಾಗಸಂಬಂಧಿಯಾದ ಆಚರಣೆಯಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಸುಮಾರು ಎಂಟರಿಂದ ಹನ್ನೆರಡು ವರ್ಷದೊಳಗಿನ ಬಾಲವಟು ಶ್ರೇಷ್ಠವೆಂದು ನಂಬಿಕೆಯಿದೆ. ವಟುಗಳು ನಿತ್ಯವೂ ಗಾಯತ್ರಿ ಮಂತ್ರ ಪಠಣ, ಸಂಧ್ಯಾವಂದನಾದಿ ದೈನಂದಿನ ಧಾರ್ಮಿಕ ವಿಧಿಗಳನ್ನು ಮಾಡುವವರಾಗಿರಬೇಕು. ಬ್ರಹ್ಮಚಾರಿ ಆರಾಧನೆ ನಾಗಾರಾಧನೆಯಲ್ಲಿ ಅತಿ ಪ್ರಾಮುಖ್ಯ ಮತ್ತು ಶ್ರೇಷ್ಠವಾದ ಆರಾಧನ ಅಂಗ ಎಂಬ ಭಾವನೆಯಿದೆ. ಬ್ರಹ್ಮಚಾರಿಗಳು ಸಂತುಷ್ಟರಾದರೆ ನಾಗನಿಗೂ ಸಂತೃಪ್ತಿಯಾದಂತೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಮಹಾಭಾರತದ ಜನಮೇಜಯ ರಾಜನ ಸರ್ಪಯಜ್ಞದ ಹಿನ್ನೆಲೆಯೊಂದಿಗೆ ವಟು ಆರಾಧನೆಯು ಸಂಬಂಧ ಕಲ್ಪಿಸಿಕೊಳ್ಳುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ''ಆಸ್ತಿಕ ಎಂಬ ಬ್ರಹ್ಮಚಾರಿಯು ಜನಮೇಜಯನಿಗೆ ತಿಳಿಹೇಳಿ ಸರ್ಪಯಜ್ಞವನ್ನು ನಿಲ್ಲಿಸಿದನೆಂದು ಪ್ರತೀತಿ. ಆದ್ದರಿಂದ ಸರ್ಪಗಳಿಗೆ ಬ್ರಹ್ಮಚಾರಿಗಳಲ್ಲಿ ವಿಶೇಷವಾದ ಮಮತೆಯಿದೆ, ಆದ್ದರಿಂದಲೇ ಸರ್ಪಪ್ರೀತಿಗಾಗಿ ಬ್ರಹ್ಮಚಾರಿಗಳ ಆರಾಧನೆಯನ್ನು ಮಾಡಬೇಕು''[೧೭] ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಕೆಲವೊಮ್ಮೆ ಪ್ರತ್ಯೇಕವಾಗಿ ನಾಗಪ್ರೀತ್ಯರ್ಥವಾಗಿ ಕೇವಲ ವಟು ಆರಾಧನೆಯನ್ನಷ್ಟೇ ನಡೆಸುವ ಸಂಪ್ರದಾಯವಿದೆ. ಕೆಲವು ಕುಟುಂಬಗಳು ನಾಗಪ್ರೀತ್ಯರ್ಥವಾಗಿ ಈ ಸೇವೆಯನ್ನು ನಡೆಸಿಕೊಂಡು ಬರುತ್ತಿರುವುದು ಕಂಡುಬಂದಿದೆ. ನಾಗನಿಗೆ 'ನಗತನು' ಸೇವೆಯನ್ನು ನಡೆಸಿ ವಟು ಆರಾಧನೆ ನಡೆಸಿ ವಟುಗಳಿಗೆ ಮಧ್ಯಾಹ್ನ ವೈದಿಕರ ಮನೆಯಲ್ಲಿ ಅನ್ನಸಂತರ್ಪಣೆ ನಡೆಸಲಾಗುತ್ತದೆ.

೬.೫.೨ ಸರ್ಪ ಸಂಸ್ಕಾರ

ಮೃತ ಸರ್ಪಕ್ಕೆ ವಿದ್ಯುಕ್ತವಾಗಿ ನಡೆಸುವ ಸಂಸ್ಕಾರ ಕ್ರಿಯೆ. ಮತ್ತು ಕಾಲಾಂತರದಲ್ಲಿ ಆ ಸರ್ಪಕ್ಕೆ ನಡೆಸುವ ಅಪರ ಕ್ರಿಯೆ ಅಥವಾ ಸಂಸ್ಕಾರಕ್ರಿಯೇ ಈ ಪ್ರಕಾರವನ್ನು ಸುಬ್ರಹ್ಮಣ್ಯ ದೇವಾಲಯಗಳಲ್ಲಿ ಸರ್ಪದೋಷ ನಿವಾರಣೆಗಾಗಿಯೂ ನಡೆಸಲಾಗುತ್ತದೆ. ತಿಳಿದೋ ತಿಳಿಯದೆಯೋ ಕುಟುಂಬದ ಹಿಂದಿನ ತಲೆಮಾರಿನ ವ್ಯಕ್ತಿಗಳು. ಅಥವಾ ಕುಟುಂಬದ ಸದಸ್ಯರು ಸರ್ಪವನ್ನು ಕೊಂದಿದ್ದಲ್ಲಿ ಅಥವಾ ಮೃತ ಸರ್ಪವನ್ನು ಕಂಡು ಅದಕ್ಕೆ ಸಂಸ್ಕಾರ ಕ್ರಿಯೆ ನಡೆಸದೆ ತ್ಯಜಿಸಿ ಬಂದಿದ್ದಲ್ಲಿ ಈ ಸೇವೆಯನ್ನು ಪರಿಹಾರಾರ್ಥವಾಗಿ ನಡೆಸಲಾಗುತ್ತದೆ. ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಸರ್ಪ ಸಂಸ್ಕಾರ ಸೇವೆಯನ್ನು ವಿಶೇಷವಾಗಿ ಸರ್ಪಪ್ರೀತ್ಯರ್ಥವಾಗಿ ನಡೆಸಲಾಗುತ್ತದೆ.

ವಿಶೇಷವಾಗಿ ತುಳುನಾಡಿನಲ್ಲಿ ಸರ್ಪವನ್ನು ಪೂಜನೀಯ ಪ್ರಾಣಿಯಾಗಿ ಗೌರವಿಸಲಾಗುತ್ತದೆ. ಮೃತ ಸರ್ಪವನ್ನು ಕಂಡಾಗ ಅದಕ್ಕೆ ಸಂಸ್ಕಾರಾದಿ ಉತ್ತರ ಕ್ರಿಯೆಗಳನ್ನು ನಡೆಸುತ್ತಾರೆ. ಮೃತ ಸರ್ಪವನ್ನು ಯಾರು ನೋಡುತ್ತಾರೆಯೇ ಅವರು ಅದರ ಸಂಸ್ಕಾರವನ್ನು ನೆರವೇರಿಸಬೇಕೆಂಬ ನಂಬಿಕೆಯಿದೆ. ಈ ರೀತಿ ದೊರಕಿದ ಮೃತ ಸರ್ಪಕ್ಕೆ ವೇದೋಕ್ತ ರೀತಿಯಲ್ಲಿ ಬ್ರಾಹ್ಮಣರಿಂದ ದಹನ ಕ್ರಿಯೆ ನಡೆಸಲಾಗುತ್ತದೆ. ತುಳಸಿ ಗಿಡದ ಒಣ ಕಟ್ಟಿಗೆ, ಶ್ರೀಗಂಧ, ತುಪ್ಪ,

ಇತ್ಯಾದಿಗಳನ್ನು ದಹನ ಕ್ರಿಯೆಯಲ್ಲಿ ಬಳಸಲಾಗುತ್ತದೆ. ನಂತರ ಮುಂದಿನ ದಿನಗಳಲ್ಲಿ ಕ್ರಿಯಾದಿ ಸಂಸ್ಕಾರ ಕರ್ಮಗಳನ್ನು ನಡೆಸಲಾಗುತ್ತದೆ.

ಸರ್ಪ ಸಂಸ್ಕಾರದ ಕುರಿತಂತೆ ಪ್ರಚಲಿತ ನಂಬಿಕೆಯು ಈ ರೀತಿಯಿದೆ "ಮಾನವರು ಈ ಜನ್ಮದಲ್ಲಿ ಅಥವಾ ಜನ್ಮ ಜನ್ಮಾಂತರದಲ್ಲಿ ಸರ್ಪವನ್ನು ಕೊಂದಿದ್ದರೆ, ನಾಗ ಬೀದಿಯ ಭೂಮಿಯನ್ನು ಅಗೆಯುವಾಗ ಮರಿಮೊಟ್ಟೆ ನಾಶವಾಗಿದ್ದರೆ, ನಾಗ ಬೀದಿಯನ್ನು ಅಶುದ್ಧ ಮಾಡಿದ್ದರೆ, ಹುತ್ತವನ್ನು ಹಾಳು ಕೆಡವಿದ್ದರೆ, ಪರಿಣಾಮವಾಗಿ ಮುಂದೆ ಕುಟುಂಬದಲ್ಲಿ ಸಂತಾನವಿಲ್ಲದೆ ಕುಷ್ಠಾದಿ ರೋಗಗಳಿಂದ ದುಃಖ ಬರಲು ಸಾಧ್ಯವಿದೆ. ಸತ್ತನಾಗನನ್ನು ಕಂಡಾಗ ಹಾಗೇ ಬಿಡದೆ ಬ್ರಾಹ್ಮಣರಿಂದ ದಹನಾದಿ ಕ್ರಿಯೆಗಳನ್ನು ಮಾಡಿಸಬೇಕು."[೧೮] ಎಂಬ ನಿಯಮ ವ್ಯಕ್ತವಾಗುತ್ತದೆ. ಕೆಲವೊಮ್ಮೆ ಜಾತಕದಲ್ಲಿ ಸರ್ಪದೋಷಾದಿಗಳು ಕಂಡುಬಂದಾಗಲೂ ಸರ್ಪಸಂಸ್ಕಾರವನ್ನು ಮಾಡಿಸುವ ಸಂಪ್ರದಾಯವಿದೆ. ಸರ್ಪ ಸಂಸ್ಕಾರವನ್ನು ಯಾರೂ ಜಾತಿ ಮತ ಭೇದವಿಲ್ಲದೆ ಮಾಡಿಸಬಹುದಾಗಿದೆ. ಶಾಸ್ತ್ರೋಕ್ತವಾಗಿ ಋತ್ವಿಜರಿಂದ ಕುಟುಂಬದ ಮೂಲಸ್ಥಾನಗಳಲ್ಲಿ ಅಥವಾ ಯಾವುದೇ ನಾಗ, ಸುಬ್ರಹ್ಮಣ್ಯ ದೇವಾಲಯಗಳಲ್ಲಿಯೂ ಮಾಡಬಹುದಾಗಿದೆ. ಈ ಕ್ರಿಯೆಗೆ ಯೋಗ್ಯವಾದ ಕಾಲ 'ಉತ್ತರಾಯಣ' ಎಂಬ ಪರಂಪರಾಗತ ನಂಬಿಕೆಯಿದೆ.

ವಿಧಾನ: ಸಂಸ್ಕಾರಾದಿ ವಿಧಿಗಳನ್ನು ನಡೆಸುವ ಕರ್ತೃಗಳು ಅಂದು ವ್ರತ, ನಿಷ್ಠೆಯಿಂದಿರಬೇಕೆಂಬ ನಿಯಮವಿದೆ, ಪ್ರಾರಂಭದಲ್ಲಿ ವೈದಿಕರಿಂದ ಅಕ್ಕಿ ಹಿಟ್ಟಿನಿಂದ ಎರಡು ಸರ್ಪಗಳ ಸಣ್ಣ ಆಕೃತಿಯನ್ನು ನಿರ್ಮಿಸಿ. ಸರ್ಪವನ್ನು ಮಂತ್ರಮುಖೇನ ಅದರಲ್ಲಿ ಆವಾಹಿಸಿ ಪಂಚಾಮೃತ ಅಭಿಷೇಕ ಪುರಸ್ಕಾರ ಪೂಜೆ ಮಾಡುತ್ತಾರೆ. ಹೀಗೆ ಸರ್ಪವನ್ನು ಆವಾಹಿಸಿದ ಎರಡು ಸರ್ಪ ಪ್ರತಿಕೃತಿಗಳಲ್ಲಿ ಒಂದರ ಚೈತನ್ಯವನ್ನು ಮತ್ತೊಂದು ಪ್ರತಿಮೆಗೆ ಪ್ರವಾಹಿಸಿಕೊಂಡು ಚೇತನ್ಯಹೀನವಾದ ಮತ್ತೊಂದು ಪ್ರತಿಕೃತಿಯನ್ನು ಮೃತ ಸರ್ಪವೆಂದು ಭಾವಿಸಬೇಕು. ನಂತರ ಅಗ್ನಿಯಲ್ಲಿ ಸಂಸ್ಕಾರ ಹೋಮವನ್ನು ಮಾಡಿಕೊಂಡು, ಆಗ್ನೇಯದಲ್ಲಿ ಚಿತೆ ರಚನೆ ಮಾಡಿ ಅದರಲ್ಲಿ ಹಿಟ್ಟಿನ ಮೃತ ಸರ್ಪದ ಪ್ರತಿಕೃತಿಯನ್ನು ಹೋಮಾಗ್ನಿಯಿಂದ ದಹಿಸಬೇಕು. ಪೂಜಿಸಿದ ಇನ್ನೊಂದು ಸರ್ಪದ ಪ್ರತಿಕೃತಿಯನ್ನು ಹುತ್ತದಲ್ಲಿ ಬಿಡಬೇಕು. ಬಳಿಕ ಕರ್ತೃವು ಮೂರುದಿನ ಮೃತದಲ್ಲಿದ್ದು ನಾಲ್ಕನೇ ದಿನ ಶುದ್ಧಿಯನ್ನು ಮಾಡಿಸಿಕೊಳ್ಳಬೇಕು. ಮೂರು ದಿನದ ಈ ವ್ರತಾಚರಣೆಯನ್ನು ಕ್ರಿಯೆ ಹಿಡಿಯುವುದು ಎಂದು ಕರೆಯುವುದು ವಾಡಿಕೆ. ಈ ಕ್ರಿಯಾ ಕರ್ಮವನ್ನು ಬ್ರಾಹ್ಮಣೇತರರು ಬ್ರಾಹ್ಮಣರಿಂದ ಮಾಡಿಸುತ್ತಾರೆ. ನಾಲ್ಕನೇ ದಿನದ ಶುದ್ಧೀಕರಣ ಕ್ರಿಯೆಗಳು ಮುಗಿದ ನಂತರ ನಾಗಾಲಯದಲ್ಲಿ ಪ್ರಾಯಶ್ಚಿತ ಹೋಮ, ತಿಲ, ಕೂಷ್ಮಾಂಡ, ಪವಮಾನ, ಹೋಮ ಇತ್ಯಾದಿಗಳನ್ನು ಮಾಡಿಕೊಂಡು ನಾಗಪೂಜೆಯನ್ನು ವಿಧಿವತ್ತಾಗಿ ಆಚರಿಸಲಾಗುತ್ತದೆ. ತದನಂತರ ವಟು ಆರಾಧನೆ, 'ಚತುರ್ ವಿಂಶತಿ' ಬ್ರಾಹ್ಮಣಾರಾಧನೆ ಇತ್ಯಾದಿಗಳನ್ನು ಮಾಡಿ ಸಂಸ್ಕಾರ ಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತದೆ. ಈ ಸಂಸ್ಕಾರ ಕ್ರಿಯೆಯನ್ನು ವಿಧಿವತ್ತಾಗಿ ನಡೆಸಿದಲ್ಲಿ ಸರ್ಪದೋಷ ಪರಿಹಾರವಾಗಿ ಇಷ್ಟಾರ್ಥ ನೆರವೇರುವುದು ಎಂಬ ಪ್ರಚಲಿತ ನಂಬಿಕೆಯಿದೆ.

ಬೆಳ್ತಂಗಡಿ ತಾಲೂಕಿನ ಕರ್ಣೇಂಯೂರು, ಪದ್ಮುಂಜ, ಕೊಕ್ಕಡ ಮೊದಲಾದ ಕೆಲವು ಪ್ರದೇಶಗಳಲ್ಲಿ ಮೃತ ಸರ್ಪವನ್ನು 'ದಪನ' ಮಾಡುವ ಪದ್ಧತಿ ಪ್ರಚಲಿತದಲ್ಲಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ. ಪ್ರಸಿದ್ಧ ನಾಗಾರಾಧನ ಕೇಂದ್ರವಾಗಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ 'ಸರ್ಪ ಸಂಸ್ಕಾರ' ಸೇವೆಯನ್ನು ಹರಕೆಯ ರೂಪದಲ್ಲಿ ನಡೆಸಲಾಗುತ್ತದೆ. ಈ ಸೇವೆ ನಿರಂತರ ನಾಲ್ಕು ದಿನಗಳವರೆಗೆ ನಡೆಯುತ್ತದೆ. ಸೇವಾಕರ್ತುಗಳು ಈ ನಾಲ್ಕು ದಿನವೂ ಇಲ್ಲಿದ್ದು ಆಚರಣೆಯಲ್ಲಿ ಭಾಗವಹಿಸುತ್ತಾರೆ.

ಸರ್ಪಸಂಸ್ಕಾರ ಮೃತ ಜೀವಿಯೊಂದಕ್ಕೆ ಗೌರವಯುತವಾಗಿ ಮಾಡುವ ಸಂಸ್ಕಾರ ಕ್ರಿಯೆ. ಇದು ಕಾಲಕ್ರಮೇಣ ಧಾರ್ಮಿಕ ಆಚರಣೆಯಾಗಿ ಬೆಳೆದು ಬಂದಿರಬೇಕು. ತುಳುನಾಡಿನಲ್ಲಿ ಮೃತ ಸರ್ಪದಂತೆಯೇ ಕೆಲವು ವಿಷಕಾರಿ ಹಾವುಗಳನ್ನು ದಹಿಸುವ ಪದ್ಧತಿ ಇದೆ. ಈ ಹಾವುಗಳ ದೇಹ ಕೊಳೆತು ಮೂಳೆ ಇತ್ಯಾದಿಗಳು ಪರಿಸರಕ್ಕೆ ಹಾನಿ ಮಾಡುವ ಹಿನ್ನೆಲೆಯಲ್ಲಿ ಈ ಪದ್ಧತಿ ಬೆಳೆದು ಬಂದಿದೆ. ಆದರೆ ಸಂಸ್ಕಾರ ಕ್ರಿಯೆಯನ್ನು ಪ್ರಾಣಿ ಮತ್ತು ಉರಗ, ಜಾತಿಗಳಲ್ಲಿ ಕೇವಲ ಸರ್ಪಕ್ಕೆ ಮಾತ್ರ ನಡೆಸುವುದು ವೈಶಿಷ್ಟ್ಯಪೂರ್ಣವಾಗಿದೆ.

೬.೫.೪ ಆಶ್ಲೇಷ ಬಲಿ

ಆಶ್ಲೇಷ ಬಲಿಗೆ ಸಂಬಂಧಿಸಿದಂತೆ ಕೆಲವು ವಿಚಾರಗಳನ್ನು ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಕೇರಳದ ಸರ್ಪಬಲಿಯ ಅಧ್ಯಯನದೊಂದಿಗೆ ಉಲ್ಲೇಖಿಸಲಾಗಿದೆ. ಎರಡೂ ಪ್ರದೇಶಗಳಲ್ಲಿ ಆಚರಿಸುವ ಸರ್ಪಬಲಿಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿದ್ದು ಉಳಿದಂತೆ ಆಶಯ ಒಂದೇ ಆಗಿರುವುದು ವ್ಯಕ್ತವಾಗಿದೆ. ಕೇರಳದಲ್ಲಿ ಶೈವ ಸಂಪ್ರದಾಯದಂತೆ ಆಚರಣೆ ನಡೆದರೆ ತುಳುನಾಡಿನಲ್ಲಿ ವೈಷ್ಣವ ಸಂಪ್ರದಾಯದಂತೆ ನಡೆಸುತ್ತಿರುವುದು ಕಂಡುಬಂದಿದೆ. ಕೇರಳದಲ್ಲಿ 'ಸರ್ಪಬಲಿ' ಎಂದು ಕರೆದರೆ ತುಳುನಾಡಿನಲ್ಲಿ 'ಆಶ್ಲೇಷ ಬಲಿ' ಎಂದು ಕರೆಯಲಾಗುತ್ತದೆ. ಆಚರಣೆಯ ಉದ್ದೇಶ ಒಂದೇ ಆಗಿದ್ದರೂ ಸ್ವರೂಪದಲ್ಲಿ ಪ್ರಾದೇಶಿಕ ಭಿನ್ನತೆ ಕಂಡುಬರುತ್ತದೆ. ತುಳು ಪ್ರದೇಶದಲ್ಲಿ ಹಗಲಿನಲ್ಲಿಯೂ ಮತ್ತು ಸಂಜೆಯ ಹೊತ್ತು ಆಶ್ಲೇಷ ಬಲಿಯನ್ನು ನಡೆಸುವ ಸಂಪ್ರದಾಯವಿದೆ.

ಆಶ್ಲೇಷ ಬಲಿಯನ್ನು ಸರ್ಪದೋಷ ಪರಿಹಾರಾರ್ಥವಾಗಿ ನಡೆಸಲಾಗುತ್ತದೆ. ಕುಟುಂಬದ ನಾಗ ಬನಗಳಲ್ಲಿ, ನಾಗ, ಸುಬ್ರಹ್ಮಣ್ಯ ದೇವಾಲಯಗಳಲ್ಲಿ ಈ ಆಚರಣೆ ವಿಧಿಯನ್ನು ಋತ್ವಿಜರಿಂದ ನಡೆಸಬಹುದಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಮಹಾಭಾರತದ 'ಸರ್ಪಸತ್ರ' ಕಥೆಯೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಲಾಗಿದೆ. ಜನಮೇಜಯನ ಸರ್ಪಯಜ್ಞದಲ್ಲಿ ಮೃತ ಪಟ್ಟ ಸಾವಿರಾರು ಸರ್ಪಗಳ ಮೃತಾತ್ಮಕ್ಕೆ ಶಾಂತಿಗೋಸ್ಕರ ಪ್ರಾಯಶ್ಚಿತ್ತ ರೂಪದಲ್ಲಿ ಈ ವಿಧಿಯನ್ನು ನಡೆಸಲಾಗುತ್ತದೆನ್ನುವುದು ಇದರ ಹಿಂದಿರುವ ಆಶಯವಾಗಿದೆ. 'ಇವರೊಂದಿಗೆ ಯಜ್ಞದಲ್ಲಿ ಭಾಗವಹಿಸಿ ನಾಗ ಕುಲಕ್ಕೆ ದ್ರೋಹ ಬಗೆದ ಯಜಮಾನ, ಉಪಯಜಮಾನ, ಸದಸ್ಯರನ್ನು ಒಳಗೊಂಡಂತೆ ಋತ್ವಿಕ್ಕರ್ಮದ ಹೆಸರಿನಿಂದಲೆ ೧೯ ಮಂದಿ ಋತ್ವಿಕ್ಕುಗಳನ್ನು ಪರಿಗ್ರಹಿಸಲಾಗಿದೆ. ಈ ಋತ್ವಿಕ್ಕುಗಳು ನಾಗಶಾಪದಿಂದ ನಾಗನೊಂದಿಗೆ ಪರಲೋಕದಲ್ಲಿ ಸೇರಿದ್ದಾರೆ. ಇವರೆಲ್ಲರ ತೃಪ್ತ್ಯರ್ಥವಾಗಿ ಸರ್ಪಬಲಿ ಎಂಬ ಕ್ರಿಯಾಭಾಗದ ವಿಧಿ ಹೊರಟಿತು." ಒಟ್ಟಿನಲ್ಲಿ ಮೃತ ಸರ್ಪಗಳ ಮತ್ತು ಸರ್ಪಯಜ್ಞದಲ್ಲಿ ಭಾಗವಹಿಸಿ ಬಳಿಕ ಮೃತಪಟ್ಟಿರುವ ವ್ಯಕ್ತಿಗಳ ಆತ್ಮಶಾಂತಿಗಾಗಿ ನಡೆಸಲಾಗುತ್ತದೆ.''[೧೯] ಎಂಬುದು ಆಶ್ಲೇಷ ಬಲಿಯ ಹಿಂದಿರುವ ಪೌರಾಣಿಕ ಆಶಯ. ಈ ನಂಬಿಕೆ ಪರಂಪರೆಯಾಗಿ

ಬೆಳೆದು ಬಂದಿರಬೇಕು. ಇಂದು ಸರ್ಪದೋಷ ಪರಿಹಾರಾರ್ಥವಾಗಿ ಇದನ್ನು ನಡೆಸಿಕೊಂಡು ಬರುತ್ತಿರುವುದು ಕಂಡುಬಂದಿದೆ ''ಹುತ್ತಗಳು, ನಾಗ ವೀಧಿ ಮೊದಲಾದ ಸ್ಥಳಗಳಲ್ಲಿ ಮನುಷ್ಯನು ಮರ ಕಡಿದು ಭೂಮಿ ಅಗೆದು ಸರ್ಪಗಳ ಸಂತತಿ ನಾಶಕ್ಕೆ ಕಾರಣನಾಗುತ್ತಿದ್ದಾನೆ. ಈ ರೀತಿ ಸರ್ಪಗಳ ಮೊಟ್ಟೆ ಮರಿಗಳನ್ನು ನಾಶ ಪಡಿಸಿದರೆ ಅದರ ಫಲವಾಗಿ ಮನುಷ್ಯನಿಗೆ ಕೂಡಾ ಸಂತತಿಯಲ್ಲಿ ಅಭಾವ, ಸಂತತಿ ನಾಶ, ಸಂತತಿಗಳಿಗೆ ರೋಗ ಇತ್ಯಾದಿ ದೋಷಗಳು ಬರುವವು. ಇಂತಹ ದೋಷ ಪರಿಹಾರಾರ್ಥಕವಾಗಿ ಆಶ್ಲೇಷ ನಕ್ಷತ್ರದ ಅಧಿದೇವತೆಯಾದ ಸರ್ಪಗಳಿಗೆ ಬಲಿಯನ್ನು ಹಾಕಬೇಕು. ಆದ್ದರಿಂದಲೇ ಈ ಬಲಿಗೆ ಆಶ್ಲೇಷ ಬಲಿಯೆಂದು ಹೆಸರು''[೫೦] ಎಂದು ವೈದಿಕ ವಿದ್ವಾಂಸರು ಆಶ್ಲೇಷ ಬಲಿಯ ಹಿನ್ನೆಲೆ ಕುರಿತು ಉಲ್ಲೇಖಿಸುತ್ತಾರೆ.

ಮಂಡಲ ರಚನೆ: ಮೊದಲೇ ಸೂಚಿಸಿರುವಂತೆ ಆಶ್ಲೇಷ ಬಲಿಯನ್ನು ನದೀತೀರದಲ್ಲಿ, ನಾಗಬನಗಳಲ್ಲಿ, ಹುತ್ತಗಳ ಎದುರುಗಡೆ, ನಾಗ, ಸುಬ್ರಹ್ಮಣ್ಯ ದೇವಾಲಯಗಳಲ್ಲಿ ನಡೆಸಬಹುದಾಗಿದೆ. ಪ್ರಾರಂಭದಲ್ಲಿ ಆಶ್ಲೇಷ ಬಲಿ ನಡೆಸುವ ಸ್ಥಳವನ್ನು ಗಂಡೋಧಕದಿಂದ ಶುದ್ಧೀಕರಿಸಿಕೊಳ್ಳಬೇಕು. ಬಳಿಕ ಕೆಂಪು, ಹಳದಿ, ಹಸಿರು, ಕಪ್ಪು ಮತ್ತು ಬಿಳಿ ಮೊದಲಾದ ಪಂಚವರ್ಣದ ಹುಡಿಗಳಿಂದ ಮಂಡಲ ರಚಿಸಬೇಕು. ಒಂಬತ್ತು 'ಪದ'ಗಳಿರುವಂತೆ ಒಂದು ನವಪದ ಮಂಡಲವನ್ನು ಮತ್ತು ಎಂಬತ್ತೊಂದು ಪದಗಳ ಇನ್ನೊಂದು ಮಂಡಲವನ್ನು ರಚಿಸಬೇಕು. ಮಂಡಲದ ಸುತ್ತಲೂ ಹಾವಿನ ಆಕೃತಿಯು ಸುತ್ತಿಕೊಂಡಿರುವಂತೆ, ಹಾವಿನ ಹೆಡೆಯು ಮಂಡಲದ ಮೇಲ್ಭಾಗವನ್ನು ಆವರಿಸಿರುವಂತೆ ರಚಿಸಬೇಕು. ಬಳಿಕ ಮಂಡಲದ ಸುತ್ತಲೂ ಅಕ್ಕಿ, ಕಾಯಿ, ಎಲೆ ಅಡಿಕೆ, ಹೂ, ಹಣ್ಣು ಇತ್ಯಾದಿಗಳಿಂದ ಅಲಂಕರಿಸಿ ದೀಪ ಬೆಳಗಬೇಕು, ಬಲಿ ಮಂಡಲದಲ್ಲಿ ಮತ್ತು ಸ್ವಸ್ತಿಕೆಯಲ್ಲಿ ಪ್ರತಿ'ಪದ'ಗಳಿಗೆ ಸಂಬಂಧಿಸಿದ ಆಯಾ ಬಲಿ ದೇವತೆಗಳನ್ನು ಮಂತ್ರೋಕ್ತವಾಗಿ ಆವಾಹಿಸಿ, ಅರ್ಘ್ಯ, ಪಾದ್ಯ ಇತ್ಯಾದಿ ಪೂಜೆಗಳನ್ನು ನಡೆಸಬೇಕು. ಮೊದಲೇ ರಚಿಸಿರುವ ಸರ್ಪಾದಿ ಅಷ್ಟಕುಲನಾಗಗಳನ್ನು ಪ್ರತ್ಯೇಕವಾಗಿ ನವಪದ ಮಂಡಲದಲ್ಲಿ ಆರಾಧಿಸಬೇಕು. ಸರ್ಪ, ಅನಂತ, ಶೇಷ, ಕಪಿಲ, ನಾಗ ಕಾಲೀಯ, ಶಂಖಪಾಲ, ಭೂಧರ, ಇವೇ ಅಷ್ಟಕುಲವಾಗಗಳು ಈ ಸರ್ಪಾದಿ ಅಷ್ಟಕುಲಗಳಿಗೆ ವಾಸುಕಿಯನ್ನು ಅಧಿಪತಿಯೆಂದು ಒಂಭತ್ತನೆಯವನನ್ನಾಗಿ ಪೂಜಿಸುವುದು ರೂಢಿ. ಎಂಬತ್ತೊಂದು ಪದಗಳ ಇನ್ನೊಂದು ಮಂಡಲದಲ್ಲಿ ೮೦ ಪ್ರಧಾನ ನಾಗಗಳನ್ನು ಬಲಿ ದೇವತೆಗಳನ್ನಾಗಿ ಆವಾಹಿಸಿ ಪೂಜಿಸಲಾಗುತ್ತದೆ. ಈ ನಾಗಗಳು ಸರ್ಪಯಜ್ಞದ ಸಂದರ್ಭದಲ್ಲಿ ಆಸ್ತೀಕ ಮುನಿಯಿಂದ ಬದುಕಿ ಉಳಿದವುಗಳು, ಕದ್ರುಮಾತೆಯಲ್ಲಿ ಜನಿಸಿದ ಈ ವಿಷ ಸರ್ಪಗಳು ತಾಯಿಯ ಉಪದೇಶದಂತೆ ವಿನತಾದೇವಿಯನ್ನು ವಂಚಿಸುವುದರೊಂದಿಗೆ ಕ್ರೂರಿಗಳಾಗಿ ಸ್ವೇಚ್ಛಾಚಾರಿಗಳೂ ಆಗಿರಲು ಹಿರಿಯನಾದ ಶೇಷನೆಂಬ ನಾಗನ ವಿಶೇಷ ಪ್ರಯತ್ನದೊಂದಿಗೆ ಬ್ರಹ್ಮನ ಉಪದೇಶದಿಂದ ಜ್ಞಾನವಂತರಾಗಿ ಪೂಜಾರ್ಹರಾದರೆಂದೂ, ಈ ಎಲ್ಲ ನಾಗಗಳನ್ನು ಮಂಡಲಗಳಲ್ಲಿ ಆವಾಹಿಸಿ ಪೂಜಿಸಿದ ನಂತರ ಇಷ್ಟಾರ್ಥ ಸಿದ್ಧಿಯ ಪ್ರಾರ್ಥನೆಯನ್ನು ವೈದಿಕರ ಮುಖೇನ ಮಾಡಿಕೊಳ್ಳಬೇಕು. ತದನಂತರ ಪ್ರತ್ಯೇಕವಾಗಿ ಅಗ್ನಿ ಮುಖೇನ ಸರ್ಪಹನನ ದೋಷ ಪ್ರಾಯಶ್ಚಿತ್ತಕ್ಕಾಗಿ ಕೂಷ್ಮಾಂಡ, ತಿಲ, ಪವಮಾನ ಹೋಮಗಳನ್ನು ಮಾಡಬೇಕು. ಹವನದಲ್ಲಿ ಸರ್ಪಬಲಿಯ ಎಲ್ಲ ಸರ್ಪ ಸಮೂಹಕ್ಕೆ ಚರು, ಸಮಿತ್ (ಪಾಲಾಶ) ಮತ್ತು ದನದ ತುಪ್ಪದ ಮುಖೇನ ಆಹುತಿ ಕೊಡಬೇಕು. ಬಳಿಕ ಮಂಡಲ ದೇವತೆಗಳಿಗೂ ತುಪ್ಪದ ಮುಖೇನ

ಆಹುತಿ ನೀಡಲಾಗುವುದು. ಹೋಮಶೇಷ ಮುಗಿದ ಬಳಿಕ ಮೊದಲೇ ನಿರ್ಮಿಸಿರುವ ಮಂಡಲದಲ್ಲಿ ಬಲಿ ಪ್ರಧಾನ ನಡೆಯುತ್ತದೆ.

ಮಂಡಲ ಪೂಜೆಯ ಬಳಿಕ ಹಳದಿ ಮಿಶ್ರಣದ ಹವಿಸ್ಸಿನಿಂದ ಪಿಂಡ (ಉಂಡೆ) ಮತ್ತು ಗೋದಿ ಹಿಟ್ಟಿನ ಅಪೂಪ (ಅಪ್ಪ)ಗಳನ್ನು ದೀಪ ಸಹಿತವಾಗಿ ಆಯಾಯ ಪದಗಳಲ್ಲಿಟ್ಟು ಬಲಿ ದೇವತೆಗಳಿಗೆ ಮಂತ್ರ ಮುಖೇನ ಸಮರ್ಪಿಸಲಾಗುವುದು. ಪ್ರತಿಯೊಂದು ಪಿಂಡಕ್ಕೂ ಸಂಬಂಧಿಸಿದ ಪ್ರತ್ಯೇಕ ನಾಗ ದೇವತೆಯ ಮಂತ್ರವನ್ನು ಉಚ್ಚರಿಸಿ 'ಬಲಿ'ದಾನ ಮಾಡಲಾಗುವುದು. ಮೊದಲು 'ನವಪದ' ಮಂಡಲದಲ್ಲಿ ಪಿಂಡ ಪ್ರಧಾನವಮಾಡಿ, ಬಳಿಕ ಮಹಾಮಂಡಲದಲ್ಲಿ ಎಂಬತ್ತೊಂದು ದೇವತೆಗಳಿಗೆ ಬಲಿದಾನ ಮಾಡಲಾಗುತ್ತದೆ. ಬಳಿಕ ಸಂಪೂರ್ಣ ಮಂಡಲಗಳನ್ನು ಪುಷ್ಪಗಳಿಂದ ಅಲಂಕರಿಸಿ ವಿಶೇಷ ನೈವೇದ್ಯ ಸಮರ್ಪಿಸಿ ಮಹಾಮಂಗಳಾರತಿ ನೆರವೇರಿಸಲಾಗುತ್ತದೆ. ನಂತರ ವಟು ಆರಾಧನೆ, ಕನ್ನಿಕಾ ಆರಾಧನೆ, ಮಹಾಪ್ರಸಾದ ವಿತರಣೆ, ನೆರೆದಿರುವ ಸಮಸ್ತರಿಗೆ ಅನ್ನ ಸಂತರ್ಪಣೆ ಇತ್ಯಾದಿ ನೆರವೇರಿಸಲಾಗುತ್ತದೆ.

ಆಶ್ಲೇಷ ಬಲಿಯನ್ನು ಪ್ರತಿ ವರ್ಷವೂ, ಅಥವಾ ಆರು, ನಾಲ್ಕು, ಎರಡು ಅಥವಾ ಪ್ರತಿ ತಿಂಗಳು ನಡೆಸುವ ಸಂಪ್ರದಾಯವಿದೆ. ಹಾಗೆ ಕ್ರಮವಾಗಿ ಹದಿನೆಂಟು ಆಶ್ಲೇಷಾ ಬಲಿದಾನದ ಬಳಿಕ 'ಉದ್ಯಾಪನ' ಹೋಮವನ್ನು ಮಾಡುವ ಸಂಪ್ರದಾಯವಿದೆ. ಈ ಉದ್ಯಾಪನ ಹೋಮಕ್ಕೆ ಸ್ಪಷ್ಟವಾದ ಶಾಸ್ತ್ರ ಪ್ರಮಾಣಗಳಿಲ್ಲವೆಂದು ತಿಳಿದು ಬಂದಿದೆ. ಉದ್ಯಾಪನೆಯ ಅಂಗವಾಗಿ ಅಗ್ನಿಯಲ್ಲಿ ಮುಖ್ಯವಾಗಿ ಶೇಷಾಂತರ್ಗತ ಸಂಕರ್ಷಣ ನಾರಾಯಣನ ಪ್ರೀತಿಗಾಗಿ ಪುರುಷಸೂಕ್ತದ ಪ್ರತಿ ಮಂತ್ರಗಳಿಂದ ಹವನದಲ್ಲಿ ಆಹುತಿ ನೀಡಬೇಕು. ಮೂರು ಬಾರಿ ಅಥವಾ ಎಂಟು ಬಾರಿ ಪುರುಷಸೂಕ್ತದಿಂದ ಆಹುತಿ ನೀಡುವುದು ವಿಶೇಷವೆಂದು ಭಾವಿಸಲಾಗಿದೆ. ''ಆಶ್ಲೇಷ ಬಲಿಯ ಹೋಮಾದಿ ಸಂಪ್ರದಾಯಗಳನ್ನು ಗಮನಿಸುವಾಗ ಇದು ಸರ್ಪಗಣಗಳ ಉತ್ತರಕ್ರಿಯಾ ಸಂಬಂಧಿ ಎಂಬುದರ ಸೂಚನೆಯಾಗಿರುತ್ತದೆ. ಇಲ್ಲಿ ಅಂತ್ಯಷ್ಟಿಗೆ ಮಾಡುವ ಹೋಮಗಳನ್ನೇ ಮಾಡಲಾಗುತ್ತದೆ. ತಿಲಹೋಮ, ಕೂಶ್ಮಾಂಡ ಹೋಮ, ಪವಮಾನ ಹೋಮ, ಈ ಮೂರು ಹವನಗಳನ್ನು ಮಾಡುವ ಕ್ರಮ ಅಂತ್ಯೇಷ್ಟಿಯನ್ನು ಹೊರತುಪಡಿಸಿದರೆ ಆಶ್ಲೇಷ ಬಲಿಯಲ್ಲಿ ಮಾತ್ರ''[30] ಇನ್ನೊಂದು ರೀತಿಯಲ್ಲಿ ಗಮನಿಸಿದರೆ 'ಆಶ್ಲೇಷ ಬಲಿ'ಯಲ್ಲಿ ಪಿಂಡಗಳನ್ನು ಇಡುವುದು ಬಳಕೆಯಲ್ಲಿದೆ. 'ಬಲಿ' ಎಂಬ ಶಬ್ದಕ್ಕೆ ಆಹಾರ, ಉಪಹಾರ ಎಂಬ ಅರ್ಥವಿರುವುದು ತಿಳಿದುಬರುತ್ತದೆ. ದೇವಸ್ಥಾನಗಳಲ್ಲಿ ಪರಿವಾರ ದೇವತೆಗಳಿಗೆ ಬಲಿ ನೀಡಲಾಗುತ್ತದೆ. ಬ್ರಹ್ಮಸ್ಥಾನಗಳಲ್ಲಿಯೂ ಡಕ್ಕೆಬಲಿಯ ಸಂದರ್ಭದಲ್ಲಿ ಕುಂಬಳಕಾಯಿ, ಅರಳು, ಚರು, ಓಕುಳಿ ನೀರು ಇತ್ಯಾದಿಗಳಿಂದ ಪರಿವಾರ ದೇವತೆಗಳಿಗೆ ಬಲಿ ನೀಡುವ ಸಂಪ್ರದಾಯವಿದೆ, ಅದೇ ರೀತಿ ಧಾರ್ಮಿಕ ಆರಾಧನ ಸಂಪ್ರದಾಯದಲ್ಲಿಯೂ ವಾಸ್ತು ಬಲಿ, ದಿಕ್ಪಾಲಕ ಬಲಿ, ಎಂಬಿತ್ಯಾದಿ ಪದಗಳು ಬಳಕೆಯಲ್ಲಿವೆ. ಮೃತ ಸರ್ಪಗಳಿಗೆ ದೇವತ್ವವೂ, ಪಿತೃತ್ವವೂ ಎರಡೂ ಇರುವುದರಿಂದ ಪಿಂಡ ಪ್ರಧಾನವೇ ಹೆಚ್ಚು ಸೂಕ್ತವೆಂದು ಭಾವಿಸಲಾಗಿದೆ.

ತುಳುನಾಡಿನ ಆಶ್ಲೇಷ ಬಲಿ ಆಚರಣೆಯಲ್ಲಿಯೂ ಕೂಡ ಬದಲಾವಣೆಗಳು ಉಂಟಾಗಿವೆ. ಒಬ್ಬೊಬ್ಬರ ರೀತಿ ಒಂದೊಂದಾಗಿವೆ. ಕಲ್ಪನೆಗಳೂ ಬದಲಾಗಿವೆ. ಮಂಡಲದ ಕ್ರಮಗಳೂ ಅನೇಕ ಇವೆ. ಆಶ್ಲೇಷ ಬಲಿಯಲ್ಲಿ ಹಲವು

ವಿದ್ವಾಂಸರು ಹಲವಾರು ಆಧಾರಗಳನ್ನು ಇಟ್ಟುಕೊಂಡು ಈಗಲೂ ಹೊಸ ಹೊಸ ರೀತಿಯ ಪ್ರಯೋಗ ಗ್ರಂಥಗಳನ್ನು ಲೇಖನಗಳನ್ನು ಬರೆಯುತ್ತಿದ್ದಾರೆ. ಅಭಿಪ್ರಾಯಗಳು ಏನೆ ಇದ್ದರೂ ಆಶ್ಲೇಷ ಬಲಿಯನ್ನು ಮನುಷ್ಯನಿಗೆ ಆರೋಗ್ಯ ಭಾಗ್ಯ, ಸಂತಾನ ಅಭಿವೃದ್ಧಿ, ಸಂಪತ್ತು ಸಿದ್ಧಿಗಳಿಗಾಗಿ ನಡೆಸುತ್ತಿರುವುದು ಕಂಡುಬಂದಿದೆ. ಇದರಿಂದ ಬ್ರಹ್ಮ ಇತ್ಯಾದಿ ಮಹಾಪಾತಕಗಳು, ಗುರು ನಿಂದ್ಯಾದಿ ಅತಿಪಾತಕಗಳು, ಆಗಮ್ಯಾಗಮನಾಧಿ ಅನುಪಾತಕಗಳು, ಗೋವಧಾದಿ ಉಪಪಾತಕಗಳು ಎಲ್ಲವೂ ನಿವಾರಣೆಯಾಗುತ್ತದೆಂಬ ನಂಬಿಕೆಯಿದೆ. ಬಿಳಿತೊನ್ನು, ಚರ್ಮವ್ಯಾಧಿ, ಅಪಸ್ಮಾರ, ಬಂಜೆತನ ನಿವಾರಣೆಯಾಗಿ ಸತು ಸಂತಾನ ಪ್ರಾಪ್ತಿಯಾಗುತ್ತದೆಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಆಶ್ಲೇಷ ಬಲಿಯನ್ನು ನಡೆಸಲಾಗುತ್ತದೆಂದು ತಿಳಿದುಬಂದಿದೆ.

೬.೫.೫ ನಾಗ ತನುತರ್ಪಣ

ನಾಗ ಬನಗಳು ನಾಗನಿಗೆ ನಡೆಸುವ ವಿಶೇಷವಾದ ಆಚರಣೆಯೇ ನಾಗತನು ತರ್ಪಣ. ಅತಿ ವಿರಳವಾಗಿ ಕಂಡುಬರುವ ಆಚರಣೆ ವಿಶೇಷವಾಗಿ ಸಂತಾನ ಹೀನತೆಯ ಸಂದರ್ಭದಲ್ಲಿ ಸಂತಾನ ಭಾಗ್ಯಕ್ಕಾಗಿ ನಡೆಸಲಾಗುತ್ತದೆ. ನಾಗನ ದೊಡ್ಡಗಾತ್ರದ ಮಂಡಲ ರಚಿಸಿ ಕೊನೆಯಲ್ಲಿ ವಿಶೇಷವಾಗಿ ಪಂಚಾಮೃತದ ಮೂಲಕ ತರ್ಪಣ ಕೊಡಲಾಗುತ್ತದೆ. ಈ ರೀತಿ ಪಂಚಾಮೃತದಿಂದ ತರ್ಪಣ ಕೊಡುವುದರಿಂದಲೇ ತನು ತರ್ಪಣ ಎಂಬ ಹೆಸರು ಬಂದಿರಬೇಕೆಂದು ಭಾವಿಸಲಾಗಿದೆ.

ನಾಗಮಂಡಲ ನಾಗನಿಗೆ ಸಲಿಸುವ ಅತ್ಯುನ್ನತ ಸೇವೆಯವರೂ ಇದು ಶ್ರೀಮಂತರಿಗೆ ಮಾತ್ರ ಸಾಧ್ಯವಾಗುತ್ತದೆ. ಮಧ್ಯಮವರ್ಗದವರಿಗೆ ಈ ಸೇವೆಯನ್ನು ನಡೆಸಲು ಸಾಧ್ಯವಿಲ್ಲದ ಕಾರಣ ಅವರು ನಾಗನಿಗೆ ಹೆಚ್ಚಾಗಿ ನಡೆಸುವ ಸೇವೆಯೆಂದರೆ ಆಶ್ಲೇಷಬಲಿ ಸೇವೆ ಮತ್ತು ನಾಗ ತನು ತರ್ಪಣ ಸೇವೆ. ಇವೆರಡು ಸೇವೆಗಳು ಅಲ್ಪ ಸ್ವಲ್ಪ ವ್ಯತ್ಯಾಸ ಹೊಂದಿದ್ದು ಸಾಮ್ಯತೆ ಕಂಡುಬರುತ್ತದೆ. ನಾಗ ಪರಿಕಲ್ಪನೆಯಲ್ಲಿರುವ 'ಉತ್ತಮ ನಾಗ'ಗಳಿಗೆ ಕೊಡುವ ಶ್ರೇಷ್ಠವಾದ ಸೇವೆ ಇದು ಎಂಬ ನಂಬಿಕೆಯಿದೆ. ನಂಬಿಕೆಯ ಪ್ರಕಾರ ರಾಹುವು ಲಗ್ನದಲ್ಲಿ ಅಥವಾ ಸಪ್ತವು ಭಾವದಲ್ಲಿದ್ದರೆ ನಾಗನಿಗೆ 'ಸುಧಾಪಯೋ' ವಿತರಣೆ ಅಥವಾ ತನುತರ್ಪಣ ಪಂಚಾಮೃತದ ಮೂಲಕ ನಡೆಸಬೇಕೆಂಬ ನಿಯಮವಿದೆ. ಇದರಿಂದ ನಾಗ ಸಂತೃಪ್ತಿಗೊಂಡು ಸಂತಾನ ಭಾಗ್ಯಾದಿ ಅಭಿಲಾಷೆಗಳು ನೆರವೇರುತ್ತದೆಂಬ ಪ್ರಚಲಿತ ನಂಬಿಕೆಯಿದೆ.

ಮಂಡಲ ರಚನೆ

ತನು ಮಂಡಲವು ಸಾಮಾನ್ಯವಾಗಿ ನಾಗಮಂಡಲದಷ್ಟೇ ವಿಸ್ತಾರವಾಗಿ ಪಂಚವರ್ಣದ ಹುಡಿಗಳಿಂದ ರಚನೆಯಾಗುತ್ತದೆ. ಮಂಡಲದ ಸುತ್ತಲೂ ಸುರುಳಿ ಸುರುಳಿಯಾಗಿ ಹೆಣೆದುಕೊಂಡಿರುವ, ಮಂಡಲದ ಪೂರ್ವಭಾಗದಲ್ಲಿ ಹೆಡೆ ಅರಳಿಸಿರುವ ಸರ್ಪದ ರಚನೆಯಾಗುತ್ತದೆ. ಮಂಡಲವನ್ನು ಅತಿ ಆಕರ್ಷಕವಾಗಿ ರಚಿಸಲಾಗುತ್ತದೆ. ಮಂಡಲದ ಮಧ್ಯಭಾಗದಲ್ಲಿ ದೊಡ್ಡಗಾತ್ರದ ಮಂಡಲವೂ ಅದರ ಆಚೀಚೆ ಇನ್ನೆರಡು ಚಿಕ್ಕ ಮಂಡಲಗಳೂ ರಚನೆಯಾಗುತ್ತದೆ. ಬಲ ಬದಿಯ ಚಿಕ್ಕ ಮಂಡಲವು ೯ ಕೋಣೆಗಳ ನವಪದ ಮಂಡಲವಾಗಿದ್ದು ಕೆಂಪು ಹಳದಿ ಬಣ್ಣಗಳಿಂದ ರಚಿಸುತ್ತಾರೆ. ಹೊರಗಿನಿಂದ ಸುರುಳಿಯಾಗಿ ಸುತ್ತಿ ಹಾಕಿ ಕುಳಿತ ನಾಗನನ್ನು ಚಿತ್ರಿಸುತ್ತಾರೆ. ಎಡ ಬದಿಯ ಸಣ್ಣ ಮಂಡಲವು ಸಹಸ್ರದಳ ವೃತ್ತ ಮಂಡಲವಾಗಿದ್ದು ಕೆಂಪು ಬಣ್ಣದಿಂದ ಚಿತ್ರಿಸುತ್ತಾರೆ. ಇದು

ತರ್ಪಣ ಮಂಡಲವಾಗಿರುತ್ತದೆ. ಇದಕ್ಕೂ ಸುತ್ತು ಬಳಸಿದ ನಾಗನನ್ನು ಚಿತ್ರಿಸುತ್ತಾರೆ. ಇಲ್ಲೆಲ್ಲ ಬಣ್ಣಗಾರಿಕೆ ಮತ್ತು ಬಣ್ಣಗಳ ಬಳಕೆಯೇ ಪ್ರಧಾನವಾಗಿ ಕಂಡುಬರುತ್ತದೆ.

ಮಧ್ಯ ಮಂಡಲದ ಮಧ್ಯಭಾಗದಲ್ಲಿ ೭೬ ಬಲಿ ಕೋನಗಳನ್ನು ಪಂಚವರ್ಣಗಳಿಂದ ರಚಿಸುತ್ತಾರೆ. ಅದರ ಸುತ್ತ ಕ್ರಮವಾಗಿ ೮, ೧೬, ೩೨, ೭೪ ಕಮಲದಳ ಸುತ್ತುಗಳನ್ನು ರಚಿಸುತ್ತಾರೆ. ಮೊದಲೆರಡು ಸುತ್ತುಗಳನ್ನ ಕೆಂಪು ಹಸಿರು ಬಣ್ಣಗಳಿಂದಲೂ, ನಂತರದ ೨ ಸುತ್ತನ್ನು ಹಸಿರು ಹಳದಿ ಬಣ್ಣಗಳಿಂದಲೂ ರಚಿಸುತ್ತಾರೆ. ೩, ೭೪ ಕಮಲದಳಗಳಲ್ಲಿ ನಾಗನ ಹೆಡೆಯ ರೂಪವನ್ನು ಬರೆಯಲಾಗುತ್ತದೆ. ಇದು ತರ್ಪಣಕೊಡುವ ೯೬ ನಾಗದೇವತೆಯ ರೂಪಗಳಾಗಿವೆ. ಇದರ ಹೊರ ಆವರಣದಲ್ಲಿ ಎಂಟು 'ಪವಿತ್ರ ಗಂಟಿ'ನ ನಾಗನ ದೇಹದ ಸುರುಳಿಯಾಕಾರದ ಸುತ್ತನ್ನು ಹಾಗೂ ಮೇಲ್ಭಾಗದಲ್ಲಿ ಸುತ್ತು ಹಾಕಿ ಹೆಡೆಯರಳಿಸಿ ಕುಳಿತಿರುವ ಏಳು ಹೆಡೆಯ, ಐದು ಹೆಡೆಯ, ಮೂರು ಹೆಡೆಯ, ಏಕ ಹೆಡೆಯ ನಾಗನ ಮುಖವನ್ನು ಚಿತ್ರಿಸುತ್ತಾರೆ. ಆಧ್ಯತೆಗನುಗುಣವಾಗಿ ನಾಗನ ಹೆಡೆಯೊಳಗೆ ಸಂತರ್ಪಣ ರೂಪಿ ನಾಗರಾಜ, ತಂಬೂರಿ ನಾಗ, ಸುಬ್ರಹ್ಮಣ್ಯ ನಾಗ, ನಾಗಯಕ್ಷಿ ಮುಂತಾದ ಹಲವಾರು ಶಾಸ್ತ್ರೀಯ ರೂಪಗಳನ್ನು ಚಿತ್ರಿಸಲಾಗುತ್ತದೆ. ಮಂಡಲದ ಸುತ್ತಲೂ ಸಾಕಷ್ಟು ಪತ್ರ ಪುಷ್ಪ, ಹಿಂಗಾರ, ಫಲವಸ್ತು ವಸ್ತ್ರ, ಗೋಪಿ, ಚಂದನಾದಿಗಳಿಂದ ಅಲಂಕರಿಸುತ್ತಾರೆ. ಸ್ವಸ್ತಿಕೆ ಇಡುತ್ತಾರೆ. ಪೂಜಾರಂಭ ಕಾಲದಲ್ಲಿ ಸಂಕಲ್ಪಮಾಡಿ ನವಮಂಡಲ ಮತ್ತು ಬೃಹನ್ಮಂಡಲದ ಮಧ್ಯಭಾಗದಲ್ಲಿ ಆಯಾ ಕೋಣೆಗಳಲ್ಲಿ ಆಯಾ ನಾಗದೇವತೆಗಳನ್ನು ಆವಾಹನೆ ಮಾಡುತ್ತಾರೆ.

ಮಂಡಲ ರಚನೆಯಾದ ಬಳಿಕ ಪ್ರಾರ್ಥನೆ ಇತ್ಯಾದಿಗಳ ಬಳಿಕ ವಿದ್ಯುಕ್ತವಾದ ವಿಧಿ ವಿಧಾನಗಳು ನಡೆಯುತ್ತವೆ. ನವಪದ ಮಂಡಲಗಳಲ್ಲಿ ಬಲಿ ಪ್ರಧಾನವಾಗುತ್ತದೆ. ಕೊನೆಯದಾಗಿ ದೊಡ್ಡ ಮಂಡಲದ ಎಡಬದಿಯಲ್ಲಿರುವ ಸಹಸ್ರದಳ ಮಂಡಲದಲ್ಲಿ ತರ್ಪಣ ಕ್ರಿಯೆ ಪ್ರಧಾನ ಅರ್ಚಕರಿಂದ ನಡೆಯುತ್ತದೆ. ಮಂಡಲದ ಮಧ್ಯದಲ್ಲಿ ದೊಡ್ಡ ಪಾತ್ರೆಯಲ್ಲಿ ಪಂಚಾಮೃತವನ್ನು ಇಡುತ್ತಾರೆ. ಇದು ಹಾಲು, ಎಳನೀರು, ಬೆಲ್ಲ, ಅಕ್ಕಿಹಿಟ್ಟು, ಅರಳು, ಜೇನು, ತುಪ್ಪ, ಅರಶಿನ, ಎಳ್ಳು, ಅಪ್ಪ ಇತ್ಯಾದಿಯಾಗಿ ೧೦ ಬಗೆಯ ದ್ರವ್ಯಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದು ತಾಂತ್ರಿಕ ರೀತಿಯಲ್ಲಿ ನಡೆಸುವ ಕ್ರಿಯೆ ತರ್ಪಣ ನಡೆಸುವ ಅರ್ಚಕರು ಒಂದು ಕೈಯಲ್ಲಿ ಉರಿಯುವ ದೊಂದಿಯನ್ನು ಹಿಡಿದುಕೊಂಡು ತರ್ಪಣ ಕ್ರಿಯೆ ನಡೆಸುತ್ತಾರೆ. ಕೊನೆಯ ಅಂಗವಾಗಿ ದೊಂದಿಯನ್ನು ಪಂಚಾಮೃತದಲ್ಲಿ ಮುಳುಗಿಸಿ ಪಾತ್ರೆಯನ್ನು ಮಂಡಲದಲ್ಲಿ ಕವಚಿ ಹಾಕುತ್ತಾರೆ. ಕೊನೆಯಲ್ಲಿ ಮಹಾಪೂಜೆ ನಡೆದು, ನಾಗದರ್ಶನ ನಡೆಸಲಾಗುತ್ತದೆ. ದರ್ಶನದಲ್ಲಿ ನಾಗ ಪಾತ್ರಿಯಿಂದ ಅಭಯ ಪಡೆದು ಪ್ರಸಾದ ವಿತರಣೆಯಾಗುತ್ತದೆ. ಬಳಿಕ ವಿದ್ಯುಕ್ತವಾಗಿ ಈ ಕ್ರಿಯೆ ಕೊನೆಗೊಳ್ಳುತ್ತದೆ.

೬.೫.೬ ನಾಗ ದರ್ಶನ

ನಾಗಪಾತ್ರಿಯ ಮೈಮೇಲೆ ನಾಗನನ್ನು ಆವೇಶ ಬರಿಸಿ ಪಾತ್ರಿಯಿಂದ ಅಭಯ ಮತ್ತು ಕುಟುಂಬದ ಅಥವಾ ವ್ಯಕ್ತಿಯ ಸಮಸ್ಯೆಗೆ ಪರಿಹಾರವನ್ನು ಪಡೆದುಕೊಳ್ಳುವ ವಿದ್ಯುಕ್ತ ಕ್ರಿಯೆಯೇ 'ದರ್ಶನ'. ತುಳುನಾಡಿನಾದ್ಯಂತ ನಾಗ-ಬ್ರಹ್ಮ ದರ್ಶನವನ್ನೇ ವೃತ್ತಿಯನ್ನಾಗಿಸಿಕೊಂಡಿರುವ ಶಿವಳ್ಳಿ, ಕೋಟ ಮತ್ತು ಸ್ಮಾರ್ಥ ಸಂಪ್ರದಾಯದ ಬ್ರಾಹ್ಮಣ

ವ್ಯಕ್ತಿಗಳಿರುತ್ತಾರೆ. ಇದು ಅವರಿಗೆ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಅಂಥಃವರಿಗೆ ಸಮಾಜದಲ್ಲಿ ಗೌರವದ ಸ್ಥಾನ ಇರುತ್ತದೆ. ಲೋಕರೂಢಿಯಲ್ಲಿ ಅವರನ್ನು 'ಪಾತ್ರಿ' ಅಥವಾ 'ದರ್ಶನ ಪಾತ್ರಿ' ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ಹೂ ಕೊಡುವುದು.

ವ್ಯಕ್ತಿಯು ಹೊಸತಾಗಿ ದರ್ಶನ ಪಾತ್ರಿಯಾಗಿ ನಿಯುಕ್ತಿಗೊಳ್ಳಬೇಕಾದರೆ ವಿದ್ಯುಕ್ತವಾದ ಒಂದು ಸಂಸ್ಕಾರವನ್ನು ಆಚರಿಸಲಾಗುತ್ತದೆ. ಇದನ್ನು 'ಹೂ ಕೊಡುವುದು' ಎಂದು ಕರೆಯಲಾಗುತ್ತದೆ. ಪಾತ್ರಿಯಾಗುವ ವ್ಯಕ್ತಿಗೆ ಈಗಾಗಲೇ ದರ್ಶನ ಪಾತ್ರಿಯಾಗಿರುವ ವ್ಯಕ್ತಿ ದೇವಿಸಾನಿಧ್ಯ ಅಥವಾ ನಾಗ ಸಾನಿಧ್ಯದಲ್ಲಿ ಹಿಂಗಾರದ ಹೂವನ್ನು ಕೊಟ್ಟು ವಿದ್ಯುಕ್ತವಾಗಿ ದರ್ಶನಕ್ಕೆ ಚಾಲನೆಯನ್ನು ನೀಡುತ್ತಾನೆ. ದರ್ಶನ ಪಾತ್ರಿಯಾಗಬೇಕಾದವನು ವಿವಾಹಿತ ನಾಗಿರಬೇಕಾಗುತ್ತದೆ. ಕರಾವಳಿಯ ಯಾವುದೇ ದರ್ಶನ ಮಾಧ್ಯಮದಲ್ಲಿ ಹಿಂಗಾರ ಅಗತ್ಯವಾಗಿ ಬೇಕು. ಹಿಂಗಾರ ವಿಲ್ಲದೆ ದರ್ಶನ ಸಾಧ್ಯವಿಲ್ಲ. ತುಳು ಸಂಸ್ಕೃತಿಯಲ್ಲಿ ಹಿಂಗಾರಕ್ಕೆ ಅತಿ ಪ್ರಾಮುಖ್ಯತೆ ನೀಡಿರುವುದು ಕಂಡು ಬರುತ್ತದೆ. ಪ್ರತಿಯೊಂದು ಶುಭ ಸಂದರ್ಭದಲ್ಲಿಯೂ ಹಿಂಗಾರವನ್ನು ಶುಭ ಸಂಕೇತವಾಗಿ ಬಳಸಲಾಗುತ್ತದೆ. ಮದುವೆ, ಸೀಮಂತ ಮೊದಲಾದ ಸಂದರ್ಭದಲ್ಲಿ ಹೆಣ್ಣಿಗೆ ಎಳೆಯದಾದ ಇಡಿಯ ಹಿಂಗಾರವನ್ನು ಮುಡಿಸುವ ಸಂಪ್ರದಾಯವಿದೆ. ಈ ಕುರಿತು ಡಾ. ಪುರೋಷತ್ತಮ ಬಿಳಿಮಲೆಯವರು ''ತುಳುನಾಡಿನಲ್ಲಿ ನಾಗನ ಆರಾಧನೆ ಮಾಡುವುದು ಮೂಲತಃ ಮಕ್ಕಳನ್ನು ಪಡೆಯುವುದಕ್ಕೆ ಅಂದರೆ ಮನುಷ್ಯರ ಫಲವಂತಿಕೆಯ ಆಸೆಗೂ, ನಾಗನ ಪೂಜೆಗೂ ಸಂಬಂಧವಿದೆ. ಜೊತೆಗೆ ಅಡಿಕೆಯ ಹಿಂಗಾರವು ಮದುವೆಯಲ್ಲಿ ಅಗತ್ಯವಾಗಿ ಬಳಸಲ್ಪಡುವ ವಸ್ತುವಾಗಿದೆ. ಹಿಂಗಾರದ ಒಳಗಡೆಗೆ ಇರುವ ಸಾವಿರಾರು ಅಡಿಕೆ ಹೂಗಳು ಮತ್ತು ಅಡಿಕೆಯ ಚಿಕ್ಕ ಕಾಯಿಗಳು ಸಂತಾನದ ಸಮೃದ್ಧತೆಯನ್ನು ಸಂಕೇತಿಸುತ್ತದೆ. ಇದಕ್ಕಾಗಿ ಮದುಮಕ್ಕಳಿಗೆ ಹಿಂಗಾರದಿಂದ ಮಾಡಿದ ಬಾಸಿಂಗವನ್ನು ಕಟ್ಟುತ್ತಾರೆ. ಕೇರಳದ ಉತ್ತರ ಭಾಗ ಮತ್ತು ತುಳುನಾಡಿನ ದಕ್ಷಿಣ ಭಾಗದಲ್ಲಿ ಮದುವೆಯ ದಿನ ಮಧ್ಯ ಭಾಗದಲ್ಲಿ ಹಿಂಗಾರದ ಒಂದು ಗೊಂಚಲನ್ನು ನೆಟ್ಟು, ಅದನ್ನು ಅಡುಗೆ ಮನೆಯಲ್ಲಿ ಇರಿಸುತ್ತಾರೆ. ಮಧೂವರರು ಅದಕ್ಕೆ ಕೈಮುಗಿಯುತ್ತಾರೆ. ಇಲ್ಲಿ ಅಕ್ಕಿಯು ಹಸಿವು ಮತ್ತು ಭೂಮಿಯ ಒಡೆತನವನ್ನು ಹಿಂಗಾರವು ಸಂತಾನವನ್ನು ಸಂಕೇತಿಸುತ್ತದೆ''[33] ಎಂಬುದಾಗಿ ವಿವರಿಸಿದ್ದಾರೆ. ತುಳುವರ ಪ್ರತಿಯೊಂದು ಶುಭಕಾರ್ಯಗಳಲ್ಲಿ ಫಲವಿರುವ ಹಿಂಗಾರವನ್ನೇ ಬಳಸಲಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ದರ್ಶನದಲ್ಲಿಯೂ ಹಿಂಗಾರವನ್ನು ಬಳಸಿರಬೇಕು. ಹೂ ಕೊಡುವುದು ಎಂಬ ಪದವು ಸಾಂಕೇತಿಕವಾಗಿ ದರ್ಶನ ಪಾತ್ರಿಗೆ 'ನೀಡುವ ದೀಕ್ಷೆ'ಯಾಗಿರುತ್ತದೆ. ಈ ರೀತಿ ಪಾತ್ರಿಯಾಗಿ ನಿಯುಕ್ತಿಗೊಂಡ ವ್ಯಕ್ತಿಯು ಮುಂದೆ ಕೇಶ ಮುಂಡನ ಮಾಡಿಸಬಾರದು ಎಂಬ ನಂಬಿಕೆಯಿದೆ. ಆ ಹಿನ್ನೆಲೆಯಲ್ಲಿ ಕರಾವಳಿಯ ದರ್ಶನ ಪಾತ್ರಿಗಳೆಲ್ಲ ನೀಳವಾದ ಕೂದಲನ್ನು ಬಿಟ್ಟಿರುತ್ತಾರೆ. ಪಾತ್ರಿಗಳು ನಾಗ, ಬ್ರಹ್ಮ ಮತ್ತು ದೇವಿ ಸಾನ್ನಿಧ್ಯದಲ್ಲೂ ದರ್ಶನ ಸೇವೆಯನ್ನು ನಡೆಸಿಕೊಡುತ್ತಾರೆ. ಅದೇ ರೀತಿ ತುಳುನಾಡಿನಾದ್ಯಂತ ಇರುವ 'ಭೂತ'ಗಳಿಗೆ ದರ್ಶನ ಸೇವೆ ನಡೆಸುವ ಸಂಪ್ರದಾಯವಿದೆ. ಇಲ್ಲಿ ಬ್ರಾಹ್ಮಣೇತರರೇ ಪಾತ್ರಿಗಳಾಗಿ ದರ್ಶನ ಸೇವೆ ನಡೆಸಿಕೊಡುತ್ತಾರೆ. ನಾಗ, ಬ್ರಹ್ಮ, ದೇವಿ ಇತ್ಯಾದಿ ವೈದಿಕರಿಂದ ಅರ್ಚನೆ ಕೈಗೊಳ್ಳುವ ಸಾನ್ನಿಧ್ಯದಲ್ಲಿ ವೈದಿಕೇತರರು ದರ್ಶನ ನಡೆಸುವ ಸಂಪ್ರದಾಯವಿಲ್ಲ.

ನಾಗದರ್ಶನ ನಾಗ ಸಾನ್ನಿಧ್ಯದಲ್ಲಿ ನಡೆಸುವ ವಿಶೇಷ ಸೇವೆ ಎಂದು ಭಾವಿಸಲಾಗಿದೆ. ಆಶ್ಲೇಷಬಲಿ ತನು ತರ್ಪಣ ಇತ್ಯಾದಿಗಳ ಸಂದರ್ಭದಲ್ಲಿ 'ದರ್ಶನ' ಸೇವೆ ನಡೆಸಲಾಗುತ್ತದೆ. ಢಕ್ಕೆಬಲಿ ಮತ್ತು ನಾಗ ಮಂಡಲದಲ್ಲಿ ದರ್ಶನವೇ ಪ್ರಧಾನ ಮಾಧ್ಯಮ. ನಾಗ ಬನಗಳಲ್ಲಿ ನಡೆಸಬೇಕಾಗಿರುವ ಆರಾಧನೆಯ ಪ್ರಕಾರಗಳನ್ನೆಲ್ಲ ನಡೆಸಿ ಕೊನೆಯ ಅಂಗವಾಗಿ ದರ್ಶನ ಸೇವೆಯನ್ನು ನಡೆಸಲಾಗುತ್ತದೆ. ದರ್ಶನಕ್ಕೆ ಹಿನ್ನೆಲೆಯಾಗಿ 'ನಾಗಸ್ವರ'ವನ್ನು ಬಳಸಲಾಗುತ್ತದೆ. ದರ್ಶನ ಪಾತ್ರಿಯು ಕೆಂಪು 'ಪಟ್ಟೆ'ಯ 'ಕಚ್ಚೆ'ವನ್ನು ಉಟ್ಟುಕೊಂಡು ದರ್ಶನಕ್ಕೆ ಸಿದ್ಧರಾಗಿ ನಾಗ ಬನದಲ್ಲಿ ನಾಗ ಪ್ರತಿಮೆಗಳ ಮುಂದೆ ನಿಲ್ಲುತ್ತಾರೆ. ಅರ್ಚಕರು ಪ್ರಾರ್ಥನೆ ನಡೆಸಿ ಪಾತ್ರಿಗೆ ಹಿಂಗಾರದ ಹೂಗಳನ್ನು ಕೈ ತುಂಬ ನೀಡಿ ನೀರು ಚಿಮುಕಿಸುತ್ತಾರೆ. ಹಿನ್ನೆಲೆಯಲ್ಲಿ ನಾಗಸ್ವರವನ್ನು ವಿಶಿಷ್ಟ ಸ್ವರದಲ್ಲಿ ನುಡಿಸುತ್ತಾ ತಾರಕ ಸ್ವರಕ್ಕೆ ಕೊಂಡೊಯ್ಯುತ್ತಿದ್ದಂತೆ ನಾಗ ಪಾತ್ರಿಯ ಮೈಮೇಲೆ ನಾಗನು ಆಹ್ವಾನಿಸಲ್ಪಡುತ್ತಾನೆ. ಪ್ರೇಕ್ಷಕರಾಗಿ ಸುತ್ತಲೂ ಭಕ್ತಾದಿಗಳು ನಿಂತಿರುತ್ತಾರೆ. ಇಲ್ಲಿ ಪಾತ್ರಿಯು 'ನಾಗ'ನ ಪ್ರತಿನಿಧಿಯಾಗಿ ಪಾತ್ರವಹಿಸುತ್ತಾನೆ. ಪಾತ್ರಿಯು ನಾಗಸ್ವರದ ಹಿನ್ನೆಲೆಯೊಂದಿಗೆ ದೈಹಿಕವಾಗಿ ತನ್ನ ದೇಹದ ಪ್ರತಿಭಾಗವನ್ನು ಕುಣಿಸುತ್ತಾ, ಕೈಯಲ್ಲಿ ಹಿಡಿದಿರುವ ಹಿಂಗಾರದ, ಹೂವನ್ನು ಮುಖಕ್ಕೆ ಉಜ್ಜಿಕೊಳ್ಳುತ್ತಾ, ಆವೇಶಭರಿತನಾಗಿ ಥರ ಥರ ನಡುಗುತ್ತಾ ಹಾವಿನಂತೆ ಬುಸುಗುಡುತ್ತಾ, ಬಳುಕುತ್ತಾ ಕುಣಿದು ಹೂವನ್ನು ಮುಖಕ್ಕೆ ಉಜ್ಜಿ ಪುಡಿ ಮಾಡುತ್ತಾನೆ. ಕೈ ನೀಡಿದಾಗ ಅರ್ಚಕರು ಮತ್ತೆ ಮತ್ತೆ ಹೂವನ್ನು ನೀಡಿ ನೀರು ಸುರಿಯುತ್ತಾರೆ. ಈ ಸಂದರ್ಭದಲ್ಲಿ ಯಥೇಚ್ಛವಾಗಿ ಸಿಂಗಾರದ ಹೂವನ್ನು ಬಳಸಲಾಗುತ್ತದೆ. ಢಕ್ಕೆಬಲಿ ಮತ್ತು ನಾಗಮಂಡಲಗಳಲ್ಲಿ ಸಿಂಗಾರದ ರಾಶಿಯೇ ಬಿದ್ದಿರುತ್ತದೆ.

ಕೈಯಲ್ಲಿರುವ ಹೂವನ್ನು ವೇಗವಾಗಿ ಮುಖಕ್ಕೆ ಉಜ್ಜಿಕೊಳ್ಳುತ್ತಿದ್ದಂತೆ ಪಾತ್ರಿ ನಿಧಾನವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಾನೆ. ಹೂವನ್ನು ಮೇಲ್ಮುಖವಾಗಿ ಎತ್ತುವುದರೊಂದಿಗೆ ನಾಗಸ್ವರ ನಿಲ್ಲುತ್ತದೆ. ಆ ಸಂದರ್ಭ ಕುಟುಂಬದ ಹಿರಿಯ ವ್ಯಕ್ತಿ ಅಥವಾ ಯಾರು ನಾಗದರ್ಶನ ಸೇವೆ ನೀಡಿದ್ದಾರೆಯೋ ಅವರು ಮುಂದೆ ನಿಲ್ಲುತ್ತಾರೆ. ಪಾತ್ರಿ ಅರ್ಚಕರ ಮುಖೇನ ವ್ಯವಹರಿಸುತ್ತಾನೆ. ಇಲ್ಲಿ ಪ್ರಧಾನವಾಗಿ ಅರ್ಚಕನು ಭಕ್ತರ ಮತ್ತು ಪಾತ್ರಿಯ ನಡುವಿನ ಕೊಂಡಿಯಾಗಿ ಪಾತ್ರವಹಿಸುತ್ತಾನೆ. ಅರ್ಚಕ ಭಕ್ತಾದಿಗಳ ಅಥವಾ ಕುಟುಂಬದ ಅಥವಾ ಯಾವುದೇ ವ್ಯಕ್ತಿಯ ಸಮಸ್ಯೆ, ಬೇಡಿಕೆ ಇತ್ಯಾದಿಗಳನ್ನು ನಾಗಪಾತ್ರಿಯಲ್ಲಿ ನಿವೇದಿಸಿಕೊಳ್ಳುತ್ತಾನೆ. ಆಗ ನಾಗಪಾತ್ರಿಯು ಸಮಸ್ಯೆಗೆ ಕಾರಣ ಪರಿಹಾರ ಇತ್ಯಾದಿಗಳನ್ನು ಅರ್ಚಕನ ಮುಖೇನ ಸಂಬಂಧಿಸಿದವರಿಗೆ ಸೂಚಿಸುತ್ತಾನೆ. ಈ ರೀತಿ ಹೇಳಿಕೆ ಕೇಳಿಕೆ ಕಾರ್ಯಕ್ರಮ ಮುಗಿದ ಮೇಲೆ ನಾಗ ಪಾತ್ರಿಯಿಂದ ಭಕ್ತಾದಿಗಳಿಗೆ ಪ್ರಸಾದ ವಿತರಣೆಯಾಗುತ್ತದೆ. ಕೊನೆಗೆ ಕುಟುಂಬದ ಕರ್ತೃವಿಗೆ ಪ್ರಸಾದ ನೀಡಲಾಗುತ್ತದೆ. ಕೊನೆಗೊಮ್ಮೆ ಭಕ್ತಾದಿಗಳಿಗೆ ಅಭಯ ನೀಡಿ ಮತ್ತೊಮ್ಮೆ ನಾಗಸ್ವರದ ಹಿನ್ನೆಲೆಯಲ್ಲಿ ತಾರಕ ರೀತಿಯಲ್ಲಿ ಆವೇಶಗೊಂಡು ಬಾಗಿ ತೆಂಗಿನ ಕಾಯಿ ನೆಲಕ್ಕೆ ಬಡಿಯುವುದರೊಂದಿಗೆ ಆವೇಶ ಕೊನೆಗೊಳ್ಳುತ್ತದೆ.

ನಾಗ ದರ್ಶನ ನಾಗಾರಾಧಕರ ವಿಶಿಷ್ಟ ರೀತಿಯ ಒಂದು ಆಚರಣೆ. ಈ ಪ್ರಕ್ರಿಯೆಯು ಸಂಪೂರ್ಣವಾಗಿ ದರ್ಶನ ಪಾತ್ರಿಯನ್ನು ಅವಲಂಬಿಸಿಕೊಂಡಿರುತ್ತದೆ. ಎಷ್ಟೋ ವೇಳೆ ಕುಟುಂಬ ಕಲಹಗಳು ಮತ್ತಿತರ ಸಮಸ್ಯೆಗಳನ್ನು ತೀರ್ಮಾನಕ್ಕಾಗಿ ದರ್ಶನ ಪಾತ್ರಿಯ ಮುಂದಿಡುವುದಿದೆ. ಆ ಸಂದರ್ಭಗಳಲ್ಲಿ ಪಾತ್ರಿಯು ಉತ್ತಮ

ವಿಚಾರವಾದಿಯಾಗಿದ್ದಲ್ಲಿ ಆರೋಗ್ಯಕರವಾದ ತೀರ್ಮಾನವನ್ನು ನೀಡಲು ಸಾಧ್ಯವಿದೆ. ಈತ ದೇವರು ಮತ್ತು ಸಮಾಜದ ನಡುವಿನ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಾನೆ. ಭಕ್ತರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದರಲ್ಲಿಯೂ ಕೂಡ ಆತ ವಿವೇಕಿಯಂತೆ ವರ್ತಿಸಬೇಕಾಗುತ್ತದೆ. ಅವರಲ್ಲಿ ಒಂದು ರೀತಿಯ ಸಾಮಾಜಿಕ ಹಿತದೃಷ್ಟಿ ಅಥವಾ ಲೋಕಾನುಭವ ಮತ್ತು ಪ್ರಗತಿಶೀಲ ಮನೋಧರ್ಮ ವಿಶಾಲದೃಷ್ಟಿ ಇದ್ದರೆ ದರ್ಶನ ಎಂಬ ಮಾಧ್ಯಮದಿಂದ ಅದ್ಭುತವನ್ನು ಸಾದಿಸಲಿಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಸಮಾಜವನ್ನು ಕಟ್ಟುವ ಕೆಲಸವನ್ನು ಇದರಿಂದ ಮಾಡಲು ಸಾಧ್ಯವಾಗುತ್ತದೆ. ಅಂದರೆ ಅಜ್ಞಾನವನ್ನು ಸ್ಥಾಪನೆ ಮಾಡದೆ ಜನರಿಗೆ ಧರ್ಮದ ಬಗ್ಗೆ ಇರುವ ಅಪನಂಬಿಕೆಗಳನ್ನು ಹೋಗಲಾಡಿಸಲು ಸಾಧ್ಯ. ಆದರೆ ಅವರಲ್ಲಿ ಸ್ವಾರ್ಥ ಅಥವಾ ಅಜ್ಞಾನ ಹೆಚ್ಚು ತುಂಬಿದ್ದರೆ ಸಮಾಜಕ್ಕೆ ಇದರಿಂದ ಹಾನಿಯೇ ಹೊರತು ಒಳಿತಿಲ್ಲ. ಕೆಲವು ಪಾತ್ರಿಗಳು ಕುಟುಂಬದ ಆರ್ಥಿಕ ಸ್ಥಿತಿಗತಿಯನ್ನು ಗಮನಿಸಿ ನಾಗಮಂಡಲಗಳಂಥ ಪರಿಹಾರಗಳನ್ನು ಸೂಚಿಸುವುದಿದೆ. ಇದು ಭಕ್ತಾದಿಗಳಿಗೆ ಹೊರೆಯಾಗುತ್ತದಯೇ ಹೊರತು ಸಮಸ್ಯೆಯ ಪರಿಹಾರವಲ್ಲ. ನಾಗಾರಾಧನೆಯಲ್ಲಿ ದರ್ಶನವು ಆರಾಧನೆ ಒಂದು ಪ್ರಬಲ ಮಾಧ್ಯಮವಾಗಿರುವುದರಿಂದ ದರ್ಶನ ಪಾತ್ರಿಯು ಕೂಡ ಉತ್ತಮ ಸಂಸ್ಕಾರವಂತನಾಗಿರಬೇಕಾಗುತ್ತದೆ.

೬.೫.೭. ವೈದ್ಯರು

ನಾಗಮಂಡಲ, ಡಕ್ಕೆ ಬಲಿಗಳಂಥ ನಾಗ-ಬ್ರಹ್ಮ ಸಂಬಂಧಿ ಆರಾಧನ ಪ್ರಕ್ರಿಯೆಗಳಲ್ಲಿ ಭಾಗವಹಿಸುವ, ಬ್ರಾಹ್ಮಣರಲ್ಲಿ ಒಂದು ಪಂಗಡ. 'ವೈದ್ಯ' ಕುಲನಾಮವು ಪಂಡಿತ ಪರಂಪರೆಯಿಂದ ಬಂದಿರುವ ಹೆಸರು ಎನ್ನುವುದು ಇವರ ಕುಟುಂಬ ವಲಯದಲ್ಲಿರುವ ಪ್ರತೀತಿ. ಇವರ ಹಿರಿಯರು ವಿಷವೈದ್ಯ, ಸ್ತ್ರೀಯರಿಗೆ, ಜಾನುವಾರುಗಳಿಗೆ ತಲೆ ತಲಾಂತರದಿಂದ ಚಿಕಿತ್ಸೆ ನೀಡುತ್ತಿದ್ದರಂತೆ. ಇದರ ಕುರಿತಾದ ಹಳೆಗನ್ನಡದಲ್ಲಿರುವ ಲಿಖಿತ ಗ್ರಂಥವೇ ತಮ್ಮ ಬಳಿ ಇದೆಯೆಂದು ಹೇಳಿಕೊಳ್ಳುತ್ತಾರೆ.

ಕುಂದಾಪುರ ತಾಲೂಕಿನ ಅಂಪಾರು, ಗೋಳಿಯಂಗಡಿ, ಮತ್ತು ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಮುದ್ದೂರು, ಸೂರಾಲ್‌ಗಳಲ್ಲಿ ವೈದ್ಯರ ಮೇಳದ ಕುಟುಂಬಗಳು ವಾಸ್ತವ್ಯವಿದೆ. ಇವರ ಕುಲದೇವರು ಬೆಳ್ತಂಗಡಿ ತಾಲೂಕಿನ 'ಕೊಕ್ಕಡದ ವೈದ್ಯನಾಥೇಶ್ವರ' ಎಂಬುದು ವ್ಯಕ್ತವಾಗಿದೆ. ಹಿಂದೆ ಬ್ರಾಹ್ಮಣ ಸಮುದಾಯದವರು ಇವರೊಂದಿಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುತ್ತಿದ್ದರೆ ಈಗ ಈ ಸಾಂಪ್ರದಾಯಗಳಲ್ಲಿ ಸಡಿಲತೆ ಕಂಡು ಬಂದಿದೆ.

ವೈದ್ಯ ಕಲಾವಿದರ ತಂಡವನ್ನು 'ಮೇಳ' ಎಂದು ಕರೆಯಲಾಗುತ್ತದೆ. ಈ ವರ್ಗಕ್ಕೆ ವೃತ್ತಿಯು ತಲೆ ತಲಾಂತರದಿಂದ ಅಥವಾ ಪರಂಪರೆಯಿಂದ ಬಂದಿದೆ ಎಂಬ ಪ್ರತೀತಿ ಇದೆ. ವೈದ್ಯ ಸಮುದಾಯದವರಿಗೆ ನೃತ್ಯ ಕಸುಬು ಬಂದಿರುವ ಕುರಿತಾಗಿ ಐತಿಹ್ಯವೊಂದು ಪ್ರಚಲಿತದಲ್ಲಿದೆ. 'ಡಕ್ಕೆ' ಅಥವಾ 'ಢಮರು' ಇದು ಇವರ ವಂಶಕ್ಕೆ ಈಶ್ವರನ ವರದಾನವಾಗಿ ಬಂದಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

'ತಾಂಡವ ನೃತ್ಯದಲ್ಲಿ ಈಶ್ವರ ತಾನು ನುಡಿಸಿದ ಈ ಡಮರುವನ್ನು ಮುಂದೆ ಋಷಿಗಳಿಗೆ ನೀಡಲು ಬಂದಾಗ ಯಾರೂ ಅದನ್ನು ಸ್ವೀಕರಿಸಲು ಮುಂದೆ ಬರಲಿಲ್ಲ. ಇದು ಚರ್ಮವಾದ್ಯವಾಗಿರುವುದರಿಂದ ಬ್ರಾಹ್ಮಣರು, ಋಷಿಗಳು

ಎಲ್ಲರೂ ತಿರಸ್ಕರಿಸುತ್ತಾರೆ. ಈಗ ಬ್ರಾಹ್ಮಣರೇ ಆಗಿದ್ದ ವೈದ್ಯ ಸಮುದಾಯದ ಹಿರಿಯರುಗಳು ಡಮರುವನ್ನು ಶಿವನಿಂದ ಸ್ವೀಕರಿಸುತ್ತಾರೆ. ಚರ್ಮವಾದ್ಯವನ್ನು ಇವರು ಸ್ವೀಕರಿಸಿರುವುದರಿಂದ ಬ್ರಾಹ್ಮಣರು ಇವರ ಮೇಲೆ ಬಹಿಷ್ಕಾರ ಹಾಕುತ್ತಾರೆ. ಇವರ ನಿಷ್ಠೆಗೆ ಮೆಚ್ಚಿದ ಶಿವನು ಡಮರುವನ್ನು ನೀಡುತ್ತಾ ವರದೊಂದಿಗೆ ಅವರನ್ನು ಅನುಗ್ರಹಿಸುತ್ತಾ ಈ ಕಂಚಿನ ಡಮರುವನ್ನು ಎಲ್ಲಿ ನುಡಿಸುತ್ತಾರೆಯೋ ಅದರ ನೂರು ಯೋಜನ ದೂರದ ವ್ಯಾಪ್ತಿಯಲ್ಲಿ ಒಳಪಡುವ ದೇವರು ದೈವಗಳು ಇದರ ನಿನಾದಕ್ಕೆ ಸಂತೃಪ್ತಿಯನ್ನು ಪಡೆದು ಅನುಗ್ರಹಿಸುವಂತೆ ವರ ನೀಡುತ್ತಾನೆ. ಅಷ್ಟೇ ಅಲ್ಲದೆ ಡಮರುವನ್ನು ಎಲ್ಲಿ ನುಡಿಸಲಾಗುತ್ತದೆಯೋ ಅಲ್ಲಿ ಬ್ರಹ್ಮಶಾಪ, ಸರ್ಪದೋಷ ನಿವಾರಣೆಯಾಗಲಿ ನಿಮಗೆ ಮುಂದೆ ಕಲಿಯುಗದಲ್ಲಿ ಇದರಿಂದ ವಿಶೇಷವಾದ ಹವಿರ್‌ಭಾಗ ಮತ್ತು ಸ್ಥಾನಮಾನಾದಿಗಳು ಲಭಿಸುವಂತಾಗಲಿ ಎಂದು ಆಶೀರ್ವದಿಸಿ ಅನುಗ್ರಹಿಸಿ ಡಮರುವನ್ನು ನೀಡಿದ' ನೆಂದು ತಮ್ಮ ಕುಟುಂಬಕ್ಕೆ ಡಮರು ಬಂದಿರುವ ಬಗ್ಗೆ ಇರುವ ಐತಿಹ್ಯವನ್ನು ಇವರು ಉಲ್ಲೇಖಿಸುತ್ತಾರೆ.

ಮಂಡಲದಲ್ಲಿ ಅರ್ಧನಾರಿ ವೇಷ ತೊಟ್ಟು ನೃತ್ಯ ಮಾಡಬೇಕಾದರೆ ಬ್ರಹ್ಮೋಪದೇಶ ಪಡೆದು ಬಳಿಕ ಹಿರಿಯರಿಂದ ಉಪದೇಶ ಪಡೆಯಬೇಕಾಗುತ್ತದೆ. ನಂತರವೆ ಪ್ರಾರಂಭಿಕ ನೃತ್ಯ ಶಿಕ್ಷಣ ನೀಡಲಾಗುತ್ತದೆ. ಪ್ರಾರಂಭದ ಶಿಕ್ಷಣವನ್ನು ಹಿರಿಯರಿಂದ ಮನೆಯಲ್ಲಿ ಕಲಿಸಲಾಗುತ್ತದೆ. ಮುಖ್ಯವಾಗಿ ತಾಳ, ರಾಗ, ಲಯ, ಹೆಜ್ಜೆ ಮತ್ತು ಮುದ್ರೆಗಳನ್ನು ಹಿರಿಯರು ಕಲಿಸಿಕೊಡುತ್ತಾರೆ. ತಮ್ಮ ಹಿರಿಯರು ಹೇಳಿಕೊಟ್ಟಿರುವ ಪದ್ಯ ಶ್ಲೋಕಾದಿಗಳನ್ನು ಗೌಪ್ಯವಾಗಿ ಉಳಿಸಿಕೊಳ್ಳಬೇಕೆಂಬ ನಿಯಮವಿದೆ. ಆರಾಧನೆ ಸಂದರ್ಭವನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಈ ಹಾಡನ್ನು ಹಾಡುವ ಸಂಪ್ರದಾಯವಿಲ್ಲ. ಹಾಡಿನಲ್ಲಿ ಪ್ರಧಾನವಾಗಿ ಶ್ಲೋಕ, ಮತ್ತು ದೇವ ದೈವಗಳ ವರ್ಣನೆ ಗದ್ಯರೂಪದಲ್ಲಿರುತ್ತದೆ. ಡಮರುವನ್ನು ಬೇರೆ ಬೇರೆ ಆರಾಧನೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯ ತಾಳ, ಲಯಗಳಲ್ಲಿ ನುಡಿಸಲಾಗುತ್ತದೆ.

ಪುರಾತನದಲ್ಲಿ ಕರಾವಳಿಯಲ್ಲಿ ದಕ್ಷಿಣದಲ್ಲಿ ೧೬ ಹಾಗೂ ಉತ್ತರದಲ್ಲಿ ೧೬ ಹೀಗೆ ೩೨ ಮೇಳಗಳಿದ್ದುವಂತೆ. ಆದರೆ ಅದು ಈಗ ಕ್ಷೀಣಿಸುತ್ತಾ ನಾಲ್ಕಾಗಿ, ಇತ್ತೀಚಿಗೆ ೩ ಮೇಳಗಳು ಮಾತ್ರ ತಿರುಗಾಟದಲ್ಲಿವೆ. ಮುದ್ದೂರು, ಗೋಳಿ ಅಂಗಡಿ, ಮತ್ತು ಅಂಪಾರು ಈ ಮೂರು ಮೇಳಗಳು ಇಂದು ಅಸ್ತಿತ್ವದಲ್ಲಿವೆ. ಈ ಮೂರು ಮೇಳಗಳು ನಿರ್ದಿಷ್ಟವಾದ ವ್ಯಾಪ್ತಿಪ್ರದೇಶವನ್ನು ಹೊಂದಿಕೊಂಡಿದ್ದು. ಒಂದು ಮೇಳದವರು ಇನ್ನೊಂದು ಮೇಳಕ್ಕೆ ಸೇರಿದ ವ್ಯಾಪ್ತಿ ಪ್ರದೇಶದೊಳಗೆ ಆಚರಣೆ ನಡೆಸುವಂತಿಲ್ಲ. ಮುದ್ದೂರು ಮೇಳದವರು ಕೋಟೇಶ್ವರದಿಂದ ದಕ್ಷಿಣಕ್ಕೆ ಕಾಸರಗೋಡಿನವರೆಗಿನ ಕರಾವಳಿಯ ತೀರ ಪ್ರದೇಶ ಮತ್ತು ಬೆಳ್ತಂಗಡಿ, ಮೂಡಬಿದ್ರೆ, ಮಂಗಳೂರು, ಪುತ್ತೂರಿನ ವ್ಯಾಪ್ತಿಯನ್ನು ಒಳಗೊಂಡಿವೆ. ಗೋಳಿ ಅಂಗಡಿ ಮೇಳದವರು ಕೊಲ್ಲೂರು, ಹೆಬ್ರಿ, ಕಾರ್ಕಳ ಪ್ರದೇಶದ ವ್ಯಾಪ್ತಿಯೊಳಗೆ, ಅಂಪಾರು ಮೇಳದವರು ಕುಂದಾಪುರ ಮತ್ತು ಉತ್ತರಕ್ಕೆ, ಹೀಗೆ ಪ್ರಾದೇಶಿಕವಾದ ವಿಂಗಡಣೆಯನ್ನು ಈ ಮೇಳದವರು ಮಾಡಿಕೊಂಡಿದ್ದಾರೆ.

ಒಂದು ಮೇಳದಲ್ಲಿ ಸುಮಾರು ೮ರಿಂದ ೧೦-೧೨ ಜನರವರೆಗೆ ಸದಸ್ಯರಿರುತ್ತಾರೆ. ಆಚರಣೆಯ ಸ್ವರೂಪವನ್ನು ಗಮನಿಸಿ ಸದಸ್ಯರನ್ನು ಬಳಸಿಕೊಳ್ಳಲಾಗುತ್ತದೆ. ಡಕ್ಕೆಬಲಿಯಲ್ಲಿ ಕಡಿಮೆ ಸಂಖ್ಯೆಯ ಜನರಿದ್ದು ನಾಗಮಂಡಲದಲ್ಲಿ

ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ಬಳಸಿಕೊಳ್ಳಲಾಗುತ್ತದೆ. ಇಡೀಯ ಮೇಳವು ಒರ್ವ 'ಯಜಮಾನ'ನ ನೇತೃತ್ವದಲ್ಲಿ ಕಾರ್ಯಾಚರಿಸುತ್ತದೆ. ಒಂದು ಮೇಳ ಎಂದರೆ ವೈದ್ಯ ಸಮುದಾಯದ ಕೆಲವು ಕುಟುಂಬಗಳು ಸೇರಿ, ಬೇರೆ ಬೇರೆ ಗೋತ್ರಗಳ ಕುಟುಂಬಿಕರು ಸೇರಿ ರಚಿಸಲಾಗುತ್ತದೆ. ಈ ಮೇಳದ ಸದಸ್ಯರೊಳಗೆ ಯಾವುದೇ ರೀತಿಯ ನಿಕಟ ಸಂಬಂಧವಾಗಲಿ, ಸೂತಕಾದಿಗಳನ್ನಾಗಲಿ ಆಚರಿಸುವ ಸಂಪ್ರದಾಯ ಇಲ್ಲ. ಕುಟುಂಬ ಪದ್ಧತಿಯು ಪುರುಷ ಪ್ರಧಾನವಾದ ವ್ಯವಸ್ಥೆಯನ್ನು ಒಳಗೊಂಡಿದೆ.

ತಾವು ಮಂಡ್ಲ ಸೇವೆಯಲ್ಲಿ ನುಡಿಸುವ ಕಂಚಿನ ಡಮರು ಇವರ ಆರಾಧ್ಯ ದೈವ. ಅದನ್ನು ಪೂಜನೀಯ ಸ್ಥಾನದಲ್ಲಿಟ್ಟು ಗೌರವಿಸಲಾಗುತ್ತದೆ. ತಮಗೆ ತಿರುಗಾಟವಿಲ್ಲದ ಸಂದರ್ಭದಲ್ಲಿ ನಿತ್ಯವೂ ಆ ಡಮರುವಿಗೆ ಮಂತ್ರೋಕ್ತ ಪೂಜೆನಡೆಸಿ ಹಾಲು, ಹಣ್ಣು, ನೈವೇಧ್ಯ ಮಾಡಲಾಗುತ್ತದೆ.

ವೈದ್ಯರು ಕೇವಲ ಮಂಡ್ಲ ಸೇವೆಯನ್ನು ಮಾತ್ರ ನಡೆಸುವುದಲ್ಲದೆ ಕೆಲವು ದೇವಾಲಯಗಳ ಉತ್ಸವಗಳ ಸಂದರ್ಭದಲ್ಲಿ 'ಸುತ್ತು ಸೇವೆ' ಕೂಡಾ ನಡೆಸುತ್ತಾರೆ. ಪ್ರಧಾನವಾಗಿ ನಂದಳಿಕೆ, ಹಿರಿಯಡಕ, ಪಾದೆಮಠ, ಬ್ರಹ್ಮಾವರದ ಮಹಾಲಿಂಗೇಶ್ವರ ದೇವಸ್ಥಾನ ಇಲ್ಲೆಲ್ಲ ವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಶೇಷ ಸೇವೆ ನಡೆಸುತ್ತಾರೆ. ಈ ದೇವಾಲಯಗಳಲ್ಲಿ ಉತ್ಸವದ ಸಂದರ್ಭದಲ್ಲಿ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಅಥವಾ ಶಿರದಲ್ಲಿ ಹೊತ್ತುಕೊಂಡು ದೇವಾಲಯದ ಪ್ರಕಾರದಲ್ಲಿ ಪ್ರದಕ್ಷಿಣೆ ಅಥವಾ 'ಬಲಿ' ಬರುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಅರ್ಧನಾರಿ ವೇಷದ ವೈದ್ಯರು ಮೂರ್ತಿಗೆ ಅಭಿಮುಖವಾಗಿ ಹಿಂದೆ ಹಿಂದೆ ಹೋಗುತ್ತ ನೃತ್ಯ ಸೇವೆ ನಡೆಸುವ ಸಂಪ್ರದಾಯವಿದೆ. ಇಲ್ಲಿಯೂ ಕೂಡ ನಾಗಮಂಡಲದ ನೃತ್ಯ ಶೈಲಿಯನ್ನೇ ಬಳಸಲಾಗುತ್ತದೆ. ಆದರೆ ಕಂಚಿನ ಡಕ್ಕೆಯನ್ನು ಉಪಯೋಗಿಸುವುದಿಲ್ಲ. ದೇವಾಲಯದ ೪ ದಿಕ್ಕುಗಳಲ್ಲಿಯು 'ಪವಿತ್ರ' ಹಾಕಿ ಪವಿತ್ರ ಬಿಚ್ಚುವಂತೆ ಸಾಂಕೇತಿಕವಾಗಿ ಅಭಿನಯಿಸುತ್ತಾರೆ.

ವೈದ್ಯ ಮೇಳದವರು ಒಳ್ಳೆಯ ಕಲಾವಿದರೇನೋ ನಿಜ. ಆದರೆ ಯಕ್ಷಗಾನ, ಭೂತನರ್ತಕ, ಇನ್ನಿತರ ಕಲಾವಿದರಿಗೆ ಹೋಲಿಸಿದರೆ ವೈದ್ಯ ನರ್ತಕರ ಸಂಭಾವನೆ ಅತ್ಯದಿಕ. ಜನಸಾಮಾನ್ಯನಾದವನು ನಾಗಮಂಡಲವೇಕೆ ಡಕ್ಕೆ ಬಲಿಯನ್ನು ಕೂಡ ಇವರ ಅತ್ಯದಿಕ ಸಂಭಾವನೆಯಿಂದಾಗಿ ನಡೆಸುವಂತಿಲ್ಲ. ಇವರ ಮೇಳಗಳು ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿರುವುದರಿಂದ ಮತ್ತು ಪ್ರದೇಶವಾರು ವಿಂಗಡಣೆಯನ್ನು ಇವರು ಮಾಡಿಕೊಂಡಿರುವುದರಿಂದ ಈ ಧಾರ್ಮಿಕ ವಿಚಾರದಲ್ಲಿ ಒಂದು ರೀತಿಯ ಶೋಷಣೆ ಎನ್ನಬಹುದಾದ ರೀತಿಯಲ್ಲಿ ಜನರನ್ನು ಆತಂಕಕ್ಕೆ ಗುರಿಪಡಿಸುವಂತದ್ದು ನಡೆಯುತ್ತಾ ಇದೆ. ಇಲ್ಲಿ ನಂಬಿಕೆಯೆಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಒಂದು ರೀತಿಯ ಅನಾವಶ್ಯಕ ಭಯ ಭೀತಿಯನ್ನು ಉಂಟುಮಾಡುವಂತದ್ದು ಕೂಡ ನಡೆಯುತ್ತಿದೆ.

ಇಂದು ವೈದ್ಯಮೇಳದ ಮತ್ತು ಮೇಳದ ಸದಸ್ಯರ ಸಂಖ್ಯೆ ಇಳಿಮುಖವಾಗುತ್ತಿದೆ. ಇದಕ್ಕೆ ಕಾರಣ ಈ ಸಮುದಾಯದ ಯುವ ಜನತೆ ಈ ಕಲಾ ಪ್ರಕಾರವನ್ನು ಮುಂದುವರೆಸಿಕೊಂಡು ಹೋಗಲು ಇಷ್ಟಪಡದೆ ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದೇ ಆಗಿದೆ.

೬.೫.೮ ಡಕ್ಕೆ ಬಲಿ:

ಬ್ರಹ್ಮಸ್ಥಾನಗಳಲ್ಲಿ ಅಥವಾ ಆಲಡೆಗಳಲ್ಲಿ ವಾರ್ಷಿಕ ಪೂಜೆಯಾಗಿಯೂ, ಹರಕೆಯ ರೂಪದಲ್ಲಿಯೂ ನಡೆಸುವ ವಿಶಿಷ್ಟ ರೀತಿಯ ಆರಾಧನ ಪ್ರಕಾರವೇ ಡಕ್ಕೆ ಬಲಿ. ಇಲ್ಲಿ ಎರಡು ಪದಗಳ ಬಳಕೆಯಾಗುತ್ತದೆ. 'ಡಕ್ಕೆ' ಎಂಬ ಚರ್ಮವಾದ್ಯ ಮತ್ತು ಆಚರಣೆಯ ಕೊನೆಯಲ್ಲಿ ಪರಿವಾರ ದೇವತೆಗಳಿಗೆ ದೇವಾಲಯದ ಸುತ್ತ ನಡೆಸುವ 'ಬಲಿ' ಸೇವೆ. ಈ ಎರಡು ಪದಗಳ ಸಮ್ಮಿಳನದೊಂದಿಗೆ 'ಡಕ್ಕೆ ಬಲಿ' ಎಂಬ ವಿಶಿಷ್ಟ ರೀತಿಯ ಆಚರಣೆ ನಡೆಸಲಾಗುತ್ತದೆ. 'ಬಲಿ' ಎಂಬುದು ಬಹುಶಃ ಪೂರ್ವದಲ್ಲಿ ಸಂಬಂಧ ಪಟ್ಟ ದೇವತೆಗಳಿಗೆ ಸಲ್ಲುತ್ತಿದ್ದ 'ರಕ್ತಬಲಿ' ಯಾಗಿರಬೇಕು. ಈಗ ಹೆಸರಿಗೆಷ್ಟೇ ಬಳಕೆಯಾಗುತ್ತದೆ. ಈ ವಿಚಾರವನ್ನು ಮುಂದೆ ವಿಶ್ಲೇಷಿಸಲಾಗುವುದು. ಈ ಆಚರಣೆಯನ್ನು ಬ್ರಹ್ಮಸ್ಥಾನ ಅಥವಾ ಆಲಡೆಗಳಲ್ಲಿ ಬ್ರಹ್ಮ ಸಾನ್ನಿಧ್ಯವಿರುವಲ್ಲಿ ಬ್ರಹ್ಮ ಪ್ರಿತ್ಯರ್ಥವಾಗಿ ನಡೆಸಲಾಗುತ್ತದೆ.

ಡಕ್ಕೆ ಬಲಿಯು ಬ್ರಾಹ್ಮಣ ಅರ್ಚಕ ಬ್ರಾಹ್ಮಣ ನಾಗ ಪಾತ್ರಿ ಮತ್ತು ಬ್ರಾಹ್ಮಣರದ್ದೇ ಒಂದು ಉಪವರ್ಗವಾದ 'ವೈದ್ಯ' ಪಂಗಡದ ನಾಗನರ್ತಕ (ಅರ್ಧನಾರಿ) ಇವರ ಕೊಡುವಿಕೆಯಿಂದ ನಡೆಯುವ ವಿದ್ಯುಕ್ತಕ್ರಿಯೆ. ನಾಗಮಂಡಲ ಮತ್ತು ಡಕ್ಕೆಬಲಿಯ ನೃತ್ಯಾಚರಣೆಯ ಸ್ವರೂಪ ಒಂದೇ ಆಗಿದ್ದರೂ ಆರಾಧನ ಉದ್ದೇಶ ಮಾತ್ರ ಬೇರೆ ಬೇರೆ ನೃತ್ಯವಿಧಾನದಲ್ಲಿ ವಿಶೇಷ ವ್ಯತ್ಯಾಸವೇನು ಇಲ್ಲ. ನಾಗಮಂಡಲ ನಾಗ ಪ್ರೀತ್ಯರ್ಥವಾಗಿ ನಡೆದರೆ ಡಕ್ಕೆ ಬಲಿ ಬ್ರಹ್ಮ ಸ್ಥಾನಗಳಲ್ಲಿ ನಡೆಯುತ್ತದೆ. ಡಕ್ಕೆಬಲಿ ವಿಶೇಷವಾಗಿ ಬ್ರಹ್ಮಸ್ಥಾನಗಳಲ್ಲಿ ವಾರ್ಷಿಕ ಆಚರಣೆಯ ರೂಪದಲ್ಲಿ ವರ್ಷ ವರ್ಷವೂ ಅಥವಾ ಎರಡು ವರ್ಷಕ್ಕೊಮ್ಮೆ ನಡೆಯುವ ಆರಾಧನ ಪ್ರಕಾರ. ನಾಗಮಂಡಲ ಹರಕೆಯ ರೂಪದಲ್ಲಿ ಒಬ್ಬ ವ್ಯಕ್ತಿ, ಕೌಟುಂಬಿಕ ನೆಲೆಯಲ್ಲಿ ಅಥವಾ ಒಂದು ಊರಿನ, ಒಂದು ಸಮುದಾಯದ ನೆಲೆಯಲ್ಲಿ ಕೊಡಲ್ಪಡುವ ವಿಶೇಷ ಸೇವೆ. ಅಧ್ಯಯನದ ಅನುಕೂಲತೆಗಾಗಿ ಡಕ್ಕೆಬಲಿ ಮತ್ತು ನಾಗಮಂಡಲ ಆರಾಧನ ಪ್ರಕಾರಗಳನ್ನು ಪ್ರತ್ಯೇಕವಾಗಿ ನಿರೂಪಿಸಲಾಗುವುದು.

ಹಿನ್ನೆಲೆ:

ಈ ಎರಡು ಪ್ರಕಾರಗಳು ವೈದ್ಯರೆನ್ನುವ ನಾಗನರ್ತಕ ವರ್ಗದವರಿಂದ ನಡೆಸಲ್ಪಡುವುದರಿಂದ ಎರಡೂ ಪ್ರಕಾರಗಳು ಜೊತೆ ಜೊತೆಯಾಗಿಯೇ ಆಚರಣೆಗೆ ಬಂದಿರಬಹುದೆಂದು ಭಾವಿಸಲಾಗಿದೆ. ಆದರೂ ಎಂದಿನಿಂದ ಮೊದಲಾಯಿತು ಎನ್ನುವುದಕ್ಕೆ ಯಾವುದೇ ರೀತಿಯ ಲಿಖಿತ ಆಧಾರಗಳಿಲ್ಲ. ನಾಗನ ಪ್ರಿತ್ಯರ್ಥವಾಗಿ ಇಲ್ಲಿಯ ಸ್ಥಳೀಯ ಮೂಲ ನಿವಾಸಿಗಳು ನಡೆಸುತ್ತಿದ್ದ ನಾಗನೃತ್ಯ ಆರ್ಯರ ಪ್ರಭಾವದಿಂದ ಬದಲಾವಣೆಗೊಂಡಿರಬೇಕು ಎನ್ನುವುದು ವಿದ್ವಾಂಸರ ಅಭಿಮತ. ಡಕ್ಕೆ ಬಲಿಯು ''ಪ್ರಾಚೀನ ದೆವ್ವಾರಾಧನೆಯ ಮೇಲೆ ಆರ್ಯ ಸಂಸ್ಕೃತಿಯ ವರ್ಚಸ್ಸನ್ನು ಬೀರುವ ಒಂದು ಕುಣಿತ ವಿಧಾನ'' ಎಂಬ ಅಭಿಪ್ರಾಯ ವ್ಯಕ್ತವಾಗಿದೆ.[೨೨] ಡಕ್ಕೆ ಬಲಿಯ ಅರ್ಧನಾರಿ ವೇಷದಾರಿಯಾದ ವೈದ್ಯ ಅರ್ಧ ಸ್ತ್ರೀ ಅರ್ಧ ಪುರುಷ ವೇಷದಲ್ಲಿರುತ್ತಾನೆ. ಸೀರೆಯುಟ್ಟು, ಗೆಜ್ಜೆ ಕಟ್ಟಿ, ರವಕೆ ತೊಟ್ಟು, ತಲೆಗೆ ಮುಂಡಾಸನ್ನು ಧರಿಸುತ್ತಾನೆ. ಈ ಪೂಜೆಯ ಬಗೆಯನ್ನು ಕಾಣುವಾಗ ಇದು ದೇಶೀಯವಾದ ಒಂದು ಪುರಾತನ ಸಂಪ್ರದಾಯದ ಮೇಲೆ ಅನಂತರ ಈ ನಾಡಿಗೆ ಬಂದ ಬ್ರಾಹ್ಮಣರ ದೆಸೆಯಿಂದಾಗಿ ಬಿದ್ದ ಆರ್ಯಧರ್ಮದ ಮುದ್ರೆಯಂತೆ ಕಾಣುತ್ತದೆ. ಇಲ್ಲಿ ಬಳಸುವ ಡಮರು ಶಿವನ ವಾದ್ಯ, ಅರ್ಧನಾರಿ, ಅರ್ಧ ಪುರುಷ ಶೈವ ಧರ್ಮದ

ಬಿಂದು ಕಲ್ಪನೆ. ಪ್ರಕೃತಿಯೆಂಬ ಹೆಣ್ಣು ಪುರುಷನೆಂಬ ಗಂಡನಲ್ಲಿ ಗಂಡನ್ನು ಅಥವಾ ಪುರುಷ ಪ್ರಕೃತಿಯನ್ನು ಒಲಿಸುವ ಬಗೆ ಇಲ್ಲಿ ನೃತ್ಯ ರೂಪವನ್ನು ತಾಳಿದ್ದಿರಬೇಕು ಎಂಬ ಅಭಿಪ್ರಾಯವಿದೆ.

ಉಪಲಬ್ದ ಆಕರಗಳನ್ನು ಬಳಸಿಕೊಂಡು ವಿದ್ವಾಂಸರುಗಳು ಡಕ್ಕೆಬಲಿ ಮತ್ತು ನಾಗಮಂಡಲಗಳು ಖಚಿತವಾಗಿ ಸುಮಾರು ೫೦೦ ವರ್ಷಗಳಿಂದ ಪ್ರಚಲಿತದಲ್ಲಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ''ಈ ಪೂಜಾವಿಧಿ ಎಂದಿನಿಂದ ನಮ್ಮಲ್ಲಿ ಮೊದಲಿಟ್ಟಿತು ಎನ್ನುವುದಕ್ಕೆ ಖಚಿತವಾದ ಆಧಾರವಿಲ್ಲ. ಕ್ರಿ.ಶ. ೧೪೫೮ರ ಬಾರಕೂರಿನ ಶಾಸನದಲ್ಲಿ ಡಕ್ಕೆ ಬಲಿಯ ಉಲ್ಲೇಖ ಸಿಗುತ್ತದೆ. ೧೫ನೇಯ ಶತಕಕ್ಕೆ ಅನ್ವಯಿಸಬಹುದಾದ ನಾಗಮಂಡಲದ ಶಿಲ್ಪವೊಂದು ನಂದಳಿಕೆಯಲ್ಲಿ ದೊರೆತಿದೆ. ಕ್ರಿ.ಶ. ೧೪೦೨ ರ ಬಾರಕೂರಿನ ಶಾಸನವೊಂದರಲ್ಲಿ 'ಮಂಡಲ ಭಂಡಾರಿ' ಎಂಬ ಪದ ಬರುತ್ತದೆ. ಬಹುಶಃ ನಾಗಮಂಡಲ ಸೇವೆಯನ್ನು ನಡೆಸಿಕೊಟ್ಟ ಭಂಡಾರಿಯನ್ನು ಕುರಿತು ಈ ಶಾಸನ ಪ್ರಸ್ತಾಪಿಸಿದ್ದಿರಬೇಕು. ಹೀಗಾಗಿ ಸುಮಾರು ೫೦೦ ವರ್ಷಗಳಿಂದೀಚೆಗೆ ನಾಗಮಂಡಲ ನಡೆದು ಬರುತ್ತಿದೆ'' ಎಂದು ಉಲ್ಲೇಖಿಸಿದ್ದಾರೆ.[೨೫]

ನಾಗಮಂಡಲ ಮತ್ತು ಡಕ್ಕೆಬಲಿ ಈ ಆರಾಧನ ಪ್ರಕಾರಗಳನ್ನು 'ಸಾಂಖ್ಯ ಪಂಥದ' ತಾಂತ್ರಿಕ ವಿಧಿಗೆ ಹೋಲಿಸಲಾಗಿದೆ. ''ಇಲ್ಲಿನ ನಾಗಪಾತ್ರಿ ಹಾಗೂ ಅರ್ಧನಾರಿ ವೇಷದ ವೈದ್ಯರು ಅನುಕ್ರಮವಾಗಿ ಪುರುಷ ಮತ್ತು ಪ್ರಕೃತಿಯನ್ನು ಪ್ರತಿನಿಧಿಸುತ್ತಾರೆ. ಅಂದರೆ ಇದು ಹೆಣ್ಣು ಗಂಡನ್ನು ಒಲಿಸುವ ನೃತ್ಯ ರೂಪ. ಮರಿ ಮೊಟ್ಟೆ ಸಹಿತವಾದ ನಾಗ ಸಂತಾನ ಸಮೃದ್ಧಿಯ ಪ್ರತೀಕವಾಗಿದ್ದು ನಾಗಮಂಡಲವು ಒಂದು ಕಾಲದಲ್ಲಿ ವಿಶ್ವದಾದ್ಯಂತ ಪ್ರಚಲಿತವಿದ್ದು ಫಲೋತ್ಪತ್ತಿ ಪಂಥದ ಅಂಗವಾಗಿತ್ತು, ಪುರಾತನ ಕಾಲದ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಧಾರ್ಮಿಕ ಆಚರಣೆಯಲ್ಲೂ ಸ್ತ್ರೀಯರ ಪಾತ್ರ ಮಹತ್ವದ್ದಾಗಿತ್ತು. ತಾಂತ್ರಿಕ ಪಂಥದಲ್ಲೂ ಸ್ತ್ರೀಗೆ ಪಾಶಸ್ತ್ಯ ಸಲ್ಲುತ್ತದೆ. ಪುರುಷ ಪಾತ್ರಿಯ ಜೊತೆಗೆ ಸ್ತ್ರೀಯರಿಗಿದ್ದ ಪಾತ್ರವನ್ನು ಕಸಿಯುವಾಗ ಅರ್ಧನಾರಿಯ ಅವತಾರವಾಗಿರಬಹುದೆನಿಸುತ್ತದೆ. ಗೆಜ್ಜೆ ಕಟ್ಟಿ ಕುಣಿಯುವುದು ಬ್ರಾಹ್ಮಣರಿಗೆ ನಿಷಿದ್ಧ, ಆದ್ದರಿಂದ ಅರ್ಧನಾರಿ ವೇಷ ಹಾಗೂ ಹಿಮ್ಮೇಳ ಒದಗಿಸುವ ವೈದ್ಯರನ್ನು ಬ್ರಾಹ್ಮಣರ ಒಂದು ಪ್ರಬೇದವೆಂದು ಪರಿಗಣಿಸಿ ಅವರಿಗೆ ಆ ಬಗ್ಗೆ ವಿನಾಯಿತಿ ಕಲ್ಪಿಸಲಾಗಿದೆ''[೨೬] ಎನ್ನುವುದು ತಿಳಿದುಬರುತ್ತದೆ.

'ಡಕ್ಕೆ ಬಲಿ'ಯನ್ನು ಬೇರೆ ಬೇರೆ ಹೆಸರಿನಿಂದ ಕರೆಯಲಾಗುತ್ತದೆ. ಇದಕ್ಕೆ ಮಂಡಲಸೇವೆ, ಬ್ರಹ್ಮಮಂಡಲ, ಇತ್ಯಾದಿ ಹೆಸರುಗಳಿವೆ. ಇದು ಕುಣಿತವೇ ಪ್ರಧಾನವಾಗಿರುವ ಬ್ರಹ್ಮಸಂಬಂಧಿಯಾದ ಮತಾಚಾರ. ಬ್ರಹ್ಮನಿಗೆ ಮತ್ತು ಪರಿವಾರ ದೇವತೆಗಳಿಗೆ ವೈದ್ಯರು ನುಡುಸುವ ಡಕ್ಕೆ ಅಥವಾ ಡಮರುವಿನ ನಿನಾದ ಶ್ರೇಷ್ಠ ಎಂಬ ನಂಬಿಕೆಯಿದೆ. ಇದರಿಂದ ಒಳ್ಳೆಯ ಬೆಳೆ, ಮತ್ತು ಜಾನುವಾರುಗಳಿಗೆ ಬರಬಹುದಾದ ರೋಗರುಜಿನಗಳೆಲ್ಲ ನಿವಾರಣೆಯಾಗಿ ಊರಲ್ಲಿ ಸುಭಿಕ್ಷೆ ನೆಲೆಸುತ್ತದೆಂಬ ನಂಬಿಕೆಯು ಇದೆ.

ಆಚರಣೆಯ ಸ್ವರೂಪ

ಬ್ರಹ್ಮಸ್ಥಾನಗಳಲ್ಲಿ ಡಕ್ಕೆ ಬಲಿ ಸೇವೆಯನ್ನು ವಾರ್ಷಿಕ ಆಚರಣೆಯ ಸ್ವರೂಪದಲ್ಲಿ ಆಚರಿಸಲಾಗುತ್ತದೆ. ಡಕ್ಕೆಬಲಿ ಆಚರಣೆಗೆ ಸುಮಾರು ೨ ರಿಂದ ಮೂರು ಗಂಟೆಗಳ ಅವಧಿ ತಗಲುತ್ತದೆ. ಡಕ್ಕೆ ಬಲಿಗೆ ಪೂರ್ವಭಾವಿಯಾಗಿ

ಅಂದು ಬ್ರಹ್ಮಸ್ಥಾನದಲ್ಲಿ ಬೇರೆ ಬೇರೆ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದ. ಇಲ್ಲಿರುವ ಶಕ್ತಿ ಅಥವಾ ದೇವಿ ಸನ್ನಿಧಿಯಲ್ಲಿಯೂ ಹಗಲಿನಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಮಧ್ಯಾಹ್ನ ಸಾರ್ವಜನಿಕರಿಗೆ ಅನ್ನಸಂತರ್ಪಣೆ, ಮತ್ತು ನಾಗ, ಬ್ರಹ್ಮ, ಪರಿವಾರ ದೇವತೆಗಳಿಗೂ ವಿಶೇಷ ಪೂಜೆಗಳನ್ನು ನಡೆಸಲಾಗುತ್ತದೆ.

ಗುಂಡ ಸೇವೆ: ಬ್ರಹ್ಮಸ್ಥಾನದ ಬ್ರಹ್ಮಸಾನಿಧ್ಯದಲ್ಲಿ ನಡೆಯುವ ದರ್ಶನ ವಿಧಿಯನ್ನು 'ಗುಂಡ ಸೇವೆ' ಎಂದು ಕರೆಯಾಗುತ್ತದೆ. ರಾತ್ರಿಯ ಪ್ರಾರಂಭಿಕ ಪೂಜಾ ಕಾರ್ಯಗಳೆಲ್ಲ ನಡೆದ ಮೇಲೆ ಡಕ್ಕೆ ಬಲಿಯ ಒಂದು ಅಂಗವಾಗಿ ಈ ಆಚರಣೆ ನಡೆಸಲಾಗುತ್ತದೆ. ಇದನ್ನು ಡಕ್ಕೆ ಬಲಿಗೆ ವಿದ್ಯುಕ್ತ ಚಾಲನೆ ಎಂದು ಭಾವಿಸಲಾಗಿದೆ. ದರ್ಶನಕ್ಕೆ ಸನ್ನದ್ಧರಾದ ಪಾತ್ರಿಯು ಬ್ರಹ್ಮ ಗುಡಿಯ ಮುಂಭಾಗದಲ್ಲಿ ನಿಲ್ಲುತ್ತಾನೆ. ಡಕ್ಕೆ ವಾದಕರಾದ ವೈದ್ಯರು ಕೂಡ ತಮ್ಮ ಡಕ್ಕೆಯೊಂದಿಗೆ ಸಿದ್ಧರಿರುತ್ತಾರೆ. ಅರ್ಚಕರು ಹಿಂಗಾರದ ಹೂಗಳನ್ನು ಪಾತ್ರಿಯ ಕೈಗೆ ಕೊಟ್ಟು ನೀರು ಸುರಿಯುತ್ತಾರೆ. ಹಿನ್ನೆಲೆಯಲ್ಲಿ ನಾಗಸ್ವರ, ಗಂಟೆ, ಜಾಗಟೆಗಳ ಧ್ವನಿಯು ತಾರಕಕ್ಕೇರುತ್ತದೆ. ನಿಧಾನವಾಗಿ ಪಾತ್ರಿಯ ಮೈಮೇಲೆ ಆವೇಶ ಬಂದು ಪಾತ್ರಿಯು ಕುಣಿದು ಕುಪ್ಪಳಿಸುತ್ತಾ ಹಿಂಗಾರದ ಹೂಗಳನ್ನು ಮುಖಕ್ಕೆ ಉಜ್ಜಿಕೊಳ್ಳುತ್ತಾನೆ. ಸ್ವಲ್ಪ ಹೊತ್ತಿನ ಆವೇಶದ ನಂತರ ಕೆಲವು ಪವಾಡಗಳು ನಡೆಯುತ್ತದೆ. ಪಾತ್ರಿಯು ಮುಳ್ಳಿನ ಪಾದುಕೆಗಳನ್ನು ಆವೇಶದಲ್ಲಿ ಮೆಟ್ಟಿನಿಲ್ಲುತ್ತಾನೆ. ಬಳಿಕ ನಡುವೆ 'ಅಗಲು' ಇರುವ ಸರಪಳಿಯೊಂದನ್ನು ಕುತ್ತಿಗೆಯ ಹಿಂಭಾಗಕ್ಕೆ ಅಗಲು ಬರುವಂತೆ ತೊಟ್ಟುಕೊಂಡು, ಅದರ ಎರಡೂ ತುದಿಗಳಲ್ಲಿರುವ ಕೊಂಡಿಯನ್ನು ಪಾದದಲ್ಲಿ ಅಮುಕಿ ನೆಟ್ಟಗೆ ನಿಲ್ಲುವುದಕ್ಕೆ ಪ್ರಯತ್ನಿಸುತ್ತಾನೆ. ಇದೆಲ್ಲ ಮುಗಿದ ಬಳಿಕ ಮತ್ತೆ ಅರ್ಚಕರಿಂದ ಹಿಂಗಾರ ಪಡೆದು ಪಾತ್ರಿಯು ಆವೇಶದಲ್ಲಿ ಮುಂದುವರಿಯುತ್ತಾನೆ.

ಬಳಿಕ ಆವೇಶಭರಿತನಾದ ದರ್ಶನ ಪಾತ್ರಿಯೊಂದಿಗೆ ಡಕ್ಕೆವಾದಕರು ತಮ್ಮ ಡಕ್ಕೆಯನ್ನು ವಿಶಿಷ್ಟರೀತಿಯಲ್ಲಿ ನುಡಿಸುತ್ತ, ಬ್ರಹ್ಮನನ್ನು ಸುತ್ತಿಸುತ್ತ ಪಾತ್ರಿಯಾದಿಯಾಗಿ ನಿಂತಲ್ಲೇ ಪ್ರದಕ್ಷಿಣೆ ಬರುತ್ತಾರೆ.

ಡಕ್ಕೆಯವರ ಒಂದು ಹಂತದ ಈ ಸೇವೆ ಮುಗಿದ ಮೇಲೆ ದರ್ಶನ ಮತ್ತೆ ಮುಂದುವರಿಯುತ್ತದೆ. ಬಳಿಕ ಆವೇಶದಲ್ಲಿರುವ ಪಾತ್ರಿಯೊಂದಿಗೆ ಅರ್ಚಕರಾದಿಯಾಗಿ ಎಲ್ಲರೂ ದೇವಿ ಸನ್ನಿಧಿಗೆ ಬರುತ್ತಾರೆ. ಅಲ್ಲಿ ದೇವರ ಪ್ರತಿನಿಧಿಯಾಗಿರುವ ಪಾತ್ರಿಯಿಂದ ಮುಂದಿನ ಕಾರ್ಯಕ್ರಮಗಳನ್ನು ನಿರ್ವಿಘ್ನವಾಗಿ ನಡೆಸಿಕೊಡುವ ಅಭಯ ದೊರೆಯುತ್ತದೆ. ಬಳಿಕ ಆವೇಶ ಬರಿತನಾದ ಪಾತ್ರಿಯು ವಿಶಿಷ್ಟ ರೀತಿಯಲ್ಲಿ ತೆಂಗಿನ ಕಾಯಿಯನ್ನು ನೆಲಕ್ಕೆ ತಾಡಿಸಿ ಒಡೆಯುವುದರ ಮೂಲಕ ಆವೇಶ ಕೊನೆಗೊಳ್ಳುತ್ತದೆ.

ಹಾಲಿಟ್ಟುಸೇವೆ

ಡಕ್ಕೆಬಲಿಯ ರಾತ್ರಿಯ ಕಾರ್ಯಕ್ರಮದ ಎರಡನೆಯ ಹಂತವಾಗಿ ನಾಗಬನದಲ್ಲಿ ಹಾಲಿಟ್ಟು ಸೇವೆ ನಡೆಸಲಾಗುತ್ತದೆ. ವಿಶೇಷವಾಗಿ ನಾಗ ಪ್ರತಿಮೆಗಳಿಗೆ ಹಾಲಿನ ಅಭಿಷೇಕ, ಅಕ್ಕಿಹಿಟ್ಟು, ಹಳದಿಯ ಲೇಪನದೊಂದಿಗೆ ಅಕ್ಕಿ, ಕಾಯಿ ಇತ್ಯಾದಿಗಳ 'ಸ್ವಸ್ತಿಕೆ' ಇಟ್ಟು ಹಾಲು ಇಟ್ಟು ಪೂಜೆ ನಡೆಸಲಾಗುತ್ತದೆ. ಬಳಿಕ ದರ್ಶನಕ್ಕೆ ಸಿದ್ಧತೆಗಳು ನಡೆಯುತ್ತದೆ.

ಪಾತ್ರಿಯು ಗಂಧಾದಿಗಳನ್ನು ಲೇಪಿಸಿಕೊಂಡು ಸಿದ್ಧನಾಗುತ್ತಾನೆ. ವಾದ್ಯ ಜಾಗಟೆಗಳು ಮೊಳಗುತ್ತವೆ. ಅರ್ಚಕರಿಂದ ಹಿಂಗಾರ ಪಡೆದು ನೀರು ಸುರುವಿಕೊಂಡ ಪಾತ್ರಿಯು ಆವೇಶಕ್ಕೆ ಒಳಗಾಗುತ್ತಾನೆ. ನಾಗಸ್ವರ ಜಾಗಟೆಗಳ ದ್ವನಿ

ತಾರಕಕ್ಕೇರುತ್ತದೆ. ಪಾತ್ರಿಯು ಹಾವಿನಂತೆ ಬಳುಕುತ್ತಾ, ಬುಸುಗುಡುತ್ತಾ ನಾಗಸ್ವರದ ಧ್ವನಿಯನ್ನು ಆಲಿಸುವಂತೆ ಹಾವ ಭಾವಗಳನ್ನು ವ್ಯಕ್ತಪಡಿಸುತ್ತಾನೆ. ಮೊದಲೇ ಸಿದ್ಧರಾಗಿದ್ದ ಡಕ್ಕೆ ವಾದಕರು ಡಕ್ಕೆ ನುಡಿಸುತ್ತ ಪಾತ್ರಿಯೊಂದಿಗೆ ನಾಗನ ಸ್ತುತಿ ಹಾಡುಗಳನ್ನು ಹಾಡುತ್ತ ಪ್ರದಕ್ಷಿಣೆ ಬರುತ್ತಾರೆ. ಈ ವಿಧಿ ಮುಗಿಯುತ್ತಿದ್ದಂತೆ ಮತ್ತೆ ಆವೇಶ ಮುಂದುವರಿದು ಕೊನೆಗೆ ಈ ಆಚರಣೆ ಮುಕ್ತಾಯವಾಗುತ್ತದೆ.

ಗುಂಡಸೇವೆ ಮತ್ತು ಹಾಲಿಟ್ಟು ಸೇವೆ ಮುಗಿದ ಬಳಿಕ ಬ್ರಹ್ಮಸ್ಥಾನದಲ್ಲಿ ಕೆಲವು ಧಾರ್ಮಿಕ ಕ್ರಿಯೆಗಳು ನಡೆಯುತ್ತವೆ. ಪರಿವಾರ ದೇವತೆಗಳ ಪೂಜೆ, ದೇವಿ ಮತ್ತು ಬ್ರಹ್ಮ ಸಾನ್ನಿಧ್ಯದಲ್ಲಿ ರಂಗಪೂಜೆ ಇತ್ಯಾದಿಗಳು ನಡೆಯುತ್ತದೆ. ಕೊನೆಯದಾಗಿ ಡಕ್ಕೆಬಲಿ ಪ್ರಾರಂಭವಾಗುತ್ತದೆ.

ಮಂಡಲ ರಚನೆ

ಮಂಡಲ ರಚನೆಗೆ ಪೂರ್ವದಲ್ಲಿ ಮಂಡಲ ರಚಿಸುವಲ್ಲಿ ಚಪ್ಪರದಲ್ಲಿ ಬಿಳಿ ಬಟ್ಟೆಯ ಮೇಲ್ಕಟ್ಟನ್ನು ಹೊದೆಸಲಾಗುತ್ತದೆ. ಬಳಿಕ ವೈದ್ಯರುಗಳು ಎಳೆಯ ತೆಂಗಿನ ಗರಿಗಳಿಂದ ಪದ್ಮ, ನವಿಲು, ಗಿಳಿ, ಕುದುರೆ ಮೊದಲಾದ ರೂಪಗಳನ್ನು ನಿರ್ಮಿಸಿ ಮಂಡಲ ರಚಿಸುವಲ್ಲಿ ಮೇಲ್ಭಾಗದಲ್ಲಿ ನೇತಾಡಿಸುತ್ತಾರೆ. ಇದರಲ್ಲಿ ನಾಗ ಯಕ್ಷರು ಆವಾಹನೆಗೊಳ್ಳುತ್ತಾರೆಂಬ ನಂಬಿಕೆಯಿದೆ ಮಂಡಲವನ್ನು ಬ್ರಹ್ಮಗುಂಡಿಯ ಮುಂಭಾಗದಲ್ಲಿ ಪಂಚವರ್ಣದ ಹುಡಿಗಳಿಂದ ರಚಿಸಲಾಗುತ್ತದೆ. ಬಿಳಿ ಬಣ್ಣವಾಗಿ ಅಕ್ಕಿ ಹುಡಿ ಹಸುರು ಬಣ್ಣವಾಗಿ ಜಂಗಮ ಸೊಪ್ಪಿನ ಹುಡಿ ಬತ್ತದ ಹೊಟ್ಟಿನ (ಉಮಿಕರಿ) ಕಪ್ಪು ಬಣ್ಣ, ಮತ್ತು ಕುಂಕುಮವನ್ನು ಪಂಚ ವರ್ಣಗಳಲ್ಲಿ ಬಳಸಲಾಗುತ್ತದೆ.

ಗಣಪತಿ ಪೂಜೆಯೊಂದಿಗೆ ವೈದ್ಯರು ಮಂಡಲ ರಚಿಸಲು ತೊಡಗುತ್ತಾರೆ. ಸ್ವಚ್ಛಗೊಳಿಸಿರುವ ನೆಲದಲ್ಲಿ ಕಪ್ಪು ಹುಡಿಯಿಂದ ಒಂದು ಆವರಣ ನಿರ್ಮಿಸಿಕೊಳ್ಳುತ್ತಾರೆ. ಮಂಡಲದ ಪೂರ್ವಭಾಗದಲ್ಲಿ ಅನ್ವಯವಾಗುವಂತೆ ಬ್ರಹ್ಮನ ಶಿರದ ಚಿತ್ರವನ್ನು ಅಥವಾ ಮಾನವ ಶಿರದ ಚಿತ್ರವನ್ನು ಪಂಚವರ್ಣದ ಹುಡಿಯಿಂದ ರಚಿಸಲಾಗುತ್ತದೆ. ಈ ಶಿರದ ಪಕ್ಕದಲ್ಲೇ ನಾಗ (ಸರ್ಪ), ಈಶ್ವರ (ತ್ರಿಶೂಲ), ಗಣಪತಿ (ಪದ್ಮ), ಯಕ್ಷೆ (ಸ್ತ್ರೀ)ಯ ಚಿತ್ರವನ್ನು ರಚಿಸಲಾಗುತ್ತದೆ. ಮಂಡಲ ರಚನೆಯಾದ ಬಳಿಕ ಸ್ವಸ್ತಿಕೆ, ಅಕ್ಕಿ, ಕಾಯಿ, ಹೂ, ಹಣ್ಣು, ಹಿಂಗಾರ ಇತ್ಯಾದಿಗಳನ್ನಿಟ್ಟು ಶೃಂಗರಿಸಲಾಗುತ್ತದೆ. ಬ್ರಹ್ಮನ ಶಿರದ ಭಾಗದಲ್ಲಿ ಆಭರಣವನ್ನು ಇಡುವುದಿದೆ.

ಮಂಡಲ ರಚನೆಯ ಕಾರ್ಯ ಮುಗಿಯುತ್ತಿದ್ದಂತೆ ಅರ್ಧನಾರಿ ವೇಷ ತೊಟ್ಟ ವೈದ್ಯ ಮಂಡಲ ಸೇವೆಗೆ ಸಿದ್ಧನಾಗುತ್ತಾನೆ. ತಲೆಗೆ ಪೇಟ ಸೊಂಟಕ್ಕೆ ನಡುಪಟ್ಟಿ ಮತ್ತು ಕಸೆವೇಷ ತೊಟ್ಟು ಕಾಲಿಗೆ ಗೆಜ್ಜೆ ತೊಟ್ಟಿರುತ್ತಾನೆ. ಜೊತೆಗೆ ಇರುವ ವೈದ್ಯರ ತಂಡದಲ್ಲಿ ಒರ್ವ ಚಕ್ರತಾಳ, ಇನ್ನೊರ್ವ ಮರದ ಡಕ್ಕೆ ಹಿಡಿದವರು ಹೀಗೆ ಮೂರು ಮಂದಿ ಡಕ್ಕೆ ಬಲಿಯ ಮೇಳದಲ್ಲಿ ಭಾಗವಹಿಸುತ್ತಾರೆ. ಇವರು ಸಿದ್ಧರಾಗುತ್ತಿದ್ದಂತೆಯೇ 'ದರ್ಶನ ಪಾತ್ರಿ'ಯು ಮಂಡಲಕ್ಕೆ ಸಿದ್ಧನಾಗುತ್ತಾನೆ. ಅರ್ಚಕರು ಮಂಡಲ ಪೂಜೆ ನೆರವೇರಿಸಿ ಪ್ರಾರ್ಥಿಸಿಕೊಳ್ಳುತ್ತಾರೆ.

ದರ್ಶನಕ್ಕೆ ಸಿದ್ಧನಾಗಿದ್ದ ಪಾತ್ರಿಗೆ ಹಿಂಗಾರದ ಹೂಗಳನ್ನು ನೀಡಿ ಡಕ್ಕೆ ಬಲಿಗೆ ವಿದ್ಯುಕ್ತ ಚಾಲನೆ ನೀಡಲಾಗುತ್ತದೆ. ಪಾತ್ರಿಯು ಮಂಡಲಕ್ಕೆ ಶಿರಭಾಗಿ ನಮಿಸಿ ಆವೇಶಕ್ಕೆ ಒಳಗಾಗುತ್ತಾನೆ. ಒಮ್ಮೆಲೆ ಹಾರಿ ಕುಣಿದು ಕುಪ್ಪಳಿಸಿ ಹಿಂಗಾರವನ್ನು ಮುಖಕ್ಕೆ ಉಜ್ಜಿಕೊಳ್ಳುತ್ತಾನೆ. ಮೊದಲೇ ಸಿದ್ಧನಾಗಿದ್ದ 'ಅರ್ಧನಾರಿ' ವೇಶದ ವೈದ್ಯನು ಕಂಚಿನ

ಡಮರನ್ನು ಜೋರಾಗಿ ನುಡಿಸುತ್ತ ಪಾತ್ರಿಗೆ ಅಭಿಮುಖವಾಗಿದ್ದು ಹಿಂದಕ್ಕೆ ಓಡುತ್ತಾನೆ. ಪಾತ್ರಿಯು ಅವನನ್ನು ಹಿಂಬಾಲಿಸುತ್ತಾನೆ. ಮೇಳದ ಇತರ ತಾಳ ಹಾಗೂ ಮರದ ಡಕ್ಕೆ ವಾದಕ ವೈದ್ಯರುಗಳು ಇವರನ್ನು ಹಿಂಬಾಲಿಸುತ್ತಾರೆ. ಹೀಗೆ ಮಂಡಲಕ್ಕೆ ಮೂರು ಸುತ್ತು ಪ್ರದಕ್ಷಿಣೆ ಬಂದ ಮೇಲೆ ಅರ್ಧನಾರಿ ವೇಷದಾರಿಯು ಡಕ್ಕೆಯೊಂದಿಗೆ ವಿಶಿಷ್ಟ ರೀತಿಯಲ್ಲಿ ಹೆಜ್ಜೆಹಾಕಿ ನರ್ತಿಸುತ್ತಾ ಬ್ರಹ್ಮನ ಸ್ತುತಿ ಹಾಡುಗಳನ್ನು ಹೇಳುತ್ತಾ ಹಿಂದಕ್ಕೂ ಮುಂದಕ್ಕೂ ಹೋಗುತ್ತಾ ನರ್ತಿಸುತ್ತಾನೆ. ನೃತ್ಯದ ಈ ಗತಿಯು ಸುಮಾರು ಮೂರು ಗಂಟೆಗಳ ಕಾಲ ಮುಂದುವರಿಯುತ್ತದೆ. ನಡುವೇ ನೃತ್ಯದ ಗತಿಯಲ್ಲಿ ಬದಲಾವಣೆಗಳು ನಡೆಯುತ್ತಿರುತ್ತದೆ.

ಕೊನೆಯ ಹಂತದಲ್ಲಿ ನೃತ್ಯದ ಗತಿಯು ವೇಗವಾಗುತ್ತದೆ. ಅರ್ಧನಾರಿಯು ಓಡುತ್ತಾ ಕುಣಿಯುತ್ತಿರುವಂತೆ, ಪಾತ್ರಿಯನ್ನು ಆಲಿಂಗಿಸಿಕೊಳ್ಳುವಂತೆ ವಿವಿಧ ರೀತಿಯಲ್ಲಿ ವಿಶಿಷ್ಟ ಶೈಲಿಯಲ್ಲಿ ನೃತ್ಯ ಮುಂದುವರೆದು ಕೊನೆಗೆ ಮುಕ್ತಾಯಗೊಳ್ಳುತ್ತದೆ. ಮಂಡಲಕ್ಕೆ ಅರ್ಚಕರಿಂದ ಪೂಜೆಯಾದ ಬಳಿಕ ಸಾಂಕೇತಿಕವಾಗಿ ವೈದ್ಯರು ಮಂಡಲವನ್ನು ಹಿಂಗಾರದ ಮೂಲಕ ವಿಸರ್ಜಿಸುತ್ತಾರೆ.

ಸುತ್ತು ಬಲಿ

ಬ್ರಹ್ಮಸ್ಥಾನದ ಸುತ್ತಲಿರುವ ಪರಿವಾರ ದೇವತೆಗಳಿಗೆ ವಿಶೇಷವಾಗಿ ಹಾಕುವ 'ಬಲಿಸೇವೆ'ಯನ್ನು ಸುತ್ತು ಬಲಿ ಎನ್ನುತ್ತಾರೆ. ಬ್ರಹ್ಮಮಂಡಲದ ಸಾಂಕೇತಿಕ ವಿಸರ್ಜನೆಯಾದ ಮೇಲೆ ಪಾತ್ರಿಯ ಆವೇಶದೊಂದಿಗೆ ಸುತ್ತುಬಲಿ ಪ್ರಾರಂಭವಾಗುತ್ತದೆ. ಅರ್ಚಕರು ಮತ್ತು ಆವೇಶದಲ್ಲಿರುವ ಪಾತ್ರಿಯ ನೇತೃತ್ವದಲ್ಲಿ ಈ ಕ್ರಿಯೆ ನಡೆಯುತ್ತದೆ. ಬಲಿ ಎನ್ನುವುದು ಸಂಪೂರ್ಣವಾದ ಒಂದು ತಾಂತ್ರಿಕ ಕ್ರಿಯೆ. ಈ ಕ್ರಿಯೆಯಿಂದಾಗಿಯೇ 'ಡಕ್ಕೆಬಲಿ' ಎಂಬ ಹೆಸರು ಬಂದಿರಬೇಕು. ಬಲಿಯಲ್ಲಿ ಪ್ರಧಾನವಾಗಿ ಅರೆ ಬೆಂದ ಕುಚ್ಚಿಗೆ (ಚರು) ಅಕ್ಕಿ, ಅರಳು, ಕುಂಬಳಕಾಯಿಯ ಹೋಳು, ಓಕುಳಿನೀರು ಮತ್ತು ದೀವಟಿಗೆ (ದೊಂದಿ) ಬಳಸಲಾಗುತ್ತದೆ. ಪ್ರತಿಯೊಂದು ಪರಿವಾರ ದೇವತೆಗಳಲ್ಲಿ ಕಟ್ಟೆಗಳಲ್ಲಿ ಅಥವಾ ಗುಡಿಯ ಅಷ್ಟದಿಕ್ಕುಗಳಿಗೂ ಬಲಿ ಹಾಕಲಾಗುತ್ತದೆ. ಬಾಳೆ ಎಲೆಯ ಮೇಲೆ ಚರು, ಕುಂಬಳಕಾಯಿಯ ಹೋಳು, ಅರಳು ಇತ್ಯಾದಿ ಹಾಕಿ, ಹಾಳೆಯ ದೊನ್ನೆ (ತುಳು:ಕೊಟ್ಟೆ)ಯಲ್ಲಿ ಓಕುಳಿ ನೀರನ್ನು ತುಂಬಿಸಿ ಅದರಲ್ಲಿ ದೊಂದಿ ಅಥವಾ ಕಕ್ಕಡ ಹಚ್ಚಲಾಗುತ್ತದೆ. ಅಷ್ಟದಿಕ್ಕುಗಳಲ್ಲಿಯೂ ಮತ್ತು ಕ್ಷೇತ್ರಪಾಲ ಕಟ್ಟೆಗೂ ಇದೇ ರೀತಿ ಮಾಡಲಾಗುತ್ತದೆ. ಈ ಕ್ರಿಯೆ ಮುಗಿದ ಬಳಿಕ ಎಲ್ಲ ದಿಕ್ಕುಗಳಲ್ಲಿ ಹಾಕಿರುವ ಬಲಿಯ ವಸ್ತುಗಳನ್ನು ವಿಸರ್ಜಿಸಿ ಒಂದೇ ಕಡೆ ಸೇರಿಸಲಾಗುತ್ತದೆ. ಒಟ್ಟಾರೆ ಈ ಎಲ್ಲ ಕ್ರಿಯೆಯನ್ನು ಮಂಡಲಕ್ಕೆ ನೀಡುವ ಸಾಂಕೇತಿಕ ಬಲಿ ಕ್ರಿಯೆ ಎಂದು ಭಾವಿಸಲಾಗುತ್ತದೆ.

ಬಲಿಯ ವಿಸರ್ಜನೆಯಾದ ಬಳಿಕ ಮೊದಲೇ ವೇಷ ತೊಟ್ಟುಕೊಂಡು ಆವೇಶಗೊಂಡು ಸಿದ್ಧನಾಗಿರುವ 'ಭೂತ'ಮಾಧ್ಯಮದೊಂದಿಗೆ ದರ್ಶನ ಪಾತ್ರಿಯ 'ಮುಖಾಮುಖಿ' ನಡೆಯುತ್ತದೆ. ಇದು ಒಂದು ವಿಧ್ಯುಕ್ತ ಕ್ರಿಯೆ. ಬಳಿಕ ಊರವರೆಲ್ಲ ಸೇರಿಕೊಂಡು ಆವೇಶದಲ್ಲಿರುವ ಭೂತ ನರ್ತಕನೊಂದಿಗೆ ಮೊದಲೇ ಒಂದು ಕಡೆ ಸೇರಿಸಿರುವ, ವಿಸರ್ಜಿಸಿರುವ ಬಲಿಯ ವಸ್ತುಗಳನ್ನು ಹೊತ್ತುಕೊಂಡು ಹೋಗಿ ಊರ ಗಡಿಯಾಚೆ ಹಾಕುತ್ತಾರೆ. ಅಲ್ಲಿ ಊರಿನ

ಪ್ರತಿ ಮನೆಯವರು ತಂದಿರುವ ಕೋಳಿಗಳನ್ನು ಕಡಿದು 'ರಕ್ತಾಹಾರ' ಕೊಡುತ್ತಾರೆ. ಈ ವಿದ್ಯುಕ್ತ ಕ್ರಿಯೆಯನ್ನು ಊರಿನ 'ಮಾರಿ ಓಡಿಸುವುದು' ಎನ್ನಲಾಗುತ್ತದೆ.

ಬಳಿಕ ದೇವಾಲಯದಲ್ಲಿರುವ ಆವೇಶಿತನಾದ ಪಾತ್ರಿಯೊಂದಿಗೆ ಹೇಳಿಕೆ-ಕೇಳಿಕೆಗಳು ಮುಗಿದು, ಪ್ರಸಾದ ವಿತರಣೆಯಾಗಿ ಆವೇಶ ಕೊನೆಗೊಳ್ಳುತ್ತದೆ. ನಂತರ ಮಾರಿಯೊಂದಿಗೆ ಊರ ಗಡಿಯಾಚೆ ಹೋಗಿರುವ ಭೂತ ಮಾಧ್ಯಮನು ಹಿಂತಿರುಗಿ ಬಂದ ಮೇಲೆ ಆತನಿಂದಲೂ ಅಭಯ ಪ್ರಧಾನವಾಗಿ ಆವೇಶ ಕೊನೆಗೊಳ್ಳುತ್ತದೆ. ಈ ಎಲ್ಲ ವಿದ್ಯುಕ್ತ ಕಾರ್ಯ ಕ್ರಮಗಳೊಂದಿಗೆ ಡಕ್ಕೆಬಲಿಯ ವಿದ್ಯುಕ್ತ ಆಚರಣೆ ಮುಕ್ತಾಯವಾಗುತ್ತದೆ.

ಡಕ್ಕೆ ಬಲಿ ಪ್ರಧಾನವಾಗಿ ವೈದಿಕ ಕ್ರಿಯೆಯೊಂದಿಗೆ ನಡೆಯುವ 'ತಾಂತ್ರಿಕ' ಆಚರಣೆ. ಇಲ್ಲಿ ಜನಪದ ಆಚರಣೆಗಳೇ ಪ್ರಧಾನವಾಗಿ ಕಂಡುಬರುತ್ತದೆ. ಇಲ್ಲಿ ಬಳಸುವ ಬಣ್ಣ, ಪರಿಕರಗಳು, ಆಚರಣೆಯ ಸ್ವರೂಪ ಇತ್ಯಾದಿ ಎಲ್ಲವೂ ಸಂಪೂರ್ಣವಾಗಿ ಜನಪದ ಹಿನ್ನೆಲೆಯನ್ನು ಒಳಗೊಂಡವುಗಳು. ಆಚರಿಸುವ ಸುತ್ತು ಬಲಿ, ಅಲ್ಲಿ ಬಳಸುವ ಓಕುಳಿ ನೀರು ಇತ್ಯಾದಿಗಳನ್ನು ಗಮನಿಸಿದರೆ ಪೂರ್ವದಲ್ಲಿ ದೇವಾಲಯದ ಸುತ್ತಲೂ ರಕ್ತಬಲಿ ಕೊಡುತ್ತಿದ್ದಿರಬೇಕು. ಬಳಿಕ ಕ್ರಮೇಣ ಅದಕ್ಕೆ ಪರ್ಯಾಯವಾಗಿ ಓಕುಳಿ ನೀರನ್ನು ಬಳಸಿರಬೇಕು. ಪ್ರಾಣಬಲಿಗೆ ಪರ್ಯಾಯವಾಗಿ ಕುಂಬಳಕಾಯಿ ಬಳಕೆಯಾಗುತ್ತಿರಬೇಕು ಎಂದು ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಪರಿಗಣಿಸಲಾಗಿದೆ. ಮಾರಿಯ ಸಂದರ್ಭದಲ್ಲಿ ಕೋಳಿ ಇತ್ಯಾದಿ ಪ್ರಾಣಿ ಬಲಿ ನಡೆಯುವುದರಿಂದ ಬ್ರಾಹ್ಮಣರು ಭಾಗವಹಿಸುವುದಿಲ್ಲ.

ಡಕ್ಕೆಬಲಿಯನ್ನು ಪ್ರಾದೇಶಿಕವಾಗಿ ವಿಭಿನ್ನ ರೀತಿಯಲ್ಲಿ ಆಚರಿಸುತ್ತಿರುವುದು ಕಂಡುಬರುತ್ತದೆ. ಕೆಲವು ಭಾಗಗಳಲ್ಲಿ ಪ್ರತೀ ವರ್ಷವೂ ಆಚರಿಸಿದರೆ ಕೆಲವು ಕಡೆಗಳಲ್ಲಿ ಎರಡು ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಮ್ಮೆ ಆಚರಿಸುತ್ತಿರುವುದು ಕಂಡುಬರುತ್ತದೆ. 'ಮಾರಿ'ಯ ಕಲ್ಪನೆಯು ಕೂಡ ಅತೀ ಪ್ರಾಚೀನ ಪರಿಕಲ್ಪನೆ ಎಂಬುದು ವೇದ್ಯವಾಗುತ್ತದೆ. ಇದು ಆದಿಮ ಸಂಸ್ಕೃತಿಯ ಕುರುಹಾಗಿದ್ದು ಊರಿಗೆ ಬರಬಹುದಾದ ರೋಗ ರುಜಿನಗಳನ್ನು ದುಷ್ಟ ಶಕ್ತಿಗಳ ಉಪಟಳವನ್ನು ಈ ರೀತಿಯಲ್ಲಿ ಊರಿಂದ ನಿರ್ಮೂಲನೆ ಮಾಡಲಾಗುತ್ತದೆ ಎಂಬ ನಂಬಿಕೆಯಿದೆ.

ಡಕ್ಕೆಬಲಿಯನ್ನು ತುಳುನಾಡಿನ ಉತ್ತರದ ಕನ್ನಡ ಪ್ರದೇಶದಲ್ಲಿ ದೈವಾರಾಧನೆಯ ಹಿನ್ನೆಲೆಯಲ್ಲಿ ಆಚರಿಸುತ್ತಿರುವುದು ಕಂಡುಬಂದಿದೆ. ''ಇದು ಜಿಲ್ಲೆಯ ಕನ್ನಡ ಪ್ರದೇಶದ ಭೂತಾರಾಧನೆಯ ಒಂದು ಆಚರಣೆ ಉಡುಪಿಯ ದಕ್ಷಿಣಕ್ಕೆ ತುಳುನಾಡಿನಲ್ಲಿ ಭೂತಾರಾಧನೆಯ ಅಂಗವಾಗಿ ಕೋಲ ನೇಮರು ಮೆಚ್ಚಿ ನಡೆದಂತೆ ಜಿಲ್ಲೆಯ ಬಡಗು ಭಾಗದ ಕನ್ನಡ ಪ್ರದೇಶಗಳಲ್ಲಿ ಹಾಯ್ಗುಳಿ, ಚಿಕ್ಕು, ಹಳೆಯಮ್ಮ, ಮುಂತಾದ ದೈವಗಳಿಗೆ ಡಕ್ಕೆಬಲಿ ನಡೆಯುವುದಿದೆ. ಜಿಲ್ಲೆಯ ತುಳುಪ್ರದೇಶದಲ್ಲಿ ಭೂತಾರಾಧನೆಯ ಸಂದರ್ಭದಲ್ಲಿ ಪೂಜಾರಿಯಾಗುವವನು ಅಬ್ರಾಹ್ಮಣ ವರ್ಗದವನಾದರೆ ಇಲ್ಲಿ ಕನ್ನಡ ಪ್ರದೇಶದಲ್ಲಿ ಬ್ರಾಹ್ಮಣ ಸಮುದಾಯದವರು ಅವರೇ ವೈದ್ಯರು. ಬಡಗು ಭಾಗದ ದೈವಸ್ಥಾನಗಳು ಕಾಲಾವಧಿ ಜಾತ್ರೆಯ ಪ್ರಧಾನ ಅಂಶ 'ಕೆಂಡ' ಹಾಗೂ ಡಕ್ಕೆಬಲಿ ದೈವಾವೇಶಗೊಂಡ ಪಾತ್ರಿಗಳು ಕೆಂಡಹಾದು ಮುಂದೆ ಹರಕೆ ಹೇಳಿಕೊಂಡ ಮಹಿಳೆಯರಿಗೆ ಕೆಂಡ ಮೆಟ್ಟಲು ಅನುವು ಮಾಡಿಕೊಡುತ್ತಾರೆ. ಆ ಬಳಿಕ ಜಾತ್ರೆಯ ಉತ್ತರಾರ್ಧವಾಗಿ ಡಕ್ಕೆಬಲಿ ಜರುಗುತ್ತದೆ''[೨೬] ಇಲ್ಲಿನ ಆರ್ಯೇತರ ಜನಪದ ದೈವಗಳಿಗೆ 'ಪಾಣರ'ರೆಂಬ ಜನಾಂಗದವರು 'ಡಕ್ಕೆಬಲಿ' ಸೇವೆ ನಡೆಸುವ ಸಂಪ್ರದಾಯವಿದೆ.

೬.೫.೯ ನಾಗಮಂಡಲ

ಕರಾವಳಿಯ ಪ್ರಸಿದ್ಧ ಜನಪದ ರಂಗಕಲೆ ನಾಗಮಂಡಲ ನಾಗಮಂಡಲ ಹೊರನೋಟಕ್ಕೆ ಢಕ್ಕೆಬಲಿಗೆ ಸಂವಾದಿಯಾಗಿದ್ದು ಇಲ್ಲಿ ನಾಗನಿಗೆ ಉಪಚಾರ ಸಲ್ಲುತ್ತದೆ. ಡಕ್ಕೆ ಬಲಿಯ ಮಂಡಲದಲ್ಲಿ ಪ್ರಧಾನವಾಗಿ ಬ್ರಹ್ಮನ ಚಿತ್ರ ಚಿತ್ರಿಸಿದರೆ ನಾಗಮಂಡಲದಲ್ಲಿ ಹೆಡೆ ಬಿಚ್ಚಿದ ನಾಗನ ರೂಪವನ್ನು ಪಂಚವರ್ಣದ ಹುಡಿಗಳಿಂದ ರೇಖಿಸಲಾಗುವದು. ಭಾಗವಹಿಸುವ 'ಪಾತ್ರಿ' ವೈದ್ಯನರ್ತಕ ಎಲ್ಲವೂ ಒಂದೇ ಆಗಿರುತ್ತದೆ. ನಾಗಮಂಡಲ ನಾಗನಿಗೆ ಸಲ್ಲಿಸುವ ಅತ್ಯುನ್ನತ ನರ್ತನ ಸೇವೆ. ಇದು ಶ್ರೀಮಂತರಿಗೆ ಮಾತ್ರ ಸಾಧ್ಯವಾಗುತ್ತದೆ. ಅಲ್ಲದೆ ನಾಗಸೇವೆಗಳಲ್ಲೆಲ್ಲ ವಿಶೇಷವಾದುದು ಮತ್ತು ಶ್ರೇಷ್ಠವಾದುದು ಎಂದು ಭಾವಿಸಲಾಗಿದೆ.

ನಾಗಮಂಡಲ ಮತ್ತು ಡಕ್ಕೆ ಬಲಿ ಆಚರಣೆಗಳು ಒಂದಕ್ಕೊಂದು ಸಂವಾದಿಯಾಗಿರುವುದರಿಂದ, ನಾಗಮಂಡಲ ಮತ್ತು ಡಕ್ಕೆಬಲಿಗಳಿಗೆ ಐತಿಹಾಸಿಕ ಹಿನ್ನೆಲೆಯೂ ಕೂಡಾ ಒಂದೇ ಆಗಿದೆ ಎಂದು ಪರಿಗಣಿಸಲಾಗಿದೆ. ಇಲ್ಲಿಯ ನೃತ್ಯ ವಿಧಾನದಲ್ಲಿ ವಿಶೇಷ ವ್ಯತ್ಯಾಸಗಳಿಲ್ಲ. ಅವುಗಳ ಆರಾಧನ ಉದ್ದೇಶ ಮಾತ್ರ ಬೇರೆ ಬೇರೆ. ನಾಗನ ಹಾಗೂ ಆರ್ಯೇತರ ದೈವಗಳ ಉಪಚಾರಗಳ ಸಂದರ್ಭಗಳಲ್ಲಿ ಹಾಡುವ ಹಾಡುಗಳು ಹಿಂದೆ ಬೇರೆ ಬೇರೆ ಇದ್ದಿರಬಹುದಾದರೂ ಇಂದು ಬಹುಮಟ್ಟಿಗೆ ಒಂದೇ ಎಂದು ಕ್ಷೇತ್ರಕಾರ್ಯದ ಹಿನ್ನಲೆಯಲ್ಲಿ ಪರಿಗಣಿಸಲಾಗಿದೆ. ನಾಗಮಂಡಲವನ್ನು ಆಚರಿಸುವ ಉದ್ದೇಶ, ಜನವರ್ಗ, ಬೇರೆಯೇ ಎನ್ನುವುದು ಕಂಡುಬಂದಿದೆ.

ಆಚರಣೆಯ ಉದ್ದೇಶ

ನಾಗಮಂಡಲವನ್ನು ನಾಗಾರಾಧನೆಯ ಅತ್ಯುನ್ನತ ಸೇವೆ ಎಂದು ಭಾವಿಸಲಾಗಿದೆ. ಈ ಆರಾಧನೆಯ ಹಿನ್ನೆಲೆಯೊಂದಿಗೆ ನಾಗಾರಾಧನೆಯ ಹೆಚ್ಚಿನೆಲ್ಲ ಆಚರಣೆಯ ಸ್ವರೂಪಗಳು ಒಳಗೊಂಡಿರುವುದು ಕಂಡುಬರುತ್ತದೆ. ಪ್ರಧಾನವಾಗಿ ನಾಗಮಂಡಲವನ್ನು ಸರ್ಪದೋಷ ಪರಿಹಾರವಾಗಿ ಆಚರಿಸಲಾಗುತ್ತದೆ. ಸರ್ಪದೋಷದಿಂದಾಗಿ ಬರುವ ಸಂತಾನ ಹೀನತೆ, ಕುಷ್ಠರೋಗ, ಮನೋವ್ಯಾಕುಲತೆ ಕುಟುಂಬದ ವ್ಯಕ್ತಿಯ ದುರ್ಮರಣ ಇತ್ಯಾದಿ ಸಂದರ್ಭಗಳಲ್ಲಿ ಹರಕೆಯ ರೂಪದಲ್ಲಿ ಆಚರಿಸಲಾಗುತ್ತದೆ. ತೀರ್ವತರವಾದ ಸಂಕಷ್ಟದಿಂದಾಗಿ ಕುಟುಂಬದ ಸದಸ್ಯರೆಲ್ಲರೂ ತೊಂದರೆಯನ್ನು ಅನುಭವಿಸುವ ಸಂದರ್ಭ ಬಂದಾಗ, ಅಥವಾ ಊರಿಗೆ ಬಂದಿರುವ, ಬರಬಹುದಾದ ಸಮಸ್ಯೆಯನ್ನು ಪರಿಗಣಿಸಿ ಸಾಮೂಹಿಕವಾಗಿ ಎಲ್ಲರೂ ಸೇರಿ ನಾಗನಿಗೆ ನಾಗಮಂಡಲ ಸೇವೆ ಕೊಡುವುದಿದೆ. ಅಧ್ಯಯನದ ಪ್ರಾರಂಭದಲ್ಲೇ ಹೇಳಿರುವಂತೆ ನಾಗ ಮಂಡಲ ಒರ್ವ ಸಾಮಾನ್ಯ ವ್ಯಕ್ತಿ ನಡೆಸುವಂಥದಲ್ಲ. ಜನಬಲ ಧನಬಲವಿರುಂಥ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ಅಲ್ಲದೆ ನಾಗಮಂಡಲ ಅತಿವಿರಳವಾಗಿ ನಡೆಯುವುದರಿಂದ ಅತಿ 'ಶ್ರೀಮಂತ'ವಾದ ವಿಶಿಷ್ಟಸೇವೆ ಎಂಬ ಖ್ಯಾತಿಯು ಇದೆ. ಈ ಸೇವೆಯನ್ನು ಶಕ್ತಿವಂತರಾದವರು, ಜಾತಿ ಭೇದವಿಲ್ಲದೆ ಯಾರೂ ನಡೆಸಬಹುದು. ನಾಗಮಂಡಲ ಕರಾವಳಿ ಕರ್ನಾಟಕದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ನಡೆಯುತ್ತದೆ. ಉಳಿದಂತೆ ಜಿಲ್ಲೆಯವರೇ ಆದವರು ಜಿಲ್ಲೆಯಿಂದ ಬೇರೆ ಪ್ರದೇಶಗಳಲ್ಲಿ ನೆಲೆಸಿರುವವರು ಬೆಂಗಳೂರು, ಮೈಸೂರು, ಕೇರಳ, ಮೊದಲಾದೆಡೆಗಳಲ್ಲಿಯೂ ವಿರಳವಾಗಿ ಹರಕೆಯ ರೂಪದಲ್ಲಿ ನಡೆಸುತ್ತಾರೆ. ಆದರೆ ತುಳುನಾಡಿನಷ್ಟು ಕಲಾತ್ಮಕವಾಗಿ, ವೈಭವೋಪೇತವಾಗಿ ಆಚರಿಸುತ್ತಿರುವುದು ಕಂಡುಬರುತ್ತಿಲ್ಲ. ಈ

ಆಚರಣೆಯಲ್ಲಿ ಜಾತಿಮತ ಭೇದವಿಲ್ಲದೆ ಸಾವಿರಾರು ಜನ ಭಾಗವಹಿಸುವುದಲ್ಲದೆ ನಡೆಸಿಕೊಟ್ಟವರಿಗೂ, ಕಾರ್ಯಕ್ರಮದಲ್ಲಿ ಭಾಗಿಗಳಾದವರಿಗೂ, ಮಂಡಲ ಸೇವೆ ನೋಡಿದವರಿಗೂ ಪುಣ್ಯಫಲಪ್ರದವಾಗುತ್ತದೆಂಬ ನಂಬಿಕೆಯಿದೆ.

ನಾಗಮಂಡಲವನ್ನು ಬೇರೆ ಬೇರೆ ಪ್ರಕಾರಗಳಲ್ಲಿ ಆಚರಿಸಲಾಗುತ್ತದೆ. ಪ್ರಮುಖವಾಗಿ ನಾಗ ಮಂಡಲ ಮತ್ತು ನಾಗ ಬ್ರಹ್ಮಮಂಡಲ ಎಂದು ಎರಡು ರೀತಿಯಲ್ಲಿ ವರ್ಗೀಕರಿಸಿಕೊಳ್ಳಬಹುದು. ನಾಗಮಂಡಲದಲ್ಲಿ ಏಕಪವಿತ್ರ, ಚತುಷ್ಪವಿತ್ರ, ಅಷ್ಟಪವಿತ್ರ, ಮತ್ತು ಷೋಡಷ ಅಥವಾ ಸಂಪೂರ್ಣ ನಾಗಮಂಡಲ ಎಂದು ರೂಢಿಯಲ್ಲಿದೆ. ಅದೇ ರೀತಿಯಲ್ಲಿ ಅಷ್ಟೇ ಪ್ರಕಾರದ ನಾಗಬ್ರಹ್ಮ ಮಂಡಲವು ಆಚರಿಸಲ್ಪಡುತ್ತದೆ. ನಾಗಬ್ರಹ್ಮ ಮಂಡಲವನ್ನು ಬ್ರಹ್ಮಸ್ಥಾನಗಳಲ್ಲಿ ಮತ್ತು ಮೂಲ ಸ್ಥಾನಗಳಲ್ಲಿ ನಾಗಬ್ರಹ್ಮ ಪ್ರೀತ್ಯಥವಾಗಿ ಆಚರಿಸಲಾಗುತ್ತದೆ. ಮಂಡಲದಲ್ಲಿ ನಾಗನೊಂದಿಗೆ ಉತ್ತರ ಭಾಗದಲ್ಲಿ ಬ್ರಹ್ಮ ಯಕ್ಷಿ ಈ ಚಿತ್ರವನ್ನು ರಚಿಸಲಾಗುತ್ತದೆ. ನಾಗಬ್ರಹ್ಮ ಮಂಡಲವು ಹರಕೆಯ ರೂಪದಲ್ಲಿ ಅಪರೂಪವಾಗಿ ಆಚರಿಸುವ ಸೇವೆ. ಕರ್ತೃವಿನ ಆರ್ಥಿಕ ಸಾಮರ್ಥ್ಯ, ಹರಕೆಯ ಸ್ವರೂಪ ಇತ್ಯಾದಿಗಳನ್ನು ಅವಲಂಬಿಸಿ ಈ ಪ್ರಕಾರವನ್ನು ನಡೆಸಲಾಗುತ್ತದೆ. ನಾಗಮಂಡಲ ಸರ್ಪದೋಷ ಪರಿಹಾರಕ್ಕಾಗಿ ಆಚರಿಸುವ ಸೇವೆ. ಈ ಎಲ್ಲಾ ಪ್ರಕಾರಗಳಲ್ಲಿಯ ಆಚರಣೆಯ ವಿಧಿಯು ಒಂದೇ ರೀತಿ ಆಗಿರುತ್ತದೆ. ಮಂಡಲ ರಚನೆಯಲ್ಲಿ ವ್ಯತ್ಯಾಸಕಂಡುಬರುತ್ತದೆ. ನಾಗಮಂಡಲದಲ್ಲಿ ನಾಗ ಪ್ರಧಾನವಾದರೆ, ನಾಗಬ್ರಹ್ಮ ಮಂಡಲದಲ್ಲಿ ನಾಗ ಮತ್ತು ಬ್ರಹ್ಮರಿಗೆ ಪ್ರಾಧಾನ್ಯತೆ ಇದೆ. ಸಂಪೂರ್ಣ ನಾಗಮಂಡಲವನ್ನು ಜಿಲ್ಲೆಯಲ್ಲಿ ವಿರಳಾತಿವಿರಳವಾಗಿ ಆಚರಿಸುತ್ತಿರುವುದು ಕಂಡುಬಂದಿದೆ. ಇದರಿಂದಾಗಿ ಸಾಧಕಗಳಿಗಿಂತ ಬಾಧಕಗಳೇ ಹೆಚ್ಚೆನ್ನುವುದು ಜನಸಾಮಾನ್ಯರ ನಂಬಿಕೆಯಾಗಿದೆ. ನಾಗಮಂಡಲದಲ್ಲಿ ಮಂಡಲದ ಸ್ವರೂಪವನ್ನು ಅವಲಂಬಿಸಿ ಸರ್ಪದ ಪ್ರತಿಕೃತಿಯನ್ನು ರಚಿಸಲಾಗುತ್ತದೆ. ಸರ್ಪದ ವಿಶಾಲವಾದ ರೂಪವನ್ನು ಸುರುಳಿ ಸುರುಳಿಯಾಗಿ ಪವಿತ್ರ ಗಂಟುಗಳ ಜೋಡಣೆಯಿಂದ ಆಕರ್ಷಕವಾಗಿ ಚಿತ್ರಿಸುತ್ತಾರೆ. ನಾಗ ಮಂಡಲದ ಸ್ವರೂಪವನ್ನು ಅವಲಂಬಿಸಿ ಪವಿತ್ರ ಗಂಟನ್ನು ಚಿತ್ರಿಸಲಾಗುತ್ತದೆ. ಚತುಃಷ್ ಪವಿತ್ರದಲ್ಲಿ ನಾಲ್ಕು ಗಂಟು ಅಥವಾ ಪವಿತ್ರ, ಅಷ್ಟ ಪವಿತ್ರದಲ್ಲಿ ೮, ಸಂಪೂರ್ಣದಲ್ಲಿ ೧೬ ಪವಿತ್ರಗಳನ್ನು ಸುರುಳಿ ಸುರುಳಿಯಾಗಿ ರೇಖಿಸಲಾಗುತ್ತದೆ. ಕಾಲುಮಂಡಲಕ್ಕೆ ಐದು ಹೆಡೆಯ ನಾಗನನ್ನು, ಅರ್ಧ ಮಂಡಲಕ್ಕೆ ಏಳು ಹೆಡೆಯ ನಾಗನನ್ನು, ಪೂರ್ಣ ಮಂಡಲಕ್ಕೆ ಹದಿನಾಲ್ಕು ಹೆಡೆಯ ನಾಗ ಮುಖವನ್ನು ಕ್ರಮವಾಗಿ ಚೌಕಾಕಾರ, ಅಷ್ಟಕೋನ, ಷಡ್ಭುಳ ಕೋನಾಕಾರಗಳಲ್ಲಿ ಬಿಡಿಸಲಾಗುತ್ತದೆ.

ಪೂರ್ವ ಸಿದ್ಧತೆ: ನಾಗಮಂಡಲ ಪ್ರಸಿದ್ಧವಾದ ಜನಪದ ಆರಾಧನ ರಂಗಕಲೆ. ಇದನ್ನು ವೈಭವೋಪೇತವಾಗಿ ಆಚರಿಸುವುದರಿಂದ, ಮತ್ತು ಅದಕ್ಕೆ ಹಿರಿದಾದ ಧಾರ್ಮಿಕ ಪಾವಿತ್ರ್ಯತೆ ಇರುವುದರಿಂದ ಕಾಯಾಕ್ರಮದ ಪೂರ್ವದಲ್ಲಿಯೇ ವ್ಯಾಪಕವಾದ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಜೊತೆಗೆ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಹಲವಾರು ರೀತಿಯ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿಕೊಂಡು ಕೊನೆಯ ಅಂಗವಾಗಿ ಈ ಕಾರ್ಯ ನಡೆಸಲಾಗುತ್ತದೆ. ಪ್ರಾರಂಭದಲ್ಲಿ ಕರ್ತೃವು ಧಾರ್ಮಿಕ ವಿಧಿಗಳ ನೇತೃತ್ವವನ್ನು ವಹಿಸಿಕೊಳ್ಳುವ

ಅರ್ಚಕ, ದರ್ಶನ ಪಾತ್ರಿ, ಮತ್ತು ವೈದ್ಯಮೇಳದವರು ಇವರೆಲ್ಲ ಸೇರಿಕೊಂಡು ಒಂದು ಶುಭ ದಿನವನ್ನು ಆಯ್ಕೆಮಾಡುತ್ತಾರೆ.

ನಾಗಮಂಡಲದ ವೀಕ್ಷಕರಾಗಿ ಸಾವಿರಾರು ಮಂದಿ ಪ್ರೇಕ್ಷಕರು ಸೇರುವುದರಿಂದ ವಿಶಾಲವಾದ ಬಯಲಿನಲ್ಲಿ ನಾಗ ಬನದ ಸಮೀಪದಲ್ಲಿ ನಡೆಸಬೇಕಾಗುತ್ತದೆ. ಸುತ್ತಲೂ ಪ್ರೇಕ್ಷಕರು ಕುಳಿತುಕೊಳ್ಳುವುದರಿಂದ ನಡುವೆ ಎತ್ತರವಾದ ವೇದಿಕೆಯ ನಿರ್ಮಾಣವಾಗಬೇಕಾಗುತ್ತದೆ. ವೇದಿಕೆಯ ನಿರ್ಮಾಣಕ್ಕಾಗಿ ಮತ್ತು ಪ್ರಾರಂಭಿಕ ಹಂತವಾಗಿ 'ಕೆಸರು ಕಲ್ಲು' ಮುಹೂರ್ತ ಕಲ್ಲು ಮುಹೂರ್ತ ನಡೆಸಬೇಕಾಗುತ್ತದೆ. ಅರ್ಚಕರು, ಕುಟುಂಬಿಕರು ಎಲ್ಲ ಸೇರಿ ವೇದಿಕೆಯ ನಿರ್ಮಾಣದ ಪ್ರಾರಂಭದ ಕಲ್ಲನ್ನು ಶಾಸ್ತ್ರೋಕ್ತವಾಗಿ ನೆಡುತ್ತಾರೆ. ಬಳಿಕ ನಾಗ ಮಂಡಲದ ಸ್ವರೂಪವನ್ನು ಪರಿಗಣಿಸಿ ವೇದಿಕೆಯ ನಿರ್ಮಾಣವಾಗುತ್ತದೆ.

ಸುಮಾರು ಮೂರು ಅಡಿ ಎತ್ತರ ಮತ್ತು ೨೫ ರಿಂದ ೩೫ ಅಡಿ ಚಚ್ಚೌಕದ ವೇದಿಕೆ ನಿರ್ಮಾಣವಾಗುತ್ತದೆ. ಎರಡನೆ ಹಂತವಾಗಿ ಚಾವಣಿ ನಿರ್ಮಾಣವಾಗಬೇಕಾಗುತ್ತದೆ. ಅದಕ್ಕಾಗಿ 'ಕಂಬ ಮುಹೂರ್ತ'ವನ್ನು ನಡೆಸಲಾಗುತ್ತದೆ. ಇದು ಕೂಡ ಪ್ರಧಾನ ಅರ್ಚಕರು, ವಿಶ್ವಕರ್ಮ, ಕುಟುಂಬಿಕರು ಸೇರಿ ನಡೆಸುವ ವಿಧ್ಯುಕ್ತಕ್ರಿಯೆ, ಶುಭ ಮುಹೂರ್ತದಂದು ಚಪ್ಪರಕ್ಕಾಗಿ ಒಂದು ಕಂಬವನ್ನು ನೆಟ್ಟು, ಅದನ್ನು ಹೂ, ಮಾವಿನ ಎಲೆಗಳಿಂದ ಶೃಂಗರಿಸಿ ಪೂಜಿಸಲಾಗುತ್ತದೆ. ಬಳಿಕ ವೇದಿಕೆ, ಉಗ್ರಾಣ, ಅಡುಗೆ ಮನೆ, ಅರ್ಚಕ ವೃಂದದವರಿಗೆ, ವೈದ್ಯ ಮೇಳದವರಿಗೆ, ಊಟೋಪಚಾರಕ್ಕೆ, ಇತ್ಯಾದಿಯಾಗಿ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ನಾಗಮಂಡಲ ಆಚರಣ ವಿಧಿ

ಸಾಮಾನ್ಯವಾಗಿ ಏಕಪವಿತ್ರ ನಾಗಮಂಡಲವನ್ನು ಒಂದೇ ದಿನದ ಆಚರಣ ವಿಧಿಗಳೊಂದಿಗೆ ಮುಕ್ತಾಯಗೊಳಿಸುವ ಸಂಪ್ರದಾಯವು ಇದೆ. ನಾಗಮಂಡಲ ಸೇವೆಯನ್ನು ಸ್ಥಿತಿವಂತರೇ ನಡೆಸುವುದರಿಂದ ಸುಮಾರು ಮೂರು ದಿನಗಳ ಧಾರ್ಮಿಕ ವಿಧಿಗಳನ್ನು ಶಾಸ್ತ್ರೋಕ್ತವಾಗಿ ಹಮ್ಮಿಕೊಳ್ಳಲಾಗುತ್ತದೆ. ನಾಗ ಮಂಡಲದೊಂದಿಗೆ ನಾಗಸಂಬಂಧಿಯಾದ ಎಲ್ಲ ಆಚರಣೆಗಳನ್ನು ನಡೆಸುವುದರಿಂದ ಹರಕೆಗಳಲ್ಲೆಲ್ಲ ಇದು ಶ್ರೇಷ್ಠ ಹರಕೆ ಎಂದು ಭಾವಿಸಲಾಗಿದೆ. ಆದ್ದರಿಂದ ಇದರೊಂದಿಗೆ ಸರ್ಪ ಸಂಸ್ಕಾರ, ನಾಗಶಿಲಾಪ್ರತಿಷ್ಠೆ, ಆಶ್ಲೇಷಬಲಿ, ಗಣಹೋಮ, ಚಂಡಿಕಾಹೋಮ, ವಟು ಆರಾಧನೆ, ಕನ್ನಿಕಾ ಆರಾಧನೆ, ಬ್ರಾಹ್ಮಣಾರಾಧನೆ ಮತ್ತು ವಿವಿಧ ರೀತಿಯ ದಾನಗಳು, ಗೋದಾನ, ಭೂದಾನ, ಸಾವಿರಾರು ಜನರಿಗೆ ಜಾತಿ-ಮತ ಬೇದವಿಲ್ಲದೆ ಅನ್ನದಾನಾದಿಗಳು ಇತ್ಯಾದಿಗಳನ್ನೆಲ್ಲ ನಡೆಸಲಾಗುತ್ತದೆ. ಇದೆಲ್ಲವೂ ನಾಗಮಂಡಲಕ್ಕೆ ಪೂರ್ವಭಾವಿಯಾಗಿ ನಡೆಸುವ ಪ್ರಾಯಶ್ಚಿತ್ತ ಕಾರ್ಯಕ್ರಮಗಳೆಂದು ಕಂಡುಬಂದಿದೆ. ಪ್ರಾರಂಭದಲ್ಲಿ ನಾಗನ ನೂತನ ಶಿಲಾ ಪ್ರತಿಮೆಯನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೀರಿನಲ್ಲಿ ಜಲಾಧಿವಾಸ ಮಾಡಬೇಕು. ಈ ಪ್ರತಿಮೆ ನೀರಿನಲ್ಲಿ ಸುಮಾರು ೪೮ ದಿನಗಳ ಕಾಲ ಇರಬೇಕಾಗಿರುವುದರಿಂದ ಪೂರ್ವದಲ್ಲಿಯೇ ಈ ಕಾರ್ಯವನ್ನು ನಡೆಸಲಾಗುತ್ತದೆ.

ಕಾರ್ಯಕ್ರಮದ ಪ್ರಾರಂಭದಲ್ಲಿ ಮೊದಲ ದಿನ ಧಾರ್ಮಿಕ ಕಾರ್ಯಕ್ರಮದ ನೇತಾರರಾದ ಋತ್ವಿಜರನ್ನು ಸೇವಾ ಕರ್ತೃಗಳು ಸಕುಟುಂಬಿಕರಾಗಿ ವಾದ್ಯ ಮೇಳಗಳೊಂದಿಗೆ ಸ್ವಾಗತಿಸುತ್ತಾರೆ. ನಂತರ ಮುಂದಿನ ಧಾರ್ಮಿಕ

ಕಾರ್ಯಕ್ರಮಗಳು ಒಂದೊಂದಾಗಿ ನೆರವೇರುತ್ತವೆ. ದೇವತಾ ಪ್ರಾರ್ಥನೆ, ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ದ್ರವ್ಯಶುದ್ಧಿ, ಪುಣ್ಯಾಹ ಮೊದಲಾದ ಕಾರ್ಯಕ್ರಮಗಳು ಋತ್ವಿಜರಿಂದ ನೆರವೇರುತ್ತವೆ. ಸಾಯಂಕಾಲ ನಾಗಬನದಲ್ಲಿ ಸಪ್ತಶುದ್ಧಿ, ಭೂಶುದ್ಧಿ, ರಾಕ್ಷೋಘ್ನಹೋಮ, ವಾಸ್ತು ಪೂಜೆ, ವಾಸ್ತು ಹೋಮ, ವಾಸ್ತು ಬಲಿ, ಇಂದ್ರಾದಿ ದಿಕ್ಪಾಲಕ ಬಲಿ, ಜಲಾಧಿವಾಸದಿಂದ ಎತ್ತಿ ತಂದಿರುವ ನಾಗ ಪ್ರತಿಮೆಯ 'ಬಿಂಬ ಶುದ್ಧಿ' ಪ್ರಕ್ರಿಯೆ, ಅಧಿವಾಸ ಮೊದಲಾದ ಕಾರ್ಯಗಳು ನಡೆಯುತ್ತವೆ.

ಎರಡನೆಯ ದಿನ ಪೂರ್ವಾಹ್ನ ನವಗ್ರಹ ಹೋಮ, ಪ್ರತಿಷ್ಠಾ ಹೋಮ ನಂತರದ ಶುಭ ಮುಹೂರ್ತದಲ್ಲಿ ನಾಗ ಪ್ರತಿಮೆಯ ಪ್ರತಿಷ್ಠೆ, ಪ್ರತಿಷ್ಠಾ ಕಲಶಾಭಿಷೇಕ, ಪ್ರಸನ್ನಪೂಜೆ, ತಿಲ ಹೋಮ, ಕೂಷ್ಮಾಂಡ ಹೋಮ, ಪವಮಾನ ಹೋಮ ಇತ್ಯಾದಿಗಳನ್ನು ನಡೆಸಲಾಗುತ್ತದೆ.

ಅಪರಾಹ್ನ ನಾಗಬನದಲ್ಲಿ ಬ್ರಹ್ಮಕಲಶದ ಮಂಡಲ ರಚನೆ, ಮಂಡಲ ಪೂಜೆ, ೧೦೮ ಕಲಶ ಸಹಿತ ಬ್ರಹ್ಮ ಕಲಶಾಧಿವಾಸ ಪ್ರಕ್ರಿಯೆ, ಆಶ್ಲೇಷ ಬಲಿದಾನದ ಮಂಡಲ ರಚನೆ, ನಾಗಮಂಡಲ ಮಂಟಪಕ್ಕೆ ಪುಣ್ಯಾಹ ಶುದ್ಧಿ, ವಾಸ್ತು ವಿದ್ಯಾಕಲಾಪಗಳು ಮೊದಲಾದ ಧಾರ್ಮಿಕ ಕ್ರಿಯೆಗಳು ನಡೆಯುತ್ತವೆ.

ಮೂರನೆಯ ದಿನ ಪೂರ್ವಾಹ್ನ ನಾಗಬನದಲ್ಲಿ ನಾಗ ಪ್ರತಿಮೆಗಳಿಗೆ ೧೦೮ ಕಲಶಗಳ ಬ್ರಹ್ಮ ಕಲಶಾಭಿಷೇಕ, ಪ್ರಸನ್ನ ಪೂಜೆ, ಆಶ್ಲೇಷ ಬಲಿ, ವಟು ಆರಾಧನೆ, ದಂಪತಿ ಪೂಜೆ, ಆಚಾರ್ಯ ಪೂಜೆ, ಸುವಾಸಿನಿ ಪೂಜೆ, ನಾಗದರ್ಶನ, ಪಲ್ಲ ಪೂಜೆ, ಪ್ರಸಾದ ವಿತರಣೆ, ಬಳಿಕ ನೆರೆದಿರುವ ಸಾವಿರಾರು ಜನರಿಗೆ ಅನ್ನಸಂತರ್ಪಣೆ ನಡೆಯುತ್ತದೆ.

ಮಂಡಲ ರಚನೆ

ವೈದ್ಯಮೇಳದ ಕಲಾವಿದರು ನಾಗಮಂಡಲದ ಮಂಡಲ ರಚನೆಯನ್ನು ಮಾಡುತ್ತಾರೆ. ಇದಕ್ಕಾಗಿಯೇ ನಿರ್ಮಿಸಿರುವ ಚಚ್ಚೌಕಾಕಾರದ ವಿಶಾಲವಾದ ವೇದಿಕೆಯ ನಾಲ್ಕು ಮೂಲೆಗಳಿಗೆ ಕಂಬಗಳನ್ನು ಹುಗಿದು ಚಪ್ಪರ ನಿರ್ಮಿಸಲಾಗಿರುತ್ತದೆ. ಚಪ್ಪರದ ಕೆಳಭಾಗದಲ್ಲಿ ಬಿಳಿ ಬಟ್ಟೆಯಿಂದ 'ಮೇಲ್‌ಕಟ್ಟು' ಕಟ್ಟಿ ಸುತ್ತಲೂ ವಸ್ತ್ರದ ಜಾಲರಿ ಇಳಿಬಿಡಲಾಗುತ್ತದೆ. ಚಪ್ಪರದ ನಾಲ್ಕು ಭಾಗಗಳಲ್ಲಿಯೂ ಹೂ ಹಣ್ಣು, ಎಳನೀರು, ವಿವಿಧ ರೀತಿಯ ಫಲವಸ್ತುಗಳು, ಬಾಳೆಗಿಡ ಇತ್ಯಾದಿಗಳಿಂದ ರಮಣೀಯವಾಗಿ ಶೃಂಗರಿಸಲಾಗುತ್ತದೆ. ಮಂಡಲದ ಸುತ್ತಲೂ ಪ್ರೇಕ್ಷಕರಿಗೆ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ನಾಗಮಂಡಲದ ಮಂಡಲ ರಚನೆಯನ್ನು ಪಂಚವರ್ಣದ ಹುಡಿಗಳಿಂದ ರೇಖಿಸಲಾಗುತ್ತದೆ. ಡಕ್ಕೆ ಬಲಿಯಲ್ಲಿ ಬಳಸುವಂತಹ ಬಣ್ಣಗಳನ್ನೇ ಇಲ್ಲಿಯೂ ಬಳಸಲಾಗುತ್ತದೆ. ಆದರೆ ಹಳದಿ ಹುಡಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದು ಕಂಡುಬಂದಿದೆ. ಮಂಡಲ ರಚನೆಗೆ ಪೂರ್ವದಲ್ಲಿ ಮಂಡಲದ ಮೇಲ್ಭಾಗದಲ್ಲಿ ತೆಂಗಿನ ಎಳೆಯ (ಸಿರಿಯೊಲಿ) ಗರಿಗಳಿಂದ ತಾವರೆ, ಗಿಳಿ ನವಿಲು, ಸಿರಿಯೊಲಿ, ಇತ್ಯಾದಿಗಳನ್ನು ಇಳಿಬಿಡಲಾಗುತ್ತದೆ. ನಾಗಮಂಡಲದ ಸ್ವರೂಪಕ್ಕನುಸರಿಸಿ ಮಂಡಲ ರಚನೆಯಾಗುತ್ತದೆ. ಪ್ರಾರಂಭದಲ್ಲಿ ಗಣಪತಿ (ಸ್ವಸ್ತಿಕೆ)ಯನ್ನು ಬರೆದು ನಾಗಮಂಡಲವನ್ನು ಮಾಡಿಸುವ ಯಜಮಾನ, ಪುರೋಹಿತ, ಹಾಗೂ ವೈದ್ಯರ ಸಮಕ್ಷಮದಲ್ಲಿ ಮಂಡಲ

ನಿರ್ಮಾಣಕ್ಕೆ ಮತ್ತು ಮುಂದೆ ನಡೆಯುವ ಸೇವೆಗೆ ಯಾವುದೇ ರೀತಿಯ ಅಡೆತಡೆ ಬಾರದಿರಲಿ ಎಂದು ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಬಳಿಕ ಬಣ್ಣಗಳ ಹುಡಿಯಿಂದ ಮಂಡಲ ಬರೆಯಲಾಗುತ್ತದೆ. ಮಂಡಲದ ನಿರ್ಮಾಣಕ್ಕೆ ಸುಮಾರು ೬ ಮಂದಿಗೆ ಮೂರರಿಂದ ೪ ಗಂಟೆಯ ಅವಧಿ ತಗಲುತ್ತದೆ. ಇದು ಕೂಡ ನಾಗಮಂಡಲದ ಸ್ವರೂಪವನ್ನು ಅವಲಂಬಿಸಿಕೊಂಡಿರುತ್ತದೆ.

ಪ್ರಾರಂಭದಲ್ಲಿ ಮಂಡಲದ ವೃತ್ತವನ್ನು ರಚಿಸಿ ಪವಿತ್ರವನ್ನು ರಚನೆ ಮಾಡುತ್ತಾರೆ. ಇದರೊಂದಿಗೆ ಏಳು ಹೆಡೆಯ ಸರ್ಪದ ಉಬ್ಬು ಆಕೃತಿಯನ್ನು ಸುರುಳಿ ಸುರುಳಿಯಾಗಿ ಪವಿತ್ರ ಗಂಟುಗಳ ಜೋಡಣೆಯೊಂದಿಗೆ ಆತ್ಯಾಕರ್ಷವಾಗಿ ಬರೆಯುತ್ತಾರೆ. ನಾಗನ ದೇಹವನ್ನು ಹಳದಿ ಬಣ್ಣದಿಂದಲೂ, ಮಧ್ಯದಲ್ಲಿ ಕೆಂಪು ಬಣ್ಣದಿಂದ ನಾಡಿ ರೇಖೆಯನ್ನು ಎಳೆಯುತ್ತಾರೆ. ದೇಹದ ಹೊರಭಾಗದ ರೇಖೆಯನ್ನು ಕಪ್ಪು ಬಣ್ಣದಿಂದ ಎಳೆದು ಬಿಳಿ ಬಣ್ಣದಿಂದ ಚುಕ್ಕೆ ಆಕಾರದಲ್ಲಿ ನಾಗನಿಗೆ ಕಾಲುಗಳನ್ನು ಬಿಡಿಸುತ್ತಾರೆ. ನಾಗನ ಈ ಬೃಹತ್ ಆಕೃತಿಯ ನಡುವೆ ಬಿಳಿ ಬಣ್ಣದ ರಾಶಿಯಿಂದ ಮರಿಮೊಟ್ಟೆಗಳನ್ನು ರೂಪಿಸುತ್ತಾರೆ. ನಾಗನ ಬೃಹತ್ ಹೆಡೆಯ ಉಬ್ಬನ್ನು ಮೊದಲು ಹಸಿರು ಬಣ್ಣ, ಅದರ ಮೇಲೆ ಬಿಳಿ, ಅನಂತರ ಹಳದಿ, ಕೆಂಪು, ಕಪ್ಪು ಬಣ್ಣಗಳಿಂದ ರಚಿಸುತ್ತಾರೆ. ಹೆಡೆಯ ಕೆಳಭಾಗದಲ್ಲಿ 'ಖ' ಆಕಾರದಲ್ಲಿ ವಿಷ್ಣು ಪಾದವನ್ನು ಕಪ್ಪು ಬಣ್ಣದಿಂದ ರೇಖಿಸುತ್ತಾರೆ. ನಾಗನ ಪಕ್ಕದಲ್ಲಿ ಮರಿನಾಗಗಳನ್ನು ಬ್ರಹ್ಮ, ಯಕ್ಷಿ, ಗಣಪತಿಯನ್ನು ರಚಿಸುತ್ತಾರೆ. ಮಂಡಲದ ಸುತ್ತಲೂ ಅಗಲವಾದ ಬಿಳಿಪಟ್ಟಿ ರಚಿಸಿ ಅದರ ಮೇಲೆ ದ್ರಾಕ್ಷಿಯ ಬಳ್ಳಿ, ಎಲೆ ಇತ್ಯಾದಿಗಳನ್ನು ಚಿತ್ರಿಸುತ್ತಾರೆ. ಹಸಿರು ಹುಡಿಯಿಂದ ದಂಡೆಕಟ್ಟಿ ಸ್ವಸ್ತಿಕೆ ಇಡುತ್ತಾರೆ. ಸುತ್ತಲೂ, ಫಲವಸ್ತು, ಹಿಂಗಾರ ಹೂಗಳಿಂದ ಅಲಂಕಾರ ಮಾಡುತ್ತಾರೆ. ಸ್ವಸ್ತಿಕೆಯಲ್ಲಿ ಅಕ್ಕಿ, ತೆಂಗಿನಕಾಯಿ ಅಡಕೆ, ಬಾಳೆಹಣ್ಣು, ವೀಳ್ಯದೆಲೆ ಇತ್ಯಾದಿಗಳನ್ನು ಇಡುತ್ತಾರೆ. ರಾಶಿ ರಾಶಿ ಹಿಂಗಾರದ ಹೂಗಳನ್ನು ಸುತ್ತಲೂ ಇಟ್ಟು ಅಲಂಕರಿಸುತ್ತಾರೆ. ವೇದಿಕೆಯ ನಾಲ್ಕೂ ಬದಿಗಳಲ್ಲಿಯೂ ಹಿಂಗಾರದ ಹೂಗಳನ್ನು ಕೂಡಿ ಇಡುತ್ತಾರೆ. ಈ ಎಲ್ಲ ಹೂಗಳನ್ನು ಮುಂದೆ ದರ್ಶನ ಪಾತ್ರಿಯು ಆವೇಶದಲ್ಲಿ ಬಳಸಬೇಕಾಗುತ್ತದೆ. ನಾಗಮಂಡಲದಲ್ಲಿ ಹಿಂಗಾರವೇ ಪ್ರಧಾನ ಆಕರ್ಷಣೆಯಾಗಿರುತ್ತದೆ. ಹೆಚ್ಚಿನ ಭಕ್ತಾದಿಗಳು ಬರುವಾಗ ಜೊತೆಯಲ್ಲಿ ಹಿಂಗಾರವನ್ನು ತಂದು ಒಪ್ಪಿಸುವುದಿದೆ. ನಾಗಮಂಡಲದ ಸ್ವರೂಪವನ್ನು ಅವಲಂಬಿಸಿ ಕಾಲುದೀಪಗಳನ್ನು ಇಡುತ್ತಾರೆ. ಏಕ ಪವಿತ್ರ ೪, ಚತುಷ್ ಫವಿತ್ರ ೪, ಅಷ್ಟ ಪವಿತ್ರ ೮, ಸಂಪೂರ್ಣ ನಾಗಮಂಡಲವಾದರೆ ೧೬, ಈ ರೀತಿ ಸುಂದರವಾಗಿ ಮಂಡಲ ರಚಿಸಿ ವೇದಿಕೆಯನ್ನು ವೈದ್ಯಮೇಳದವರು ಮುಂದಿನ ನಾಗಮಂಡಲ ನರ್ತನಕ್ಕೆ ಅಣಿಗೊಳಿಸುತ್ತಾರೆ.

ಹಾಲಿಟ್ಟು ಸೇವೆ

ನಾಗಮಂಡಲ ನೃತ್ಯಕ್ಕೆ ಮೊದಲು ನಾಗಬನದಲ್ಲಿ ನಡೆಯುವ ದರ್ಶನಸೇವೆ, ನಾಗಮಂಡಲದ ಮಂಡಲ ರಚನೆಯಾಗಿ ಮಂಡಲ ಸೇವೆಗೆ ಸಿದ್ಧವಾದ ಮೇಲೆ ಸಮೀಪದಲ್ಲಿಯೇ ಇರುವ ನಾಗಬನದಲ್ಲಿ 'ಹಾಲಿಟ್ಟು ಸೇವೆ' ನಡೆಯುತ್ತದೆ (ಹಾಲು, ಹಿಟ್ಟಿನ ಸೇವೆ) ಪುರೋಹಿತರು, ಕುಟುಂಬಿಕರು, ವೈದ್ಯರು ಇಲ್ಲಿ ಭಾಗವಹಿಸುತ್ತಾರೆ. ವೈದ್ಯರು ದರ್ಶನದ ಸಂದರ್ಭದಲ್ಲಿ ಡಕ್ಕೆಯನ್ನು ನುಡಿಸುತ್ತಾರೆ. ಹಾಲು ಅರಸಿನ ಹುಡಿ, ಮತ್ತು ಅಕ್ಕಿಹಿಟ್ಟು, ಬೆರೆಸಿದ ಮಿಶ್ರಣವನ್ನು ನಾಗ ಪ್ರತಿಮೆಗಳಿಗೆ ಅಭಿಷೇಕ ಮಾಡುತ್ತಾರೆ. ಇದರೊಂದಿಗೆ ಪೂಜೆ ಮುಗಿದ ಬಳಿಕ

ದರ್ಶನ ಪಾತ್ರಿಗೆ ಆವೇಶ ಬರಿಸುತ್ತಾರೆ. ಮುಂದೆ ಆವೇಶಕ್ಕೆ ಒಳಗಾದ ಪಾತ್ರಿಯು ಕುಟುಂಬಕ್ಕೆ ಮುಂದಿನ ಕಾರ್ಯಕ್ರಮಗಳನ್ನೆಲ್ಲ ನಿರ್ವಿಘ್ನವಾಗಿ ನಡೆಸಿಕೊಂಡುವ ಅಭಯ ನೀಡುತ್ತಾನೆ. ಬಳಿಕ ಆವೇಶ ಕೊನೆಗೊಳ್ಳುತ್ತದೆ. ಅಲ್ಲಿಂದ ನಿರ್ಗಮಿಸುವಾಗ, ಸ್ವಸ್ತಿಕೆ, ಕಾಲುದೀಪ, ಇತ್ಯಾದಿಗಳನ್ನು ಮಂಡಲ ನಡೆಯುವಲ್ಲಿಗೆ ತಂದು ಆ ದೀಪದಿಂದ ಮಂಡಲದ ದೀಪ ಹಚ್ಚಲಾಗುತ್ತದೆ. ಇದರೊಂದಿಗೆ ಸಾಂಕೇತಿಕವಾಗಿ ನಾಗಬನದಲ್ಲಿರುವ ದೈವೀ ಶಕ್ತಿಯನ್ನು ತಂದು ಮಂಡಲದಲ್ಲಿ ಆವಾಹಿಸಲಾಗುತ್ತದೆ.

ಮಂಡಲ ನೃತ್ಯ

ನಾಗಮಂಡಲದ ಕೊನೆಯ ಘಟ್ಟ ಹಾಗೂ ಭಕ್ತಿ ಭಾವಗಳ ಪ್ರೇರಿತ ಭಾಗವೇ ಮಂಡಲ ನೃತ್ಯ ಭಾಗ. ತಮ್ಮ ತಮ್ಮ ಬಿಡಾರಗಳಲ್ಲಿ ಸಿದ್ಧರಾಗಿದ್ದ ನಾಗಪಾತ್ರಿ ಮತ್ತು ವೈದ್ಯಮೇಳದವರನ್ನು ವೇದಿಕೆಗೆ ವಾದ್ಯಮೇಳಗಳೊಂದಿಗೆ ಕರೆತರಲಾಗುತ್ತದೆ. ನಾಗಪಾತ್ರಿಯು ಕೆಂಪು ಪಟ್ಟೆಯ ಕಚ್ಚೆ ಧರಿಸಿದ್ದರೆ ನಾಗಕನ್ನಿಕೆ ವೇಷಧಾರಿಯು 'ಅರ್ಧನಾರಿ' ವೇಷವಾಗಿದ್ದು, ತಲೆಗೆ ಪೇಟ, ಕಸೆಸೀರೆ, ಕಾಲ್ಗೆಜ್ಜೆ ಧರಿಸಿ ಕೈಯಲ್ಲಿ ಕಂಚಿನ ಡಕ್ಕೆ ಹಿಡಿದಿರುತ್ತಾನೆ. ವೈದ್ಯಮೇಳದ ಉಳಿದಿಬ್ಬರು ಚಕ್ರತಾಳ ವಾದಕರಾಗಿದ್ದರೆ ಮತ್ತಿಬ್ಬರು ಮರದ ಡಕ್ಕೆ ಹಿಡಿದಿರುತ್ತಾರೆ. ಒಟ್ಟನಲ್ಲಿ ಐದು ಜನ ಮೇಳದ ಸದಸ್ಯರು ಮಂಡಲದ ರಂಗದಲ್ಲಿರುತ್ತಾರೆ.

ವೈದ್ಯರು ಮತ್ತು ಪಾತ್ರಿಯನ್ನು ವೇದಿಕೆಗೆ ಕರೆತಂದಮೇಲೆ ಪುರೋಹಿತರಿಂದ ಮಂಡಲ ಪೂಜೆ ನಡೆಯುತ್ತದೆ. ಬಳಿಕ ಕುಟುಂಬ ಸದಸ್ಯರು, ವೈದ್ಯರು, ನಾಗಪಾತ್ರಿ ಇವರ ಸಮ್ಮುಖದಲ್ಲಿ ಪ್ರಧಾನ ಅರ್ಚಕರಿಂದ ಪ್ರಾರ್ಥನೆ ನಡೆಯುತ್ತದೆ. ಬಳಿಕ ಪಾತ್ರಿ ಮಂಡಲದ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿಲ್ಲುತ್ತಾನೆ. ಪಾತ್ರಿಗೆ ಹೂ ನೀಡಿ ನೀರು ಎರೆಯಲಾಗುತ್ತದೆ. ಹಿನ್ನಲೆಯಲ್ಲಿ ನಾಗಸ್ವರ, ಕಹಳೆ, ಚಂಡೆ, ಬ್ಯಾಂಡ್ ಜಾಗಟೆಗಳ ದರ್ಶನಕ್ಕಾಗಿಯೇ ನುಡಿಸುವ ವಿಶಿಷ್ಟ ರೀತಿಯ ತಾರಕ ಧ್ವನಿ ಮೊಳಗುತ್ತದೆ. ನಾಗಪಾತ್ರಿ ಕೈಯಲ್ಲಿ ಹಿಂಗಾರದ ಹೂಗಳನ್ನು ಹಿಡಿದುಕೊಂಡು ಮಂಡಲಕ್ಕೆ ಶಿರಭಾಗಿ ನಮಿಸಿ ಒಮ್ಮೆಲೆ ಹಾರಿ ಕುಣಿದು ಕುಪ್ಪಳಿಸಿ ಆವೇಶಕ್ಕೊಳಗಾಗುತ್ತಾನೆ. ಬಿಚ್ಚಿದ ತಲೆಗೂದಲು ಕೆಂಪು ಪಟ್ಟೆಯ ಕಚ್ಚೆ, ಮೈ, ಮುಖತುಂಬ ಮೆತ್ತಿಕೊಂಡಿರುವ ಹಿಂಗಾರದ ಹೂವಿನ ಸಣ್ಣಕಾಳುಗಳು ನೋಡುಗರಿಗೆ ಭಯ ಭಕ್ತಿಯನ್ನುಂಟುಮಾಡುತ್ತದೆ. ಅಷ್ಟರಲ್ಲಿ ಕಂಚಿನ ಡಕ್ಕೆ ಹಿಡಿದು ಸಿದ್ಧನಾಗಿರುವ ಅರ್ಧನಾರಿ ವೇಷಧಾರಿ ಅಥವಾ ನಾಗಕನ್ನಿಕೆಯು ಕಂಚಿನ ಡಕ್ಕೆಯನ್ನು ಪಾತ್ರಿಯ ಸಮೀಪಕ್ಕೆ ತಂದು ಜೋರಾಗಿ ಬಾರಿಸುತ್ತ ಹಿಮ್ಮುಖವಾಗಿ ಓಡುತ್ತಾನೆ. ನಾಗ ಪಾತ್ರಿಯು ಕೂಡ ಅವನನ್ನು ಅನುಸರಿಸಿಕೊಂಡು ಪರಸ್ಪರ ಅಭಿಮುಖವಾಗಿ ಓಡುತ್ತಾ ಮಂಡಲಕ್ಕೆ ಮೂರು ಪ್ರದಕ್ಷಿಣೆ ಬರುತ್ತಾರೆ. ಬಳಿಕ ನಾಗಕನ್ನಿಕೆಯು ಡಕ್ಕೆಯ ತಾಳಕ್ಕೆ ಅನುಗುಣವಾಗಿ ನೃತ್ಯ ಮಾಡುತ್ತಾ ನಾಗನ ಸ್ತುತಿಗಳನ್ನು ಹಾಡುತ್ತಾ ಹಿಂದಕ್ಕೂ ಮುಂದಕ್ಕೂ ಸುತ್ತುತ್ತಿರುತ್ತಾನೆ. ಉಳಿದವರು ನಾಗಕನ್ನಿಕೆಯ ಹಾಡುಗಳನ್ನು ಅನುಸರಿಸುತ್ತ ಮಂಡಲದ ಸುತ್ತಲೂ ಇವರನ್ನು ಅನುಸರಿಸುತ್ತಾರೆ.

ನಾಗನನ್ನು ಹೊಗಳಿ ಒಲಿಸುವ ಮತ್ತು ತೆಗಳಿ ಕೆರಳಿಸುವಂತಹ ಭಾವ ಭಂಗಿಗಳಲ್ಲಿ ನಾಗಕನ್ನಿಕೆ ಕುಣಿದಂತೆ ಪಾತ್ರಿ ಹಿಂಬಾಲಿಸುತ್ತಾನೆ. ಡಕ್ಕೆಯ ಬಡಿತಕ್ಕೆ ತಕ್ಕಂತೆ ಕೆಲವೊಮ್ಮೆ ನಿಧಾನವಾಗಿ ಹಾಗೂ ಕೆಲವೊಮ್ಮೆ ತೀವ್ರವಾಗಿ ಸಾಗುವ ನಾಗ ಕನ್ನಿಕೆಯ ನರ್ತನ ಪ್ರೇಕ್ಷಕರನ್ನು ರೋಮಾಂಚನಗೊಳಿಸುತ್ತದೆ. ಸುಮಾರು ಎರಡು ಗಂಟೆಯ

ವಿವಿಧ ಹಾಡುಗಳ ಹಿನ್ನೆಲೆಯಲ್ಲಿ ನಡೆವ ಕುಣಿತದ ನಂತರ ವೈದ್ಯ ಮೇಳದವರು ಅಲ್ಪ ಸಮಯದ ವಿರಾಮವನ್ನು ಪಡೆಯುತ್ತಾರೆ. ಈ ಸಂದರ್ಭದಲ್ಲಿ ದರ್ಶನ ಪಾತ್ರಿಯು ಮಂಡಲದ ಸುತ್ತಲೂ ಆವೇಶದಿಂದ ರಾಶಿ ರಾಶಿ ಹಿಂಗಾರದ ಹೂಗಳನ್ನು ಹೊಸಕಿ ಹಾಕುತ್ತಿರುತ್ತಾನೆ. ಹಾವಿನಂತೆ ವಿವಿಧ ಭಂಗಿಗಳಲ್ಲಿ ಆವೇಶ ನಡೆಯುತ್ತಿರುತ್ತದೆ. ಪಾತ್ರಿಯು ಹೊಸಕಿ ಬೀಳಿಸಿದ ಹೂವನ್ನು ಮತ್ತೆ ತಿರುಗಿ ಪಾತ್ರಿಗೆ ಕೊಡುವ ಸಂಪ್ರದಾಯವಿಲ್ಲ. ಅದನ್ನು ರಾಶಿ ಹಾಕಿಡಲಾಗುತ್ತದೆ. ಮತ್ತು ಪ್ರಸಾದವೆಂದು ಭಾವಿಸಲಾಗುತ್ತದೆ.

ವೈದ್ಯ ಮೇಳದವರು ಮರಳಿ ಬಂದ ಬಳಿಕ ಮತ್ತೆ ನೃತ್ಯ ಮುಂದುವರಿಯುತ್ತದೆ. ಕುಣಿತ ಸಾಗಿದಂತೆ ನಾಗಕನ್ನಿಕೆ ಹಾಗೂ ಪಾತ್ರಿ ಪವಿತ್ರ ಗಂಟುಗಳನ್ನು ಸಾಂಕೇತಿಕವಾಗಿ ಬಿಗಿದುಕೊಂಡಂತೆ ಹಾಗೂ ಕೊನೆಗೆ ಬಿಡಿಸಿಕೊಂಡಂತೆ ನೃತ್ಯದ ಹಾವ ಭಾವಗಳನ್ನು ಅಭಿನಯಿಸುತ್ತಾರೆ. ನಾಗಮಂಡಲ ನೃತ್ಯದ ಕೊನೆಯಲ್ಲಿ ನಾಗಕನ್ನಿಕೆ ಹಾಗೂ ನಾಗಪಾತ್ರಿಯ ಮಿಲನದ ಸಾಂಕೇತಿಕ ಸನ್ನಿವೇಶವಿರುತ್ತದೆ. ಮಂಡಲದ ಅಷ್ಟದಿಕ್ಕುಗಳಲ್ಲಿಯೂ ಇವರು ಪರಸ್ಪರ ಆಲಂಗಿಸಿಕೊಂಡು ಸುತ್ತುತ್ತಾರೆ. ಇದು ನಾಗಮಂಡಲದ ಅತ್ಯಂತ ವೈಶಿಷ್ಟ್ಯಪೂರ್ಣವಾದ ಸನ್ನಿವೇಶ. ಕೊನೆಯ ಘಟ್ಟವಾಗಿ ವೇಗವಾಗಿ ಅಷ್ಟದಿಕ್ಕುಗಳಲ್ಲಿ ನಿಂತು ಪರಸ್ಪರ ಇಬ್ಬರೂ ಸುರುಳಿ ಸುರುಳಿಯಾಗಿ ಸುತ್ತುತ್ತಾ ನೃತ್ಯ ಕೊನೆಗೊಳ್ಳುತ್ತದೆ. ನೃತ್ಯ ಕೊನೆಗೊಳ್ಳುತ್ತಿದಂತೆ ಮಂಡಲದ ಅಷ್ಟದಿಕ್ಕುಗಳಲ್ಲಿ ಅರಳು ಇತ್ಯಾದಿಗಳಿಂದ ಪುರೋಹಿತರು ಬಲಿ ಹಾಕುತ್ತಾರೆ. ಮಂಡಲಕ್ಕೆ ಮಹಾಪೂಜೆಯಾದ ಮೇಲೆ ವೈದ್ಯರು ವಿಧ್ಯುಕ್ತವಾಗಿ ಮಂಡಲ ವಿಸರ್ಜನೆ ಮಾಡುತ್ತಾರೆ.

ಕೊನೆಯದಾಗಿ ನಾಗ ಪಾತ್ರಿಯಿಂದ ಭಕ್ತಾದಿಗಳಿಗೆ, ಮಂಡಲ ನಡೆಸಿ ಕೊಟ್ಟ ಕುಟುಂಬಕ್ಕೆ ಬಂದಿರುವ ಸಂಕಷ್ಟಗಳಿಗೆ ಮಧ್ಯವರ್ತಿಯಾಗಿರುವ ಪುರೋಹಿತನ ಮೂಲಕ ಪರಿಹಾರ ನೀಡಲಾಗುತ್ತದೆ. ಅಭಯ ವಾಕ್ಯ ದೊರಕಿದ ಬಳಿಕ ಸರತಿಯಂತೆ ಪ್ರತಿಯೊಬ್ಬರಿಗೂ ಪಾತ್ರಿಯಿಂದಲೇ ಪ್ರಸಾದ ವಿತರಣೆಯಾಗುತ್ತದೆ. ಕುಟುಂಬಕ್ಕೆ ಮಹಾಪ್ರಸಾದ ನೀಡಿದ ಬಳಿಕ ಆವೇಶ ಕೊನೆಗೊಳ್ಳುತ್ತದೆ. ನಾಗ ಪಾತ್ರಿಯ ಆವೇಶ ಮುಗಿದ ಮೇಲೆ ಮಂಡಲಕ್ಕಾಗಿ ಬಳಸಿರುವ ಪಂಚವರ್ಣದ ಹುಡಿಗಳನ್ನು ದರ್ಶನದಲ್ಲಿ ಬಳಸಿರುವ ಹಿಂಗಾರದ ಹೂಗಳನ್ನು ಜನತೆ ಪ್ರಸಾದದ ರೂಪದಲ್ಲಿ ತೆಗೆದುಕೊಂಡು ಹೋಗುತ್ತಾರೆ. ತಮ್ಮ ತಮ್ಮ ಹೊಲ, ಕೆರೆ, ಬಾವಿ, ತೋಟ, ಜಾನುವಾರು ಕೊಟ್ಟಿಗೆ ಮೊದಲಾದೆಡೆಗಳಲ್ಲೆಲ್ಲ ಸಿಂಪಡಿಸುತ್ತಾರೆ.

ನಾಗಮಂಡಲ ಸಮೀಕ್ಷೆ

ನಾಗಮಂಡಲ ಭಕ್ತಿ, ನಿಷ್ಠೆ, ಶುದ್ಧಾಚಾರ, ಇತ್ಯಾದಿಗಳಿಂದ ನಡೆಯುವ ಭಕ್ತಿಪ್ರಧಾನ ಸೇವೆ. ಸುಮಾರು ಮೂರು ಗಂಟೆಗಳ ಅವಧಿಯಲ್ಲಿ ನಡೆಯುವ ಈ ಸೇವೆಗೆ ಮತ್ತು ನಾಗಮಂಡಲಕ್ಕೆ ಪೂರ್ವಭಾವಿಯಾಗಿ ನಡೆಸುವ ಇನ್ನಿತರ ಆರಾಧನ ವಿಧಿಗಳಿಗಾಗಿ ಲಕ್ಷಾಂತರ ರೂಪಾಯಿಗಳ ಖರ್ಚು ತಗಲುತ್ತದೆ. ಕೆಲವು ಶ್ರೀಮಂತ ಕುಟುಂಬಗಳು ೧೦ರಿಂದ ಸುಮಾರು ೨೫ ಲಕ್ಷ ರೂಪಾಯಿಗಳವರೆಗೂ ಖರ್ಚು ನಡೆಸಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ನಾಗಮಂಡಲ ಸೇವೆಯಲ್ಲಿ 'ಸಂಪೂರ್ಣ ನಾಗಮಂಡಲ' ಸೇವೆಯನ್ನು ಅತಿ ವಿರಳವಾಗಿ ನಡೆಸುತ್ತಿರುವುದು ಕಂಡುಬಂದಿದೆ. ನಾಗಮಂಡಲದ ದಿನ ಜಾತಿ, ಮತ, ಬೇಧವಿಲ್ಲದೆ ಅನ್ನದಾನ ನಡೆಸಲಾಗುತ್ತದೆ. ಅದಕ್ಕೆ

ಮುಂಚಿತವಾಗಿ 'ಫಲ್ಲಪೂಜೆ' ಎಂಬ ವೈದಿಕ ಕ್ರಿಯೆಯನ್ನು ಪುರೋಹಿತ ವರ್ಗ ನಡೆಸುತ್ತದೆ. ಪುಷ್ಪಗಳಿಂದ ಅಲಂಕರಿಸಿರುವ ಅನ್ನದ ರಾಶಿಗೆ ಪೂಜೆ ನಡೆಸಲಾಗುತ್ತದೆ. ಆ ದಿನ ಬಂದಿರುವ ಯಾವ ವ್ಯಕ್ತಿಯೂ ಊಟವಿಲ್ಲದೆ ಹಿಂದೆ ಹೋಗಬಾರದು ಎಂಬ ಪ್ರತೀತಿ ಇದೆ. ಆ ರೀತಿಯಾದಲ್ಲಿ ಈ ಕಾರ್ಯ ನಡೆಸಿರುವ ಕುಟುಂಬಕ್ಕೆ 'ದೋಷ' ಬರುತ್ತದೆಂಬ ನಂಬಿಕೆಯಿದೆ. ಆ ಹಿನ್ನೆಲೆಯಲ್ಲಿ ಅಂದು ನಿರಂತರ ಅನ್ನದಾನ ನಡೆಯುತ್ತಿರುತ್ತದೆ.

ರಚಿಸಿರುವ ಮಂಡಲಕ್ಕಾಗಲಿ, ನಡೆಯಬೇಕಾಗಿರುವ ಸೇವಗಾಗಲಿ ಯಾವುದೇ ರೀತಿಯ ವಿಘ್ನ ಬರಬಾರದೆಂದು ವಿಘ್ನವಾದಲ್ಲಿ ಮುಂದೆ ಕುಟುಂಬಕ್ಕೆ ಅದರಿಂದ ಅನಿಷ್ಟವಾಗುವುದೆಂಬ ಪ್ರತೀತಿ ಇದೆ. ಆಚರಿಸುವ ಯಾವುದೇ ವಿಧಿ ವಿಧಾನಗಳಿಗೆ ಕುಂದು ಬಾರದಂತೆ ಶಾಸ್ತ್ರೋಕ್ತವಾಗಿ ನಾಗಮಂಡಲ ನಡೆಸಿದರೆ ಅದರಿಂದ ಸರ್ಪದೋಷ ನಿವಾರಣೆಯಾಗಿ ಸರ್ಪಾನುಗ್ರಹ ದೊರೆಯುವುದೆಂಬುದು ಜನಪದರ ನಂಬಿಕೆಯಾಗಿದೆ.

ಅಧ್ಯಯನದ ಪ್ರಾರಂಭದಲ್ಲಿಯೇ ಸೂಚಿಸಿರುವಂತೆ ನಾಗಮಂಡಲ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಒಂದು ವೈಶಿಷ್ಟ್ಯಪೂರ್ಣವಾದ ಧಾರ್ಮಿಕ ರಂಗಕಲೆ ಈ ಪ್ರಕಾರವನ್ನು ಇಲ್ಲಿ ಹೊರತು ಪಡಿಸಿದರೆ ದೇಶದ ಇನ್ನಾವ ಭಾಗದಲ್ಲೂ ಕಾಣಲು ಸಾಧ್ಯವಿಲ್ಲ. ದೈವಭಕ್ತಿಯೊಂದಿಗೆ ಜಾನಪದ ರಂಗಕಲೆಯ ಸೊಗಡೂ ಇದರಲ್ಲಿ ಕಂಡುಬರುತ್ತದೆ. ನಾಗಮಂಡಲದ ಕುರಿತಂತೆ ವಿವಿಧ ರೀತಿಯ ಅಭಿಪ್ರಾಯಗಳು ವಿದ್ವಾಂಸ ವಲಯದಲ್ಲಿ ಕಂಡುಬಂದಿವೆ. ನಾಗ ಮಂಡಲದಲ್ಲಿ ಪಂಚವರ್ಣದ ಹುಡಿಗಳಿಂದ ಬೃಹತ್ ಗಾತ್ರದ ಏಳು ಹೆಡೆಯ ಸರ್ಪದ ಆಕೃತಿಯನ್ನು ಮಂಡಲದಲ್ಲಿ ರಚಿಸಲಾಗುತ್ತದೆ. ಪ್ರತಿಮೆಯಲ್ಲಿ ದೇವರನ್ನು ಆವಾಹಿಸಿ ಪೂಜಿಸುವಂತೆ ವಿವಿಧ ಮಂಡಲಗಳ ಮೂಲಕವೂ ಪೂಜಿಸುವ ಸಂಪ್ರದಾಯ ನಮ್ಮ ಸಂಸ್ಕೃತಿಯಲ್ಲಿದೆ. ಈ ವಿಧಾನವನ್ನು ಕುರಿತು ಉಲ್ಲೇಖಿಸುತ್ತಾ ''ದೇವರ ಆರಾಧನೆಯಲ್ಲಿ ಹನ್ನೊಂದು ಪ್ರತೀಕಗಳನ್ನು ಪುರಾಣಗಳು ಬಣ್ಣಿಸಿವೆ. ಅದರಲ್ಲೊಂದು ಮಂಡಲ ಪ್ರತೀಕ. ಮಂಡಲ ಮಾಧ್ಯಮದಲ್ಲಿ ನಾಗನನ್ನು ಪೂಜಿಸುವುದು ನಾಗಮಂಡಲದ ಒಟ್ಟು ಉದ್ದೇಶ. ಇದನ್ನೇ ಮುಖ್ಯವಾಗಿಸಿಕೊಂಡು ಜ್ಯೋತಿಷ್ಯರು ನಾಗಮಂಡಲ ಸೇವೆಯನ್ನು ಪ್ರಾಯಶ್ಚಿತ್ತವಾಗಿ ಕೊನೆಯಲ್ಲಿ ಹೇಳುತ್ತಾರೆ. ಹೇಗೆ ಚಕ್ರಾಬ್ಜ ಮಂಡಲದಲ್ಲಿ ಹರಿಯ ಆರಾಧನೆ ನಡೆಯುತ್ತದೋ, ಹಾಗೆ ಶ್ರೀ ಚಕ್ರಾಬ್ಜದಲ್ಲಿ ಲಕ್ಷ್ಮಿಯ ಪೂಜೆಯು ನೆರವೇರುತ್ತದೋ, ಹಾಗೆ ಶಿವ ಸಮನಾದ ಹರಿಯ ಹಾಸಿಗೆಯಾದ ಶೇಷನಾಗನ ಉಪಾಸನೆಯೂ ಮಂಡಲದಲ್ಲಿ ನಡೆಯುವುದು. ಮಂಡಲ ಪೂಜೆ ಜೈನರಲ್ಲೂ, ಅವೈದಿಕರಾದ ಶಾಕ್ತರಲ್ಲೂ ಸಾಕಷ್ಟಿವೆ. ಇದನ್ನು ಯಂತ್ರ ಎಂದು ಗುರುತಿಸಬಹುದಾಗಿದೆ. ಒಟ್ಟಾರೆ ಇದು ಪೂಜಾ ಮಾಧ್ಯಮದಲ್ಲೊಂದು ಬಣ್ಣದ ಪ್ರತೀಕ. ದೇವರ ಬಣ್ಣದ ರೂಪದ ಕಲ್ಪನೆ ಇಲ್ಲಿ ಸಾಕಾರಗೊಳ್ಳುವುದು''[1] ಎಂದು ನಾಗಾರಾಧನೆಯಲ್ಲಿ ಬಳಸುವ ಮಂಡಲದ ಕುರಿತು ವಿದ್ವಾಂಸರ ಅಭಿಮತವಿದೆ. ವಿವಿಧ ಜನಪದ ಮತ್ತು ಶಿಷ್ಟ ದೇವರುಗಳನ್ನು ಮಂಡಲಗಳಲ್ಲಿ ಆರಾಧಿಸುವ ಪ್ರಕ್ರಿಯೆ ಈ ಪ್ರದೇಶದಲ್ಲಿ ತಲೆತಲಾಂತರದಿಂದ ನಡೆದುಬಂದಿದೆ.

ನಾಗಮಂಡಲ ಕಲಾತ್ಮಕವಾದ ಧಾರ್ಮಿಕ ಸೇವೆ. ಡಾ.ಶಿವರಾಮ ಕಾರಂತರು ನಾಗಮಂಡಲದ ಕಲಾತ್ಮಕ ಸ್ವರೂಪದ ಕುರಿತು ಪ್ರಸ್ತಾಪಿಸುತ್ತಾ ''ನಾಗಪಾತ್ರಿ ವೈದ್ಯ ಮತ್ತು ಹಿಮ್ಮೇಳದವರು ಮಂಡಲವನ್ನು ಸುತ್ತುತ್ತ ಹಿಂದಕ್ಕೆ ಮುಂದಕ್ಕೆ ಸರಿಯುತ್ತ ನಡೆಯಿಸುವಂಥ ಈ ಪೂಜಾವಿಧಿ ಅತ್ಯಂತ ಸುಂದರವೂ, ಭವ್ಯವೂ ಆಗಿದೆ. ಈ ಕುಣಿತ ಮಾತ್ರ ತೀರಾ

ಸುಂದರವಾದ ತರಂಗಬದ್ಧವಾದ ಪ್ರತಿಯೊಂದು ಭಾವರಸಕ್ಕೂ ಒದಗಿಬಂದಿರುವ ಒಂದು ನೃತ್ಯ ವಿಧಾನವಾಗಿದೆ. ಯಾವತ್ತು ಶರೀರಕ್ಕೆ ಅದರಲ್ಲಿ ಕೆಲಸವಿದೆ. ನಖ ಶಿಖಾಂತ ಶರೀರ ವಿನ್ಯಾಸಗಳಿವೆ ಕುಣಿತ, ಜಿಗಿತ, ಹಿನ್ನಡೆ, ಮುನ್ನಡೆ, ಕೈ ಬಳಕು, ಮೈ ಬಳುಕು ಇಂಥ ಸುಸಂಬದ್ಧವಾಗಿ ಹೊಂದಿಕೊಂಡ ನೃತ್ಯಸಂಗತಿಗಳಿವೆ. ಲಾಸ್ಯಕ್ಕೆ ಹಾಸ್ಯಕ್ಕೆ, ತಾಂಡವಕ್ಕೆ, ರೌದ್ರಕ್ಕೆ, ಸಮಶಕ್ತಿಯಿಂದ ಒದಗಬಲ್ಲ ಚಲನ ವಲನಗಳಿವೆ. ಯಕ್ಷಗಾನ ಬಯಲಾಟದವರು ಇದಕ್ಕೇನೆ ಋಣಿಗಳಾದರು''[೫] ಎಂದಿದ್ದಾರೆ. ವೈದ್ಯ ಹಾಡುಗಳು ಹಾಗೂ ಕುಣಿತದ ಶೈಲಿಯು ಯಕ್ಷಗಾನದ ಕುಣಿತ ಹಾಗೂ ಹಾಡುಗಾರಿಕೆಗೆ ಹೋಲಿ ಇರುವುದು ಡಾ.ಕಾರಂತರ ಹೇಳಿಕೆಯನ್ನು ಸಮರ್ಥಿಸುತ್ತದೆ. ಯಕ್ಷಗಾನ ಮೇಳದಂತೆ ವೈದ್ಯರ ತಂಡವನ್ನು ಕೂಡಾ 'ಮೇಳ' ಎಂದು ಕರೆಯುವ ವಾಡಿಕೆಇದೆ.

ನಾಗಮಂಡಲದ ರಂಗಸಜ್ಜಿಕೆಯನ್ನು ಈಗಾಗಲೇ ವಿಶ್ಲೇಷಿಸಲಾಗಿದೆ. ವೈದ್ಯರ ವೇಷಭೂಷಣಗಳಲ್ಲಿ ಸರಳತೆ ಕಂಡುಬರುತ್ತದೆ. ಅರ್ಧನಾರಿ ವೇಷವನ್ನು ಯಕ್ಷಗಾನ ವೇಷದಂತೆ 'ಕಸೆ ವೇಷ' ಎಂದು ಕರೆಯಲಾಗುತ್ತದೆ. ಕಾಲಿಗೆ ಗೆಜ್ಜೆ, ಸೊಂಟಕ್ಕೆ ಬೆಳ್ಳಿ ಪಟ್ಟಿ, ಕೈಗೆ ಚಿನ್ನದ ಕಡಗ, ತಲೆಗೆ ಜರಿ ಪೇಟ, ಕೈಯಲ್ಲಿ ಕಂಚಿನ ಡಕ್ಕೆ ಇತ್ಯಾದಿ ಸಾಂಪ್ರದಾಯಿಕ ಶೈಲಿಯ ವೇಷ ಭೂಷಣಗಳು ಇಲ್ಲಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅರ್ಧನಾರಿ ವೇಷದಲ್ಲಿಯೂ ಕೂಡ ಆಡಂಬರ ಕಂಡುಬರುತ್ತದೆ. ಈ ವೇಷದ ಗುಣಮಟ್ಟವೂ ಕೂಡ ನಾಗಮಂಡಲದ ಆಡಂಬರವನ್ನು ಗಮನಿಸಿಕೊಂಡು ರೂಪಿಸಿಕೊಳ್ಳಲಾಗುತ್ತದೆ. ಆದರೆ ಸಾಂಪ್ರದಾಯಿಕ ಶೈಲಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಧರಿಸುವ ಆಭರಣ ಅಲಂಕಾರ ಇತ್ಯಾದಿಗಳು ಬದಲಾಗುತ್ತವೆ.

ನಾಗಮಂಡಲದ ನೃತ್ಯದಲ್ಲಿ ಶಾಸ್ತ್ರೀಯ ನೃತ್ಯದಲ್ಲಿ ಬಳಸುವ ವಿವಿಧ ರೀತಿಯ ನೃತ್ಯ 'ಮುದ್ರೆ'ಗಳನ್ನು ಪ್ರದರ್ಶಿಸಲಾಗುತ್ತದೆ. ಪ್ರಧಾನವಾಗಿ ಹಸ್ತಮುದ್ರೆ, ಸ್ಥಾನ ಮುದ್ರೆ, ಮುಖಮುದ್ರೆ, ನಾಸಿಕ ಮುದ್ರೆ, ದೃಷ್ಟಿ ಮುದ್ರೆ, ಆಸನ ಮುದ್ರೆ, ಶಯನ ಮುದ್ರೆ ಇತ್ಯಾದಿಗಳನ್ನು ನೃತ್ಯದಲ್ಲಿ ಅಭಿನಯದ ಮೂಲಕ ಹಾಡಿಗೆ ಅನುಸಾರವಾಗಿ ಅಭಿನಯಿಸಿ ತೋರಿಸಲಾಗುತ್ತದೆ.

ನೃತ್ಯ ಶೈಲಿಯಲ್ಲಿಯೂ, ಕುಣಿತ ವಿಧಾನಗಳಲ್ಲಿ ಶ್ರಾಸ್ತ್ರೀಯವಾದ ತಾಳ, ಹೆಜ್ಜೆಗಳನ್ನು ಬಳಸಲಾಗುತ್ತದೆ. ಆದಿತಾಳ, ಏಕತಾಳ, ತೃತೀಯ ತಾಳ, ಅಷ್ಟತಾಳ, ರೂಪಕ ತಾಳ, ಜಂಪೆ ತಾಳಗಳ ಲಯದಲ್ಲಿ ಹಾಡನ್ನು ಅನುಕರಿಸಿ ಹೆಜ್ಜೆ ಹಾಕಲಾಗುತ್ತದೆ. ಪ್ರಾರಂಭದಲ್ಲಿ ಪವಿತ್ರ ಗಂಟು ಹೆಣೆದಂತೆ ಬಳಿಕ ಪವಿತ್ರ ಗಂಟು ಬಿಡಿಸಿದಂತೆ ನೃತ್ಯದ ಮೂಲಕ ಪಾತ್ರಿ ಮತ್ತು ಅರ್ಧನಾರಿ ಅದನ್ನು ಅಭಿನಯಿಸಿ ಪ್ರದರ್ಶಿಸುತ್ತಾರೆ. ನಾಗಮಂಡಲ ಮತ್ತು ಡಕ್ಕೆ ಬಲಿಗಳ ನೃತ್ಯದಲ್ಲಿ ಇದು ಅತ್ಯಂತ ರೋಮಾಂಚಕ ಸನ್ನಿವೇಶ. ಈ ವಿಧಾನವು ಕೂಡ ಮಂಡಲದ ಸ್ವರೂಪದ ಹಿನ್ನೆಲೆಯಲ್ಲಿ ಪ್ರದರ್ಶಿಸಲಾಗುತ್ತದೆ.

ವೈದ್ಯರು ತಾವು ಹಾಡುವ ಹಾಡಿನಲ್ಲಿ ಸಂಸ್ಕೃತ ಶ್ಲೋಕಗಳು, ದಾಸರ ಹಾಡುಗಳನ್ನು, ಪುರಾಣದ ಗದ್ಯ ಕಥೆಗಳನ್ನು ಹಾಡಿನ ರೂಪದಲ್ಲಿ ಹಾಡುತ್ತಾರೆ. ನಾಗನ ಸಂಪೂರ್ಣ ಕತೆ, ನಾಗ ಸೃಷ್ಟಿ, ಕದ್ರು, ವಿನಿತೆ, ಸರ್ಪಯಜ್ಞ, ಇತ್ಯಾದಿಗಳನ್ನು ಹಾಡುತ್ತಾರೆ. ನಾಗ ಬ್ರಹ್ಮ, ಇತ್ಯಾದಿ ದೇವರುಗಳ ಬಾಲ್ಯದಿಂದ ಅವರ ಹೊಗಳಿಕೆ, ತೆಗಳಿಕೆಗಳನ್ನು ಮಾಡುತ್ತಾರೆ.

ಅವರ ಕಷ್ಟ ಕಾರ್ಪಣ್ಯಗಳನ್ನು ಹೇಳಿಕೊಳ್ಳುತ್ತಾರೆ. ಇದಕ್ಕೆ ಸರಿಯಾಗಿ ಆವೇಶ ಬರಿತ ನಾಗಪಾತ್ರಿಯು ಸಂತೋಷ, ದುಃಖ, ಕೋಪಗಳಿಂದ ಅಭಿನಯಿಸಿ ಅನುಕರಿಸುತ್ತಾನೆ.

ಪ್ರಾರಂಭದಲ್ಲಿ ವಿಷ್ಣು ಸ್ತುತಿ, ಬಳಿಕ ಬ್ರಹ್ಮ ರುದ್ರಾದಿಗಳ ಸ್ತುತಿಯೊಂದಿಗೆ ಗಣಪತಿ ಪ್ರಾರ್ಥನೆ ನಡೆಸಲಾಗುತ್ತದೆ. ನಾಗಗಳಲ್ಲಿ ಅಷ್ಟ ಕುಲ ನಾಗಗಳ ನೆನಪಿನೊಂದಿಗೆ ನಾಂದಿಯಾಗಲಿದೆ. ಮುಂದೆ ಸಂಸ್ಕೃತದಲ್ಲಿ ದಿಕ್ಪಾಲಕರ ಧ್ಯಾನ ನಡೆಸಲಾಗುತ್ತದೆ. ಬಳಿಕ ನಾಗಧ್ಯಾನ ಮಾಡುತ್ತಾರೆ. ಇತರ ದೇವತಾ ಧ್ಯಾನಗಳ ಬಳಿಕ ದಾಸರ ಹಾಡುಗಳನ್ನು ಹಾಡಲಾಗುತ್ತದೆ. ಹಾಡಿಗೆ ಸರಿಯಾಗಿ ಅರ್ಧನಾರಿ ಹೆಜ್ಜೆ ಹಾಕುತ್ತಾನೆ. ಒಟ್ಟಿನಲ್ಲಿ ಪ್ರಕೃತಿಯ ಗೂಢತೆ, ಅದೃಶ್ಯ ಶಕ್ತಿಗಳನ್ನು ಕುರಿತ ಭಯ, ಅವುಗಳನ್ನು ಒಲಿಸಿ ಸಂತೃಪ್ತಿಗೊಳಿಸುವ ಆಶಯಗಳನ್ನು ನಾಗಮಂಡಲದಲ್ಲಿ ಗುರುತಿಸಬಹುದು. ಅಲ್ಲಿ ರಚಿಸಲ್ಪಡುವ ಸುಂದರವಾದ ಮಂಡಲ, ಅರ್ಧನಾರಿ ವೇಷ ತೊಟ್ಟವನ ವಿಶಿಷ್ಟ ವೇಷ ಭೂಷಣ, ವಾದ್ಯ ಮೇಳಗಳ ಸಮ್ಮಿಳನ, ನಾಗಪಾತ್ರಿಯ ಸಿಮೀತ ರೌದ್ರ ಭಾವಾಭಿನಯಗಳಿಂದಾಗಿ ಪ್ರೇಕ್ಷಕ ವರ್ಗದಲ್ಲುಂಟಾಗುವ ಆನಂದ ಮತ್ತು ತೃಪ್ತಿಯಲ್ಲಿ ಕಲೆಯ ಅಸ್ತಿತ್ವವನ್ನು ಗುರುತಿಸಬಹುದಾಗಿದೆ.

ನಾಗಮಂಡಲವನ್ನು ಕುರಿತು ವಿವೇಚಿಸುವಾಗ ಕೆಲವು ವಿಚಾರಗಳನ್ನು ಗಮನಿಸಬೇಕಾಗಿದೆ. ಯಾವತ್ತೂ ಧಾರ್ಮಿಕ ವಿಚರಗಳಿಗೆ ಎರಡು ಮುಖಗಳಿರುವುದು ಕಂಡು ಬರುತ್ತದೆ. ಅದು ಇಂದಿನ ವಾಸ್ತವ ಸಂದರ್ಭದಲ್ಲಿ ಹೆಚ್ಚು ಪ್ರಕರವಾಗಿ ಕಂಡು ಬರುತ್ತದೆ. ಅದರಲ್ಲಿ ಧರ್ಮದ ಜೊತೆಗೆ ವ್ಯಾಪಾರಿ ಮುಖ ಎದ್ದು ಕಾಣುತ್ತದೆ. ಅದರ ಅಂತರ್ಯದಲ್ಲಿ ಧಾರ್ಮಿಕ ನಂಬಿಕೆಯ ಮುಖವು ಇದೆ. ಈ ನಂಬಿಕೆ ಅವರವರ ಮನೋಧರ್ಮ ಹಿನ್ನೆಲೆಗೆ ಸಂಬಂಧಿಸಿದುದಾಗಿದೆ. ಇಂದು ಜನಸಾಮಾನ್ಯರಿಗೆ ನಾಗಮಂಡಲ ಮಾಡಿಸುವ ಹಾಗಿಲ್ಲ. ಅದು ಅಷ್ಟು ಆಡಂಬರವಾಗಿ ವೈಭವೋಪೇತವಾಗಿ ಬೆಳೆದಿದೆ. ಇಲ್ಲಿ ನಡೆಯುವ ದುಂದುವೆಚ್ಚ ತುಂಬಾ ಆತಂಕಕಾರಿಯಾದ ಸಂಗತಿಯಾಗಿದೆ. ಮಿತಿಗಿಂತ ಹೆಚ್ಚನ್ನು ಉಪಯೋಗ ಮಾಡುವಂತದ್ದು ಯಾವುದೇ ವಿಷಯದಲ್ಲಿ ಕೂಡ ಸರಿ ಎಂದು ಕಂಡು ಬರುವುದಿಲ್ಲ. ಇದು ಪ್ರಕೃತಿಗೆ ಮಾಡುವ ಆತಂಕ. ಇಲ್ಲಿ ಬಳಸುವ ಅಷ್ಟೊಂದು ಹಿಂಗಾರವು ಮಿತಿಗಿಂತ ಅಧಿಕವಾಗಿ ಬಳಸಲ್ಪಡುತ್ತದೆ. ಇಲ್ಲಿ ಪ್ರಕೃತಿಯನ್ನು ಸೂರೆ ಮಾಡುವುದರ ಜೊತೆಗೆ ಅಧಿಕ ಖರ್ಚು ಕೂಡ ನಡೆಯುತ್ತದೆ. ಅದೇ ರೀತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವೈದ್ಯರು, ನಾಗಪಾತ್ರಿ, ಅರ್ಚಕ ವೃಂದ ಮತ್ತು ಇತರ ಉಳಿದವರ ವೇತನಗಳು ಕೂಡ ಅತ್ಯಂತ ದುಬಾರಿಯಾಗಿದೆ. ಈ ರೀತಿಯ ಪ್ರವೃತ್ತಿಯಿಂದ ಮತ್ತು ಬೆಳವಣಿಗೆಯಿಂದ ಸಮಾಜಕ್ಕೆ ಹಾನಿಯೇ ಹೊರತು ಒಳಿತಲ್ಲ. ಇದರಿಂದ ಭಕ್ತಿ ಬೆಳೆಯುವ ಬದಲು ಭಯ ಭೀತಿ ಬೆಳೆಯುತ್ತದೆ. ನಾಗನನ್ನು ಜ್ಞಾನದ ಸಂಕೇತವಾಗಿ ಪೂಜಿಸುವಾಗ, ಜ್ಞಾನಕ್ಕೆ ಹೊರತಾದ ಅಜ್ಞಾನವನ್ನು ಸ್ಥಾಪಿಸುವುದಿದ್ದರೆ ಅದು ಅಪಾಯಕಾರಿ ಹಂತವನ್ನು ತಲುಪುವುದರಲ್ಲಿ ಸಂಶಯವಿಲ್ಲ.

ಆದ್ದರಿಂದ ನಾಗಮಂಡಲ ಎನ್ನುವುದು ಅದರಷ್ಟಕ್ಕೇ ಹಾನಿಕರವಲ್ಲದಿದ್ದರೂ, ಅದರಲ್ಲಿ ವ್ಯವಹರಿಸುವುಂಥ ವ್ಯಕ್ತಿಗಳು ಅದರಲ್ಲಿ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡು, ಬೇರೆಯವರು ಅದರಲ್ಲಿ ಭಾಗವಹಿಸುವುದಕ್ಕೆ ಅಸಾಧ್ಯ ಎಂಬ ನೆಲೆಯಲ್ಲಿ ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯುವ ಚಿತ್ರಣವನ್ನು ಕಾಣಬಹುದು. ಇದು ಸಾರ್ವತ್ರಿಕ ಅಲ್ಲದಿದ್ದರೂ ಅಲ್ಲಲ್ಲಿ ಕಂಡು ಬರುವ ಸಂಗತಿಯಾಗಿದೆ. ಇದು ಈಗ ಅತ್ಯಂತ ಜ್ವಲಂತವಾಗಿ

ಪ್ರಚಲಿತವಿರುವ ಸನ್ನಿವೇಶ. ಆದ್ದರಿಂದ ಧಾರ್ಮಿಕ ವಿಷಯಗಳನ್ನು ಬಹಳ ಸೂಕ್ಷ್ಮವಾಗಿ, ಎಚ್ಚರವಾಗಿ, ಧರ್ಮಕ್ಕೂ ಚ್ಯುತಿ ಬಾರದಹಾಗೆ, ಜನರ ಸಾಮಾಜಿಕ ಆರೋಗ್ಯಕ್ಕೆ ಧಕ್ಕೆ ಆಗದಹಾಗೆ ಸಮತೋಲನ ಮಾಡಿಕೊಂಡು ಹೋಗಬೇಕಾಗುತ್ತದೆ.

೬.೫.೧೦. ನಾಗರ ಪಂಚಮಿ

ವೈದಿಕ ಮತ್ತು ಜನಪದ ಹಿನ್ನೆಲೆಯಲ್ಲಿ ಸಾಮೂಹಿಕವಾಗಿ ಆಚರಿಸಲ್ಪಡುವ ಆಚರಣೆ, ತುಳುನಾಡಿನಲ್ಲಿ ನಾಗರಪಂಚಮಿಯನ್ನು ಹಬ್ಬವಾಗಿ ವಿಶೇಷವಾಗಿ ಆಚರಿಸಲಾಗುತ್ತದೆ. ಶ್ರಾವಣ ಹಾಗೂ ಮಾರ್ಗಶಿರ ಮಾಸದ ಪಂಚಮಿ ತಿಥಿಯನ್ನು ನಾಗಪಂಚಮಿಯಾಗಿ ನಾಡಿದಾದ್ಯಂತ ಆಚರಿಸಲಾಗುತ್ತದೆ. ನಾಗಪಂಚಮಿಯಂದು ನಾಗನಿಗೆ ಹಾಲೆರೆಯುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯ.

ನಾಗರ ಪಂಚಮಿಯಂದು ತುಳುನಾಡಿನ ಪ್ರತಿಯೊಂದು ಹಿಂದೂ ಕುಟುಂಬದವರೂ ನಾಗತನು ಪೂಜೆಯನ್ನು ವೈದಿಕರಿಂದ ನಡೆಸುತ್ತಾರೆ. ಅಂದು ನಾಗ ಪ್ರತಿಮೆಗಳಿಗೆ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಮತ್ತು ಸಕ್ಕರೆಯ ಮಿಶ್ರಣದಿಂದ 'ಪಂಚಾಮೃತ' ನಿರ್ಮಿಸಿ ಅಭಿಷೇಕ ನಡೆಸಲಾಗುತ್ತದೆ. ಎಳನೀರು ಅಭಿಷೇಕ ಮಾಡಲಾಗುತ್ತದೆ. ನಾಗ ತನು ಪೂಜೆಯನ್ನು ತಪ್ಪದೇ ಪ್ರತಿಯೊಬ್ಬರೂ ಕುಟುಂಬಕ್ಕೆ ಸಂಬಂಧಿಸಿದ ನಾಗಬನಗಳಲ್ಲಿ ನಡೆಸುತ್ತಾರೆ. ಕುಟುಂಬದ ಮೂಲಸ್ಥಾನಗಳಿಗೂ ಭೇಟನೀಡುವ ಸಂಪ್ರದಾಯವಿದೆ. ನಾಗನಿಗೆ 'ಕೇದಗೆ' ಮತ್ತು 'ಸಂಪಗೆ' ಪುಷ್ಪಗಳು ವಿಶೇಷವೆಂಬ ನಂಬಿಕೆಯಿದೆ. ನಾಗರಪಂಚಮಿಯಂದು ಕೇದಗೆಯ ಬಳಕೆ ಶ್ರೇಷ್ಠವೆಂದು ಭಾವಿಸಲಾಗಿದೆ. ಈ ಹಬ್ಬದೊಂದಿಗೆ ಕೆಲವು ನಿಯಮಗಳನ್ನು ಪಾಲಿಸಿಕೊಂಡುಬರಲಾಗುತ್ತಿದೆ. ಭೂಮಿಯನ್ನು ಉಳುಮೆಮಾಡುವ, ಕೇಳುವ ಯಾವುದೇ ಕಾರ್ಯವನ್ನು ಅಂದು ಮಾಡಬಾರದೆನ್ನುವ ನಂಬಿಕೆಯಿದೆ.

ನಾಗರ ಪಂಚಮಿಯ ಹಿನ್ನೆಲೆಯ ಕುರಿತಂತೆ ವಿಭಿನ್ನ ಪಠ್ಯವನ್ನು ಒಳಗೊಂಡಿರುವ ಜನಪದ ಕತೆಗಳು ಪ್ರಚಲಿತದಲ್ಲಿವೆ. ''ಒಂದು ಕತೆಯ ಪ್ರಕಾರ ಒಮ್ಮೆ ಒಬ್ಬ ರೈತನ ನೇಗಿಲಿನ ತುದಿಗೆ ಸಿಲುಕಿ ಹಾವಿನ ಮರಿಗಳು ಸತ್ತು ಹೋಗುತ್ತವೆ. ಆ ಮರಿಗಳ ತಾಯಿ ಇದರಿಂದ ರೊಚ್ಚಿಗೆದ್ದು ಅವನ ಮನೆಯವರನ್ನೆಲ್ಲ ಕಚ್ಚಿ ಕೊಂದುದಲ್ಲದೆ ನೆರೆಯ ಹಳ್ಳಿಯಲ್ಲಿದ್ದ ಆ ರೈತನ ಇನ್ನೊಬ್ಬಳು ಮಗಳನ್ನು ಕೊಲ್ಲಬೇಕೆಂದು ಹೋಯಿತು. ಅಲ್ಲಿ ಆತನ ಮಗಳು ಮಣ್ಣಿನಿಂದ ಸರ್ಪಾಕೃತಿಯನ್ನು ರಚಿಸಿ ಹಾಲೆರೆದು ಪೂಜಿಸುತ್ತಿರುವುದನ್ನು ಕಂಡು ಅದರ ಕೋಪವು ಇಳಿದು ಹೋಯಿತು. ಅವಳ ಅಪೇಕ್ಷೆಯಂತೆ ಬಳಿಕ ರೈತನ ಮನೆಯವರನ್ನೆಲ್ಲ ಬದುಕಿಸಿತು. ಈ ಘಟನೆ ಪಂಚಮಿಯಂದು ನಡೆದುದರಿಂದ ಆ ದಿನವನ್ನೇ ಮುಂದೆ ನಾಗರ ಪಂಚಮಿ ಎಂದು ಆಚರಿಸಿಕೊಂಡು ಬರಲಾಯಿತು'' ಎಂಬ ಜನಪದ ಕತೆಯು ಪ್ರಚಲಿತದಲ್ಲಿದೆ.

ಇನ್ನೊಂದು ಪಠ್ಯದ ಪ್ರಕಾರ ''ಬಡತನದಲ್ಲಿದ್ದವನೊಬ್ಬನು ತನ್ನ ತಂಗಿಯನ್ನು ತೌರಿಗೆ ಕರೆದೊಯ್ಯುತ್ತಿದ್ದಾಗ ಆಕೆಯ ಮೈಮೇಲಿನ ಒಡವೆಗಳನ್ನು ನೋಡಿ ಅವನಲ್ಲಿ ದುರಾಸೆ ಉಂಟಾಯಿತು. ಬುದ್ಧಿ ವಿಕಾರವಾಯಿತು. ಒಡವೆಯನ್ನು ಅಪಹರಿಸುವ ದುರಾಕಾಂಕ್ಷೆಯಿಂದ ಕೂಡಿದ ಆತನು ಮಾರ್ಗ ಮಧ್ಯದಲ್ಲಿ ಅವಳನ್ನು ಕೊಲ್ಲಬೇಕೆಂದು ಕಲ್ಲೊಂದನ್ನು ಎತ್ತಿದನು. ಆಗ ಅದರ ಕೆಳಗಿದ್ದ ಸರ್ಪವು ಅವನನ್ನು ಕಚ್ಚಿಕೊಂದಿತು. ತಂಗಿಯು ನಾಗನನ್ನು

ವಿಧವಿಧವಾಗಿ ಪ್ರಾರ್ಥಿಸಿಕೊಂಡು ಅಣ್ಣನನ್ನು ಬದುಕಿಸಿಕೊಡಬೇಕೆಂದು ಸರ್ಪದಲ್ಲಿ ಪ್ರಾರ್ಥಿಸಿಕೊಂಡಳು. ಅವಳ ಅಪೇಕ್ಷೆಯಂತೆ ಸತ್ತಿರುವ ಅಣ್ಣನನ್ನು ಸರ್ಪವು ಬದುಕಿಸಿತು. ಇದು ಪಂಚಮಿಯ ದಿನ ನಡೆದ ಕಥೆಯಾದುದರಿಂದ ಈ ದಿನವನ್ನು ಮುಂದೆ ಹಬ್ಬದ ದಿನವಾಗಿ 'ನಾಗರ ಪಂಚಮಿ' ಎಂದು ಆಚರಿಸಿಕೊಂಡು ಬರಲಾಯಿತೆ"ಂದು ಜನಪದ ಕತೆ ಪ್ರಚಲಿತದಲ್ಲಿದೆ.

ಪ್ರಚಲಿತದಲ್ಲಿರುವ ಇನ್ನೊಂದು ಜನಪದ ಕತೆಯ ಪ್ರಕಾರ "ಪಂಚಮಿಯ ದಿನ ತಂಗಿಯೊಬ್ಬಳು ಪೂಜೆಗಾಗಿ ಕೇದಗೆ ಹೂವು ತರಲು ತನ್ನ ಅಣ್ಣನಿಗೆ ಹೇಳಿದಳು. ಹೂವು ತರಲು ಹೋದ ಅಣ್ಣನಿಗೆ ಹಾವು ಕಚ್ಚಿ ಆತ ಮೃತ ಪಟ್ಟ. ಆಗ ತಂಗಿ ಅಲ್ಲಿಯೇ ಇದ್ದ ಬಣ್ಣ ಬಣ್ಣದ ಮಣ್ಣು ತಂದು ನಾಗದೇವನ ರಂಗವಲ್ಲಿ ರಚಿಸಿ ಭಕ್ತಿಯಿಂದ ಬೇಡಿಕೊಂಡಾಗ ಅಣ್ಣ ಎದ್ದು ಕುಳಿತನಂತೆ ಅಂದಿನಿಂದ ಈ ನಾಗಪಂಚಮಿ ಅಣ್ಣ-ತಂಗಿಯರ ಹಬ್ಬವಾಯಿತು" ಎಂಬ ಜನಪದ ನಂಬಿಕೆಯು ರೂಢಿಯಲ್ಲಿದೆ.

ಜನಪದ ಕಥೆಗಳ ಹಿಂದಿರುವ ಆಶಯವನ್ನು ಗಮನಿಸುವಾಗ ನಾಗರ ಪಂಚಮಿಯು ಅಣ್ಣ-ತಂಗಿಯರಿಗೆ ಸಂಬಂಧಿಸಿದ ಹಬ್ಬವಾಗಿ ನಾಡಿನಾದ್ಯಂತ ಆಚರಣೆಗೆ ಬಂದಿತೆನ್ನುವುದು ಕಂಡುಬರುತ್ತದೆ. ವಿಶೇಷವಾಗಿ ತಂಗಿ ಅಣ್ಣನ ಮನೆಗೆ ಅಥವಾ ತೌರಿಗೆ ಹೋಗುವ ಸಂಪ್ರದಾಯ ರೂಢಿಯಲ್ಲಿದೆ. ನಾಗಪಂಚಮಿಯನ್ನು ಪ್ರಾದೇಶಿಕವಾಗಿ ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತದೆ. ಕೆಲವೆಡೆ ನಾಗನ ಪ್ರತಿಮೆಗಳಿಗೆ ಹಾಲೆರೆದರೆ, ಕೆಲವು ಪ್ರದೇಶಗಳಲ್ಲಿ ಹುತ್ತಕ್ಕೆ ಹಾಲೆರೆಯುತ್ತಾರೆ. ನಾಗನನ್ನು ಪೂಜಿಸಿದ ಸಹೋದರಿಯರು, ನಾಗಪ್ಪನ ಮಾಲೆ ಹಾಕಿ ಪೂಜಿಸಿದ ದಾರವನ್ನು ಸಹೋದರರ ಕೈಗಳಿಗೆ ಕಟ್ಟುತ್ತಾರೆ, ಸಹೋದರರ ಬೆನ್ನ ಮೇಲೆ ನಾಗನನ್ನು ಚಿತ್ರಿಸಿ ಪೂಜಿಸುವ ಪದ್ಧತಿ ದಕ್ಷಿಣ ಕರ್ನಾಟಕದಲ್ಲಿದೆ. ಈ ಮೂಲಕ ನಾಗದೇವ ತನ್ನ ಸಹೋದರರನ್ನು ರಕ್ಷಿಸುವನೆಂಬ ನಂಬಿಕೆಯಿದೆ. ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಕೆಲವೆಡೆ ಜೀವಂತನಾಗಗಳಿಗೆ ಹಾಲು ಕುಡಿಸುವ ಸಂಪ್ರದಾಯ ಪಂಚಮಿಯಂದು ನಡೆಯುತ್ತದೆ.

ನಾಗರ ಪಂಚಮಿಯು ಹೆಣ್ಣು ಮಕ್ಕಳ ಹಬ್ಬ ಎಂದು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಪ್ರಚಲಿತದಲ್ಲಿದೆ. ಅಂದು ಜೋಕಾಲಿ ಕಟ್ಟಿ ಗೆಳತಿಯರೆಲ್ಲ ಸೇರಿಕೊಂಡು ಒಬ್ಬರನ್ನೊಬ್ಬರು ತೂಗುತ್ತ ಉಯ್ಯಾಲೆ ಆಡುವ ದೃಶ್ಯ ಉತ್ತರ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತದೆ. ಸುಮಂಗಲೆಯರೆಲ್ಲ ಎಣ್ಣೆ ನೀರಿನಲ್ಲಿ ಮಿಂದು, ಹೊಸ ಉಡುಗೆ ತೊಟ್ಟು, ಗುಂಪು ಗುಂಪಾಗಿ ಹೋಗಿ ಹುತ್ತದ ರೂಪದಲ್ಲಿರುವ ನಾಗದೇವರಿಗೆ ಹಾಲೆರೆದು ಪೂಜಿಸಿ ನೈವೇದ್ಯ ಅರ್ಪಿಸುತ್ತಾರೆ. ಬಣ್ಣ ಬಣ್ಣದ ರಂಗೋಲಿ ಪ್ರತಿ ಮನೆಗಳಲ್ಲಿ ರಚಿಸಲಾಗುತ್ತದೆ. ತಮ್ಮ ಮನೆಯ ಅಂಗಳದಲ್ಲಿ ರಂಗೋಲಿಯ ಮೂಲಕ ನಾಗದೇವತೆಯನ್ನು ಆಹ್ವಾನಿಸುವ ಸಂಪ್ರದಾಯ ಈ ಪ್ರದೇಶದಲ್ಲಿ ಕಂಡುಬರುತ್ತದೆ.

ಪ್ರಾದೇಶಿಕವಾಗಿ ನಾಗರ ಪಂಚಮಿಯನ್ನು ಈ ರೀತಿ ವಿಭಿನ್ನರೀತಿಯಲ್ಲಿ ಆಚರಿಸುತ್ತಿದ್ದರೂ ತುಳು ಸಂಸ್ಕೃತಿಯಲ್ಲಿ ಅಂದು ವೈದಿಕರಿಂದ 'ತನು' ಸೇವೆಯೊಂದೇ ವಿಶೇಷವಾಗಿ ಕಂಡುಬರುತ್ತದೆ.

೬.೬. ಕರಾವಳಿ ಕರ್ನಾಟಕದ ದಲಿತರ ನಾಗಾರಾಧನೆ

ಕರಾವಳಿ ಕರ್ನಾಟಕದ ತುಳುನಾಡು ಮತ್ತು ಕನ್ನಡ ಪ್ರದೇಶದಲ್ಲಿ ಸ್ಥಳೀಯ ಸಾಮಾಜಿಕವಾಗಿ ಹಿಂದುಳಿದಿರುವ ಕೆಲವು ವರ್ಗಗಳು ನಾಗಾರಾಧನೆಯನ್ನು ತಮ್ಮದೇ ಆದ ರೀತಿಯಲ್ಲಿ ಆಚರಿಸಿಕೊಂಡು ಬರುತ್ತಿರುವುದನ್ನು ಗಮನಿಸಬಹುದು. ಆದಿಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಆಚರಿಸುವ ಈ ಸಂಪ್ರದಾಯವು ಸಂಪೂರ್ಣವಾಗಿ ಅವೈದಿಕವಾಗಿದೆ. ಕರಾವಳಿಯಾದ್ಯಂತ ನಾಗಾರಾಧನೆ ಎಂಬ ಆರಾಧನ ಪ್ರಕಾರವು ವೈದಿಕ ಸಂಸ್ಕೃತಿಯ ಪ್ರಭಾವದಿಂದಾಗಿ ವೈಭವೀಕರಣಗೊಳ್ಳುತ್ತಿದೆ. ಆದರೆ ಯಾವುದೇ ರೀತಿಯ ವೈಭವ, ಆಡಂಬರಗಳಿಲ್ಲದೆ ಕೆಲವು ಹಿಂದುಳಿದ ವರ್ಗಗಳು ತಮ್ಮ ಸಂಪ್ರದಾಯಕ್ಕನುಸಾರವಾಗಿ ಆಚರಿಸಿಕೊಂಡು ಬರುತ್ತಿವೆ. ಇವರ ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಕಟ್ಟಳೆಗಳೇ ಪ್ರಧಾನ, ಇಲ್ಲಿ ನಡೆಯುವ ಎಲ್ಲ ಆಚರಣೆಗಳು ಪರಂಪರೆಯಿಂದ ಅನೂಚಾನವಾಗಿ ಸಾಂಪ್ರದಾಯಿಕ ರೀತಿಯಲ್ಲಿ ಮುಂದುವರಿದುಕೊಂಡು ಬರುತ್ತಿವೆ. ಯಾವುದೇ ರೀತಿಯ ಮಂತ್ರೋಚ್ಚಾರಗಳಿಲ್ಲದೆ ಎಲ್ಲ ಆಚಾರಗಳು ಆದಿಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಡೆದು ಬರುತ್ತಿದೆ. ನಾಗನಿಗೆ ಅತಿಯಾದ ಮಡಿ ಮೈಲಿಗೆ ಬೇಕು ಎಂದು ಪ್ರಚಾರ ಮಾಡುವ ವೈದಿಕ ಸಂಸ್ಕೃತಿಯು ಇತ್ತ ಗಮನಿಸಬೇಕಾದ ಅವಶ್ಯಕತೆಯಿದೆ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ದಲಿತರು ಆರಾಧಿಸಿಕೊಂಡು ಬರುತ್ತಿರುವ ಕೆಲವು ಪ್ರಕಾರಗಳನ್ನು ವಿಶ್ಲೇಷಿಸಲಾಗಿದೆ. ಕ್ಷೇತ್ರಕಾರ್ಯದ ಮಾಹಿತಿಯೊಂದಿಗೆ ವಿದ್ವಾಂಸರುಗಳು ಸಂಗ್ರಹಿಸಿರುವ ಗ್ರಂಥಸ್ಥ ಆಕರವನ್ನು ಕೂಡ ಬಳಸಿಕೊಳ್ಳಲಾಗಿದೆ. ಅಧ್ಯಯನದ ಪ್ರಾರಂಭದಿಂದಲೇ ಅಧ್ಯಯನಕ್ಕೆ ಒಂದು ಸೀಮಿತ ವ್ಯಾಪ್ತಿಯನ್ನು ಒಳಪಡಿಸಿಕೊಂಡಿರುವುದರಿಂದ ಅವಶ್ಯಕವೆನಿಸುವಷ್ಟು ಮಾಹಿತಿಯನ್ನು ಸಂಗ್ರಹಿಸಿ ಉಳಿದಂತೆ ಗ್ರಂಥಸ್ಥ ಆಕರವನ್ನು ಬಳಸಿಕೊಳ್ಳಲಾಗಿದೆ.

ಕರಾವಳಿಯ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ದಲಿತರು ವಿವಿಧ ಸ್ವರೂಪಗಳಲ್ಲಿ ನಾಗಾರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದರಲ್ಲಿ ಕಾಡ್ಯನ ಆರಾಧನೆ, ನಾಗನ 'ಹುಟ್ಟು' ಸ್ವಾಮಿ ಆರಾಧನೆ ಮತ್ತು ಪಾಣರಾಟ. ಈ ಕೆಲವು ವಿಚಾರಗಳ ಕುರಿತು ಪ್ರಾಸಂಗಿಕವಾಗಿ ವಿಶ್ಲೇಷಿಸಲಾಗುವುದು.

೬.೬.೧. ಕಾಡ್ಯ ಆರಾಧನೆ

ಕರಾವಳಿಯ ಕನ್ನಡ ಹಾಗೂ ತುಳು ಪ್ರದೇಶಗಳಲ್ಲಿ ಮೇರ ಹರಿಜನರಿಂದ ಆರಾಧಿಸಲ್ಪಡುವ ನಾಗಾರಾಧನೆಯ ಒಂದು ಪ್ರಕಾರ. ಈ ಕುರಿತು ಪ್ರೊ. ಎ.ವಿ. ನಾವಡ ಮತ್ತು ಗಾಯತ್ರಿನಾವಡ ಅವರು ವಿಶೇಷ ಅಧ್ಯಯನ ನಡೆಸಿ 'ಕಾಡ್ಯನಾಟ ಪಠ್ಯ ಮತ್ತು ಪ್ರದರ್ಶನ' ಎಂಬ ಗ್ರಂಥವನ್ನು ಕೂಡಾ ಪ್ರಕಟಿಸಿರುತ್ತಾರೆ. ಉಡುಪಿ ಜಿಲ್ಲೆಯ ಉತ್ತರಕ್ಕೆ ಈ ಆಚರಣೆ ಹೆಚ್ಚಾಗಿ ಕಂಡು ಬರುತ್ತದೆ. ಕಾರ್ಕಳ ತಾಲೂಕಿನ ಉತ್ತರಕ್ಕಿರುವ ಪ್ರದೇಶಗಳು ಕುಂದಾಪುರ ತಾಲೂಕು ಮೊದಲಾದೆಡೆಗಳಲ್ಲಿ ಕಾಡ್ಯನನ್ನು ಪೂಜಿಸಲಾಗುತ್ತದೆ. ವಿಶೇಷವಾಗಿ ಕಾಡ್ಯನ ಆರಾಧನೆ ನಡೆಸುವವರು ಹರಿಜನರು. ಕಾಡ್ಯನ ಮನೆಗಳು ಊರಿನ ಹೊರಗಿದ್ದು ಕಾಡಿನಲ್ಲಿ ಸಣ್ಣ ಗುಡಿಗಳಲ್ಲಿ ಆರಾಧಿಸಲಾಗುತ್ತದೆ. ಗುಡಿಯೆಂದರೆ ಗೋಡೆಗಳಿಲ್ಲದ, ಚಚ್ಚೌಕಾಕಾರದ ಪ್ರಕಾರದ ಮೇಲೆ ನಾಲ್ಕು ಕಂಬಗಳನ್ನು ನೆಟ್ಟು, ಮೇಲೆ ಹುಲ್ಲಿನ ಅಥವಾ

ಹೆಂಚಿನ ಮಾಡನ್ನು ನಿರ್ಮಿಸಲಾಗುತ್ತದೆ. ಇದನ್ನು 'ಕಾಡ್ಯನ ಮನೆ' ಅಥವಾ ತುಳು ಭಾಷೆಯಲ್ಲಿ 'ಕಾಡ್ಯ ಕೊಟ್ಯ' ಎಂದು ಕರೆಯಲಾಗುತ್ತದೆ. ಕಾಡ್ಯನ ಆರಾಧನೆಯನ್ನು ಹರಿಜನ ವರ್ಗದವರು ನೆರವೇರಿಸಿದರೂ ಊರಿನ ಬ್ರಾಹ್ಮಣೇತರರು ಇದರಲ್ಲಿ ಭಾಗಿಗಳಾಗುತ್ತಾರೆ. ಇದರೊಂದಿಗೆ ಕಾಡ್ಯ ಊರಿಗೆ ಸಂಬಂಧಿಸಿದ ದೈವವಾಗಿರುವುದು. ಕಂಡು ಬರುತ್ತದೆ. ವಿಶೇಷ ದಿನಗಳಲ್ಲಿ ಇಲ್ಲಿ ನಡೆಯುವ ಆಚರಣೆಗಳಲ್ಲಿ ಊರಿನ ಜನತೆ ಭಾಗವಹಿಸುವುದು ತಿಳಿದು ಬಂದಿದೆ. ಉತ್ತಮ ಬೆಳೆ, ಜಾನುವಾರಗಳು, ಮಕ್ಕಳು ಇತ್ಯಾದಿಗಳಿಗೆ ಬರುವ ರೋಗ ರುಜಿನಗಳ ಸಂದರ್ಭಗಳಲ್ಲಿ ಕಾಡ್ಯನಿಗೆ ಹರಕೆ ಹೇಳಿಕೊಂಡು ಪೂಜಿಸುತ್ತಿರುವುದು ವಾಡಿಕೆಯಾಗಿದೆ.

ಹಿನ್ನೆಲೆ

ಪ್ರಾರಂಭದಲ್ಲಿ 'ಕಾಡ್ಯ' ಎಂದರೆ ಏನು? ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. 'ಕಾಡ್ಯ' ಎನ್ನುವ ಪದವು 'ಕಾಳಿಂಗ' ಎನ್ನುವ ಪದಕ್ಕೆ ಸಂವಾದಿಯಾದುದು ಎಂದು, ಕಾಡಿನಲ್ಲಿ ವಾಸಮಾಡುವವನು ಎಂದು ಅಭಿಪ್ರಾಯವಿದೆ. ಈ ಕುರಿತು 'ಕಾಡಿಂಗ' ಪದ 'ಕಾಳಿಂಗ' ಎಂದು ರೂಪಾಂತರ ಹೊಂದುವುದು ಭಾಷಿಕ ಬದಲಾವಣೆಯ ದೃಷ್ಟಿಯಿಂದ ಸಂಭವನೀಯವಾದುದು. ಕಾಡಿಂಗ 'ಕಾಡಿಯ' ಆಗುವುದು ಭಾಷಾ ವ್ಯತ್ಯಾಸ ದೃಷ್ಟಿಯಿಂದ ಸ್ವೀಕರಣೀಯವಾದುದು. ಕಾಡಿನಲ್ಲಿ ವಾಸಮಾಡುವವನು ಎನ್ನುವ ಅರ್ಥದಲ್ಲಿ 'ಕಾಡಿಗ' ಎನ್ನುವ ಪದ ಪ್ರಯೋಗ ಸಾಧ್ಯ. ತುಳು ಪ್ರದೇಶಗಳಲ್ಲಿ ಕಾಡುಗಳಲ್ಲಿ ವಾಸಮಾಡುತ್ತಿದ್ದ ಕೊರಗ ಜನಾಂಗದವರನ್ನು 'ಕಾಡ್‌ದಕಲ್', 'ಕಾಡಿನವರು' ಎಂದು ಸಂಭೋದಿಸುತ್ತಿದ್ದರು. ಸಾಮಾನ್ಯವಾಗಿ ಜನವಸತಿಯಿಂದ ದೂರ ಕಾಡಿನ ಒಳಗೆ ಕಾಡ್ಯನ ಮನೆಗಳು ಇರುತ್ತಿದ್ದವು ಎನ್ನುವ ಮಾಹಿತಿಯನ್ನು ಗಮನಿಸಿದರೆ ಇಂತಹ ಕಾಡುಗಳಲ್ಲಿ ವಾಸಿಸುತ್ತಿದ್ದ ಮೇರರು ಕಾಡಿನ ದೇವತಾಯಾಗಿ ಈ 'ಕಾಡಿಗ' ನನ್ನು ಆರಾಧಿಸುತ್ತಿದ್ದಿರಬಹುದು"[7] ಎಂಬುದು ವಿದ್ವಾಂಸರ ಅಭಿಮತ. ಈ ವಿಚಾರ ಸಮರ್ಥನೀಯವಲ್ಲ. ಕಾಡ್ಯನ ಆರಾಧನೆ ಮತ್ತು ಕಾಡ್ಯ ಮನೆಯ ಪರಿಸರವನ್ನು ಗಮನಿಸಿದರೆ ಇಲ್ಲಿ ವಿಶೇಷವಾಗಿ ಮಣ್ಣಿನ ದೊಡ್ಡ ಕಲಶಗಳನ್ನು ಬಳಸಲಾಗುತ್ತದೆ. ಈ ಮಣ್ಣಿನ ಕಲಶಗಳನ್ನು ತುಳುವಿನಲ್ಲಿ 'ಕದ್ಯ' ಎಂದು ಕರೆಯಲಾಗುತ್ತದೆ. ಈ ಕದ್ಯಗಳ ಮೂಲಕ ಕಾಡ್ಯನನ್ನು ಆರಾಧಿಸುವುದರಿಂದ 'ಕಾಡ್ಯ' ಎನ್ನುವ ಪದ ಬಳಕೆಗೆ ಬಂದಿರುವುದು ಕಂಡುಬರುತ್ತದೆ. ಹರಕೆಯ ರೂಪದಲ್ಲಿ ಕದ್ಯ ಒಪ್ಪಿಸುವ ಸಂಪ್ರದಾಯ ಪ್ರಚಲಿತದಲ್ಲಿದೆ. ಅದೊಂದು ಕಾಡ್ಯನಿಗೆ ಒಪ್ಪಿಸುವ ವಿಶೇಷ ಸೇವೆಯಾಗಿದೆ. ಇಲ್ಲಿ ವಿಶೇಷ ಆಚರಣೆಗಳಾದ ಕದಿರು ಕಟ್ಟುವುದು ಇತ್ಯಾದಿಗಳು ನಡೆಯುವುದು ಈ ಕದ್ಯಕ್ಕೆ. ಅಷ್ಟೇಅಲ್ಲದೆ ಕಾಡ್ಯನನ್ನು ಹರಿಜನರು ತಮ್ಮ ಮನೆಗಳಲ್ಲಿಯೂ ಕದ್ಯದ ರೂಪದಲ್ಲಿ ಆರಾಧಿಸುವ ಸಂಪ್ರದಾಯವಿದೆ. ಆದ್ದರಿಂದ ಕದ್ಯದಲ್ಲಿ ಅಥವಾ ಮಣ್ಣಿನ ಕಲಶದ ರೂಪದಲ್ಲಿ ನಾಗನ ಪ್ರತಿರೂಪವಾದ ಕಾಡ್ಯನನ್ನು ಆರ್ವಿಭವಿಸಿ ಪೂಜಿಸುವುದರಿಂದ ಕಾಡ್ಯ ಎನ್ನುವ ಪದ ಬಳಕೆಗೆ ಬಂದಿರುವುದು ತಿಳಿದುಬರುತ್ತದೆ. ಊರಿಗೆ 'ಕಾಳಿಂಗ' ಸರ್ಪ ಬಂದಾಗ ಸಮೀಪದ ಕಾಡ್ಯ ಮನೆಯಲ್ಲಿ ಊರವರು ಪ್ರಾರ್ಥಿಸಿಕೊಳ್ಳುವ ಸಂಪ್ರದಾಯವಿದೆ. ಕಾಡ್ಯ ಆರಾಧನೆಯ ಕುರಿತಾದ ಅಭಿಪ್ರಾಯಗಳು ಏನೇ ಇದ್ದರೂ ಇಲ್ಲಿ ವಿಶೇಷವಾಗಿ ಕದ್ಯನ ರೂಪದಲ್ಲಿ ನಾಗಾರಾಧನೆ ನಡೆಯುತ್ತಿರುವುದು ಗಮನಿಸಬೇಕಾದ ವಿಚಾರ.

ಕಾಡ್ಯನ ಮನೆ

ಪ್ರಾರಂಭದಲ್ಲಿಯೇ ಸೂಚಿಸಿರುವಂತೆ ಕಾಡ್ಯನ ಮನೆ ಜನವಸತಿಯಿಂದ ದೂರ ಕಾಡಿನಲ್ಲಿರುವ ಒಂದು ದೈವ ಸಂಕೀರ್ಣ. ಕಾಡ್ಯನೊಂದಿಗೆ ಇಲ್ಲಿ ಹಲವಾರು ದೈವಗಳನ್ನು ಆರಾಧಿಸಲಾಗುತ್ತದೆ. ಕಾಡ್ಯನ ಮನೆಯಲ್ಲಿ ಸಾಮಾನ್ಯವಾಗಿ ಹುತ್ತವಿದ್ದು, ಅದಕ್ಕೆ ತಾಗಿಕೊಂಡು ನಾಗನ ಪ್ರತಿಮೆಗಳು, ನಡುವೆ ಶಿಲೆಯ ಕಂಬ ಮತ್ತು ಸುತ್ತಲೂ ನಾನಾ ರೀತಿಯ ಸರ್ಪನ ಹೆಡೆಯಿರುವ ಮಣ್ಣಿನ ಕಲಶಗಳು ಇರುತ್ತವೆ. ಹೊರ ಆವರಣದಲ್ಲಿ ಇತರ ಪರಿವಾರ ದೇವತೆಗಳಿರುತ್ತವೆ. ಪ್ರಧಾನವಾಗಿ ಸ್ವಾಮಿ, ಬ್ರಹ್ಮ, ಯಕ್ಷಿ, ಉಮ್ಮಳ್ತಿ, ಬೊಬ್ಬರ್ಯ, ಜಟ್ಟಿಗ, ಮಂತ್ರಿಗಣ, ಹಾಯ್ಗುಳಿ, ಕಾನ್ ಪಂಜುರ್ಲಿ, ಮೊದಲಾದ ಪರಿವಾರ ದೇವತೆಗಳಿರುತ್ತವೆ. ಪರಿವಾರ ದೇವತೆಗಳನ್ನು ಪ್ರತ್ಯೇಕವಾಗಿ ರೂಪವಿಲ್ಲದ ಕಲ್ಲುಗಳಲ್ಲಿ ಆರಾಧಿಸಲಾಗುತ್ತದೆ. ಬ್ರಹ್ಮನನ್ನು ಬ್ರಹ್ಮ ಕಂಭ ಎಂಬ ಶಿಲೆಯ ಕಂಭದಲ್ಲಿ ಪೂಜಿಸಲಾಗುತ್ತದೆ. ಒಳಗಿರುವ ಕಾಡ್ಯನಿಗೆ ಹಾಲು ಹಣ್ಣಿನ ನೈವೇದ್ಯ ನಡೆಯುತ್ತದೆ. ಹೊರಗಿರುವ ಹಾಯ್ಗುಳಿ, ಕಾನ್ ಪಂಜುರ್ಲಿ ಮೊದಲಾದ ದೈವಗಳಿಗೆ, ಕೋಳಿಯನ್ನು ರಕ್ತಾಹುತಿ ನೀಡಲಾಗುತ್ತದೆ. ಕಾಡ್ಯನ ಮನೆಯಲ್ಲಿ ಎರಡು ವಿಧವೆಂದು ಪ್ರೊ. ನಾವಡ, ದಂಪತಿಗಳು ಗುರುತಿಸಿದ್ದಾರೆ. ''ಕಾಡ್ಯನ ಮನೆಗಳಲ್ಲಿ ಎರಡು ವಿಧ ಆಟದ ಕಾಡ್ಯನ ಮನೆ ಮತ್ತು ಮುಂಡು ಕಾಡ್ಯನ ಮನೆ, ಆಟದ ಕಾಡ್ಯನ ಮನೆಯ ಕಾಡ್ಯ ಹೆಣ್ಣು ಕಾಡ್ಯನಾಗಿದ್ದು ಅಲ್ಲಿ ಮಾತ್ರ 'ಆಟ' ಜರಗುವುದಾಗಿ'' ವಕ್ತೃಗಳ ಮಾತುಗಳನ್ನು ಉಲ್ಲೇಖಿಸಿ ವಿವರಿಸಿದ್ದಾರೆ.[10]

ಮುಂಡು ಕಾಡ್ಯನನ್ನು ಎರಡು ರೀತಿಯಲ್ಲಿ ಆರಾಧಿಸುತ್ತಿರುವುದು ಕಂಡು ಬಂದಿದೆ. ಮೊದಲನೆಯದಾಗಿ ಈಗಾಗಲೇ ಸೂಚಿಸಿರುವ, ಗ್ರಾಮ ಮಟ್ಟದಲ್ಲಿ ಆರಾಧಿಸುವ ಸಂಪ್ರದಾಯವಾದರೆ, ಎರಡನೆಯದಾಗಿ ಕೌಟುಂಬಿಕವಾಗಿ ಹರಿಜನರು ತಮ್ಮ ಕುಟುಂಬದ ಹಿರಿಯ ಮನೆಗಳಲ್ಲಿ ದೊಡ್ಡ ಗಾತ್ರದ 'ಕಲಶ' ಅಥವಾ ಕಡ್ಯಗಳ ಮೂಲಕ ಆರಾಧಿಸಿಕೊಂಡು ಬರುತ್ತಿರುವುದು ಕಂಡುಬಂದಿದೆ. ವರ್ಷಕ್ಕೊಮ್ಮೆ 'ಹೊಸತು' ಮಾಡುವಾಗ ಅಥವಾ ಮನೆಯಲ್ಲಿ ಕದಿರು ಕಟ್ಟುವಾಗ ಆ ಕಲಶದಲ್ಲಿ ಹೊಸ ಬತ್ತವನ್ನು ತುಂಬಿಸಲಾಗುತ್ತದೆ. ಈಗಾಗಲೇ ತುಂಬಿಸಿರುವ ಬತ್ತವನ್ನು ತೆಗೆದು ಕುಟುಂಬಕರೆಲ್ಲ ಹಂಚಿಕೊಳ್ಳುತ್ತಾರೆ. ನಂತರ ಮುಂದಿನ ವರ್ಷ ಹಳೆಯ ಬತ್ತವನ್ನು ತೆಗೆದು ಪುನಃ ಹೊಸ ಬತ್ತವನ್ನು ತುಂಬಿಸಲಾಗುತ್ತದೆ. ಈ ಕಲಶವನ್ನು ತುಂಬ ಪಾವಿತ್ರ್ಯತೆಯಿಂದ ಕಾಪಾಡಿಕೊಂಡು ಬರಲಾಗುತ್ತದೆ. ಈ ರೀತಿಯಾಗಿ ಆರಾಧಿಸಿಕೊಂಡು ಬರುತ್ತಿರುವ ಕಾಡ್ಯನಿಗೆ ಒಬ್ಬ ವ್ಯಕ್ತಿ ಮಾತ್ರ ಅರ್ಚಕನಾಗಿ ಪೂಜೆ ಸಲ್ಲಿಸುವ ಅಧಿಕಾರವನ್ನು ಹೊಂದಿದವನಾಗಿದ್ದಾನೆ. ಅವನನ್ನು ಸ್ಥಳೀಯವಾಗಿ 'ಬೈದ್ಯ' ಎಂದು ಕರೆಯಲಾಗುತ್ತದೆ.

ಕಾಡ್ಯನಾಗನ ಚರಿತ್ರೆ

ಕಾಡ್ಯ ನಾಗನಿಗೆ ಸಂಬಂಧಿಸಿದ ಜನಪದ ಕಥೆಯೊಂದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ. ಇದರಿಂದ ಕಾಡ್ಯನೊಂದಿಗೆ ಹರಿಜನರ ಸಂಬಂಧವೇನು, ಕಾಡ್ಯ ಯಾವ ಕಾರಣದಿಂದ ಹರಿಜನರಿಗೆ ಕುಲದೈವವಾಯಿತು ಎನ್ನುವುದು ಕೂಡ ವೇದ್ಯವಾಗುತ್ತದೆ. ಇದಕ್ಕೆ ಸಂಬಂಧಿಸಿದ ಆ ಕಥೆ ಈ ರೀತಿ ಇದೆ.

ಶ್ರೀ ಕಾಡ್ಯ ನಾಗದೇವತೆಯು ದಕ್ಷಿಣ ಕಾಶಿಯಾದ ಕಳಸ ಕಾಂಡ್ಯದಲ್ಲಿ ಹುಟ್ಟಿ 'ಕಳಸ ಕಾಡ್ಯ'ನಾಗಿ ಪರಶುರಾಮ ಸೃಷ್ಟಿಯತ್ತ ದೃಷ್ಟಿ ಹಾಯಿಸುತ್ತದೆ. ಅಂತೆಯೇ ಅದು ಭದ್ರಾ ನದಿಯಲ್ಲಿ ಇಳಿದು ಸೌಪರ್ಣಿಕದಲ್ಲಿ ದಡಸೇರಿ

ಕೊಲ್ಲೂರು ಸಮೀಪ ಕೊಡಚಾದ್ರಿ ತಪ್ಪಲಿನಲ್ಲಿ ವಾಸವಾಯಿತು.

ಅತ್ತ ಬೆಳ್ಳಿ ಬೆಟ್ಟದಲ್ಲಿ ಶಿವ ಪಾರ್ವತಿಯು ನರ್ತಿಸುತ್ತಿರುವ ಸಂದರ್ಭ, ಪಾರ್ವತಿದೇವಿಯ ಕಾಲಿಗೆ ಹುಲ್ಲೊಂದು ಕಸವಾಗಿ ಸಿಕ್ಕಿ, ಅದನ್ನು ಕೈಯಲ್ಲಿ ಹಿಡಿದಾಗ ಅದು ಹೆಣ್ಣಾಗಿ ಜನ್ಮ ತಾಳಿತು. ಆ ಹೆಣ್ಣಿಗೆ ದೇವಿಯು ಜ್ಞಾನವನ್ನು ನೀಡಲಾಗಿ ಆ ಹೆಣ್ಣು "ಮುಂದೇನು?" ಎಂದು ಕೇಳಿತು. ದೇವಿಯು "ನೀನು ಭೂಲೋಕಕ್ಕೆ ಹೋಗು, ಅಲ್ಲಿ ನೀನು ನನ್ನ ದೇಗುಲ ಎಲ್ಲಿದೆಯೋ ಅಲ್ಲಿ ಪ್ರತಿದಿನ ಹಾಗೂ ಊರ ಉತ್ಸವ ನಡೆಯುವಾಗ ನನ್ನ ಮುಂದಿದ್ದು, ನನ್ನ ಸ್ವಚ್ಛತೆಯನ್ನು ಕಾಪಾಡು, ಆಗ ನಿನಗೆ ಅಲ್ಲಿನ ಊರ ಉಂಬಳಿ ಸಿಗುತ್ತದೆ ಎಂದು ಹರಸುವಳು. ನಂತರ "ತಾಯಿ ಪುನಃ ನಿನ್ನ ದರ್ಶನ ಯಾವಾಗ" ಎಂದು ಆ ಹೆಣ್ಣು ಕೇಳಿದಾಗ, "ನೀನು ಮಕ್ಕಳಿಗೆ ತಾಯಿ ಆದಾಗ" ದೇವತೆಯಾಗಿ ನಾನು ಕಾಣಿಸಿಕೊಳ್ಳುತ್ತೇನೆ. ನಿನ್ನಿಂದಲೇ ನಿನ್ನ ಸಂತತಿ ಅಭಿವೃದ್ಧಿ ಹೊಂದುತ್ತದೆ ಎಂದು ಅಭಯವನ್ನು ನೀಡುವಳು. ಅಷ್ಟೇ ಅಲ್ಲದೆ ನನ್ನ ಪಾದ ಸ್ಪರ್ಶದಿಂದ ಹುಟ್ಟಿದ ನಿನಗೆ ಪುನಃ ನನ್ನ ಪಾದಸ್ಪರ್ಶ ಆದಾಗ ನನ್ನ ಬಳಿ ಸೇರುತ್ತಿ. ನಾನು ಆರಾಧನಾ ದೇವತೆಯಾಗಿ, ಕುಲದೇವತೆಯಾಗಿ ನಿನ್ನ ಜೊತೆ ಇರುತ್ತೇನೆ ಎಂಬ ವರವನ್ನು ಆಕೆಗೆ ಕೊಡುತ್ತಾಳೆ.

ಮಾನವ ಜನ್ಮ ಪಡೆದ ಆ ಹೆಣ್ಣು ದೇವಲೋಕದಿಂದ ಭೂಲೋಕಕ್ಕೇ ಬರುತ್ತಾಳೆ. ಆ ಸಂದರ್ಭದಲ್ಲಿ ಕೊಡಚಾದ್ರಿ ಎನ್ನುವಲ್ಲಿ ಆಕೆಗೆ ಮಾನವ ಸಹಜವಾದ ಕಷ್ಟಗಳು ಬಂದೇ ಬರುತ್ತವೆ. ಆ ದಾರಿಯಲ್ಲಿ 'ಬ್ರಹ್ಮಾಸುರ' ನೆಂಬ ರಾಕ್ಷಸ ಅವಳನ್ನು ತಿನ್ನುವುದಕ್ಕಾಗಿ ಬರುತ್ತಾನೆ. ಆಗ ಈ ಮೊದಲೇ ಕೊಡಚಾದ್ರಿಯಲ್ಲಿ ನೆಲೆಯಾಗಿದ್ದ ಶ್ರೀ ಕಾಡ್ಯ ನಾಗದೇವತೆಯು ಆ ಬ್ರಹ್ಮ ರಾಕ್ಷಸನನ್ನು ಹಿಡಿದು ಸುತ್ತಿಕೊಂಡಿತು. ಅದೇ ಹುತ್ತವಾಗಿ ಕಾಡ್ಯ ನಾಗನಿಗೆ ವಾಸ ಸ್ಥಾನವಾಯಿತು. ಹುಟ್ಟಿಸಿದ ದೇವರು ಕಾಪಾಡದೇ ಬಿಡನು ಎಂಬಂತೆ ಆಕೆ ತನಗೆ ಪ್ರಾಪ್ತವಾದ ಘೋರ ಗಂಡಾಂತರದಿಂದ ಪಾರಾಗಿ ಪಾರ್ವತಿ ದೇವಿಯನ್ನು ಸ್ಮರಿಸುತ್ತ ಶ್ರೀ ಕಾಡ್ಯನನ್ನು ಸ್ಮರಿಸುತ್ತ ಮುಂದೆ ಬರುವಾಗ ಆ ಕಾಡಿನ ಬೇಡರ ಕುಲದವರಿಗೆ ಸಿಕ್ಕಳು. ಇಂತಹ ಅಪರೂಪದ ರೂಪವತಿಯಾದ ಆಕೆಯನ್ನು ಕಾಡಿನಲ್ಲಿರಿಸಿಕೊಳ್ಳದೇ ಬೇಡರ ಅಜ್ಜಿಯು ಆಕೆಯನ್ನು ನಾಡವರಿಗೆ ಕೊಟ್ಟು ತಾನು ಹೊನ್ನನ್ನು ಪಡಕೊಳ್ಳುವಳು. ಹೊನ್ನನ್ನು ಕೊಟ್ಟು ಪಡೆಕೊಂಡಿದ್ದರಿಂದ ಆಕೆಗೆ 'ಹೊನ್ನಿ' ಎಂಬ ಅಂಕಿತವೂ ಸೇರಿಕೊಂಡಿತು.

ಆ ಹೊನ್ನಿಯು ನಾಡವರ ಮನೆಯಲ್ಲಿಯೇ ಇದ್ದು, ಪ್ರಾಯ ಪ್ರಬುದ್ಧೆಯಾದ ಸಂದರ್ಭ, ಆಕೆಯ ಜಾತಿ, ಕುಲ, ಗೋತ್ರ ಒಂದೂ ತಿಳಿಯದ ಕಾರಣ ಮದುವೆಯೆಂಬ ಸಂಸಾರಕ್ಕೆ ಅಡ್ಡಿಯಾಗುತ್ತದೆ. ಇನ್ನು ತನಗೆ ಮದುವೆಯೇ ಇಲ್ಲ ಎಂಬ ಪರಿಸ್ಥಿತಿಯಲ್ಲಿ ಚಿಂತೆಗೊಳಗಾಗಿ ವಾಯು ದೇವರನ್ನು ಪ್ರಾರ್ಥಿಸುವಳು, ವಾಯುದೇವರ ಅನುಗ್ರಹದಿಂದ ಆಕೆ ಗರ್ಭವತಿಯಾಗುವಳು, ಮದುವೆಗೆ ಮುಂಚೆಯೇ ಗರ್ಭವತಿಯಾದ ಇವಳನ್ನು ಸಮಾಜ ಹೊರಗೆ ತಳ್ಳುವುದು.

ಅವಳಿಗೆ ಒಂದು ಗುಡಿಸಲನ್ನು ಕಟ್ಟಿಕೊಟ್ಟು ಕೇಳಿದವರಿಗೆ ಅವಳು ತಮ್ಮ ಮನೆಯ ಕೆಲಸದಾಳ್ತಿ ಎಂದರು. ನಿರ್ಗತಿಕಳಾದ ಹೊನ್ನಿಯು ಹೊಟ್ಟೆ ಪಾಡಿಗಾಗಿ ಕಾಡು ಮೇಡನ್ನು ಅಲೆಯುವಳು. ಹಾಗೆಯೇ ಅವಳಿಗೆ ನವಮಾಸ ತುಂಬಿ ಬರಲು ಏಳು ಮಕ್ಕಳಿಗೆ ಜನ್ಮ ನೀಡುತ್ತಾಳೆ.

ಅವಳು ಕಾಳು ಕಡ್ಡಿ ತರಲು ನಾಡವರ ಮನೆಗೆ ಹೊರಟಾಗ ಇದ್ದಕ್ಕಿದ್ದಂತೆ ಮಾಯಕದ ಮಳೆ ಗಾಳಿಂದಾಗಿ ದಾರಿಯ ಮಧ್ಯದ ಹೊಳೆ ತುಂಬಿಕೊಂಡು, ಹೊಳೆ ದಾಟಲು ಆಗದೆ, ಮಕ್ಕಳೊಂದು ದಿಕ್ಕು ತಾನೊಂದು ದಿಕ್ಕು ಆದಳು. ಈ ಪರಿಸ್ಥಿತಿಯಲ್ಲಿ ಅವಳು ಗಂಗೆಯನ್ನು ಪ್ರಾರ್ಥಿಸಿ ''ತಾನು ಪತಿವ್ರತೆ ಹೆಣ್ಣಾದರೆ ಈ ಹೊಳೆ ಬತ್ತಿ ಹೋಗಲಿ'' ಎಂದಳು ಅಂತೆಯೇ ಅದು ಕೇವಲ ಕಾಲ್ತೋಡಾಯಿತು. ಜನ ಬೆರಗಾಗಿ ಇವಳು ಬರಿ ಹೊನ್ನಿಯಲ್ಲ ಮಾಯದ ಹೊನ್ನಿ ಎಂದು ಕೊಂಡರು.

ಒಂದು ದಿನ ಕಾಡಿನಲ್ಲಿ ಒಂದು ಹುತ್ತದ ಬಳಿ ಗಡ್ಡೆ ಗೆಣಸನ್ನು ತೆಗೆಯಲು ಹುತ್ತವನ್ನು ಅಗೆಯುವ ಸಂದರ್ಭ. ನಾಗನ ರೂಪವನ್ನು ಹೋಲುವ ಶಿಲೆಯೊಂದನ್ನು ನೋಡುವಳು. ಆ ಶಿಲೆಯನ್ನು ಕಿತ್ತು ನೋಡಿದಾಗ ಹೊನ್ನು ತುಂಬಿದ ತಂಬಿಗೆಯೂ ಮಣ್ಣಿನ ತಂಬಿಗೆಯೂ ಸಿಕ್ಕಿತು. ಇದನ್ನು ನೋಡಿ ಪರಮಾಶ್ಚರ್ಯದಿಂದ ತನಗೆ ಮೊದಲು ಆಶ್ರಯ ಕೊಟ್ಟ ನಾಡವರ ಮನೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸುವಳು. ನಾಡವರು ಜ್ಯೋತಿಷ್ಯರಲ್ಲಿ ಕೇಳಿದಾಗ, ಆ ಕಳಶ ಸಿಕ್ಕಿದ ಕಡೆಗೆ ಹೋಗುವರು. ಅಲ್ಲಿ ಹೊನ್ನಿಯು ತನಗೆ ಸಿಕ್ಕಿದ ಶಿಲೆಯನ್ನು ಜ್ಯೋತಿಷ್ಯರು ಇದು ನಾಗದೇವತೆ ಇದನ್ನು ನನಗೆ ಕೊಡು. ಇದು ನೀನು ಕಿತ್ತಿದ್ದರಿಂದ ನಿನಗೆ ದೋಷವಿದೆ. ಇದನ್ನು ನಾನು ಪ್ರತಿಷ್ಠಾಪನೆ ಮಾಡುತ್ತೇನೆ. ಇದರಿಂದ ನಿನಗೆ ದೋಷ ಮುಕ್ತಿ ಆಗುತ್ತದೆ ಎಂದರು.

ನಂತರ ಹೊನ್ನಿಯ ಕೈಯಲ್ಲಿ ಹೊನ್ನಿನ ತಂಬಿಗೆ ಇರುವುದನ್ನು ನಾಡವರ ಹೆಂಡತಿ ಶೆಡ್ತಿಯವರು ನೋಡಿ ಅದನ್ನು ತಾವೇ ಇರಿಸಿಕೊಳ್ಳುತ್ತಾರೆ. ಅನಂತರ ಉಳಿದ ಮಣ್ಣಿನ ಕಲಶವನ್ನು ಏನು ಮಾಡುವುದೆಂದು ಜ್ಯೋತಿಷ್ಯರಲ್ಲಿ ಕೇಳಿದಾಗ ಅದನ್ನು ನೀನೇ ತೆಗೆದುಕೊಂಡು ಹೋಗಿ ಪೂಜಿಸು, ನಿನ್ನ ಇಷ್ಟಾರ್ಥ ನೆರವೇರುತ್ತದೆ. ಎಂದು ಹರಸಿ ಕಳುಹಿಸುತ್ತಾರೆ.

ನಾಗ ಶಿಲೆಯನ್ನು ಜ್ಯೋತಿಷ್ಯರು ಅರಳಿ ಕಟ್ಟೆಯಲ್ಲಿಟ್ಟು ಪೂಜಿಸಲಾಗಿ ನಾಗಬನವಾಗಿ, ನಾಗದೇವತೆಯಾಗಿ ನೆಲೆಯಾಯಿತಂತೆ, ಹಾಗೆಯೇ ಗ್ರಾಮಸ್ಥರಿಗೆ ಆರಾಧನಾ ದೇವತೆಯೂ ಆಯಿತು.

ಹೊನ್ನಿನ ತಂಬಿಗೆಯನ್ನು ತೆಗೆದುಕೊಂಡು ಹೋದ ಶೆಡ್ತಿಯವರು ಪಡುವಣ ಗರಡಿಯ ಮೂಲೆಯಲ್ಲಿ ಇಟ್ಟು, ತೆಂಗಿನ ಗರಿಯನ್ನು ಮುಚ್ಚಿಟ್ಟರು. ಮನೆಯ ಮಕ್ಕಳು ಕುತೂಹಲದಿಂದ ಅದೇನೆಂದು ತಾಯಿಯನ್ನು ಕೇಳಲು "ಮಕ್ಕಳೇ ಅದು "ಸ್ವಾಮಿ" ಅದನ್ನು ಮುಟ್ಟಬೇಡಿ". ಅಂದರು ದೈವ ಸಂಕಲ್ಪ ಎನ್ನುವಂತೆ ಆಕೆಯ ಮಾತಿನಂತೆ ಆ ಹೊನ್ನಿನ ಕಳಸವು 'ಸ್ವಾಮಿ'ಯಾಗಿ ಅಲ್ಲಿ ನೆಲೆಸಿತ್ತು. ಈಗಲೂ ಸಹ ಪ್ರತಿಷ್ಠಿತ ನಾಡವರ ಮನೆಯಲ್ಲಿ 'ಸ್ವಾಮಿಯು' ಹುತ್ತದ ರೂಪದಲ್ಲಿ ನೋಡಲು ಸಿಗುತ್ತದೆ. ಮಣ್ಣಿನ ಕಳಸವನ್ನು ತೆಗೆದುಕೊಂಡು ಬಂದ ಹೊನ್ನಿಯು ಒಂದು ಮರದ ಬುಡದಲ್ಲಿ ಇಟ್ಟು ಪೂಜಿಸುತ್ತಾ ಬಂದಳು. ಆದರೂ ಹಿಂದೆ ನಾಗ ಶಿಲೆಯನ್ನು ಕಿತ್ತ ಪರಿಹಾರಾರ್ಥವಾಗಿ "ಶ್ರೀ ಕಾಡ್ಯ ನಾಗ ಮಂಡಲ" ಆಗಬೇಕು ಎಂದ ಬ್ರಾಹ್ಮಣರ ಆದೇಶದಂತೆ ಶ್ರೀ ಕಾಡ್ಯ ನಾಗಮಂಡಲದ ರೀತಿ ರಿವಾಜುಗಳನ್ನು ಬ್ರಾಹ್ಮಣರಲ್ಲಿ ಕೇಳುತ್ತಾಳೆ. ಬ್ರಾಹ್ಮಣರು ಆಕೆಗೆ ಈ ರೀತಿ ಹೇಳುತ್ತಾರೆ.

ನಿನಗೆ 'ಬೈದ್ಯ' ಮೂರು ದಿನದ ಕಾರ್ಯಕ್ರಮ,

ನಮಗೆ ವೈದ್ಯ ಒಂದು ದಿನದ ಕಾರ್ಯಕ್ರಮ ಎಂದು ಸೂಚಿಸಿದರಂತೆ.

ನಾಗಮಂಡಲದ ಕಾರ್ಯಕ್ರಮಕ್ಕೆ ಬೇಡಲು ಹೊನ್ನಿಯು ತನ್ನ ಆಶ್ರಯದಾತ ನಾಡವರ ಮನೆಯಲ್ಲಿ ಹೋದಾಗ ಆ ನಾಡವರು ಪಾರ್ವತಿ ದೇವಿಯ ವರದಂತೇ ಹೊನ್ನಿಗೆ ಊರ ಉಂಬಳಿಯನ್ನು ನೀಡಿ ಆ ದೇವತಾ ಕಾರ್ಯಕ್ಕೆ ತಮ್ಮ ಸಹಾಯ ನೀಡುತ್ತಾರೆ.

ನಾಡವರ ಸಹಾಯದಿಂದ ಹೊನ್ನಿಯು ಬೈದ್ಯರಲ್ಲಿ ಹೋಗುತ್ತಾಳೆ. ಬೈದ್ಯರು ನಾಗಮಂಡಲದ ರೀತಿ ರಿವಾಜುಗಳನ್ನು ಹೇಳಲಾಗಿ, ಬೈದ್ಯರು ಹೊನ್ನಿಗೆ ಒಂದು ಮಂಡಲ ಕಾಲ ವ್ರತ ಹಾಗೂ ನೇಮ ನಿಷ್ಠೆಯಿಂದ ಇದ್ದು ಈ ಸೇವೆಯನ್ನು ಮಾಡಬೇಕೆಂದು ಹೇಳುತ್ತಾರೆ. ಬೈದ್ಯರ ಮಾರ್ಗದರ್ಶನದಂತೆ ಹೊನ್ನಿಯು ಸುಮುಹೂರ್ತದಲ್ಲಿ ಶ್ರೀ ಕಾಡ್ಯ ನಾಗ ಮಂಡಲವನ್ನು ಪ್ರಾರಂಭಿಸುತ್ತಾಳೆ.

ಒಳ್ಳೆಯ ಕಾರ್ಯಕ್ಕೆ ನೂರಾರು ವಿಘ್ನಗಳು ಎನ್ನುವಂತೆ ಇಲ್ಲಿಯೂ ಹಾಗೆಯೇ ಆಗುತ್ತದೆ. ಹಿಂದೆ ಬ್ರಹ್ಮಾಸುರನೆಂಬ ರಕ್ಕಸನನ್ನು ಕಾಡ್ಯನಾಗನು ಹಿಡಿದುಕೊಂಡ ಬಳಿಕ, ಅಣ್ಣನ ದಾರಿಯನ್ನು ಕಾಯುತ್ತಾ ಆತನ ಬರುವಿಕೆ ಇಲ್ಲದೆ ಆತನನ್ನು ಅರಸುತ್ತಾ 'ಮಾಜ್ಯಾಲೆ' ಎನ್ನುವ ಘೋರ ರಕ್ಕಸಿಯು ತನ್ನ ಪಡೆಯೊಂದಿಗೆ ಹೊನ್ನಿಯು ನಾಗಮಂಡಲ ಮಾಡುತ್ತಿರುವಲ್ಲಿ ಪ್ರವೇಶಿಸುತ್ತಾಳೆ.

ಘೋರವಾದ ಆಕೆ ತನ್ನ ರಾಕ್ಷಸೀ ಕೃತ್ಯವನ್ನು ತೋರುತ್ತಾಳೆ. ಊರ ಜನರನ್ನು ಹಿಡಿದು ತಿನ್ನುತ್ತಾ, ಕೈಗೆ ಸಿಕ್ಕ ದನ ಕರುಗಳನ್ನು ತಿನ್ನುತ್ತಾ ಇಡೀ ಊರನ್ನೇ ಅಲ್ಲೋಲ ಕಲ್ಲೋಲವಾಗಿಸುತ್ತಾಳೆ. ಈ ಆಕಸ್ಮಿಕ ಅವಘಡದಿಂದ ಹೊನ್ನಿಗೆ ದಿಕ್ಕೇ ತೋಚದೆ ತನ್ನ ಏಳು ಮಕ್ಕಳನ್ನು ಕರೆದುಕೊಂಡು ಎಲ್ಲಿಗೂ ಹೋಗಲು ಸಾಧ್ಯವಾಗದೆ ತಾನೇ ಪೂಜಿಸುತ್ತಿರುವ ಶ್ರೀ ಕಾಡ್ಯ ನಾಗನ ಮೊರೆ ಹೋಗುತ್ತಾಳೆ. ತನ್ನನ್ನು ಹಾಗೂ ತನ್ನ ಮಕ್ಕಳನ್ನು ಉಳಿಸು ಎಂದು ಹುತ್ತವನ್ನು ಅಪ್ಪಿಕೊಳ್ಳುತ್ತಾಳೆ. ಆಗ ಶ್ರೀ ಕಾಡ್ಯ ನಾಗದೇವತೆಯೂ ತನ್ನ ನಿಜ ಸ್ವರೂಪವನ್ನು ನೀಡಿ ಹೊನ್ನಿಗೆ ರಕ್ಷಣೆಯನ್ನು ನೀಡುತ್ತದೆ. ತನ್ನ ಭಕ್ತಳ ಮೊರೆಯನ್ನು ಕೇಳಿ ಪಾರ್ವತಿ ದೇವಿಯು ಆ ಹುತ್ತವನ್ನು ಒಡೆದು ಪ್ರತ್ಯಕ್ಷವಾಗಿ ಹೊನ್ನಿಗೆ ಅಭಯವನ್ನು ನೀಡುತ್ತಾಳೆ. ಹೊನ್ನಿಯು ದೇವಿಗೆ ಶಿರಬಾಗಿ ತನ್ನ ಸಂಕಟವನ್ನು ದೇವಿಯಲ್ಲಿ ಅರಹುತ್ತಾಳೆ. ದೇವಿಯು ಆ ಘೋರ ರಾಕ್ಷಸಿಯನ್ನು ಸಂಹರಿಸುವುದಕ್ಕಾಗಿ ಹೈಗುಳಿ, ನೇತ್ರ ಹೈಗುಳಿ, ಕೀಳ್, ಹೈಗುಳಿ, ನಾಲ್ಕು ಪಾದ ಹೈಗುಳಿ ಮೊದಲಾದ ದೈವಗಳಿಗೆ ಆದೇಶಿಸುತ್ತಾಳೆ.

ದೇವಿಯ ಅಣತಿಯಂತೆ ಆ ದೈವಗಳು ಮಾಜ್ಯಾಲೆ ಎಂಬ ಘೋರ ರಕ್ಕಸಿಯನ್ನು ಸಂಹರಿಸುತ್ತಾರೆ. ಹಿಂದೆ ಪಾರ್ವತಿ ದೇವಿಯ ವರದಿಂದ ಹುಟ್ಟಿದ ಹೊನ್ನಿಯು ಆಕೆಯ ಸಂಕಲ್ಪದಂತೆಯೇ ಘೋರ ರಕ್ಕಸಿಯನ್ನು ಕೊಂದುದಕ್ಕಾಗಿ ಸಂತೋಷಗೊಂಡು ಪಾರ್ವತಿ ದೇವಿಗೆ ನಮಸ್ಕರಿಸಲಾಗಿ ಆಕೆಯಲ್ಲಿಯೇ ಐಕ್ಯವಾಗಿ 'ತಾಯಿ ದೇವತೆ' ಯಾಗುವಳು. ಆಗ ಹೊನ್ನಿಯ ಏಳು ಮಕ್ಕಳು ತಮ್ಮ ಮುಂದಿನ ಗತಿಯೇನೆಂದು ಕೇಳಲಾಗಿ, ತಾಯಿ ದೇವತೆಯು ಮಕ್ಕಳೇ ಹೆದರಬೇಡಿ, ಇಲ್ಲಿರುವ ಏಳು ಕಲಶಗಳನ್ನು ಹೊತ್ತು ಸಮುದ್ರದಲ್ಲಿ ಸ್ನಾನ ಮಾಡಿ ಪೂರ್ವಾಭಿಮುಖವಾಗಿ ಹೋಗಿರಿ. ಆ ಕಲಶಗಳು ಎಲ್ಲಿ ನೆಲಸುತ್ತವೆಯೋ ಅಲ್ಲಿ ನಾನು ನೆಲೆಯಾಗಿ ಗ್ರಾಮ ದೇವತೆಯಾಗಿ, ಆರಾಧನಾ ದೇವತೆಯಾಗಿ ನೆಲೆಸುತ್ತೇನೆ ಎಂದು ಅಭಯವನ್ನೀಯುತ್ತಾಳೆ.

ಪೂರ್ವಾಭಿಮುಖವಾಗಿ ಬಂದ ಏಳು ಜನ ಕನ್ಯೆರು ೧. ಕೊರ್ಗಿ ೨. ನೈಲಾಡಿ ೩. ಮತ್ಯಾಡಿ ೪. ನಾಗೇರಿ ೫. ಬೆಳ್ವೆ ೬. ಬೇಳಂಜೆ ೭. ಕುಚ್ಚೂರು ಕಾನ್ವೆಟ್ಟಿನಲ್ಲಿ ನೆಲೆಯಾಗುತ್ತಾರೆ. ಮಾಜ್ವಾಲೆಯ ಕಾಟದಿಂದ ತಪ್ಪಿಸಿಕೊಂಡು ಊರು ಬಿಟ್ಟ ಜನರು ಪುನಃ ಬಂದಾಗ ಹೊನ್ನಿಯಿಂದ ಮತ್ತು ಆಕೆಯು ಆರಾಧಿಸುತ್ತಿರುವ ಕಾಡ್ಯ ನಾಗ ದೇವತೆಯಿಂದ ನಮ್ಮ ರಕ್ಷಣೆಯಾಯಿತೆಂದು ತಿಳಿದು ಕಾಡ್ಯ ನಾಗನನ್ನು ತಮ್ಮ ಆರಾಧ್ಯ ದೇವತೆಯನ್ನಾಗಿ ಮಾಡಿ ತಮ್ಮ ಸಂಕಷ್ಟವನ್ನು ಪರಿಹರಿಸುವ ದೇವತೆಯೆಂದು ತಿಳಿದು ಪೂಜಿಸುತ್ತಾ ಬರುತ್ತಾರೆ.[೧೦]

ಈ ಕತೆಯ ಪ್ರಕಾರ ಕರಾವಳಿಯ ಏಳು ಕಡೆಗಳ ಕಾಡ್ಯ ಆರಾಧನೆಯ ಮೂಲ ನೆಲೆಗಳಿವೆ. ಈ ಆರಾಧನ ಕೇಂದ್ರಗಳಲ್ಲಿ 'ಕೊರ್ಗಿ' (ಕುಂದಾಪುರ ತಾಲೂಕು) ಆದಿ ಮೂಲ ಮತ್ತು ಪ್ರಧಾನ ಕೇಂದ್ರವೆಂದು 'ಕಾಡ್ಯನ ಹುಟ್ಟು' ವಿಗೆ ಸಂಬಂಧಿಸಿದ ಹಾಡಿನಲ್ಲಿ ವ್ಯಕ್ತವಾಗುತ್ತದೆ. ನಂತರ ಇಲ್ಲಿಂದ ಬೇರೆ ಬೇರೆ ಪ್ರದೇಶಗಳಿಗೆ ಈ ಆರಾಧನ ಪ್ರಕಾರವು ಪ್ರಸರಣಗೊಂಡಿರಬೇಕು.

ಆಚರಣೆಯ ಸ್ವರೂಪ

ಕಾಡ್ಯನಿಗೆ ದಿನವೂ ಪೂಜೆ ನಡೆಸುವ ಸಂಪ್ರದಾಯವಿಲ್ಲ. ವಿಶೇಷ ದಿನಗಳಲ್ಲಿ ಇಲ್ಲಿ ಪೂಜೆ ನಡೆಸಲಾಗುತ್ತದೆ. ತಿಂಗಳಲ್ಲಿ ಒಮ್ಮೆ ಸಂಕ್ರಾಂತಿ ಯಂದು ಬೈದ್ಯನಿಂದ ಹೂ, ನೀರು, ಇಟ್ಟು ಹಾಲು ಹಣ್ಣಿನ ಪೂಜೆ ನಡೆಸಲಾಗುತ್ತದೆ. ಉಳಿದಂತೆ ವಾರ್ಷಿಕವಾಗಿ ಮೂರು ರೀತಿಯ ವಿಶೇಷ ಸೇವೆಗಳನ್ನು ನಡೆಸಲಾಗುತ್ತದೆ. ನವರಾತ್ರಿಯಲ್ಲಿ ಕದಿರು ಕಟ್ಟುವ ಸಂದರ್ಭದಲ್ಲಿ ಇಲ್ಲಿರುವ ಬ್ರಹ್ಮ ಕಂಭಕ್ಕೆ ಕದಿರು ಕಟ್ಟಲಾಗುತ್ತದೆ. ಈ ದಿನವೂ ವಿಶೇಷ ಪೂಜೆ ಬೈದ್ಯನಿಂದ ನಡೆಯುತ್ತದೆ. ಎರಡನೆಯದಾಗಿ ನಾಗರ ಪಂಚಮಿಯಂದು ಇಲ್ಲಿರುವ ನಾಗ ಪ್ರತಿಮೆಗಳಿಗೆ ಬೈದ್ಯನಿಂದಲೇ 'ತನು' ಪೂಜೆ ನಡೆಯುತ್ತದೆ. ಕಾಡ್ಯನ ಮನೆಯ ಒಳ ಭಾಗದಲ್ಲಿ ಬಾಳೆ ಎಲೆಯ ಮೇಲೆ 'ಸ್ವಸ್ತಿಕೆ' ಇಟ್ಟು 'ಪಂಚ ಕಜ್ಜಾಯ' ಅರ್ಪಿಸಿ ವಿಶೇಷ ಪೂಜೆ ನಡೆಸಲಾಗುತ್ತದೆ. ಕೊನೆಯದಾಗಿ ನಡೆಯುವ ವಾರ್ಷಿಕ ಪೂಜೆ 'ಭೋಗ' ಕೊಡುವುದು.

ತುಳುನಾಡಿನಾದ್ಯಂತ 'ಬೇಷ' ತಿಂಗಳಿನಲ್ಲಿ (ಮೇ-ಜೂನ್ ತಿಂಗಳಲ್ಲಿ ಬರುವ ತುಳುವರ ಮಾಸ) ಭೂತ, ಬ್ರಹ್ಮ, ಕೀಲ್, (ಕೀಳ್), ಇತ್ಯಾದಿ ದೈವಗಳಿಗೆ ಕೊಡುವ ವಿಶೇಷವಾದ ವಾರ್ಷಿಕ ಪೂಜೆಯನ್ನು 'ಭೋಗ' ಎಂದು ಕರೆಯುವುದು ವಾಡಿಕೆ. ಇದು ಆಚರಣೆಯಲ್ಲಿ ವಾರ್ಷಿಕೋತ್ಸವವಲ್ಲ ವಾರ್ಷಿಕ ಪೂಜೆ. ಅಂದು ಊರಿನ ಸಂಬಂಧಿತರೆಲ್ಲ ಕಾಡ್ಯನ ಮನೆಗೆ ಬಂದು ಹಣ್ಣು ಕಾಯಿ ಮಾಡಿಸುತ್ತಾರೆ. ಮಳೆ, ಬೆಳೆ, ಚೆನ್ನಾಗಿ ಬರಲಿ ಎಂದು ಪ್ರಾರ್ಥಿಸುತ್ತಾರೆ ಹೊರಗಿರುವ ಹಾಯ್ಗುಳಿಗೆ ಕೋಳಿ ಒಪ್ಪಿಸುತ್ತಾರೆ. ಕಾಡ್ಯ ಮತ್ತು ಉಳಿದಿರುವ ಎಲ್ಲ ಪರಿವಾರ ದೇವತೆಗಳಿಗೆ ಹಾಲು, ಹಣ್ಣಿನ ವಿಶೇಷ ಪೂಜೆ ನಡೆಯುತ್ತದೆ.

ಕಲಶ ಪೂಜೆ

ಕಾಡ್ಯನ ಆರಾಧನೆಯಲ್ಲಿ ಮಣ್ಣಿನ ಕಲಶಗಳಿಗೆ ವಿಶೇಷತೆಯಿದೆ. ಕಾಡ್ಯನ ಮನೆಯ ಆವರಣದೊಳಗೆ ವಿವಿಧ ರೀತಿಯ ಮಣ್ಣಿನ ಕಲಶಗಳನ್ನು ಕಾಣಬಹುದಾಗಿದೆ. ಇದರಲ್ಲಿ ಹೆಚ್ಚಿನವು ಭಕ್ತಾದಿಗಳು ಹರಕೆಯ ರೂಪದಲ್ಲಿ ಕೊಟ್ಟಂಥವುಗಳು. ಸಂತಾನ ಹೀನತೆ, ಚರ್ಮರೋಗ, ದೃಷ್ಟಿದೋಷ, ಜಾನುವಾರುಗಳಿಗೆ ತೊಂದರೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಕಾಡ್ಯನಿಗೆ ಕಲಶ ಒಪ್ಪಿಸುವ ವಿಶೇಷ ಹರಕೆಯನ್ನು ಹೇಳಿಕೊಳ್ಳಲಾಗುತ್ತದೆ.

ಮಣ್ಣಿನ ಕಲಶದ ನಿರ್ಮಾಣದಲ್ಲಿಯೂ ವಿಶೇಷತೆ ಇರುವುದು ಕಂಡು ಬಂದಿದೆ. ಕಲಶ ನಿರ್ಮಾಣದ ಸಂದರ್ಭದಲ್ಲಿ ಕಂಬಾರನು ವ್ರತ, ನಿಯಮದಿಂದ ಇರಬೇಕಾಗುತ್ತದೆ. ಸರ್ಪನ ಹೆಡೆಯಿರುವ ಉಬ್ಬು ಚಿತ್ರಗಳನ್ನು ಮಡಕೆಯ ಸುತ್ತಲೂ ರಚಿಸಲಾಗುತ್ತದೆ. ಕಲಶವನ್ನು ಕಂಬಾರನ ಮನೆಯಿಂದ ಮೆರವಣಿಗೆಯಲ್ಲಿ ತಂದು, ಪೂಜಿಸಿ ಕಾಡ್ಯನಿಗೆ ಅರ್ಪಿಸಲಾಗುತ್ತದೆ. ಇಲ್ಲಿ ಬಳಸುವ ಕಲಶ ಮತ್ತು ಅದರ ಬಳಕೆಯ ಹಿನ್ನೆಲೆಯನ್ನು ವಿವೇಚಿಸಬೇಕಾಗಿದೆ. ''ಕಾಡ್ಯನ ಮನೆ ಮತ್ತು ಆರಾಧನೆಯಲ್ಲಿ ಮಣ್ಣಿನ ಕಲಶ ಅಥವಾ ಮಡಕೆಗಳಿಗೆ ವಿಶೇಷ ಮಹತ್ವ. ತಾಂತ್ರಿಕ ಆರಾಧನೆಯ ಹಿನ್ನೆಲೆಯಲ್ಲಿ ಕಲಶ ಸರ್ಪ ಹಾಗೂ ಗರ್ಭಕ್ಕೆ ಸಂಬಂಧವಿದೆ. ವಿದ್ಯುಕ್ತವಾಗಿ ಕಂಬಾರರಿಂದ ಕಲಶ ತಯಾರಿ, ಪೂಜೆ, ಕುಲದ ಸ್ತ್ರೀಯರಿಂದಲೇ ಹೊತ್ತುತರುವಿಕೆ. ಆ ಕಲಶದೊಳಗೆ ನೀರೆರೆದು ಮೇಲೆ ಕಲಶದ ಬಾಯಿಗೆ ಮಾವಿನ ಚಿಗುರು ಇರಿಸುವುದು, ಸಂತಾನದ ಬಯಕೆಗಾಗಿ ಕಲಶ ಒಪ್ಪಿಸುವುದು. ಮಂಡಲ ಚಿತ್ತಾರದ ಮೇಲೆ, ಕಲಶ ಹೊತ್ತುನಿಂತ ಹೆಣ್ಣಿನ ಮೇಲೆ ಬೈದ್ಯ ಅಕ್ಕಿ ಕಾಳುಗಳನ್ನು ಚೆಲ್ಲುವುದು. ಕೊನೆಯಲ್ಲಿ ಕಲಶವನ್ನು ಹರಿವ ನೀರಿನಲ್ಲಿ ತೊಳೆದು ಬರುವುದು ಎಲ್ಲವೂ ಕಾಡ್ಯನನ್ನು ಸಂತಾನಾಭಿಮಾನಿ ದೇವತೆ ಎಂಬುದನ್ನು ಸೂಚಿಸುತ್ತದೆ.''[೨೨] ಎಂದು ಕಲಶದ ಮಹತ್ವವನ್ನು ವಿವರಿಸಲಾಗಿದೆ.

ವಿಶೇಷವಾಗಿ ಸಂತಾನ ಹೀನತೆಯ ಸಂದರ್ಭದಲ್ಲಿ ಕಾಡ್ಯನಿಗೆ ಕಲಶಗಳನ್ನು ಹರಕೆಯ ರೂಪದಲ್ಲಿ ಒಪ್ಪಿಸುವುದನ್ನು ಗಮನಿಸಬೇಕು. ಇಲ್ಲಿರುವ ಆಟದ ಕಾಡ್ಯನ ಮನೆಯಲ್ಲಿ 'ಕಾಡ್ಯನಾಟ' ಎಂಬ ವಿಶೇಷ ಆಚರಣೆಯನ್ನು ನಡೆಸಲಾಗುತ್ತದೆ. ಆದರೆ ಈ ಪ್ರಕಾರವು ಇತ್ತೀಚಿನ ವರ್ಷಗಳಲ್ಲಿ ನಡೆದ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಅದಕ್ಕಾಗಿ ತಗಲುವ ಅತಿಯಾದ ಖರ್ಚು ವೆಚ್ಚಗಳು ಮತ್ತು ಈ ಪರಂಪರೆ ಈಗ ವಿರಳವಾಗುತ್ತಿರುವದರಿಂದ ಆಚರಣೆಯ ಪೂರ್ವಾಪರಗಳ ಕುರಿತು ಬೈದರಲ್ಲಿ ಸ್ಪಷ್ಟ ಮಾಹಿತಿಗಳ ಕೊರತೆಯಿದೆ. ಆದ್ದರಿಂದ ಕಾಡ್ಯನಾಟ ಇಂದು ವಿರಳವಾಗುತ್ತಿದೆ.

೬.೬.೨. ನಾಗನ 'ಹುಟ್ಟು' ಆಚರಣೆ

ಉಡುಪಿ ಜಿಲ್ಲೆಯ ಉಡುಪಿ, ಕುಂದಾಪುರ ತಾಲೂಕುಗಳ ಕೋಟೇಶ್ವರ, ಬಾಂತಾರ್, ಕಾಳಾವರ, ಊಳ್ಳೂರು, ಐರೋಡಿ, ಮೊದಲಾದೆಡೆಗಳಲ್ಲಿ 'ಉಪ್ಪಾರ' ಎಂಬ ಸಮುದಾಯದವರಿದ್ದಾರೆ. ಹರಿಜನ ವರ್ಗಕ್ಕೆ ಸೇರಿದ ಇವರಿಗೆ ಪ್ರತ್ಯೇಕ ನಾಗಬನಗಳಿವೆ. ಅವುಗಳನ್ನು ಅವರು 'ಹುಟ್ಟು' ಎಂದು ಕರೆಯುತ್ತಾರೆ. ಇವು ತುಳುವರ ನಾಗಬನಗಳಿಗೆ ಸಂವಾದಿಯಾಗಿದ್ದು ವಿವಿಧ ಜಾತಿಯ ವೃಕ್ಷ ಸಂಕುಲಗಳಿಂದ, ಕೂಡಿರುತ್ತದೆ. ಇಲ್ಲಿ ನಾಗನ ವಿವಿಧ ರೀತಿಯ ಪ್ರತಿಮೆಗಳನ್ನು ಕಾಣಬಹುದಾಗಿದೆ. ಈ ಬನಗಳಿಗೆ ಪ್ರತ್ಯೇಕವಾದ ಇವರ ಜನಾಂಗದ ಪಾತ್ರಿಯಿದ್ದು, ಇಲ್ಲಿ ಕದ್ರ್ಹಬ್ಬ ಮತ್ತು 'ಹುಟ್ಟು ಮಾಡುವ ಆಚರಣೆ' ಎಂಬ ಎರಡು ವಾರ್ಷಿಕ ಆಚರಣೆಗಳನ್ನು ನೆರವೇರಿಸಲಾಗುತ್ತದೆ.

'ಕದ್ರ್ಹಬ್ಬ' ದ ದಿನ ನಿಗದಿತ ಬಳಿಗೆ ಸೇರಿದ ಜನಮಂದಿ ಶುಚಿರ್ಭೂತರಾಗಿ ಅಲ್ಲಿನ ನಾಗಪಾತ್ರಿ ನಿದಿಪ್ರತಿಯೊಂದಿಗೆ ಪಕ್ಕದ ಗದ್ದೆಗೆ ಓಲಗದೊಂದಿಗೆ ಹೋಗಿ ತೆನೆಯನ್ನು ಕಿತ್ತು ತರುತ್ತಾರೆ. ಆ ತೆನೆಗಳನ್ನು ನಾಗನ ಕಲ್ಲುಗಳ ಮುಂದಿರಿಸಿ, ಪೂಜೆ ಮಾಡಿ, ನಾಗನ ಪಾತ್ರಿಯ ಬಳಿ ತಮ್ಮ ಕಷ್ಟ ಸುಖವನ್ನು ನಿವೇದಿಸಿಕೊಂಡು ಪರಿಹಾರ ಪಡೆಯುತ್ತಾರೆ. ಆ ಬಳಿಕ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆನೆಗಳನ್ನು ಕೊಂಡೊಯ್ದು ಮನೆ

ತುಂಬಿಸುತ್ತಾರೆ. '' 'ಬೇಸೆ' ತಿಂಗಳಲ್ಲಿ ನಡೆಸುವ 'ಹುಟ್ಟು' ಆಚರಣೆಗೆ ಬಳಿಗೆ ಸೇರಿದ ಪ್ರತಿಯೊಬ್ಬರೂ ಬರಬೇಕು. ನಾಗನಿಗೆ ಹಾಲು, ಹಣ್ಣು, ಒಪ್ಪಿಸಿ ಪೂಜೆ ಮಾಡಿ ನಾಗನಿಂದ ಮೈ ತುಂಬಿಸಿಕೊಂಡ ಪಾತ್ರಿಯಿಂದ ಪ್ರಶ್ನೆ ಕೇಳಿ ಪರಿಹಾರ ಪಡೆಯುತ್ತಾರೆ ಈ ಆಚರಣೆಗಳು ಒಂದು ಸಮುದಾಯದ ನೆಲೆಯಲ್ಲಿ ನಡೆಯುವುದರಿಂದ ಸಾಮಾಜಿಕವಾಗಿ ಒಂದು ವರ್ಗಕ್ಕೆ ಸೀಮಿತವಾಗಿವೆ'' ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

೬.೬.೩. ಪಾಣರಾಟ

ಉಡುಪಿ ಜಿಲ್ಲೆಯ ಬಾರ್ಕೂರು ಶಿರಿಯಾರ ಬೆಳ್ವೆ ಮೊದಲಾದೆಡೆಗಳಲ್ಲಿ 'ಪಾಣ' ಎಂಬ ಸಮುದಾಯದವರಿದ್ದಾರೆ. ಈ ವರ್ಗದವರನ್ನು ಜಿಲ್ಲೆಯ ತುಳುವ ಪ್ರದೇಶದಲ್ಲಿ 'ನಲ್ಕೆ' ಎಂದು ಕರೆಯಾಲಾಗುತ್ತದೆ. ಇವರು ಪ್ರಧಾನ ಭೂತ ಮಾಧ್ಯಮದವರಾಗಿ ಭೂತಕೋಲ ಕಟ್ಟುವ ವೃತ್ತಿಯವರಾಗಿದ್ದಾರೆ. ಇವರು ನಾಗನನ್ನು ಒಳಗೊಂಡ ಸ್ಥಳೀಯ ದೈವ ಸಮೂಹಗಳಿಗೆ ಗ್ರಾಮ ಮಟ್ಟದಲ್ಲಿ ಅಥವಾ ಕೌಟುಂಬಿಕ ಮಟ್ಟದಲ್ಲಿ ಕೋಲ ನಡೆಸಿ ಕೊಡುತ್ತಾರೆ. ಇವರು ನಡೆಸುವ ಈ ವೈದಿಕೇತರ ಜನಪದ ಆಚರಣೆಯನ್ನು 'ಪಾಣರಾಟ' ಎಂದು ಕರೆಯಲಾಗುತ್ತದೆ. ತುಳುನಾಡಿನ ಉತ್ತರದ ಕನ್ನಡ ಪ್ರದೇಶದಲ್ಲಿ ನಾಗ ರೂಪಿಯಾದ ಸ್ವಾಮಿಯ ಆರಾಧನೆ ನಡೆಸುವ ಪರಂಪರೆಯಿದೆ. ಸ್ವಾಮಿಯನ್ನು ಹುತ್ತದ ರೂಪದಲ್ಲಿ ಆರಾಧಿಸಲಾಗುತ್ತದೆ. ''ಸ್ಥಳೀಯ ಬ್ರಾಹ್ಮಣೇತರ ಜನವರ್ಗದ ದೃಷ್ಟಿಯಲ್ಲಿ ನಾಗರೂಪಿಯಾದ ಸ್ವಾಮಿ ಒಂದು ಆರ್ಯೇತರ ದೈವ. ಭೂಮಿ ಪುತ್ರನೆಂದು ಜನ ನಂಬುವ ನಾಗ ಅಥವಾ ಸ್ವಾಮಿಯನ್ನು ಕರಾವಳಿಯ ಅತ್ಯಂತ ಪ್ರಭಾವಿ ಕೃಷಿ ಮೂಲದ ಜನಾಂಗ ನಾಡವರು ಬಂಟರು ತಮ್ಮ ಆರಾಧ್ಯದೈವವೆಂದು ನಂಬುತ್ತಾರೆ. ತಮ್ಮ ಮನೆಯ ಆವರಣದೊಳಗಿನ ನಾಗನಿಗೆ ಬ್ರಾಹ್ಮಣರಿಂದ ಉಪಚಾರ ನಡೆಸಿದರೆ ತಮ್ಮ ಮನೆ ದೈವವಾದ ಸ್ವಾಮಿಗೆ ನಿತ್ಯದಲ್ಲಿ ಹೂ ನೀರು ಹಾಕಿ ತಾವೇ ಅರ್ಚಿಸುತ್ತಾರೆ. ಗ್ರಾಮ ಮಟ್ಟದಲ್ಲಿ ಅಥವಾ ತಮ್ಮ ಮನೆಗಳಲ್ಲೇ ಪಾಣರ ಮೂಲಕ ಈ ಸ್ವಾಮಿಗೆ ನಡೆಸುವ ವಾರ್ಷಿಕ ಆರಾಧನೆಯೇ ಪಾಣರಾಟ'' ಎಂದು ಸ್ವಾಮಿಯ ಕುರಿತು ಉಲ್ಲೇಖಿಸಲಾಗಿದೆ.

ಪಾಣರಾಟದಲ್ಲಿ ಎರಡು ವಿಧ, ಕೋಲ ಮತ್ತು ಡಕ್ಕೆಬಲಿ. ಪಾಣರು ನಡೆಸುವ ಕೋಲವು ತುಳುನಾಡಿನ ನಲ್ಕೆಯವರು. ಮತ್ತು ಪರವರು ನಡೆಸುವ ಕೋಲಕ್ಕೆ ಸಂವಾದಿಯಾಗಿರುತ್ತದೆ. ಕನ್ನಡ ಪ್ರದೇಶವಾಗಿದ್ದರೂ ಕೂಡ ಪಾತ್ರಿಯು ಕೆಲವೊಮ್ಮೆ ತುಳುವಿನಲ್ಲಿಯೇ 'ನುಡಿ' ಕೊಡುವ ಸಂಪ್ರದಾಯವಿದೆ. ತುಳುನಾಡಿನ ಕೋಲದಲ್ಲಿ ಕಂಡು ಬರುವ ಗಂಭೀರ, ಸಹಜತೆ ಇಲ್ಲಿ ಕಂಡು ಬರುವುದಿಲ್ಲ.

ಸ್ಥಳೀಯ ಶಿರೂರು ಗ್ರಾಮದ ಮುದ್ದುಸ್ವಾಮಿ ದೇವಳದಲ್ಲಿ ಪ್ರತಿ ಎರಡು ವರ್ಷಗಳಿಗೊಮ್ಮೆ ಧನುರ್ಮಾಸದ ಕೊನೆಯ ಹನ್ನೆರಡು ದಿನಗಳು ನಿರಂತರವಾಗಿ ದೈವಭೂತಗಳಿಗೆ ಇಲ್ಲಿ ಕೋಲ ಸೇವೆ ನಡೆಯುತ್ತದೆ. ಪ್ರತಿ ದಿನವೂ ಪ್ರತಿಯೊಂದು ಮನೆತನದ ಸೇವೆಯಾಗಿ ಈ ಕೋಲಗಳು ನಡೆಯುತ್ತವೆ. ಈ ಹನ್ನೆರಡು ದಿನ ಕ್ಷೇತ್ರಪಾಲ, ಪಂಜುರ್ಲಿ, ಜಟ್ಟಿಗ, ಹುಲಿಚೌಂಡಿ, ನಂದಿ, ಬೆಮ್ಮಣ್ಣ, ಯಕ್ಷಸ್ತ್ರೀ, ಕಾಡ್ತಿಯಮ್ಮ, ಬೊಬ್ಬರ್ಯ, ಸ್ವಾಮಿ, ಮುಂತಾದ ದೇವರಿಗೆ ನೂರಾರು ಹರಕೆಯ ಕೋಲಗಳು ನಡೆಯುತ್ತವೆ. ಈ ಕೋಲಗಳು ಸಾಂಕೇತಿಕವಾಗಿ ನಡೆಯುತ್ತವೆ.

ಇದರೊಂದಿಗೆ ಹಾಸ್ಯ ಬರಿತವಾದ ಕೆಲವು ಹರಕೆಯ ಕೋಲಗಳು ಕೂಡ ನಡೆಯುತ್ತವೆ. ಜ್ವರದ ಕೋಲ, ಕೆಮ್ಮದ ಕೋಲ, ಬೆನ್ನು ನೋವಿನ ಕೋಲ, ಹೆಗ್ಗಣ್ಣನ ಕೋಲ, ಸೀತದ ಕೋಲ, ಇತ್ಯಾದಿ ಲಘುದಾಟಿಯಲ್ಲಿ ನಡೆಯುತ್ತದೆ.

ಕೋಲವಾದ ಬಳಿಕ ಅದೇ ಸ್ಥಳದಲ್ಲಿ 'ಡಕ್ಕೆ ಬಲಿ' ನಡೆಯುತ್ತದೆ. ಈ ಆಚರಣೆಯ ಕುರಿತು ವಿವರಿಸುತ್ತಾ ''ತುಳುವ ಪ್ರದೇಶಗಳಲ್ಲಿ ವೈದ್ಯರೆಂಬ ಬ್ರಾಹ್ಮಣ ಸಮುದಾಯದವರು ನಡೆಸುವ ಡಕ್ಕೆಬಲಿಗೂ ಇದಕ್ಕೂ ಒಂದಕ್ಕೊಂದು ಸಂಬಂಧವನ್ನು ಗುರುತಿಸಬಹುದಾಗಿದೆ. ಪಾಣರ ಡಕ್ಕೆಬಲಿಯಲ್ಲಿ ಪಾತ್ರಿಯಾಗಿ, ನರ್ತಕರಾಗಿ ಎಲ್ಲ ಪಾತ್ರವನ್ನು ಪಾಣರೇ ನಡೆಸಿಕೊಡುತ್ತಾರೆ. ಉಳಿದಂತೆ ವೇಷ ಭೂಷಣಗಳೆಲ್ಲ ನಾಗಮಂಡಲದಲ್ಲಿ ಧರಿಸುವ ವೇಷದಂತೆ ಕಂಡು ಬರುತ್ತದೆ[೬೫]'' ಎನ್ನುವುದನ್ನು ವಿದ್ವಾಂಸರುಗಳು ಉಲ್ಲೇಖಿಸಿದ್ದಾರೆ. ಡಕ್ಕೆ ಬಲಿಯ ಪ್ರಾರಂಭದಲ್ಲಿ ನೂರಾರು ಭೂತಗಳ ಹೆಸರನ್ನು ಒಂದೇ ಉಸುರಿನಿಂದ ಹೇಳಿ, ಅದರಂತೆಯೇ ನೂರರು ಊರುಗಳ ಹೆಸರುಗಳನ್ನು ಒಂದೇ ಉಸುರಲ್ಲಿ ಹೇಳಿ, ಆ ಎಲ್ಲಾ ಊರಿನ ಎಲ್ಲಾ ಭೂತಗಳೂ ಈ ಸ್ಥಳಕ್ಕೆ ಬರಬೇಕು ಎನ್ನುತ್ತಾರೆ. ಡಕ್ಕೆಬಲಿಯಲ್ಲಿ ನಾಗನ ಹೊಗಳಿಕೆಯಲ್ಲದೆ ಇತರ ಎಷ್ಟೋ ಭೂತಗಳ ಹೊಗಳಿಕೆಯೂ ಸೇರುತ್ತದೆ. ವೈದ್ಯರ ಡಕ್ಕೆಬಲಿಯಂತೆಯೇ ನಾಗನ ಹೊಗಳಿಕೆಯನ್ನು ಒಬ್ಬನು ಹೇಳಿ, ಉಳಿದವರು ಅದನ್ನು ಪುನರಾವರ್ತಿಸುವಂತೆ, ಇಲ್ಲಿಯೂ ಪದ್ಯದ ಸಾಲುಗಳ ಪುನರಾವರ್ತನೆ ಇದೆ. ಆರಂಭದಲ್ಲಿ ಸ್ವಾಮಿಯ ಹೊಗಳಿಕೆ, ಆ ಬಳಿಕ ಉಳಿದ ಭೂತಗಳ ಹೊಗಳಿಕೆ ನಡೆಯುತ್ತದೆ.

ಈ ಪ್ರಕಾರಗಳಷ್ಟೇ ಅಲ್ಲದೆ ದಲಿತರಿಂದಲೇ ಆರಾಧಿಸಲ್ಪಡುವ ಕೆಲವು ನಾಗಬನಗಳನ್ನು ವಿದ್ವಾಂಸರುಗಳು ಗುರುತಿಸಿದ್ದಾರೆ.[೬೬] ಈ ಬನಗಳೆಲ್ಲ ಪ್ರಾಚೀನ ಪರಂಪರೆಯಂತೆ ಕೆಲವು ದಲಿತ ಕುಟುಂಬಗಳು ನಾಗನನ್ನು ಆರಾಧಿಸಿಕೊಂಡು ಬರುತ್ತಿರುವುದು ಪತ್ತೆಯಾಗಿದೆ. ಉಡುಪಿ ಜಿಲ್ಲೆಯ 'ಕುತ್ಯಾರು' ಗ್ರಾಮದ 'ಮೂಲ್ದೊಟ್ಟು ಬನ' ಎಂಬಲ್ಲಿ ಮುಗ್ಗೇರ ಸಮಾಜಕ್ಕೆ ಸೇರಿದ ೧೬ ಮಾಗಣೆಯವರು ಪಾಲ್ಗೊಳ್ಳುತ್ತಾರೆ. ಪ್ರತಿ ವರ್ಷ ವೃಷಭ ಮಾಸದಲ್ಲಿ ವಿಶೇಷ ಆಚರಣೆ ನಡೆಸುತ್ತಿರುವುದನ್ನು ಪತ್ತೆ ಮಾಡಲಾಗಿದೆ.

೬.೭. ನಾಗಾರಾಧನೆ ಜನಪದ ನಂಬಿಕೆಗಳು

ತುಳುನಾಡಿನಾದ್ಯಂತ ಸರ್ಪ ಅಥವಾ ನಾಗನನ್ನು ಅತೀ ಪೂಜನೀಯ ಸ್ಥಾನದಲ್ಲಿಟ್ಟು ಗೌರವಿಸುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ನಾಗನ ಮೇಲಿರುವ ಜನರ ನಂಬಿಕೆಗಳೇ ಕಾರಣವೆಂದು ಭಾವಿಸಲಾಗಿದೆ.

ಮುಖ್ಯವಾಗಿ ಸರ್ಪದೋಷದಿಂದ ಸಂತಾನ ಹೀನತೆ, ಕುಷ್ಟರೋಗ, ದೃಷ್ಟಿದೋಷ, ಸಂಪತ್ತು ನಾಶ, ಬುದ್ಧಿಮಾಂದ್ಯ, ಇತ್ಯಾದಿ ಬರುತ್ತದೆಂದು ಇದನ್ನು ಪರಿಹರಿಸದಿದ್ದರೆ ಈ ದೋಷವು ಕುಟುಂಬದಲ್ಲಿ ಮುಂದುವರಿಯುತ್ತಿರುತ್ತದೆಂಬ ನಂಬಿಕೆಯಿದೆ. ಇದರ ಪರಿಹಾರವಾಗಿ ಸರ್ಪ ಸಂಸ್ಕಾರ, ಆಶ್ಲೇಷ ಬಲಿ, ನಾಗಮಂಡಲ ಇತ್ಯಾದಿಗಳನ್ನು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿ ನಡೆಸುತ್ತಾರೆ.

ಮೃತ ಸರ್ಪವನ್ನು ಕಂಡಾಗ ಅದನ್ನು ಬಿಟ್ಟು ಹೋಗಬಾರದೆಂಬ ಪ್ರತೀತಿ ಇದೆ. ಅದಕ್ಕೆ ಸಂಸ್ಕಾರಾದಿಗಳನ್ನು ವೇದೋಕ್ತ ರೀತಿಯಲ್ಲಿ ನಡೆಸಬೇಕೆಂಬ ನಂಬಿಕೆ ಇದೆ.

ಯಾವುದೇ ಶುಭ ಕೆಲಸಕಾರ್ಯಗಳಿಗೆ ತೆರಳುವಾಗ ಸರ್ಪ ಕಾಣಬಾರದೆಂದು, ಹಾಗೆ ಸರ್ಪವನ್ನು ಕಂಡು ತೆರಳಿದಲ್ಲಿ ನಿಶ್ಚಿತ ಕಾರ್ಯ ಯಶಸ್ವಿಯಾಗುವುದಿಲ್ಲ ಎಂದು ಪ್ರತೀತಿ ಇದೆ. ಕೆಲವು ಪುರಾತನ ನಾಗಬನಗಳಲ್ಲಿ ನಿಧಿ ಇದೆಯೆಂದು ಅದನ್ನು ಕಾಯುವುದಕ್ಕಾಗಿ ಅಲ್ಲಿ ನಾಗ ಪ್ರತಿಮೆಗಳನ್ನು ಪ್ರತಿಷ್ಠಾಪಿಸುತ್ತಾರೆಂದು, ಅಲ್ಲಿರುವ ನಿಧಿಯನ್ನು ಸರ್ಪ ಕಾಯುತ್ತಿರುತ್ತದೆಂದು ನಂಬಿಕೆಯಿದೆ.

ತುಳುನಾಡಿನಾದ್ಯಂತ 'ಹಳೆಯ' ಹುತ್ತಗಳನ್ನು ಕೆಡಹುವ ಸಂಪ್ರದಾಯವಿಲ್ಲ. ಹುತ್ತದಲ್ಲಿಯು ಕೂಡ 'ಒಳ್ಳೆಯ' ಹುತ್ತ ಮತ್ತು 'ಹಾಳು' ಹುತ್ತ ಅಥವಾ 'ಗೆದ್ದಲು' ಹುತ್ತ ಎಂದು ವರ್ಗೀಕರಿಸಲಾಗಿದೆ. ಸರ್ಪಗಳು ವಾಸಮಾಡುವ ಹುತ್ತವನ್ನು ಭಯ ಭಕ್ತಿಯಿಂದ ಕಾಣಲಾಗುತ್ತದೆ. ಇದನ್ನು ಒಳ್ಳೆಯ ಹುತ್ತ ಎನ್ನಲಾಗುತ್ತದೆ. ವಾಸ್ತವವಾಗಿ ಗಮನಿಸಿದರೆ ಹುತ್ತಗಳೆಲ್ಲವೂ ಗೆದ್ದಲಿನಿಂದ ನಿರ್ಮಿಸಲ್ಪಟ್ಟಿದ್ದು, ಜನರ ನಂಬಿಕೆ ಮಾತ್ರ ಹುತ್ತವನ್ನು ನಾಗನೊಂದಿಗೆ ಬೆಸೆದು ಕೊಂಡಿದೆ. ಹಿಂದೆ ಹುತ್ತವನ್ನು ಕೆಡಹುವ ಸಂದರ್ಭ ಬಂದಾಗ ಹಿಂದುಳಿದಿರುವ ಕೊರಗ ಸಮುದಾಯದವರಿಂದ ಆ ಕಾರ್ಯವನ್ನು ಮಾಡಿಸುತ್ತಿದ್ದರೆಂದು ಪ್ರತೀತಿ, ಆದರೆ ಸಾಮಾಜಿಕವಾಗಿ ಈಗ ಬದಲಾವಣೆಗಳು ಆಗಿರುವುದರಿಂದ ಈ ಕಾರ್ಯವನ್ನು ಯಾರು ಮಾಡುತ್ತಿಲ್ಲ, ಮತ್ತು ಮಾಡಿಸುತ್ತಿಲ್ಲ.

ತುಳುನಾಡಿನಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಮನೆಯ ಸಮೀಪ 'ಸರ್ಪ' ಬಂದಾಗ ಇದು ನಾಗದೋಷ ಎಂದು ಜನತೆ ಭಾವಿಸುತ್ತಾರೆ. ಬ್ರಾಹ್ಮಣರನ್ನು ಕರೆಸಿ ಸರ್ಪನಿಗೆ ಪ್ರಾರ್ಥಿಸಿಕೊಳ್ಳುವುದಿದೆ. ಬಳಿಕ ಮುಂದೊಂದು ದಿನ ಬಾಳೆ ಗೊನೆಯೊಂದಿಗೆ ನಾಗ ತನು ನಡೆಸುವ ಸಂಪ್ರದಾಯವಿದೆ.

ಕೆಲವು ಸಮುದಾಯಗಳಲ್ಲಿ ಮದುವೆಯಾದ ನವದಂಪತಿಗಳು ತಮ್ಮ ಮೂಲ ಸ್ಥಾನಕ್ಕೆ ಬಂದು ವಿಶೇಷ ಪೂಜೆ ನಡೆಸಿಕೊಂಡು ಹೋಗುತ್ತಾರೆ. ಮೂಲತಃ ಬಂಟರು, ಬಿಲ್ಲವರು, ಕುಂಬಾರರು, ಮೊದಲಾದ ಜಾತಿಗಳಲ್ಲಿ ಈ ನಂಬಿಕೆ ಇದೆ. ಸಂಪಿಗೆ, ಕೇದಗೆ, ನಾಗಸಂಪಿಗೆ ಪಾರಿಜಾತ ಮೊದಲಾದ ವೃಕ್ಷಗಳ ಬುಡದಲ್ಲಿ ಸರ್ಪವಾಸಿಸುತ್ತದೆಂಬ ನಂಬಿಕೆ ಜನಪದರಲ್ಲಿದೆ. ಹೂವಿನ ಪರಿಮಳವನ್ನು ಸರ್ಪ ಅಘ್ರಾಣಿಸುತ್ತಿರುತ್ತದೆಂದು ಪ್ರತೀತಿ. ಸರ್ಪ ಮಿಲನದ ದೃಶ್ಯವನ್ನು ಯಾರೂ ನೋಡಬಾರದೆಂದು, ನೋಡಿದಲ್ಲಿ ಸರ್ಪದೋಷ ಪ್ರಾಪ್ತಿಯಾಗುತ್ತದೆಂದು ಭಾವಿಸಲಾಗುತ್ತದೆ. ಇದೆಲ್ಲವೂ ಜನಪದರ ಬದುಕಲ್ಲಿ 'ನಾಗ' ಅಥವಾ ಸರ್ಪದ ಕುರಿತಾದ ಪ್ರಚಲಿತ ನಂಬಿಕೆಗಳೇ ಹೊರತು ವಾಸ್ತವವಲ್ಲ.

ಸಂತಾನ ಹೀನತೆ ಕಂಡು ಬಂದಾಗ 'ನಾಗ ಶಿಲಾ' ಪ್ರತಿಷ್ಠೆ ವಿದ್ಯುಕ್ತವಾಗಿ ನೆರವೇರಿಸುತ್ತಾರೆ. ಇದರಿಂದ ಮುಂದೆ ಸಂತಾನ ಭಾಗ್ಯ ಲಭ್ಯವಾಗುತ್ತದೆಂಬ ಭಾವನೆಯಿದೆ. ಈ ರೀತಿ ಮುಂದೆ ಜನಿಸಿದ ಮಕ್ಕಳಿಗೆ ನಾಗಸಂಬಂಧಿಯಾದ ಹೆಸರುಗಳನ್ನು ಇಡುವುದು ವಾಡಿಕೆ. ಕರಾವಳಿಯ ಈ ಭೂ ಪ್ರದೇಶಗಳನ್ನು 'ಪರಶುರಾಮ ಸೃಷ್ಟಿ' ಎಂದು ಕರೆಯುಲಾಗುತ್ತದೆ. ಈ ಪ್ರದೇಶದಲ್ಲಿ ಸರ್ಪವನ್ನು ಯಾವ ಕಾರಣಕ್ಕೂ ಕೊಲ್ಲಬಾರದೆಂಬ ಪ್ರತೀತಿ ಇದೆ. ಇದರಂತೆ ಸರ್ಪಕ್ಕೆ ಯಾವುದೇ ರೀತಿಯ ಉಪಟಳವಾಗಲಿ ಅದನ್ನು ಕೊಲ್ಲುವುದಾಗಲೀ ಯಾವ ಸಮುದಾಯದವರು ಮಾಡುತ್ತಿರುವುದು ಕಂಡು ಬರುವುದಿಲ್ಲ. ಹಳ್ಳಿಗಳಲ್ಲಿ ಮನೆ ಅಥವಾ ದನದ 'ಕಟ್ಟಿಗೆ'ಗಳಿಗೆಕಾಳಿಂಗ ಪ್ರವೇಶಿಸಿದರೆ ಅಪಶಕುನವೆಂದು ಭಾವಿಸುತ್ತಾರೆ. ಪರಿಣಾಮವಾಗಿ ಮುಂದೆ ವಿದ್ಯುಕ್ತ ರೀತಿಯಲ್ಲಿ 'ಗೃಹ ಶಾಂತಿ' ನೆರವೇರಿಸುತ್ತಾರೆ.

ಕೆಲವು ಜನಪದ ಆಚರಣೆಗಳಲ್ಲಿ ನಾಗಲಾಂಛನವನ್ನು ಹೋಲುವ ಆಭರಣಗಳನ್ನು ಧರಿಸುವ ವಾಡಿಕೆಯಿದೆ. ಪ್ರಧಾನವಾಗಿ 'ಭೂತ ಕೋಲ' ದಲ್ಲಿ ಸರ್ಪನ ಹೆಡೆಯನ್ನು ಹೋಲುವ ವಿವಿಧ ಆಕೃತಿಯ ಆಭರಣಗಳನ್ನು ಧರಿಸಲಾಗುತ್ತದೆ. ನಾಗ ಬೀದಿಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಮಾಡುವುದಿಲ್ಲ. ಅಂಥ ಪ್ರದೇಶಗಳಲ್ಲಿ ಕಟ್ಟಡ ಕಟ್ಟುವ ಅಥವಾ ಇನ್ನಾವ ಕಾರ್ಯ ಕೈಗೊಳ್ಳುವ ಸಂದರ್ಭ ಬಂದಾಗ ನಾಗದರ್ಶನದ ಮೂಲಕ ಅಪ್ಪಣೆ ಪಡೆದು ಕಾರ್ಯಕ್ಕೆಗೊಳ್ಳಲಾಗುತ್ತದೆ. ಹೀಗೆ ನಾಗ ಅಥವಾ ಸರ್ಪ ತುಳುವರ ಬದುಕಲ್ಲಿ ಪೂಜನೀಯ ಸ್ಥಾನ ಪಡೆದುಕೊಂಡಿದೆ.

ಟಿಪ್ಪಣಿಗಳು

೦೧. Dr. Sriniwas Rao, 1973, Karnataka Inscription Services, volume, vi. page-53

೦೨. ಗೋವಿಂದ ಪೈ, ೧೯೪೮, ತುಳುನಾಡು ಪೂರ್ವಸ್ಮೃತಿ

೦೩. ಗುರುರಾಜ ಭಟ್ಟ, ೧೯೬೩, ತುಳುನಾಡು ಸಾಮಾಜಿಕ ಚರಿತ್ರೆಯಲ್ಲಿ ಒಂದು ಸಂಶೋಧನಾತ್ಮಕ ವಿವೇಚನೆ ಉಡುಪಿ ಪು-೬೮

೦೪. ನಾವಡ ಎ.ವಿ. ಗಾಯತ್ರಿ ನಾವಡ, ೧೯೯೨, ಕಾಡ್ಯನಾಟ ಪಠ್ಯ ಮತ್ತು ಪ್ರದರ್ಶನ ಪ್ರಾದೇಶಿಕ ಜಾನಪದ ಪು-೨

೦೫. ಗುರುರಾಜ ಭಟ್ಟ ಪಿ. ೧೯೭೭, ತುಳುನಾಡಿನ ನಾಗಮಂಡಲ, ಪುಟ-೫

೦೬. ಪ್ರೊ. ಬೋರಲಿಂಗಯ್ಯ ಹಿ.ಚಿ. (ಸಂ) ೧೯೯೬, ಕರ್ನಾಟಕ ಜಾನಪದ ಕಲೆಗಳ ಕೋಶ, ಪು-೪೯

೦೭. ಮೂಲ್ಕಿಯ ಸಮೀಪ ವಿರುವ 'ಕೊಡತ್ತೂರು ಅಡ್ಕಣಗುತ್ತು' ಎಂಬಲ್ಲಿ ಬಾವಿ ಮತ್ತು ಬಾವಿಯ ನೀರನ್ನು ನಾಗನೆಂದು ಸಂಕಲ್ಪಿಸಿ ಪೂಜಿಸುವ ಪದ್ಧತಿ ಇದೆ. ಇಲ್ಲಿಯ ಕೆಲವು ವಿಶ್ವಕರ್ಮ ಬ್ರಾಹ್ಮಣರು ಈ ಬಾವಿಯನ್ನೇ ತಮ್ಮ ಮೂಲ ಸ್ಥಾನವೆಂದು ಪರಿಭಾವಿಸಿ ಪೂಜಿಸುವ ಸಂಪ್ರದಾಯ ಕಂಡು ಬಂದಿದೆ.

೦೮. ಪ್ರೊ. ಬೋರಲಿಂಗಯ್ಯ ಹಿ.ಚಿ. (ಸಂ) ೧೯೯೬, ಕರ್ನಾಟಕ ಜಾನಪದ ಕಲೆಗಳ ಕೋಶ ಪು-೪೯

೦೯. ಪೀಟರ್ ಜೆ ಕ್ಲಾಸ್, ೧೯೮೭, (ಅನು) ಎ.ವಿ. ನಾವಡ, ಸುಭಾಶ್ಚಂದ್ರ, ಪು-೧೨೫

೧೦. ನಾವಡ ಎ.ವಿ. ಗಾಯತ್ರಿ ನಾವಡ, ೧೯೯೨, ಕಾಡ್ಯನಾಟ ಪುಟ-೩

೧೧. ಅದೇ ಪುಟ-೭

೧೨. ಇಂದಿರಾ ಹೆಗ್ಗಡೆ, ೨೦೦೪, ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಪುಟ-೪೩೩

೧೩. ಪ್ರೊ. ಬೋರಲಿಂಗಯ್ಯ ಹಿ.ಚಿ. ೨೦೦೦, ಬುಡಕಟ್ಟು ದೈವಾರಾಧನೆ, ಪು-೭

೧೪. ಪ್ರಭಾಕರ ಆಚಾರ್. ಕೆ. ವಿದ್ಯಾ ಎಸ್, ನಾಯಕ್, ೨೦೦೬, ದಕ್ಷಿಣ ಕನ್ನಡದ ದೇವರ ಕಾಡುಗಳು, ನಾಗಬನಗಳು ಮತ್ತು ಭೂತ ಸ್ಥಾನಗಳು, ಪು-೯೮

೧೫. ಪ್ರತಿಮೆಯನ್ನು ನೀರಲ್ಲಿ ಮುಳುಗಿ ಇಡುವುದರಿಂದ, ಈ ಸಂದರ್ಭದಲ್ಲಿ ಪ್ರತಿಮೆಯಲ್ಲಿರಬಹುದಾದ ಬಿರುಕು, ಭಗ್ನತೆ ಗಮನಕ್ಕೆ ಒಂದಲ್ಲ ಪ್ರತಿಮೆಯನ್ನು ಬದಲಾಯಿಸುವ ಅವಕಾಶವಿದೆ.

೧೬. ಪಂಚಮೃತ್ತಿಕೆಗಳೆಂದರೆ ಪರ್ವತದ ಮಣ್ಣು, ಸಮುದ್ರದ ಮಣ್ಣು, ಹುತ್ತದ ಮಣ್ಣು, ಕುದುರೆ ಲಾಯದ ಮಣ್ಣು, ಮತ್ತು ಆನೆಲಾಯದ ಮಣ್ಣು.

೧೭. ಶ್ರೀ ರಾಧಾಕೃಷ್ಣ ಕಲ್ಯಾಣ್‌ಪುರ್ (ಸಂ) ೨೦೦೧, ರಾಮಮೂರ್ತಿ ತಂತ್ರಿ, ಎಸ್. ಶ್ರೀ ಶರವಣ ಭವ, ಪುಟ-೮೩

೧೮. ರಾಧಾಕೃಷ್ಣ ಕಲ್ಯಾಣ್‌ಪುರ್ (ಸಂ) ೨೦೦೧, ಶ್ರೀಕಾಂತ ಸಾಮಗ ಶ್ರೀ ಶರವಣ ಭವ, ಪುಟ-೭೯

೧೯. ಗೋಪಾಲ ಭಟ್ಟ ಕೆ.ವಿ. ಅಶೋಕ ಭಟ್ಟ, ೨೦೦೩, ನಾಗದೇವರ ಚರಿತ್ರೆ ಮತ್ತು ಪ್ರಬಂಧಗಳ ಸಂಕಲನ, ಪುಟ-೨೯

೨೦. ರಾಧಾಕೃಷ್ಣ ಕಲ್ಯಾಣ್‌ಪುರ್ (ಸಂ) ೨೦೦೧, ರಾಮಮೂರ್ತಿ ತಂತ್ರಿ ಶ್ರೀ ಶರವಣ ಭವ ಪುಟ-೮೩

೨೧. ಗೋಪಾಲ ಭಟ್ಟ ಕೆ.ವಿ. ಅಶೋಕ ಭಟ್ಟ ೨೦೦೩, ನಾಗದೇವರ ಚರಿತ್ರೆ ಮತ್ತು ಪ್ರಬಂಧಗಳ ಸಂಕಲನ ಪುಟ-೩೩

೨೨. ಡಾ. ಪುರುಷೋತ್ತಮ ಬಿಳಿಮಲೆ, ೧೯೯೦, ಕರಾವಳಿ ಜಾನಪದ, ಪುಟ-೪೬

೨೩. ಶಿವರಾಮ ಕಾರಂತ, ೧೯೫೦, ಜಾನಪದ ಕಲೆಗಳು

೨೪. ಶಿವರಾಮ ಕಾರಂತ, ೧೯೬೩, ಯಕ್ಷಗಾನ ಬಯಲಾಟ, ಪುಟ-೧೧೧

೨೫. ನಾವಡ ಎ.ವಿ. ೧೯೮೫, ವೈದ್ಯರ ಹಾಡುಗಳು,(ಪ್ರಸ್ತಾವನೆ-viii)

೨೬. ಉಪಾಧ್ಯಾಯ ಕೆ.ಎಸ್. ೧೯೯೪, ಜಾನಪದ ಕಲೆ ಬದುಕು, ಪುಟ-೪೭

೨೭. ನಾವಡ ಎ.ವಿ, ೧೯೮೫, ವೈದ್ಯರ ಹಾಡುಗಳು, (ಪ್ರಸ್ತಾವನೆ-ix-x)

೨೮. ರಾಧಾಕೃಷ್ಣ ಕಲ್ಯಾಣಪುರ್ (ಸಂ) ೨೦೦೧, ರಮಾನಾಥ ಆಚಾರ್ಯ, ಶರವಣಬವ, ಪುಟ-೯೨

೨೯. ಶಿವರಾಮ ಕಾರಂತ, ೧೯೬೩, ಯಕ್ಷಗಾನ ಬಯಲಾಟ ಹರ್ಷ ಪ್ರಕಟಣಾಲಯ ಪುತ್ತೂರು ಪುಟ-೧೦೨

೩೦. ನಾವಡ ಎ.ವಿ. ಗಾಯತ್ರಿ ನಾವಡ ೧೯೯೨, ಕಾವ್ಯನಾಟ, ಪಠ್ಯ ಮತ್ತು ಪ್ರದರ್ಶನ, ವಿವೇಕ ರೈ ಬಿ.ಎ. ಪ್ರಸ್ತಾವನೆ-೮

೩೧. ಅದೇ ಪುಟ-೧೦

೩೨. ಮಾಹಿತಿದಾರ ಸಣ್ಣು ಹರಿಜನ, ಒಳಗುದ್ದೆ, ಶಿವಪುರ ಕಾರ್ಕಳ ತಾಲೂಕು.

೩೩. ಪಾದೆಕಲ್ಲು ವಿಷ್ಣು ಭಟ್ಟ (ಸಂ) ೧೯೯೩, ಸ್ಕಂದ ವೈಭವ, ಪುಟ-೮೬

೩೪. ಅದೇ ಪುಟ-೮೮

೩೫. ಅದೇ ಪು-೮೫

೩೬. ನಾವಡ ಎ.ವಿ. (ಸಂ) ೧೯೭೭, ಸುಬ್ರಹ್ಮಣ್ಯ ಕೆದ್ಲಾಯ 'ಕುಂದದರ್ಶನ' ಪು-೪೨

೩೭. ಕುಂಡಂತಾಯ, ಕೆ.ಎಲ್. ೨೦೦೩, ನಂಬಿಕೆ ನಡವಳಿಕೆ

* * * * *

ಅಧ್ಯಾಯ - ೭

ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ ಸಾಂಸ್ಕೃತಿಕ ಸಬಂಧಗಳು

ಕೇರಳ ಮತ್ತು ಕರಾವಳಿ ಕರ್ನಾಟಕದ ಆದರಲ್ಲೂ ಪ್ರಮುಖವಾಗಿ ತುಳುನಾಡಿನ ನಾಗಾರಾಧನೆಯ ವಿವಿಧ ಮುಖಗಳನ್ನು ಅಧ್ಯಯನದ ಮುಖೇನ ಗಮನಿಸಲಾಗಿದೆ. ನಾಗಾರಾಧನೆಯನ್ನು ವಿಭಿನ್ನ ಸ್ತರಗಳಲ್ಲಿ ವೈವಿಧ್ಯ, ಪೂರ್ಣವಾಗಿ ಆಚರಿಸುತ್ತಿರುವುದು ಕಂಡುಬಂದಿದೆ. ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಸಮುದಾಯದಿಂದ ಸಮುದಾಯಕ್ಕೆ ವ್ಯಾತ್ಯಾಸಗೊಂಡಿರುವುದನ್ನು ಕ್ಷೇತ್ರಕಾರ್ಯದ ಮೂಲಕ ತಿಳಿಯಲಾಗಿದೆ. ಆಡಳಿತಾತ್ಮಕವಾಗಿ ಪ್ರತ್ಯೇಕವಾಗಿರುವ ಈ ಎರಡು ಭೂಪ್ರದೇಶಗಳಲ್ಲಿ ನಾಗ ಅಥವಾ ಸರ್ಪ ಅತೀ ಪ್ರಭಾವಿ ದೈವವಾಗಿರುವುದು ತಿಳಿದುಬಂದಿದೆ. ನಾಗಾರಾಧನೆಯನ್ನು ವಿವಿಧ ಸ್ವರೂಪಗಳಲ್ಲಿ ಆಚರಿಸುತ್ತಿದ್ದರೂ ಪರಸ್ಪರ ಆಚರಣೆಗಳಲ್ಲಿ ಸಾದೃಶ್ಯ ಸಂಬಂಧವಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗುರುತಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯ ಆಚರಣೆಯಲ್ಲಿ ಕಂಡುಬಂದಿರುವ ಸಾದೃಶ್ಯ ಸಂಬಂಧಗಳನ್ನು ವಿಶ್ಲೇಷಿಸಲಾಗಿದೆ. ಆಚರಣೆಯ ಸ್ವರೂಪ ಭಾಗವಹಿಸುವ ಜನವರ್ಗ ಸಮುದಾಯಿಕ ಮತ್ತು ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಮೇಲೆ ನಾಗಾರಾಧನೆಯ ಪರಿಣಾಮಗಳು, ನಾಗಾರಾಧನೆಯ ಸಾಂಸ್ಕೃತಿಕ ಸ್ಥಿತ್ಯಂತರಗಳು, ಇತ್ಯಾದಿಗಳನ್ನು ಚರ್ಚಿಸಲಾಗಿದೆ. ಎರಡೂ ಭೂಪ್ರದೇಶಗಳನ್ನು ಕೇಂದ್ರವಾಗಿಟ್ಟುಕೊಂಡು ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

೭.೧ ಆಚರಣೆಯ ಸ್ವರೂಪ

ಸಮಗ್ರವಾಗಿ ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯನ್ನು ಗಮನಿಸುವಾಗ ಇಲ್ಲಿ ಕಂಡುಬರುವ ಮುಖ್ಯ ಅಂಶ ಎಂದರೆ ವೈದಿಕ ಮತ್ತು ಅವೈದಿಕ ಎಂಬ ಕಲ್ಪನೆಗಳು. ಆರಾಧನೆಯ ಸ್ವರೂಪ ಪ್ರತ್ಯೇಕವಾಗಿದ್ದರೂ ಇಂದು ನಾಗ ಯಾವುದೇ ನಿರ್ದಿಷ್ಟ ಪಂಗಡಕ್ಕೆ ಸಂಬಂಧಿಸಿದುದಾಗಿರದೆ ಒಂದು ಪ್ರದೇಶಕ್ಕೆ ಸಂಬಂಧಿಸಿದ ಆರಾಧನ ಸ್ವರೂಪಿಯಾಗಿ ಕಂಡುಬರುತ್ತದೆ. ಆದರೆ ಪ್ರಾದೇಶಿಕ ಹಿನ್ನೆಲೆಯಲ್ಲಿ ವಿಭಿನ್ನ ಸ್ವರೂಪದಲ್ಲಿ ಆರಾಧಿಸಲ್ಪಡುತ್ತಿರುವುದು ವೈಶಿಷ್ಟ್ಯವೇ ಸರಿ. ಈ ರೀತಿಯ ಎರಡು ಪ್ರಕ್ರಿಯೆಗಳಲ್ಲಿ ಆರಾಧಿಸಲ್ಪಡುವ ಆರಾಧನಾ ಮನೋಭಾವವು ಹಲವು ರಂಗಗಳಲ್ಲಿ ಕಂಡು ಬರುತ್ತದೆ. ತೊಡುವ ಆಭರಣಗಳು ಜನಪದ ರಂಗಕಲೆಗಳಲ್ಲಿ, ವೇಷಭೂಷಣಗಳಲ್ಲಿ, ಶಿಲ್ಪಕಲೆ, ದೇವಾಲಯ ವಾಸ್ತು, ಇಲ್ಲೆಲ್ಲ ನಾಗಾರಾಧನೆಯ ಪ್ರಭಾವ ಮತ್ತು ಮಹತ್ವ ಎದ್ದು ಕಾಣುತ್ತದೆ. ಈ ಎರಡು

ಪ್ರದೇಶಗಳ ಜನ ಜೀವನದ ಮನೋಭಾವವು ಒಂದಿಲ್ಲೊಂದು ರೀತಿಯಲ್ಲಿ ನಾಗನೊಂದಿಗೆ ಸಂಬಂಧ ಬೆಸೆದುಕೊಂಡಿರುವುದನ್ನು ಗಮನಿಸಬಹುದು. ಸಾಂಸ್ಕೃತಿಕವಾಗಿ, ಆಡಳಿತಾತ್ಮಕವಾಗಿ ಪ್ರತ್ಯೇಕವಾಗಿರುವ ಈ ಪ್ರದೇಶಗಳ ಆರಾಧನೆಯ ಸ್ವರೂಪಗಳನ್ನು ಅವಲೋಕಿಸುವಾಗಿ ತೌಲನಿಕವಾಗಿ ಕಂಡುಬರುವ ಹಲವಾರು ಅಂಶಗಳು ಗಮನ ಸೆಳೆಯುತ್ತವೆ.

ಪ್ರಪ್ರಥಮವಾಗಿ ನಾಗಾರಾಧೆಯನ್ನು ಯಾವ ಉದ್ದೇಶವನ್ನಿಟ್ಟುಕೊಂಡು ಆಚರಿಸುತ್ತಾರೆ. ಎಂಬುದು ಚರ್ಚಿಸಬೇಕಾದ ವಿಚಾರ, ವ್ಯಕ್ತಿಯ ಅಥವಾ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ವಯಕ್ತಿಕ ನೆಲೆಯಲ್ಲಿ ಮತ್ತು ಸಾಮೂಹಿಕ ನೆಲೆಯಲ್ಲಿ ಆಚರಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬರುವ ವಿಚಾರ. ಆದರೆ ಇದರ ಆಳಕ್ಕೆ ಇಳಿದು ನೋಡಿದಾಗ ಪರಂಪರಾಗತವಾಗಿ ಆಚರಿಸಿಕೊಂಡು ಬರುತ್ತಿದ್ದ ನಂಬಿಕೆ ಸಂಪ್ರದಾಯಗಳನ್ನು ಮುಂದುರೆಸಿಕೊಂಡು ಬರಲಾಗುತ್ತಿದ್ದು, ಇದರಿಂದ ಮುಂದೆ ಶ್ರೇಯಸ್ಸಾಗುತ್ತದೆಂಬ ಬಲವಾದ ನಂಬಿಕೆಯೇ ಕಾರಣವಾಗಿದೆ. ಈ ನಂಬಿಕೆಯನ್ನು ನಾಗಾರಾಧನೆಯ ವಿವಿಧ ಸ್ವರೂಪಗಳ ಆಚರಣೆಗಳ ಮೂಲಕ ನಡೆಸಿಕೊಳ್ಳಲಾಗುತ್ತದೆ. ಪಿತೃಪೂಜೆ, ವೃಕ್ಷಪೂಜೆ, ನದಿ, ಪರ್ವತಗಳ ಪೂಜೆಗಳೆಲ್ಲವೂ ಈ ಹಿನ್ನೆಲೆಯಲ್ಲಿಯೇ ಬಂದಿರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ನಡೆದುಬರುತ್ತಿರುವ ಆಚರಣೆಗಳೆಲ್ಲವೂ ಪ್ರಾದೇಶಿಕವಾಗಿ ವಿಭಿನ್ನ ರೀತಿಯಲ್ಲಿ ಕಂಡುಬರುತ್ತವೆ.

ಕೇರಳ ಮತ್ತು ಕರಾವಳಿ ಕರ್ನಾಟಕದಲ್ಲಿ ವೈದಿಕ ರೂಪದ ಆಚರಣೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಗಮನಿಸಬಹುದು. ವಿಶೇಷವಾಗಿ ತುಳುನಾಡಲ್ಲಿ ವೈದಿಕ ಸಂಸ್ಕೃತಿಯ ದಟ್ಟವಾದ ಪ್ರಭಾವ ಕಂಡು ಬರುತ್ತದೆ. ಇಲ್ಲಿ ನಾಗನಿಗೆ ಅತೀ ಪ್ರಾಮುಖ್ಯತೆ ಕೊಟ್ಟಂತೆ ಕಂಡುಬರುತ್ತದೆ, ಜೊತೆಗೆ ಇಂದು ವೈದಿಕ ಎಂದು ಕರೆಯಲ್ಪಡುವ ಆಚರಣೆಗಳೆಲ್ಲವೂ ಮೂಲ ಸ್ವರೂಪದಲ್ಲಿ ಕಂಡುಬರುವುದಿಲ್ಲ. ಅದು ತನ್ನದಲ್ಲದ ಎಷ್ಟೋ ವಿಷಯಗಳನ್ನು ಎರವಲು ಪಡೆದುಕೊಂಡಿರುವಂತೆ ತೋರುತ್ತದೆ. ಇವೆಲ್ಲವೂ ಕಾಲಾಂತರದಲ್ಲಿ ಆಗಿರುವ ಸಾಂಸ್ಕೃತಿಕ ಸ್ಥಿತ್ಯಂತರವೇ ಆಗಿರಬಹುದು. ವೈದಿಕ ಧರ್ಮದ ಸ್ಥಿತ್ಯಂತರ ಅಥವಾ ಬದಲಾವಣೆಯ ಈ ಪ್ರಕ್ರಿಯೆ ಜನಪದ ಸಂಸ್ಕೃತಿಯಲ್ಲಿಯೂ ಇಂದು ನಡೆಯುತ್ತಿರುವುದನ್ನು ಗಮನಿಸಬಹುದು. ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತೆ ತುಳುನಾಡನ್ನು ಗಮನಿಸುವಾಗ ಹಿಂದೆ ಜನಪದ ದೈವವಾಗಿರುವ ಕಾಡ್ಯನಿಗೆ ವೈದಿಕರಿಂದ 'ಬ್ರಹ್ಮಕಲಶಾದಿ'ಗಳನ್ನು ನಡೆಸುವ ಸಂಪ್ರದಾಯ ಇರಲಿಲ್ಲ. ಆದರೆ ಈಗ ಅದರಲ್ಲೂ ವೈದಿಕ ಸಂಸ್ಕೃತಿಯ ಪ್ರವೇಶ ಆಗಿದೆ. ನೂತನ ಕಾಡ್ಯನ ಮನೆಯ ಪ್ರತಿಷ್ಠೆಯ ಸಂದರ್ಭದಲ್ಲಿ ವೈದಿಕರಿಂದ ಪ್ರತಿಷ್ಠಾದಿ ಹವನಗಳು ಬ್ರಹ್ಮಕಲಶಾದಿ ಪ್ರಕ್ರಿಯೆಗಳು ನಡೆಯುತ್ತವೆ. ಇದು ಇತ್ತೀಚಿನ ಬೆಳವಣಿಗೆ.

ತುಳುನಾಡಲ್ಲಿ ನಾಗಾರಾಧನೆಯ ಮೇಲೆ ವೈದಿಕ ಧರ್ಮದ ಬಿಗಿ ಹಿಡಿತವಿರುವಂತೆ ಕೇರಳದಲ್ಲಿ ನಾಗದೇವಾಲಯಗಳು ವೈದಿಕ ಸಂಸ್ಕೃತಿಯ ಹಿಡಿತದಲ್ಲಿವೆ. ಈ ಪ್ರದೇಶವು ವೇಗವಾಗಿ ಬೆಳೆಯುತ್ತಿರುವುದರೊಂದಿಗೆ ಅತಿಯಾದ ಜನಸಂಖ್ಯೆಯ ಹಿನ್ನೆಲೆಯಲ್ಲಿ ನಾಗಕಾವುಗಳು ವಿರಳವಾಗುತ್ತಿರುವುದು ಕಂಡುಬರುತ್ತಿದೆ. ನಾಗಕಾವುಗಳನ್ನು ತೆರವುಗೊಳಿಸಿ ಸ್ಥಳೀಯ ನಾಗದೇವಾಲಯಗಳಿಗೆ ವರ್ಗಾಯಿಸಲಾಗುತ್ತದೆ. ಇದರೊಂದಿಗೆ ಕುಟುಂಬವಲಯದಲ್ಲಿದ್ದ ನಾಗಕಾವು ಅಥವಾ ನಾಗಬನಗಳ ಕಲ್ಪನೆಯು ನಾಗದೇವಾಲಯಕ್ಕೆ ವರ್ಗಾಯಿಸಲ್ಪಡುತ್ತದೆ. ಇಲ್ಲಿರುವ

ನಾಗದೇವಾಲಯಗಳು ಪ್ರತ್ಯೇಕ ಕುಟುಂಬಗಳ ಹಿಡಿತದಲ್ಲಿರುವುದರಿಂದ ಅದು ಆರಾಧನೆಯ ಹೆಸರಿನಲ್ಲಿ ಏಕಸ್ವಾಮ್ಯತೆಗೆ ದಾರಿ ಮಾಡಿಕೊಡುತ್ತವೆ. ಆದರೆ ತುಳುನಾಡಿನಲ್ಲಿ ನಾಗಬನಗಳನ್ನು ಉಳಿಸಿಕೊಂಡು ಬರಲಾಗುತ್ತಿದ್ದು ಬನಗಳ ಸ್ವರೂಗಳಲ್ಲಿ ಸ್ಥಿತ್ಯಂತರ ಗೊಳಿಸುವಂಥ ಬೆಳವಣಿಗೆಗಳು ನಡೆಯುತ್ತಿವೆ. ನಾಗಬನಗಳಲ್ಲಿರುವ ವೃಕ್ಷಗಳನ್ನು 'ನಾಗನಿಂದ ಅಪ್ಪಣೆ ಪಡೆದು' ಎಂಬ ವಿಧ್ಯುಕ್ತ ಕ್ರಿಯೆಯೊಂದಿಗೆ ನಿರ್ಮೂಲನೆಗೊಳಿಸಲಾಗುತ್ತದೆ. ನಾಗಬನಗಳಲ್ಲಿ ಪುರಾತನದಿಂದಲೂ ಹಲವಾರು ರೀತಿಯ ಬೆಲೆ ಬಾಳುವ ವೃಕ್ಷಗಳನ್ನು ಉಳಿಸಿಕೊಂಡು ಬರಲಾಗುತ್ತಿತ್ತು. ನಾಗಬನದ ಜೀರ್ಣೋದ್ಧಾರದ ನೆಪದಲ್ಲಿ ಅಲ್ಲಿರುವ ಮರಗಳನ್ನು ಕಡಿಯಲಾಗುತ್ತದೆ. ಮರ ಕಡಿಯಬೇಕಾದರೆ ನಾಗನಲ್ಲಿ ದರ್ಶನದ ಮುಖೇನ ಒಪ್ಪಿಗೆ ಪಡೆಯಬೇಕಾಗುತ್ತದೆ. ಒಪ್ಪಿಗೆ ನೀಡುವ ಕಾರ್ಯವನ್ನು ದರ್ಶನಪಾತ್ರಿಗಳ ಮೂಲಕ ನಡೆಯಲಾಗುತ್ತದೆ. ಮುಂದೆ 'ಚಲನೆ' ಎಂಬ ತಾತ್ಕಾಲಿಕ ಕ್ರಿಯೆಯ ಮೂಲಕ ನಾಗಪ್ರತಿಮೆಗಳನ್ನು ಸ್ಥಳಾಂತರಿಸಿ ಅಲ್ಲಿರುವ ವೃಕ್ಷಗಳನ್ನು ಕಡಿದು ಸಿಮೆಂಟಿನ 'ಕಾಂಕ್ರೀಟ್ ಬನ್'ಗಳನ್ನು ನಿರ್ಮಿಸಿ ಮತ್ತೆ ಪ್ರತಿಮೆಗಳನ್ನು ಅದರಲ್ಲಿ ವಿಧಿವತ್ತಾಗಿ ಪ್ರತಿಷ್ಠಾಪಿಸಲಾಗುತ್ತದೆ. ಜೀರ್ಣೋದ್ಧಾರದ ಹೆಸರಲ್ಲಿ ನಡೆಯುವ ಈ ಕ್ರಿಯೆಯಲ್ಲಿ ಪ್ರಭಾವಿ ವ್ಯಕ್ತಿಗಳ 'ಪ್ರಭಾವ' ಬೀರುವುದನ್ನು ಗಮನಿಸಬಹುದು. ಅರ್ಥಾತ್ ತಮ್ಮ ಪ್ರಭಾವದಿಂದ ನಾಗನನ್ನು ತಮಗೆ ಇಷ್ಟಬಂದಂತೆ ರೂಪಿಸಿಕೊಳ್ಳುವ ಅವಕಾಶ ಇದೆ ಎಂದಾಯಿತು.

ಇದೇ ಧಾರ್ಮಿಕ ವಿಚಾರವನ್ನು ಆಗಮ ದೇವಾಲಯಗಳಿಗೆ ಹೋಲಿಸಿದರೆ ಅಲ್ಲಿ ಜೀರ್ಣೋದ್ಧಾರಕ್ಕೆ ಅವಕಾಶವಿದೆಯೇ ಹೊರತು, ನೂರಾರು ವರ್ಷಗಳಿಂದ ಬಂದಿರುವ ಸಂಬಂಧಿಸಿದ ದೇವಾಲಯದ 'ಮೂಲ ವಾಸ್ತು'ವನ್ನು ಬದಲಾಯಿಸುವ ಅವಕಾಶವಿಲ್ಲ. ಆದರೆ ನಾಗಬನಗಳಿಗಾಗಿ ಪಾರಂಪರಿಕವಾಗಿ ನಡೆದು ಬಂದಿರುವ ಪ್ರಾಕೃತಿಕ ವ್ಯವಸ್ಥೆಯನ್ನೇ ಬದಲಾಯಿಸಿ ನವೀನ ರೀತಿಯ ವಾಸ್ತುವೊಂದನ್ನು ಸ್ವೀಕರಿಸುತ್ತಿರುವುದು ಕಂಡು ಬರುತ್ತದೆ. ಈ ಪ್ರಕ್ರಿಯೆ ಕೇರಳದಲ್ಲಿ ಎಷ್ಟೋ ವರ್ಷಗಳ ಹಿಂದೇನೇ ನಡೆದಿರುವುದನ್ನು ಗಮನಿಸಬಹುದು. ಕೇರಳದ ಈ ಗಾಳಿಯು ಕರಾವಳಿಗೂ ಇಲ್ಲಿಗೂ ಬೀಸುವುದರೊಂದಿಗೆ ಇಲ್ಲಿಯ ಮೂಲ ಸಂಸ್ಕೃತಿಯೂ ಸ್ವರೂಪ ಕಳೆದುಕೊಳ್ಳುತ್ತಿದೆ. ಸೂಕ್ಷ್ಮವಾಗಿ ಗಮನಿಸುವಾಗ 'ನಾಗಬನ' ಎಂಬ ಹೆಸರೇ ಸೂಚಿಸುವಂತೆ ನಾಗ ಪ್ರತಿಮೆಗಳು ಸಸ್ಯ ಸಂಕುಲಗಳಿಂದ ಆವೃತವಾಗಿರುವ ನಿರ್ಬಂದಿತ ಪ್ರದೇಶದಲ್ಲಿರಬೇಕಾಗಿದೆ. ಇದು ಆರಾಧನೆಯ ಹಿನ್ನೆಲೆಯಲ್ಲಿ ಸರ್ಪಗಳಿಗೆ ಕಾಯ್ದಿರಿಸಿದ ನಿರ್ಬಂದಿತ ಪ್ರದೇಶ. ಆದರೆ ಆರಾಧನೆಯ ಹಿಂದಿರುವ ಮೂಲ ಆಶಯವನ್ನು ಈ ಎರಡೂ ಪ್ರದೇಶಗಳ ಸಮುದಾಯದವರು ಮರೆತಂತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

ಕೇರಳದ ನಾಗಾರಾಧನೆಯ ಸ್ವರೂಪದಲ್ಲಿ ನಾಗದೇವಾಲಯಗಳ ಪಾತ್ರ ಪ್ರಧಾನವಾಗಿ ಕಂಡುಬರುತ್ತದೆ. ಪ್ರತಿಯೊಂದು ನಾಗ ದೇವಾಲಯಕ್ಕೂ ತನ್ನದೇ ಆದ ಐತಿಹ್ಯ, ಹಿನ್ನೆಲೆ, ಸಂಪ್ರದಾಯ ಪ್ರಚಲಿತದಲ್ಲಿದೆ. ಇವೆಲ್ಲವೂ ಪುರಾಣ ಪುರುಷ ಪರಶುರಾಮನಿಂದ ಪ್ರತಿಷ್ಠಾಪಿಸಲ್ಪಟ್ಟವು ಎಂಬ ಪಾರಂಪರಿಕ ನಂಬಿಕೆಯೂ ಇದೆ. ಪರಶುರಾಮನ ಸೃಷ್ಟಿಯ ಕುರಿತಾದ ಈ ನಂಬಿಕೆ ತುಳುನಾಡಿನ ನಾಗಾರಾಧನೆಯಲ್ಲಿ ಕಂಡುಬರುತ್ತದೆ. ಆದರೆ ಅವನಿಂದ ಸ್ಥಾಪಿಸಲ್ಪಟ್ಟದ್ದೆಂದು ಭಾವಿಸಲಾಗುವ ನಿರ್ದಿಷ್ಟವಾದ ನಾಗದೇವಾಲಯಗಳು ಕಂಡುಬಂದಿಲ್ಲ. ಕೇರಳದ ಈ ನಾಗದೇವಾಲಯಗಳಲ್ಲಿ ಪ್ರಾಚೀನ ಕಾಲದಿಂದ ನಡೆದು ಬಂದಿರುವಂತೆ ಸಂಪ್ರದಾಯ ಆಚರಣೆಗಳನ್ನು ಮೂಲ

ಪರಂಪರೆಗೆ ಧಕ್ಕೆ ಬಾರದಂತೆ ಮುಂದುವರಿಸಿಕೊಂಡು ಬರಲಾಗುತ್ತಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಪರಂಪರೆಗಳು ವಂಶ ಪಾರಂಪರ್ಯವಾಗಿ ಮುಂದುವರೆದು ಹೋಗುತ್ತವೆಂಬ ಕಲ್ಪನೆ ಈ ಕುಟುಂಬವಲಯಗಳಲ್ಲಿ ಕಂಡುಬರುತ್ತದೆ. ಇದರ ಹಿಂದಿರುವ ವಾಸ್ತವತೆ ಏನು ಎಂಬುದು ಚಿಂತಿಸಬೇಕಾದ ವಿಚಾರ. ನಾಗಾರಾಧನೆಯ ಮೇಲಿರುವ ತಮ್ಮ ಹಿಡಿತವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಕಲ್ಪನೆಗಳಿರುವ ಸಾಧ್ಯತೆ ಇದೆ.

ಪರಂಪರೆಯಿಂದ ಬಂದಿರುವ ನಾಗದೇವಾಲಯಗಳಲ್ಲಿ ವೈವಿಧ್ಯತೆ ಕಂಡುಬಂದಿದೆ. ದಕ್ಷಿಣ ಭಾರತದಲ್ಲಿ ಆಗಮಕ ದೇವಾಲಯಗಳಲ್ಲಿ ಎಲ್ಲೂ ಕಂಡು ಬಾರದ 'ಸ್ತ್ರೀ ಅರ್ಚಕಿ' ಮಣ್ಣಾರ ಶಾಲೆಯ ನಾಗದೇವಾಲಯದಲ್ಲಿ ದೀಕ್ಷಾವಿಧಿಯ ಹಿನ್ನೆಲೆಯಲ್ಲಿ ನಿಯುಕ್ತಿಗೊಳ್ಳುತ್ತಾಳೆ. ಇಲ್ಲಿ ಪುರಾತನದಲ್ಲಿ ಸರ್ಪಗಳು ಮನೆಯ ಸದಸ್ಯರಂತೆ ಮನೆಗಳಲ್ಲಿಯೇ ಪ್ರತ್ಯೇಕವಾಗಿ ವಾಸವಾಗಿರುತ್ತಿದ್ದವು ಎಂಬ ನಂಬಿಕೆ, ಸರ್ಪ ಚಿಕಿತ್ಸೆಯಲ್ಲಿ ಈ ಕುಟುಂಬದವರ ಪಾತ್ರ ಇವೆಲ್ಲವೂ ವೈವಿಧ್ಯಮಯವಾಗಿ ಕಂಡುಬರುತ್ತದೆ. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ನಾಗಾರಾಧಕರು ಸಾಮುದಾಯಕವಾಗಿ ಇಲ್ಲಿಗೆ ವಿಶೇಷವಾಗಿ ನಡೆದುಕೊಳ್ಳುತ್ತಿರುವುದು ಉಲ್ಲೇಖನೀಯ. ಇಲ್ಲಿ ಸರ್ಪದೋಷ ಪರಿಹಾರಾರ್ಥವಾಗಿ ನಡೆಸಲ್ಪಡುವ ವಿಶೇಷ ಸೇವೆ ಎಂದರೆ ಸರ್ಪಬಲಿ. ಸಾಮಾನ್ಯವಾಗಿ ದಿನವೂ ಸಂಜೆಯ ಹೊತ್ತು ಹರಕೆಯ ರೂಪದಲ್ಲಿ ಸಾಮೂಹಿಕ ಪಾಲ್ಗೊಳ್ಳುವಿಕೆಯೊಂದಿಗೆ ನಡೆಸಲಾಗುತ್ತದೆ. ಉಳಿದಂತೆ ವಿವಿಧ ರೀತಿಯ ಆರಾಧನ ಪ್ರಕಾರಗಳು ಕಂಡುಬರುತ್ತವೆ. ವೈಯಕ್ತಿಕ ನೆಲೆಯಲ್ಲಿ ಸರ್ಪಸಂಸ್ಕಾರ, ನಾಗಪ್ರತಿಷ್ಠೆ, ಸರ್ಪಬಲಿ, ವಟು ಆರಾಧನೆ ಇತ್ಯಾದಿಗಳು ವಿರಳವಾಗಿ ನಡೆಯುತ್ತವೆ. ವಾರ್ಷಿಕ ಆಚರಣೆಯಾಗಿ ನೂರುಂ ಪಾಲುಂ ವಿಶೇಷವಾಗಿ ನಡೆಸಲಾಗುತ್ತದೆ. ಕುಟುಂಬಕ್ಕೊಂದರಂತೆ ನಾಗಬನಗಳಿದ್ದರೂ ಅಲ್ಲಿ ವಿಶೇಷ ಸೇವೆಯನ್ನು ತುಳುನಾಡಿನಂತೆ ಆಚರಿಸಲಾಗುತ್ತಿಲ್ಲ. ತುಳುನಾಡಿನಲ್ಲಿ ಈ ಕಲ್ಪನೆಗಳು ಸ್ವಲ್ಪ ವ್ಯತಿರಿಕ್ತವಾಗಿವೆ. ನಾಗನಿಗೆ ಅತಿಯಾದ ಪ್ರಾಮುಖ್ಯತೆ ಮತ್ತು ಅತಿಯಾದ ಮಡಿ ಮೈಲಿಗೆಯನ್ನು ಕಲ್ಪಿಸಲಾಗಿದೆ. ವಿಶೇಷವಾಗಿ ಈ ಪ್ರದೇಶದಲ್ಲಿ ಕುಟುಂಬ ವಲಯದಲ್ಲಿ ನಾಗನನ್ನು ಆರಾಧಿಸುವ ಸಂಪ್ರದಾಯ ಹೆಚ್ಚಾಗಿ ಕಂಡುಬರುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಕುಟುಂಬಕ್ಕೆ ಸಂಬಂಧಿಸಿದ ನಾಗಬನಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಉಳಿಸಿಕೊಂಡಿದ್ದು ಅಲ್ಲಿ ಆಚರಣೆಗಳೆಲ್ಲವನ್ನು ವೈದಿಕರ ಮುಖೇನ ನಡೆಸಲಾಗುತ್ತದೆ. ವಿಶೇಷವಾಗಿ ಸರ್ಪಸಂಸ್ಕಾರ, ನಾಗಪ್ರತಿಷ್ಠೆ, ಆಶ್ಲೇಷಬಲಿ, ವಟು ಆರಾಧನೆ ಇತ್ಯಾದಿಗಳು ನಡೆಯುತ್ತಿರುತ್ತದೆ. ವಿರಳವಾಗಿ ನಾಗಮಂಡಲವೂ ನಡೆಯುತ್ತದೆ. ನಾಗ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಆಲಡೆ ಅಥವಾ ಬ್ರಹ್ಮಸ್ಥಾನಗಳಲ್ಲಿ 'ಡಕ್ಕೆಬಲಿ'ಯನ್ನು ನಡೆಸಲಾಗುತ್ತದೆ. ಆಚರಣೆಯ ಈ ಸಂದರ್ಭದಲ್ಲೆಲ್ಲ ವೈವಿಧ್ಯತೆ ಕಂಡುಬರುತ್ತದೆ. ಬಯಸಿದಾಗ ತಮಗೆ ಸಂಬಂಧಿಸಿದ ನಾಗಬನಗಳಲ್ಲಿ ನಾಗ 'ತಂಬಿಲ' ಅಥವಾ ನಾಗತನು ವೈದಿಕರ ಮುಖೇನ ನಡೆಸುವ ಅಧಿಕಾರವಿದೆ.

ವೈದಿಕ ಹಿನ್ನೆಲೆಯಲ್ಲಿ ಆಚರಿಸುವ ಸಂಪ್ರದಾಯಗಳಲ್ಲಿ ಪ್ರಧಾನವಾಗಿ ಕಂಡುಬರುವ ಅಂಶಗಳೆಂದರೆ ಮಂಡಲ, ಹವನ, ಅಭಿಷೇಕ ಮತ್ತು ಅರ್ಚನೆ ಎಂಬ ಪ್ರಕಾರಗಳು. ನಾಗಸಂತೃಪ್ತಿಗಾಗಿ ಸರ್ಪದೋಷ ಪರಿಹಾರಾರ್ಥವಾಗಿ ಇದನ್ನು ನಡೆಸಲಾಗುತ್ತದೆ. ಮಂಡಲ ಎಂಬ ಸಂಸ್ಕಾರವು ಜನಪದ ಸಂಸ್ಕೃತಿಯಲ್ಲಿಯೂ ವಿಶೇಷವಾಗಿ ಕಂಡುಬರುತ್ತದೆ. ಸರ್ಪಬಲಿ, ತನು ತರ್ಪಣ ಇತ್ಯಾದಿಗಳ ಸಂದರ್ಭದಲ್ಲಿ ಮಂಡಲವನ್ನು ರಚಿಸಿ ಆರಾಧಿಸುವುದುರ

ಮೂಲಕ ಆರಾಧನೆ ನಡೆಸುವುದು ಒಂದು ಸಂಪ್ರದಾಯ. ಇದರಲ್ಲಿ ಅಷ್ಟನಾಗಗಳೊಂದಿಗೆ ವಾಸುಕಿಯನ್ನು ಆವಾಹಿಸಿ ಆರಾಧಿಸಲಾಗುತ್ತದೆ.

ಈ ಸಂಪ್ರದಾಯವು ಎರಡೂ ಪ್ರದೇಶಗಳಲ್ಲಿ ಕಂಡುಬಂದರೂ ಅಲ್ಪ ಸ್ವಲ್ಪ ಪ್ರಾದೇಶಿಕ ಭಿನ್ನತೆಗಳು ಕಂಡುಬರುತ್ತಿವೆ. ಕೇರಳದಲ್ಲಿ ಸರ್ಪಬಲಿ ಸಂಜೆಯ ಹೊತ್ತು ನಡೆಸಲಾಗುತ್ತದೆ. ಮಂಡಲವನ್ನು ಪಶ್ಚಿಮಾಭಿಮುಕವಾಗಿ ನಿರ್ಮಿಸಲಾಗುತ್ತದೆ. ತುಳುನಾಡಲ್ಲಿ ಹಗಲಿನಲ್ಲಿ ನಡೆಸಲಾಗುತ್ತದೆ. ಮಂಡಲದ ರಚನೆ ಪೂರ್ವಾಭಿಮುಕವಾಗಿ ಇರುತ್ತದೆ. ಆದರೆ ಎರಡೂ ಪ್ರದೇಶಗಳಲ್ಲಿ ಸರ್ಪಬಲಿಯ ಆಚರಣೆಯ ಹಿಂದಿರುವ ಉದ್ದೇಶ ಒಂದೇ ಆಗಿ ಕಂಡುಬರುತ್ತದೆ. ಚರ್ಮರೋಗ ನಿವಾರಣೆ, ಸಂತಾನ ಹೀನತೆ, ಮನೋಕ್ಲೇಶ, ಸಂಪತ್ತುನಾಶ ಈ ಸಂದರ್ಭಗಳಲ್ಲೆಲ್ಲ ಸರ್ಪದೋಷ ಪರಿಹಾರಾರ್ಥವಾಗಿ ನಡೆಸಲಾಗುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ತುಳುನಾಡಿನ ನಾಗಾರಾಧನೆ ಸ್ವರೂಪದಲ್ಲಿ ವೈದಿಕ ಸಂಸ್ಕೃತಿಯ ಪ್ರಭಾವದಿಂದಾಗಿ ಹಲವಾರು ಬದಲಾವಣೆಗಳು ಕಂಡುಬರುತ್ತಿವೆ. ಇದು ಇತ್ತೀಚಿನ ಬದಲಾವಣೆ ಎಂದು ತಿಳಿದುಬಂದಿದೆ. ದೇವಾಲಯಗಳಿಗೆ ಅನ್ವಯವಾಗುವ ಕೆಲವು ಧಾರ್ಮಿಕ ವಿಧಿಗಳನ್ನು ನಾಗಬನಗಳಿಗೂ ಅನ್ವಯಿಸಿ ಆಚರಿಸಲಾಗುತ್ತದೆ. ಇದೆಲ್ಲವೂ ಭಾಗಿಗಳ ಆರ್ಥಿಕ ಸ್ಥಿತಿಗಳನ್ನು ಅವಲಂಬಿಸಿಕೊಂಡಿದೆ. ಮುಖ್ಯವಾಗಿ ಅಧ್ಯಯನದ ಸಂದರ್ಭದಲ್ಲಿ ತಿಳಿದುಬಂದಂತೆ ಹಿಂದೆ ನಾಗನಿಗೆ ವಿಪರೀತ ಮಡಿ-ಮೈಲಿಗೆ ಎಂಬ ಸಂಪ್ರದಾಯವಿರಲಿಲ್ಲ. ಪ್ರತಿಷ್ಠೆಯ ಸಂದರ್ಭಗಳಲ್ಲಿ 'ಬ್ರಹ್ಮಕಲಶಾದಿ' ವಿಧಿಗಳನ್ನು ನಡೆಸುತ್ತಿರಲಿಲ್ಲ. ಈಗ ಈ ವ್ಯವಸ್ಥೆಯಲ್ಲಿ ಬದಲಾವಣೆಗಳು ಉಂಟಾಗಿವೆ. ಇದಕ್ಕೆ ಜಿಲ್ಲೆಯು ವೇಗವಾಗಿ ಆರ್ಥಿಕಾಭಿವೃದ್ಧಿಯನ್ನು ಹೊಂದುತ್ತಿರುವುದು, ಮತ್ತು ಈ ಭಾಗದ ಜನತೆಗೆ ನಾಗನ ಮೇಲಿರುವ ಅತಿಯಾದ ನಂಬಿಕೆಯೇ ಕಾರಣವಾಗಿರಬಹುದು. ಈ ರೀತಿಯ ಧಾರ್ಮಿಕ ಬೆಳವಣಿಗೆಗಳು ಕೇರಳದಲ್ಲಿ ಕಂಡುಬರುವುದಿಲ್ಲ. ಕೇರಳದ ಆರಾಧನೆಯ ಪ್ರಕಾರಗಳಲ್ಲಿ ಸರ್ಪಂತುಳ್ಳಲ್‌ನಂತಹ ಕೆಲವು ಜನಪದ ಆಚರಣೆಗಳನ್ನು ಮಣ್ಣಾರ ಶಾಲೆಯಂಥ ನಾಗ ದೇವಾಲಯಗಳಲ್ಲಿ ಆಚರಿಸುತ್ತಿರುವುದು ಕಂಡುಬಂದಿದೆ. ಇದು ಜನಪದ ಆಚರಣೆಯೊಂದನ್ನು ವೈದಿಕ ಸಂಸ್ಕೃತಿಯು ತನ್ನ ವ್ಯಾಪ್ತಿಯೊಳಗೆ ಸ್ವೀಕರಿಸಿರುವುದಕ್ಕೆ ನಿದರ್ಶನವಾಗಿದೆ. ಮತ್ತು ಆ ಕಲಾ ಪ್ರಕಾರಕ್ಕೆ ಸಾಮಾಜಿಕ ಮಾನ್ಯತೆಯನ್ನು ಕಲ್ಪಿಸಿದಂತಾಗುತ್ತದೆ.

ಸಾಮೂಹಿಕವಾಗಿ ಈ ಪ್ರದೇಶಗಳಲ್ಲಿ ಆಚರಿಸುವ ಹಬ್ಬದ ರೂಪದ ಆಚರಣೆಯೇ 'ನಾಗರಪಂಚಮಿ'. ಈ ಹಬ್ಬವನ್ನು ತುಳು ಸಂಸ್ಕೃತಿಯಲ್ಲಿ ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಇಲ್ಲಿರುವ ಪ್ರತಿಯೊಂದು ಹಿಂದೂ ಕುಟುಂಬದವರೂ ಅಂದು ನಾಗ ತಂಬಿಲ ಅಥವಾ ನಾಗತನು ಆಚರಣೆಯನ್ನು ವಿದ್ಯುಕ್ತವಾಗಿ ನೆರವೇರಿಸುತ್ತಾರೆ. ಸುಬ್ರಹ್ಮಣ್ಯ ದೇವಾಲಯಗಳಲ್ಲಿ ನಾಗಪ್ರೀತ್ಯರ್ಥವಾಗಿ ವಿಶೇಷ ಪೂಜೆ ನಡೆಸಲಾಗುತ್ತದೆ.

ತುಳು ಸಂಸ್ಕೃತಿಯಲ್ಲಿ ವೈಶಿಷ್ಟ್ಯವಾಗಿ ಆಚರಿಸುವ ಒಂದು ಮಾಧ್ಯಮವೇ ದರ್ಶನ. ಪ್ರಾದೇಶಿಕ ಹಿನ್ನೆಲೆಯಲ್ಲಿ ಗಮನಿಸುವಾಗ ಇದು ಸ್ಥಳೀಯವಾದ ಆರಾಧನ ಪ್ರಕಾರ ಎನ್ನುವುದು ತಿಳಿದುಬರುತ್ತದೆ. ನಾಗ ಸಮ್ಮುಖದಲ್ಲಿ ಮಾತ್ರವಲ್ಲದೆ ಬ್ರಹ್ಮಸ್ಥಾನ ಮತ್ತು ದೇವಾಲಯಗಳಲ್ಲಿರುವ ಶಕ್ತಿ ಸಾನಿಧ್ಯ, ಮತ್ತು ಊರಿನ ಮಾರಿಗುಡಿಗಳಲ್ಲಿಯೂ

ದರ್ಶನ ಮಾಡುವ ಸಂಪ್ರದಾಯವಿದೆ. ಇಲ್ಲಿ ದರ್ಶನಪಾತ್ರಿಯಾಗಿ ಮತ್ತು ದೈವದ ಮಧ್ಯವರ್ತಿಯಾಗಿ ವೈದಿಕರು ಕಾರ್ಯ ನಿರ್ವಹಿಸುತ್ತಾರೆ. ಅದೇ ರೀತಿ ಆರ್ಯೇತರ ದೈವಗಳಿಗೂ ದರ್ಶನ ನಡೆಸುವ ಸಂಪ್ರದಾಯ ರೂಢಿಯಲ್ಲಿದೆ. ಇಲ್ಲಿ ದರ್ಶನ ಪಾತ್ರಿಗಳಾಗಿ ಭಾಗವಹಿಸುವವರು ಬ್ರಾಹ್ಮಣೇತರರು. ಇದು ಈ ಪ್ರದೇಶದ ಆರಾಧನ ವೈವಿಧ್ಯತೆಯಾಗಿ ಕಂಡುಬರುತ್ತದೆ. ಈ ಕಲ್ಪನೆ ಕೇರಳದಲ್ಲಿ ಕಂಡುಬರುವುದಿಲ್ಲ. ದರ್ಶನದಲ್ಲಿ ಹೇರಳವಾಗಿ 'ಹಿಂಗಾರ'ವನ್ನು ಬಳಸಲಾಗುತ್ತದೆ. ತುಳು ಸಂಸ್ಕೃತಿಯ ಆರಾಧನೆ ಸಂದರ್ಭದಲ್ಲಿ ವಿಶೇಷವಾಗಿ ಹಿಂಗಾರಗಳನ್ನು ಬಳಸಲಾಗುತ್ತದೆ. ಕೇರಳದಲ್ಲಿ ಹಿಂಗಾರದ ಕಲ್ಪನೆ ವಿರಳವಾಗಿದೆ. ನಾಗಾರಾಧನೆಯ ನಿರ್ದಿಷ್ಟವಾದ ಕೆಲವು ಆರಾಧನ ಸಂದರ್ಭಗಳಲ್ಲಿ ತೆಂಗಿನ ಮರದ ಹಿಂಗಾರ (ತುಳು-ಕೊಂಬು)ಗಳನ್ನು ಬಳಸಲಾಗುತ್ತದೆ.

ತುಳುನಾಡಿನ ಶ್ರೀಮಂತ ಮತ್ತು ಪ್ರಸಿದ್ಧವಾದ ಆರಾಧನ ಪ್ರಕಾರವೇ ನಾಗಮಂಡಲ. ಇದು ಒಂದು ಜನಪದ ರಂಗಕಲೆ. ಇದಕ್ಕೆ ಸಂವಾದಿಯಾದ ಯಾವ ಕಲಾಪ್ರಕಾರವೂ ಕೇರಳದಲ್ಲಿಲ್ಲ. ಜನಪದ ಆಚರಣೆಯಾದ ಸರ್ಪಂತುಳ್ಳಲ್ ಎಲ್ಲ ದೃಷ್ಟಿಗಳಿಂದಲೂ ನಾಗಮಂಡಲಕ್ಕೆ ಭಿನ್ನವಾಗಿದೆ. ನಾಗಮಂಡಲ ಸಂಪೂರ್ಣವಾಗಿ ಪ್ರಾದೇಶಿಕವಾದ ವೈದಿಕ ಮತ್ತು ಜನಪದ ಸಂಸ್ಕೃತಿಗಳನ್ನೊಳಗೊಂಡ ಪ್ರಬುದ್ಧವಾದ ಧಾರ್ಮಿಕ ಕಲೆ. ಬ್ರಾಹ್ಮಣ ಪಾತ್ರಿ, ಬ್ರಾಹ್ಮಣ ವೈದ್ಯ ಮತ್ತು ಬ್ರಾಹ್ಮಣ ಅರ್ಚಕರನ್ನೊಳಗೊಂಡು ನಡೆಸಲ್ಪಡುವ ವಿಧ್ಯುಕ್ತ ಕ್ರಿಯೆ. ಅದೇ ರೀತಿ ಆಲಡೆ ಅಥವಾ ಬ್ರಹ್ಮಸ್ಥಾನಗಳಲ್ಲಿ ಆಚರಿಸಲ್ಪಡುವ ಡಕ್ಕೆಬಲಿ ಎಂಬ ನಾಗಮಂಡಲಕ್ಕೆ ಸಂವಾದಿಯಾದ, ಬ್ರಹ್ಮ ಪ್ರೀತ್ಯರ್ಥವಾಗಿ ನಡೆಸಲ್ಪಡುವ ಆಚರಣೆ. ನಾಗಮಂಡಲ ಮತ್ತು ಡಕ್ಕೆಬಲಿ ಆಚರಣೆಗಳು ಸಂಗೀತ, ನೃತ್ಯ ಮತ್ತು ಭಾವಾಭಿನಯ ಪ್ರಧಾನವಾದ ಕಲೆಗಳಾಗಿವೆ. ವೈದಿಕ ಮತ್ತು ಜನಪದ ಆರಾಧನ ಕಲೆಗಳ ದೃಷ್ಟಿಯಿಂದ ಈ ಎರಡೂ ಪ್ರಕಾರಗಳು ತುಂಬ ವೈವಿಧ್ಯ ಪೂರ್ಣವಾದುದಾಗಿವೆ.

೭.೨ ಭಾಗವಹಿಸುವ ಜನವರ್ಗ

ಕೇರಳ ಮತ್ತು ತುಳುನಾಡಿನ ನಾಗಾರಾಧನೆಯ ಆಚರಣೆಗಳಲ್ಲಿ ಜನಪದ ಆರಾಧನ ಸ್ವರೂಪಗಳನ್ನು ಗಮನಿಸಿದರೆ, ಕೆಲವು ಸಾದೃಶ್ಯ ಸಂಬಂಧಗಳು ಮತ್ತು ವೈವಿಧ್ಯತೆಗಳು ಕಂಡುಬರುತ್ತವೆ. ಕೇರಳದ ಜನಪದ ನಾಗಾರಾಧನ ಪ್ರಕಾರಗಳೆಂದು ಸರ್ಪಂತುಳ್ಳಲ್, ಸರ್ಪ ತೈಯಂ, ನಾಗತೋಟಂ, ಕುರುಂದಿನಿ ಪಾಟ್ ಇತ್ಯಾದಿಗಳು, ತುಳುನಾಡಲ್ಲಿ ಕಾಡ್ಯನ ಆರಾಧನೆ, ಸ್ವಾಮಿಕೋಲ ಇತ್ಯಾದಿಗಳು. ಈ ಎರಡೂ ಪ್ರದೇಶಗಳ ಆರಾಧನ ಪ್ರಕಾರಗಳನ್ನು ಗಮನಿಸುವಾಗ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಂದ ಆಚರಿಸಲ್ಪಡುವುದು ಮತ್ತು ಸಮಾಜದ ಮೇಲ್ವರ್ಗದವರೂ ಕೂಡ ಅದರಲ್ಲಿ ಭಾಗಿಗಳಾಗುತ್ತಿರುವುದು ಕಂಡುಬರುತ್ತಿದೆ.

ಪ್ರಧಾನವಾಗಿ ಜನಪದ ಆರಾಧನೆ ಪ್ರಕಾರಗಳು ಹಾಡಿನ ಹಿನ್ನೆಲೆಯಲ್ಲಿ ಆಚರಿಸಲ್ಪಡುತ್ತವೆ. ಇಲ್ಲಿ ಹಾಡೇ ಪ್ರಧಾನ, ಹಾಡಿನ ಮೂಲಕ ಪುರಾಣದ ಗದ್ಯ ಕತೆಗಳನ್ನು ಹೇಳಲಾಗುತ್ತದೆ. ವೈದಿಕ ಸಂಸ್ಕೃತಿಯಲ್ಲಿ ಮಂತ್ರಗಳ ಮುಖೇನ ಆರಾಧನೆ ನಡೆಯುತ್ತದೆ. ಜನಪದ ಹಿನ್ನೆಲಿಯಲ್ಲಿ ಆಚರಿಸಲ್ಪಡುವ ಪ್ರಕಾರಗಳಿಗೆ ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಯಿದೆ. ಸರ್ಪಂತುಳ್ಳುಲ್ ಪ್ರಕಾರವನ್ನು ಗಮನಿಸುವಾಗ ಮಂಡಲ ಚಿತ್ತಾರವು ಸಂಪೂರ್ಣವಾಗಿ

ದೇಶೀಯ ಹಿನ್ನೆಲೆಯಲ್ಲಿ ರಚಿಸಲ್ಪಡುತ್ತದೆ. ಸ್ಥಳೀಯವಾದ ಜಂಗಮ ಸೊಪ್ಪು, ಅಕ್ಕಿಹುಡಿ, ಸುಣ್ಣ, ಹಳದಿ, ಉಮಿಕರಿ (ತುಳು) ಇತ್ಯಾದಿಗಳ ಮಿಶ್ರಣದಿಂದ ತಮಗೆ ಬೇಕಾದ ಬಣ್ಣಗಳನ್ನು ತಾವೇ ಸಿದ್ಧಪಡಿಸಿಕೊಳ್ಳುತ್ತಾರೆ.

ಮಂಡಲದಲ್ಲಿ ರಚಿಸುವ ಸರ್ಪದ ಪ್ರತಿಕೃತಿಯು ದೇಶೀ ಕಲ್ಪನೆಯಲ್ಲಿ ರಚಿಸಲ್ಪಡುತ್ತದೆ. ವೈದಿಕ ಸಂಸ್ಕೃತಿಯಲ್ಲಿ ರಚಿಸುವ ಸರ್ಪನ ಹೆಡೆಯು ಶಿಷ್ಟ ದೇವತೆಗಳ ಹಿನ್ನೆಲೆಯುಲ್ಲಿ ರಚಿಸಲ್ಪಡುವುದನ್ನು ಗಮನಿಸಬಹುದು. ಪ್ರಸ್ತುತ ಆಚರಣೆಗಳ ಮಂಡಲ ರಚನೆಯ ಸ್ವರೂಪದಲ್ಲಿಯೂ ಶಿಷ್ಟ ಮತ್ತು ದೇಸಿ ಪರಂಪರೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಜನಪದ ಹಿನ್ನೆಲೆಯಲ್ಲಿ ಆಚರಿಸಲ್ಪಡುವ ಎರಡೂ ಪ್ರದೇಶಗಳಲ್ಲಿಯೂ ಆಚರಣೆಯಲ್ಲಿ ಹಾಡೇ ಪ್ರಧಾನ. ಆಚರಿಸುವ ನಿರ್ದಿಷ್ಟ ಸಮುದಾಯದವರು ನಾಗನನ್ನು ತಮ್ಮ ಕುಲದೇವತೆ ಎಂದು ಆರಾಧಿಸುತ್ತಾರೆ. ಕಾಳಿಂಗವನ್ನು ಹರಿಜನರು ಕಾಡ್ಯನ ರೂಪದಲ್ಲಿ ಕುಲದೇವತೆ ಎಂದು ಆರಾಧಿಸುತ್ತಾರೆ. ಅದೇ ರೀತಿ ಪುಳ್ಳವರು ಕೂಡ ಸರ್ಪವನ್ನು ಕುಲದೇವತೆ ಎಂದು ಪೂಜಿಸುತ್ತಾರೆ. ಇವರು ಹಾಡುವ ಹಾಡಿನೊಂದಿಗೆ ತಮ್ಮದೇ ಆದ ಉಪಕರಣಗಳನ್ನು ಅಥವಾ ವಾದನಗಳನ್ನು ಬಳಸುತ್ತಾರೆ. ಅದನ್ನು ಲಯಬದ್ಧವಾಗಿ ನುಡಿಸುವುದರ ಮೂಲಕ ಹಾಡಿಗೆ ಹಿನ್ನೆಲೆಯಾಗಿ ಬಳಸಿಕೊಳ್ಳುತ್ತಾರೆ. ವಿಶೇಷತೆಯೆಂದರೆ ಕೇರಳದ ಸರ್ಪಂತುಳ್ಳಲ್ ಆಚರಣೆಯನ್ನು ಪುಳ್ಳವರು ತಮ್ಮ ಕುಲಕಸುಬನ್ನಾಗಿ ಸ್ವೀಕರಿಸಿದ್ದಾರೆ. ಇವರೊಂದಿಗೆ ಕುಟುಂಬದ ಸ್ತ್ರೀಯರು ಕೂಡ ಸಮಾನ ಭಾಗಿಗಳಾಗಿ ಭಾಗವಹಿಸುತ್ತಾರೆ. ಆಚರಣೆಗಳಲ್ಲಿ ಇಲ್ಲಿ ಸ್ತ್ರೀಗೂ ಪ್ರಧಾನ್ಯತೆ ನೀಡಿರುವುದನ್ನು ಗಮನಿಸಬಹುದಾಗಿದೆ. ಸರ್ಪಂತುಳ್ಳಲ್ ಪುಳ್ಳವರಿಗೆ ಉತ್ತಮ ಸಂಭಾವನೆಯನ್ನು ಒದಗಿಸುತ್ತದೆ. ಪುಳ್ಳವರು ಅಥವಾ ಕೇರಳದ ಜನಪದ ಆರಾಧಕರು ಪಡೆಯುವ ಸಂಭಾವನೆಗೆ ಕರಾವಳಿ ಕರ್ನಾಟಕದ ಜನಪದ ಕಲಾವಿದರು ಪಡೆಯುವ ಸಂಭಾವನೆಯನ್ನು ಹೋಲಿಸಿದರೆ ತೀರ ಕಡಿಮೆ ಎಂದೇ ಭಾವಿಸಬೇಕು. ಕಾಡ್ಯನ ಆರಾಧನೆಯಲ್ಲಿ ಯಾವುದೇ ರೀತಿಯ ಸಂಭಾವನೆ ದೊರಕುವುದಿಲ್ಲ. ಕಾಡ್ಯನಾಟ ಎಂಬ ಕಲಾ ಪ್ರಕಾರವೊಂದು ಹಿಂದೆ ನಡೆಯುತ್ತಿತ್ತೆಂದು ಈಗ ಆ ಪ್ರಕಾರ ಎಲ್ಲೂ ನಡೆಯುತ್ತಿರುವ ಕುರಿತು ಮಾಹಿತಿ ತಿಳಿದು ಬಂದಿಲ್ಲ. ಆದರೆ ಈ ಪ್ರದೇಶದ ಆರಾಧನೆಗಳು ಭಕ್ತಿ ಮತ್ತು ಧಾರ್ಮಿಕ ಮನೋಭಾವವುಳ್ಳವುಗಳು. ಕೇರಳದಲ್ಲಿ ಧಾರ್ಮಿಕ ಮನೋಭಾವದೊಂದಿಗೆ ನಿರ್ದಿಷ್ಟಸಂಭಾವನೆಯೂ ದೊರೆಯುತ್ತದೆ. ಆದ್ದರಿಂದ ಕೇರಳದ ಜನಪದ ಕಲಾವಿದರು ತುಳುನಾಡಿನ ಜನಪದ ಆರಾಧಕರಿಗಿಂತ ಭಿನ್ನವಾಗಿ ಕಂಡುಬರುತ್ತಾರೆ.

ನಾಗತೋಟ್ಟಂ, ಕುರುಂದಿನಿ ಪಾಟ್ ಮೊದಲಾದ ವಿರಳವಾಗಿ ಆಚರಿಸಲ್ಪಡುವ ಆರಾಧನೆಗಳಿಗೆ ತಮ್ಮದೇ ಆದ ಪರಂಪರೆ ಇತಿಹಾಸ, ಧಾರ್ಮಿಕ ನಂಬಿಕೆಗಳಿವೆ. ಆಚರಣೆಯ ಪ್ರತ್ಯೇಕ ಪ್ರಕಾರಗಳನ್ನು ಸಾಮಾಜಿಕವಾಗಿ ಹಿಂದುಳಿದಿರುವ ವಿಭಿನ್ನ ಸಂಪ್ರದಾಯದವರು ಆಚರಿಸಿಕೊಂಡು ಬರುತ್ತಿರುವುದು ವಿಶೇಷವೇ ಸರಿ. ಈ ಆಚರಣೆಗಳಿಗೆ ಸಂವಾದಿಯಾದ ಆಚರಣೆಗಳು ತುಳು ಸಂಸ್ಕೃತಿಯಲ್ಲಿ ಕಂಡುಬರುವುದಿಲ್ಲ. ಜನಪದ ಆಚರಣೆಗಳನ್ನು ಗಮನಿಸುವಾಗ ಮಂಡಲ ರಚನೆ, ಆಚರಣೆಯ ಸ್ವರೂಪ ವಿಧಿ ವಿಧಾನಗಳು ಇವೆಲ್ಲವೂ ಕೂಡ ತುಳುನಾಡಿಗಿಂತ ಭಿನ್ನರೀತಿಯಲ್ಲಿ ಕೇರಳದಲ್ಲಿ ಆಚರಿಸಲ್ಪಡುತ್ತಿರುವುದು ಗಮನ ಸೆಳೆಯುತ್ತದೆ. ಇಂದಿಗೂ ಮೂಲ ಪರಂಪರೆಯನ್ನು ನಿರ್ದಿಷ್ಟ

ಸಮುದಾಯದವರು ತಮ್ಮದೇ ಆದ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಸಮಗ್ರವಾದ ಈ ಭೂಪ್ರದೇಶದ ಆಚರಣೆಗಳು ಏಕರೂಪದಲಿಲ್ಲ. ಆದರೆ ಸಾಮ್ಯತೆ ಇದೆ. ತುಳುನಾಡಿನ ಉತ್ತರದಲ್ಲಿ ಸ್ವಾಮಿ ಪಾಣರಾಟ ಕೋಲ ಅದರೊಂದಿಗೆ ಪಾಣರೇ ನಡೆಸುವ ಡಕ್ಕೆಬಲಿ ಮತ್ತು ಕಾಡ್ಯನ ಆರಾಧನೆಗೆ ಪ್ರಾಧಾನ್ಯತೆ ಇದ್ದರೆ, ಉಡುಪಿ ಕಾರ್ಕಳದ ಭಾಗದಲ್ಲಿ ಬ್ರಹ್ಮಾರಾಧನೆ ಯೊಂದಿಗೆ ನಾಗಾರಾಧನೆಯು ಸಮ್ಮಿಳನಗೊಂಡಿದೆ. ಬಹುಶಃ ಇದಕ್ಕೆ ಸ್ಥಳೀಯವಾದ ಜೈನ ಸಂಸ್ಕೃತಿಯ ಪ್ರಭಾವವು ಕಾರಣವಾಗಿರಬೇಕು. ತುಳುನಾಡಿನ ದಕ್ಷಿಣಕ್ಕೆ ಮತ್ತು ಕೇರಳದ ಅತೀ ಉತ್ತರ ಭಾಗದಲ್ಲಿ ಬ್ರಹ್ಮಾರಾಧನೆ ವಿರಳಗೊಂಡು ಸುಬ್ರಹ್ಮಣ್ಯ ಆರಾಧನೆ, ಸರ್ಪಕೋಲ ಇತ್ಯಾದಿಗಳಿಗೆ ಪ್ರಾಧಾನ್ಯತೆ ಕಂಡುಬರುತ್ತದೆ. ಆದೇ ರೀತಿ ಉತ್ತರದ ಮಲಬಾರ್ ಪ್ರದೇಶದಲ್ಲಿ ಕುರುಂದಿನಿ ಪಾಟು, ನಾಗತೋಟ್ಟಂ ಪ್ರಕಾರಗಳಿಗೆ ಮಹತ್ವವಿದೆ. ಕೇರಳದಲ್ಲಿ ಸರ್ಪಂತುಳ್ಳಲ್ ಪುಳ್ಳವ ಪಾಟು ನಾಗದೇವಾಲಯಗಳು ಪ್ರಾಮುಖ್ಯವೆನಿಸಿವೆ. ಕೇರಳದ ದಕ್ಷಿಣ ಭಾಗದಲ್ಲಿ ಜನಪದ ಪ್ರಕಾರಗಳು ವಿರಳವಾಗಿ, ನಾಗದೇವಾಲಯಗಳು ಮತ್ತು ತಮಿಳು ಸಂಸ್ಕೃತಿಯ ಪ್ರಭಾವವನ್ನು ಗುರುತಿಸಬಹುದು.

ನಾಗಾರಾಧನೆಯಂಥ ಆರಾಧನ ಪ್ರಕಾರವು ಈ ಭಾಗದ ಸಾಮಾಜಿಕ ರಾಜಕೀಯ ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆಯ ಮೇಲೆ ಪರಿಣಾಮ ಮತ್ತು ಸ್ಥಿತ್ಯಂತರವನ್ನು ಉಂಟುಮಾಡುತ್ತದೆ. ವರ್ಣ ವ್ಯವಸ್ಥೆಯ ಹಿನ್ನೆಲೆಯಲ್ಲಿ ಗಮನಿಸಿದರೆ ಆರಾಧನೆಯ ಮೂಲಕ ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳಿಗೂ ಮಾನ್ಯತೆ ಲಭಿಸುತ್ತದೆ. ಪ್ರಾಧಾನವಾಗಿ ಪುಳ್ಳವರು, ವಣ್ಣಾನ್, ಪಾಣರು, ಮೇರ ಜನಾಂಗದವರು ಇವರೆಲ್ಲ ಆರಾಧನೆಯ ಸಂದರ್ಭದಲ್ಲಿ ದೈವ ಮಾಧ್ಯಮದವರಾಗಿ ಭಾಗವಹಿಸುವುದರಿಂದ ಈ ಸಮುದಾಯದವರನ್ನು ಆರಾಧನೆಯ ಹಿನ್ನೆಲೆಯಲ್ಲಿಯೇ ಗುರುತಿಸಲಾಗುತ್ತದೆ. ಆರಾಧನೆಯೊಂದಿಗೆ ಪುಳ್ಳವರಂಥ ನಿರ್ದಿಷ್ಟ ಸಮುದಾಯದವರು ಕುಲಕಸುಬಾಗಿ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿರುವುದು ಕಂಡುಬರುತ್ತಿದೆ. ಪುಳ್ಳವರನ್ನು ಹೊರತುಪಡಿಸಿದರೆ ನಾಗಾರಾಧನೆಯನ್ನೇ ವೃತ್ತಿ ಮತ್ತು ಪ್ರವೃತ್ತಿಯಗುಳ್ಳವರು ಈ ಪ್ರದೇಶದಲ್ಲಿ ಕಂಡುಬರುವುದಿಲ್ಲ. ತಮ್ಮ ವಿರಾಮದ ಸಂದರ್ಭದಲ್ಲಿ ಸರ್ಪಪಾಟ್ಟು ನಡೆಸಿಕೊಡುತ್ತಾರೆ. ಮತ್ತು ನಾಗ ದೇವಾಲಯಗಳಲ್ಲಿ ಸರ್ಪಗಾನ ಹಾಡುವುದರ ಮೂಲಕವೂ ವೃತ್ತಿಯೊಂದಿಗೆ ಪ್ರವೃತ್ತಿಯಾಗಿ ಆಚರಿಸಿಕೊಂಡು ಬರುತ್ತಿದ್ದಾರೆ.

ನಿರ್ದಿಷ್ಟವಾದ ಹಿಂದುಳಿದ ಸಮುದಾಯದವರಾದ ಇವರ ಕುಲದೊಂದಿಗೆ ನಾಗನ ಸಾಹಚರ್ಯ ಮತ್ತು ಸಂಬಂಧ ಬೆಸೆದುಕೊಂಡಿರುವ ಕುರಿತು ಪ್ರತ್ಯೇಕ ಪ್ರತ್ಯೇಕ ಐತಿಹ್ಯಗಳಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯನ್ನು ಗಮನಿಸುವಾಗ ನಾಗಾರಾಧನೆ ಪೂರ್ವದಲ್ಲಿ ಸ್ಥಳೀಯವೇ ಆದ ಒಂದು ದ್ರಾವಿಡ ಮತಾಚಾರವಾಗಿತ್ತು ಎನ್ನುವುದು ತಿಳಿದು ಬರುತ್ತದೆ.

ಈಗ ನಿಧಾನಕ್ಕೆ ಮರೆಯಾಗುತ್ತಿರುವ ಕಾಡ್ಯನಾಟ, ಕೇರಳದ ಸರ್ಪಂತುಳ್ಳಲ್, ಸರ್ಪಕೋಲ, ಕುರುಂದಿನಿ ಪಾಟು ಮೊದಲಾದ ಪ್ರಕಾರಗಳು ಇದಕ್ಕೆ ಸ್ಪಷ್ಟನಿದರ್ಶನವನ್ನು ನೀಡುತ್ತವೆ. ನಂತರ ಕಾಲಾಂತರದಲ್ಲಿ ಬಂದಿರುವ ವೈದಿಕ ಸಂಸ್ಕೃತಿಯು ತನ್ನೊಂದಿಗೆ ಸ್ಥಳೀಯವಾದ ಆಚರಣ ವಿಧಿಗಳನ್ನು ಸೇರಿಸಿಕೊಂಡಿರಬೇಕು. ಡಕ್ಕೆಬಲಿ, ಮತ್ತು

ನಾಗಮಂಡಲಗಳ ಸಂದರ್ಭದಲ್ಲಿ ಆಚರಿಸುವ ಬಲಿ, ಓಕುಳಿ ನೀರು ಇತ್ಯಾದಿಗಳು ಇದಕ್ಕೆ ನಿದರ್ಶನವಾಗಿ ಕಂಡುಬರುತ್ತವೆ. ಈ ಪ್ರಕ್ರಿಯೆಯು ಧಾರ್ಮಿಕ ಆಚರಣೆಯೊಂದರಲ್ಲಿ ಆಗಿರುವ ಧರ್ಮಗಳ ಸ್ಥಿತ್ಯಂತರವನ್ನು ಸೂಚಿಸುತ್ತದೆ.

೭.೩ ನಾಗಾರಾಧನೆ ಮತ್ತು ಯಕ್ಷಗಾನ

ಜನಪದ ರಂಗಕಲೆಗಳಾಗಿರುವ ಯಕ್ಷಗಾನ, ಮುಡಿಯೆಟ್ಟುಗಳಲ್ಲಿಯೂ ನಾಗಾರಾಧನೆಯನ್ನು ಗಮನಿಸಬಹುದು. ಯಕ್ಷಗಾನ ಕರಾವಳಿಯ ದೇವಾಲಯ ಸಂಬಂಧಿ ಜನಪದ ರಂಗಕಲೆ, ಯಕ್ಷಗಾನ ಮೇಳಗಳು ದೇವಾಲಯದ ಹೆಸರಿನಿಂದಲೇ ಹೊರಡುತ್ತವೆ. ಜಿಲ್ಲೆಯ ಅನೇಕ ದೇವಾಲಯಗಳು ಯಕ್ಷಗಾನ ಮೇಳಗಳನ್ನು ಬೆಳೆಸಿ ಪೋಷಿಸಿಕೊಂಡು ಬರುತ್ತಿರುವುದನ್ನು ಗಮನಿಸಬೇಕು. ಯಕ್ಷಗಾನದ ವೇಷ ಭೂಷಣ, ಕಿರೀಟ, ಅಲಂಕಾರ ಸಾಮಗ್ರಿಗಳು ಇಲ್ಲೆಲ್ಲ ನಾಗ ಪ್ರತಿರೂಪಗನ್ನು ಗಮನಿಸಬಹುದು. ಇದರಿಂದ ಯಕ್ಷಗಾನವೂ ನಾಗಾರಾಧನೆಯ ಹಿನ್ನೆಲೆಯಿಂದಲೇ ಬೆಳೆದು ಬಂದಿರುವ ಧಾರ್ಮಿಕ ಕಲೆ ಎಂಬ ಊಹೆಗೆ ಇಲ್ಲಿ ಅವಕಾಶವಿದೆ. ಯಕ್ಷಗಾನವನ್ನು ಕೂಡ ನಾಗಾರಾಧನೆಯಂತೆ ಫಲವತ್ತತೆಯ ಹಿನ್ನೆಲೆಯಲ್ಲಿ ಆಚರಿಸಲಾಗುತ್ತದೆ. ಕರಾವಳಿಯ ಪ್ರಸಿದ್ಧ ಮೇಳಗಳಾದ ಧರ್ಮಸ್ಥಳ, ಕಟೀಲು, ಮಂದಾರ್ತಿ, ಮೇಳಗಳು ಹರಕೆಯ ಆಟಗಳನ್ನು ನಡೆಸಿಕೊಡುತ್ತವೆ. ಜನತೆ ಸಂಪತ್ತು ವೃದ್ಧಿ, ವೈವಾಹಿಕ ಸಂಬಂಧ, ಸಂತಾನ ಪ್ರಾಪ್ತಿ ಮೊದಲಾದ ಇಷ್ಟಾರ್ಥಸಿದ್ಧಿಗಾಗಿ ಈ ದೇವಾಲಯ ಸಂಬಂಧಿ ಮೇಳಗಳಿಗೆ ಹರಕೆ ಹೇಳಿಕೊಳ್ಳುತ್ತಾರೆ. ಮುಂದೆ ತಮ್ಮ ಬಯಕೆ ನೆರವೇರಿದ ಬಳಿಕ ಯಕ್ಷಗಾನ ನಡೆಸುತ್ತಾರೆ.

ಶ್ರೀಯುತ ಕ.ವೆಂ.ರಾಜಗೋಪಾಲ ಅವರು ಯಕ್ಷಗಾನಕ್ಕೂ, ಯಕ್ಷಾರಾಧನೆಗೂ ಸಂಬಂಧ ಕಲ್ಪಿಸುತ್ತಾರೆ. ಇದರೊಂದಿಗೆ ಬೌಧ ಧರ್ಮವು ಪ್ರಭಾವ ಬೀರಿರುವುದನ್ನು ಕೂಡ ಗಮನಿಸಬೇಕು. ಕ್ರಿ.ಪೂ ಒಂದನೇ ಶತಮಾನದಿಂದ ಕ್ರಿ.ಶ.ಎರಡು, ಮೂರನೇ ಶತಮಾನಗಳಿಗೆ ಹಾಯುವ ರಚನಾ ವೈವಿಧ್ಯದಲ್ಲಿ 'ನಾಗ ಪಂಥ'ದ ಸಂಪ್ರದಾಯವು ಬೌದ್ಧ ಮತಕ್ಕೆ ಕಲೆಯ ಕಾಣಿಕೆಯಾಗಿ ಸೇರಿರಬೇಕೆಂದು ಹೇಳಲು ಅಜಂತದ 'ನಾಗ-ನಾಗಿಣಿ' ಗುಹೆಯೆಂದು ಕರೆಯಬಹುದಾದ ಚೈತ್ಯಾಲಯ ಗುಹೆ (೧೯) ಯೂ ಅಲ್ಲದೆ, ಕ್ರಿ.ಶ. ಮೂರನೆ ಶತಮಾನಕ್ಕೆ ಸೇರುವ ನಾಗಾರ್ಜುನ ಕೊಂಡದಲ್ಲಿ ನಾಗರಾಜ ಮುಚಲಿಂದನಿಂದ ರಕ್ಷಿಸಲ್ಪಡುವ ಮತ್ತು ನಾಗರಾಜನನ್ನು ತಲೆಯ ಮೇಲೆ ಪಡೆದಿರುವ ಬುದ್ಧ ವಿಗ್ರಹವು (ಕೆತ್ತನೆ) ಗಮನಾರ್ಹವಾದ ಆಧಾರವಾಗುತ್ತದೆ. ಈ ಬುದ್ಧನು ನಾಗದೇಹದ ಸಿಂಬಿಯ ಮೇಲೆ ಕುಳಿತು ನಾಗರಾಜರಿಬ್ಬರಿಂದಲೂ, ಮೂವರು ಯಕ್ಷರಿಂದಲೂ ಸೇವಿತನಾಗಿದ್ದಾನೆ.

ಮೇಲೆ ಹೇಳಿದ ನಾಗರಾಜ ಮುಚಲಿಂದನ ಪ್ರತಿಮೆಯು ಸಯಾಂನಲ್ಲಿ ಬಹು ಸುಂದರ ರಚನೆಯಾಗಿದೆ. ಅಲ್ಲಿ ಒಂದು ದೊಡ್ಡ 'ಎಲೆ' ಯಾಕಾರದಲ್ಲಿ ಏಳು ನಾಗ ಹೆಡೆಗಳು ಅಥವಾ ಶಿರೋಭಾಗಗಳು ಕೂಡಿ ಸೇರಿಕೊಂಡಿರುವುದಲ್ಲದೆ, ಭದ್ರಾಸನದಲ್ಲಿ ಬುದ್ಧನು ಧ್ಯಾನಮಗ್ನನಾಗಿದ್ದಾನೆ. ಈ ದೊಡ್ಡ ಹೆಡೆಯು ಬುದ್ಧನ ಸೊಂಟದಿಂದ ಮೇಲಕ್ಕೆ ಮತ್ತು ನೆತ್ತಿಯಿಂದ ಮೇಲಕ್ಕೆ (ಕೇಂದ್ರದ ತಲೆಯ ಮೂರನೇ ಒಂದು ಪಾಲಿನ ಎಲೆಯಷ್ಟು) ನಾಗಮುಖವು ಶೋಭಿಸುತ್ತದೆ. ಇದರಿಂದ ವಿಗ್ರಹಕ್ಕೆ ರೌದ್ರ ಗಂಭೀರತೆಯುಂಟಾಗಿದೆಯಲ್ಲದೆ ಬುದ್ಧನ ಧ್ಯಾನ ಮುಖದ ಕಳೆಯು ಹೆಚ್ಚಿದಂತಿದೆ. ಇವುಗಳೆಲ್ಲ ಕ್ರಿ.ಶ. ಮೂರನೇ ಶತಮಾನಕ್ಕೆ ಸೇರುತ್ತವೆ. ಭೋಧಗಯಾದಲ್ಲಿ

ಬುದ್ಧನ ನಿಂತ ೬ನೆಯ ವಾರದಲ್ಲಿ ಧಾರಕಾರ ಮಳೆಯಾದಾಗ ಮುಚಲಿಂದನು ತನ್ನ ಹೆಡೆಗಳನ್ನು ಕೊಡೆಯಂತೆ ಹಿಡಿದು ಕಾಪಾಡಿದನಂತೆ, ಇಂತಹ ಹಿನ್ನೆಲೆಯಿಂದ ಬೌದ್ಧ ಧರ್ಮವು 'ನಾಗಪಂಥ' ವನ್ನು ಯಕ್ಷರನ್ನು ವಶಪಡಿಸಿಕೊಂಡಂತೆ, ಒಳಪಡಿಸಿಕೊಂಡಿತೆಂಬುದು ಮಾತ್ರ ವಿಧಿತವಾಗುತ್ತದೆ.

ನಾಗಪಂಥ'ವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದಿಗೂ 'ನಾಗನೃತ್ಯ' ದ ರೀತಿ ನೀತಿಯಲ್ಲಿ ಸಮಾವೇಶಗೊಂಡಿದೆಯಷ್ಟೇ. ಆದುದರಿಂದ ಮತ್ತು ಮೇಲಿನ ಆಧಾರಗಳಿಂದ ಈ ಪಂಥವು (ಕ್ರಿ.ಪೂ. ಒಂದನೇ) ಶಮಾನದಷ್ಟು ಹಿಂದಿನಿಂದಲಾದರೂ (ಇನ್ನು ಹಿಂದಿರಬಹುದು) ಬೌದ್ಧ ಧರ್ಮಕ್ಕೆ ಸೇರಿಕೊಂಡಿರಬೇಕಲ್ಲದೆ ಯಕ್ಷ ಪಂಥದಂತೆಯೇ ಬೌದ್ಧ ಧರ್ಮದ ಸೇವಾ ಮಂಡಲಕ್ಕೆ ಒಳಗಾಗಿರಬೇಕಾಗುತ್ತದೆ. ಇಷ್ಟೇ ಅಲ್ಲದೆ ಈ ಪಂಥದ ಪ್ರಭಾವವನ್ನು ಯಕ್ಷಗಾನಕ್ಕೆ ಸೇರಿಸುವುದು ಉಚಿತವಾಗುತ್ತದೆ. ಏಕೆಂದರೆ ಯಕ್ಷಗಾನದ 'ಎಲೆ'ಯ ತನ್ನ ವಿಶದವಾದ ರೂಪ ರೇಷೆಯಲ್ಲಿ ನಾಗಪಂಥದ ಕೊಡುಗೆಯಾಗಿ ಹೆಡೆಯ ಆಕಾರವನ್ನು ಹೋಲುತ್ತದೆ. ಇದನ್ನು ಯಕ್ಷಗಾನ ನಟರು ಕಿರೀಟದಂತೆ ಧರಿಸಲು ಬೌದ್ಧ ಪ್ರತಿಮೆಗಳ 'ಭೂಮಂಡಲ ವಿಕಾಸ'ವು ಕಾರಣವಾಗಿರಬಹುದು''[೧] ಎಂದು ಅಭಿಪ್ರಾಯಪಡುತ್ತಾರೆ. ಅವರ ಈ ವಿಚಾರವನ್ನು ದಮನಿಸುವಾಗ ಕಾರ್ಕಳ ತಾಲೂಕಿನ 'ದುರ್ಗ', ಮತ್ತು 'ಕಾಬೆಟ್ಟು'ವಿನಲ್ಲಿರುವ ನಾಗ ಪ್ರತಿಮೆಗಳನ್ನು ಗಮನಿಸಿದರೆ ಇದರಲ್ಲಿ ಬೌದ್ಧ ಧರ್ಮದ ಪ್ರಭಾವ ನಿಚ್ಚಳವಾಗಿ ಕಂಡು ಬರುತ್ತದೆ. ಧ್ಯಾನ ಭಂಗಿಯಲ್ಲಿರುವ ಬುದ್ಧನ ಸುತ್ತಲು ಎಲೆಯಕಾರದ ಹಲವಾರು ನಾಗ ಹೆಡೆಗಳನ್ನು ರಚಿಸಲಾಗಿದೆ. ಈ ಎಲೆಗಳು ಯಕ್ಷಗಾನದ ಎಲೆಯಾಕೃತಿಯ ಕಿರೀಟದಂತೆ ಕಂಡು ಬರುತ್ತದೆ. ಆದುದರಿಂದ ನಾಗಾರಾಧನೆಯಲ್ಲಿ ಬೌದ್ಧ ಧರ್ಮದ ಪ್ರಭಾವ ಬೀರಿದಂತೆ, ಯಕ್ಷಗಾನದಲ್ಲಿ ನಾಗಾರಾಧನೆಯ ಪ್ರಭಾವ ಬೀರಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಡಾ. ಕೆ. ಶಿವರಾಮ ಕಾರಂತರು ಯಕ್ಷಗಾನದ ಮೂಲವನ್ನು ನಾಗಮಂಡಲದಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈ ಕುರಿತು ಅವರು ''ಸಭಾ ಲಕ್ಷಣದಲ್ಲಿ ಕಾಣಿಸುವ ಬಯಲಾಟದ ಸಂಪ್ರದಾಯದಲ್ಲಿ ಚೆನ್ನಾಗಿ ಉಳಿದು ಬಂದಿರುವ ಒಬ್ಬ ದೇವತೆಯೆಂದರೆ ಗಣಪತಿ, ಈತನ ಜತೆಯಲ್ಲಿ ಸುಬ್ಬರಾಯನೂ ಮುಖ್ಯವಾಗಿರುವುದು ಇಲ್ಲಿನ ವೈಶಿಷ್ಟ್ಯ, ಭರತನಾಟ್ಯ ಶಾಸ್ತ್ರದಲ್ಲಿ ಷಣ್ಮುಖನಿಗೆ ಅಂಥ ಸ್ಥಾನವಿರಲಾರದಾದರೂ ಈ ಆಟದ ಸಂಪ್ರದಾಯವು ಹುಟ್ಟಿ ಬೆಳೆದಿರುವ ನಾಡಿನಲ್ಲಿ 'ಸುಬ್ಬರಾಯ' ಗಣ್ಯ ದೇವತೆ. ಅದರಲ್ಲಿ ಶಿವನ ಮಗ ಕುಮಾರ, ಸ್ಕಂದ, ಷಣ್ಮುಖ ಎಂಬಿವು ಸುಬ್ರಹ್ಮಣ್ಯನಿಗೆ ಅನ್ವಯಿಸುವ ಹೆಸರುಗಳೇ. ಸುಬ್ರಹ್ಮಣ್ಯನೇ ಇಲ್ಲಿನ ಸುಬ್ಬರಾಯ, ಈ ನಾಡಿನ ಸಂಪ್ರದಾಯದಲ್ಲಿ ಸುಬ್ಬರಾಯ ಮತ್ತು ನಾಗ ಇವರುಗಳು ಒಂದೇ (ಕಾಲಾಂತರದಲ್ಲಿ ಸುಬ್ರಹ್ಮಣ್ಯ ಮತ್ತು ಸ್ಕಂದರು ಈ ಸೀಮೆಯಲ್ಲಿ ಒಂದೆನಿಸಿಕೊಂಡರು) ನಾಗನಿಗೆ ವಿಶೇಷ ಪೂಜಾ ಸಂಪ್ರದಾಯವಿದೆ. ನೃತ್ಯ ಮುಖೇನ ಸಲ್ಲುವ ಈ ವಿಶಿಷ್ಟವಾದ ಪೂಜೆಗೆ ನಾಗಮಂಡಲ ಎಂಬ ಹೆಸರಿದೆ. ಆದುದರಿಂದಲೇ ಸ್ತುತಿ ಪದ್ಯದಲ್ಲಿ ಕುಂಡಲಮಣಿ ಮುಕುಟ ಸುಬ್ಬರಾಯನನ್ನು 'ಮಂಡಲ ನಾಯಕ' ನನ್ನಾಗಿಯೂ ಸಂಬೋಧಿಸಿದ್ದಾರೆ. ಇಲ್ಲಿನ ನೃತ್ಯ ಸಂಪ್ರದಾಯದಿಂದ ಯಕ್ಷಗಾನ ಬಯಲಾಟವು ತನಗೆ ಅನಿವಾರ್ಯವಾಗಿದ್ದ ಕುಣಿತದ ವಿಧಾನವನ್ನು ತೆಗೆದುಕೊಂಡಿರಬಹುದೆಂದು ಇದರಿಂದ ಸೂಚನೆಯಾಗುತ್ತದೆ.''[೨] ಎಂದು ಅಭಿಪ್ರಾಯಪಡುತ್ತಾರೆ. ಕಾರಂತರ ಈ ಹೇಳಿಕೆಯನ್ನು ಗಮನಿಸಿದರೆ

ನಾಗಮಂಡಲವೇ ಯಕ್ಷಗಾನದ ನೃತ್ಯ ಸಂಪ್ರದಾಯಕ್ಕೆ ಮೂಲ ಪ್ರೇರಣೆ ಎಂಬ ವಿಚಾರ ತಿಳಿದು ಬರುತ್ತದೆ. ಬಹುಶಃ ಕಾಲಾಂತರದಲ್ಲಿ ನಾಗಮಂಡಲದ ಒಂದು ಪ್ರಕಾರವು ಯಕ್ಷಗಾನವಾಗಿ ರೂಪುಗೊಂಡಿರುವ ಸಾಧ್ಯತೆ ಇದೆ.

ಈ ಎಲ್ಲ ಕಲಾಪ್ರಕಾರಗಳಲ್ಲಿ ಒಂದು ರೀತಿಯ ಕೊಡುಕೊಳ್ಳುವಿಕೆ ನಡೆದಿರುವುದನ್ನು ಗಮನಿಸಬಹುದು. ಇಂದು ಸಮಾಜದ ಶಿಷ್ಟ ಸಂಸ್ಕೃತಿಯು ಆದಿಮ ಸಂಸ್ಕೃತಿಯ ಹಿನ್ನೆಲೆಯಿಂದ ಬಂದಿರಬಹುದಾದ ಹೆಚ್ಚಿನೆಲ್ಲ ಸಾಂಸ್ಕೃತಿಕ ಪ್ರಕಾರಗಳನ್ನು ಸ್ವೀಕರಿಸಿರುವುದು ಮನದಟ್ಟಾಗುತ್ತದೆ.

೭.೪. ನಾಗಾರಾಧನೆ ಮತ್ತು ಸಾಮಾಜಿಕ ಸ್ವಾಸ್ಥ್ಯ

ಕರಾವಳಿಯ ತುಳುವರ ಕೌಟುಂಬಿಕ ಜೀವನದಲ್ಲಿ ನಾಗಾರಾಧನೆಯ ಪ್ರಭಾವವನ್ನು ಗಮನಿಸುವಾಗ ಕುಟುಂಬದ ಸಮಸ್ಯೆಯನ್ನು ನಿವಾರಿಸುವ ಒಂದು ವೇದಿಕೆಯನ್ನು ಅದು ನಿರ್ಮಾಣ ಮಾಡುತ್ತದೆ. ನಾಗದರ್ಶನದಂಥ ಆರಾಧನ ಮಾಧ್ಯಮದಲ್ಲಿ ಕುಟುಂಬದ ಎಷ್ಟೋ ಸಮಸ್ಯೆಗಳು ನಿವಾರಣೆಯಾಗುವುದಿದೆ. ರೋಗ ಪೀಡಿತ ವ್ಯಕ್ತಿಗೆ ದರ್ಶನದ ಮೂಲಕ ಮಾನಸಿಕ ಸ್ಥೈರ್ಯವನ್ನು ಕೂಡ ನೀಡಲಾಗುತ್ತದೆ. ಇದನ್ನು ಒಂದು ರೀತಿಯ ಮನೋಚಿಕಿತ್ಸೆ ಎಂದು ಕೂಡ ಭಾವಿಸಬಹುದಾಗಿದೆ. ದರ್ಶನದ ಸಂದರ್ಭದಲ್ಲಿ ಪಾತ್ರಿಯ ಸಮ್ಮುಖದಲ್ಲಿ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದುಕೊಳ್ಳುವುದು. ಧಾರ್ಮಿಕ ಆಚರಣೆಯ ಈ ಸಂದರ್ಭದಲ್ಲಿ ಕುಟುಂಬ ಸದಸ್ಯರೆಲ್ಲ ಭಾಗವಹಿಸುವುದರೊಂದಿಗೆ ಕುಟುಂಬದ ಅನ್ಯೋನ್ಯತೆಯು ಕೂಡ ಮುಂದುವರಿಯುತ್ತದೆ. ಯಾಕೆಂದರೆ ಆರಾಧನೆಯ ವಿಷಯ ಬಂದಾಗ ಪ್ರತಿಯೋರ್ವ ಕುಟುಂಬದ ಸದಸ್ಯನೂ ಕುಟುಂಬದ ಮೂಲ ಮನೆಗೆ ಸರಿಯಾಗಿ ನಡೆದುಕೊಳ್ಳುತ್ತಾನೆ. ಇಲ್ಲಿ ನಾಗ ಅಥವಾ ದೇವರು ಎಂಬ ಮಾಧ್ಯಮ ಪ್ರಧಾನವಾಗಿ ಕಂಡು ಬರುತ್ತದೆ.

ಈ ರೀತಿಯ ಕೌಟುಂಬಿಕ ಸಾಮರಸ್ಯದ ಕಲ್ಪನೆಯನ್ನು ಕೇರಳದಲ್ಲೂ ಗಮನಿಸಬಹುದಾಗಿದೆ. ಸರ್ಪಂತುಳ್ಳಲ್ ಕುರುಂದಿನಿಪುಟ್ಟ್ ಮೊದಲಾದ ಆಚರಣೆಗಳ ಸಂದರ್ಭದಲ್ಲಿ ಕುಟುಂಬದ ಸದಸ್ಯರೆಲ್ಲರೂ ಭಾಗವಹಿಸುತ್ತಾರೆ. ತಮ್ಮ ಸಮಸ್ಯೆಗಳನ್ನು ದೈವದ ಸಮ್ಮುಖದಲ್ಲಿ ಪರಿಹರಿಸಿಕೊಳ್ಳುತ್ತಾರೆ. ಇದರಿಂದ ಕೌಟುಂಬಿಕ ಏಕತೆ ನೆಲೆಯಾಗುತ್ತದೆ. ಇಲ್ಲಿ ನಾಗನ ಮೇಲಿರುವ ಭಕ್ತಿ ಮತ್ತು ಭಯವೇ ಎಲ್ಲರನ್ನೂ ಒಂದು ಗೂಡಿಸುತ್ತದೆ.

ಸಾಮೂಹಿಕ ನೆಲೆಯಲ್ಲಿ ನಾಗಾರಾಧನೆಯನ್ನು ಗಮನಿಸಿದರೆ ಅದು ಸಾಮಾಜಿಕ ಏಕತೆಯನ್ನು ಸ್ಥಾಪಿಸುತ್ತದೆ. ವಿಶೇಷವಾಗಿ ತುಳು ಸಂಸ್ಕೃತಿಯನ್ನು ಅವಲೋಕಿಸುವಾಗ ನಾಗಮಂಡಲದಂಥ ಮಾಧ್ಯಮವು ಸಮಾಜದ ಹಲವಾರು ಮುಖಗಳಿಗೆ ವೇದಿಕೆಯಾಗುತ್ತದೆ. ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳನ್ನು ನೆರವೇರಿಸಲಾಗುತ್ತದೆ. ಧಾರ್ಮಿಕ ಮುಖಂಡರು, ರಾಜಕೀಯ ನಾಯಕರು ಇಲ್ಲಿ ಭಾಗವಹಿಸುವುದರಿಂದ ಒಂದು ರೀತಿಯ ಸಾಮರಸ್ಯ ಉಂಟಾಗುತ್ತದೆ. ಜನತೆ ಜಾತಿ ಭೇದ ಮರೆತು ಏಕತೆಯಿಂದ ಭಾಗವಹಿಸುತ್ತಾರೆ.

ಕೇರಳ ಮತ್ತು ಕರಾವಳಿ ಕರ್ನಾಟಕದ ಕೆಲವು ಸಮುದಾಯಗಳಲ್ಲಿ ಪ್ರಚಲಿತದಲ್ಲಿರುವ ಮಾತೃಮೂಲೀಯ ವ್ಯವಸ್ಥೆಯೊಂದಿಗೆ ನಾಗಾರಾಧನೆ ಬೆಸೆದುಕೊಂಡಿರುವುದನ್ನು ಗಮನಿಸಬಹುದು. ಈ ವ್ಯವಸ್ಥೆಯಲ್ಲಿ ನಾಗನಿಗೆ ಮತ್ತು

ಸಂತಾನ ಕಾರಕತ್ವಕ್ಕೆ ಸಂಬಂಧವಿರುವುದರಿಂದ ನಾಗನ ಸಂಬಂಧದಿಂದಾಗಿ ಸಂತಾನ ಮಾತೃಮೂಲೀಯ ಪದ್ಧತಿಯಿಂದ ಮುಂದುವರಿಯುತ್ತದೆ. ನಾಗದೋಷ ಇತ್ಯಾದಿಗಳ ನಂಬಿಕೆಯ ಹಿನ್ನೆಲೆಯಲ್ಲಿ ಅದು ಕೂಡಾ ಈ ರೀತಿ ಮಾತೃ ಮೂಲೀಯ ವಿಧಾನದಿಂದ ಮುಂದುವರೆಯುತ್ತದೆ. ಅದೇ ರೀತಿ ನಾಗ ದೋಷ ಪರಿಹಾರ ಇತ್ಯಾದಿ ವಿಧಾನಗಳು ಕೂಡ ಆ ನಂಬಿಕೆಯ ಹಿನ್ನೆಲೆಯಲ್ಲಿಯೇ ಮುಂದುವರಿಯುತ್ತದೆ. ನಾಗನಿಗೆ ನಡೆದು ಕೊಳ್ಳುವವರು. ನಾಗ ಪ್ರತಿಷ್ಠೆ, ಪೂಜೆ ಪುನಸ್ಕಾರಗಳು ಕೂಡಾ ಮಾತೃ ಮೂಲೀಯ ಪದ್ಧತಿಯ ಹಿನ್ನೆಲೆಯಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿದೆ. ಮೂಲಸ್ಥಾನದ ಕಲ್ಪನೆ, ಇವೆಲ್ಲವೂ ಕೂಡ ಈ ವ್ಯವಸ್ಥೆಯನ್ನೇ ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ಅನೇಕ ಸಾಂಸ್ಕೃತಿಕ ಸಾದೃಶ್ಯ ಒಂದೇ ಸಂಸ್ಕೃತಿಯ ಎರಡು ಕವಲಾಗಿ ನಮಗೆ ಕಂಡು ಬರುತ್ತದೆ.

ತುಳುನಾಡಿನ ವಿಶಿಷ್ಟ ಜನಪದ ಕ್ರೀಡೆಯಾದ ಕಂಬುಲ, ಇದರಲ್ಲಿ ನಾಗಾರಾಧನೆಯ ಪ್ರಭಾವವು ಕಂಡುಬರುತ್ತದೆ. ಸಾಮಾನ್ಯವಾಗಿ ಊರಿಗೊಂದರಂತೆ 'ಕಂಬುಲದ ಗದ್ದೆ' ಗಳಿರುತ್ತವೆ. (ತುಳು-ಕಂಬ್ಳ ಖಂಡ) ಈ ಗದ್ದೆ ಗಳಲ್ಲಿ ಕಂಬುಲ ನಡೆಸಲಾಗುತ್ತದೆ. ಕಂಬುಲಕ್ಕಾಗಿಯೇ ಚೆನ್ನಾಗಿ ಸಾಕಿ ಸಲಹಿದ ಕೋಣಗಳನ್ನು ಇಲ್ಲಿ ಓಡಿಸಲಾಗುತ್ತದೆ.

ಕಂಬುಲದ ಪ್ರಾರಂಭದಲ್ಲಿ 'ನಾಗಣಿಪೂಣೆ' ಎಂಬ ಆಚರಣೆಯನ್ನು ನಡೆಸಲಾಗುತ್ತದೆ. ಊರಿನ ಅಥವಾ ಕಂಬುಲ ಗದ್ದೆಯ ಯಜಮಾನ ಸಮೀಪದ ನಾಗ ಬನಕ್ಕೆ ತೆರಳಿ ನಾಗನಿಗೆ ಕೈಮುಗಿದು ಕಂಬುಲದ ಯಶಸ್ಸಿಗೆ ವೈದಿಕರ ಮುಖೇನ ಪ್ರಾರ್ಥಿಸುತ್ತಾನೆ. ಬಳಿಕ ಅಲ್ಲಿಂದ ಪ್ರಸಾದ ರೂಪದಲ್ಲಿ ಹಿಂಗಾರದ ಎಸಳುಗಳನ್ನು ತಂದು ಒಂದೆರಡು ಎಸಳುಗಳನ್ನು ಯಜಮಾನನ ಕೋಣಗಳಿಗೆ ಕಟ್ಟಲಾಗುತ್ತದೆ. ಯಜಮಾನರ ಕೋಣಗಳನ್ನು 'ಮೂರ್ತದ ಎರು' ಎಂದು ಕರೆಯುತ್ತಾರೆ. ಮೂರ್ತದ ಎರುವಿಗೆ ಹಿಂಗಾರ ಕಟ್ಟಿದ ಬಳಿಕ ಉಳಿದ ಕೋಣಗಳ ಹಣೆಗೆ ಹಿಂಗಾರ ಕಟ್ಟಲಾಗುತ್ತದೆ. ಪ್ರಸಿದ್ಧ ಧಾರ್ಮಿಕ ಹಿನ್ನೆಲೆಯಿರುವ 'ವಂಡಾರು' ಕಂಬಳದಲ್ಲಿ ಹಿಂಗಾರ ಕಟ್ಟಿದ ಬಳಿಕವೇ ಕೋಣಗಳನ್ನು ಗದ್ದೆಗೆ ಇಳಿಸಲಾಗುತ್ತದೆ. ಹಿಂಗಾರ ಕಟ್ಟದೆ ಕೋಣಗಳನ್ನು ಗದ್ದೆಗೆ ಇಳಿಸಬಾರದೆಂಬ ನಿಷೇಧವಿದೆ.

ಓಟದ ಕೋಣಗಳ ಸ್ಪರ್ಧೆ ಮುಗಿದ ಬಳಿಕ ಕಂಬಳ ಗದ್ದೆಯ ಮಧ್ಯದಲ್ಲೊಂದು ಧ್ವಜವನ್ನು ನೆಡಲಾಗುತ್ತದೆ. ಈ ಧ್ವಜಕ್ಕೆ 'ನಾಗ ಧ್ವಜ' ಎಂಬ ಹೆಸರಿದೆ ನಾಗಧ್ವಜವನ್ನು ಸಾಮಾನ್ಯವಾಗಿ ಅರಸಿನ ಬಣ್ಣದ ಹೂಗಳಿಂದ ಅಲಂಕರಿಸುತ್ತಾರೆ. ಈ ಕಂಬವನ್ನು ಗದ್ದೆಯಲ್ಲಿ ನೆಡುವ ಮೊದಲು ನೆಡುವ ಜಾಗಕ್ಕೆ ಸ್ವಲ್ಪ ಹಾಲನ್ನು ಎರೆಯಲಾಗುತ್ತದೆ. ಈ ಆಚರಣೆ ವಂಡಾರು ಕಂಬಳದಲ್ಲಿ ಪ್ರಚಲಿತದಲ್ಲಿದೆ. ಕಂಬಳ ಗದ್ದೆಗೆ ತಾಗಿಕೊಂಡೇ ಭುವನೇಶ್ವರಿ ಗುಡಿ ಮತ್ತು ನಾಗಬನ ನಿರ್ಮಿಸಲಾಗಿದೆ. ಕಂಬಳ ಮತ್ತು ನಾಗಾರಾಧನೆಯ ನಡುವಿನ ಸಂಬಂಧದ ಕುರಿತು ಡಾ. ಪುರುಷೋತ್ತಮ ಬಿಳಿಮಲೆಯವರು ಉಲ್ಲೇಖಿಸುತ್ತಾ- ''ಹಿಂಗಾರದ ಅರಸಿನ ಬಣ್ಣವು ಶುಭಸೂಚಕವಾಗಿದ್ದು, ಅದು ನಾಗರ ಹಾವಿನ ಬಣ್ಣವೂ ಆಗಿದೆ. ಮದುವೆಯ ಹಿಂದಿನ ದಿನ ಮಧೂವರರ ಕೈಗೆ ಅರಶಿನವನ್ನು ತಿಕ್ಕಲಾಗುತ್ತದೆ. ಕಂಬುಲದ ದಿನವೂ ಅಕ್ಕಿ ಬೆಳೆಯುವ ಭೂಮಿಯನ್ನು ಉಳುವ ಕೋಣಗಳ ಮೈಗೆ ಹಿಂಗಾರವನ್ನು ಕಟ್ಟಲಾಗುತ್ತದೆ. ಕೋಣಗಳ ಕೊರಳಿಗೆ ಲಿಂಬೆ ಹುಳಿಯನ್ನು ಕಟ್ಟಲಾಗುತ್ತದೆ. ರಾತ್ರಿಯಿಡೀ ಕುಣಿಯುವ, ಲೈಂಗಿಕ ಚಟುವಟಿಕೆಗಳಲ್ಲಿ ಮಗ್ನರಾಗಿರುವ ಕೊರಗರಿಗೂ ಮರುದಿನ ಬೆಳಿಗ್ಗೆ ಲಿಂಬೆಹುಳಿಯನ್ನು ಗೌರವಾರ್ಥ ನೀಡುತ್ತಾರೆ. ಇದನ್ನೆಲ್ಲ ಗಮನಿಸಿದರೆ ಕಂಬುಲದೊಂದಿಗೆ ಸಂಬಂಧ ಹೊಂದಿರುವ ನಾಗಪೂಜೆಯೂ

ಫಲವಂತಿಕೆಯ ಆಚರಣೆಯನ್ನೇ ಸಂಕೇತಿಸುತ್ತದೆ ಎನ್ನಬಹುದು''[೬] ಎಂದು ಅಭಿಪ್ರಾಯ ವ್ಯಕ್ತವಾಗಿದೆ. ಗದ್ದೆಯ ಫಲವಂತಿಕೆ ಮತ್ತು ಮಾನವನ ಫಲವಂತಿಕೆಯ ನಡುವಿನ ತಾದಾತ್ಮ್ಯ ಸಂಬಂಧವನ್ನು ಇಲ್ಲಿ ಆಚರಣೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

೭.೫ ನಾಗ ಮತ್ತು ಶಕ್ತಿ ಸಂಬಂಧ

ವೈದಿಕ ಧಾರ್ಮಿಕ ಸಾಹಿತ್ಯದ ಪ್ರಕಾರ ಅನೇಕ ವೈದಿಕ ದೇವತೆಗಳಿಗೆ ನಾಗನ ಸಂಬಂಧವಿದೆ. ಶಿವ, ವಿಷ್ಣು, ಗಣಪತಿ, ದುರ್ಗಿ ಇತ್ಯಾದಿ. ಅದೇ ರೀತಿ ನಾಗನನ್ನು ಶಕ್ತಿಯೊಂದಿಗೆ ಸಮೀಕರಿಸಿ ಪೂಜಿಸುವ ಸಂಪ್ರದಾಯವು ಕಂಡುಬರುತ್ತದೆ. ನಾಗ ಸಂಬಂಧಿಯಾದ ಭಗವತಿ ಸ್ವರೂಪಗಳು ಕೇರಳದಲ್ಲಿವೆ. ನಾಗ ಭಗವತಿ, ನಾಗ ಚಾಮುಂಡಿ, ಇತ್ಯಾದಿಗಳು. ಆಮೇಡ ಮಂಗಳಂ ನಾಗಾಲಯದಲ್ಲಿ ಸಪ್ತ ಮಾತೃಕೆಗಳೊಂದಿಗೆ ನಾಗನನ್ನು ಪೂಜಿಸಲಾಗುತ್ತದೆ. ದುರ್ಗೆ ಎನ್ನವುದು ಶಕ್ತಿಯ ಸಂಕೇತ. ನಾಗ ಜ್ಞಾನಶಕ್ತಿ ಇರುವ ಉರಗ ಎಂಬ ನಂಬಿಕೆಯಿಂದೆ. ಆದುದರಿಂದ ಇನ್ನೊಬ್ಬರಿಗೆ ಜ್ಞಾನ ಕೊಡುವ ಜ್ಞಾನರೂಪಿಯಾಗಿ ಕೂಡ ನಾಗನನ್ನು ಪೂಜಿಸುತ್ತಾರೆ. ಜ್ಞಾನವು ಒಂದು ಶಕ್ತಿಯಾಗಿರುವುದರಿಂದ ಶಕ್ತಿಯ ಅಧಿವೇತೆಯಾಗಿರುವ ದುರ್ಗೆಗೂ ನಾಗನಿಗೂ ಸಂಬಂಧವಿರುವುದು ಸಹಜವಾಗಿದೆ. ಕೆಲವು ಪ್ರದೇಶಗಳಲ್ಲಿ ಹುತ್ತದ ರೂಪದಲ್ಲಿಯೂ ಕೂಡ ದೇವಿ ಶಕ್ತಿಯನ್ನು ಪೂಜಿಸುವ ಸಂಪ್ರದಾಯವಿದೆ. ಮಂದಾರ್ತಿಯಲ್ಲಿ ಹುತ್ತದ ರೂಪದಲ್ಲಿ ಶಕ್ತಿಯನ್ನು ಆರಾಧಿಸಲಾಗುತ್ತದೆ. ನಾಗನಿಗೆ ಭೂಮಿ ಪುತ್ರ ಎಂಬ ಹೆಸರು ಇದೆ. ಇಲ್ಲಿ ಹುತ್ತವನ್ನು ಭೂಮಿಯೆಂದು ಕಲ್ಪಿಸಿ ಪೂಜಿಸಲಾಗುತ್ತದೆ.

೭.೬ ನಾಗಬೀದಿ

ನಾಗಸಂಚಾರದ 'ಪಥ'ವನ್ನು 'ನಾಗಬೀದಿ' ಎಂದು ಕರೆಯಲಾಗುತ್ತದೆ. ಈ ಪ್ರದೇಶವನ್ನು ರೂಢಿಯಲ್ಲಿ 'ನಾಗನೆಡೆ' ಎಂದು ಕರೆಯುವುದು ವಾಡಿಕೆ. ಇದು ನಂಬಿಕೆಯ ನೆಲೆಯಲ್ಲಿ ಪರಿಗಣಿಸಲ್ಪಡುವ ವಿಚಾರ. ಇಂಥ ಪ್ರದೇಶವೇ ನಾಗಬೀದಿ ಎಂದು ನಿರ್ಧರಿಸುವುದಕ್ಕೆ ಯಾವುದೇ ಆಧಾರ ಇಲ್ಲ. ಧಾರ್ಮಿಕ ನಂಬಿಕೆ ಮತ್ತು ಜ್ಯೋತಿಷ್ಯ ಶಾಸ್ತ್ರದ ಮೂಲಕ ನಾಗ ಬೀದಿಯನ್ನು ನಿರ್ಧರಿಸಲಾಗುತ್ತದೆ. ಸರ್ಪಗಳು ಒಂದು ಬನದಿಂದ ಇನ್ನೊಂದು ಬನಕ್ಕೆ ಸಂಚಾರ ನಡೆಸುತ್ತವೆ ಎಂಬ ನಂಬಿಕೆಯಿದೆ. ಅದು ನಿಗೂಢವಾದ ನಾಗನ ದಾರಿಯನ್ನು ಕಲ್ಪಿಸಿಕೊಡುತ್ತದೆ. ಅಂದರೆ ಭೂಮಿಯ ನರನಾಡಿಗಳಂತೆ ನಾಗ ಸಂಚಾರವಿರುತ್ತದೆ ಎಂಬ ನಂಬಿಕೆಯಿದೆ. ಅದರ ಸಂಚಾರಕ್ಕೆ ಅಡ್ಡ ಬರುವ ಪ್ರಶ್ನೆ ಬಂದಾಗ ಅಲ್ಲಿ ತೊಡಕು ಅಥವಾ ಆತಂಕ ಉಂಟಾಗುತ್ತದೆ. ಅದು ನಿಸರ್ಗದ ಒಂದು ರೀತಿಯ ಆತಂಕವಿರಬಹುದು. ನಿಸರ್ಗದಲ್ಲಿ ತನ್ನದೇ ಆದ ಕೆಲವು ನಿಗೂಢ ವಿಷಯಗಳಿರುತ್ತವೆ. ಆ ನಿಗೂಢ ವಿಷಯಗಳಿಗೆ ಆತಂಕವಾಗದ ಅಲ್ಲಿಯ ವಿಷಯಗಳು ಅಲ್ಲೋಲ ಕಲ್ಲೋಲವಾಗುತ್ತದೆ. ಆ ರೀತಿಯ ಆತಂಕವಾದಾಗ ಕೆರೆ ಬಾವಿಗಳ ನೀರು ಹಳದಿಯಾಗುತ್ತದೆ ಎಂಬ ನಂಬಿಕೆ ರೂಢಿಯಲ್ಲಿದೆ. ನಾಗ ಬೀದಿಯಲ್ಲಿ ಅಭಿವೃದ್ಧಿ ಕಾರ್ಯ, ಕೆರೆ, ಬಾವಿ, ನಿರ್ಮಾಣ, ಗೃಹ ನಿರ್ಮಾಣ ಇತ್ಯಾದಿಗಳನ್ನು ನಿರ್ಮಿಸಿದಾಗ ಅಭಿವೃದ್ಧಿ ಕುಂಠಿತವಾಗುತ್ತದೆ ಎಂಬ ನಂಬಿಕೆಯಿದೆ. ಇದು ನಂಬಿಕೆಯೇ ಅಥವಾ ವಾಸ್ತವವೇ ಎನ್ನುವದು ಗಮನಿಸಬೇಕಾದ ವಿಚಾರ. ಆದುದರಿಂದ ಈ ಎಲ್ಲ

ವಿಷಯಗಳನ್ನು ಶುಚೀಕರಿಸಿ ಜೀವನಕ್ಕೊಂದು ಭದ್ರತೆ, ಶುಭ್ರತೆ, ಸಂತುಷ್ಟಿ, ಇದೆಲ್ಲ ಬರುವ ದಿಶೆಯಲ್ಲಿ ಈ ನಂಬಿಕೆಯನ್ನು ಅನುಸರಿಸಿಕೊಂಡು ಬರಲಾಗುತ್ತದೆ. ಕೇರಳದಲ್ಲಿ ನಾಗ ಬೀದಿಯ ಕಲ್ಪನೆಯನ್ನು 'ನಾಗದಂಡ್' ಎಂದು ಕರೆಯಲಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಅಲ್ಲಿ ಆ ಕಲ್ಪನೆ ವಿರಳವಾಗುತ್ತಿದೆ.

ಟಿಪ್ಪಣಿಗಳು

೧. ರಾಜಗೋಪಾಲ ಕ.ವೆಂ. ೧೯೭೭, ಬೌದ್ಧ ಮತದಲ್ಲಿ ಯಕ್ಷಕಲೆ, ಪುಟ - ೯೧-೯೨

೨. ಶಿವರಾಮ ಕಾರಂತ, ೧೯೫೭, ಯಕ್ಷಗಾನ ಬಯಲಾಟ, ಪುಟ - ೫೬-೫೭

೩. ಡಾ. ಪುರುಷೋತ್ತಮ ಬಿಳಿಮಲೆ, ೧೯೯೦, ಕರಾವಳಿ ಜಾನಪದ, ಪುಟ - ೧೧೪

* * * * *

ಅಧ್ಯಾಯ - ೮

ಉಪಸಂಹಾರ

ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯ ಕುರಿತಾದ ಸಂಶೋಧನಾತ್ಮಕ ಅಧ್ಯಯನದ ಉಪಸಂಹಾರದ ಕೊನೆಯ ಹಂತಕ್ಕೆ ಬರಲಾಗಿದೆ. ಇದುವರೆಗಿನ ಈ ಅಧ್ಯಯನದಲ್ಲಿ ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯ ವಿವಿಧ ಮುಖಗಳನ್ನು ವಿಶ್ಲೇಷಿಸಲಾಗಿದೆ. ನಾಗಾರಾಧನೆ ವಿಭಿನ್ನ ಸ್ತರಗಳಲ್ಲಿ ವೈವಿಧ್ಯಪೂರ್ಣವಾಗಿ ಆಚರಿಸುತ್ತಿರುವುದು ಕಂಡುಬಂದಿದೆ. ಪ್ರಸ್ತುತ ಅಧ್ಯಯನವು ನಾಗಾರಾಧನೆಗೆ ಸಂಬಂಧಪಟ್ಟಹಾಗೆ ಮೊದಲಬಾರಿಗೆ ಕನ್ನಡದಲ್ಲಿ ನಡೆದಿರುವ ಪೂರ್ಣ ಪ್ರಮಾಣದ ಅಧ್ಯಯನವಾಗಿದೆ. ಕನ್ನಡದಲ್ಲಿ ಈವರೆಗೆ ಬಿಡಿ ಬಿಡಿಯಾದ ಲೇಖನಗಳು ಮತ್ತು ಪ್ರಾಸಂಗಿಕವಾಗಿ ಕೆಲವು ಅಪೂರ್ಣ ಅಧ್ಯಯನಗಳು ನಡೆದಿವೆ. ಅದೇ ರೀತಿ ಕರಾವಳಿ ಮತ್ತು ಕೇರಳ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಪ್ರತ್ಯೇಕವಾಗಿ ಬಿಡಿ ಬಿಡಿ ಅಧ್ಯಯನಗಳು ಆಗಿರುವುದು ಕಂಡುಬಂದಿದೆ. ಮೊದಲ ಬಾರಿಗೆ ದಕ್ಷಿಣ ಭಾರತದ ನಾಗಾರಾಧನೆಯ ಅಧ್ಯಯನಕ್ಕೆ ಅನ್ವಯಿಸಬಹುದಾದ ಅಧ್ಯಯನ ಪರಿಪ್ರೇಕ್ಷ್ಯವೊಂದನ್ನು ಇಲ್ಲಿ ರೂಪಿಸಲಾಗಿದೆ.

ನಾಗಾರಾಧನೆ ಸಂಪ್ರದಾಯವು ಮಾನವನ ಆದಿಮ ಸಂಸ್ಕೃತಿಯಿಂದ ತೊಡಗಿ ಇಂದಿನ ಆಧುನಿಕ ಸಂಸ್ಕೃತಿಯವರೆಗೆ ವಿಶೇಷ ಮಹತ್ವ ಪಡೆದುಕೊಂಡಿರುವುದನ್ನು ಅಧ್ಯಯನದ ಮೂಲಕ ತಿಳಿದುಕೊಳ್ಳಲಾಗಿದೆ. ಭಾರತದ ಮೂಲ ಜನಾಂಗದವರು ಬೆಳೆಸಿಕೊಂಡು ಬಂದ ನಾಗಾರಾಧನೆಯ ಪ್ರಾಚೀನ ಪದ್ಧತಿ ಮುಂದಿನ ಕಾಲಘಟ್ಟಗಳಲ್ಲಿ ವೈದಿಕ ಹಾಗೂ ಪೌರಾಣಿಕ ಸಂಪ್ರದಾಯಗಳೊಡನೆ ಬೆರೆತು ಹೊಸರೂಪವನ್ನು ಪಡೆದು ಇಂದಿಗೂ ಬಂದು ಜೀವಂತ ವೈಭವೋಪೇತ ಆಚರಣೆಯಾಗಿ ವಿವಿಧ ಸ್ವರೂಪಗಳಲ್ಲಿ ಉಳಿದು ಬಂದಿದೆ. ಇಲ್ಲಿರುವ ಆರಾಧನೆ ಪ್ರಸ್ತಾವವನ್ನು ಗಮನಿಸಿದರೆ ಪೂರ್ವದಲ್ಲಿ ಎರಡೂ ರಾಜ್ಯಗಳು ಒಂದೇ ರೀತಿಯ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವುದು ಕಂಡುಬರುತ್ತದೆ. ಈ ಎರಡೂ ಭೂ ಪ್ರದೇಶಗಳಲ್ಲಿ ನಾಗಾರಾಧನೆಯು ಅತಿ ಪ್ರಾಚೀನವಾದ ಒಂದು ಮತಾಚಾರವಾಗಿದ್ದು ಫಲವಂತಿಕೆಯ ಹಿನ್ನೆಲೆಯಲ್ಲಿ ಇಂದಿಗೂ ಆಚರಿಸಿಕೊಂಡು ಬರುತ್ತಿರುವುದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕರಾವಳಿಯ ಈ ಭೂಪ್ರದೇಶದಲ್ಲಿ ಪ್ರಸ್ತುತ ಸಂದರ್ಭದಲ್ಲಿ ನಾಗಾರಾಧನೆಯು ಅತಿ ಪ್ರಭಾವಶಾಲಿಯಾಗಿ ವಿಭಿನ್ನ ಸ್ವರೂಪಗಳಲ್ಲಿ ಆಚರಿಸಲ್ಪಡುತ್ತದೆ. ಇದಕ್ಕೆ ಪ್ರಮುಖ ಕಾರಣ ಈ ಭಾಗವು ವೇಗವಾಗಿ

ಆರ್ಥಿಕಾಭಿವೃದ್ಧಿಯನ್ನು ಹೊಂದುತ್ತಿರುವುದು ಮತ್ತು ಜನತೆಯಲ್ಲಿರುವ ಸ್ಪರ್ಧಾತ್ಮಕವಾದ ಧಾರ್ಮಿಕ ಮನೋಭಾವವೇ ಕಾರಣವಾಗಿದೆ. ಇದರ ಕಾರಣದಿಂದಾಗಿಯೇ ಆಚರಣೆಯನ್ನು ನಡೆಸಿಕೊಡುವ ಜನವರ್ಗವು ಅದರಲ್ಲಿ ಏಕಸ್ವಾಮ್ಯತೆಯನ್ನು ಸಾಧಿಸಿರುವುದು ಕಂಡುಬಂದಿದೆ.

ಈ ಭೂಪ್ರದೇಶದ ನಾಗಾರಾಧೆಯ ಆಚರಣೆಯ ಸ್ವರೂಪವನ್ನು ಗಮನಿಸಿದರೆ ಇಲ್ಲಿರುವ ಹೆಚ್ಚಿನೆಲ್ಲ ಪ್ರಕಾರಗಳು ಪೂರ್ವದಲ್ಲಿ ಆದಿಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಆಚರಿಸ್ಪಡುತ್ತಿದ್ದವುಗಳಾಗಿವೆ. ಇವೆಲ್ಲವೂ ಕಾಲಾಂತರದಲ್ಲಿ ವೈದಿಕೀಕರಣಗೊಂಡ ಪ್ರಕ್ರಿಯೆಗಳು ಎನ್ನುವುದು ವೇದ್ಯವಾಗುತ್ತದೆ.

ಈ ಅಧ್ಯಯನದ ಒಟ್ಟಾರೆ ಫಲಿತಾಂಶಗಳು ಹೀಗಿವೆ.

೦೧. ಕೇರಳದ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆಯ ಆಚರಣೆಯ ವಿವಿಧ ಸ್ವರೂಪಗಳನ್ನು ಗಮನಿಸಿದಾಗ ನಾಗಾರಾಧನೆಯು ಮೂಲತಃ ಕೇರಳದ ಪ್ರಾಚೀನ ಆರಾಧನ ಪರಂಪರೆಯಾಗಿರುವುದು ತಿಳಿದುಬಂದಿದೆ. ಅದರಲ್ಲಿಯೂ ಕೇರಳದ ದಲಿತ ಸಮುದಾಯದ ಪುಳ್ಳವರು ಮತ್ತು ಬಾಕುಡರಲ್ಲಿ ಇದು ಮೂಲ ರೂಪವನ್ನು ಕಾಣಿಸಿಕೊಂಡಿದ್ದಿರಬಹುದು.

೦೨. ಕೇರಳದ ನಾಗಾರಧನೆಯಲ್ಲಿಯೇ ಕಾಲಕ್ರಮೇಣ ಅನೇಕ ಫಲ್ಲಟಗಳು ಉಂಟಾಗಿವೆ. ಮೊದಲನೆಯದಾಗಿ ಕೌಟುಂಬಿಕ ದೇವಾಲಯಗಳು ಈ ಮಾದರಿಯವು ಇದು ಮೂಲ ಆರಾಧನ ಸ್ವರೂಪದಲ್ಲಿ ಆಗಿರುವ ಬದಲಾವಣೆಯ ಇನ್ನೊಂದು ಹಂತ ಎಂದು ಪರಿಗಣಿಸ ಬಹುದಾಗಿದೆ. ಇಲ್ಲಿರುವ ನಾಗದೇವಾಲಯಗಳ ಹಿಂದಿರುವ ಪೌರಾಣಿಕ ಹಿನ್ನೆಲೆ ಮತ್ತು ಐತಿಹ್ಯಗಳಿಂದ ಇದು ಸ್ಪಷ್ಟವಾಗುತ್ತದೆ.

೦೩. ಕರಾವಳಿಯ ನಾಗಾರಾಧನೆ ಕೇರಳದ ನಾಗಾರಾಧನೆಗಿಂತ ಮತ್ತೊಂದು ಹಂತದ ಪರಿವರ್ತನೆಯಾಗಿ ಕಂಡುಬರುತ್ತದೆ. ತುಳನಾಡಿನ ಉತ್ತರದಲ್ಲಿ ಆಚರಿಸುವ ಕಾಡ್ಯನ ಆರಾಧನೆಯು ಈ ಪ್ರದೇಶದ ನಾಗಾರಾಧನೆಯ ಮೂಲ ಪರಂಪರೆಯಾಗಿ ಕಂಡುಬರುತ್ತದೆ. ದಲಿತರ ಈ ಕಾಡ್ಯ ಆರಾಧನೆಯಲ್ಲಿ ಕಂಡುಬರುವ 'ಕಾಡ್ಯನಾಟ' ಇಂದು ಅತಿ ವಿರಳವಾಗಿದೆ. ಅದರ ಬದಲಾಗಿ ಕರಾವಳಿಯಲ್ಲಿ ಮಾತ್ರ ಕಾಣಿಸಿಕೊಳ್ಳುವ ವೈದ್ಯರು ಎಂಬ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು ನಡೆಸುವ ನಾಗಾರಾಧನೆ ಇಂದು ಅತಿ ಜನಪ್ರಿಯವಾಗಿದೆ. ಮತ್ತು ಹೆಚ್ಚು ವೈಭವೋಪೇತವಾಗಿದೆ. ಕೆಲವೊಮ್ಮೆ ಜನಸಾಮಾನ್ಯರ ಕೈಗೆಟುಕದಷ್ಟು ದುಬಾರಿಯಾಗಿದೆ. ಆದಿಮ ಸಂಸ್ಕೃತಿಯ ಸ್ವರೂಪವೊಂದು ಆರ್ಯೀಕರಣಗೊಂಡ ಬಗೆ ಇದರಿಂದಾಗಿ ಸ್ಪಷ್ಟವಾಗಿ ಮನದಟ್ಟಾಗುತ್ತದೆ.

೦೪. ಕೇರಳದಲ್ಲಿ ದಲಿತ ಸಮುದಾಯಕ್ಕೆ ಸೇರಿದ ಪುಳ್ಳವರು ಕುಲಕಸುಬಾಗಿ ನಾಗಾರಾಧನೆಯನ್ನು ನಡೆಸುತ್ತಿದ್ದರೆ ಕರಾವಳಿಯಲ್ಲಿ ಬ್ರಾಹ್ಮಣ ವರ್ಗದವರಾದ ವೈದ್ಯರು ಕೂಡ ವೃತ್ತಿಯನ್ನಾಗಿ (ಕೆಲವೇ ಕುಟುಂಬಗಳು) ನಡೆಸಿಕೊಂಡು ಬರುತ್ತಿದ್ದಾರೆ. ಇದು ಒಂದು ಪ್ರದೇಶದ ಜಾತಿಗಳ ಕುಲಕಸುಬುಗಳು ಮತ್ತೊಂದು ಪ್ರದೇಶದಲ್ಲಿ ಬೇರೆಯೇ ಜಾತಿಗಳ ವೃತ್ತಿಯಾಗಿ ಪರಿವರ್ತನೆಯಾಗಿರುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ.

೦೫. ನಾಗಾರಾಧನೆ ತನ್ನದೇ ಜನಪದ ರಂಗಭೂಮಿ ಕಲೆಗಳಿಗೂ ಪ್ರೇರಣೆಯನ್ನಿತ್ತಿದೆ ಈ ಪ್ರದೇಶದಲ್ಲಿ ಕಂಡುಬರುವ ಭೂತಾರಾಧನೆ ನಾಗಮಂಡಲದಂತಹ ಜಾನಪದ ರಂಗ ಪ್ರಕಾರಗಳ ಹಾಡು, ನೃತ್ಯ ಶೈಲಿಗಳು

ಯಕ್ಷಗಾನಕ್ಕೆ ಪ್ರೇರಣೆಯಾಗಿರುವುದು ಕಂಡುಬರುತ್ತದೆ. ಯಕ್ಷಗಾನದ ಹಾಗೆಯೇ ನಾಗಾರಾಧನೆಯನ್ನು ಪ್ರತ್ಯೇಕ ರಂಗಭೂಮಿಯನ್ನಾಗಿ ಬೆಳೆಸಬಹುದಾದ ಸಾಧ್ಯತೆ ಇದೆ.

೦೬. ನಾಗಾರಾಧನೆಯಲ್ಲಿಯು ಕೂಡ ಆರಾಧೆ ಮತ್ತು ಕಲಾವಂತಿಕೆಯನ್ನು ಮೀರಿ ಸಾಮಾಜಿಕ ಪದ್ಧತಿಯಾದ ಜಾತೀಯ ಶ್ರೇಣೀಕರಣ ವ್ಯವಸ್ಥೆಯು ಪರಿಣಾಮವನ್ನುಂಟುಮಾಡಿದೆ. ನಾಗಗಳಲ್ಲಿಯು ವರ್ಣ ವ್ಯವಸ್ಥೆಯನ್ನು ಕಲ್ಪಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಇದು ಯಾವುದೇ ಆರಾಧನೆ ಒಟ್ಟಾರೆ ಸಮಾಜದ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ.

೦೭. ಕೇರಳ ಮತ್ತು ಕರಾವಳಿ ಕರ್ನಾಟಕದ ನಾಗಾರಾಧನೆ ನಿರ್ಧಿಷ್ಟವಾಗಿ ಪ್ರಾದೇಶಿಕವಾದ ಒಂದು ಮತಾಚಾರ. ಇದು ಯಾವುದೇ ಒಂದು ನಿರ್ದಿಷ್ಟ ಪಂಗಡ ಅಥವಾ ಸಮುದಾಯಕ್ಕೆ ಸಂಬಂಧಿಸಿದ್ದಲ್ಲ. ಕಾಲಾಂತರದಲ್ಲಿ ನಡೆದಿರಬಹುದಾದ ಬದಲಾವಣೆಗಳಿಂದ ಈಗ ಕಂಡುಬರುವಂತಹ ಏಕಸ್ವಾಮ್ಯತೆ ನಡೆದಿರಬೇಕು.

೦೮. ನಾಗಾರಾಧನೆಯನ್ನು ಕೇವಲ ಆಚರಣೆಯ ದೃಷ್ಟಿಯಿಂದ ಮಾತ್ರ ನೋಡದೆ ನಾಗಪಂಥ ಎನ್ನುವ ವ್ಯಾಪಕ ದೃಷ್ಟಿಕೋನದಿಂದ ನೋಡುವ ಅವಶ್ಯಕತೆಯಿದೆ. ಇದು ದಕ್ಷಿಣ ಭಾರತದ ಪ್ರಬಲವಾದ ಜೀವಂತವಾದ ಒಂದು ಪಂಥವು ಆಗಿದೆ. ಈ ಕುರಿತು ಶಂಬಾಜೋಶಿಯವರು ತಾಳಿದಂತಹ ನಕಾರಾತ್ಮಕ ಧೋರಣೆಗಳನ್ನು ತಾಳಬೇಕಾಗಿಲ್ಲ.

೦೯. ಕರಾವಳಿಯಲ್ಲಿ ನಾಗ-ಸುಬ್ರಹ್ಮಣ್ಯನನ್ನು ಅಭೇದ್ಯವಾಗಿ ಏಕತಾ ಬಾವದಿಂದ ಪೂಜಿಸಲಾಗುತ್ತದೆ. ವೇಲನ್ ಮತ್ತು ಮರುಗನ್ ನನ್ನು ಸುಬ್ರಹ್ಮಣ್ಯನ ಇನ್ನೊಂದು ರೂಪವಾಗಿ ಪೂಜಿಸುವ ಸಂಪ್ರದಾಯ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದೆ. ಈ ಶಕ್ತಿಗಳು ಆದಿವಾಸಿಗಳ ರಕ್ಷ ಶಕ್ತಿಗಳಾಗಿರುವುದು ಕಂಡುಬರುತ್ತದೆ. ಆದ್ದರಿಂದ ಸುಬ್ರಹ್ಮಣ್ಯನು ಕೂಡ ಪೂರ್ವದಲ್ಲಿ ಈದೇ ಪ್ರಕಾರದ ಒಂದು ಶಕ್ತಿಯಾಗಿರುವುದು ಕಂಡುಬರುತ್ತದೆ. ಕ್ರಮೇಣ ನಡೆದಿರುವ ಸ್ಥಿತ್ಯಂತರದಿಂದಾಗಿ ಸುಬ್ರಹ್ಮಣ್ಯನು ವೈಧಿಕ ದೇವರಾಗಿ ಪರಿವರ್ತನೆಗೊಂಡಿರುವುದು ವೇದ್ಯವಾಗುತ್ತದೆ.

೧೦. ತುಳುನಾಡಿನ ನಾಗಾರಾಧನೆಯ ಆಚರಣೆಯ ಪ್ರಕಾರಗಳನ್ನು ಮತ್ತು ನಾಗ ಶಿಲ್ಪಕಲೆಯನ್ನು ಗಮನಿಸುವಾಗ ನಾಗಾರಾಧನೆಯ ಮೇಲೆ ಬೌದ್ಧ ಸಂಸ್ಕೃತಿಯ ಪ್ರಭಾವ ಸ್ಪಷ್ಟವಾಗಿ ಕಂಡುಬರುತ್ತದೆ. ನಾಗಬ್ರಹ್ಮ ಅಥವಾ ಬ್ರಹ್ಮ ಆರಾಧನೆಯು ಈ ಹಿನ್ನೆಲೆಯಲ್ಲಿಯೇ ಬೆಳೆದು ಬಂದಿರುವುದು ಇದರಿಂದ ಮನದಟ್ಟಾಗುತ್ತದೆ.

ಈ ರೀತಿ ಪ್ರಸ್ತುತ ಅಧ್ಯಯನದಲ್ಲಿ ಹಲವು ಫಲಿತಗಳನ್ನು ಕಂಡುಕೊಳ್ಳಲಾಗಿದೆ.

* * * * *

ಅನುಬಂಧ


ನಕ್ಷೆ

ಹಾಡುಗಳು

ಪಕ್ಕ ಮಾಹಿತಿ

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು


ಕೇರಳ ರಾಜ್ಯ ಸಾಂಸ್ಕೃತಿಕ
KARNATAKA
KASARAGOD
WAYANAD
KOZHIKODE
MALAPPURAM
TAMILNADU
PALAGHAT
LAKSHADWEEP SEA
TRICHUR
IDUKKI
KOTTAYAM
PATHANAM-
THITTA
QUILON
TRIVANDRUM



ಕರ್ನಾಟಕ-ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ





ಕಾಡ್ಯನ ಹಾಡುಗಳು

೧. ಕಾಡ್ಯನ ಹುಟ್ಟು

ಯಾ ಬಾಳು ಗಿನ ಬಾಳೆ ಯಾ ಸ್ವಾಮಿ ಬಾಳೆನ್ನು
ಯಾ ಬಾಳು ಗಿನ ಬಾಳೆ ಯಾ ಎನ್ನುವ ತೊರಿ ಬಾಳು
ಯಾ ಬಾಳು ಗಿನ ಬಾಳೆ ಯಾ ಮೇಲುಳಿ ಲೋಕ ಬಾಳು
ಯಾ ಮೇಲುಳಿ ಲೋಕದಾಯೆ ಯಾ ನಾರಾಯಣ ಸ್ವಾಮಿ ಬಾಳು
ಯಾ ಬಾಳು ಗಿನ ಬಾಳೆ ಯಾ ಎನ್ನುವ ತೊರಿ ಬಾಳು
ಯಾ ಬಾಳು ಗಿನ ಬಾಳೆ ಯಾ ಮೂಡಣ ತೊರಿ ಬಾಳು
ಯಾ ಮೂಡಣ ತೊರಿಯಲ್ಲಿ ಯಾ ಸೂರಿ ದೇವ್ರು ಬಾಳು
ಯಾ ಪಡುವಲ್ಲಿ ಕಂತುವ ಯಾ ಚಂದ್ರ ದೇವ್ರು ಬಾಳು
ಯಾ ಬಾಳು ಗಿನ ಬಾಳೆ ಯಾ ಎನ್ನುವ ತೊರಿ ಬಾಳು
ಯಾ ಬಾಳು ಗಿನ ಬಾಳೆ ಯಾ ತೆಂಕಣ ತೊರಿ ಬಾಳು
ಯಾ ತೆಂಕಣ್ಣ ತೊರಿಯಲ್ಲಿ ಯಾ ಭಾಷೆಂಗ್ ಯೆರು ಬಾಳು
ಯಾ ಬಾಳು ಗಿನ ಬಾಳೆ ಯಾ ಎನ್ನುವ ತೊರಿ ಬಾಳು
ಯಾ ಬಾಳು ಗಿನ ಬಾಳೆ ಯಾ ಪಡುವಣ ತೊರಿ ಬಾಳು
ಯಾ ಪಡುವಣ ತೊರಿಯಲ್ಲಿ ಯಾ ಹರುವ ಗಂಗೆ ಬಾಳು
ಯಾ ಪಡುವಣ ತೊರಿಯಲ್ಲಿ ಯಾ ಉರುವ ಜ್ಯೋತಿ ಬಾಳು
ಯಾ ಬಾಳು ಗಿನ ಬಾಳೆ ಯಾ ಎನ್ನುವ ತೊರಿ ಬಾಳು

ಯಾ ಬಾಳು ಗಿನ ಬಾಳೆ ಯಾ ಬಡಗಣ ತೊರಿ ಬಾಳು
ಯಾ ಬಡಗಣ ತೊರಿಯಲ್ಲಿ ಯಾವ್‌ದ್ಯಾವ್‌ದೇ ಕಳು ಬಾಳು
ಯಾ ಬಾಳು ಗಿನ ಬಾಳೆ ಯಾ ನಾಲ್ಕು ತೊರಿ ಬಾಳು
ಯಾ ನಾಲ್ಕು ತೊರಿಯಲ್ಲಿ ಯಾವ್ಯದ್ಯಾವ್‌ದೇ ಕಳು ಬಾಳು
ಯಾ ಎಪ್ಪತ್ತು ಏಳಡಿಯ ಯಾ ಮಾಸೇಸುರ ಬಾಳು
ಯಾ ಬಾಳು ಗಿನ ಬಾಳೆ ಯಾ ಕೀಲುಳಿ ಲೋಕ ಬಾಳು
ಯಾ ಕೀಲುಳ್ಳಿ ಲೋಕದ ಯಾವ್‌ದ್ಯಾವದೇ ಕಳು ಬಾಳು
ಆ ಹೊಯ್ಯಾ ಹೊಯ್ಯಾಂಗೋ ಮೆಲು ಮೆಲು ಗಿನ್ನ
ಹೊಯ್ಯಾನಬಳಿಂದುವೆಲ್ಲ ಒಲಿ ಬಂದುವಯ್ಯ
ಹಿರಿತಾಯಿ ಬುಡಂದು ಒಲಿ ಬಂದುವಯ್ಯ
ಲಾಗಳ್ಳಿ ಕಂಡಳಮ್ಮ ಮೂಗುತೀನೂ ತಾಯಿ
ಬಂದಂತ ಓಲೆನೊವೆಲ್ಲ ಬಿಚ್ಚಿ ಓದುವಳು
ಬಂದಂತ ಓಲೆನೊವೆಲ್ಲ ಬಿಚ್ಚಿ ಓದುವಳು
ಹೊಸ್ತಿನಾ ಹೊಸ್ಪಲದ ಒಲಿ ಬಂದುವಯ್ಯ
ಖಯಾದು ಪೂಜದುವೆಲ್ಲ ಒಲಿ ಬಂದುವಯ್ಯ
ಲಾಗಳ್ಳಿ ಕಂಡಳಮ್ಮ ಮೂಗುತೀನು ತಾಯಿ
ಓಲೆಗೆ ಉತ್ತರನಮ್ಮ ತಾನು ಬರುವಾಳೆ
ಇನ್ಯಾವ ರಾಜ್ಯದಲ್ಲಮ್ಮ ತಾವು ಹುಟ್ಟೂವರು
ಕಳಸಾ ಕಾಂಡ್ಯದಲ್ಲಿ ತಾವು ಹುಟ್ಟುವರೆ
ಕಳಸಾ ಮೇಗುಂಧದಲ್ಲಿ ತಾವು ಹುಟ್ಟುವರೆ
ಅಕ್ಕವ್ವ ತಂಗ್ಯಿವ್ರು ಏಳು ಮಂದೀಯರು
ಕಳಸ ಕಾಂಡ್ಯದಲ್ಲಿ ತಾವು ಹುಟ್ಟುವರು
ಕಳಸ ಕಾಂಡ್ಯದಲ್ಲಮ್ಮ ತಾವು ಮೆರೂವರೆ
ನಾಗ ಬ್ರಹ್ಮರುವೆಲ್ಲ ತಾವು ಹುಟ್ಟುವರೆ
ಏಳುವ ಹಾಯ್ಗಳಿನೆಲ್ಲ ತಾವು ಹುಟ್ಟಿದರು

ದಂಡಿಗಿ ದಳವಾಯಿ ನೀ ತಳದಾಯಿಗುಳಿ
ದಂಡಿಗಿ ದಳವಾಯಿನಮ್ಮ ತಳದಾಯಿಗುಳಿ
ಕಳಸ ಮೇಗುಂಧದಲ್ಲಿ ತಾವು ಹುಟ್ಟಿದರು
ಕಳಸ ಕಾಂಡ್ಯದಲ್ಲಿ ತಾವು ಮೆರೀದರು
ಅಕ್ಕವ್ವ ತಂಗ್ಯವ್ವ ಮಾತನಾಡುವರು
ಅಕ್ಕವ್ವ ತಂಗ್ಯವ್ರೆಲ್ಲ ಮಾತನಾಡುವರು
ಏನೆಂಬ ಮಾತುಗಳನ್ನೆಲ್ಲ ತಾವು ಆಡುವರು
ತಿರುಪತಿ ಗಡಿಗೂವೆಲ್ಲ ನಾವು ಹೋಗು ಬೇಕೆ
ತಿರುಪತಿ ಗಡಿಗೂವೆಲ್ಲ ತಾವು ಹೋದೂರಯ್ಯ
ನಿತ್ತು ಕಯ್ಯಾನಾ ತಾವು ಮುಗುವರೇ
ಎಲ್ಲಿಂದ ಬಂದೀರಮ್ಮ ಮುಗುತೀನು ತಾಯೆ
ಎಲ್ಲಿಂಗೆ ಹೋಗುತೀರ ಮುಗುತೀನು ತಾಯೆ
ಕಳಸ ಕಾಂಡ್ಯದಲ್ಲಿ ನಾವು ಹುಟ್ಟಿದೇವ
ಕಳಸ ಮೇಗುಂಧದಲ್ಲಿ ನಾವು ಮೇರೀದೇವ
ತಿರುಪತಿ ಗಡೀನವಲ್ಲಿ ಒಡಮೂಡಬೇಕೆ
ತಿಮ್ಮಪ್ಪ ದೇವ್ರು ನಮ್ಮ ಸಾಯ ಮಾಡುವರು
ಗೋವಿದ್ರಾಯ ದೇವ್ರು ನಮ್ಮ ಸಾಯ ಮಾಡುವರು
ವೆಂಕ್ಕ್ರಮಣ ದೇವ್ರು ನಮ್ಮ ಸಾಯ ಮಾಡುವರು
ಕನಕ ದಾಸಾನುವೆಲ್ಲ ಸಾಯ ಮಾಡುವರು
ಬಂಗಾರ ದುರ್ಗಿಯರನೆಲ್ಲ ಸಾಯ ಮಾಡುವರು
ತುಳಸಿಯಮ್ಮ ದೇವ್ರುನೆಲ್ಲ ಸಾಯ ಮಾಡುವರು
ದೇವ್ರು ಬಲದಿಂದ ಒಡಮೂಡುವರೆ
ಅಕ್ಕವ್ವ ತಂಗ್ಯವ್ರೆಲ್ಲ ಒಡಮೂಡಿದರು
ನಾಗ ಬ್ರಹ್ಮರುವೆಲ್ಲ ಒಡಮೂಡಿದರು
ಏಳುವ ಹಾಯ್ಗುಳಿ ಒಡಮೂಡಿದನೆ

ತಳದ ಹಾಯ್ಗುಳಿನೆಲ್ಲ ಒಡಮೂಡಿದನೆ
ತಿರುಪತಿ ಗಡಿನವಲ್ಲಿ ತಾವು ಹುಟ್ಟುವರೆ
ತಿರುಪತಿ ಗಡಿನವಲ್ಲಿ ತಾವು ಮೆರೀವರೆ
ಲಾಗಳ್ಳಿ ಕಂಡಳಮ್ಮ ಮೂಗುತೀನು ತಾಯೆ
ತಂಗಿಯರು ನಾದರುವೆಲ್ಲ ತಾನು ಕರೀದಳು
ಎನಲ್ಲಿ ಕರಿದೀರಿ ಅಕ್ಕನಾದರು ನೀವು
ಮೈ ಮಂಡಿ ಮಾಸಿಗಳೆಲ್ಲ ಹನ್ನೆರಡು ವರುಷದವು
ಸಮುದ್ರ ಸಾನಗಳೆಲ್ಲ ಮಾಡಿ ಬರೂಬೇಕೆ
ಘಟ್ಟದ ಕೆಳ ರಾಜನೆಲ್ಲ ಕಂಡು ಬರುಬೇಕೆ
ಕರಿಯ ಮೇರರನ್ನೆಲ್ಲ ಕಂಡು ಬರುಬೇಕೆ
ದಂಡು ದಾಳ್ಯದಲ್ಲಿ ನಾವು ಹೋಗು ಬೇಕೆ
ಸರ್ವ ಬಿರುದಿನಲ್ಲೆಲ್ಲ ನಾವು ಹೋಗು ಬೇಕೆ
ದಂಡಿಗೆ ದಳವಾಯಿ ತಳದಾಯಿಗುಳಿ
ಇಲಿ ಬಾರೋ ಇಲ್ಲೀಗ ನೀ ತಳದಾಯಿಗುಳಿ
ಎನಲ್ಲಿ ಕರದೀರಮ್ಮ ಮೂಗುತೀನು ತಾಯಿ
ಎಂಥಲ್ಲಿ ಕರದೀರಮ್ಮ ಮೂಗುತೀನು ತಾಯಿ
ದಂಡು ದಾಳ್ಯದಲ್ಲಿ ನಾವು ಹೋಗು ಬೇಕೆ
ಸರ್ವ ಬಿರುದಿನಲ್ಲೆಲ್ಲ ನಾವು ಹೋಗು ಬೇಕೆ
ದಂಡು ದಾಳ್ಯನುವೆಲ್ಲ ನೀನು ಮಾಡ್ಸು ಬೇಕೆ
ಸತ್ತಿಗೆ ಕೊಡಿಯರಿಗೆಲ್ಲ ಓಲೆ ಬರುವಾನೆ
ಓಲಾಲ ಲಿಂಗನಿಗೂ ಓಲೆ ಬರುವನೆ
ದಂಡಿಗಿ ಬೋವಿಯರಿಗೆಲ್ಲ ಓಲೆ ಬರೀವನು
ಆನಿಯ ಮಾವುತನಿಗಮ್ಮ ಓಲೆ ಬರೀವನು
ಕುದುರಿಯ ಗೊಲ್ಲನಿಗೆಲ್ಲ ಓಲೆ ಬರೀವನು
ಕೋವಿಯ ತೂಪಕಿರಿಗೆಲ್ಲ ಓಲೆ ಬರುವನೆ

ಸರ್ವ ಬಿರುದಿನವೆಲ್ಲ ತಾನು ಮಾಡಿಶಿಯಾನೆ
ದಂಡಿಗಿ ಬೋವಿಯರಿಗೆಲ್ಲ ಓಲೆ ಬರೀದಾನೆ
ದಂಡಿಗಿ ಬೋವಿಯರುವೆಲ್ಲ ಸಗೀ ಬಂದುರಯ್ಯ
ದಂಡಿಗಿ ತಂದ್ ನಿಲ್ಲಿಸಿ ರಣ ಬೀದಿ ಮುಂದೆ
ದಂಡಿಗಿ ಸಿಂಗಾರನೆಲ್ಲ ಬಿನಗೆಯ್ಯಿರಯ್ಯ
ಆನಿಗಿ ಅಂಬಾರನೆಲ್ಲ ಲಗ ಬಿಗೀರಯ್ಯ
ಕುದುರಿಗೂ ತಡಿಗಳೆಲ್ಲ ಲಗ ಬಿಗೀರಯ್ಯ
ಲಾಗಳಿ ಕಂಡಳಮ್ಮ ಮೂಗುತೀನು ತಾಯೆ
ತಂಗ್ಯಾರು ನಾದರುವೆಲ್ಲ ತಾನು ಕರೀದಳು
ತಳದ ಹಾಯ್ಸುಗ್ಳಿನೆಲ್ಲ ತಾನು ಕರೀದಳು
ಏಳುವ ಹಾಯ್ಸುಗ್ಳಿನೆಲ್ಲ ತಾನು ಕರೀದಳು
ನಾಗ ಬ್ರಹ್ಮರ ಕೂಡಿಕೊಂಡೂಳಮ್ಮ
ನಾಗ ಬ್ರಹ್ಮರನೆಲ್ಲ ಕೂಡಿಕೊಂಡೂಳಮ್ಮ
ಕನಕ ದಂಡಿಗ ತಾವು ಏರಿದಳೆ
ಹೊರೂವ ಕಂದನ ಹೊರ್‍ಸಿಕೊಂಡೂಳಮ್ಮ
ಚಂಚುವ ಕಂದನವೆಲ್ಲ ಚಂಚಿಕೊಂಡೂಳಮ್ಮ
ಕನಕ ದಂಡೀಗ ತಾನು ಏರಿದಳು
ಕನಕ ದಂಡೀಗವೆಲ್ಲ ತಾನು ಏರಿದಳು
ದಂಡಿಗ ದಳವಾಯಿ ಇಲಿ ಬಾರೊ ಲಂದ
ದಂಡು ದಾಳ್ಯದಲ್ಲಿ ನೀನು ಹೊರ್‍ಬ್ಬು ಬೇಕೆ
ದಂಡು ದಾಳ್ಯದಲ್ಲೆಲ್ಲ ನೀನು ಹೊರ್‍ಬ್ಬು ಬೇಕೆ
ದಂಡಿಗಿ ದಳವಾಯಿ ತಲದಾಯ್ಸುಗ್ಳಿ
ಸರ್‍ವ ಬಿರುದಿನವೆಲ್ಲ ತಾನು ಹೊರಟನು
ಮುಂದೆ ಸಾಗಿದನಯ್ಯ ತಳದಾಯಿಗುಳಿ
ಕೊಲ್ಲೂರು ನೆಲಕುವೆಲ್ಲ ಒದಗೆಯ್ಯುವರು

ಕೊಲ್ಲೂರ ಮೂಕಾಂಬಿನೆಲ್ಲ ಸಾಯ ಮಾಡುವರು
ಎಲ್ಲಿಂದ ಬಂದೀರಮ್ಮ ಮೂಗುತೀನು ತಾಯೆ
ಎಲ್ಲಿಗೆ ಹೋಗು ತ್ಯೋ ಮೂಗುತೀನು ತಾಯೆ
ತಿರುಪತಿ ಗಡಿನವಲ್ಲಿ ಒಡಮೂಡಿದವೆ
ಕಳಸ ಕಾಂಢ್ಯದಲ್ಲಿ ನಾವು ಹುಟ್ಟಿದವೇ
ಮೈ ಮಂಡಿ ಮಾಸಿಗಳೆಲ್ಲ ಹನ್ನೆರಡು ವರುಷದವು
ತಲೆ ಮಂಡಿ ಮಾಸಿಗಳೆಲ್ಲ ಹನ್ನೆರಡು ವರುಷದವು
ಮೈಲಿಗೆ ಮಾತೀಗ ಮಡಿ ಹೂಡು ಬೇಕೆ
ಸಮುದ್ರ ಸಾನಗಳೆಲ್ಲ ಮಾಡಿ ಬರುತ್ತೇವೆ
ಅಲ್ಲಿಂದ ಮುಂದೀಗ ತಾವು ಹೊರೂಟರು
ಹೊಸಂಗಡಿ ಪೇಟೆವೆಲ್ಲ ತಾವು ಹೋಗುವರೆ
ಅಳುವೆ ಬಾಗಿಲುಗೆಲ್ಲ ತಾವು ಹೋದುರಯ್ಯ
ಯಾರಯ್ಯ ಯಾರಯ್ಯ ನೀವು ದಂಡಿ ಬೋವಿಯರಯ್ಯ
ದಂಡಿಗಿ ಚಾಂಚಿರಯ್ಯ ಕಲ್ಲು ಕಟ್ಟಣಕೂ
ಸತ್ತೀಗಿ ಚಾಂಚಿರಯ್ಯ ಹಾಲು ಗೋಳಿ ಮರಕೆ
ಯಾರಯ್ಯ ಯಾರಯ್ಯ ನೀನು ಆನಿ ಮಾವುತಾನೆ
ಯಾರಯ್ಯ ಯಾರಯ್ಯ ನೀ ಕುದುರೆ ಗೊಲ್ಲಾನೆ
ಆನೀನ ಕಟ್ಟಿರಯ್ಯ ಆನೆ ಲಾಡಿನಲ್ಲಿ
ಕುದುರೆಯ ಕಟ್ಟಿರಯ್ಯ ಕುದುರೆ ಲಾಡಿನಲ್ಲಿ
ಆನೀನ ಕಟ್ಟಲಿಕ್ಕೆ ಬಳ್ಳಿವಿಲ್ಲವಯ್ಯ
ಕುದುರೆಯ ಕಟ್ಟಲಿಕ್ಕೆ ಬಳ್ಳಿವಿಲ್ಲವಯ್ಯ
ಬಿದ್ದೀರು ಬೀಳುಗಳ ಹರು ತನ್ನೀರಯ್ಯ
ಆನೀನ ಕಟ್ಟೀರಯ್ಯ ಆನಿ ಲಾಡಿನಲ್ಲಿ
ಕುದುರೇನ ಕಟ್ಟಿರಯ್ಯ ಕುದುರೆ ಲಾಡಿನಲ್ಲ
ಲಾಗಳ್ಳಿ ಕಂಡಳಮ್ಮ ಮೂಗುತೀನು ತಾಯೆ

ತೊಟ್ಟಿಲ ಕಟ್ಟಿದಳಮ್ಮ ಹೊಳೆ ಹೊನ್ನಿ ಮರಕೆ
ಹಾಡೇಳಿ ಕಂದನಾ ತೂಗುತಿದ್ದೂಳಮ್ಮ
ಕಂದನ ಹಾಡೇಳಿಲೆಲ್ಲ ತೂಗುತಿದ್ದೂಳಮ್ಮ
ಅಲ್ಲೊಂದು ಪಯಣೇಗ ತಾವು ಬಿಡೂವರೆ
ಅಲ್ಲಿಂದ ಮುಂದಾಗಿ ತಾವು ಹೊರೂಟರು
ಹೊನ್ನಾರ ಹೊಳಿಗೂ ತಾವು ಹೋದೂರಯ್ಯ
ಅಳುವೆ ಬಾಗಿಲಲ್ಲಿ ಹೋಗಿ ನಿಲ್ಲುವರು
ಇಲ್ಲಿ ಬಾರೆ ಹಿಲ್ಲೀಗ ದೋಣಿ ಅಂಬಿಗರ
ಜಪದ ಕಲ್ಲಿಗೂವೆಲ್ಲ ದೋಣಿ ತಾಗೂ ಬೇಕ
ಗದ್ದಿಗೆ ಕಲ್ಲಿಗೂವೆಲ್ಲ ದೋಣಿ ತಾಗೂ ಬೇಕ
ಗದ್ದಿಗೆ ಕಲ್ಲಲ್ಲಿ ಹೋಗಿ ನಿಲ್ಲೂವರೆ
ಅಕ್ಕವ್ವ ತಂಗ್ಯಾರು ಹೋಗಿ ನಿತ್ತೂರಯ್ಯ
ನಾಗ ಬ್ರಹ್ಮರೂವೆಲ್ಲ ತಾವು ಹೋದೂರಯ್ಯ
ಏಳುವ ಹಾಯ್ಗಳಿನೆಲ್ಲ ತಾವು ನಿಲ್ಲುವರು
ದೇವಯ್ಯ ಗಣಪಯ್ಯನೆಲ್ಲ ತಾವು ನಿತ್ತೂರಯ್ಯ
ಜಪದು ಕಲ್ಲಿಗೂವೆಲ್ಲ ತಾವು ಹೋದೂರಯ್ಯ
ಸರ್ವ ಮಂದಿಯವುರೆಲ್ಲ ಹೋಗಿ ನಿತ್ತೂರಯ್ಯ
ಹೊನ್ನಂಬ ತರೆನೀರು ಮುಂದು ಬಾರಲೆಂದು
ಹೊನ್ನಂಬ ತರೆನೀರುಗಳೆಲ್ಲ ಮುಂದು ಬಂದುವಯ್ಯ
ಅಕ್ಕವ್ವ ತಂಗ್ಯವ್ರೆಲ್ಲ ತಲಿ ಕೊಡುವರು
ನಾಗ ಬ್ರಹ್ಮರುವೆಲ್ಲ ತಲಿ ಕೊಡುವರು
ದೇವಯ್ಯ ಗಣಪಯ್ಯನೆಲ್ಲ ತಲೆ ಕೊಟ್ಟೂರಯ್ಯ
ಏಳುವ ಹಾಯ್ಗಳಿನೆಲ್ಲ ತಲೆಕೊಡುವರೆ
ಮೈಲಿಗೆ ಮಾತೀಗ ಮಡಿ ಗೂಡುವರೆ
ಮಡಿಯ ಮಾತೀಗ ಮೈಲಿ ಗೂಡುವರು

ಏಳೆಂಬೊ ತಲೆನೀರುನ್ನೆಲ್ಲ ತಾವು ಮಿಂದೂರಯ್ಯ
ಮೈಲಿಗೆ ಮಾತೀಗ ಮಡಿ ಗೂಡುವರು
ಸಮುದ್ರ ಸ್ನಾನಗಳೆಲ್ಲ ತಾವು ಮಾಡಿದರು
ಅಕ್ಕವ್ವ ತಂಗ್ಯವ್ರು ಮಾತನಾಡುವರು
ಏನೆಂಬ ಮಾತುಗಳೆಲ್ಲ ತಾವು ಆಡುವರೆ
ಎಂಥೆಂಬ ಮಾತುಗಳೆಲ್ಲ ತಾವು ಆಡುವರೆ
ತಂಗ್ಯವ್ರು ಲಾದರುವೆಲ್ಲ ನೀವು ಮುಂದೆ ಹೋಗಿ
ಅಕ್ಕವ್ವ ತಂಗ್ಯರಿಗೆಲ್ಲ ಎಜ ಬಿದ್ದೂವಯ್ಯ
ಲಾಗಳ್ಳಿ ಕಂಡಳಮ್ಮ ಮೂಗುತೀನು ತಾಯಿ
ಬಹು ಜಾನಗಳೆಲ್ಲ ತಾನು ಮಾಡಿದಳೆ
ಬಹು ಚಿಂತೆಗಳನ್ನು ತಾನು ಮಾಡಿದಳೆ
ಬಹು ಸೋಕಗಳನ್ನು ತಾನು ಮಾಡಿದಳು
ಕೊರ್ಗಿಯ ನೆಲನೂವೆಲ್ಲ ಮೂಲ ಕಂಡೂಳಮ್ಮ
ಅಕ್ಕನು ಲಾದರು ತಾನು ಹೊರೂಟಳೆ
ಅಕ್ಕನು ಲಾದರುವೆಲ್ಲ ತಾನು ಹೊರೂಟಳೆ
ಕೊರ್ಗಿಯ ನೆಲಕೂವೆಲ್ಲ ತಾನೂ ಹೋಗೂವಳೆ
ಕನ್ನಾರ ಅಮ್ಮೂರುನೆಲ್ಲ ಸಾಯ ಮಾಡಿದರು
ಬಸ್ನಾಯಿಗುಳಿ ದೆಯ್ಯನುವೆಲ್ಲ ಸಾಯ ಮಾಡಿದಳು
ಕೊರ್ಗಿಯ ನೆಲನೂವೆಲ್ಲ ತಾನೂ ಆತ್ತೂಳಮ್ಮ
ಕೊರ್ಗಿಯ ನೆಲನೂವೆಲ್ಲ ಒಡಮೂಡಿದಳು
ನಾಗ ಬ್ರಹ್ಮರುವೆಲ್ಲ ಒಡಮೂಡಿದರು
ಏಳುವ ಹಾಯ್ಲುಳಿನೆಲ್ಲ ತಾವು ನಿತ್ತೂರಯ್ಯ
ತಂಗ್ಯವ್ರು ಲಾದರುವೆಲ್ಲ ತಾವು ಕಂಡೂರಯ್ಯ
ಬವುವ ದುಃಖಗಳೆಲ್ಲ ತಾವು ಮಾಡುವರು
ಬವುವ ಶೋಕಗಳೆಲ್ಲ ತಾವು ಮಾಡುವರು

ಒಬ್ಬಳು ಹೊರಟಳು ತಂಗಿ ಹಪ್ಪನಡ್ಕ ನೆಲಕ್ಕೆ
ಒಬ್ಬಳು ಹೊರಟಳು ತಂಗಿ ನೆಯಿಕಂಬ್ಳಿ ನೆಲಕ್ಕೆ
ಒಬ್ಬಳು ಹೊರಟಳು ತಂಗಿ ಅಲಂಗಾರು ನೆಲಕ್ಕೆ
ಒಬ್ಬಳು ಹೊರಟಳು ತಂಗಿ ಮುಟ್ಲಪಾಡಿ ನೆಲಕೆ
ಕಿರಿಯ ತಂಗ್ಯವ್ವ ತಾನು ಕಂಡೂಳಮ್ಮ
ಬವುವ ಶೋಕಗಳೆಲ್ಲ ತಾನು ಮಾಡಿದಳೆ
ಬವುವ ದುಃಖಗಳೆಲ್ಲ ತಾನು ಮಾಡಿದಳೆ
ಮುಂಡಾಡಿ ಮೂಲಗಳೆಲ್ಲ ತಾನು ಕಂಡೂಳಮ್ಮ
ಮುಂಡಾಡಿ ನೆಲನ ತಾನು ಕಂಡೂಳಮ್ಮ
ಮುಂಡಾಡಿ ನೆಲಕೂ ತಾನು ಹೋಗುವಳು
ಬಸ್ನಾಯಿಗುಳಿ ದೆಯ್ಯನುವೆಲ್ಲ ಸಾಯ ಮಾಡಿದರೆ
ಮುಂಡಾಡಿ ನೆಲನುವಲ್ಲಿ ತಾನು ನಿತ್ತೂಳಯ್ಯ
ಮುಂಡಾಡಿ ನೆಲನುವಲ್ಲಿ ಒಡಮೂಡಿದಳು
ಕೊರ್ಗಿಯ ನೆಲನಲ್ಲಿ ಅಕ್ಕ ನಿತ್ತೂಳಮ್ಮ
ಕೊರ್ಗಿಯ ನೆಲನಲ್ಲಿ ಅಕ್ಕ ನಿತ್ತೂಳಮ್ಮ
ಮಾಡುವ ಮುಂಡಿಗಿನೆಲ್ಲ ತಾವು ಮಾಡುಶಿಯಾರು
ಹೊನ್ನೆಂಬ ಕಲಶಗಳ ಇರು ಮಾಡುಶಿಯಾರು
ಮಣ್ಣೆಂಬ ಕಲಶಗಳ ಇರು ಮಾಡುಶಿಯಾರು
ಕೊರ್ಗಿಯ ನೆಲನವಲ್ಲಿ ತಾನು ನಿತ್ತೂಳಮ್ಮ
ಕೊರ್ಗಿಯ ನೆಲನವಲ್ಲಿ ತಾನು ಮೆರಿದಳು
ಉರುವ ಕೇರಿ ಎಲ್ಲ ತಾನು ಮೆರಿದಳು

೨. ಕಾಡ್ಯನ ಆಗಮ ಬಲಿಪಾಡು

ಊರಿಂದ ಊರಿಗೆ ದೇಯಿ ಬರುವಾಗ
ಕೊರ್ಗಿಯ ನೆಲಕೆ ದೇಯಿ ಬಂದಾವೆ

ಯಾರು ಮೇರರ ಕಾಲದು ವೊಲ್ಲೆ

ಅಪ್ಪೂವ ಮೇರನ ಕಾಲದು ವೊಲ್ಲೆ

ತಾಯೆಂಬ ದೈಯಗಳು ಬಂದಾವು ನೋಡಿ

ನಾಗ ಬ್ರಹ್ಮರು ಬಂದಾವು ನೋಡಿ

ಏಳುವ ಹಾಯ್ಗುಳಿ ಬಂದಾವು ದೆಯ್ಯ

ತಳದಾಯ್ಗುಳಿ ಬಂದಾವು ದೆಯ್ಯ

ಕೊರ್ಗಿಯ ನೆಲನ ಅಪ್ಪುವ ಮೇರ

ಕೂಡುವ ಕುಟುಂಬ ತಾಕರಿ ದಾನ

ಮಾವ ಅಳಿಯನ ತಾಕರಿ ದಾನ

ಅಣ್ಣ ತಮ್ಮನ ತಾಕರಿ ದಾನ

ತಾಯೆಂಬ ದೈಯಗಳು ಬಂದವು ನೋಡಿ

ತಳದಾಯ್ಗುಳಿ ಬಂದವು ದೆಯ್ಯ

ನಾಗ ಬ್ರಹ್ಮರು ಬಂದವು ನೋಡಿ

ಕೊರ್ಗಿಯ ನೆಲನ ಅಪ್ಪುವ ಮೇರ

ತಪ್ಪುವ ತಾಳಲು ತಾಕಂಡಾನೆ

ಜಾಗುವ ಭಜನೆಗೆ ತಾಕಂಡಾನೆ

ಮಾಡುವ ಮುಂಡಿಗಿ ತಾ ಮಾಡಿಶಿಯಾನೆ

ಹೊನ್ನೆಂಬೊ ಕಳಸ ಇರು ಮಾಡಿಶಿಯಾನೆ

ಮಣ್ಣೆಂಬೊ ಕಳಸ ಇರು ಮಾಡಿಶಿಯಾನೆ

ಕಂಚಿನ ಕಳಸ ಇರು ಮಾಡಿಶಿಯಾನೆ

ಲಾಗಳ್ಳಿ ಕಂಡನು ಅಪ್ಪುವ ಮೇರ

ತಾಯಿ ದೆಯ್ಯ ನಿಂತವು ನೋಡಿ

ಕನ್ನಾರ ಅಮ್ಮಾರನ್ನ ಸೈ ಮಾಡಿದಾಳೆ

ಕೊರ್ಗಿಯಲ್ಲಿ ನಿತ್ತಳೂ ಅಮ್ಮ

ಬೆಳಿಗೂ ಪೂಜನ ತಾ ಮಾಡಿದಾನೆ

ಬಲಿಯೊ ಬಣ್ಣದ ಓ ಕೊಡುವಾನೆ

ಕೊರ್ಗಿಯಲ್ಲಿ ನಿತ್ತಳೂ ಅಮ್ಮ

ನಾಗ ಬ್ರಹ್ಮರು ನಿಂತವು ನೋಡಿ

ತಳದಾಯ್ಗುಳಿ ನಿಂತವು ದೆಯ್ಯ

ಕೊರ್ಗಿಯಲ್ಲಿ ಬಂದಳು ಅಮ್ಮ

ಊರಿಂದ ಊರಿಗೆ ದೇವಿ ಬರವಾಗ

ಮುಳ್ಳಾಡು ನೆಲಕೆ ದೇವಿ ಬಂದಾವೆ

ಗದ್ದಿಗಿ ಅಮ್ನಾರ್ನ ಕಂಡವು ದೆಯ್ಯ

ಗದ್ದಿಗಿ ಅಮ್ನಾರ್ನ ಸೈ ಮಾಡಿದಾಳೆ

ಮಳ್ಳಾಡಲ್ಲಿ ನಿತ್ತಳು ಅಮ್ಮ

ಹಿಂದಿನೂರೆ ಕಾಲದುವಲ್ಲಿ

ತಪ್ಪುವ ತಾಳಲು ತಾ ಕಂಡಾರೆ

ಜಾಗುವ ಬಜನೆಗೆ ತಾ ಕಂಡಾರೆ

ಮಾಡುವ ಮುಂಡಿಗಿ ತಾ ಮಾಡಿಶಿಯಾರೆ

ಕಂಚಿನ ಕಳಸ ಇರು ಮಾಡಿಶಿಯಾರೆ

ಮಣ್ಣೆಂಬೊ ಕಳಸ ಇರು ಮಾಡಿಶಿಯಾರೆ

ಮುಂದೀನವ್ನೆ ಮಂಜ ಮೇರ

ಲಾಗಳ್ಳಿ ಕಂಡನು ಮಂಜಾ ಮೇರ

ಕೂಡುವ ಕುಟುಂಬ ತಾ ಕರಿದಾನೆ

ಬೆಳಿಗೂ ಪೂಜೆ ತಾ ಮಾಡಿಶಿಯಾನೆ

ತಾಯೆಂಬ ದೈಯಗಳು ನಲಿದವು ನೋಡಿ

ಮುಳ್ಳಾಡಲ್ಲಿ ದೈಯ್ಯ ನಲಿದವು

ನಾಗಾ ಬ್ರಹ್ಮರು ನಲಿದವು ದೆಯ್ಯ

ಏಳುವ ಹಾಯ್ಗುಳಿ ನಲಿದವು ದೆಯ್ಯ

ತಳದಾಯ್ಗುಳಿ ನಲಿದನು ದೆಯ್ಯ

ಬಾರಾಯಿ ಕೇಳು ತಾಯೆಂಬ ದೈವ

ಬಾರಾಯಿ ಕೇಳು ತಳದಾಯ್ಯುಳಿ

ಮಾಯದ ಗುರುವಿನ ಹೇಳಿಕೆ ನಿನಗೆ

ಬಾರಾಯಿ ಕೇಳು ತಳದಾಯ್ಯುಳಿ

ಬಾರಾಯಿ ಕೇಳು ತಳದಾಯ್ಯುಳಿ

* * * * *

ಗಾಯಕರು

೧. ಸಣ್ಣು ಹರಿಜನ (೭೦ - ವ)

ಒಳಗುಡ್ಡೆ - ಶಿವಪುರ, ಕಾರ್ಕಳ, ತಾಲೂಕು.

೨. ನಾರಾಯಣ ಹರಿಜನ (೫೦ - ವ)

ಶಿವಪುರ, ಕಾರ್ಕಳ ತಾಲೂಕು.

ವೈದ್ಯರ ಹಾಡುಗಳು

ದರ್ಶನ ಬರಿಸುವ ಕ್ರಮ

ಶ್ರೀಯ ಶ್ರೀಯನಾಳ್ಪವನೆ | ಶ್ರೀಯನಾ ಬಲಗೊಂಬೆನೋ || ಶ್ರೀ ನಾರಾಯಣ ನಮಗೇ ಬೇಡಿದ ವರವೀಯೋ || ಕರಿರಾಜವದನಗೊ ಪರಮ ಭಾರತಿಯಳಿಗೊ | ಶ್ರೀ ಗುರುವಿಗೊ ಬ್ರಹ್ಮ ವಿಷ್ನು ಶಿವಗೋ|| ಕಡುಕೃತ ನಾನಿನ್ನ ಚರಣಕೆರಗಿದೆ ಬಂದು | ತೆರೆಯ ಸೂಡಿದ ದೇವ ವರವೆನಗೋ || ಶರಣಾಗು ಪುಂಡರಿ | ಶರಣಾಗು ಮಾತಂಗಿ | ಶರಣಾಗು ವಿಂಧ್ಯೇ ಪರ್ವತ ವಾಸಿನಿ || ಶರಣು ಉನ್ನಂತ ದೈವ ಶರಣು ಪಂಕಜ ಲಂಬೋ | ದರ ದೇವ ಹರವಿಘ್ನ | ಏಕದಂತನು || ವಂದ್ಯೇಕ ದಂತನೆ | ದಂತ ಸ್ವಾಮಿ ನೀವು | ಗಂದ ಸ್ವರೂಪಿಯೆ | ಮಂದರಗಿರಿಯಂಥಾ |ದೇಹದಾತನೋ || ಅಂದು ದೇವತೆಗಳಿಗೆ ಆನಂದ ಪದವಿಯನಿತ್ತೆ | ಬಂದೆನ್ನ ಸ್ಮೃತಿನಿಲ್ಲೋ ಗಣನಾಯಕ || ಅಂದ ಸಕ್ಕರೆ ಮೃದು ಉಂಡಿಯ ನೊರೆಹಾಲು | ಕೊಂಡು ಭಕ್ತರ ಕೈಯ್ಯ ಸೊಂಡಿಲಲಿ ಮೆಲುವಾತ | ಪ್ರಚಂಡ ಗಣನಾಯಕಾ ಬೇಡಿದ ವರವ || ಬಲಗೊಂಬೆ ಆದಿಯನು | ಬಲಗೊಂಬೆ ವೇದವನು | ಬಲಗೊಂಬೆ ಬಲನಾ ತಾ ಜಲನುದಯ || ಬಲಗೊಂಬೆ ಪೂರ್ವನ | ಬಲಗೊಂಬೆ ಪಶ್ಚಿಮ | ಬಲಗೊಂಬೆ ಉತ್ತರಾ ದಕ್ಷಿಣ ದಿಸೆಯ || ಬಲಗೊಂಡು ಹಾಡುವೆನು ಅಷ್ಟದಿಕ್ಪಾಲಕರು ! ಮೂವತ್ತುಮೂರು ಕೋಟ ದೇವತೆಗಳು || ಕಾಶಿ ವಿಶ್ವನಾಥ | ಗೋಕರ್ಣ ಮಹಾಬಲೇಶ್ವರ | ಕಳಕಳೇಶ್ವರ | ಸಜ್ಜೇಶ್ವರ | ಕಶ್ಯ ಮುಖ್ಯಪ್ರಾಣೇಶ | ವರಾಹಲಿಂಗ | ವಿಷ್ಣುಮೂರ್ತಿ | ಭೂಮಿದೇವಿ | ಶಾರದಾಂಬ | ನಿರ್ವಿಘ್ನದಾಯಕ || ಇಲ್ಲಿ ಶಾಸ್ತಾರದ ಕುಲ ಬ್ರಹ್ಮಸ್ವಾಮಿಯವರು ನೆನೆವ ಕಾರ್ಯವನೆಲ್ಲ ಲೇಸು ಮಾಡಿರೋ || (ಇದು ಆಯಾ ದೇವತೆಗಳನ್ನು ಹೊಂದಿಕೊಂಡು)

ಬ್ರಹ್ಮ ನಿನ್ನರಮನೆಗೆ ಮುನ್ನೂರು ದ್ವಾರಗಳು | ಚಿನ್ನದಲ್ಲಿ ತೋರಣ ಎಡೆಬಿಡದೇ || ಚತುರ್ಮುಖ ಕುಲಬ್ರಹ್ಮ ಸ್ವಾಮಿಯವರು ಕಾಶ್ಮೀರದಿಂದ ಹೊರವಂಟಂತವರು | ಹಾರು ಕುದ್ರೆಯನ್ನೆ ಏರಿಕೊಳ್ಳುವಂತವರು | ಕುರುಕ್ಷೇತ್ರ, ಗಯಕ್ಷೇತ್ರ, ಯಂಕ್ಯಾದ್ರಿ, ಶ್ರೀರಂಗ, ಮಲಯಾಳ, ಕೇರಳ ಸ್ಥಾನಾಧಿಪತಿಗಳಾಗಿ | ವಾಸವಾಗಿ ನೆಲೆಗೊಂಡನೆಂಬಂಥ | ಚತುರ್ಮುಖದ ಕುಲಬ್ರಹ್ಮ | ಅಜಬ್ರಹ್ಮ | ಮಾಂಶಿಬ್ರಹ್ಮ | ಜಡೆಬ್ರಹ್ಮ | ಕೊಡೆಬ್ರಹ್ಮ | ಕನಕಬ್ರಹ್ಮ |

ಧೀರಬ್ರಹ್ಮ | ಸಂನ್ಯಾಸಿ ಬ್ರಹ್ಮರಾಯನ ಪರಿವಾರ ಸಹಿತವಾಗಿ ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲೀ || (ಢಕ್ಕೆನಾದ)

(ನಾಗದರ್ಶನದಲ್ಲಿ)

ಇಲ್ಲಿ ಪಾತಾಳದ ಮಹಾ ನಾಗಸ್ವಾಮಿಯವರು ನೆನೆದ ಕಾರ್ಯವನೆಲ್ಲ ಲೇಸು ಮಾಡಿರೋ || ನಾಗ ನಿನ್ನರಮನೆಗೆ ನಾನೂರು ದ್ವಾರಗಳು | ಹೂವಿನಲ್ಲಿ ತೋರಣಾ ಯೆಡೆಬಿಡದೇ || ಪಾತಾಳದ ಮಹಾ ನಾಗಸ್ವಾಮಿಯವರೆಂದು | ಭೂಲೋಕ ಸ್ಥಾನಾಧಿಪತಿಗಳಾಗಿ ವಾಸವಾಗಿ ನೆಲೆಗೊಂಡನೆಂಬಂಥಾ | ಪಾತಾಳದ ಮಹಾನಾಗ, ಹೆಣಗಿ ನಾಗ, ಗೋಧಿ ನಾಗ, ಶಂಖಪಾಲಕ, ಗುಳಿಕ, ತಕ್ಷಕ, ಕನ್ನಾಗ, ಉಸ್ನಾಗ, ಉನ್ನಂತ ಮಣಿನಾಗ, ಬಿನ್ನಾಣಿ, ಕಾಳಿಂಗ, ಕಾರ್ಕೋಟಕ, ಧೃತರಾಷ್ಟ್ರ, ವಾಸುಕಿ, ಸರ್ಪ, ಶೇಷ, ಕಪಿಲ, ಭೂಧರ, ಶಂಖಪಾಲಕನು ಪರಿವಾರ ಸಹಿತವಾಗಿ ಈ ಹೊತ್ತಿನ ಮಂಡಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲೀ.......||

ನಾಗನ "ಹಾಲ್ಪಿಟ್ಟು" ಹೇಳುವ ಕ್ರಮ

(ನಾಗನ ತಂಡ್ಯಳಕ = ತಂಡುಲ?)

ಶ್ರೀ ಗುರುವಿನ ಪಾದಕೆರಗಿ ಮಣಿವೆ || ನಾಗನೆ ಗಿರಿಸುತ ಕಪಿಲಾಸನವೆ || ಕೆಳದಿಯೊಳಗೆ ಬಂದು ನೀ ನೆಲಸಿರುವೆ | ಉಳಿಯದೆ ನಮಗೀಯೊ ರತಿಮತಿ ಶುಭವು || ಯಡಗರವಿಲ್ಲದೆ ವಿಘ್ನಗಳನುಳುಹಿ | ಕಡು ಕೃಪೆಯಿಂದಲಿ ಬಕುತರ ಪೊರೆಯಾ || ಹುಣ್ಣಿಮೆಯಲಿ ಪೂರ್ಣ ತೇಜದಿ ಮೆರೆವ | ಪನ್ನಗ ಹರಿ ಪವಡಿಸುವನು ನೋಡೋ || ವಿನಯದಿ ನರಹರಿಯನು ಪೂಜಿಸುವೆ | ಸಾಗರ ಸುತ ಹರಿ ಶಯನ ಮಾಡೋ | ಯೋಗದೀಪವ ತಂದು ಗರುಡಗೆ ನೀಡೋ | ಧರಣಿಯ ಮುಡಿಯ ಮೇಲ್ ಶ್ರೀಮುಡಿ ಇರಿಸೋ || ಕುಸುಮಾಕ್ಷತೆ ಗಂಧಂಗಳನೆ ತರಿಸೊ | ಹರಿಹರ ರಾಜಗೆ ನಿದ್ರೆಯ ಬರಿಸೋ || ಬೀಸುವ ಗಾಳಿಯೊಳಾಲೋಚಿಸುವೆ | ವಾಸುಕಿ ಮೊದಲಾದವರನು ಕರೆವೆ || ಕಡಲೊಳಗಣ ಪರೀಕ್ಷಿತುವನು ಕೊಂದೆ | ಜಡಿದು ಕಿರೀಟಯ ಮುಕುಟ ತರಿದೆ || ದೇವೇಂದ್ರನ ಸಿಂಹಾಸನವಾದೆ | ದೇವಕಿಗೊಲಿದು ಗಿರಿ ಸಖನಾದೆ || ಹಸನದಿ ಕೊಡಿಸು ವರಮತಿ ಶುಭವು | ಹೊನ್ನದುಪ್ಪರಿಗೆಯಾದರಿಸಿದ ಶಿವನೆ || ಯೋಜನ ಗಾವುದ ಬಾಲಕದವನೆ | ಸೂಜಿಯ ಗಾತ್ರದ ನಾಲಿಗೆಯವನೆ || ಕರ್‍ರನೆ ಕಣ್ಣಿಗೆ ಕರಿಕುರುಳ್ಳವನೆ | ಸುರ್‍ರನೆ ಉರಿವ ಉರಿಮುಖದವನೆ || ಕೆರಳಿದಲುರಿಯನು ಉಗುಳುತಲಿರುವೆ | ಹರುಷಾಂಬರದಲ್ಲಿ ವರವ ನೀ ಕೊಡುವೆ || ಪಾತಾಳದೊಳರಮನೆಗಳ ಕಟ್ಟಿಸಿ | ಭೂತಳದೊಳಗತಿ ಪೂಜಿಸಿಕೊಂಬೆ || ನಾಲ್ಕು ಭುಜೆಂಗಿಲಿ ನಾಗನ ವನವೆ | ಉರಿತೋರಿ ದಳ್ಳುರಿ ಹುಣ್ಣೆ (ಹವಣಿ) ಇರಲು || ಹಿರಿದು ಪ್ರತಾಪದಿ ಹಿರಿದನೆ ಮಾಡಿ | ಪ್ರೀತಿಯಿಂದಲಿ ಶಂಖಪಾಲಕನು || ಅಷ್ಟಮಿ ಹುಣ್ಣಿಮೆ ಪಂಚಮಿ ದಿನದಿ | ಸೃಷ್ಟಿಯ ಮನುಜರ ಸಲಹುತ ಬರುವೆ || ಉದಕ ಕದಳೀ ಫಲ ಕ್ಷೀರವ ತಂದು | ಅಂಧರಿಗೆ ಶೃಂಗಾರವ ತಳಿರೋ || ಕನ್ನಡಿ ಕನ್ನಡಿ ಕಲಶವ ನಿಲಿಸಿ | ಪನ್ನಗ ರಾಜನ ಭೋಗವಗೊಂಬೆ || ಕದ್ರುವ ಮಕ್ಕಳ ಪೂಜಿಸಿದವರ್ಗೆ | ಇಷ್ಟಾರ್ಥ ವರಗಳನೀಯುತ ಬರುವ ಜಯ ಅಷ್ಟ ಕುಲದ ಪರಿವಾರಂಗಳು ಹಗಲು ಭೋಗಕ್ಕೆ ತೆರಳಿ ಬರುವಂಥಾ ವ್ಯಾಳ್ಯದಲ್ಲೀ.......|| (ಢಮರು ಬಾರಿಸುವುದು)

|| ನಾಂದಿ ||

ಅರಲಿದ ಮಲ್ಲಿಗೆ ಅರಳಿದ ಜಾಜಿ ಅರಳಿದ ಹೊಂಗ್ಯಾದಿಗೆ ಅರಳಿದುತ್ತಮವಾದ ಒಂದಾವರೆ | (ಹೊಂದಾವರೆ?) ಒಂದಾವರೆ ಸ್ವಾಮಿ ನೀವು ಪದ್ಮದಲಿ ಬಂದು ನೆಲಸಿದಿರೀಗ ನಿಂದು ವರಗಳನಿತ್ತ್ಯೋ ಸಲಹಬೇಕು || ಕಾಳಿಯೇ ಕಂಕಾಳಿ, ಅಮ್ಮ ನೀ, ನಿರಾಧಾರಿ ಭೈರವಿ ದುರ್ಗೆ ಕಾಳಲಾಕ್ಷಸಿ ದೇವಿ ವಾಗೀಶ್ವರಿ | ಕಾಳಗದೊಳು ಅಸುರರನು, ಅಮ್ಮ ನೀ, ಶಿರ ವರಿದೇ | ಬಾಲೆ ಚಂಡಿಕೆ ದುರ್ಗೆ ತೆರಳಿ ಬಾರೋ || ಖುಲ್ಲ ಮೂಕನ ಗೆಲಿದು, ಅಮ್ಮ ನೀ, ಕುರುವಿಗೆ (ಹಿ) ನೆಲಸಿದೆ | ಕೊಲ್ಲೂರ ದೇವಿ ನಲಿದಾಡಿ ಬಾರೋ || ಕೊಡಸೆಯ ಮಗಳೊಳು ಕೊಲ್ಲೂರೆಂಬ ಸ್ಥಳದೊಳು | ಒಡೆದು ಮೂಡಿದೆ ತಾಯೆ ತೆರಳಿ ಬಾರೋ || ಕಡುಗದೊಳು ಮೈಷಾಸುರನ, ಅಮ್ಮ ನೀ, ಶಿರವರಿದೆ | ಕಡು ಚೆಲ್ವ ರಂಭೇ ತೆರಳಿ ಬಾರೋ || ಶೂಲವನು ನೆಲಕೂರಿ, ಅಮ್ಮ ನೀ, ಕಪಾಲವ ಪಿಡಿದಾಕೆ | ಬಾಲೆ ಚಂಡಿಕೆ ದುರ್ಗೆ ತೆರಳಿ ಬಾರೋ || ಶುಂಭ ನಿಶುಂಭರನು ಕೊಂದು ಮಡುಹಿದೆ ತಾಯೆ | ರಂಭೆ ಪಾರ್ವತಿದೇವಿ ಪಯಣ ಬಾರೋ || ಚಂಡಮುಂಡರನು ಕೊಂದು ಮಡುಹಿದೆ ತಾಯೆ | ಚಂಡಿಕಾ ವನದುರ್ಗೆ ಪಯಣ ಬಾರೋ || ಚಂಡಿಕಾದೇವಿ ನಿಮಗೆ ವಂದಿಸಿ ನಮೊ ಎಂಬೆ | ಪ್ರಚಂಡ ಕೋಮಲೆ ತಾಯೆ ತೆರಳಿ ಬಾರೋ || ದೇವಿ ದೇವರ ದೇವಿ ದೇವಿ ಶ್ರೀ ದುರ್ಗಾಪರಮೇಶ್ವರಿ | ದೇವಿ ಅಂಬಿಕೆ ತಾಯೆ ನಲಿದಾಡಿ ಬಾರೋ || ಹಾರು ಕುದ್ರೆಯನ್ನೆ ಒಡೆಯ ವೀರಭದ್ರ ಸ್ವಾಮಿ | ನೀವು ಏರಿದ್ರಿ ಬೇಗ ತೋರಿದ್ರಿಸಗಳ್ಳಾ || ? || ಬಲ್ಲಿದ ಕೈಗಳನು ಅಡಿಗೆ ನೀಡಿರುವಿರೋ ಚತುರ್ಮುಖದ ಕುಲಬ್ರಹ್ಮ ಸ್ವಾಮಿ ನೀವು ಕೊಂಡಾಡಿದರೆ ಮೆಚ್ಚುತಲಿದ್ರಿ | ಬೇಡಿದ ವರಗಳನೂ (ನೀಯೊ) ಪಯಣ ಬಾರೋ || ಕದ್ರುಗೆ ಕಂದನೆ ರುದ್ರನಿಗಾಭರಣನೆ | ನಿದ್ರೊಯೊಳು ಹರಿಗೆ ಹಾಸಿಗೆಯಾದನೆ | ನಿದ್ರೆಯೊಳು ಭುವನದಿಂದೆದ್ದು ಶೋಭಿಸುವಾಗ | ಸಮುದ್ರವನು ನೇಣಾಗಿ ಸುತ್ತಿದಾತನೆ || ಸಾಸಿರ ವಿಷದಾಡೆ ಸಾವಿರ ಕೊಳದಾಡೆ | ಬೀಸುವ ಹೆಡೆಯೋ ಪನ್ನಗ ಸಾಸಿರ || ಸಾಸಿರ ಹೆಡೆಗಳನು ಹಾಸರಿಸುತ ಬಾರೋ | ವಾಸುಕಿ ಸುಬ್ರಹ್ಮಣ್ಯ ತೆರಳಿ ಬಾರೋ || ಕುಂಬೆಗುರುಳಿನ ಬಾಲೆ ಹೆಣ್ಣು ಯಕ್ಷ ಅಮ್ಮ ನೀ, ರಂಭೆ ಪರಿಮಳದರಳೆ | ಬೊಂಬೆಯ ನೀ ಕೇಳೆ ಕಲಿಯುಗವು || ಅಸಿಯೊಳು ರಕ್ತೇಶ್ವರಿ, ಅಮ್ಮ ನೀ, ಮಸಿನ ಚೆಲ್ಲೂರಾಕೆ | ವಸುಧೆಯ ಮೇಲೇ ಅತಿವಾಸವೂ ||

ಕಲಿಗೆ ಖಡ್ಗವನಿಟ್ಟು ಹಿರೆ ನಂದಿಕೇಶ್ವರ ಸ್ವಾಮಿ ನೀವು ಉದರಗಂಟೆಯ ಕಟ್ಟಿ ಛಲದಂಕರಾದಿರೀಗ ನಡೆತಾರೋ || ಹಾಡಿದರೆ ಹಾರೈಸುವೆನು ಮಳೆಯಾಳ ಬಬ್ರ್ಯಸ್ವಾಮಿ ನೀವು ಕೊಂಡಾಡಿದ್ರೆ ಮೆಚ್ಚುತಲಿದ್ರಿ ಬೇಡಿದ ವರಗಳನೋ ಪಯಣ ಬಾರೋ || ಬನ್ನಿ ಭೋಗಕ್ಕೆಂದು ಜಟ್ಟಿಗರಾಯ ಸ್ವಾಮಿ ನಿಮಗೇ | ಕೊಡುವರೊ ಗಂಧವನೀಡುವರೊ ಮುತ್ತಿನಾಕ್ಷತೆಗಳನು || ಬನ್ನಿ ಭೋಗಕ್ಕೆಂದು ಕ್ಷೇತ್ರಪಾಲ ಸ್ವಾಮಿಯ | ಮನ್ನಿಸಿ ಕರೆವೆನು ಇನ್ನು ದೇವರ ದೇವ | ಪಯಣ ಬಾರೋ || ವನವೇನೆಂದರು ತಮ್ಮ ವನವೇ ನಂದನವನ | ವನದೊಳಗೆ ಇಲ್ಲಿ ಮಂತ್ರಸ್ಥಾನ ಹೊನ್ನರಮನೆಯೋ | ಇರವ ನೋಡಿದರೆ ಸ್ವಾಮಿ ಮಂದಿರವೆಲ್ಲ ನಿಮ್ಮರ ಮನೆ ಇರವಳಿತೋ || ಎಲ್ಲಾ ದೇವತೆಗಳನು ಮುನ್ನ ಇಲ್ಲಿ ಹಾಡಿಕೊಂಬೆನು | ಇನ್ನಿಲ್ಲಿ ಗುತ್ತು ಕ್ಷೇತ್ರಾಧಿಪತಿಗಳನು ಕರದೋ ವರ್ಣಿಸುವೆನು || ನಾಲ್ಕು ಸಮುದ್ರದೊಳಗೆಲ್ಲ ಪ್ರಸನ್ನ ದೇವತೆಯಾಗಿ, ಆದಿಯಾಗಿ, ಸಿರಿಯಾಗಿ | ಸಂಪತ್ತಾಗಿ, ಗ್ರಾಮ ದೇಶಾಧಿಪತಿಗಳನ್ನೆ

ತಲೆಗಾಯ್ದೆನೆಂಬಂಥ | ದುರ್ಗೆ, ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ, | ವನದುರ್ಗೆ, ನವದುರ್ಗೆ, ನವಕೋಟಿ ದುರ್ಗಮ್ಮನವರು ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ.....||

ಈಶ್ವರನ ರೋಷದಲ್ಲಿ ಜಡೆಯಲುತ್ಪನ್ನವಾಗಿ | ದಕ್ಷಮುಖ ಭಂಜನವಾಗಿ ಶಿಕ್ಷಕೆಲ್ಲ ಸಜ್ಜನನಾಗಿ | ಕೈಯಲ್ಲಿ ಢಕ್ಕೆ, ಢಮರುಗ, ಶಂಖ, ಚಕ್ರ, ಗದಾ, ತ್ರಿಶೂಲ, ಬತ್ತೀಸ್ ಮೂವತ್ತೆರಡು ಆಯುಧಗಳನ್ನು ಧರಿಸಿಕೊಂಡು ಪಯಣ ಬಂದೆನೆಂಬಂಥಾ | ಕೆಂಜಡೆ ವೀರಭದ್ರ ಸುಲಿಪಲ್ಲು ವೀರಭದ್ರ, ರಾಜೂಟಿ ವೀರಭದ್ರ, ಅಸ್ತಮೇ ವೀರಭದ್ರ, ರೌದ್ರ ವೀರಭದ್ರ, ಕರಾಳ ವೀರಭದ್ರ, ವೀರಾಧಿವೀರಭದ್ರ ಸ್ವಾಮಿಯವರು ತೆರಳಿ ಬರುವಂಥಾ ಕಾಲದಲ್ಲಿ......||

ಚತುರ್ಮುಖದ ಕುಲಬ್ರಹ್ಮ ಸ್ವಾಮಿಯವರೆಂದು ಕಾಶ್ಮೀರದಿಂದ ಹೊರವಂಟಂತವರು | ಹಾರು ಕುದ್ರೆಯನ್ನೆ ಏರಿಕೊಳ್ಳುವಂಥವರು | ಕುರುಕ್ಷೇತ್ರ, ಗಯಕ್ಷೇತ್ರ, ಯಂಕ್ಯಾದ್ರಿ, ಶ್ರೀರಂಗ, ಮಳೆಯಾಳ, ಕೇರಳ ಸ್ಥಾನಾಧಿಪತಿಗಳಾಗಿ ವಾಸವಾಗಿ ನೆಲೆಗೊಂಡೆನೆಂಬಂಥಾ | ಚತುರ್ಮುಖದ ಕುಲಬ್ರಹ್ಮ, ಅಜಬ್ರಹ್ಮ, ವಾಣಿಬ್ರಹ್ಮ, ಜಡೆಬ್ರಹ್ಮ, ಕೊಡೆಬ್ರಹ್ಮ, ಕನಕಬ್ರಹ್ಮ, ಧೀರಬ್ರಹ್ಮ, ಶೂಲಿಬ್ರಹ್ಮ, ಸಂನ್ಯಾಸಿ ಬ್ರಹ್ಮರಾಯ ಸ್ವಾಮಿಯವರು ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ.....||

ಪಾತಾಳದ ಮಹಾಸ್ವಾಮಿಯವರೆಂದೂ | ಪಾತಾಳ ಲೋಕದಿಂದ ಭೂಲೋಕಕ್ಕೂ ಭೂಲೋಕದಿಂದ ಪಾತಾಳ ಲೋಕಕ್ಕೂ | ಈ ಹೊತ್ತಿನ ಮಂಡಲ ಭೋಗಕ್ಕೂ ಹರಿದಾಡಿಕೊಂಡು ಪಯಣ ಬಂದೆನೆಂಬಂಥಾ ಪಾತಾಳದ ಮಹಾನಾಗ, ಹೆಣಗಿನಾಗ, ಗೋಧಿನಾಗ, ಶಂಖಪಾಲಕ, ಗುಳಿಕ, ತಕ್ಷಕ, ಕನ್ನಾಗ, ಉಸ್ನಾಗ, ಉನ್ನಂತ ಮಣಿನಾಗ, ಬಿನ್ನಾಣಿ, ಕಾಳಿಂಗ, ಕರ್ಕೋಟಕ, ವಾಸುಕಿ, ಧೃತರಾಷ್ಟ್ರ, ಸರ್ಪ, ಶೇಷ, ಕಪಿಲ, ಭೂದರ, ಶಂಖಪಾಲಕ ಪರಿವಾರ ಸಹಿತವಾಗಿ ಈ ಹೊತ್ತಿನ ಮಂಡಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ......||

ಹೆಣ್ಣು ಯಕ್ಷೆ ಅಮ್ಮನವರೆಂದು ದೇವಲೋಕದಿಂದ ಭೂಲೋಕಕ್ಕೂ ಭೂಲೋಕದಿಂದ ದೇವಲೋಕಕ್ಕೂ | ದೇವೇಂದ್ರನ ಒಡ್ಡೋಲಗಕ್ಕೂ | ಕಂಡಕೆಣಸು | ಉಂಡ ಊಟ | ಮಿಂದ ಮಿಯಣದ ಪರಿಯನ್ನೇ ಹೇಳಿಕೊಳ್ಳುತ್ತಾ ಪಯಣ ಬಂದೇನೆಂಬಂಥಾ | ದೇವಲೋಕದ ಹೆಣ್ಣು ಯಕ್ಷೆ, ಗಂಡು ಯಕ್ಷೆ, ಭೂತ ಯಕ್ಷೆ, ಪ್ರೇತ ಯಕ್ಷೆ, ನಾಗಯಕ್ಷೆ, ಜಲಯಕ್ಷೆ, ತಾಂಬೂಲಯಕ್ಷೆ ಅಮ್ಮನ ಪರಿವಾರಂಗಳು || ಮುಂಭಾಗದಲ್ಲೀ | ರಕ್ತೇಶ್ವರಿ ಅಮ್ಮನವರೆಂದೂ | ಹೊತ್ತಾರೆ ನೆರಿಯವಳು | ಹೊನ್ನೋಲೆ ಕಿವಿಯವಳು | ಬಿನ್ನಾಣಿ ಮೊರವುತ್ತ | ಮೊಲ್ಲೆಮಲ್ಲಿಗೆ, ಜಾಜಿ, ಕುಂದಮಂದಾರ, ಬಕಳು ಪುಷ್ಪವನ್ನೆ ಮುಡಿದುಕೊಂಡು ಪಯಣ ಬಂದೆನೆಂಬಂಥಾ | ಕೆಂಪು ರಕ್ತೇಶ್ವರಿ, ಶಾಂತರಕ್ತೇಶ್ವರಿ, ಸಂಹಾರ ರಕ್ತೇಶ್ವರಿ, ರಕ್ತಾಕ್ಷಿ, ರಕ್ತಗಂಧೀ ಎಂಬಂಥಾ ಯೋಗಿನ ಗಣಂಗಳ ಪರಿವಾರಂಗಳು || ಮುಂಭಾಗದಲ್ಲಿ |

ಹಿರೇನಂದಿಕೇಶ್ವರ ಸ್ವಾಮಿಯವರೆಂದೂ | ಕೈಲಾಸ ಶಿಖರದಿಂದ ತೆರಳಿ ಬಂದು | ಇಲ್ಲಿ ಪಾರ್ವತಿ ಪರಮೇಶ್ವರ ದೇವರು ಏರುವಂಥಾ ಮೋಹದ ವಾಹನನಾಗಿ | ಕಾಲಿಗೆ ಗಗ್ರ ಕೋಡಿಗೆ ಚಯಲ, ಹೊಕ್ಕಳ ಗಂಟೆ, ಸರಗಂಟೆ, ಗುಂಬುಗ್ಗೆಲು | ಗಾಳಿವಾಹನದಿಂದ ಖೇಚರಕ್ಕೂ, ನಿಶಾಚರಕ್ಕೂ, ಈ ಹೊತ್ತಿನ ಮಂಡಲಭೋಗಕ್ಕೂ ಹರಿದಾಡಿಕೊಂಡು ಪಯಣ ಬಂದೇನೆಂಬುಂಥಾ | ಹಿರಿಯನಂದಿ, ಹಾರನಂದಿ, ಕೆಂಡನಂದಿ, ಧೀರನಂದಿ, ಪಕ್ಕದ ನಂದಿ, ಅಂತರನಂದಿ,

ಆಕಾಶನಂದಿ, ಏಕಮುಖನಂದಿ, ದ್ವಿಮುಖನಂದಿ, ತ್ರಿಮುಖನಂದಿ, ಚತುರ್ಮುಖನಂದಿ, ಪಂಚಮುಖನಂದಿ, ದಶಮುಖನಂದಿ, ಎಪ್ಪತ್ತೇಳು ತಲೆ ಹಿರೇನಂದಿಕೇಶ್ವರ ಸ್ವಾಮಿಯವರು ತೆರಳಿ ಬರುವಂಥಾ ವ್ಯಾಳ್ಯದಲ್ಲೀ ||

ಮಳೆಯಾಳ ಬಬ್ರ್ಯಸ್ವಾಮಿಯವರೆಂದು | ಮಳೆಯಾಳ, ಕೇರಳ, ಸ್ಥಾನಾಧಿಪತಿಯಾಗಳಾಗಿ ವಾಸವಾಗಿ ನೆಲೆಗೊಂಡೆನೆಂಬಂಥಾ | ಮಳೆಯಾಳ ಬಬ್ಬರ್ಯ, ಘಾನಿಬಬ್ರ್ಯ, ಜಡೆಬಬ್ರ್ಯ, ಕೊಡೆಬಬ್ರ್ಯ, ಕನಕಬಬ್ರ್ಯ, ಧೀರಬಬ್ರ್ಯ, ಹೋರಿಬಬ್ರ್ಯ, ಸನ್ಯಾಸಿಬಬ್ರ್ಯ ಸ್ವಾಮಿಯವರು | ಮುಂಭಾಗದಲ್ಲಿ || ಜೆಟ್ಟಿಗರಾಯ ಸ್ವಾಮಿಯವರೆಂದು | ನೇತ್ರಣಿಯಿಂದ ತೆರಳಿ ಬಂದು | ಊರೂರು ಸ್ಥಾನಾಧಿಪತಿಗಳಾಗಿ | ವಾಸವಾಗಿ ನೆಲೆಗೊಂಡೆನೆಂಬಂಥಾ ನೇತ್ರಣಿ ಜಟ್ಟಿಗ, ವರಾಂಗದ ಜೆಟ್ಟಿಗ, ಹಟ್ಟಿಯಂಗಡಿ ಜಟ್ಟಿಗರಾಯ ಸ್ವಾಮಿಯವರು || ಮುಂಭಾಗದಲ್ಲಿ ||

ಕ್ಷೇತ್ರಕ್ಷೇತ್ರಕ್ಕೆಲ್ಲಾ ಅಧಿಪತಿಯಾಗಿ | ಈಶಾನ್ಯ ಕರ್ತನಾಗಿ | ಈಶ್ವರನ ವರಕುಮಾರನಾಗಿ | ಸದ್ಯೋಜಾತ, ವಾಮದೇವ, ಅಘೋರ, ಈಶಾನ, ತತ್ಪುರುಷನೆಂಬ ಕಟ್ಟಲೆಯಲ್ಲಿ ಮೆರೆದಾಡಿಕೊಂಡು ಪಯಣ ಬಂದೇನೆಂಬಂಥಾ | ಮೋಡಮನೆ ಕ್ಷೇತ್ರಪಾಲ, ಬಣ್ಣದಟ್ಟಿನ ಕ್ಷೇತ್ರಪಾಲ, ಬ್ರಹ್ಮಸ್ಥಾನದ ಕ್ಷೇತ್ರಪಾಲ, ನಾಗ್ರಾಡಿ ಕ್ಷೇತ್ರಪಾಲ, ಸ್ವಾಮಿಯವರೂ || ಮುಂಭಾಗದಲ್ಲಿ || ಚಿಕ್ಕಲ್ತಿ, ಮಾಯಲ್ತಿ, ಉಮ್ಮಲ್ತಿ, ಬೊಬ್ಬರ್ತಿ, ಬೈಕಾಡ್ತಿ, ಕಿರುಮಾಯದವಳು, ಧೂಮಾವತಿ, ಬಕಳಮುಖಿ, ದ್ವಾರಪಾಲಕರು, ಬಾಗಲು ಬಬ್ರ್ಯ, ಮುಂಡಾಸ್‌ರಾಯ, ಅಡ್ಕಂತಾಯ, ನಾರ್ಣಂತಾಯ, ಗಾಳೆರಾಯ, ಗಂಟೇರಾಯ, ಕೊಡಮಣ್ತಾಯ, ಕಡ್ಗೇಶ್ರ, ಕಡ್ಗರಾವಣ, ಕೇಚರಾವುತ, ಗೂಟ್ರಮಲ್ಲ, ಸಪರಿವಾರಂಗಳು ಮುಂಭಾಗದಲ್ಲಿ ||

ಉಳ್ಳಾಲ ಕೇರಳ ಸ್ಥಾನಾಧಿಪತಿಗಳಾಗಿ | ವಾಸವಾಗಿ ನೆಲೆಗೊಂಡೆನೆಂಬಂಥಾ | ಹಳೆಯಮ್ಮ, ಬಾಲಚಿಕ್ಕು, ಬಗ್ಗುಚಿಕ್ಕು, ಮರ್ಲುಚಿಕ್ಕು, ಅವತಾರಚಿಕ್ಕು, ದೊಟ್ಟೆಕಲ್‌ಚಿಕ್ಕು, ವೀರಮಾಸ್ತಿ, ರೌದ್ರಮಾಸ್ತಿ, ಕೆಂಡಮಾಸ್ತಿ, ಮೂಢೂರ್ ಹ್ಯಾಗುಳಿ, ಮೂಕ ಹ್ಯಾಗುಳಿ, ಕೆಪ್ಪಹ್ಯಾಗುಳಿ, ತಿರುಗಣೆ ಹ್ಯಾಗುಳಿ, ಜೈನಹ್ಯಾಗುಳಿ, ಹಣಾರಹ್ಯಾಗುಳಿ, ಶೂಲದಹ್ಯಾಗುಳಿ, ಕೆಂಡದಹ್ಯಾಗುಳಿ, ಪರಿವಾರಂಗಳು | ಮುಂಭಾಗದಲ್ಲಿ || ಧರ್ಮಸ್ಥಳ ಅತ್ತಲಾಗಿಂದ ಪಯಣ ಬಂದೆನೆಂಬಂತಹ | ಕಲ್ಲುಕುಟಿಗ, ಕುಟಜಾತ, ಧೂಮಾವತಿ, ಪಂಜುರ್ಲಿ, ಹಾದಿವೀರ್ರು, ಬೀದಿವೀರ್ರು, ಸುಂಕದ ವೀರ್ರು, ಸರಳವೀರ್ರು, ಬೇಟೆವೀರ್ರು, ಕೋಟೆವೀರ್ರು, ಕರವರ್ ವೀರಾದಿ ಗಣಂಗಳ ಪರಿವಾರಂಗಳು ಮುಂಭಾಗದಲ್ಲಿ || ಹುಲಿಚೌಂಡಿ, ಘೋರಚೌಂಡಿ, ಶೂಲಚೌಂಡಿ, ದೇವಚೌಂಡಿ, ಕೀಳುಭೂತ, ಕೀಳುಪರಿವಾರ, ಮೇಲುಭೂತ, ಮೇಲ್‌ಪರಿವಾರ, ಎಂಟುದಿಕ್ಕು ಹದಿನಾರು ದೆಸೆಯೊಳಗಣ ಸಕಲ ದೇವಾದಿದೇವ ಗಣಂಗಳು | ಭೂತಾಧಿಭೂತ ಗಣಂಗಳು | ರುದ್ರಗಣಂಗಳು | ಮಹಾ ರುದ್ರಗಣಂಗಳು | ವಿಷ್ಣುಗಣಂಗಳು | ಪಡೆಪರಿವಾರಂಗಳು ಸಹಿತವಾಗಿ ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲೀ........|| (ಢಮರು ಬಾರಿಸುವುದು)

|| ನಾಗನ ಕತೆ ||

ಪಾತಾಳವು ನಾಗನರಮನೆಯೂ | ಪ್ರೀತಿಯಿಂದಲಿ ವಾಸವಿರುತಾಲಿದ್ರೀ || ಭೂತಳಕ್ಕೆ ತಾನು ಬರಬೇಕೆಂದು | ಸಂಪ್ರೀತಿಯೊಳ್ ಮರಿಮಟ್ಟೆ ಕೂಡಿಕೊಂಡು || ನಾಗರಥ ನಾಗವಾಜಿ ಏರಿಕೊಂಡು | ನಾಗಾಭರಣವ ಧರಿಸಿಕೊಂಡು

|| ಹಿಡಿವ ಕಹಳೆಯು ಕೊಂಬು | ಬಡಿವ ಭೇರಿಯು ವಾದ್ಯ | ಅಡಿಗಡಿಗೆ ಹೊಡೆವ ತಮ್ಮಟೆ ಹೆಗ್ಗಾಳೆ || ತುಡುಬು ಗಡಬಡೆ ಭೇರಿ ಹೊಡೆಸಿಕೊಂಡು | ಕಡು ಹರುಷದಿ ಪಯಣ ಬರುತಾಲಿದ್ರೀ || ಲೋಕ ಲೋಕವ ಕಳೆದು ಬರುವಾಗ | ಭೂಕಾಂತೆಯು ಮಾರ್ಗವ ಬಿಡದಿರಲು || ಕಡುಸಿಟ್ಟು ಮಹಾಶೇಷ ತಾಳಿಕೊಂಡು | ಕೊಡಿಬಾಲ ಪಾತಾಳಕ್ಕೂರಿಕೊಂಡು || ಹೆಡೆಯೆತ್ತಿ ಮೇಲ್ಮೋ ಗ ನೋಡುವಾಗ ಬಿಡದೆ ವಿಷವು ಬಂದು ಸುಡುತಲಿತ್ತು || ವಿಷಜ್ವಾಲೆಯಾ ದೇವಿ ತಾಳಲಾರದೆ | ಸುರಿವ ಕಂಬನಿಯಿಂದ ಮರೆಸಾರ್ದಳು || ಧರಣಿಯ ಮನ್ನಿಸಿ ಮಹಶೇಷನು | ತರಣಿ ಪ್ರಕಾಶದಿ ಹೊರ್ದುತಲಿದ್ರೀ || ಭೂಲೋಕಕ್ಕೆ ತೆರಳಿ ಬರುತಾಲಿದ್ರಿ | ವಾಲ್ಮೀಕ ಗೃಹ ಸೇರಿ ಇರುತಾಲಿದ್ರೀ || ವನದೊಳು ಸಂಚಾರ ಮಾಡಬೇಕೆಂದು | ವನಕಾಗಿ ತೆರಳಿ ಹೊರ್ದುತಲಿದ್ರಿ || ಕಾರೆಂಬಂಥ ಘೋರ ಅಟವಿಯಲ್ಲಿ | ಗೋರೆಂಬಂಥ ಮಳೆ ಹೊಯ್ಯುತಲಿತ್ತು || ಕಾಳುಕಿಚ್ಚು ಬಂದು ಕಟ್ಟುತಾಲಿತ್ತು | ಗಾಳಿಪಲ್ಲಟ ಬಹಳ ಏರುತಾಲಿತ್ತು || ಸುತ್ತಮುತ್ತಾ ಉರಿ ಕಟ್ಟುವಾಗ | ಅತ್ತ ಇತ್ತ ಸುಳಿದಾಡುತಲಿದ್ರೀ || ಬಲವಂತ ಉರಿಜ್ವಾಲೆ ತಾಳಲಾರದೆ | ಜಲದೊಳಗೇ ಬಿದ್ದು ಮಡಿದ್ಯೋ ನಾಗ || ಈ ರೀತಿಯಲಿ ಮಡಿದ ಪರಿವಾರಕ್ಕೆ | ಪರದಲ್ಲಿ ಮೋಕ್ಷಾರ್ಥವಿಲ್ಲದಿರಲು ||

ಸುಬ್ರಹ್ಮಣೇಶನ ಕೀಳು (ಕಿರಿದು) ಪರಿವಾರವು | ನಿರ್ಭೀತಿಯಲಿ ವಾಸವಿರುತಾಲಿದ್ರಿ || ಧರಣಿಯೊಳಗೆ ಇರುವ ದುರುಳಾತ್ಮರು | ನಿಮ್ಮ ಮರಿಮಟ್ಟೆಯನು ಗಾಸಿಮಾಡುತಲಿದ್ರು || ಸಂತತಿಯೂ ನಷ್ಟವಾದ್ದು ನೋಡಿ | ಚಿಂತಿಸಿ ಸುಬ್ರಹ್ಮಣ್ಯ ಕೋಪಿಸುತ || ನಷ್ಟವ ಮಾಡಿದ ದೃಷ್ಟ (ದುಷ್ಟ) ಮನುಜರಿಗೆ | ಕಷ್ಟವ ತೋರಿ ನಾವು ದಣಿಸಬೇಕೆಂದು || ಇಂತೆಂದು ಯೋಚಿಸಿ ಕಂಡು ರೋಷವ ತಾಳಿ | ಮುಂತಾದ ಪರಿವಾರ ಕೂಡಿಕೊಂಡು || ಕೊಳನಾಗನ ಮುಂದೆ ಮಾಡಿಕೊಂಡು | ಇಳೆಯ ಮನುಜರಿಗೆ ಕಾಡುತಲಿದ್ರಿ || ಬೆಂಕಿ ಜ್ವಾಲೆಯು ನಿಮಗೆ ತಾಗಿದ ಹಾಗೆ | ಬಿಂಕದಿ ಉರಿಜ್ವಾಲೆ ಇಕ್ಕುತಾಲಿದ್ರಿ || ಹೊಗೆಯು ಸುತ್ತಿಯ ನಯನ ಜಾರಿದ ಹಾಗೆ | ಬಗೆ ಬಗೆ ಕಣ್ಣು ಶೂಲೆ ಇಕ್ಕುತಾಲಿದ್ರಿ || ಜಲದೊಳಗೆ ಬಿದ್ದು ಕೊಳೆತ ಹಾಗೆ | ಚಲದಿಂದ ಕೊಳಕೋಷ್ಟ (ಕುಷ್ಠ) ಇಕ್ಕುತಾಲಿದ್ರಿ || ಕೊಳೆತ ಅಸ್ಥಿಯು ಬಿಳಿದಾದ ಹಾಗೆ | ಗಳಿಲ್ಲನೆ ಬಿಳಿಕೋಷ್ಟ ಇಕ್ಕುತಾಲಿದ್ರಿ || ಹೊಡಿಕಜ್ಜಿ ಪುಡಿವ್ರಣ ಹಾಕುತಲಿದ್ರಿ | ಬಿಡದೆ ನಾನಾ ಪರಿ ದಣಿಸುವಾಗ || ಉರಗ ಪಾಶದಿ ಕಟ್ಟಿ ಎಳೆಯುವಾಗ | ನರಗಳು ಸುರುಟಿಕ್ಕಿ ಸರಿಯುತಲಿತ್ತು || ನಿನ್ನ ಉಪತಿಯ (ಉಪಹತಿ) ನರರು ತಾಳಲಾರದೆ | ಅಲೆಹ್ಯೊಸಿಯೆ ನೋಟ ನೋಡುತ್ತಲಿದ್ರು || (ನಿಮಿತ್ತ ಮೂಲದ ಪ್ರಶ್ನೆ ಕೇಳುವುದು). ಕದ್ರುಪುತ್ರರಿಗೆ ಭೋಗ ಕೊಡುವ ತನಕ | ಬಿದ್ದ ಉಪಹತಿ ಶಾಂತವಾಗದೆಂದರು || ಕೊಳಲಾಗಗೆ ಮೋಕ್ಷ ಮಾಡುತಲಿದ್ರು| ಗಳಿಲನ್ನೆ ಪೂಜೆ ಭೋಗ ನಡ್ಸುತಲಿದ್ರು|| ಹಗಲಿನಲ್ಲಿ ನಿನಗೆ ಪೂಜೆಯ ಮಾಡಿ | ರಾತ್ರೇಲಿ ಕೊಡುವರು ಭೋಗಸೇವೆಯೆ || ಪಂಚವರ್ಣದ ಪುಡಿಯ ತೆಗೆದುಕೊಂಡು ಪಂಚದಾರದಲಿ ದೇಹ ನಿರ್ಮಿಸುತ || ನಿಮ್ಮ ರೂವಾರವ ನಿರ್ಮಿಸಿ ಬರಕೊಂಡು | ನಿಮ್ಮಾದ್ಯಂತರ ಪೂಜಿಸುತ || ಹಿಂಗಾದೆ ಧೂಪದೀಪ ಮಾಡಿಕೊಂಡು || ಮಂಗಳಾರತಿಯೆತ್ತಿ ಪ್ರಾರ್ಥಿಸುತ || ವಿಧವಿಧದಲಿ ಕರೆದಾಡುವಾಗ | ಮುದದಿ ಘೋಷದಿ ದೇವ ಬರತಾಲಿದ್ರಿ || ಮಂಡಲ ಭೋಗಕ್ಕೆ ದೇವ ಬಂದರ ಮೇಲೆ | ಅಂದವುಳ್ಳ ವಿಸ್ತಾರ ತಿಳಿದೆ ಕೇಳೋ || ಬಾಲದಿಂದ ನಿಮ್ಮ ಶಿರ ಪರಿಯಂತರ | ಲೀಲೆಯಿಂದಲಿ ಕರೆದೊರ್ಣಿಸುವೆ ||

ಕಡಿದಿರಿಸಿದ ಹೊನ್ನ ಸರಳಿನಂತೆ | ಕೊಡಿಬಾಲವು ಚಂದ ಮಹಶೇಷಗೆ || ಪುಟ್ಟಬಾಳೆಯದಿಂಡು ಹೊಳಹಿದಂತೆ | ಹೊಟ್ಟೆಬಾಮ ಚಂದ ಮಹಶೇಷಗೆ || ಸುವರ್ಣದಾ ಪ್ರಭೆ ಹರಡಿದಂತೆ | ಮೈಯ ಕಾಂತಿಯು ಚಂದ ಮಹಾಶೇಷಗೆ || ಹವಳ ಕೆತ್ತಿಸಿದ ಪದಕದಂತೆ | ಕೊರಳ ಕಂಟವು ಚಂದ ಮಹಾಶೇಷಗೆ || ಸಾಗರದಾ ತೆರೆ ಮಡುಹಿದಂತೆ | ತೂಗ್ಯಾಡುವ ನಿಮ್ಮ ಹೆಡೆಯ ಬಾಮ || ಪೌರ್ಣೋಮಿಯ ಪೂರ್ಣಚಂದ್ರನಂತೆ | ಮುಖದ ಕಾಂತಿಯು ಚಂದ ಸುಬ್ರಹ್ಮಣ್ಯಗೆ || ತರಣಿಯ ಕಿರಣದ ಶಶಿಪೋಲು | ಅರೆನೊಸಲಿನ ಬೆಳಕು ಮಹಾಶೇಷಗೆ || ಕಾಮದೇವನು ಹಿಡಿದ ಬಿಲ್ಲಿನಂತೆ | ಬಾಗಿ ಬಂದವು ಕಣ್ಣ ಹುಬ್ಬೆರಡು || ತಾವರೆಯ ಕಿರುಯೆಸಳಿನಂತೆ | ಕಣ್ಣಾಡವಳಾರವು ಚಂದ ಮಹಾಶೇಷಗೆ || ಕೋಲ್‌ಸಂಪ್ಗೆಯೂ ಕೋಲು ಮೊಗ್ಗೆಯಂತೆ | ಮೂಗಿನ ಕೋಲು ಚಂದ ಮಹಶೇಷಗೆ || ಕರ್ಪೂರದ ಕಿರುಕರ್ಡ್ಕೆಯಂತೆ | ಒಪ್ಪಿ ಬಂದವು ನಿಮ್ಮ ಬಾಯ್ದಾರೆಯು || ಮಹಾವಿಷ್ಣುವಾ ನಳಿಪಾದಂಗಳು | ಮೋಹದ ಹೆಡೆಮೇಲೆ ತೋರುತಿದೆ || ಕಾಳಿಕರಾಳಿಯು ದೂತಿ ಯಮದೂತಿಯು | ನಾಲ್ಕು ದಾಡೆಯ ನಾಗ ಧರಿಸಿದನೆ || ಕಾಳಿಕಾರಾಳಿಯು ಕಾಯುತ್ತಲಿತ್ತು | ದೂತಿ ಯಮದೂತಿಯು ಕೊಲುತಾಲಿತ್ತು || ದೂತಿ ಯಮದೂತಿಯು ಕೊಲುವಷ್ಟಕ್ಕೇ | ಕೊಡಿಸಿದರೂ ನಿನಗೆ ಮಂಡಲಭೋಗವೂ || ಕೊಡಿಸುವಂಥ ಮಂಡ್ಲಭೋಗದಲ್ಲಿ | ಅಷ್ಟಕುಲದ ಪರಿವಾರ ಕರದೋರ್ಣಿಸುವೆ || ಮಹನಾಗ ಹೆಣಗಿನಾಗ ಗೋನಾಗ ಶಂಕಪಾಲಕ | ಗುಳಿಕ ತಕ್ಷಕ ಕನ್ನಾಗ ತೆರಳಿ ಬಾರೋ || ಬಿನ್ನಾಣಿ ಕಾಳಿಂಗ ಕರ್ಕೋಟಕ ಧೃತರಾಷ್ಟ್ರ | ವಾಸುಕಿ ಅನಂತ ಪದ್ಮ ತೆರಳಿ ಬಾರೋ || ನಾಗ ಬೆನ್ನಿಲಿ ನಾಗ ನಾಗ ಹುಂತಿನೊಳಿರ್ಪ | ನಾಗ ಹುಂತಿನ ಹೂವ ಕೊಯ್ಯುವರಿಲ್ಲ || ಯಳನಾಗ ಹೊಳನಾಗ ಹೊಳೆವ ಪುಮ್ಮರಿನಾಗ | ಮಿರಿಮಿರಿ ಮಿಂಚುವ ಶಂಖಪಾಲ | ಶಂಕಪಾಲಕನೆ ನೀ ಸೊಂಕಿದವರುಗಳ | ಚೆಂಕಿಪ ಧ್ವನಿ ಕೇಳಿ ನಲಿದಾಡುವೆ || ಆರೇಳು ಹೆಡೆಗಳು ತೋರಿದ ಮರಿ ಮಚ್ಚೆ | ವಾರುದಿ ತೆರೆಯಂತೆ (ವಾರಿಧಿ) ಹೆಡೆ ನಿನಗೆ ಸಾಗರ ಶಯನನೆ ಮಣಿನಾಗ ನೀ ಕೇಳೊ | ವಾಸುಕಿ ಸುಬ್ರಹ್ಮಣ್ಯ ತೆರಳಿ ಬಾರೊ || ಅಂದು ದೇವಾಸುರರು ಬಂದವರು ಕ್ಷೀರಾಂಬುಧಿಗೆ | ಮಂದರವ ತಂದಮೃತ ಕಡೆವಾಗ್ಳಿಗೆ || ಅಮೃತವ ಕಡೆವ ಕಡಗೋಲಿಗೆ ನೇಣಾಗಿ | ಪೊಡವಿ ಎಲ್ಲವ ಸುಟ್ಟೆ ವಿಷದೊಳಗೆ || ಸಾಸಿರ ವಿಷ ದಾಡೆ ಸಾಸಿರ ಕೊಳ ದಾಡೆ | ಬೀಸುವ ಹೆಡೆಯು ಪನ್ನಗ ಸಾಸಿರ || ಸಾಸಿರ ಹೆಡೆಗಳ ಹಾಸರಿಸುತ ಬಾರೊ | ವಾಸುಕಿ ಸುಬ್ರಹ್ಮಣ್ಯ ತೆರಳಿ ಬಾರೊ || ಅಂದು ಅರ್ಜುನದೇವ ಬಂದು ಖಾಂಡವ ನವವ | ನಿಂದು ಕಾಲಾಗ್ನಿಗೆ ಕೊಡಿಸುವಾಗ || ಚಂದದಿ ಕಾಲಾಗ್ನಿ ವನವನ್ನು ಸುಡುವಾಗ ಅಂದು ಸಾಯದ ನಾಗ ತೆರಳಿ ಬಾರೋ || ಪಾಡಿ ಪೊಗಳಿ ಕರವ ನೀಡಿ ಮುಗಿದೆ ವರವ | ಬೇಡುವೆ ದಯಮಾಡೊ ಮಹಾಶೇಷನೆ || ಸರ್ಪರಾಜನೆ ನಾಗ ಕಲ್ಪಭೋಜನೆ ಶಿರದಿ | ಪುಷ್ಪಮಾಲೆಯಂ ಧರಿಸಿರ್ಪವನೆ || ಕಪ್ಪು ಕಂಟನ ಕೊರಳೊಳೊಪ್ಪಿದ ಭುಜಗನೆ | ಶೂರ್ಪಕರ್ಣನ ಸೊಂಟ ಕೊಪ್ಪಿದನೆ || ಜನನಿಯ ಶಾಪಕ್ಕೆ ಮನದಿ ಯೋಚಿಸಿ ಶೇಷ | ವನದೊಳು ತಪಸಿಗೆ ನಿಂದವನೆ || ಚಿನುಮಯಾತ್ಮಕನನ್ನು ಮನದಲ್ಲಿ ಯೋಚಿಸಿ | ಅನುದಿನದಲಿ ಧ್ಯಾನಿಸುತ್ತಿಹನೆ ||

ವಾರಿಜಾಸನನು ಮೈದೋರಲು ಸಮಯದಿ | ಚಾರು ಭಕ್ತಿಗಳಿಂದ ಸ್ತುತಿಸಿದನೆ || ಕರುಣದಿ ವರವಿತ್ತು ತೆರಳಿದ ಕಮಲಜ | ಭರದಿ ಪಾತಾಳಕ್ಕೆ ಇಳಿದವನೆ || ಪಾತಾಳದೊಳ ಸಂಪ್ರೀತಿ ಯೊಳಿರುವನೆ | ಭೂತಳದೊಳು ಕ್ಷಾತಿ (ಖ್ಯಾತಿ) ಪಡೆದವನೆ || ಪೀತವರ್ಣನೆ ಸಂಗೀತ ಸಂಪನ್ನನೆ | ವಾತಾರನೆ ವಿಹಿದೂತರನೇ || (-?) ವ್ಯಾಳನೆ ಸದ್ಗುಣಶೀಲ

ಫಣೀಂದ್ರನೆ | ಕಾಳಿಂಗನೆ ಕಾಳೋರಗನೆ || ನಾಲಿಗೆ ಸಾಸಿರ ಸೀಳಾಗಿರುವನೆ | ನೀಲಮಣಿಯ ಪ್ರಭೆ ಹೋಲುವನೆ || ರತ್ನದ ಮಣಿಯನ್ನು ಮಸ್ತಕದಲಿ ಸೂಡಿ | ಸುತ್ತಲೂ ಬೆಳಕು ತೋರುತ್ತಿಹನೆ || ಪೃಥ್ವಿಯ ಬಾಲದಿ ಸುತ್ತಿ ಬಿಗಿದು ನಡೆನೆತ್ತಿಯೊಳವನಿಯ ಪೊತ್ತವನೆ || ಸತ್ವಸಾಹಸಿ ನಿನ್ನ ಉತ್ತುಮ ಮಹಿಮೆಯ | ಪ್ರತ್ಯಕ್ಷದಿಂದ ತೋರುತ್ತಿಹನೆ || ಶೇಷನೆ ಶಶಿಧರ ಭೂಷ ಭುಜಂಗನೆ | ವಾಸುಕಿ ವಿಷವಾರ ವರ್ಜಿತನೆ || ವಾಸುದೇವಗೆ ಮೃದು ಹಾಸಿಗೆಯಾದನೆ | ಸಾಸಿರ ಪೆಡೆಯುಳ್ಳ ಸಹಸಿಗನೆ || ತಕ್ಷಕ ರಾಜನೆ ಅಕ್ಷಯವೀವನೆ | ನಕ್ಷತ್ರಪತಿಯನ್ನು ಪೊತ್ತಿಹನೆ || ಚಕ್ಷುಶ್ರುತನೆ ಪರೀಕ್ಷಿತ ಮಹಿಮನೆ | ರಾಕ್ಷಸು (ರಾಕ್ಷಸ) ವನ್ನು ಶಿಕ್ಷಿಪನೆ || ಯಕ್ಷ ಗಂಧರ್ವ ಶೋಭಿಪ ಲಾವಣ್ಯನೆ | ಲಕ್ಷ್ಮಣರೂಪನೆ ಲಕ್ಷಣನೆ || ಉದ(ಯ) ಗಿರಿ ಪರ್ವತ ಸದನಂಗಳೆಡೆಯಲ್ಲಿ | ಜನಿಸಿದೆ ಕದ್ರುಗೆ ಕಂದನಾಗಿ || ಕದ್ರುಗೆ ಕಂದನೆ ರುದ್ರ ನಿಗಾಭರಣನೆ | ನಿದ್ರೆ ಮಾಡುವ ಮಲಗಿರ್ದವನೆ || ನಿದ್ರೆಯನ್ನೆ ತಿಳಿದೆದ್ದು ಶೋಭಿಸುವಾಗ | ಸಮುದ್ರವ ನೇಣಾಗಿ ಸುತ್ತಿದನೆ || ಆದ್ರಿಯ ಬಿಗಿದುಕೊಂಡಬ್ಧಿಯ (ಅಬ್ಧಿಯ) ಕಡೆವಾಗ | ಕ್ಷುದ್ರ ದೈತ್ಯನ ಮುರಿದಟ್ಟಿದನೆ || ದಂತದಿ ಗರಳಾವ ಸಂತತ ಧರಿಸಿದ | ವಂಚನೆ (?) ಮುನಿದರಿಗಂತಕನೆ || ಕಾಂತಾರದಿ ದಮಯಂತಿಗೊಲಿದೆ ದಯ | ವಂತನೆ ಸಜ್ಜನ ಸಂತಕನೆ || ಆಸ್ತೀಕ ಮಾವನೆ ಶಾಸ್ತ್ರದಿ ಬಾವನೆ (ಭಾ?) | ಮೃತ್ತಿಕೆ ಮನೆಯೊಳಗರ್ತಿಪನೆ || ಸತ್ರಾಜಿತನ ಸುತನ ಸತ್ತ ಸತಿಯ ನಿಜ | ಪೂತ್ರಿಯ ಮಾಡಿಕೊಂಡಿರ್ದವನೆ || ಚಿತ್ರಾಂಗದೆಯ ಸುಪುತ್ರನ್ನ ಬಾಣದಿ | ಬತ್ತಳಿಕೆಯೊಳಸ್ತ್ರವಾದವನೆ || ಪಾರ್ಥನ್ನ ಶಿರವನ್ನು ಕತ್ತರಿಸಲು ಜೀವ | ರತ್ನದ ಮಣಿಯ ತಂದೆತ್ತಿದನೆ || ಶಂಖಪಾಲಕನೆ ನೀ ಶಂಕಪದ್ಮನೆ ಬಿರಿ | ದಾಂಕ ಗುಳಿಕನೆ ಭಯಂಕರನೆ || ಶಂಕರನ ಕೈಗೆ ಕಂಕಣವಾದನೆ | ಪಂಕಜನಾಭನ ಕಿಂಕರನೆ || ಗರುಡನ ಭಯ ಕಂಜಿ ತಿರುಗಿ ವಾಸುಕಿ ಬಂದು | ಭರದಿ ಬಿಲದ್ವಾರ ಹೊಕ್ಕವನೆ || ಹರನ ಕರುಣದಿಂದ ವೈರಿ ಬಾಧೆಯ ಗೆಲಿದು | ಮೆರೆವ ಷಣ್ಮುಖನನ್ನು ಸೇರಿದನೆ || ವೀರವಾಸುಕಿಯು ಕುಮಾರ ಪರ್ವತದಲ್ಲಿ | ಸೇರಿ ಷಣ್ಮುಖ ಸಹ ಇರುತಿಹನೆ || ವಾರನದಿಯ ಕೀರಪಾರ ಮಹಿಮನೆಂದು | ಭೂರಿ ಹರುಷದಿಂದ ಮೆರೆದವನೆ || ಅಂದು ಜನಮೇಜಯನಿಂದ ಯಾಗವ ಮಾಡೆ | ಬಂದು ಇಂದ್ರನ ಪೀಠ ಸುತ್ತಿಹನೆ || ಕಂದಾಸ್ಮಿತ (?) ನಿನ್ನ ಬಂಧನಗಳ ಬಟ್ಟು | ಮುಂದೆ ಸಂತೋಷ ದೋಳಿರುತಿಹನೆ || ಅನ್ನದಾನದ ಸುಬ್ರಹ್ಮಣ್ಯನೆ ಪುತ್ಥಳಿ | ಚಿನ್ನದಂತ್ಹೊಹೆವೆಯ ಚಿನುಮಯನೆ || ಕರ್ಣರಹಿತದೇವ ಕರ್ಣದ ವಚನವ | ಕಣ್ಣಲ್ಲಿ ಕೇಳುವೆಯೊ ಪನ್ನಗನೆ || ಪಾತ್ರಿಯ ಮೇಲೆ ಬಂದರ್ತಿಯೊಳ್ ಕುಣಿವಾನೆ | ರಾತ್ರಿಯೊಳ್ ಮಂಡ್ಲಭೋಗಗೊಂಬವನೆ || ಧಾತ್ರಿಗುತ್ತುಮನಾದ ಭಕ್ತನಾದ ನರಹರಿ | ಭಕ್ತರಿಗೆ ಇಷ್ಟಾರ್ಥ ವರವೀವನೆ || ಪೊಡವಿಯೊಳಗೆ ಹೆಡೆ ಶಿಲೆಗಲ್ಲು ಇಟ್ಟರೆ | ಪಿಡಿದ ದ್ರೋಹವ ತಲೆಗಡಿದವನೆ || ಬಿಡದೆ ಭಕ್ತರು ಬಂದು ಹೊಡಿಸೇವೆ ಮಾಡಲು | ತಡೆಯದಿಷ್ಟಾರ್ಥವ ಕೊಡುತಿಹನೆ || ಪರಿಪರಿ ಸೇವೆಯ ವಿರಚಿಸಿ ಮಾಡಲು | ಕನಕ ಸಮೃದ್ಧಿಯನೀವವನೆ || ಮಹಾನಾಗ ಸಪರಿವಾರ ನಲಿದ ಮೇಲೆ | ಮರಿಮಟ್ಟೆ ವಿಸ್ತಾರ ಪೊಗಳಿಕೊಂಬೆ || ಅಂಡಗಳು ಮತ್ತೆ ಪಿಂಡದಂತೆ | ಹೊರ್ಡ್ಯಾಡುವ ನಿಮ್ಮ ಮರಿಯ ಚಂದ | ಮಂಡಲಭೋದಕ್ಕೆ ದೇವ ಬಂದರ ಮೇಲೆ | ಚಿತ್ತಸಂತೋಷವ ಮಾಡಬೇಕು ||

|| ನಂದಿಯ ಕತೆ ||

ಉಳ್ಳಾಳವೂ ಎಂಬ ಸ್ಥಳದೊಳಗೆ | ಚಿನ್ನಮ್ಮನೂ ಹುಟ್ಟಿ ಬಾಳುತಲಿದ್ದು || ಷೋಡಶ ಪ್ರಾಯವು ತುಂಬಿ ಬರುತಾಲಿತ್ತು | ಕೈದಾರೆ ವಿವ್ಹವಸ್ಥ ನಡೆಯತಲಿತ್ತು || ಪುಷ್ಪಾಳಿಕೆ ಯೊಳೊಪ್ಪಿ ಬಾಳುವಾಗ | ಚಿಕ್ಕಯ್ಯ ಶೆಟ್ಟಿ | ಜೋಗಪ್ಪ ಶೆಟ್ಟಿ ಹುಟ್ಟುತಲಿದ್ರು || ಷೋಡಶ ಪ್ರಾಯವು ತುಂಬಿ ಬರುತ್ತಲಿತ್ತು | (-?) || ದಾಯಾದ್ಯ ಮತ್ಸರ ಹುಟ್ಟುತಲಿತ್ತು | ಹ್ಯೊಲೊಡಿ ರಣಕಾಳಗ ನಡೆಯುತಲಿತ್ತು || ಒಡನೀರ್ವರು ಮೃತಪಡುತಲಿದ್ರು | ಘೋರ ದೈವಿಕವ ತಾಳುತಲಿದ್ರು || ಹಿರೆನಂದಿ ಕಿರೆನಂದಿ ಎನಿಸಿಕೊಂಡು | ಉಳ್ಳಾಳದಲಿ ಬಿದ್ದು ಕಾಡುತಲಿದ್ರಿ || ಸಮುದ್ರ ರಾಜನು ಒತ್ತಿ ಬರುತಲಿದ್ದ | ಉಳ್ಳಾಳವೂ ತೇಲಿ ಹೋಗುತಲಿತ್ತು || ಉತ್ರದೇಶಕ್ಕಭಿಮುಖವಾಗುತಲಿದ್ರಿ | ಇದು ಸ್ಥಳವೂ ನಿನಗೆ ಗನವೀತೆಂದು || (ಘನ ವಿತ್ತೆಂದು | ಘನ-ಗನಾ ಒಳ್ಳೆಯದು) ಅಲ್ಲಲ್ಲಿ ಸ್ಥಳ ಮನೆ ರಚಿಸಿಕೊಂಡು | ಬಲ್ಲಿದ ಹಿರೆನಂದಿ ಎನಿಸಿಕೊಂಡೂ || ಹಿರೆನಂದಿ ಕಿರೆನಂದಿ (ಯ) ರೊಡನಾಡುತ | ನಿಮ್ಮೊಳಗೆ ಭೇದವಿಲ್ಲದೆ ಬನ್ನಿ || ಮಂಡ್ಲಭೋಗಕ್ಕೆ ದೇವ ಬಂದರ ಮೇಲೆ | ಇಷ್ಟಾರ್ಥವಾಯ್ತೆಂದು ನಲಿಯಬೇಕು ||

|| ಯಕ್ಷಿ ಕತೆ ||

ದೇವಲೋಕದಲಿ ಇರುವ ಹೆಣ್ಣುಯಕ್ಷಿಗೆ | ಭೂಲೋಕದಲಿ ಸೇವೆ ನಡೆಯುತಲಿತ್ತು || ಯಕ್ಷ ವಾದ್ಯವ ಹಿಡಿದು ಬಾರಿಸುವಾಗ | ಢಕ್ಕೆಯ ಶಬ್ದವು ಕಿವಿಗೆ ಕೇಳುತಲಿತ್ತು || ಮೈ ಬಳಲೀ ನಿದ್ರೆ ಬಾರದಿರಲು | ದೇವೇಂದ್ರನಾ ಬಳಿಗೆ ಹೋಗುತಲಿದ್ದು || ಕಂಡ ಕನತಿ (ಕನ್ತಿ-ಕಂತಿ-?) ನ ಪರಿಯ ಹೇಳುತಲಿದ್ದು | ಮಿಂದ ಮಿಾಯಣದ ಪರಿಯ ಹೇಳುತಲಿದ್ದು || ದೇವೇಂದ್ರನು ಪಾಟ ಮಾಡದಿರಲು | ಅತಿ ಕೋಪ ಹೆಣ್ಣು ಯಕ್ಷಿ ತಾಳಿಕೊಂಡು || ಅಶೋಕವನಕಾಗಿ ಹೋಗುತಲಿದ್ದು | ನಂದಿಬಟ್ಟಲ ಹೂವ ಕೊಯ್ಯುತಲಿದ್ದು || ಹೂವಿನ ಮಾಲೆಯ ಧರಿಸುವಾಗ | ದೇವಪೀಠ ತಲೆಕೆಳಗಾಗುತಲಿತ್ತು || ದೇವೇಂದ್ರನೂ ಪಾಟ ಮಾಡುತಲಿದ್ದ | ದೇವಲೋಕದ ಹೆಣ್ಣು ಯಕ್ಷಿ ಹೌದು ಎಂದು || ದೇವಪೀಠವನು ತಂದು ಕೊಡ್ರಲೆ ಕೊಟ್ಟ | ದೇವಾ ಭರಣವ ಧರಿಸಲೆ ಕೊಟ್ಟ || ಹೆಣ್ಣಾನೆ ವಾಹನ ಏರಲೆ ಕೊಟ್ಟ | ಗಂಡು ಯಕ್ಷಿಯ ಕರವ ಹಿಡಿದುಕೊಂಡೂ || ಭೂಲೋಕಕ್ಕೆ ತೆರಳಿ ಹೊರಡುತಲಿದ್ರಿ | ವಟವೃಕ್ಷವೂ ಎಂಬ ತರುವ ಕಂಡು || ಹಾರುತ್ತದ ಕೊಂದುಯ್ಯಾಲೆ ಕಟ್ಟಿಕೊಂಡು | ಹಾರಿ ಕೂತಳು ದೇವಿ ಹೆಣ್ಣು ಯಕ್ಷಿಯು || ಅತ್ತೆ ತೂಗಿದಳು ದೇವಿ ಆಕಾಶಕ್ಕೆ | ಇತ್ತ ತೂಗಿದಳು ದೇವಿ ಬ್ರಹ್ಮಾಂಡಕ್ಕೆ || ಅಡಿಯಾಡಿ ದೇವಿಗಾಸರಾಯ್ತು | ನೋಡಿದವರಿಗೆಲ್ಲ ಬೇಸರ್ ಬಂತು || ಹೊನ್ನ ಉಯ್ಯಾಲಿಂದ ತಗ್ಗಿಗಿಳಿದೇಕೊಂಡು | ಮಂಡ್ಲಭೋಗಕ್ಕೆ ತೆರಳಿ ಬರುತಾಲಿದ್ದು || ಭೋಗಸೇವೆಗೆ ದೇವಿ ಬಂದರ ಮೇಲೆ | ಇಷ್ಟಾರ್ಥವಾಯ್ತೆಂದು ನಲಿಯಬೇಕು ||

ಹಾಡಿ ಅಭಿನಯಿಸುವ ಕೆಲವು ಪದ್ಯಗಳು: (ಕೀರ್ತನೆಗಳು)

|| ರಾಗ ಆರಭಿ - ಆದಿತಾಳ ||

ಬಾರೋ ವಾರಣವದನ | ತ್ರೈಲೋಕ್ಯ ಸುಮೋಹನ | ತೋರೋ ನಿನ್ನಯ ಚರಣ || ಪ || ಮಾರಹರನ ಪರಿವಾರಕ ಧೀರನೆ | ನಾರಿಗಿರಿಜೆ ಸುಕುಮಾರನೆ ಶೂರನೆ || ಬಾರೋ || ಅನುಪಲ್ಲವಿ || ಪೊಡಮಡುವೆನು ನಿನ್ನಯ | ಪಾದಕ್ಕೆ

ದೇವಾ | ಯೆಡೆಬಿಡದೀಗಲೆನ್ನಯ || ತೊಡಕಿನ ಅಡವಿಯ ಕಡಿಕಡಿದಡಸುವ | ಕಡುಬಡವಗೆ ಕರಪಿಡಿದ್ವೊರ ಕೊಡುವಡೆ || ಬಾರೋ || ೧ || ಜಗಜಗಿಸುವ ಪೀಠದಿ | ಮಂಡಿಸಿಕೊಂಡು | ಸೊಗಸೊಗಸಾದ ಭೋಜ್ಯದಿ || ಬಗೆ ಬಗೆ ಭಕ್ಷ್ಯವ ತೆಗೆತೆಗೆ (ದ್) ಮಾಗೆವಂಥ | ಭೃಗುದೃಗು ಯುಗಳವ ನಗೆಮುಖ ಸುಗುಣನೆ || ೨ || ಫಣಿಶಾಯಿ ಗೋವಿಂದನ | ದಾಸರ ವಂದ್ಯ | ತ್ರಿರಾಯನ ಮೂರ್ತಿ ನಂದನ || ಕಣುದಣಿ (ಯೆ) ನೋಡುವೆ ಮಣಿಗಣ ಭೂಷಣ | ಜಣಜಣ ಕುಣಿಯುವ ಗಣಗಣ ಗಣಪತೀ || ಬಾರೋ || ೩ ||

|| ಆರಭಿ - ಆದಿತಾಳ ||

ಶ್ರೀನಿಕೇತನಾ | ಪಾಲಯಾಮಾಂ | ಶ್ರೀನಿಕೇತನಾ || ಪಲ್ಲವಿ || ಜ್ಞಾನಗಮ್ಯ ಕರುಣಾನಿಧಿ ನಿನ್ನಡಿ | ನಾ ವಂದಿಪೆ ಪೊರೆ ದೀನದಯಾಳು || ಶ್ರೀ || ಅನು ಪಲ್ಲವಿ || ಜ್ಞಾನಮಾನದಾ | ಶರಣರ ಸುರ | ಧೇನು ಸರ್ವದಾ || ನೀನೆಂದರಿತು ಸದಾನುರಾಗದಲಿ || ಧ್ಯಾನಿಪೆ ಮನದನು ಮಾನವ ಕಳೆಯೊ || ೧ || ಶ್ರಿಕರಾರ್ಚಿತಾ | ಪದಾಬ್ಜ | ಪರಾಕು ವಂದಿತ || ಶೋಕನಾಶನ ವಿಶೋಕ ಸುಲಭ (ಮ-) | ದ್ವ್ಯಾಕುಲ ಕಳೆಯೋ ಕೃಪಾಕರನೊಲಿದು || ೨ || ಪನ್ನಗಾ ಚಲಾ | ನಿಶಾ(?) ಸುಪ್ರ | ಸನ್ನ ವತ್ಸಲಾ || ಬಿನ್ನಪ ಕೇಳ್ ಜಗನ್ನಾಥ ವಿಠ್ಠಲನೆ | ಧನ್ಯ ಮಾಡೊ ಶರಣ್ಯರ ಶರಸಾ || ೩ || (ಗಣಪತಿ, ವಿಷ್ಣು, ದೇವಿ ಪರವಾದ ತುಂಬಾ ಕೀರ್ತನೆಗಳಿವೆ. ಉದಾಹರಣೆಗೆ ಕೆಲವನ್ನು ಮಾತ್ರ ಇಲ್ಲಿ ಬರೆಯುತ್ತಿರುವೆ)

|| ಶಂಕರಾಭರಣ - ಅಷ್ಟತಾಳ ||

ನಂಬಿದೆ ನಾಗೇಂದ್ರನ | ನಂಬಿದೇ || ನಂಬಿದೆ ನಿನ್ನ ಬೆಂಬಿಡದೆ || ಕರುಣಾಂಬುಧಿಯನ್ನು ಕಂಗೆಡದೇ | ಸ್ವಾಮಿ ಜಂಭಾರಿಯ ಪಿತ | ಅಂಬುಜಾಕ್ಷಿಯ ಸುತ | ಹಿಂಬಾಗಿ ನೆಲಸಿರ್ದ ಕಂಬು ಸನ್ನಿಭ ಕಾಯ || ನಂಬಿದೆ || ಪಲ್ಲ || ಭೂತಮಾತ್ರದಿ ದಯದೋರಿ | ಬಂದು | ಭೂತಳದೊಳಗೆ ಮೈಯ ದೋರಿ || ತನ್ನ ನೀತಿ ಬಿಟ್ಟವರ ವಿಚಾರಿ | ಸರ್ವ-ಘಾತುಕ ಜನರನ್ನು | ಭೀತಿಯ ಬಿಡಿಸುವ | ಪಾತಾಳದೊಡೆಯ ಶ್ರೀ ಕೌತುಕ ಮಹಿಮನೇ || ನಂಬಿದೆ || ೧ || ಧರಣಿಯ ಧರಿಸಿರ್ಪ | ಪುಣ್ಯ | ವಿತ್ತು ವರ (ವಿ) ಪುರುಷನ (?) ಲಾವಣ್ಯ | ದಿವ್ಯ-ಪರಿಮಳ ಪ್ರಿಯ ಸುರಗಣ್ಯ | ಗುಣ-ಭರಿತ ಸಲಹೋ ಸುಬ್ರಹ್ಮಣ್ಯ || ನಾವು ವಿರಚಿಸುವ (ಸಿದ) ಅಪರಾಧ ಪರಿಹರಿಸಿದನೆಲ್ಲ | ಪರಮಗಾನವಿಲೋಲ ಸಕಲ ಸದ್ಗುಣ ಶೀಲ || ನಂಬಿದೇ || ೨ || ಕಿಂಕರಾಜನ ಚಿಂತಾಮಣಿಯೆ | ಹರಿ-ಣಾಂಕ ಶೇಖರನು ನಿಮ್ಮೆಣೆಯೇ | ಹಸ್ತ-ಕಂಕಣ ನಿಮ್ಮ ಸಂದಣಿಯೇ | ಸ್ವರ್ಗಾ-ಲಂಕಾರಾಧಿಪ ನಿಮ್ಮೆಣೆಯೇ || ಪಂಕಜಾಕ್ಷಿಯರ್ಬಲ ತಂಕದಿ ಧರಿಸಿರ್ಪ | ವೆಂಕಟೇಶನು ಶ್ರೀ ವೆಂಕಟೇಶನ ಪ್ರಿಯ || ನಂಬಿದೆ ನಾಗೇಂದ್ರನ || ೩ || ಶ್ರೀಃ ||

ಪ್ರೊ. ಎ.ವಿ. ನಾವಡರ 'ವೈದ್ಯರ ಹಾಡುಗಳು' ಸಂಗ್ರಹದಿಂದ ಆಯ್ದ ಭಾಗ.

* * * * *

ವಕ್ತೃ ಮಾಹಿತಿ

೦೧. ಆನಂದ ನಾಯಕ್. (೪೨ - ವ)
ದುರ್ಗ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೦೨. ಐತು ಮೇರ (೫೫ - ವ)
ಅಡ್ಕ, ವರಂಗ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೦೩. ಕಣ್ಣನ್ ಎಸ್ (೪೧ - ವ)
ನಾಗರಾಜ ದೇವಾಲಯ, ನಾಗರಕೋವಿಲ್, ಕನ್ಯಾಕುಮಾರಿ ಜಿಲ್ಲೆ, ತಮಿಳುನಾಡು

೦೪. ಕಣ್ಣನ್ (೩೩ - ವ)
ಕರಿಪ್ಪಾಲ್, ತಳಿಪರಂಬ ತಾಲೂಕು, ಕಣ್ಣಾನೂರು ಜಿಲ್ಲೆ, ಕೇರಳ

೦೫. ಕೃಷ್ಣಮೂರ್ತಿ ಸಾಮಗ (೭೦ - ವ)
ಶ್ರೀ ವಾಸುಕಿ ಅನಂತ ಪದ್ಮನಾಭ ದೇವಸ್ಥಾನ ಬಡಗುಪೇಟೆ, ಉಡುಪಿ

೦೬. ಕೃಷ್ಣ ಕುಮಾರ್ ಏತಡ್ಕ (೩೨ - ವ)
ಕಾಸರಗೊಡು ಜಿಲ್ಲೆ, ಕೇರಳ

೦೭. ಗಣಪತಿ ಜೋಯಿಸ್ ಎಸ್. (೫೨ - ವ)
ಮಧುರ ಮಂಡಲಂ, ಶ್ರೀಹರಿ ಮಂದಿರಂ, ಕೊಲ್ಲಂ, ಕೇರಳ

೦೮. ಗಂಗಾಧರನ್ (೪೮ - ವ)
ಕರಿಪ್ಪಾಲ್, ತಳಿಪರಂಬ ತಾಲೂಕು. ಕಣ್ಣಾನೂರು ಜಿಲ್ಲೆ. ಕೇರಳ

೦೯. ಗೋಪಾಲರಾವ್ ಹಿರಿಯಡ್ಕ (೮೨ - ವ)
ಹಿರಿಯಡ್ಕ, ಉಡುಪಿ ಜಿಲ್ಲೆ

೧೦. ಚಂದ್ರನ್ (೪೩ - ವ)
ಇರಿಂಜಾಲ ಕುಡ, ತ್ರಿಶೂರ್ ಜಿಲ್ಲೆ. ಕೇರಳ

೧೧. ಜಯಕುಮಾರಿ ಕುಂಞಿಮ್ಮ (೪೪ - ವ)
ಅಂತರ ರಾಷ್ಟ್ರೀಯ ಕೇರಳ ಅಧ್ಯಯನ ಕೇಂದ್ರ, ಕಾರಿಯವಟ್ಟಂ, ತಿರುವನಂತಪುರಂ, ಕೇರಳ.

೧೨. ಜನಾರ್ಧನ ಆಚಾರ್ಯ (೪೪ - ವ)
ಇರ್ವತ್ತೂರು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೧೩. ಜಾಥವೇದ ನಂಬೂದಿರಿ (೪೨ - ವ)
ಪಾಂಬುಮೇಕಾಡ್ ನಾಗರಾಜ ಕ್ಷೇತ್ರ, ಮುಕುಂದಪುರ. ತ್ರಿಶೂರ್ ಜಿಲ್ಲೆ, ಕೇರಳ

೧೪. ಜೀಷಾ ಸಿ.ಕೆ. (೨೪ - ವ)
ಜಾನಪದ ಅಧ್ಯಯನ ಕೇಂದ್ರ, ವಡಗರ, ಪಾಲೊಲಿಪಾಲಂ, ಕಲ್ಲಿಕೋಟೆ, ಕೇರಳ

೧೫. ನಟರಾಜ ವೈದ್ಯ (೩೨ - ವ)
ಮುದ್ದೂರು, ಉಡುಪಿ ಜಿಲ್ಲೆ

೧೬. ನರಸಿಂಹ ಸಾಮಗ (೪೦ - ವ)
ಮಟಪಾಡಿ, ಬ್ರಹ್ಮಾವರ, ಉಡುಪಿ ಜಿಲ್ಲೆ

೧೭. ನರಸಿಂಹ ನಾಯಕ್ ಎಸ್. (೬೩ - ವ)
ವಂಡಾರು, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

೧೮. ನಾರಾಯಣ ಎಂಬ್ರಾಂದ್ರಿ (೬೨ - ವ)
ವಡಮ, ಮುಕುಂದಪುರ ತಾಲೂಕು, ತ್ರಿಶೂರ್ ಜಿಲ್ಲೆ, ಕೇರಳ

೧೯. ನಾರಾಯಣನ್ ಪೋತಿ (೬೨ - ವ)
ಮರದು, ಎರ್ನಾಕುಳಂ ಜಿಲ್ಲೆ, ಕೇರಳ

೨೦. ನಾರಾಯಣ ಹರಿಜನ (೬೬ - ವ)
ಶಿವಪುರ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೨೧. ನಾಗರಾಜ ನಂಬೂದಿರಿ (೪೦ - ವ)
ಪಾಂಬು ಮೇಕಾಡ್ ನಾಗರಾಜ ಕ್ಷೇತ್ರ, ಮುಕುಂದಪುರ, ತ್ರಿಶೂರಿ ಜಿಲ್ಲೆ, ಕೇರಳ

೨೩. ನಾಗೇಶ್ವರ ಬಾಯಿರಿ (೬೮ - ವ)
ಗೋಪಾಡಿ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

೨೪. ನೀಲಕಂಠನ್ ನಂಬೂದಿರಿ (೩೯ - ವ)
ಆಮೇಡ ಮಂಗಳಂ, ಉದಯಂಪೇರು ಎರ್ನಾಕುಳಂ ಜಿಲ್ಲೆ. ಕೇರಳ

೨೫. ಪರಮೇಶ್ವರ ನಂಬೂದಿರಿ (೬೫ - ವ)
ಮಣ್ಣಾರಶಾಲ ನಾಗರಾಜ ಕ್ಷೇತ್ರ ಹರಿಪ್ಪಾಡ್ ಜಿಲ್ಲೆ. ಕೇರಳ

೨೬. ಪದ್ಮನಾಭ ಭಟ್ (೪೯ - ವ)
ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ, ಸುಳ್ಯ ತಾಲೂಕು, ದಕ್ಷಿಣ ಕನ್ನಡ

೨೭. ಪದ್ಮನಾಭನ್ ಎಸ್. (೬೫ - ವ)
ನಾಗರಕೋವಿಲ್, ಕನ್ಯಾಕುಮಾರಿ ಜಿಲ್ಲೆ. ತಮಿಳುನಾಡು

೨೮. ಪ್ರಕಾಶ
ಕರಿಪ್ಪಾಲ್, ತಳಿಪರಂಬ ತಾಲೂಕು, ಕಣ್ಣಾನೂರು ಜಿಲ್ಲೆ. ಕೇರಳ

೨೯. ಬಾಲಕೃಷ್ಣನ್ ವಿ. (೫೬ - ವ)
ಶಂಕರನ್ ಕುಲನ್‌ಕರ. ತ್ರಿಶೂರ್ ಜಿಲ್ಲೆ ಕೇರಳ

೩೦. ಬಾಲಕೃಷ್ಣ ವೈದ್ಯ (೩೮ - ವ)
ಮುದ್ದೂರು, ಉಡುಪಿ ಜಿಲ್ಲೆ

೩೧. ಬಾಲಕೃಷ್ಣನ್ ಸಿ. (೫೨ - ವ)
ಕೊಟ್ಟಂ ರೋಡ್, ಕುಡುಕ್ಕಿಮಟ್, ಕಣ್ಣಾನೂರು, ಕೇರಳ

೩೨. ಭಾಸ್ಕರ ಭಟ್ಟ್, ಪಂಜ (೪೫ - ವ)
ಹಳೆಯಂಗಡಿ ಮೂಲ್ಕಿ, ದಕ್ಷಿಣ ಕನ್ನಡ ಜಿಲ್ಲೆ

೩೩. ಮನೋಜ್ ಮಾರಾರ್ (೩೩ - ವ)
ಪೆರಳ ಶೈರಿ ಸುಬ್ರಹ್ಮಣ್ಯ ಕ್ಷೇತ್ರ, ಅಹಿಕಲ್ ಪೆರಿ ಕಣ್ಣಾನೂರು ಕೇರಳ

೩೪. ಮನೋಜ ನಂಬೂದಿರಿ (೩೯ - ವ)
ವಡಗರ ಕಲ್ಲಿಕೋಟೆ, ಕೇರಳ

೩೫. ಮಾಧವನ್ ಟಿ.ವಿ. (೬೪ - ವ)
ಇರಿಂಜಾಲ ಕುಡ ತ್ರಿಶೂರ್ ಜಿಲ್ಲೆ, ಕೇರಳ

೩೬. ಯೋಗೀಶ್ ಭಟ್ಟ್ (೩೪ - ವ)
ಶ್ರೀಮದ್ ಅನಂತೇಶ್ವರ ದೇವಸ್ಥಾನ ಮಂಜೇಶ್ವರ ಕಾಸರಗೋಡು ಕೇರಳ

೩೭. ರಮೇಶ ಸೋಮಯಾಜಿ (೬೩ - ವ)
ಬಚ್ಚಪ್ಪು, ಕಾರ್ಕಳ ತಾಲೂಕು ಉಡುಪಿ ಜಿಲ್ಲೆ

೩೮. ರಮೇಶ (೪೨ - ವ)
ಕರಿಪ್ಪಾಲ್, ತಳಿಪರಂಬ ತಾಲೂಕು, ಕಣ್ಣಾನೂರು ಜಿಲ್ಲೆ, ಕೇರಳ

೩೯. ರಾಜು ಎ.ಜಿ. (೪೨ - ವ)
ಚೆಂಗಲ್, ಕಾಲಡಿ, ಎರ್ನಾಕುಳಂ ಜಿಲ್ಲೆ, ಕೇರಳ

೪೦. ರಮಾನಾಥ ಶೆಣೈ (೪೩ - ವ)
ಶ್ರೀಮದ್ ಅನಂತೇಶ್ವರ ದೇವಸ್ಥಾನ ಮಂಜೇಶ್ವರ ಕಾಸರಗೋಡು ಜಿಲ್ಲೆ. ಕೇರಳ.

೪೧. ರಾಮಚಂದ್ರ ಭಟ್ಟ್ (೮೨ - ವ)
ಮರಡು, ಎರ್ನಾಕುಳಂ ಜಿಲ್ಲೆ. ಕೇರಳ

೪೨. ರಾಘುವೇಂದ್ರ ಭಟ್ಟ್ ಕೆ.ಎಸ್. (೩೨ - ವ)
ಹನುಮಾನ್ ಕೋವಿಲ್. ಎರ್ನಾಕುಳಂ ಕೇರಳ

೪೩. ಲಕ್ಷ್ಮಿ ನಾರಾಯಣ ತಂತ್ರಿ (೬೮ - ವ)
ದೊಡ್ಡಗುಡ್ಡೆ, ಉಡುಪಿ ಜಿಲ್ಲೆ.

೪೪. ಲಕ್ಷ್ಮೀನಾರಾಯಣ ಸಾಮಗ (೫೮ - ವ)
ಸಗ್ರಿ, ಕುಂಜಿಬೆಟ್ಟು, ಉಡುಪಿ.

೪೫. ಲೀಲಾ ಭಟ್ಟ್ (೭೨ - ವ)
ಪುತ್ತೂರು, ದಕ್ಷಿಣ ಕನ್ನಡ.

೪೬. ವಲ್ಲಭ ನಂಬೂದಿರಿ (೩೪ - ವ)
ಪಾಂಬುಮೇಕಾಡ್ ನಾಗರಾಜ ಕ್ಷೇತ್ರ ವಡಮ, ಮುಕುಂದಪುರ ತಾಲೂಕು, ತ್ರಿಶೂರ್, ಕೇರಳ

೪೭. ವಾದಿರಾಜ ಉಪಾಧ್ಯಾಯ (೬೨ - ವ)
ಮುದ್ರಾಡಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೪೮. ವಾದಿರಾಜ ಆಚಾರ್ಯ (೪೦ - ವ)
ಗಿಲ್ಲಾಳಿ ಹೆಬ್ರಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೪೯. ವಿದ್ಯಾ ಶಂಕರ್ (೩೫ - ವ)
ಜ್ಞಾನಶಕ್ತಿ ಸುಬ್ರಹ್ಮಣ್ಯ ಕ್ಷೇತ್ರ ಪಾವಂಜೆ, ಹಳೆಯಂಗಡಿ, ದಕ್ಷಿಣ ಕನ್ನಡ

೫೦. ವಿಠಲಶಾಸ್ತ್ರಿ (೭೨ - ವ)
ಪಾಂಡುರಂಗ ವಿಠಲ ಆಶ್ರಮ ಪಡುಬಿದ್ರಿ, ಉಡುಪಿ ಜಿಲ್ಲೆ

೫೧. ವಿಶ್ವನಾಥ ಪಂಡಿತ್ (೪೫ - ವ)
ಬೆಳುವಾಯಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

೫೨. ವಿಷ್ಣು ನಂಬೂದಿರಿ (೬೪ ವ)
ರಾಮನ್ ತಳಿ, ಕಣ್ಣಾನೂರು ಜಿಲ್ಲೆ, ಕೇರಳ

೫೩. ವಿಷ್ಣು ನಂಬೂದಿರಿ (೫೫ - ವ)
ಆಮೇಡ ಮಂಗಳಂ. ಉದಯಂಪೇರು, ಎರ್ನಾಕುಳಂ ಜಿಲ್ಲೆ, ಕೇರಳ

೫೪. ಶ್ರೀಜಿತ್ ಮಾರಾರ್ (೨೮ - ವ)
ಪೆರಳಶ್ಶೆರಿ ಸುಬ್ರಹ್ಮಣ್ಯಕ್ಷೇತ್ರ, ಅಹಿಕಲ್ ಪೆರಿ, ಕಣ್ಣಾನೂರು ಜಿಲ್ಲೆ, ಕೇರಳ

೫೫. ಶ್ರೀಧರನ್ (೬೩ - ವ)
ಕುಂಬ್ಳೆ, ಕಾಸರಗೋಡು ಜಿಲ್ಲೆ, ಕೇರಳ

೫೬. ಶ್ರೀಧರ ತಂತ್ರಿ (೭೯ - ವ)
ಕುಕ್ಕಿ ಕಟ್ಟೆ, ಉಡುಪಿ ಉಡುಪಿ ಜಿಲ್ಲೆ

೫೭. ಶ್ರೀನಿವಾಸ ಭಟ್ಟ್ ಪಿ. (೬೮ - ವ)
ಕಟೀಲು. ದಕ್ಷಿಣ ಕನ್ನಡ ಜಿಲ್ಲೆ

೫೮. ಸುಬ್ರಹ್ಮಣ್ಯ ನಂಬೂದಿರಿ (೭೦ - ವ)
ಮಣ್ಣಾರ ಶಾಲ ನಾಗರಾಜ ಕ್ಷೇತ್ರ, ಹರಿಪ್ಪಾಡ್ ಜಿಲ್ಲೆ, ಕೇರಳ

೫೯. ಸುಬ್ರಹ್ಮಣ್ಯ ಭಟ್ಟ್ (೫೨ - ವ)
ಬಳ್ಳಮಂಜ. ಪುತ್ತೂರು ತಾಲೂಕು ದಕ್ಷಿಣ ಕನ್ನಡ ಜಿಲ್ಲೆ

೬೦. ಸುಬ್ರಹ್ಮಣ್ಯ ಭಟ್ಟ್ (೪೮ - ವ)
ಕಣಿಯೂರು. ಬೆಳ್ತಂಗಡಿ ತಾಲೂಕು. ದಕ್ಷಿಣ ಕನ್ನಡ ಜಿಲ್ಲೆ

೬೧. ಸುಬ್ರಹ್ಮಣ್ಯ ವೈದ್ಯ (೬೫ - ವ)
ಗೋಳಿ ಅಂಗಡಿ ಉಡುಪಿ ಜಿಲ್ಲೆ

೬೨. ಸುಧೀರ್ ಮುಳ್ಳೂರ್‌ಕರ್ (೩೨ - ವ)
ಅಟ್ಟೂರ್ ತ್ರಿಶೂರ್ ಜಿಲ್ಲೆ, ಕೇರಳ

೬೩. ಹರಿದಾಸ್ (೪೧ - ವ)
ಜಾನಪದ ಅಧ್ಯಯನ ಕೇಂದ್ರ, ವಡಗರ, ಕಲ್ಲಿಕೋಟೆ, ಕೇರಳ

* * * * *

ಪರಾಮರ್ಶನ ಗ್ರಂಥಗಳು

೦೧. ಅದ್ಯನಡ್ಕ ಕೃಷ್ಣ ಭಟ್ಟ (ಸಂ) ೧೯೭೭
ಸುದರ್ಶನ, ಡಾ.ತೊನ್ಸೆ ಮಾಧವ ಅನಂತ ಪೈ, ಅಭಿನಂದನ ಗ್ರಂಥ, ವಿಜಯ ಕಾಲೇಜು ಟ್ರಸ್ಟ್, ಮಾಲ್ಕಿ

೦೨. ಆಚಾರ್ಯ ದ್ವಿಜೇಂದ್ರ ನಾಥ ಶುಕ್ಲ, ೧೯೬೮
ಪ್ರತಿಮಾ ವಿಜ್ಞಾನ, ಭಾಗ ೧, ವಾಸ್ತು ವಾಙ್ಮಯ ಪ್ರಕಾಶನ ಶಾಲಾ, ಶುಕ್ಲಕುಟೀ, ಲಕ್ನೋ

೦೩. ಆಚಾರ್ಯ ದ್ವಿಜೇಂದ್ರನಾಥ ಶುಕ್ಲ, ೧೯೬೮,
ಪ್ರತಿಮಾಲಕ್ಷಣ, ಭಾಗ ೨ ವಾಸ್ತು ವಾಙ್ಮಯ ಪ್ರಕಾಶನ ಶಾಲಾ, ಶುಕ್ಲಕುಟೀ, ಲಕ್ನೋ

೦೪. ಇಂದಿರಾ ಹೆಗ್ಗಡೆ, ೨೦೦೪
ಬಂಟರು ಒಂದು ಸಾಮಾಜೋ ಸಾಂಸ್ಕೃತಿಕ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೦೫. ಉಪಾಧ್ಯಾಯ ಕೆ.ಎಸ್.೧೯೯೪
ಜಾನಪದ ಕಲೆ ಬದುಕು, ಕರ್ನಾಟಕ ಸಂಘ ಪುತ್ತೂರು

೦೬. ಉಪಾಧ್ಯಾಯ ಯು.ಪಿ., ಸುಶೀಲಾ ಉಪಾಧ್ಯಾಯ, ೧೯೭೩
ಮಲೆಯಾಳಿ ಭಾಷೆ ಮತ್ತು ಸಾಹಿತ್ಯ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.

೦೭. ಉಪಾಧ್ಯಾಯ ಯು.ಪಿ. (ಸಂ) ೧೯೯೫,
ತುಳು ನಿಘಂಟು, ಸಂ ೩, ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ, ಉಡುಪಿ

೦೮. ಕುಂಡಂತಾಯ ಕೆ.ಎಲ್, ೨೦೦೩
ನಂಬಿಕೆ ನಡವಳಿಕೆ, ಸರಸ್ವತಿ ಪ್ರಕಾಶನ, ಕುಂಜೂರು, ಉಡುಪಿ

೦೯. ಗಣಪತಿ ರಾವ್ ಐಗಳ್. ಎಂ. ೧೯೨೩,
ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಶಾರದ ಪ್ರೆಸ್, ಮಂಗಳೂರು

೧೦. ಗುರುರಾಜ ಭಟ್ಟ, ೧೯೯೩
ತುಳುನಾಡು ಸಾಮಾಜಿಕ ಚರಿತ್ರೆಯಲ್ಲಿ ಒಂದು ಸಂಶೋಧನಾತ್ಮಕ ವಿವೇಚನೆ,
ಕೆ.ಲಕ್ಷ್ಮೀನಾರಾಯಣ ಭಟ್ಟ, ಉಡುಪಿ

೧೧. ಗುರುರಾಜ ಭಟ್ಟ ಪಿ. ೧೯೯೭
ತುಳುನಾಡಿನ ನಾಗಮಂಡಲ ಐ.ಬಿ.ಹೆಚ್ಟ್ ಪ್ರಕಾಶನ, ಬೆಂಗಳೂರು

೧೨. ಗೋಪಾಲ ಭಟ್ಟ ಕೆ.ವಿ. ಅಶೋಕ ಭಟ್ಟ (ಸಂ) ೨೦೦೩
ನಾಗದೇವರ ಚರಿತ್ರೆ ಮತ್ತು ಪ್ರಬಂಧಗಳ ಸಂಕಲನ, ಶ್ರೀ ಗುರೂಜಿ, ಶ್ರೀ ಶ್ರೀನಿವಾಸ ದೇವಸ್ಥಾನ ಹಿರ್ಗಾನ, ಕಾರ್ಕಳ

೧೩. ಗೋಪಾಲ ಕೃಷ್ಣ ಆಚಾರ್ಯ, ಚಿತ್ರಾಪುರ
ಆಶ್ಲೇಷ ಬಲಿ, ತತ್ವ ಸಂಶೋಧನ ಸಂಸತ್ (ರಿ) ಅದಮಾರ್ ಮಠ, ಉಡುಪಿ

೧೪. ಗೋವಿಂದ ಪೈ. ೧೯೬೩
ತುಳುನಾಡು ಪೂರ್ವಸ್ಮೃತಿ, ತೆಂಕನಾಡು ಕಾಸರಗೋಡು ಸಾಹಿತ್ಯ ಸಮ್ಮೇಳನದ ಸಂಚಿಕೆ

೧೫. ಚಿನ್ನಪ್ಪಗೌಡ (ಸಂ) ೧೯೮೯
ಪನಿಯಾರ, ಅಖಿಲ ಭಾರತ ತುಳು ಸಮ್ಮೇಳನ ಸ್ಮರಣ ಸಂಚಿಕೆ, ತುಳುಕೂಟ (ರಿ) ಮಂಗಳೂರು

೧೬. ಜ್ಞಾನಾನಂದ.ಜಿ, ೨೦೦೦
ಶ್ರೀ ಬ್ರಾಹ್ಮೀಯ ಚಿತ್ರ ಕರ್ಮಶಾಸ್ತ್ರ, ಸಂ-೩, ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆ.ಜಿ.ಎಫ್.

೧೭. ಜ್ಞಾನಾನಂದ.ಜಿ, ೨೦೦೦
ಶ್ರೀ ಬ್ರಾಹ್ಮೀಯ ಚಿತ್ರ ಕರ್ಮಶಾಸ್ತ್ರ, ಸಂ-೨, ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆ.ಜಿ.ಎಫ್.

೧೮. ನಾವಡ ಎ.ವಿ. (ಸಂ) ೧೯೮೫
ವೈದ್ಯರ ಹಾಡುಗಳು, ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ

೧೯. ನಾವಡ ಎ.ವಿ., ಗಾಯತ್ರಿ ನಾವಡ, ೧೯೯೨
ಕಾಡ್ಯನಾಟ ಪಠ್ಯ ಮತ್ತು ಪ್ರದರ್ಶನ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೨೦. ನಾವಡ ಎ.ವಿ. ೧೯೯೩
ಜಾನಪದ ಸಮಾಲೋಚನ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೨೧. ನಾವಡ ಎ.ವಿ. (ಸಂ) ೧೯೭೭
ಕುಂದ ದರ್ಶನ, ಭಂಡಾರ್‌ಕರ್ಸ್ ಕಾಲೇಜು, ಕುಂದಾಪುರ

೨೨. ಪೀಟರ್ ಜೆ.ಕ್ಲಾಸ್, ಎ.ವಿ.ನಾವಡ ಸುಭಾಶ್ಚಂದ್ರ, ೧೯೮೭
ತುಳುವ ದರ್ಶನ ಪ್ರಾದೇಶಿಕ ವ್ಯಾಸಂಗ, ಕುಂದಾಪುರ

೨೩. ಪುರುಷೋತ್ತಮ ಬಿಳಿಮಲೆ (ಸಂ) ಮತ್ತು ಇತರರು, ೧೯೯೫
ಸಿರಿ ಶ್ರೀ ಅಮೃತ ಸೋಮೇಶ್ವರ ಅಭಿನಂದನ ಸಂಪುಟ, ಕಲಾಗಂಗೋತ್ರಿ ಅಭಿನಂದನ ಸಮಿತಿ, ಉಚ್ಚಿಲ

೨೪. ಪುರುಷೋತ್ತಮ ಬಿಳಿಮಲೆ ೧೯೯೦
ಕರಾವಳಿ ಜಾನಪದ, ಪುರುಷೋತ್ತಮ ಬಿಳಿಮಲೆ, ಮಂಗಳಗಂಗೋತ್ರಿ, ಮಂಗಳೂರು

೨೫. ಪ್ರಭಾಕರ ಆಚಾರ್ ಕೆ., ವಿದ್ಯಾ.ಎಸ್ ನಾಯಕ್, ೨೦೦೬
ದಕ್ಷಿಣ ಕನ್ನಡದ ದೇವರ ಕಾಡುಗಳು, ನಾಗಬನಗಳು ಮತ್ತು ಭೂತಸ್ಥಾನಗಳು, ನಾಗರಿಕಾ ಸೇವಾ ಟ್ರಸ್ಟ್ (ರಿ) ಗುರುವಾಯನಕೆರೆ

೨೬. ಬಸ್ತಿ ಪುಂಡಲೀಕ ಶೆಣೈ, ೧೯೭೭
ಬ್ರಾಹ್ಮೀ ಲಿಪಿ ಮತ್ತು ಸಿಂಧೂ ಸಂಸ್ಕೃತಿ, ಬಸ್ತಿ ಪುಂಡಲಿಕ ಶೆಣೈ, ಮಂಗಳೂರು

೨೭. ಬಾಲಕೃಷ್ಣ ಶೆಟ್ಟಿ ಪೊಳಲಿ, ೧೯೯೧
ಶೀನಪ್ಪ ಹೆಗ್ಡೆ ಸಮಗ್ರ ಸಾಹಿತ್ಯ, ಪೊಳಲಿ ಶೀನಪ್ಪ ಹೆಗ್ಡೆ ಜನ್ಮಶತಾಬ್ದಿ ಸಮಿತಿ, ಮಣಿಪಾಲ

೨೮. ಬೋರಲಿಂಗಯ್ಯ.ಹಿ.ಚಿ, ೧೯೯೬
ಕರ್ನಾಟಕ ಜಾನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೯. ಬೋರಲಿಂಗಯ್ಯ ಹಿ.ಚಿ, ೨೦೦೦
ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. ಮಜುಂದಾರ್ ಆರ್.ಸಿ ೧೯೯೮
ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ-೪, ಸಾಮ್ರಾಜ್ಯ ಏಕತಾಯುಗ ಭಾಗ ಎರಡು, ಭಾರತೀಯ ವಿದ್ಯಾಭವನ, ಬೆಂಗಳೂರು

೩೧. ಮಲ್ಲೇಪುರಂ ಜಿ. ವೆಂಕಟೇಶ್, ೧೯೯೯,
ಶಂಭಾಕೃತಿ ಸಂಪುಟ ೪, ಭಾರತೀಯ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೩೨. ಮೋಹನ ಕೃಷ್ಣ ರೈ.ಕೆ. ೧೯೯೯
ತುಳು ಸಂಸ್ಕೃತಿ, ಚತುರ್ಮುಖಿ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೩. ಯಜ್ಞನಾರಾಯಣ ಉಡುಪ, ೧೯೭೫
ಪುರಾಣ ಭಾರತ ಕೋಶ, ಗೀತಾ ಬುಕ್ ಹೌಸ್, ಮೈಸೂರು

೩೪. ರಮೇಶ್ ಕೆ.ವಿ. ೧೯೬೯
ತುಳುನಾಡಿನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ

೩೫. ರಾಜಗೋಪಾಲ ಕ.ವೆಂ. ೧೯೭೭
ಬೌದ್ಧ ಮತದಲ್ಲಿ ಯಕ್ಷಕಲೆ, ಕೊಂಡಜ್ಜಿ ಪ್ರಕಾಶನ, ಬೆಂಗಳೂರು

೩೬. ರಾಜಗೋಪಾಲ ಕ.ವೆಂ. (ಸಂ) ೧೯೮೯
ನಾಗಮಂಡಲ, ಡಕ್ಕೆಬಲಿ ತುಳುವರ ಆಚರಣೆಗಳಲ್ಲಿ ಕಲಾವಂತಿಕೆ, ಲಲಿತಕಲಾ ಅಕಾಡೆಮಿ, ಬೆಂಗಳೂರು

೩೭. ರಾಧಾಕೃಷ್ಣ ಕಲ್ಯಾಣ್‌ಪುರ್, ೨೦೦೪
ನಾಗದರ್ಶನ, ವೇದ ವಾರಿಧಿ ಪ್ರತಿಷ್ಠಾನ, ಬೆಂಗಳೂರು

೩೮. ರಾಧಾಕೃಷ್ಣ ಕಲ್ಯಾಣ್ ಪುರ್ (ಸಂ) ೨೦೦೧
ಶ್ರೀ ಶರವಣಭವ, ಸ್ಮರಣ ಸಂಚಿಕೆ, ಶ್ರೀವಾಸುಕಿ ಅನಂತ ಪದ್ಮನಾಭ ದೇವಸ್ಥಾನ, ಉಡುಪಿ

೩೯. ರಾಮಕೃಷ್ಣ ಆಚಾರ್ ಪಾಲ್ತಾಡಿ ೧೯೯೭
ಜಾನಪದ ಮಿನದನ, ಸುಪ್ರಿಯ ಪ್ರಕಾಶನ, ಪುತ್ತೂರು, ದ.ಕ

೪೦. ಲೀಲಾ ಭಟ್, ೧೯೮೧
ಭೂತ ನಾಗರ ನಡುವೆ, ಪ್ರಕೃತಿ ಪ್ರಕಾಶನ, ಕೋಟೆಕಾರ್, ದ.ಕ.

೪೧. ವಾಮನ ನಂದಾವರ, ೨೦೦೧,
ಕೋಟಿ ಚೆನ್ನಯ ಜಾನಪದೀಯ ಅಧ್ಯಯನ, ಹೇಮಾಂಶು ಪ್ರಕಾಶನ, ಮಂಗಳೂರು.

೪೨. ವಾಸುದೇವ ಭಟ್ ಸಿದ್ದಾಪುರ, ೧೯೮೮,
ನಾಗ ಜಾನಪದ (ಅಪ್ರಕಟಿತ ಎಂ.ಫಿಲ್. ಗ್ರಂಥ) ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ

೪೩. ವಿವೇಕ ರೈ. ಬಿ.ಎ. ೧೯೮೫,
ತುಳುಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೪೪. ವಿಷ್ಣುಭಟ್ಟ್ ಪಾದೇ ಕಲ್ಲು (ಸಂ) ೧೯೯೩,
ಸ್ಕಂಧ ವೈಭವ, ಶ್ರೀ ಸುಭ್ರಾಯ ದೇವಸ್ಥಾನ ಮತ್ತು ಮಲರಾಯ ದೈವಂಗಳ ಸೇವಾ ಸಮಿತಿ (ರಿ)
ಕರೋಪಾಡಿ ದ.ಕನ್ನಡ

೪೫. ವೆಂಕಟರಾಜ ಪುಣಿಂಚಿತ್ತಾಯ, ೧೯೯೮,
ತುಳುನಡೆ ನುಡಿ, ರಾಷ್ಟ್ರಕವಿ ಗೋವಿಂದ ಪೈ. ಸಂಶೋಧನ ಕೇಂದ್ರ, ಉಡುಪಿ.

೪೬. ಶಿವರಾಮ ಕಾರಂತ, ೧೯೫೦,
ಜಾನಪದ ಕಲೆಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಂಗಳೂರು.

೪೭. ಶಿವರಾಮ ಕಾರಂತ, ೧೯೫೭, ಯಕ್ಷಗಾನ ಬಯಲಾಟ, ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕನ್ನಡ

೪೮. ಶೈಲ. ಟಿ.ವರ್ಮ, ೨೦೦೨,
ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಜ್ಞಾನೋದಯ ಪ್ರಕಾಶನ, ಬೆಂಗಳೂರು.

೪೯. ಸುಬ್ಬಣ್ಣ ರೈ.ಎ. ೨೦೦೪,
ದ್ರಾವಿಡ ಸಂಸ್ಕೃತಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

೫೦. ಸುಬ್ಬಣ್ಣ ರೈ.ಎ. (ಸಂ), ೨೦೦೫,
ದ್ರಾವಿಡ ಅಧ್ಯಯನ, ಸಂ-೪, ಸಂ-೧, ಜನವರಿ-ಜೂನ್, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೫೧. ಸುಶೀಲಾ ಉಪಾಧ್ಯಾಯ, ೧೯೯೮,
ದಕ್ಷಿಣ ಭಾರತದ ಜಾನಪದ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೫೨. ಹೇರಂಜೆ ಕೃಷ್ಣ ಭಟ್, ೧೯೯೫,
ಗೋವಿಂದ ಪೈ ಸಂಶೋಧನ ಸಂಪುಟ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೫೩. ಹೇರಂಜೆ ಕೃಷ್ಣಭಟ್ ಸಂ, ೧೯೯೭,
ಅನಂತಧಾರೆ, ಶ್ರೀ ವಾಸುಕಿ ಸುಬ್ರಹ್ಮಣ್ಯ ದೇವಸ್ಥಾನ, ಸಗ್ರಿ, ಉಡುಪಿ

ವಾರ ಪತ್ರಿಕೆಗಳು

೦೧. ಕುಂಡಂತಾಯ. ಕೆ.ಎಲ್. ೧೮.೮.೨೦೦೫,
ಕರ್ನಾಟಕ ಕರಾವಳಿಯಲ್ಲಿ ನಾಗಾರಾಧನೆಯ ಮೂಲ ರೂಪ, ತರಂಗ, ಮಣಿಪಾಲ.

೦೨. ಶಿವಕುಮಾರ್. ಕೆ.ಎನ್. ೨೭.೧೧.೨೦೦೩,
ಸುಬ್ರಹ್ಮಣ್ಯ ಷಷ್ಠಿ, ಸಂಭ್ರಮ, ಶ್ರದ್ಧೆ, ಭಕ್ತಿ ಭಾವ ಪರ್ವ, ತರಂಗ, ಮಣಿಪಾಲ.

೦೩. ಶ್ರೀಪತಿ ತಂತ್ರಿ. ಪಿ. ೨೭.೧೧.೨೦೦೩,
ಸ್ಕಂಧ ಸುಬ್ರಹ್ಮಣ್ಯನೇ, ನಾಗ ಸುಬ್ರಹ್ಮಣ್ಯನೇ, ತರಂಗ, ಮಣಿಪಾಲ.

ದಿನ ಪತ್ರಿಕೆಗಳು

೦೧. ಅಶೋಕ ಸಾಮಗ, ೧೦.೮.೨೦೦೫,
ವೈದಿಕ ಪರಂಪರೆಯಲ್ಲಿ ನಾಗಪೂಜೆ, ಉದಯವಾಣಿ, ಮಣಿಪಾಲ.

೦೨. ಉಪಾಧ್ಯಾಯ ಮೂಡುಬೆಳ್ಳೆ, ೧.೮.೨೦೦೩.
ಕಲೆಯಲ್ಲಿ ನಾಗರಾಜ, ಉದಯವಾಣಿ, ಮಣಿಪಾಲ.

೦೩. ಉಪಾಧ್ಯಾಯ ಮೂಡುಬೆಳ್ಳೆ, ೨೦.೮.೨೦೦೪,
ನಾಗಾರಾಧನೆ ಮತ್ತು ಚಿತ್ರಕಲೆ, ಉದಯವಾಣಿ, ಮಣಿಪಾಲ.

೦೪. ಕುಂಡಂತಾಯ. ಕೆ.ಎಲ್. ೨೪.೧.೨೦೦೩,
ರಹಸ್ಯ ಕಟ್ಟಳೆಗಳು ಮೈವೆತ್ತ ಬಯಲು ಆಲಯ, ಉದಯವಾಣಿ, ಮಣಿಪಾಲ.

೦೫. ಕುಂಡಂತಾಯ. ಕೆ.ಎಲ್. ೧೦.೧೨.೨೦೦೪,
ಪೂರ್ಣಾನಂದ ದಾಯಕ ಷಷ್ಠಿ ಪರ್ವ, ಉದಯವಾಣಿ, ಮಣಿಪಾಲ.

೦೬. ಕೃಷ್ಣಮೂರ್ತಿ ನಿಟಿಲಾಪುರ, ೧೭.೫.೨೦೦೩,
ಒಲಿದು ನಲಿಸುವ ಸೇವೆ ನಾಗಮಂಡಲ, ಉದಯವಾಣಿ, ಮಣಿಪಾಲ.

೦೭. ವಿಜಯಲಕ್ಷ್ಮಿ ಸಾಸನೂರು, ೧೭.೭.೨೦೦೫,
ಹಬ್ಬದ ಸೊಬಗಿಗೆ ನಾಗರ ರಂಗೋಲಿ, ವಿಜಯಕರ್ನಾಟಕ, ಮಂಗಳೂರು.

೦೮. ವಿಜೇತ. ಕೆ. ಧರ್ಮಸ್ಥಳ, ೨.೮.೨೦೦೩,
ನಾಡಿಗೆ ಮೊದಲ ಹಬ್ಬ ನಾಗರಪಂಚಮಿ, ಉದಯವಾಣಿ, ಮಣಿಪಾಲ.

೦೯. ವಿನಾಯಕ ಭಟ್ಟ, ಮೂರೂರು, ೮.೬.೨೦೦೫,
ನಾಗ ಸುಬ್ರಹ್ಮಣ್ಯ ಬಂಧ ಅನನ್ಯ, ವಿಜಯ ಕರ್ನಾಟಕ, ಮಂಗಳೂರು.

ಮಲೆಯಾಳಂ ಕೃತಿಗಳು

೦೧. ಅಂಬಲ ಪುರ ಶಾರದಮ್ಮ, ೨೦೦೩.
ಶ್ರೀಮದ್ ನಾಗ ಪುರಾಣಂ, ಪೇಮಸ್ ಬುಕ್ಸ್, ತಿರುವನಂತರಪುರಂ.

೦೨. ಕುರುಪ್. ಕೆ.ಕೆ.ಎನ್. ೧೯೮೦,
ಆರ್ಯ ದ್ರಾವಿಡ ಖಟಕಂಗಳ್ ಮಲಬಾರಲೇ ನಾಡಕ ಕಲೆಯಿಲ್, ತಿರುವನಂತಪುರಂ.

೦೩. ನಂಬಿಯಾರ್. ಕೆ.ಪಿ.ಎನ್. ೧೯೯೯,
ಕರಿಪ್ಪಾಲ್ ನಾಗೇಶ್ವರಿ ಚರಿತಂ, ಎಕ್ಸ್‌ಪ್ರೆಸ್ ಆಪಸೆಟ್ ಪ್ರೆಸ್ ತಳಿಪರಂಬ, ಪಯ್ಯನೂರು.

೦೪. ರಾಜೇಂದ್ರನ್. ಪಿ.ಜೆ. ೨೦೦೦,
ಕ್ಷೇತ್ರ ವಿಜ್ಞಾನ ಕೋಶಂ, ಎನ್‌ಸೈಕ್ಲೋಫಿಡೀಯಾ ಆನ್ ಟೆಂಪಲ್ಸ್ ಆಪ್, ಕೇರಳ, ಡಿ.ಸಿ.ಬುಕ್ಸ್, ಕೊಟ್ಟಾಯಂ,

೦೫. ವೆಳ್ಳಾಯಿನಿ ಅರ್ಜುನನ್, ೧೯೮೧,
ಸರ್ವ ವಿಜ್ಞಾನ ಕೋಶ, ಸಂ, ೬, ಸ್ಟೇಟ್ ಇನ್‌ಸ್ಟಿಟ್ಯೂಟ್ ಆಪ್ ಎನ್‌ಸೈಕ್ಲೋಫೀಡಿಯಾ, ತ್ರಿವೇಂದ್ರಂ.

೦೬. ವಿಷ್ಣು ನಂಬೂದಿರಿ, ೧೯೭೭,
ಪುಳ್ಳುವ ಪಾಟ್ಟುಂ ನಾಗಾರಾಧನೆಯುಂ, ವಿಷ್ಣು ನಂಬೂದಿರಿ, ಪಯ್ಯನೂರು.

೦೭. ಸಂಗುಣ್ಣಿ ಕೊಟ್ಟಾರ ತ್ತಿಲ್, ೧೯೮೮,
ಐತಿಹ್ಯ ಮಾಲ, ಕರೆಂಟ್ ಬುಕ್ಸ್, ಕೊಟ್ಟಾಯಂ.

ತಮಿಳು ಕೃತಿ

೦೧. ಪದ್ಮನಾಭ, ೨೦೦೧, ನಾಗಾವಜಿ ಪದುಂ ನಾಗರಾಜರಾಲಯಂ, ಶ್ರೀಮತಿ ಪಿ. ಲೀಲಾ, ನಾಗರಕೋವಿಲ್.

ಆಂಗ್ಲ ಕೃತಿಗಳು

01. Anantha krishna Iyear. L. (1909)
Re print - 1981. The tribes and caustes of cochin. Cosmo publications Delhi.

02. Daravidian encyclopedia Vol-I, 1990, The International school of Dravidian lingvistics. st, Xaviers College Trivendrum.

03. Daravidian encyclopedia, 1993, Vol-II, People and culture, The International school of Dravidian lingvistics. st, Xaviers College Trivendrum.

02. Fawett F.(1915 London)- Reprint 1990
Nayar's of Melabar. Assian Educational services. New Delhi.

03. Gertrude Jobes, 1962, Dictonery of Mythology. Folkere and symbols, part-II The Scareerow Press, New york.

04. Gopal Panikkar. T.K.1983, Malaber and its Folk. Assian Educational Services. New Delhi.

05. Gurara Bhatt.P. 1975, Studies in Tuluva History and culture. Guraraj Bhatt Udupi.

06. Haridas Bhattacharya. 1983, The Cultural Heritege of India. The Ramakrishna Mission. Institute of cultere. calcutta.

07. Jagadisha Iyear, 1985, South Indian Customes, Asian Educational services, New Delhi.

08. Jemes Ferguson. (1873, London) Reprint 2004, Tree and surpent worship. Asian Educational services New Delhi.

09. Krishna Iyear. L.A. 1970, Socieal History of Kerala. vol-II. The Dravidians, Book centre publications, Madras.

10. Krishna sastri. H., 1986, south Indian Images of Gods and Goddesses. Assian Educational services. Delhi.

11. Kurup K.K.N. 1977, Aryan and Dravidian Ellements in malabar Folklore, Kerala Historiecal society, Karyavattan, Trivendrum.

12. Nagamma Aiya.V.1989, The Travancore State Manual vol-II. Assian Educational services Delhi.

13. Narayana Panikkar, Koulam, 1991, Folklore of Kerala, National Book Trust Delhi.

14. Oldhem. C.F. (1905. London). Reprit - 1988, sun and surpent. Assian Educational services. Delhi.

15. Padmanaba menon K.P. 1967, History of Kerala vol-IV, Mr. achuta Menon. Ernkulam.

16. Parameshwara Nayar. P.K. 1967, History of Malayalam litreature, sahitya Acadamy. Delhi.

17. Ravindran Nayar G. 1993, Sneke worship in India. Publications Division. Ministery of Information and Broad Coasting - Govt of India, Delhi.

18. Sadu charan Panda. 1986, Naga Cult in orisa, B.R. Publishing corparation Delhi.

19. Sallethoor B.A.1936. Ancient Karnataka Tuluva History. Oriental Book Agency , Poona.

20. Singh K.S. 2002. People of India - Kerala, vol- XXVII, Antropological serve of India, Delhi.

21. Srinivas Rao. 1973, Karnataka Inscriptions services. vol - VI. Kannada Reserch Institute, Karnataka university, Dharwad

22. Sridhara Menon. 1979, Socieal and cultural History of Kerala, Trivendrum.

23. Subodh Kapoor . 2000, The Hindus. Encyclopedia of Hinduisim. Cosmo Publications, Delhi.

24. Subramanya Namboodiri. 1991, The great Mther, manasa Publications. Mannarasala Haripad.

25. Thurston. (1909). Reprint 1975, caustes and tribes of southern India. VI. Cosmo publications Delhi.

26. William logen, 1981, Malaber. vol - I, charitram publications, Trivendrum.

27. Winand. N. callevart 1995, God's and Temples in south India. Manohar Publishers - Delhi.

* * * * *



[illegible]



[illegible]







ಆಮೇಡ ಮಂಗಳಂ ನಾಗರಾಜ ಕ್ಷೇತ್ರ



ಸರ್ಪಕಾವು ಆಮೇಡ ಮಂಗಳಂ







ಶ್ರೀ ನಾಗರಾಜ ಕ್ಷೇತ್ರ ನಾಗರಕೋವಿಲ್



ಸರ್ಪಂತುಳ್ಳಲ್ ಗಣಪತಿ ಪೂಜೆ







ಸರ್ಪಂ ತುಳ್ಳಲ್ ಮಂಡಲ ರಚನೆ



ಸರ್ಪಂ ತುಳ್ಳಲ್ ಮಂಡಲ



ಅಲಂಕೃತ ಸರ್ಪಂತುಳ್ಳಲ್ ಮಂಡಲ ಅಷ್ಟನಾಗ ಕಳಂ



ಪುಳ್ಳವರಿಂದ ಕುಟ್ಟಿಅರಿಪ್ಪು







ಪಾಲಕ್ಕೊಂಬು ಎಳನಬಲ್ಲಿ_ಕೆಲ್ ಆಚರಣೆ



ಮೊರಂ ಪೂಜ



ಪೂವಾಟಂ



ಪುಳ್ಳವ ಗಾನ







ತಿರಿ ಉಳಿಚ್ಚಿಲ್



ತುಳ್ಳಲ್‌ಗೆ ಸಿದ್ಧತೆ



ಆವೇಶಗೊಂಡ ಪಿನಿಯಾಳ್‌ನಿಂದ ಮಂಡಲ ಅಳಿಸುವಿಕೆ



ಪಿನಿಯಾಳ್ ನೊಂದಿಗೆ ಉಳಿದ ಆವೇಶಭರಿತ ಪಾತ್ರಿಗಳು







ಪುಳ್ಳವನಿಂದ ಆವೇಶ ಭರಿತ ಹಿಸಿಯಾಳ್‌ನೊಂದಿಗೆ ಹೇಳಿಕೆ-ಕೇಳಿಕೆ



ಪುಳ್ಳವನಿಂದ ದೈವಗಳೊಂದಿಗೆ ಸಂಭಾಷಣೆ



ಪಚ್ಚಕಟ್ಟು ಕಳಂ ಮಂಡಲ



ಶ್ರೀ ಕರಿಪ್ಪಾಲ ನಾಗರಾಜ ಕ್ಷೇತ್ರ







ಶ್ರೀಮದ್ ಅನಂತೇಶ್ವರ ದೇವಾಲಯ ಮಂಜೇಶ್ವರ



ಸಾಂಪ್ರದಾಯಿಕ ಶೈಲಿಯ ನಾಗಬನಗಳು (ತುಳುನಾಡು)



ನೂತನ ಶೈಲಿಯ ನಾಗಬನಗಳು



ನಾಗಬ್ರಹ್ಮ-ಕಾರ್ಕಳ ತಾಲೂಕು ದುರ್ಗ ಗ್ರಾಮ



ನಾಗಯಕ್ಷ-ಕಾರ್ಕಳ ತಾಲೂಕು ದುರ್ಗ ಗ್ರಾಮ



ಧ್ಯಾನಸ್ಥ ಬಂಗಿಯ ನಾಗಪ್ರತಿಮೆ, ಕಾರ್ಕಳ ತಾಲೂಕು, ದುರ್ಗ ಗ್ರಾಮ



ನಾಗಯಕ್ಷಿ-ಕಾರ್ಕಳ ತಾಲೂಕು ದುರ್ಗ ಗ್ರಾಮ



ನಾಗ ಶಿಲಾಪ್ರತಿಷ್ಠೆ







ಆಶ್ಲೇಷ ಬಲಿ ಮಂಡಲ



ನಾಗಬನದಲ್ಲಿ ಹಾಲಿಟ್ಟು ಸೇವೆ



ಹಾಲಿಟ್ಟು ಸೇವೆಯಲ್ಲಿ ವೈದ್ಯರಿಂದ ನಾಗನ ಸ್ತುತಿ



ಡಕ್ಕೆ ಬಲಿ ಮಂಡಲ







ತನು ತರ್ಪಣ ಆಚರಣೆ-ವೈದಿಕರಿಂದ



ಅಲಂಕೃತ ನಾಗಮಂಡಲ ವೇದಿಕೆ







ಏಕ ಪವಿತ್ರ ನಾಗಮಂಡಲದ ಅಲಂಕೃತ ಮಂಡಲ



ಚತುಷ್ ಪವಿತ್ರ ನಾಗಮಂಡಲದ ಅಲಂಕೃತ ಮಂಡಲ







ಚತುಃಷ್ ಪವಿತ್ರ ನಾಗಮಂಡಲದ ಮಂಡಲ ರಚನೆ



ಅಲಂಕೃತ ಚತುಃಷ್ ಪವಿತ್ರ ನಾಗಬ್ರಹ್ಮ ಮಂಡಲ



ಅಷ್ಟ ಪವಿತ್ರ ನಾಗಮಂಡಲದ ಅಲಂಕೃತ ಮಂಡಲ



ನಾಗಮಂಡಲ ನೃತ್ಯದ ಒಂದು ಶೈಲಿ







ಅರ್ಧನಾರಿ, ನಾಗಪಾತ್ರಿ



ಅರ್ಧನಾರಿ ವೇಷಧಾರಿಯು ನೃತ್ಯದ ಒಂದು ಭಂಗಿ



ಅರ್ಧನಾರಿಯಿಂದ ಪಾತ್ರಿಗೆ ಆವೇಶ ಭರಿಸುವುದು



ದರ್ಶನ ಪಾತ್ರಿಯಿಂದ ಹಿಂಗಾರ ಸ್ನಾನ







ನಾಗಮಂಡಲ ನೃತ್ಯದ ಒಂದು ಭಂಗಿ



ಅರ್ಧನಾರಿ ನೃತ್ಯ ಮತ್ತು ನಾಗಪಾತ್ರಿ



ಅರ್ಧನಾರಿ-ನಾಗಪಾತ್ರಿ ಪರಸ್ಪರ ಮಿಲನದ ದೃಶ್ಯ



ಮಂಡಲಕ್ಕೆ ಬಲಿಯ ಬಳಿಕ ಮಂಡಲ ಪೂಜೆ



ದೇವಾಲಯುದ ಸುತ್ತು ಬಲಿಯು ಸಂದರ್ಭದಲ್ಲಿ ಅರ್ಧನಾರಿ ನೃತ್ಯ



ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಸುಳ್ಯ ತಾಲೂಕು







ಹರಿಜನರ ಮನೆಯಲ್ಲಿ ಕಾದ್ಯನ ಪೂಜೆ



ಆವೇಶ ಭರಿತ ಕಾದ್ಯ ಪಾತ್ರಿ





